ಮಹಾಶಯರೇ, ಇನ್ನೊಂದು ಕೆಲಸವು ಉಳಿದದೆ. ನೀವು ಹೃದಯಪೂರ್ವಕವಾಗಿ ಮಾಡಿದ ಸ್ವಾಗತಕ್ಕಾಗಿ ನಿಮ್ಮನ್ನು ವಂದಿಸುತ್ತೇನೆ. ನನ್ನೊಡನೆ ಇಲ್ಲಿ ತನಕ ಬರುವದಕ್ಕೆ ಅಗದ್ದರಿಂದ ನನ್ನ ಪತ್ನಿಯ ಮನಸ್ಸಿನಲ್ಲಿರುವ ಖಿನ್ನತೆಯನ್ನು ನಿಮಗೆ ಶ್ರುತಪಡಿಸಬೇಕಾಗುವದು. ಬ್ರಿಟಿಷ ಸಿಂಹಾಸನದ ಮೇಲೆ ನಿಮಗಿರುವ ರಾಜಭಕ್ತಿಯನ್ನು ಪ್ರದರ್ಶಿಸುವ ನಿಮ್ಮ ಅಂತರಿಕ ವಚನಗಳನ್ನು ಕೇಳಿ, ನಾನು ಆನಂದ ತುಂದಿಲನಾದೆನೆಂದು—ಈ ಕೊಠಡಿಯನ್ನು ಬಿಟ್ಟು ಇಲ್ಲಿಂದ ತೆರಳುವ ಮುಂಚೆಯೇ—ನಿಮಗೆ ತಿಳಿಸಲು ನಾನು ಅಪೇಕ್ಷಿಸುತ್ತೇನೆ. ಪ್ರಸಕ್ತ ಸಮಯದಲ್ಲಿ ಎಂದರೆ, ಬ್ರಿಟಿಷ್ ಸಾಮ್ರಾಜ್ಯದ ಭಾಗಗಳಂತಿದ್ದ ಒಂದೊಂದು ಜನಾಂಗವೂ ಪ್ರತಿ ಜನಾಂಗದ ಒಂದೊಂದು ಶಾಖೆಯೂ ಗೌರವ ಸಂರಕ್ಷಣೆಗಾಗಿಯೂ ಸುಧಾರಣೆಯ ಉದ್ಧರಣೆಗಾಗಿಯೂ ಸ್ವಾತಂತ್ರ್ಯದ ಪರಿಪಾಲನೆಗಾಗಿಯೂ ಸಮಾನಸ್ಕಂಧರಂತೆ ನಿಂತು ಅನನ್ಯಭಾವದಿಂದ ಹೋರಾಡುತ್ತಿರುವ ಈ ಸಮಯದಲ್ಲಿ ಇಂಥಾ ರಾಜಭಕ್ತಿ ಪ್ರದರ್ಶಕವಾದ ನಿಮ್ಮ ವಚನಗಳು ಎಷ್ಟೋ ಅತ್ಯಧಿಕ ಅಮೂಲ್ಯವಾಗಿವೆ. ನಮ್ಮ ಚಕ್ರವರ್ತಿಯವರ ಮೇಲೆ ದಕ್ಷಿಣ ಕನ್ನಡ ಜಿಲ್ಲೆಯವರಿಗಿದ್ದ ರಾಜನಿಷ್ಠೆಯನ್ನೂ ಸ್ವಾಮಿಭಕ್ತಿಯನ್ನೂ ಮಹಾರಾಜ ಚಕ್ರವರ್ತಿಯವರ ಆರ್ಯಚಿತ್ತಕ್ಕೆ ವೇದ್ಯವರಿಸುವದೇ ನನ್ನ ಸಂಸ್ಪೃಷ್ಟ ಕರ್ತವ್ಯವಾಗಿಯೂ ನನಗೆ ಸಂತೋಷಕಾರಕವಾಗಿಯೂ ಇರುತ್ತದೆ.

ಯುದ್ಧ ಸಮಾಚಾರವು

ಎಮ್ಡೆನ್ ನಾವೆಯು ರುಶ್ಯನರ ಛಾವಣಿಯನ್ನು ತೋರಿಸಿ ಪೆನಾಂಗನ್ನು ಪ್ರವೇಶಿಸಿ ರುಶ್ಯ ಮತ್ತು ಫ್ರೆಂಚ ಯುದ್ಧ ನಾವೆಗಳನ್ನು ಮುಳುಗಿಸಿಬಿಟ್ಟಿತು.

ತುರ್ಕಿಯು ತಟಸ್ಥಭಾವವನ್ನು ಬಿಟ್ಟಿತು.

ಅರುಣೋದಯದಲ್ಲಿ ಒಡೇಸಿಯ ಬಂದರಕ್ಕೆ ಎರಡು ಮೂರು ಟಾರ್ಪೆಡೋ ದೋಣಿಗಳು ಮೇಲ್ಬಾಯ್ದು ಅಲ್ಲಿದ್ದ ರುಶ್ಯನರ ಗನ್ ಬೋಟು ಎಂಬ ದೋಣಿಯನ್ನು ಮುಳುಗಿಸಿದವು. ಆ ದೋಣಿಯಲ್ಲಿದ್ದ ನಾವಿಕರಲ್ಲಿ ಕೆಲವರು ಘಾಯವಡೆದರು. ಕೆಲವರು ಹತರಾದರು. ರುಶ್ಯನರ [illegible] ಎಂಬ ಹಡಗುಗಳು [illegible] ಹತರಾದರು. ಇಬ್ಬರು ಘಾಯವಡೆದರು. ಪಟ್ಟಣದ ಸಕ್ಕರೆ ಕಾರ್ಖಾನೆಯೂ ಹಾಳಾಯಿತು. ಕೆಲವು ಜೀವ ನಷ್ಟವಾಯಿತು. ಹೀಗೆ ಗುಂಡು ಹಾರಿಸಿದ ಯುದ್ಧನಾವೆಗಳು ತುರ್ಕಿ ಸರಕಾರದ್ದು ಎಂಬದಾಗಿ ಒಡೇಸಿಯದ ಗವರ್ನರರು ಪ್ರಕಟಿಸಿರುವರೆಂತ ಒಡೇಸಿಯದಲ್ಲಿರುವ ಬ್ರಿಟಿಷ ರಾಯಭಾರಿಯಿಂದ ತಂತೀ ಬಂದಿರುವದು. ಅದಲ್ಲದೆ ತುರ್ಕಿಯು ಕಾನ್ಸ್ಟಾಂಟಿನೋಪಲಿನಲ್ಲಿರುವ ರುಶ್ಯನರ ಹಡಗವನ್ನು ಮುಳುಗಿಸಿ ಒಡೇಸಿಯದ ಮೇಲೆ ಯುದ್ಧನಾವೆಗಳನ್ನು ಕಳುಹಿಸಿರುವದೆಂಬದಾಗಿ ವಾರ್ತೆಗಳು ಬಂದಿರುವದು. ತುರ್ಕಿಯು ಯುದ್ಧವನ್ನು ಸಾರದೆ ರುಶ್ಯರ ಮೇಲ್ಬಾಯಿದಿರುವದು ತುರ್ಕಿಯು ಯುದ್ಧಕ್ಕೆ ಸೇರುವ ಹಾಗೆ ರುಶ್ಯನು ಅವನ್ನು ಕಿಚ್ಚಿಗೆ ಎಬ್ಬಿಸಲಿಲ್ಲ ಯಾ ಕೆಣಕಲಿಲ್ಲ.

ತುರ್ಕಿಯು [illegible] [illegible] ಪ್ರೇರಣೆಯಿಂದ ಮಾಡಿದ ಈ ಧಾಳಿಯನ್ನು ಹಿಂದೂಸ್ಥಾನದ ಅರಸರೂ ಜನರೂ ಅದೆಷ್ಟು ಕ್ರೌರ್ಯದಲ್ಲಿ ತಿಳಿಯುವದು ಅವಶ್ಯವಾಗಿದೆಂತ ಮೈಸೂರಾಯಪ್ರಭುಗಳವರು ಪ್ರಕಟಿಸಿರುವರು

ಜರ್ಮನರ "ಗೋಬೆನ್" ಮತ್ತು "ಬ್ರೆಸ್ಲೋ" ಎಂಬ ಯುದ್ಧಹಡಗುಗಳು ಮೆಡಿಟರೇನಿಯನನ್ನು ದಾಟಿ ಡರ್ಡನೆಲ್ಸ್ ನಲ್ಲಿ ಮರೆ ಹೊಕ್ಕೊಂಡವು. ಹೀಗೆ ತುರ್ಕಿಯು ಅದನ್ನು ಮರೆ ಹೊಕ್ಕಲಿಕ್ಕೆ ಬಿಟ್ಟದ್ದೇ ಇಂಟರ್ನೇಶನಲ್ ಕಾನೂನಿಗೆ ವಿರೋಧವಾಗಿದೆ. ತುರ್ಕಿ ಸರಕಾರದವರೊಡನೆ ಬ್ರಿಟಿಷರು ಮಾಡಿಕೊಂಡ ಸಂಧಾನದ ಪ್ರಕಾರ ತುರ್ಕಿಯು ಜರ್ಮನರ ಈ ಹಡಗದ ನಾವಿಕರನ್ನು ಯುದ್ಧ ಮುಗಿಯುವ ವರೆಗೆ [illegible] [illegible]

ವನ್ನು ತುರ್ಕಿಯು ಕ್ರಯಕ್ಕೆ ತಕ್ಕೊಂಡಿರುವದೆಂತ ಪ್ರಕಟಿಸಿ ಅದರಲ್ಲಿ ಜರ್ಮನ ನಾವಿಕರನ್ನು ಇರಗೊಟ್ಟು ತುರ್ಕಿ ನಾಕಾವಳಿಯಲ್ಲಿದ್ದ ಬ್ರಿಟಿಷ್ ಎಡ್ಮಿರಲರನ್ನು ಕೆಲಸದಿಂದ ತಳ್ಳಿಹಾಕಿತು.

ಅದೇ ಕ್ರಮಯು ಡರ್ಡನೆಲ್ಸನಲ್ಲಿ ಸಿಡಿಮದ್ದಿನ ಗಣಿಗಳನ್ನು ಹಾಕಿ "ಬ್ಲೆಕ್‌ಸಿ" ಎಂಬ ಸಮುದ್ರದ ಮಾರ್ಗವಾಗಿ ಬರುತ್ತಿದ್ದ ಎಲ್ಲಾ ಬ್ರಿಟಿಷ ವ್ಯಾಪಾರದ ಹಡಗುಗಳನ್ನು ತಡೆದು, ತುರ್ಕಿಯು ಯುದ್ಧ ಸನ್ನದ್ಧವಾಗುವದರಿಂದ ಅದರಲ್ಲಿರುವ ಸಾಮಾಗ್ರಿಗಳು ತನಗೆ ಬೇಕು ಅಥವಾ ಸಮುದ್ರದಲ್ಲಿ ಗಣಿಗಳಿವೆ ಎಂಬ ನೆವನ ಹೇಳಿ ಹಡಗುಗಳು ಮುಂದರಿಯದಂತೆ ಮಾಡಿತು. ತಟಸ್ಥರಾಜ್ಯವಾಗಿದ್ದ ತುರ್ಕಿಯು ಹೀಗೆ ವರ್ತಿಸಿ ಹಡಗ ಮ್ಯಾಲಿಕರಿಗೂ ಸಾಹುಕಾರರಿಗೂ ವಿಶೇಷ ನಷ್ಟ ಸಂಭವಿಸುವ ಹಾಗೆ ಮಾಡಿದ್ದು ಅನ್ಯಾಯವಾಗಿರುವದು. ತುರ್ಕಿಯ ಇಂಥಾ ವರ್ತನೆಯಿಂದ ಭೂಮಧ್ಯಸಾಗರಕ್ಕೆ ವ್ಯಾಪಾರದ ಹಡಗುಗಳಿಗೆ ಕಪ್ಪು ಸಮುದ್ರದಿಂದ ಬರಲು ಅಸಾಧ್ಯವಾದದರಿಂದಲೂ ಅಥವಾ ಜರ್ಮನರ ಗೋಯೊಬೆನ್ ಮತ್ತು ಬ್ರೆಸ್ಲೊ ಯುದ್ಧನಾವೆಗಳು ಕಪ್ಪು ಸಮುದ್ರಕ್ಕೆ ಬಂದು ಈ ವ್ಯಾಪಾರ ಹಡಗಗಳನ್ನು ನಾಶಮಾಡುವಲ್ಲಿ ಇವುಗಳಿಗೆ ಯಾವ ಆತಂಕವೂ ಇಲ್ಲದೆ ಇದ್ದದ್ದರಿಂದಲೂ ಬ್ರಿಟಿಷ ವ್ಯಾಪಾರ ವ್ಯವಾಟಗಳಿಗೆ ಕಪ್ಪು ಸಮುದ್ರದಲ್ಲಿ ಆಗ್ಗೆ ವಿಶೇಷ ಅಡಚಣೆ ಉಂಟಾಯಿತು. ಈಗ ತುರ್ಕಿಯು ಒಪ್ಪಂದವನ್ನು ಮೀರಿ ಡರ್ಡನೆಲ್ಸನ್ನು ಮುಚ್ಚಿಬಿಟ್ಟಿರುವದು.

ಮೆಸಪೊಟಾಮಿಯ ಮತ್ತು ಬಗ್ದಾದಿನ ತುರ್ಕಿ ಆಫೀಸರರು ಅಲ್ಲಿದ್ದ ಬ್ರಿಟಿಷ ಪ್ರಜೆಗಳನ್ನು ತುಚ್ಛೀಕಾರದಿಂದ ನಡಿಸಿ, ಗ್ರೇಟ್ ಬ್ರಿಟನ್ ಮತ್ತು ಮಿತ್ರ ರಾಜ್ಯಗಳಿಗೆ ವಿರೋಧವಾಗಿ ಜನರನ್ನು ಹುರಿದುಂಬಿಸಿದರು. ತುರ್ಕಿಯು ಹೀಗೆ ಮಾಡಿದರೂ ಬ್ರಿಟಿಷ ಸರಕಾರದವರು ಸಮಾಧಾನವನ್ನು ತಾಳಿ, "ಗೋಯೊಬೆನ್" ಮತ್ತು "ಬ್ರೆಸ್ಲೋ" ಹಡಗಗಳಲ್ಲಿರುವ ಜರ್ಮನ ನಾವಿಕರನ್ನು ತೆಗೆದು ತುರ್ಕಿ ನಾವಿಕರನ್ನು ಇಡಬೇಕೆಂದೂ ಮುಂದೆ ಬ್ರಿಟಿಷ ವ್ಯಾಪಾರ ಹಡಗಗಳಿಗೆ ಉಪದ್ರಕೊಡದೆ, ತಟಸ್ಥರಾಜ್ಯದ ಕ್ರಮಪ್ರಕಾರ ನಡೆಯುವದಾದರೆ ತುರ್ಕಿಯು ಈತನಕ ಮಾಡಿದ ಅಪರಾಧಗಳೆಲ್ಲವೂ ಕ್ಷಮಿಸಲ್ಪಟ್ಟು, ತುರ್ಕಿಯ ಹಕ್ಕು ಸ್ವತಂತ್ರಗಳು ಬ್ರಿಟನಿನಿಂದ ಮನ್ನಿಸಲ್ಪಡುವವು. ಮತ್ತು ಈ ಯುದ್ಧವು ಮುಗಿದು ಸಂಧಾನವಾಗುವ ಕಾಲದಲ್ಲಿ ತುರ್ಕಿಯ ಸಾಂಪತ್ತಿಕ ಸ್ಥಿತಿಗೆ ಅನುಕೂಲವಾದ ಮತ್ತು ತುರ್ಕಿಯ ಸ್ವತಂತ್ರವನ್ನು ಮನ್ನಿಸತಕ್ಕ ಶರ್ತಗಳು ತುರ್ಕಿಗೆ ಪ್ರಾಪ್ತವಾಗುವಂತೆ ಮಾಡೋಣಾಗುವದು, ಇಂಥಾ ನಂಬಿಕೆಯನ್ನು ಕೊಟ್ಟರೂ ತುರ್ಕಿಯು ಸುಮ್ಮನಿರದೆ ಸಿರಿಯದಲ್ಲಿ ಸೈನ್ಯ ಕೂಡಿಸಿತು. ಇದು ಈಜಿಪ್ಟಿನ ಮೇಲ್ಬಾಯುವದಕ್ಕಲ್ಲದೆ ಬೇರೊಂದು ಕಾರಣಕ್ಕಲ್ಲ. ಮತ್ತು ಈಜಿಪ್ತ ಸರಹದ್ದಿನಲ್ಲಿರುವ ಬೆದೂವಿಯನ್ ಅರಬಿಯರನ್ನು ಜರ್ಮನ್ ಮತ್ತು ತುರ್ಕಿ ಏಜಂಟರು ಹುರಿದುಂಬಿಸಿದರು. ಅಕಾಬ ಮತ್ತು ಗಾಜದಿಂದ ಈಜಿಪ್ತ ಮತ್ತು ಸೂವೆಜ್ ಕಾಲುವೆಗೆ ಒಳನುಗ್ಗುವ ಬಗ್ಗೆ ಮೊಸಲ್ ಮತ್ತು ದಮಸ್ಕದ ಸೇನೆಯನ್ನು ದಕ್ಷಿಣಕ್ಕೆ ಕಳುಹಿಸಿದರು. ಈಜಿಪ್ತ ಸರಹದ್ದು ವರೆಗೆ ದಾರಿಗಳು ಸರಿಮಾಡಲ್ಪಟ್ಟಿರುವವು. ಅಕಾಬ ಕೊಲ್ಲಿಯಲ್ಲಿ ಸಿಡಿಮದ್ದು ಗಣಿಗಳನ್ನು ಇಡುವರೆ ಸಿಡಿಮದ್ದು ಕಳುಹಿಸಲ್ಪಟ್ಟಿರುವದು. ಕ್ರೈಸ್ತರಿಗೆ ವಿರೋಧವಾಗಿ ಮುಸಲ್ಮಾನರನ್ನು ಎಬ್ಬಿಸುವರೆ ಸಿರಿಯದಲ್ಲಿ ಪ್ರಯತ್ನ ನಡೆದಿರುವದು. ಬಹುಶಃ ಹಿಂದೂಸ್ಥಾನದಲ್ಲಿಯೂ ಇಂಥಾ ಪ್ರಯತ್ನವನ್ನು ನಡಿಸಲಿಕ್ಕೆ ಏರ್ಪಾಡು ಆಗಬಹುದೆಂಬ ವಾರ್ತೆ ಇದೆ. ಅಲೆಕ್ಸಾಂಡ್ರಿಯ ಪಟ್ಟಣದ ಪೋಲಿಸ್ ಇಲಾಖೆಯಲ್ಲಿದ್ದ ಒಬ್ಬ ಜರ್ಮನನು ರಜೆ ತಕ್ಕೊಂಡು ಕನ್‌ಸ್ತಂತಿನೋಪಲಿನ ಮಾರ್ಗವಾಗಿ ಹೋಗುತ್ತೇನೆಂದು ಹೊರಟಾಗ ಅವನನ್ನು ಅನುಮಾನದ ಮೇಲೆ ಹಿಡಿಯಲು ಅವನಲ್ಲಿ ಸೂವೆಜ್ ಕಾಲುವೆಯ ನಕ್ಷೆ ಇತ್ಯಾದಿಗಳು ದೊರಕಿದವು. ಅದಲ್ಲದೆ ಕನ್‌ಸ್ತಂತಿನೋಪಲಿಗೆ ಜರ್ಮನರ ಆಫೀಸರರೂ ಸೈನಿಕರೂ ಆಯುಧ ಸಾಮಗ್ರಿಗಳೂ ಬಂದು ಸೇರುತ್ತಲಿವೆ. ಬ್ರಿಟಿಷರಿಗೆ ಮತ್ತು ಮಿತ್ರರಾಜ್ಯಗಳಿಗೆ ವಿರೋಧವಾಗಿ ಜನರನ್ನು ಎಬ್ಬಿಸುವರೆ ಜರ್ಮನ ಆಫೀಸರರು ತುರ್ಕಿ ಸಾಮ್ರಾಜ್ಯದ ಒಳಪ್ರದೇಶಗಳಿಗೆ ಹೋಗಿರುವರು. ಅದಲ್ಲದೆ ಜಾಫದಲ್ಲಿರುವ ಬ್ರಿಟಿಷ ಕಾನ್ಸಲರ ಧ್ವಜವನ್ನು ಒಡೆದುಹಾಕಲು ಅಲ್ಲಿಯ ತುರ್ಕಿ ಸೇನಾಧಿಪತಿಗೆ ತುರ್ಕಿ ಯುದ್ಧಮಂತ್ರಿಯ ಹುಕುಂ ಹೋಗಿರುವದೆಂಬ ವಿಷಯವು ಗೊತ್ತಾಗಿ ಬಂದಿದೆ.

ಬ್ರಿಟಿಷ ಸಾಮ್ರಾಜ್ಯದ ... ಜನರುಳ್ಳ [illegible]

ದೇಶಗಳು ತಮ್ಮ ಸ್ವಂತ ಪ್ರಯೋಜನಕ್ಕಾಗಿ ತುರ್ಕಿಯು ಇಂಗ್ಲಾಂಡಿನೊಂದಿಗೆ ಕದನ ನಡಿಸುವಂತೆ ಅದನ್ನು ಪುಸಲಾಯಿಸುತ್ತಿರುವರೆಂಬುದು ಈ ಎಲ್ಲಾ ಸಮಾಚಾರದಿಂದ ವ್ಯಕ್ತವಾಗುವದು.

ಡಿಕ್ಸ್‌ಮೂಡಿನಿಂದ ಜರ್ಮನರು ಹಿಂದೆ ಹೋಗಿರುವರು. ಫ್ರಾನ್ಸಿನ ಪ್ರೆಸಿಡೆಂಟ ಪೊಯಿನ್‌ಕಾರೆಯವರು ರಣರಂಗಕ್ಕೆ ಹೋಗಿರುವರು. ಫ್ರೆಂಚರು ಕಳಕೊಂಡ ನೆಲೆಗಳನ್ನು ಪುನಃ ಪಡೆದಿರುವರು. ಎಪ್ರೆಯ ದಕ್ಷಿಣದಲ್ಲಿ ಮೇಲ್ಬಾಯಿದ ಜರ್ಮನರು ಪ್ರತಿಬಂಧ ಸ್ಥಳದಲ್ಲಿ ಹಿಮ್ಮೆಟ್ಟಿರುವರು. ಆರ್ಗೋನ್ನೆಯಲ್ಲಿ ಜರ್ಮನರು ಗುಂಡು ಹಾರಿಸಲು ಪ್ರಾರಂಭಿಸಿರುವರು. ಇಲ್ಲಿ ಕಠಿಣ ಕಾಳಗವು ನಡೆಯುತ್ತಿದೆಯಾದರೂ ಶತ್ರುಗಳು ಮುಂದರಿಯಲಿಲ್ಲ. ಕಳೆದ ತಾ. ೧೪-೨೦ರ ವರೆಗೆ ಜರ್ಮನರ ೭೦೦೦೦ ಸೈನಿಕರು ಸೆರೆ ಬಿದ್ದಿರುವರು. ಜರ್ಮನರು ರ್‍ಹೀಮ್ಸಿನ ಮೇಲೆ ಪುನಃ ಗುಂಡು ಹಾರಿಸಲು ಪ್ರಾರಂಭಿಸಿರುವರು.

ಪೂರ್ವ ರಣರಂಗ:—ಪೂರ್ವ ಪ್ರುಶ್ಯದಲ್ಲಿ ರುಶ್ಯನರು ಪೋಸ್ನಿನ್, ಲಿನೆಜಸಿಯ, ಲೊಡ್ಜ ಮತ್ತು ಒಸ್ಟೊವೆಸ್ ಎಂಬ ಸ್ಥಳಗಳನ್ನು ಸ್ವಾಧೀನ ಮಾಡಿಕೊಂಡು ಜರ್ಮನರಿಗೆ ವಿಶೇಷ ನಷ್ಟಪಡಿಸಿ ಸೋಲಿಸಿರುವರು.

ಕ್ರಿಮಿಯದಲ್ಲಿ ಥಿಯೊಡೋಸಿಯದ ಮೇಲೆ ಬ್ರಹಸ್ಪತಿವಾರ ಬೆಳಿಗ್ಗೆ ತುರ್ಕಿಯ ಕ್ರೂಜರ್ ನಾವೆಯು ಗುಂಡು ಹಾರಿಸಿ ಅಲ್ಲಿ ದೇವಾಲಯವನ್ನು ಹಾಳು ಮಾಡಿತು. ನೋವರೊಸಿಸ್ ಎಂಬಲ್ಲಿ ತುರ್ಕರ "ಹಮೀದಿಯ" ನಾವೆಯು ಪಟ್ಟಣವು ಶರಣಾಗತವಾಗದಿದ್ದರೆ ಗುಂಡು ಹಾರಿಸಿ ಪಟ್ಟಣವನ್ನು ನಾಶಮಾಡುವೆವೆಂಬದಾಗಿ ಹೆದರಿಸಿತು. ನಂತರ ಅಲ್ಲಿಯ ತುರ್ಕಿ ಕೌನ್ಸಲ್ಲರ ಕೂಡೆ ಮಾತನಾಡಿ ಹೋಗಿ ಬಿಟ್ಟಿತು. "ಗೋಯೆಬೆನ್" ನಾವೆಯು ಹಾಕಿದ ಸಿಡಿಮದ್ದಿನ ಗಣಿಗಳಿಗೆ ತಾಗಿ ರುಶ್ಯನರ ಎರಡು ಹಡಗಗಳು ಮುಣುಗಿಹೋದವು. ಕೆಲವು ಮುಣುಗಿಸಲ್ಪಟ್ಟವು.

ಬ್ರಿಟಿಷ ಸರಕಾರದವರು ತುರ್ಕಿಯ ಮೇಲೆ ಯುದ್ಧ ಸಾರಿರುವರು. ಕನ್‌ಸ್ತಂತಿನೋಪಲಿನ ಬ್ರಿಟಿಷ, ಫ್ರೆಂಚ, ರುಶ್ಯ ರಾಯಭಾರಿಗಳು ಪಾಸ್‌ಪೋರ್ಟ ಕೇಳಿರುವರು, ಇವರಿಗೆ ಪಾಸ್‌ಪೋರ್ಟ ದೊರಕಿರುವದೆಂಬ ವಾರ್ತೆ ಬಂದಿರುವದು. ತುರ್ಕಿ ರಾಯಭಾರಿಗೂ ರುಶ್ಯದಲ್ಲಿ ಪಾಸ್‌ಪೋರ್ಟ ಕೊಡಲ್ಪಟ್ಟಿರುವದು.

ದಕ್ಷಿಣ ಆಫ್ರಿಕದ ಲೈಟನ್‌ಬರ್ಗನಲ್ಲಿ ಬೂವರ್ ದಂಗೇಗಾರರ ಸೇನೆಗೂ ಯೂನಿಯನ್ ಸರಕಾರದ ಸೇನೆಗೂ ಕದನ ನಡೆದು ದಂಗೆಗಾರರಲ್ಲಿ ೧೩ ಮಂದಿ ಹತರಾದರು, ೩೬ ಮಂದಿ ಘಾಯ ಒಡೆದರು. ೨೪೦ ಮಂದಿ ಸೆರೆ ಬಿದ್ದರು.

ತುರ್ಕಿ:—ಬ್ರಿಟಿಷ ರಾಯಭಾರಿಯು ಕನ್‌ಸ್ತಂತಿನೋಪಲನ್ನು ಬಿಟ್ಟು ಹೊರಡಲು ಸಿದ್ಧವಾಗಿರುವರು. ರುಶ್ಯ ಮತ್ತು ಫ್ರೆಂಚ ರಾಯಭಾರಿಗಳು ಹೊರಡಲಿಕ್ಕಿದ್ದಾರೆ. ಹೆಚ್ಚಿನ ಬ್ರಿಟಿಷರು ಪಟ್ಟಣವನ್ನು ಬಿಟ್ಟು ಹೋಗುತ್ತಾರೆ.

ತುರ್ಕಿಯು ಯುದ್ಧಕ್ಕೆ ಸೇರುವದಿಲ್ಲವೆಂಬದಾಗಿ ತುರ್ಕಿ ಪ್ರಧಾನ ಮಂತ್ರಿಯವರು ಬ್ರಿಟಿಷ ರಾಯಭಾರಿಗೆ ದೃಢ ನಂಬಿಕೆ ಕೊಟ್ಟಿರುವರೆಂತಲೂ ತುರ್ಕಿಯು ತಟಸ್ಥಭಾವದಲ್ಲಿರುವ ಆವಶ್ಯಕತೆಯನ್ನು ವಿವರಿಸುವರೆ ಬಲಿಲ್‌ಬೇರವರು ವಿಯಾನ್ನ, ಬರ್ಲಿನ್, ಸೊಫಿಯ ಮತ್ತು ಬುಕಾರೆಸ್ಟಿಗೆ ಹೋಗುವರೆಂಬದಾಗಿಯೂ ಕನ್‌ಸ್ತಂತಿನೋಪಲಿನಿಂದ ಒಕ್ಟೋಬರ ತಾ. ೨೮ಕ್ಕೆ ವಾರ್ತೆ ಬಂದಿರುವದು.

ತುರ್ಕಿಗೆ ಗೊತ್ತಿಲ್ಲದೆ ತುರ್ಕಿ ಯುದ್ಧ ಹಡಗಗಳ ಉಪಟಳವು ನಡಿಯಿತೆಂತ ಟರ್ಕಿ ಫಿನೇನ್ಸ್ ಮಂತ್ರಿಯವರು ಕನ್‌ಸ್ತಂತಿನೋಪಲಿನ ಫ್ರೆಂಚ ರಾಯಭಾರಿಗೆ ತಿಳಿಸಿರುವರು ಎಂಬ ವಾರ್ತೆಯು ವಸಿಂಗ್ಟನಿಗೆ ಹೋಗಿರುವದು.

ಬ್ಲೇಕ್‌ಸೀಯಲ್ಲಿ ತುರ್ಕಿ ನಾವೆಗಳಿಂದ ನಡೆದ ಅನರ್ಥಗಳಿಗಾಗಿ ತುರ್ಕಿಯ ಪ್ರಧಾನ ಮಂತ್ರಿಯವರು ಕ್ಷಮಾಪಣೆ ಕೇಳಿರುವರೆಂಬದಾಗಿ ವಾರ್ತೆ ಇದೆ.

ಹಿಂದೂಸ್ಥಾನದ ಮುಸಲ್ಮಾನರು ಬ್ರಿಟಿಷ ಸಾಮ್ರಾಜ್ಯದ ಕಡೆಗಿರುವ ತಮ್ಮ ರಾಜನಿಷ್ಠೆಯನ್ನೂ ಸ್ವಾಮಿ ಭಕ್ತಿಯನ್ನೂ ತೋರಿಸಲು ಅಲ್ಲಲ್ಲಿ ಸಭೆ ಕೂಡುತ್ತಿರುವರು. ಡಿಲ್ಲಿಯಲ್ಲಿ ಬಲೂಚಿಸ್ಥಾನದ ಮುಸಲ್ಮಾನರ ಸಭೆಯು ಕೂಡಿ ಬ್ರಿಟಿಷ ಸರಕಾರದ ಕಡೆಗೆ ತಮ್ಮ ರಾಜನಿಷ್ಠೆಯನ್ನು ಸದಾ ತೋರಿಸುವವರಾಗಿರುತ್ತೇವೆಂಬ ನಿರ್ಣಯ ಮಾಡಿಕೊಂಡರು. ಇತ್ತಕಡೆ ಬಹುಮಾನಪಟ್ಟ ಆಘಾಖಾನರವರು ತನ್ನ ಹಿಂಬಾಲಕರಿಗೆಲ್ಲಾ ಬ್ರಿಟಿಷ ಸರಕಾರದ ಕಡೆಗೆ ವಿಧೇಯರಾಗಿಯೂ ರಾಜಭಕ್ತಿಯುಳ್ಳವರಾಗಿಯೂ ಇರಬೇಕೆಂಬ ಪ್ರಕಟಣೆಯನ್ನು ಕಳುಹಿಸಿರುವರು.

ಹೈದರಾಬಾದಿನ ನೈಜಾಮರವರೂ ಇಡೀ ಹಿಂದೂಸ್ಥಾನದ ಮುಸಲ್ಮಾನರು ಬ್ರಿಟಿಷ ಸರಕಾರದ ಕಡೆಗೆ ತಮ್ಮ ರಾಜಭಕ್ತಿಯನ್ನು ಸದಾ ತೋರಿಸುವವರಾಗಿರಬೇಕೆಂಬದಾಗಿ [illegible]

ದಕ್ಷಿಣ ಕನ್ನಡ

ಮಂಗಳೂರು.

ಗವರ್ನರ ದೊರೆಗಳವರ ಆಗಮನದ ವೃತ್ತಾಂತ.

ತಾರೀಕು 3ನೇ ಮಂಗಳವಾರ

ನಮ್ಮ ಸಂಸ್ಥಾನದ ಗವರ್ನರ ದೊರೆಗಳಾದ ಬಹುಮಾನಪಟ್ಟ ಜ್ಹೋನ್ ಬೆರನ್ ಪೆಂಟಲೆಂಡ ಒಫ್ ಲೀತ್ ಪಿ. ಸಿ. ಜಿ. ಸಿ. ಐ. ಇಯವರು ಈ ದಿನ ಇಲ್ಲಿಗೆ ಬಂದು ತಲ್ಪಿದರು. ದೊರೆಗಳವರನ್ನು ಸ್ವಾಗತೋಪಚಾರದಿಂದ ಎದುರುಗೊಳ್ಳಲಿಕ್ಕೆ ರೈಲ್ವೇ ಸ್ಟೇಶನು ಧ್ವಜಪತಾಕೆಗಳಿಂದ ಬಹಳ ಅಂದವಾದ ರೀತಿಯಲ್ಲಿ ಅಲಂಕರಿಸಲ್ಪಟ್ಟಿತ್ತು. ಗವರ್ನರ ದೊರೆಗಳವರಿಗೂ ಇತರ ಯೂರೋಪಿಯ ಆಫೀಸರರಿಗೂ ಆಸೀನರಾಗಲು ಎತ್ತರಗೊಳಿಸಿದ್ದ ಪ್ರತ್ಯೇಕ ಒಂದು ಚೌಕಿಯು ತಯ್ಯಾರು ಮಾಡೋಣಾಗಿತ್ತು. ಈ ಚೌಕಿಯ ಎದುರುಗಡೆಯಲ್ಲಿ ಡಿಸ್ಟ್ರಿಕ್ಟ ಬೋರ್ಡ ಮೆಂಬರರೂ, ಮುನ್ಸಿಪಲ್ ಕೌನ್ಸಿಲರರೂ ಸರಕಾರದ ದೇಶೀಯ ಹುದ್ದೇದಾರರೂ, ಪೆನ್ಶನು ಹೊಂದಿದ ಆಫೀಸರರೂ ಪಟ್ಟಣದ ಮತ್ತು ಜಿಲ್ಲೆಯ ಆಯಾ ಪ್ರಾಂತ್ಯಗಳ ಪ್ರಜಾ ಮುಂದಾಳುಗಳೂ ಸಾಲುಸಾಲಾಗಿ ನಿಂತಿದ್ದರು. ದೊರೆಗಳವರು ರೈಲ್ಪಬಂಡಿಯಿಂದ ಇಳಿಯುತ್ತಿದ್ದಾಗಲೇ ಇವರನ್ನು "ಸೆಲ್ಯೂಟ್" ಅಭಿವಂದಿಸಲು ಪೋಲೀಸಿನ ರಿಜರ್ವ ಫೌಜಿನ ಜವಾನರನ್ನು ನಿಲ್ಲಿಸಿದ್ದರು. ರೈಲ್ವೆ ಸ್ಟೇಶನಿನ ಮುಂದುಗಡೆಯ ಅಂಗಳದಲ್ಲಿ ಇಲ್ಲಿಯ ಡಾಕ್ಟರ ಪೆರೇರರವರು ತಮ್ಮ "ಎಂಬುಲೆನ್ಸ್‌ಕೋರ"ನ್ನು ಗವರ್ನರ ದೊರೆಗಳವರ ಸಂದರ್ಶನಾರ್ಥವಾಗಿ ಸಾಲು ಕಟ್ಟಿ ನಿಲ್ಲಿಸಿದ್ದರು. ಈ ದಿನ ಹಗಲೆಲ್ಲಾ ಮಳೆ ಬಂದಿದ್ದರೂ ಗವರ್ನರ ದೊರೆಗಳವರನ್ನು ಕಣ್ಣಾರೆ ಕಾಣುವ ಕುತೂಹಲವು ಪ್ರಜಾಜನರಲ್ಲಿ ವಿಶೇಷವಾಗಿದ್ದದ್ದರಿಂದ ರೈಲ್ವೆ ಸ್ಟೇಶನಿನ ವಿಸ್ತಾರವಾದ ಮಹಾದ್ವಾರಗಳೂ ರೈಲ್ವೆ ಸ್ಟೇಶನಿನಿಂದ ಕಲೆಕ್ಟರ ದೊರೆಗಳವರ ಬಂಗ್ಲೆ ವರೆಗಿನ ಮಾರ್ಗಗಳ ಇಕ್ಕೆಡೆಗಳೂ ಸಾವಿರಾರು ಪ್ರೇಕ್ಷಕರಿಂದ ತುಂಬಿ ಹೋಗಿದ್ದವು. ಪೋಲೀಸಿನವರ ನಿಗಾವಣೆಯು ನಿನ್ನೆ ದಿನ ಬಹಳ ಚಲೋದಾಗಿತ್ತು.

ಸಾಯಂಕಾಲ ನಾಲ್ಕು ಘಂಟೆ ಹೊಡೆಯುತ್ತಿದ್ದಾಗಲೇ ದೊರೆಗಳವರ ಸ್ಪೆಶ್ಯಲ್ ಟ್ರೈನು ಸರಿಯಾಗಿ ಬಂದು ತಲ್ಪಿತು. ಪ್ರಭುಗಳ ಆಗಮನದ ಬಹುಮಾನಾರ್ಥವಾಗಿ ತೋಪುಗಳು ಹಾರಿಸಲಾದವು. ಕಲೆಕ್ಟರ ದೊರೆಗಳವರು ಪ್ರಥಮದಲ್ಲಿ ಗವರ್ನರ ದೊರೆಗಳನ್ನು ಎದುರುಗೊಂಡು ನಂತರ ಹತ್ತಿರದಲ್ಲಿದ್ದ ಮುಖ್ಯ ಮುಖ್ಯ ಸರಕಾರದ ಹುದ್ದೆದಾರರು ಪೆನ್ಶನು ಹೊಂದಿದ ಅಧಿಕಾರಿಗಳ ಮತ್ತು ಕೆಲವು ಪ್ರಜಾಮುಂದಾಳುಗಳ ಪರಿಚಿತಿಯನ್ನು ಗವರ್ನರ ದೊರೆಗಳವರಿಗೆ ಹೇಳಿದರು. ಗವರ್ನರ ದೊರೆಗಳವರು ಇವರೆಲ್ಲರೊಡನೆ ಕೈಚಾಚಿ ಹಸ್ತಲಾಘವವನ್ನು ಮಾಡಿ ಇವರನ್ನು ಮನ್ನಿಸಿದರು. ನಂತರ ಖಾವಂದರವರು ಆಸೀನರಾದೊಡನೆ ಮುನ್ಸಿಪಲ್ ಚೇಯರ್‌ಮೇನರಾದ ದಿವಾನ್ ಬಹದ್ದೂರ್ ಮ| ರಾ| ರಾ| ಮುಂಡಪ್ಪ ಬಂಗೇರರವರು ಈ ಪಟ್ಟಣ ನಿವಾಸಿಕರ ಪರವಾಗಿ ಗವರ್ನರ ದೊರೆಗಳವರಿಗೆ ಪ್ರಜಾಜನರ ಹೃತ್ಪೂರ್ವಕ ಸ್ವಾಗತವನ್ನು ಸೂಚಿಸಿ ವಿಜ್ಞಾಪನಾ ಪತ್ರವನ್ನು ಅರ್ಪಿಸಿದರು. ಜಿಲ್ಲಾ ಜನರ ಪರವಾಗಿ ಡಿಸ್ಟ್ರಿಕ್ಟ ಬೋರ್ಡಿನ ವ್ಯಾಸ್ ಪ್ರೆಸಿಡೆಂಟರಾದ ರಾವ್ ಬಹದ್ದೂರ್ ಮ| ರಾ| ರಾ| ಎನ್. ಸುಬ್ಬರಾವರವರು ಮತ್ತೊಂದು ಮಾನ ಪತ್ರವನ್ನು ಪ್ರಭುಗಳ ಮುಂದೆ ಓದಿದರು. ಈ ಎರಡು ಮಾನ ಪತ್ರಗಳು ಓದಲ್ಪಟ್ಟ ನಂತರ ಮುನ್ಸಿಪಲ್ ಚೇಯರ್ಮೇನರು ಮುನ್ಸಿಪಲ್ ಕೌನ್ಸಿಲರರ ಮತ್ತು ಡಿಸ್ಟ್ರಿಕ್ಟ ಬೋರ್ಡ [illegible]

ಹೇಳಿದರು. ನಂತರ ಕಲೆಕ್ಟರರೊಡನೆ ವೆನ್‌ಲೊಕ್ ಆಸ್ಪತ್ರೆಯ ಹಿಂದಿನ ಮಾರ್ಗವಾಗಿ ಕಲೆಕ್ಟರ ದೊರೆಗಳ ಬಂಗ್ಲೆಗೆ ಮೋಟಾರ್ ಭಂಡಿಯಲ್ಲಿ ಹೋದರು. ಹಾದಿಯಲ್ಲಿ ಹಂಪನಕಟ್ಟೆಯಲ್ಲಿ ಮುನ್ಸಿಪಾಲಿಟಿಯವರೂ ಬಾಸೆಲ್ ಮಿಶನಿನವರೂ ಪುತ್ತೂರು ಸಾಹೇಬರವರೂ ಅಲ್ಲಲ್ಲಿ ತೋರಣಗಳನ್ನು ಹಾಕಿಸಿದ್ದರು.

ತಾ. 4ನೇ ಬುಧವಾರ.

ಈ ದಿನ ಬೆಳಿಗ್ಯೆ ೭—೩೦ಕ್ಕೆ ಸರಿಯಾಗಿ ಕಂಕನಾಡಿ ಫಾದರ್‌ಮುಲ್ಲರರ ಆಸ್ಪತ್ರೆಯನ್ನೂ ಕುಷ್ಟ ರೋಗಿಗಳ ಛತ್ತ್ರಿಯನ್ನೂ ಸಂದರ್ಶಿಸಿದರು. ಈ ಸಂಸ್ಥೆಯ ಆಶ್ರಯದಾತರಲ್ಲಿ ಹಲವರೂ ಜೆಜುಯಿಟ ಮಿಶನಿನ ಶ್ರೇಷ್ಠ ಅಧಿಕಾರಿಗಳೂ ಇಲ್ಲಿ ಪ್ರಭುಗಳನ್ನು ಇದಿರುಗೊಂಡು ಕುಷ್ಟ ರೋಗಿಗಳ ಛತ್ತ್ರಿಯನ್ನೂ ಆಸ್ಪತ್ರೆಗೆ ಸೇರಿದ ಹಲವು ಕಟ್ಟಡಗಳನ್ನೂ ಗವರ್ನರ ದೊರೆಗಳವರಿಗೆ ತೋರಿಸಿದರು. ಇತ್ತಲಾಗೆ ಇಲ್ಲಿ ಕಟ್ಟಿಸೋಣಾದ ಶಸ್ತ್ರಚಿಕಿತ್ಸಾಲಯ ಮೊದಲಾದವುಗಳನ್ನು ಕಂಡು ದೊರೆಗಳವರು ಬಹಳ ಸಂತೋಷಗೊಂಡರು. ರೋಗಿಗಳಿರುವ ಚಿಕಿತ್ಸಾಗೃಹವನ್ನು ಗವರ್ನರ ದೊರೆಗಳವರು ಪ್ರವೇಶಿಸುವಾಗ ಹುಲಿಯ ಬಾಯಿಂದ ರಕ್ಷಿಸಲ್ಪಟ್ಟು ಆಸ್ಪತ್ರೆಗೆ ಚಿಕಿತ್ಸೆಗೆ ಬಂದ ಚಿಕ್ಕ ಹುಡುಗನೊಬ್ಬನು ದೊರೆಗಳವರನ್ನು ಬಹಳ ಅಕ್ಕರೆಯಿಂದ ವಂದಿಸಿದನು. ಔಷಧಿಗಳು ಮಿಶ್ರಣ ಮಾಡುವ ಕೋಣೆ ಮೊದಲಾದವನ್ನು ನೋಡಿ ಆದ ಮೇಲೆ ದೊರೆಗಳವರು ಹಂಚು ಕಾರ್ಖಾನೆಗೆ ತೆರಳಿ ಹೋದರು.

ಜಪ್ಪು ಕಾರ್ಖಾನೆಯಲ್ಲಿ ತಯ್ಯಾರಾಗುತ್ತಿರುವ ಆವೆ ಮಣ್ಣಿನ ಸಾಮಗ್ರಿಗಳೆಲ್ಲವು ಪ್ರದರ್ಶನದ ಬಗ್ಯೆ ಚಲೋ ರೀತಿಯಲ್ಲಿ ಇಡೋಣಾಗಿದ್ದವು. ಈ ಕಾರ್ಖಾನೆಯಲ್ಲಿ ತಯ್ಯಾರು ಮಾಡೋಣಾಗುವ ನಾನಾ ವಿಧದ ಹಂಚು, ನೆಲಕ್ಕೆ ಹಾಸುವ ಇಟ್ಟಿಗೆ ಇತ್ಯಾದಿಗಳನ್ನು ಸಿದ್ಧ ಪಡಿಸುವ ವಿಧಾನಗಳೂ ಯಂತ್ರಗಳೂ ಗವರ್ನರ ದೊರೆಗಳವರಿಗೆ ತೋರಿಸೋಣಾದವು. ಹಂಚುಗಳು ಯಂತ್ರದಿಂದ ಹೊರಗೆ ಬಂದೊಡನೆ ಅವುಗಳನ್ನು ಯಂತ್ರಮೂಲಕವೇ ಒಲೆಗೆ ತಕ್ಕೊಂಡು ಹೋಗುವ ರೀತಿಯೂ ಸಹ ಇಲ್ಲಿ ನೋಡೋಣಾಯಿತು.

ಇದೇ ದಿನ ಮಧ್ಯಾಹ್ನ ಗಂಟೆ ೧೨ಕ್ಕೆ ಜಿಲ್ಲೆಯ ರೆವಿನ್ಯೂ ಆಫೀಸರರ ಕನ್ಸರೆನ್ಸ್ ಗವರ್ನರರ ಸಮಕ್ಷದಲ್ಲಿ ಕೂಡಿತು. ಆದರೆ ಈ ಸಭೆಯ ವೃತ್ತಾಂತವು ಗೊತ್ತಾಗತಕ್ಕಂಥದಲ್ಲ.

ಸಾಯಂಕಾಲ ಗಂಟೆ ೫—೩೦ಕ್ಕೆ ಕಲೆಕ್ಟರರ ಬಂಗ್ಲೆಯಿಂದ ಹೊರಟು ಮಾರಸಂಕ ರಸ್ತೆ, ಕಲ್ಪ ರಸ್ತೆ, ಮತ್ತು ಕೊಡಿಯಾಲ ರಸ್ತೆ ಈ ಮಾರ್ಗವಾಗಿ ಮೆ। ಮಾರ್ಟಿನ್ ಪ್ಯಾಸರ ಕೊಕೊನೇಟ್ ಗಾರ್ಡನ್‌ಗಳಿಗೆ ಬಂದು ತಲ್ಪಿದರು. ಹಾದಿಯಲ್ಲಿ ಅಲ್ಲಲ್ಲಿ ರಸ್ತೆಗಳೆಲ್ಲವು ತೋರಣಗಳಿಂದ ಅಲಂಕರಿಸಲ್ಪಟ್ಟಿದ್ದವು. ಪಂಚಮರ ಶಾಲೆಯ ಹತ್ತರ ದೊರೆಗಳವರ ಮೋಟರ್ ಭಂಡಿಯು ಕೆಲವು ನಿಮಿಷಗಳ ವರೆಗೆ ನಿಲ್ಲಿಸೋಣಾಗಿತ್ತು. ಇಲ್ಲಿ ಪ್ರಭುಗಳಿಗೆ ಹೂ ಮಾಲೆಗಳನ್ನು ಹಾಕಿ ಸ್ವಾಗತ ಗೀತವನ್ನು ಪಂಚಮ ವಿದ್ಯಾರ್ಥಿಗಳು ಹಾಡಿದರು. ೧೮೫ ಜನ ಪಂಚಮರಿಗೂ ಸುಮಾರು ೬೦ ಜನ ಪಂಚಮ ವಿದ್ಯಾರ್ಥಿಗಳಿಗೂ ಈ ಸಂದರ್ಭದಲ್ಲಿ ಮಿಠಾಯಿ ಮೊದಲಾದವು ಹಂಚೋಣಾದವು.

ಮೆ। ಮಾರ್ಟಿನ್ ಪ್ಯಾಸರಲ್ಲಿ ಗವರ್ನರ ದೊರೆಗಳವರು ಬಂದು ತಲ್ಪಿದೊಡನೆ ಮೆ। ಪ್ಯಾಸರವರು ಇವರನ್ನು ಇದಿರ್ಗೊಂಡು ಯಥೋಚಿತ ಉಪಚಾರಗಳಿಂದ ಸತ್ಕರಿಸಿದರು. ಹೆಚ್ಚು ಕಡಮೆ ೩೫೦೦ ಮಂದಿ ಬಡಜನರಿಗೆ ಈ ಸಂದರ್ಭದಲ್ಲಿ ಪ್ಯಾಸರವರಿಂದ ವಿಧವಿಧದ ಖಜ್ಜಾಯಗಳು ಕೊಡೋಣಾದವು. ಬಟ್ಟೆಗಳಿಲ್ಲದ ೬೦೦ ಜನರಿಗೆ ವಸ್ತ್ರಗಳು ಕೊಡೋಣಾದವು.

ಗವರ್ನಮೆಂಟ ಕೊಲೇಜಿಗೆ ಮೆ। ಪ್ಯಾಸರಲ್ಲಿಂದ ಸಾಯಂಕಾಲ ಗಂಟೆ ೬ಕ್ಕೆ ದೊರೆಗಳವರು ಬಂದು ತಲ್ಪಿದರು. ಕೊಲೇಜಿನ ಪ್ರಿನ್ಸಪಲರಾದ ಮೆ। ಮಾಲಿಮರವರಿಂದ ಸತ್ಕರಿಸಲ್ಪಟ್ಟು ಖಾವಂದರವರು ಆಸೀನರಾದೊಡನೆ ಗವರ್ನಮೆಂಟ ಕೊಲೇಜಿನ ಗತವರುಷದ ವರದಿಯು ಮೆ। ಮಾಲಿಮ್‌ರವರಿಂದ ಸಭಿಕರಿಗೆ ಹೇಳೋಣಾಯಿತು. ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತಮ ಫಲವನ್ನೂ ಕ್ರಿಕೆಟ್ ಮೊದಲಾದ ಚಂಡಾಟಗಳಲ್ಲಿ ಪಡೆದ ಬಹುಮಾನವನ್ನೂ ಮೆ। ಮಾಲಿಮರವರಿಂದ ಸರ್ವರಿಗೂ [illegible] ಡನೆ ಕೃತಜ್ಞತೆಗಳನ್ನು [illegible] ಆನಂದವನ್ನು [illegible] ಸಿದರು. ಕೊಲೇಜು ವಿದ್ಯಾರ್ಥಿಗಳ [illegible]

ಸ್ಥಳವಿಲ್ಲದ ಸಂಕಷ್ಟವು ಸಭಿಕರ ಮತ್ತು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ಗವರ್ನರ ದೊರೆಗಳವರ ಲಕ್ಷಕ್ಕೆ ಮೆ। ಮಾಲಿಮ್‌ರವರು ತಂದಿರುವರು. ಕೊಲೇಜು ವರದಿಯು ತಿಳಿಸೋಣಾದ ನಂತರ ಶಾಲಾ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ಇನಾಮು ಹಂಚಿದರು. ಆಟಪಾಠಗಳಲ್ಲಿ ಕೊಲೇಜು ವಿದ್ಯಾರ್ಥಿಗಳು ಒಂದೇ ರೀತಿ ಜಯಶೀಲರಾದದನ್ನು ಕೇಳಿ ದೊರೆಗಳವರು ತಮ್ಮ ಸಂತೋಷವನ್ನು ಸೂಚಿಸಿ ಈ ಉತ್ತಮ ಫಲವು ಕೊಲೇಜಿಗೆ ಪ್ರಾಪ್ತವಾಗಲು ಕಾರಣರಾದ ಉಪಾಧ್ಯಾಯರುಗಳ ಶ್ರಮವನ್ನು ಶ್ಲಾಘಿಸಿ ತುಸ ಕಾಲ ಮಾತಾಡಿದರು. ಬಳಿಕ ಇಲ್ಲಿಯ ಬೆರಿಷ್ಟರರಾದ ಮ। ರಾ। ರಾ। ಆರ್. ಎಮ್. ರೋಯಿಗಳವರು ಕೊಲೇಜಿಗೆ ಸನ್ಮಂಗಲವನ್ನು ಬಯಸಿ ಚಿಕ್ಕದೊಂದು ಭಾಷಣ ಮಾಡಿದರು.

ಗವರ್ನಮೆಂಟ್ ಕೊಲೇಜಿನಿಂದ ಗವರ್ನರ ದೊರೆಗಳವರ ಸವಾರಿಯು ಕೊಸ್ಮೊ ಪೊಲಿಟನ್ ಕ್ಲಬ್ಬಿಗೆ ಚಿತ್ತೈಸಿತು. ಕ್ಲಬ್ಬಿನಲ್ಲಿ ಮೆಂಬರರೊಡನೆ ಸಂಭಾಷಣೆ ಗೈಯುತ್ತ ಅರ್ಧ ಘಂಟೆಯ ತನಕವಿದ್ದು ಅಲ್ಲಿಂದ ಸಾಯಂಕಾಲ ಘಂಟೆ ೭ಕ್ಕೆ ಗವರ್ನರರು ಕಲೆಕ್ಟರರ ಬಂಗ್ಲೆಗೆ ತೆರಳಿದರು. ಕೊಸ್ಮೊ ಪೊಲಿಟನ್ ಕ್ಲಬ್ಬನ್ನೂ ಗವರ್ನಮೆಂಟ್ ಕೊಲೇಜನ್ನೂ ಈ ಸಂದರ್ಭದಲ್ಲಿ ನೂರಾರು ದೀಪಗಳಿಂದಲೂ ಧ್ವಜ ತೋರಣಗಳಿಂದಲೂ ಅಲಂಕರಿಸಿದ್ದರು.

ತಾ. ೫ನೇ ಗುರುವಾರ ಮುಂಜಾನೆ ೮॥ ಘಂಟೆಗೆ ಉರ್ವದಲ್ಲಿ ಪಟ್ಟಣ ವಿಸ್ತಾರಕ್ಕೆ ಆರಿಸಲ್ಪಟ್ಟ ಸ್ಥಳಕ್ಕೆ ಬಹುಮಾನಪಟ್ಟ ಪೆಂಟಲೆಂಡ್ ಪ್ರಭುಗಳವರು ದಯಮಾಡಿಸುವವರಿದ್ದರು. ಮುನ್ಸಿಪಲ್ ಕೌನ್ಸಿಲಿನವರು ಈ ಸ್ಥಳದಲ್ಲಿ ಚಂದವಾದ ಮಂಟಪವೊಂದನ್ನು ಅಣೆಗೊಳಿಸಿದ್ದರು. ಇಲ್ಲಿ ಸ್ಥಾಪಿಸೋಣಾಗುವ ಪಟ್ಟಣದ ಮಾರ್ಗಗಳು ಯಾವ ರೀತಿಯವುಗಳು, ಮನೆಗಳಿಗೆ ಕೊಡೋಣಾಗುವ ಸ್ಥಳವು ಎಷ್ಟು ವಿಸ್ತೀರ್ಣವುಳ್ಳದೆಂಬುದನ್ನು ತೋರಿಸಲು ಅಲ್ಲಲ್ಲಿ ತಕ್ಕ ರೀತಿಯಲ್ಲಿ ಗುರುತುಗಳನ್ನು ಹಾಕಿ ಉದ್ದದಲ್ಲಿ ಹಲವು ಗಜಗಳುಳ್ಳ ಮಾರ್ಗಗಳನ್ನು ಅಗೆಸಿದ್ದರು. ಕೆಲವು ಆಯ್ದ ಗೃಹಸ್ಥರಿಗೆ ಮಾತ್ರ ಇಲ್ಲಿ ಕೂಡುವ ಸಭೆಗೆ ಆಮಂತ್ರಣವಿತ್ತು. ದೊರೆಗಳವರು ಮಂಟಪಕ್ಕೆ ಬಂದು ತಲುಪಿದೊಡನೆ ಮುನ್ಸಿಪಲ್ ಚೇಯರ್ಮೆನರಾದ ದಿವಾನ್ ಬಹದ್ದೂರ್ ಮ। ರಾ। ರಾ। ಮುಂಡಪ್ಪ ಬಂಗೇರರವರು ಆದರದಿಂದವರೊಡನೆ ಹಸ್ತಲಾಘವನ್ನು ಮಾಡಿ ವಂದಿಸಿ ಸಿಂಹಗಳ ಗೊಂಬೆಗಳಿಂದ ಅಲಂಕರಿಸಲ್ಪಟ್ಟಿದ್ದ ಆಸನದಲ್ಲಿ ದೊರೆಗಳವರನ್ನು ಕುಳ್ಳಿರಿಸಿದರು. ನಂತರ ಪಟ್ಟಣವನ್ನು ವಿಸ್ತರಿಸಲಿರುವ ಕಾರಣಗಳನ್ನು ವೇದ್ಯಮಾಡಿಸಿದರು. ಪ್ರಕೃತ ಪಟ್ಟಣದ ಕ್ಷೇಮರಕ್ಷಣೆಯ ಬಗ್ಯೆ ಮಾಡಲುಳ್ಳ ಏರ್ಪಾಡುಗಳಲ್ಲಿ ಹಲವು ಚಿಕ್ಕ ಚಿಕ್ಕ ಮನೆಗಳಿಂದ ನಿಬಿಡವಾಗಿರುವ ಮತ್ತು ಹೊಲಸಿನಿಂದ ತುಂಬಿರುವ ಪಟ್ಟಣದ ಕೆಲವು ಪ್ರಾಂತ್ಯಗಳನ್ನು ಸಜ್ಜುಗೊಳಿಸುವುದು ಅಗತ್ಯವಾಗಿದೆ. ಹೀಗೆ ಇಂಥಾ ಮಹಲ್ಲಗಳನ್ನು ನಿರ್ಮಲಗೊಳಿಸುವಾಗ ಹಲವು ಅನಾರೋಗ್ಯಕರ ವಸ್ತಿಗಳನ್ನು ತೆಗೆಯಬೇಕಾದುದರಿಂದ ಬಡನಿವಾಸಿಗಳಲ್ಲಿ ಹಲವರಿಗೆ ತಕ್ಕ ವಾಸ್ತವ್ಯಗಳಿಲ್ಲದೆ ಹೋಗುವವು. ಇಂಥಾ ಸ್ಥಳದ ಕೊರತೆಯನ್ನು ನಿವಾರಿಸುವ ಬಗ್ಯೆ ಉರ್ವದಲ್ಲಿ ಪಟ್ಟಣವನ್ನು ಬೆಳಸಬೇಕಾಗಿ ಬಂತು. ಪ್ರಜಾಕ್ಷೇಮದ ಇಂಥಾ ವಿಷಯಗಳಲ್ಲಿ ವಿಶೇಷವಾದ ಚಿಂತನೆಯುಳ್ಳ [illegible] ಈಗಿನ ಕಲೆಕ್ಟರ ದೊರೆಗಳವರ ಸಹಾಯದಿಂದ ಮುನ್ಸಿಪಲ್ ಕೌನ್ಸಿಲಿನವರು ಉರ್ವದಲ್ಲಿ ಸುಮಾರು ೬೫ ಎಕ್ರೆ ಸ್ಥಳವನ್ನು ಪಟ್ಟಣ ವಿಸ್ತಾರದ ಬಗ್ಯೆ ಆರಿಸಿದರು. ವಸ್ತಿಯೊಂದಕ್ಕೆ ೧೫ ಸೆಂಟ್ಸ್ ವಿಸ್ತೀರ್ಣದ ಸ್ಥಳವು ಇಲ್ಲಿ ಕೊಡೋಣಾಗುವದು. ಈ ಸ್ಥಳಗಳನ್ನು ಜನರು ಮಾರಿಗೆ [illegible] ತಕ್ಕೊಳ್ಳಬೇಕಾಗಿರುವುದು. ಸರಕಾರದವರು ಈ ಪಟ್ಟಣ ವಿಸ್ತಾರಗೊಳಿಸುವ ಏರ್ಪಾಡಿನಗೋಸ್ಕರ ತತ್ಕಾಲಕ್ಕೆ ೩೦,೦೦೦ ರೂಪಾಯಿಗಳನ್ನು ಕೊಟ್ಟಿರುವರು. ಕುಡಿಯುವ ನೀರಿನ ಬಗ್ಯೆ ಮೂರು ಬಾವಿಗಳೂ ಇಲ್ಲಿ ತೋಡಿಸೋಣಾಗುವವು. ೧೯ ದೀಪಸ್ತಂಭಗಳು ನಿಲ್ಲಿಸಲ್ಪಡುವವು. ಇನ್ನು ಮಾರ್ಗಗಳ ಬದಿಗಳಲ್ಲಿ ಚರಂಡಿಗಳನ್ನು ಅಗೆಸಿ ಕಟ್ಟಿಸುವುದು ಮೊದಲಾದ ಆರೋಗ್ಯ ರಕ್ಷಣೆಯ ನೂತನ ಸಿದ್ಧಾಂತಗಳಲ್ಲಿ ಈ ಪಟ್ಟಣವು ಸ್ಥಾಪಿಸಲ್ಪಡುವುದು. ಇಂಥಾ ಪಟ್ಟಣವನ್ನು ಪೆಂಟಲೆಂಡ್ ಪೇಟೆಯೆಂತ ಹೆಸರಿಡಲಿಕ್ಕೆ ಅಪ್ಪಣೆ ಪಾಲಿಸಬೇಕೆಂಬದಾಗಿ ಮುನ್ಸಿಪಲ್ ಚೇಯರ್ಮೆನರು ದೊರೆಗಳನ್ನು ವಿಜ್ಞಾಪಿಸಿಕೊಂಡರು. ಆರೋಗ್ಯಕರವಾದ ಇಂಥಾ ಸ್ಥಳವನ್ನು ಪಟ್ಟಣ ವಿಸ್ತಾರದ ಬಗ್ಯೆ ಚುನಾಯಿಸಿದುದಕ್ಕಾಗಿ ಮುನ್ಸಿಪಲ್ ಕೌನ್ಸಿಲಿನವರನ್ನು ಶ್ಲಾಘಿಸಿ ಈ ಪಟ್ಟಣದ ಬೆಳವಣಿಕೆಯಿಂದ ಮಂಗಳೂರು ನಿವಾಸಿಗಳ ಜೀವನವು, ಸುಖಕರವೂ, ಮಂಗಳಕರವೂ ಆಗಿ ಪರಿಣಮಿಸಲೆಂದು ಹರಸಿ ತಮ್ಮ ಹೆಸರಿನಲ್ಲಿ ಈ ನವೀನ ಪೇಟೆಯನ್ನು ಕರೆಯಬಹುದೆಂಬದಾಗಿ ಅಪ್ಪಣೆ ಕೊಟ್ಟರು. ನಂತರ ಈ ಉದ್ದೇಶದ ಬಗ್ಯೆ ತಯ್ಯಾರುಗೊಳಿಸಿದ ಬೆಳ್ಳಿಯ ಹಾರೆಯಿಂದ ಒಂದು ಹಾರೆ ಮಣ್ಣನ್ನು ಅಗೆದು ಪಟ್ಟಣವನ್ನು [illegible]

ಉರ್ವದಿಂದ ಹೊರಟು ನಂತರ ಬೆಳಿಗ್ಯೆ ಸೈಂಟ್ ಅಲ್ಲೊಸಿಯಸ್ ಕೊಲೇಜನ್ನು ಸಂದರ್ಶಿಸಿದರು. ಪ್ರಭುಗಳ ಉಪಚಾರದ ಬಗ್ಯೆ ಇಲ್ಲಿ ಚಲೋ ಏರ್ಪಾಡುಗಳು ಇದ್ದವು. ಬ್ಯಾಂಡವಾದ್ಯದ ಗಾಯನದಿಂದ 'ಬೊಯಿಸ್ಕೌಟ್ಸ್ ಮತ್ತು ಎಂಬುಲೆನ್ಸ್ ಕೋರಿನ ವಿದ್ಯಾರ್ಥಿಗಳು ಇಲ್ಲಿ ಸಾಹೇಬರವರನ್ನು ವಂದಿಸಿದರು. ಕೊಲೇಜಿನ ರೆಕ್ಟರರವರೂ ಘನ ಹೊಂದಿದ ಫಾದರ್ ಪ್ರೆಕಟಿ ದೊರೆಗಳವರೂ, ಪ್ರಭುಗಳವರನ್ನು ಕೊಲೇಜಿನ ಸಭಾಸದನಕ್ಕೆ ಕರಕೊಂಡು ಹೋದರು. ಇಲ್ಲಿ ಚಿಕ್ಕ ವಿದ್ಯಾರ್ಥಿಗಳ ರಮ್ಯವಾದ ಕಾಲೋಚಿತ ಗಾಯನವಿತ್ತು. ಪೆಂಟಲೆಂಡ ಪ್ರಭುಗಳ ಬಿರುದನ್ನು ಸೂಚಿಸುವ ಚಿತ್ರಪಟಕ್ಕೆ ಹೂಮಾಲೆಯನ್ನೂ ಅದೇ ಕಾಲದಲ್ಲಿ ಪ್ರಭುಗಳಿಗೆ ಪುಷ್ಪ ಗುಚ್ಛವನ್ನೂ ಕೊಟ್ಟು ಬಹುಮಾನಿಸಿದರು. ಕೊಲೇಜು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಪರವಾಗಿ ರೆಕ್ಟರ್ ದೊರೆಗಳವರು ತಮ್ಮ ರಾಜಭಕ್ತಿಯನ್ನು ಸೂಚಿಸಿ ಒಂದು ಮಾನಪತ್ರವನ್ನು ಓದಿದರು. ಪ್ರಭುಗಳ ಉತ್ತರವು ಈ ಮಾನಪತ್ರಕ್ಕೆ ಯುಕ್ತವಾಗಿತ್ತು. ಈ ಸಂಸ್ಥಾನದಲ್ಲಿಯೂ ಈ ಜಿಲ್ಲೆಯಲ್ಲಿಯೂ, ಪ್ರಕೃತ ತೋರಿಸೋಣಾದ ರಾಜಭಕ್ತಿಯನ್ನೂ ಯುದ್ಧದ ಫಂಡಿಗೆ ಉದಾರಹಸ್ತದಿಂದ ಕೊಡೋಣಾಗುವ ಸಹಾಯವನ್ನೂ ದೊರೆಗಳವರು ಪ್ರಶಂಸಿಸಿ ಮಾತಾಡಿದರು. ವಿದ್ಯಾರ್ಥಿಗಳು ಈ ಕಾಲದಲ್ಲಿ ಜನರಲ್ಲಿ ಲೋಕ ಸಮಾಚಾರದ ಸರಿಯಾದ ಮತ್ತು ಯಥಾರ್ಥವಾದ ಭಾವನೆಯು ಉಂಟಾಗುವಂತೆ ಪ್ರಯತ್ನ ಪಡುವದರಿಂದ ಹೆಚ್ಚಿನ ಉಪಕಾರವನ್ನು ಮಾಡಬಹುದೆಂತ ಸೂಚಿಸಿದರು. ಪ್ರಭುಗಳು ಭಾಷಣದ ನಂತರ ಕೊಲೇಜಿನ ಕಟ್ಟಡವನ್ನೆಲ್ಲಾ ನೋಡಿ ಅಲ್ಲಿಂದ ತೆರಳಿದರು.

ಮಧ್ಯಾಹ್ನದಲ್ಲಿ ಪಂಚಮರ, ರೋಮನ್ ಕೆಥೋಲಿಕರ, ಮತ್ತು ಮಹಮ್ಮದೀಯರ ಪ್ರತಿನಿಧಿಗಳು ಪ್ರಭುಗಳವರ ಭೇಟಿಯನ್ನು ಮಾಡಿದ ವೃತ್ತಾಂತವು ನಿನ್ನೆಯ ವರೆಗೆ ಪ್ರಕಟವಾಗಲಿಲ್ಲ. ಸಾಯಂಕಾಲ ಗಂಟೆ ೫—೩೦ಕ್ಕೆ ಗವರ್ನರ ಪ್ರಭುಗಳವರನ್ನು ಕಲೆಕ್ಟರ ದೊರೆಗಳವರು ಗಾರ್ಡನ್‌ಪಾರ್ಟಿಯಿಂದ ಸತ್ಕರಿಸಿದರು. ಈ ಸಮಾರಂಭಕ್ಕೆ ಇಲ್ಲಿಯ ಕೆಲವು ಸರಕಾರದ ನೌಕರರಿಗೂ ಪ್ರಜಾ ಮುಂದಾಳುಗಳಿಗೂ ಆಮಂತ್ರಣವಿತ್ತು. ಕೆಲವು ಹಿಂದೂ ಮತ್ತು ರೋಮನ್ ಕೆಥೋಲಿಕ ಕುಲಸ್ತ್ರೀಯರು ಸಹ ಈ ಬಗ್ಯೆ ಆಮಂತ್ರಿಸಲ್ಪಟ್ಟಿದ್ದರು.

ಪೆಜಮುಂಗೂರು:—ತಾ. ೨೮-೧೦-೧೪ರಲ್ಲು ಅಪರಾಹ್ನ ಘಂಟೆ ೪ಕ್ಕೆ ಪೆಜಮುಂಗೂರು, ಪೇಕಾಡಿ, ಸೀಲಾವರ ವಗೈರೆ ೧೩ ಗ್ರಾಮ ನಿವಾಸಿಕರ ಒಂದು ಸಭೆ ಕೂಡಿಸಲ್ಪಟ್ಟಿತು. ಈ ಸಭೆಗೆ ಮ। ರಾ। ರಾ। ಕೆ. ಶ್ರೀನಿವಾಸರಾವು, ಬಿ. ಎ. (ಉಡ್ಪಿ ತಾಲೂಕು ತಹಶಿಲ್ದಾರ್) ಮ। ರಾ। ರಾ। ಎಚ್. ವಾಸುದೇವರಾವು ಬಿ. ಎ. ಬಿ. ಎಲ್.; ಎಮ್. ವಿಠಲ್ ಕಮತ್ ಬಿ. ಎ. ಬಿ. ಎಲ್. ಮುಂತಾದ ಮಹಾನೀಯರು ಉಡುಪಿಯಿಂದ ದಯಮಾಡಿದ್ದರು. ಈ ಸಭೆಗೆ ಮ। ರಾ। ರಾ। ವಾಸುದೇವರಾವ್ ಅವರ್ಗಳ್ ಬಿ. ಎ. ಬಿ. ಎಲ್. ಇವರು ಅಧ್ಯಕ್ಷರಾಗಿದ್ದರು. ಮ। ರಾ। ಸೂರಾಲು ಅರಮನೆ ನಾಭಿರಾಜಯ್ಯನವರು ಸಭೆ ಕೂಡಿದ ಉದ್ದೇಶವನ್ನು ಸಭಿಕರಿಗೆ ವಿವರಿಸಿ ಹೇಳಿದರು. ನಂತರ ಮ। ರಾ। ಎಮ್. ವಿಟ್ಠಲ್ ಕಾಮತ್ ಅವರ್ಗಳ್ ಇವರು ಈಗ ಯೂರೋಪ ಖಂಡದಲ್ಲಿ ನಡೆಯುವ ಅಸಮಾನ ಘೋರ ಯುದ್ಧದಿಂದ ನಮ್ಮ ಆಳ್ವರಾದ ಸಾರ್ವಭೌಮ ೫ನೇ ಜೋರ್ಜ ಚಕ್ರವರ್ತಿಯವರಿಗೆ ಅಂದರೆ ನಮಗೆ ಸಂಭವಿಸುವ ಕಷ್ಟ, ನಷ್ಟ, ಧೃಷ್ಟತೆಯ ವಿಷಯವಾಗಿಯೂ ಮತ್ತು ದಯಾಳು ಬ್ರಿಟಿಷರ ಆಳುವಿಕೆಯಿಂದ ನಮಗೆ ನಿರಂತರ ಅನುಭವಕ್ಕೆ ಬಂದಿರುವ ಪ್ರಯೋಜನಗಳನ್ನೂ ಮನೋರಂಜಕವಾದ ಮತ್ತು ಪ್ರೋತ್ಸಾಹಕಾರಕವಾದ ಒಂದು ಉಪನ್ಯಾಸ ಮೂಲಕ ವಿವರಿಸಿ ಹೇಳಿದುದಲ್ಲದೆ ಶ್ರೀ ಮಹಾಲಿಂಗೇಶ್ವರನ ದಯೆಯಿಂದ ನಮ್ಮ ಚಕ್ರವರ್ತಿಯವರಿಗೆ ದೀರ್ಘಾಯುಷ್ಯವೂ, ಯುದ್ಧದಲ್ಲಿ ಜಯವೂ ಸಿಗತಕ್ಕದ್ದೆಂದು ಸಭಿಕರೆಲ್ಲರೂ ಜಯಘೋಷವನ್ನು ಮಾಡಿ ಪ್ರಾರ್ಥಿಸಿದರು. ಅನಂತರ ಮ। ರಾ। ಸುರಾಲು ಅರಮನೆ ನಾಭಿರಾಜಯ್ಯನವರಿಂದ ಸಭೆಯ ಮುಂದಿಟ್ಟ—ಉಡ್ಪಿ ತಾಲೂಕು ಕೊಕ್ಕರ್ಣೆ ಫಿರ್ಕಿಯ ನಿವಾಸಿಕರಾದ ನಾವು ನಮ್ಮ ಸರ್ವಸ್ವವನ್ನೂ ಪ್ರತ್ಯಕ್ಷ ದೇವತಾ ಸ್ವರೂಪಿಯಾದ ಚಕ್ರವರ್ತಿಗಳ ಅನುಕೂಲಕ್ಕಾಗಿ ಅರ್ಪಿಸುವಂಥಾದ್ದು ನಮ್ಮ ಕರ್ತವ್ಯವಾಗಿರುತ್ತದೆ. ಪ್ರಕೃತ (1) ಮದ್ರಾಸು ಯುದ್ಧ ಫಂಡಿಗೂ (2) ವೈಸ್‌ರಾಯ ಫಂಡಿಗೂ ದ್ರವ್ಯ ಸಹಾಯವನ್ನು ಒದಗಿಸಿಕೊಡುವದಕ್ಕೆ ಒಂದು ವಂತಿಗೆ ಪಟ್ಟಿಯನ್ನು ಈ ಕ್ಷಣದಲ್ಲಿಯೇ ತಯಾರಿಸುವಂತೆ [illegible] ನಿರ್ಣಯಗಳು ಸಭೆಯಿಂದ [illegible] ಪಟ್ಟಿಯನ್ನು ಸಭಿಕರಿಗೆ [illegible] ಉದಾರ ಮನಸ್ಸಿನಿಂದ ವಂತಿಗೆ [illegible]

Canarese Novels Etc.

ಕನ್ನಡ ಪುಸ್ತಕಗಳು.

ಮ| ರಾ| ರಾ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.		ರೂ. ಆ.
...ಗವಿಜೇತ ಹೊಸ ನಾವಿಲ್	1–4	ಕಮಲಾ ಕಾಂತ ದ್ವಿ. ಮು.	0–2
ಕುಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1–4	ಲೀಲೆ [ಸಮಾಜ ಚಿತ್ರ]	0–4
ಕಪಾಲಕುಂಡಲಿ ಡಿಟೊ 2ನೇ ಭಾಗ	1–8	ಮಾಲತಿ [ಅತಿ ಮನೋಹರ] ದ್ವಿ. ಮು.	0–3
ಸೀತಾರಾಮ (ಇತಿಹಾಸ)	1–8	ರಾಧಾರಾಣಿ [ಕಾದಂಬರಿ] ತೃ. ಮು.	0–3
ವಿಷವೃಕ್ಷ ದ್ವಿ. ಮು.	1–4	ಯುಗುಳಾಂಗುರೀಯ ,,	0–3
ದೇವೀ ಚೌಧುರಾಣಿ-ಡಿಟೊ	1–4	ಭ್ರಾಂತಿವಿಲಾಸ ,	0–8
ರಾಜಸಿಂಹ-(ಇತಿಹಾಸ)	1–5	ನೊಂದನುಡಿ [ಸ್ತ್ರೀನೀತಿ]	0–2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0–2
ಮೃಣ್ಮಯಿ-ಡಿಟೊ 2ನೇ ಭಾಗ	1–1	ವೈಜ್ಞಾನಿಕ ಪ್ರಹಸನ [ನಕಲು]	0–4
ಕೃಷ್ಣಕಾಂತನ ಉಯಿಲು	1–0	ಚಿರತ್ನನಾಟಕರತ್ನ ಡಿಟೊ	0–7
ಮನೋರಥಮ [ಪತ್ತೇದಾರಿ ಕಥೆ]	1–0	ಚಿತ್ರವಿಚಿತ್ರಾವಳಿ [Tit-Bits]	0–8
ಪರಿಮಳ-ಡಿಟೊ-ದ್ವಿ. ಮು.	0.10	ನೀರದೆ [ಹೊಸ ಕಾದಂಬರಿ]	0–8
ಸಾಧನೆ. ಡಿಟೊ	0–8	ಭಾರತಮಹಿಳಾ [ಸ್ತ್ರೀನೀತಿ]	0–8
ಕೊಹಿನೂರು [ಇತಿಹಾಸ]	0.12	ಅಮೃತಫಲ [ನಾವಿಲ್]	0.11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0–3	ಇತ್ಯಾದಿ.	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ. ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ 1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಆ.		ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0–8	ನಿರ್ಭಾಗ್ಯಚಾರಿತ್ರ್ಯ [ಹೊಸ ಕಾದಂಬರಿ]	0–[illegible]
ಶ. ಕವಿಚರಿತೆ [ಪೂರ್ವಭಾಗ]	3–2	ಅನಂಗಸುಂದರಿ ಡಿಟೊ	0–8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0–8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0–6	ರಾಧಾಮಾಧವಿ ಡಿಟೊ	0–8
ಕಲಾನಾಥ ಡಿಟೊ	0–8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0–9
ಶೋಭನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು.	0–9
ಯಾಮಿನಿ [ಬಂಗಾಳೀ ನಾವಿಲ್]	0–3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0–8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4–0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0–8	ಹರಿಕಥಾಮೃತಸಾರ ಡಿಟೊ	1–6
ಸನ್ಯಾಸಿ [ಹೊಸ ಕಾದಂಬರಿ]	0–6	ಚದುರಂಗಬೋಧಿನಿ	0–3
ಮೃತ್ಯು ಪರೀಕ್ಷೆ ಡಿಟೊ	0–2	ಸರ್ವೇಮ್ಯಾನ್ಯುಯಲ್	0–5
ಬೃಂದಾವನ ಡಿಟೊ	0–2	ನ್ಯಾಯದರ್ಪಣ [ಲಾ]	1–1
ಸುಮನೋರಮ ಡಿಟೊ	0–2	ವ್ಯವಹಾರ ದೀಪಿಕೆ [ಲಾ]	3–0
ಮಾಲಿನಿ ಡಿಟೊ	0–2	ಶಾಕುಂತಲ ನಾಟಕ ದ್ವಿ. ಮು.	0–3
ಪ್ರೇಮವಿಲಾಸ ಡಿಟೊ	0–2	ಶೂರಸೇನಚರಿತ್ರೆ ನಾಟಕ ಡಿಟೊ	1–[illegible]
ವಿರಕ್ತಳಾದ ಸೌದಾಮಿನಿ ಡಿಟೊ	0–5	ಚಂಡಕೌಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	0–2	ರಾಮವರ್ಮ ಲೀಲಾವತೀ ನಾಟಕ	0–8
ಚಾತುರ್ಯವತಿ ಡಿಟೊ	0–2	ಪಾಂಚಾಲೀ ಪರಿಣಯ ನಾಟಕ	0.10
ವಸುಮತಿ ಡಿಟೊ	0–2	ಚಂಡೀಮದಮರ್ದನ ನಾಟಕ	0–5
ವಿಲಕ್ಷಣಶಿಕ್ಷಣ ಡಿಟೊ	0–2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0–2	ಭರ್ತೃಹರಿ ನಿರ್ವೇದ ನಾಟಕ	0–3
ಭಾನುಮತಿ ಡಿಟೊ	0–2	ನಿರುಪಮಾ [ನಾಟಕ]	0.12
ಸತೀರೋಹಿಣಿ ಡಿಟೊ	0–2	ಧ್ರುವವಿಜಯ [ನಾಟಕ]	0–4
ಸಂತಾಪಕ ಡಿಟೊ	0–4	ಸೀತಾಪರಿಣಯ [ನಾಟಕ]	0–4
ಚಂದ್ರಮುಖಿ [ಸ್ತ್ರೀನೀತಿ]	0–6	ಸೀತಾಸುವರ್ಣಮೃಗ [ನಾಟಕ]	0–12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—

ಎಮ್. [illegible], ಬೆಂಗಳೂರು ಸಿಟಿ.

"ಶ್ರೀ ಬಸವರಾಜೇಂದ್ರ ವಿಜಯ."

ಪ್ರಸಿದ್ಧವಾದ ಬಸವಪುರಾಣದ ಸಾರಭೂತವಾದ ವಚನಗ್ರಂಥ. ಸುಂದರವಾದ ಮಾತುಗಳು, ಸುಲಭವಾದ ಸರಣಿ, ಭಕ್ತಿರಸ ಪ್ರಧಾನವಾದ ಕಥೆಗಳು, ಶಿವಶರಣರ ಲೀಲೆಗಳು, ವೀರಶೈವಮತದ ತತ್ವಗಳೂ ಸಹ ಅಡಕವಾಗಿರುವುವು. ಮಕ್ಕಳಿಗೂ ಅರ್ಥವಾಗುವಂತಹ ಮೃದುವಾದ ಮಾತುಗಳಿಂದ ಬರೆಯಲ್ಪಟ್ಟಿದೆ. ಲಿಂಗಾಂಗಿಗಳಾದವರೆಲ್ಲರೂ ಇದನ್ನು ಬಿಡದೆ ಓದಿ ತಮ್ಮ ಮತಧರ್ಮವನ್ನರಿತು ಧನ್ಯರಾಗುವರೆಂದು ನಂಬಿರುತ್ತೇವೆ. ಬೆಲೆ ಸುಲಭ. 0—12—0. ದಪ್ಪ ಕಾಗದ. ಸುಂದರವಾದ ಮುದ್ರಣ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ.

ದಾರಣೆ ಸುಲಭ! **ಅಲಿಗರ್ ಬೀಗಗಳು.** ದಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗದಕೈ ಮತ್ತೊಂದಕ್ಕೆ ಆಗುವುದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಡಿಯನ್ ರೈಲ್ವೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ.	1	2	3	4	5
	0–12–0	0–15–0	1–4–0	1–10–0	.....

ಆರು ಚಕ್ರಗಳಿರುವ ಬೀಗಗಳು.

1–2–0 1–8–0 2–4–0 3–0–0 3–8–0

ಪಿಲ್ಲರ್ ಬೀಗಗಳು.

0–4–0 0–5–0 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿರುವ ಬೀಗ ಒಂದಕ್ಕೆ 0–13–0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ಒಂದಕ್ಕೆ 1–8–0, 1–12–0.

ವಿಳಾಸ:— ಎಚ್. ಎಸ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಲ್ಪ ಬೆಲೆಗೆ ಉತ್ತಮ ಪುಸ್ತಕಗಳು.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಷನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಅಪೂರ್ವ ಪುಸ್ತಕಗಳು.

ಎಲ್ಲರಲ್ಲಿಯೂ ಇರಬೇಕಾದ್ದು. ಜಮಾ ಖರ್ಚಿನ ಪದ್ಧತಿ 12 ಆಣೆ. ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿಸುತ್ತೆ.

ಆಂಗ್ಲಭಾಷಾ ಪ್ರಕಾಶಿಕಾ. ಐದು ಭಾಗವು ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ರೂ. 1—8—0. ಇದನ್ನು ಗುರುವಿನಂತೆ ಭಾವಿಸಿ.

ವೈದ್ಯಸಾರ ಸಂಗ್ರಹ. ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3.

ಆರ್ಯಕೀರ್ತಿ	0–10—0	ಶುಕಸಪ್ತತಿ	2—0—0
ಹನುಮದ್ವಿಲಾಸ ...	0—8—0	ಕುಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ ...	1—0—0
ಶಾಕುಂತಲ ನಾಟಕ ...	0—8—0	ಸುಮತಿ ಮದನ ಕುಮಾರರ ಚರಿತ್ರೆ I	0—8—0
ಸ್ತ್ರೀ ಧರ್ಮನೀತಿ ...	0—8—0	,, II ...	0—7—0
ಶೋಭನೆ	0—8—0	ಶಿವಗೀತೆ	0—6—0
ಚಂಪ್ರಕಳಾ	0—4—0	ಪಾಕಶಾಸ್ತ್ರ... ...	0—8—0
ಕಲಾನಾಥ	0—6—0	ಸನಾತನಧರ್ಮ ದೀಪಿಕೆ ...	1—0—0
ಶಿವಾನಂದಲಹರಿ ...	0—6—0	ಬಾಲರಾಮಾಯಣ...	0—4—0
ಪ್ರಶ್ನೋತ್ತರ ಲೆಖ್ಖಬೋಧಿನಿ	1–4–0	ಕಥಾಮಂಜರಿ ...	0—6—0
ವಿಷವೃಕ್ಷ	1—4—0		
ದುರ್ಗೇಶ ನಂದಿನಿ ...	1—4—0		
ಮುದ್ರಾಮಂಜೂಷ ...	1—8—0		

ದುಷ್ಟ ಚತುಷ್ಟಯ, ನರಬಲಿ, [illegible], ಮಾಯಾವಿಯ ಅತ್ಯಾಚಾರ. ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ:— ವಿದ್ಯಾಸಾಗರ ಬುಕ್ ಡಿಪೋ,
[illegible], ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತೆಗೆದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ತಗ್ಗೆದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿಸ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆವಶ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿಯೆವರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ದೊರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟಲಿಗೆ 1—12—0.

ದಿ. ಊಲನ್ ಮಾರ್ಟ್, ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಸಂಜೀವನಿ—ಎಲ್ಲಾ ರೋಗಗಳನ್ನು ತ್ವರಿತವಾಗಿ ಗುಣಪಡಿಸುವದು 10 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮೃತಸಂಜೀವನಿ—ಈ ಟೋನಿಕ್ ದ್ರಾವಕವು ನಿತ್ರಾಣರಿಗೆ ಚೈತನ್ಯ ಉಂಟುಮಾಡಿ ಆಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೋನಿಕ್ ಆರಕ್ತ ಬಾಲಕರಿಗೆ ಶಕ್ತಿಯನ್ನು ... ವರ್ಣವ ... ಹೆಚ್ಚಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ—ಈ ಸುವಾಸಿಕ ತೈಲ್ಯವು ಶೀತ ... ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ... ಜ್ಞಾನಶಕ್ತಿ, ದೃಷ್ಟಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಸಂಜೀವನಿ—ಈ ದಿವ್ಯೌಷಧವು ... ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಪ್ರಾಣ—ಇದು ಸರ್ಪ ... ಇತ್ಯಾದಿ ಸರ್ವ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭. ಅನಂಗವನವಿಲಾಸ—ಇದು ... ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ... ತಯಾರಿಸಿದ ಔಷಧ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳು ಕೂಡಾ ಇರುತ್ತವೆ. ಕ್ರಯವುಳ್ಳ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಕಮಿಶನ್ ಕೊಡಲ್ಪಡುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಕೆಲವು ದಿವಸಗಳಲ್ಲಿಯೇ ಪ್ರಕಾಶಿತವಾಗುವುದು. ತ್ವರೆಮಾಡಿ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ತಿದ್ದಿ ಬರೆದ ಮತ್ತು ಪರಿವರ್ಧಿತ ಮರಾಠಿ ನಾಟಕವು ಇನ್ನು ಕೆಲವು ದಿವಸಗಳಲ್ಲಿಯೇ ತಯಾರಾಗುವುದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕಜನರು ಈ ಸಂದರ್ಭವನ್ನು ಬಿಡಲಾಗದು. ಮುದ್ರಣವು ಅಂದವಾಗಿದೆ! ಬೆಲೆಯು ಬಹಳೇ ಕಡಿಮೆ! ಮಂಗಳೂರಲ್ಲಿಯೇ ಹೆಚ್ಚಿನ ಪ್ರತಿಗಳು ಖರ್ಚಾಗುವ ಸಂಭವವು ಇರುವುದರಿಂದ, ಹೊರ ಊರಿನವರು ತ್ವರೆಮಾಡಿರಿ!! ಬೆಲೆ ೧೦ ಆಣೆ. ಟ. ಹಾ. ೧ ಆಣೆ. ... ಯಾಗಿ ಕಳುಹಿಸಲಾಗದು.

ಲಾಣಾಪುರ ಮಂಗೇಶರಾವ್,
ಡೊಂಗರಕೇರಿ ರಸ್ತೆ, ಮಂಗಳೂರು.

ಘರೆಯು ಬ್ಯಾಡಿರಿ. ಮರೆಯು ಬ್ಯಾಡಿರಿ.

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಶನ್ ದೊರಿಯುವದು.

ಅಪಾಯ ರೋಮಸಂಹಾರಿ. ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ, ನೆಕೆ ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು. ಮರೆಯ ಬ್ಯಾಡಿರಿ.

3 ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ಆಣೆ 14.

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1-10-0 ಅಂಚೇ ಹಾಸಲು ಆ. 4.

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.
V. A. S. PANI,
No. 3, Erulappen Street, Madras.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರವಲ್ಲ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ದಿಂಡಿಗಲ್, ಕೋಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ, ಜರಿ, ಸಾದಾ ಸೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯೆರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲಾ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತುಗಳೆಲ್ಲವು ನಮ್ಮಲ್ಲಿ ... ಕ್ರಯಕ್ಕೆ ದೊರಕುತ್ತವೆ.

ಕ್ರಯವು ... [illegible]
... —[illegible]
[illegible]

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು ; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇ ಒಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗರ, ಬೆಳಗಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದುರ್ಜನೀಕರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಆಕರದಿಂದ ತಮಗೆ ಅಕ್ಕಲ್ಪ ಸಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುಹರುಬಾನ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಾದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ [illegible] ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ

ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತು ದೌರ್ಬಲ್ಯವನ್ನೂ ನಾಶಮಾಡುತ್ತವೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮಿದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯ ಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಲಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಕಗಳಾದ ಮತ್ತು ಮಿದುಳನ್ನು ಬೆಳೆಯಿಸಿ ವೃದ್ಧಿಗೈಯುವಂಥ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಸ್ಥಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ಸಮನಾಗಿ ಆವಶ್ಯಕವಾಗಿರುತ್ತವೆ.

ವಾರ್ಧಕ್ಯದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ತಬ್ಧತೆಯನ್ನು ಗುಣವಾದಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚಿಸುತ್ತವೆ. ರೋಗದಿಂದ ಮುರಿದು ಹೋದ ಅಥವಾ ಸವಕಲು ಆದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ಡಾಹರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೀಲ್, ಸನವೇರ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ."

4 ಎ. ಆರ್. ಚಾಕ್ಕೊ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, [illegible]—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನು. [illegible] ಗಿ ನಾನು ಒಳ್ಳೇ ಲಾಭವನ್ನು ಪಡೆದೆನು. [illegible]

5 ಮೂನಶೀ ನರಸಿಂಗರಾವ್, [illegible]—[illegible] ಗುಣವನ್ನು ಹೊಂದಿರುವದರಿಂದ, [illegible]

THE ANGLO INDIAN DRUG & CHEMICAL COMPANY, 16 MARKET BOMBAY 2.

[illegible] ದಿ ಇಂಡಿಯನ್ ಮಾರ್ಟ, ಮಂಗಳೂರು ದ. ಕನ್ನಡ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಿನಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	... ...	300,000—0—0
Issued Capital	... ...	225,000—0—0
Subscribed Capital	... ...	217,400—0—0
Paid up Capital	... ...	192,400—0—0
Deposits	... ...	485,596—1—3
Reserve Fund	... ...	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge.

Mangalore, 1st. November 1914.

ನಿಯಮಿತ ಮೂಲ ಧನವು ರೂಪಾಯಿ	... ...	300,000—0—0
ಹುಟ್ಟಿಬಂದ ಮೂಲ ಧನವು ,,	... ...	225,000—0—0
ಪ್ರತಿಜ್ಞಾತ ಮೂಲ ಧನವು ,,	... ...	217,400—0—0
ಆಗತ ಮೂಲ ಧನವು ,,	... ...	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	...	485,596—1—3
ರಕ್ಷಿತ ಧನವು	... ...	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,1 00 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರ ಧರ್ಮ್ರಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಬಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ, ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಚಿತ್ರಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪನಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

[illegible]

ಮುಳಿಯಿಲರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಡ್ತಿ 1ಕ್ಕೆ ಕ್ರಯ 10 ಆಣೆ. ಇದು ಎಲ್ಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

..................ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿ ಸುತ್ತಲಿರುವದರಿಂದ ನನ್ನ ಮುದಿ ಮೆದುಳು ಯೌವ್ವನ ಸ್ಥಾಯಿಯಲ್ಲಿರುವುದು. ಈ ದಿವ್ಯ ತೈಲ ಇಲ್ಲದೆ ನಾನು ಕೆಲಸಮಾಡಲಾರೆನು; ನನ್ನ ನೇತ್ರೇಂದ್ರಿಯಗಳು ವಿಶ್ರಾಂತವು.

ರೆವೆರೆಂಡ್ ಇ. ಸೋನ್ಸ್,
ಮುಲ್ಕಿ.

ತಾ. 15—4—13.

ಮುಳಿಯಿಲ್ಸ್ ಹೇರ್ ಓಯಿಲ್—ಕ್ರಯ 12 ಆಣೆ. ಕೂದಲಿಗೆ ಅಮೃತದಂತಿರುವ ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ. ಪಿ. ಮೂಲಕ ಕಳುಹಿಸಿರಿ.

ಮಿಸಿಸ್. ವೈ. ಕುರಿಯಾನ್,
ಗ್ರೀನ್ ವಿಲ್ಲಾ, ಕಲ್ಲಿಕೋಟೆ.

ತಾ. 23—5—13.

..................ಮುಳಿಯಿಲ್ಸ್ ಹೇರ್ ಓಯಿಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು. ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರ್ಯದಲ್ಲಿ ಕಳುಹಿಸಿರಿ.

ಮಿಸ್. ಎಸ್. ಸೋನ್ಸ್,
ಸ್ಕೂಲು ಮಿಸ್ಟ್ರೆಸ್, ಮಂಗಳೂರು.

21ನೇ ಒಕ್ಟೋಬರ 1913.

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತೆಗೆದುಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ. ಇದು ಒಳ್ಳೇ ಗುಣ ಕೊಡುವುದೆಂಬುದಾಗಿ ಹೇಳುವರೆ ಅನುಮಾನವಿಲ್ಲ.

ಎ. ಪೊಕ್ರು ಹೆಗ್ಗಡೆ,
ಕುಕ್ಕುಛೆ, ಕಾರ್ಕಳ.

ತಾ. 13—6—13.

ವಯೊಲೆಟ್ ಹೇರ್ ಓಯಿಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆನೋವು ತೀಯು ಗುಣಪಡುವದು. ಯಾವುದೇ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ. ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಮೊಮ್ಮಗಳಿಗೆ ತಮ್ಮಿಂದ ತಕ್ಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು. ಹೆಚ್ಚಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬುದು ನನ್ನ ಪ್ರಾರ್ಥನೆಯಾಗಿದೆ.

M. JACOBI,
Hd. Clerk, CALICUT.

4—7—13.

ವಿಳಾಸ:— **ಮುಳಿಯಿಲ್ ಎಂಡ್ ಸನ್ಸ್**, ಕಾಸರಗೋಡು, ದ. ಕ.

---

150 ಪುಟಗಳ ಪುಸ್ತಕವು.
ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರೆಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ.

ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ಬ್ರಿಟೊಬಿಲ್ಡಿಂಗ್ 2. ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು.

ತರಿಸಿರಿ! **ಓದಿರಿ!!**

ವಿಕಟಪ್ರತಾಪವೆಂಬ

ಮಾಸಪತ್ರಿಕೆ.

ಎಂಥ [illegible]ಯಲ್ಲಿರುವವರಿಗೂ ನಗುಬರುವಂತೆ ಹಾಸ್ಯರಸದಿಂದ ಕೂಡಿದ ಸಚಿತ್ರವಾದ [illegible] ವಿಷಯಗಳು ಇದರಲ್ಲಿ ಮುದ್ರಿಸಲ್ಪಡುವದು! ತಿಂಗಳಿಗೆ [illegible] ವಾರ್ಷಿಕ ಚಂದಾ ವಿ. ಪಿ. ಮೂಲಕ ಮುಂಗಡ [illegible] 90 ಪುಟಗಳನ್ನೊಳಗೊಂಡ [illegible] ದೊರೆಯುವದು.

[illegible]

ಹೊಸ ಗ್ರಂಥಗಳು

ಬೆಲೆ ಕಡಿಮೆ! ಓದುವದಕ್ಕೆ ಆನಂದ!!

ಮಂಜುಘೋಷಾಶೃಂಗಾರಾದ್ಭುತ ಕಥೆ

ಇದು ಶೃಂಗಾರ ರಸಭರಿತವಾದ ಕಾದಂಬರಿ ಕಥೆಯು. ಇದರಲ್ಲಿ ಮಂಜುಘೋಷೆಯು ತನಗೆ ಎಂಥ ಸಂಕಟ ಬಂದರೂ ಸಹ ಎದೆಗುಂದದೆ ತನ್ನ ಪತಿಯಾದ ವಸಂತ ಮಾಧವನೊಡನೆ ವನದಲ್ಲಿ ಸಂಚರಿಸಿ, ಆ ಮೇಲೆ ಪತಿಯನ್ನಗಲಿ, ಪುತ್ರನನ್ನಗಲಿ, ಅತಿ ಕಷ್ಟಕ್ಕೆ ಗುರಿಯಾಗಿ, [illegible] ಯಂತನ ಪಾದಾರವಿಂದದಲ್ಲಿ ಭಕ್ತಿಯನ್ನಿಟ್ಟು ವರ್ತಿಸಿದ್ದರಿಂದ ಪರಮೇಶ್ವರನು ಕರುಣಿಸಿ ಪತಿ, ಪುತ್ರ ಮಾತಾಪಿತೃಗಳ ದರ್ಶನಮಾಡಿಸಿದನು ಎಂಬ ವಿಷಯ ಗರ್ಭಿತವಾದದ್ದಿದ್ದು ಕೇವಲ ತಿಳಿಗನ್ನಡದಿಂದ ಮುದ್ರಿಸಲ್ಪಟ್ಟಿದೆ. ಇದರ ಪ್ರಥಮ ಮುದ್ರಣವು ಮೂರೇ ತಿಂಗಳಲ್ಲಿ ಮುಗಿದುಹೋದುದರಿಂದ ಇದರ ಗುಣವು ಎಷ್ಟರ ಮಟ್ಟಿಗೆ ಇರುವದೆಂಬುದು ಓದುವದರಿಗೆ ತಾನೇ ಕಂಡುಬರುವದು ಈಗ [illegible]ಯ ಮುದ್ರಣವು ಬೆಲೆಗೆ ಸಿದ್ಧವಾಗಿದೆ. ಕ್ರಯ ೮ ಆಣೆ.

ಹಾತೀಮತಾಯಿ ಕಥೆ.

ಇದು ಕೇವಲ ಪರೋಪಕಾರ ದಿಗ್ದರ್ಶನ ವಿಷಯಕವಾದದ್ದಿದ್ದು ಪ್ರತಿಯೊಬ್ಬನು ಅನುಕರಣೆಯ ಮಾಡಲಿಕ್ಕೆ ಯೋಗ್ಯವಾಗಿದೆ. ಇದರಲ್ಲಿ ಕಥಾ ನಾಯಕನಾದ ಹಾತೀಮನು, ಕಥಾನಾಯಕಿಯಾದ ಹುಸೇನಬಾನು ಎಂಬವಳ ಏಳು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಹೇಳಿ, ಆಕೆಯನ್ನು ಮುನೀರಷಹನೆಂಬ ರಾಜಪುತ್ರನಿಗೆ ವಿವಾಹಮಾಡಿಸಿದನೆಂಬ ಸಂದರ್ಭವು ವರ್ಣಿಸಲ್ಪಟ್ಟಿದೆ. ಈ ಕಥೆಯು ಹಿಂದೂಸ್ಥಾನಿ, ಮಹಾರಾಷ್ಟ್ರ, ಭಾಷೆಗಳಲ್ಲಿ ಪ್ರಚುರವಾಗಿ ಲಕ್ಷಾವಧಿ ಪ್ರತಿಗಳು ಖರ್ಚಾಗಿ ಹೋದದ್ದನ್ನೂ, ಹೋಗುತ್ತಿರುವದನ್ನೂ ಕಂಡು, ಕನ್ನಡ ಭಾಷೆಯಲ್ಲಿ ಭಾಷಾಂತರ ಮಾಡಿಸಿ, ವಿಕ್ರಯಕ್ಕೆ ಸಿದ್ಧಮಾಡಲ್ಪಟ್ಟಿದೆ. ಕ್ರಯ ೮ ಆಣೆ.

ವಿಷ್ಣುಶರ್ಮ ಪಂಚತಂತ್ರ ಕಥೆಗಳು.

ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ಸರ್ವಾಂಗ ಸುಂದರವಾಗಿದ್ದು, ಆದರಂತೆಯೇ ತಿಳಿಗನ್ನಡದಲ್ಲಿ ಮಿತ್ರಭೇದ, ಸುಹೃಲ್ಲಾಭ, ಸಂಧಿವಿಗ್ರಹ, ಲಬ್ಧನಾಶ, ಅಸಂಪ್ರೇಕ್ಷ್ಯಕಾರಿತ್ವವೆಂಬ ಐದು ತಂತ್ರಗಳನ್ನು ಒಳಗೊಂಡಿದೆ. ಇದರಲ್ಲಿ ವಿಷ್ಣುಶರ್ಮನಿಂದ ಬೋಧಿತರಾದ ಈಶ್ವರು ರಾಜಪುತ್ರರ ಸನ್ಮಾರ್ಗವರ್ತಿಗಳಾದ ಸಂಗತಿಯನ್ನೂ ಅಲ್ಲಲ್ಲಿ ಕಥಾ ಸಂದರ್ಭಾನುಸಾರವಾಗಿ ಹೇಳಿದ ನೀತಿಪರವಾದ ಸಂಸ್ಕೃತ ಶ್ಲೋಕಗಳೂ, ಅವುಗಳ ಟೀಕೆಯು ಸಹಿತವಾಗಿದ್ದು ಸುಬೋಧವಾಗಿರುವ ಉಪಕಥೆಗಳನ್ನೂ ಒಳಗೊಂಡದ್ದಾಗಿದೆ. ಈ ಗ್ರಂಥ ವಾಚನದಿಂದ ಪ್ರತಿಯೊಬ್ಬ ಮನುಷ್ಯನು ಸನ್ಮಾರ್ಗವರ್ತಿಯಾಗುವನೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಈ ಗ್ರಂಥವು ಕನ್ನಡ ಭಾಷೆಯಲ್ಲಿ ನೂತನವಾಗಿ ಪ್ರಕಟವಾಗಿದೆ. ಕ್ರಯ ೮ ಆಣೆ.

ಮೋಹನಾಂಗಿಯ ಕಥೆ.

ಈ ಕಥೆಯು ವಾಚಕರು, ಓದಿದರೆ ಉಲ್ಲಾಸವನ್ನುಂಟುಮಾಡುತ್ತದೆ. ಮೋಹನಾಂಗಿಯು ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವಭರ ಬಲೆಯಿಂದ, ತನಗೆ ಎಂಥಾ ವಿಪತ್ತು ಬಂದಾಗ್ಯೂ, ಭಗವಂತನ ಅನುಗ್ರಹದಿಂದ ಪಾರಾಗಿ ತನ್ನ ಭರ್ತನನ್ನು ಕೂಡಿದಳು. ಇದರಿಂದ ಸ್ತ್ರೀಯರಿಗೂ ಪುರುಷರಿಗೂ ಸಹ ನೀತಿಯನ್ನುಂಟುಮಾಡುವುದು. ಕ್ರಯ ೪ ಆಣೆ.

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜೋತಿಷ್ಯ ಗ್ರಂಥಗಳು, ವೈದ್ಯಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವ ಮತ ಗ್ರಂಥಗಳು, ನಾಟಕಗಳು, ಕನ್ನಡ ಸಂಸ್ಕೃತ ಗ್ರಂಥಗಳು ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ ಏಜಂಟ್, [illegible]

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ [illegible]ರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರ [illegible]ಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ [illegible] ಉಂಟುಮಾಡುವಂಥ [illegible] ತರಗತಿಯ ಈ ಪತ್ರವನ್ನು [illegible]

[illegible]

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಆಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	ಅರಗಜ	ತೊಲೆ 1ಕ್ಕೆ	2-0-0
ಅಂಬರ್ ಬತ್ತಿ	,, ,,	6-0-0	B ಅರಗಜ	,, ,,	1-0-0
ಕಸ್ತೂರಿ ಬತ್ತಿ	,, ,,	3-0-0	ಕಸ್ತೂರಿ ಬಿಲ್ಲೆ	,, ,,	2-0-0
ಜವಾಜಿ ಬತ್ತಿ	,, ,,	2-0-0	ಜವಾಜಿ ಬಿಲ್ಲೆ	,, ,,	1-0-0
ಸಂಪಿಗೆನ ಬತ್ತಿ	,, ,,	1-8-0	ಕೇಸರಿ ಬಿಲ್ಲೆ	,, ,,	0-8-0
ಪನ್ನೀರ್ ಬತ್ತಿ	,, ,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ		0-4-0
ಮಸಾಲಾ ಬತ್ತಿ	,, ,,	0-6-0	ದಶಾಂಗ ಡಬ್ಬಿ 1ಕ್ಕೆ		0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ [illegible] ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಪ್ರಾಣ) ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ವಾಯುವ್ಯಾಪಾರಗಳು [illegible] ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಶ್ವಾಸ, ಪ್ಲೀಹ, ಯಕೃತ್, ಕ್ಲೋಮ, ಹೃದಯ ಈ ಕೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆಯುತ್ತಲಿರುತ್ತವೆ. ಆದರೆ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು [illegible] ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ಪ್ರವೇಶ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ಕಲೆಹೋಗುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ಸೇರಿಕೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧಕ [illegible] ಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರೋಕ್ತ ತಯಾರಿಸಿರುವೆವು. ರಕ್ತವನ್ನುವೃದ್ಧಿ ಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು [illegible] ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನು ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ [illegible] ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಉಪಯೋಗಿಸಿಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಜಾಸ್ತಿಗೆ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ: — ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು

THE BOMBAY LIFE ASSURANCE CO. LTD.

Estabhedlis 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

"There can be no doubt that the Policy Contracts are well secured".

Chairman:-The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co. Ltd., The Tata Mills Co. Ltd., Managing Agent of Messrs. Marsland Price & Co. Ltd., and fellow of the Bombay University.

Actuary:—George King Esq. F. F. A., F. I. A., London.)

Medical Refree -Dr. R. Row, M. D. D. Sc. London.)

Managing Director:—Framrose R. Joshi, Justice of the Peace, The Honorary Presidency Magistrate & etc.

Wanted Agents on very liberal commission.

Apply for full particulars to—**Kochikar Bros.; Udipi**, Chief Agents for South Canara, Malabar, Travancore and Cochin.

ಮುಂಬಯಿ ಲೈಫ್ ಇನ್ಶುರೆನ್ಸ್ ಕಂಪೆನಿ, ಲಿಮಿಟೆಡ್.

(೧೯೦೮ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಒಗ್ಗೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚ್ಯುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು: — ಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್‌ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೊಲಿಕ್ ಮಾರ್ಸ್‌ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು.

ಎಕ್ಚುಯುಯರಿ:—ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ್‌ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್).

ಮೆನೇಜಿಂಗ್ ಡ್ಯಾರೆಕ್ಟರ್:—ರಾ| ಫ್ರೆಮ್‌ರೋಜ್ ಆರ್. ಜೋಶಿ ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು, ಧಾರಾಳವಾದ ಕಮಿಶನ್ ಕೊಡೋಣಾಗುವದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ—

[illegible]

ಕರ್ನಾಟಕ ವನೌಷಧಾಲಯ ಶಿರಸಿ.

ಔಷಧಗಳ ಗುಣದ ಬಗ್ಗೆ ಡಾಕ್ಟರ ಮುಂತಾದವರ ಕಡೆಯಿಂದ ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ.

೧. ರೋಗನಾಶಕ, ರಕ್ತ, ಧಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೨ ಟಿ. ಖ. ಸಹ ಕ್ರಯ ರೂ. ... ೨—೪—೦

೨. ಪ್ರವಾಳ ಕ್ಷೀರ ಅಮರಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ಧಕ ಗುಳಿಗೆ ೪೨ ಕ್ರಯ ರೂ. ... ೨—೪—೦

೩. ಗರ್ಮಿ ರೋಗನಾಶಕ ಗುಳಿಗೆ. ೭ ದಿವಸದಲ್ಲಿ ಖಚಿತ ಗುಣ ೪೨ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ. ... ... ೩—೪—೦

೪. ಹಾಕಿಚಟ್ಟೆನಾಶಕ ಮಲಮು. ಡಬ್ಬಿ ೧ಕ್ಕೆ ಕ್ರಯ ರೂ. ... ೧—೪—೦

೫. ವಾತನಾಶಕ ತೈಲ. ಯಾವದೇ ತರದ ವಾತವಿದ್ದರೂ ಗುಣ. ಕುಪ್ಪಿ ೧ಕ್ಕೆ ಕ್ರಯ ರೂ. ... ... ೧—೪—೦

೬. ಭೃಂಗಾಮಲಕಾದ್ಯ ತೈಲ. ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ. ಕುಪ್ಪಿ ೧ಕ್ಕೆ ಕ್ರಯ ರೂ. ... ... ೧—೪—೦

೭. ಜಂಬೀರ ತೈಲ ಮೇಲಿನಂತೆ ಗುಣ. ಕುಪ್ಪಿ ೧ಕ್ಕೆ ಕ್ರ. ರೂ. ೧—೨—೦

೮. ಮೂಲವ್ಯಾಧಿ ಹರಚೂರ್ಣ. ಡಬ್ಬಿ ೧ಕ್ಕೆ ಕ್ರಯ ರೂ. ... ೧—೪—೦

೯. ಕಫದಮ್ಮುಹರ ಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦

೧೦. ಇಸುಬುರುತ್ತಿ ಮಲಮು ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦

೧೧ ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು... ೧—೪—೦

೧೨. ಮದನೋದ್ಭವ ಚೂರ್ಣ ಡಬ್ಬಿ ೧ಕ್ಕೆ ರೂ. ೧—೧೨—೦

೧೩. ಅಮೃತಪಾಕ (ವೃದ್ಧನಾದರೂ ಸಶಕ್ತನಾಗುತ್ತಾನೆ) ಅತ್ಯಂತ ಪೌಷ್ಟಿಕ ಶಕ್ತಿವರ್ಧಕ. ೪೦ ತೊಲೆ ಡಬ್ಬಿ ೧ಕ್ಕೆ ... ೩—೮—೦

೧೪. ಅಮೃತಗುಟಿ ಅಗ್ನಿವೃದ್ಧಿಕರ ಪಿತ್ತಕಫನಾಶಕ ಜ್ವರಗಡ್ಡೆ [illegible] ಗತಜ್ವರ ನಾಶವಾಗಿ ಶಕ್ತಿ ಬರುತ್ತದೆ. ದಮ್ಮು ಕೆಮ್ಮು ಗುಣವಾಗುತ್ತದೆ. ಗುಳಿಗೆ ೪೨ಕ್ಕೆ ಕ್ರಯ ರೂ. ... [illegible]

ಈ ಶಿವಾಯ ಇನ್ನೂ ಅನೇಕ ಔಷಧಗಳು ಶಿಕ್ಕುತ್ತವೆ. [illegible] ಪೂರ್ಣವಾಗಿ ತಿಳಿಸಿದರೆ ಯೋಗ್ಯ [illegible] ಉತ್ತಮ [illegible] ದಾಗುವದು.

[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಕಾಂತ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾದಿ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೮ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮ ಜ್ವರ ಮುಂತಾದ ಎಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ [illegible] ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯೂ ವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

ನೀವು ತಾ. ೩೧ನೇ ಒಕ್ಟೋಬರ ತಿಂಗಳಲ್ಲಿ ಪ್ರಕಟಿಸಿದ ಪತ್ರದಲ್ಲಿ ಕಾಸರಗೋಡಿನಲ್ಲಿರುವ ಪಿ. ಸೀತಾರಾಮರಾವರವರು ಬರೆದ ಲೇಖನವನ್ನು ಓದಿ ನಾನು ಬಹಳವಾಗಿ ಪಶ್ಚಾತಾಪ ಪಡುತ್ತೇನೆ. ಅವರು ಆ ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಹೊಂದಿದ್ದು ನಿಜವಾಗಿರಬಹುದು. ಆ ವೇತನವನ್ನು ಆ ಫಂಡಿನ ಪ್ರೆಸಿಡೆಂಟರವರು ಮೂರನೇ ಉಮೇದ್ವಾರರೊಬ್ಬರಿಗೆ ಕೊಡಿಸಿದ್ದ ಸಂಗತಿಯೂ ನಿಜವಾಗಿರಬಹುದು. ಇದು ಮಾತ್ರವಲ್ಲದೆ ಅವರು ಆ ವೇತನಕ್ಕೆ ಸಂಬಂಧಪಟ್ಟ ಕ್ರಮಗಳನ್ನು ಓದುತ್ತೇನೆಂದೂ ಹೇಳುವ ಸಂಗತಿಯೂ ಸಹ ನಿಜವಾಗಿರಬಹುದು. ಆದರೆ ಅವರು ಆ ಕ್ರಮಗಳನ್ನು ಸಮನಾಗಿ ಓದುತ್ತಿದ್ದರೆ ಮತ್ತು ಅವುಗಳ ಅರ್ಥವು ಅವರಿಗೆ ಸಮನಾಗಿ ತಿಳಿದಿದ್ದ ಪಕ್ಷಕ್ಕೆ ಅವರು ಅಂಥಾ ಪತ್ರವನ್ನು ಬರಿಯುತ್ತಿದ್ದಿಲ್ಲವೆಂತ ನಾನು ನೆನಸುತ್ತೇನೆ. ಆದುದರಿಂದ ಅವರು ಆ ಕ್ರಮಗಳಲ್ಲಿರುವ ಕ್ರಮ Vನ್ನೂ VIIನ್ನೂ ಸಮನಾಗಿ ಓದಿದ ಪಕ್ಷಕ್ಕೆ ಅವರು ಸಂತುಷ್ಟಿಯಾಗುವರೆಂದೂ, ಪ್ರೆಸಿಡೆಂಟರವರು ಮಾಡಿದ್ದು ನ್ಯಾಯವಾದ ಸಂಗತಿಯೆಂದು ಅವರಿಗೆ ಕಂಡು ಬರುವದೆಂದೂ ನಾನು ನೆನಸುತ್ತೇನೆ.

ಮಂಗಳೂರು
7–11–1914.

Utchil Parameshwara.

~~~~~~~

'ಆಡುವವರ ಮಕ್ಕಳು ಆಡ ಬೇಕು; ಬೇಡುವವರ ಮಕ್ಕಳು ಬೇಡ ಬೇಕು'.

~~~~~~~

ಅಯ್ಯಾ, ಸ್ವದೇಶಾಭಿಮಾನಿ ಪತ್ರಕರ್ತರೇ,

ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಈ ಕೆಳಗಣ ಪಂಕ್ತಿಗಳನ್ನು ಪ್ರಚುರಪಡಿಸುವರೆ ಅವಕಾಶಕೊಡಬೇಕಾಗಿ ಪ್ರಾರ್ಥನೆ.

ಹಂಪನಕಟ್ಟೆಯಲ್ಲಿ ಹೊಸತಾಗಿ ತೆರೆಯಲ್ಪಟ್ಟ ಸೆನಿಟರಿ ಆಫೀಸಿನ ಗೃಹ ಪ್ರವೇಶದ ಸಮಾರಂಭದ ಜ್ಞಾಪಕಾರ್ಥವಾಗಿ ಕಳೆದ ಭಾನುವಾರ ರಾತ್ರಿ ೮ ಘಂಟೆಗೆ ಒಂದು "ಸೋಸಿಯಲ್ ಗ್ಯಾದರಿಂಗ್" ನಡಿಯುವದಾಗಿ ಡಾಕ್ಟ್ರರು, ಪ್ಲಾಯಿನ ಮರ್ಚೆಂಟರು, ಸಾವುಕಾರರು ವ ಇತರ ಅನೇಕ ಮಂಗಳೂರಿನ ಸಭ್ಯ ಗೃಹಸ್ಥರಿಗೆ ಆಮಂತ್ರಣಗಳು ಕಳುಹಿಸಲ್ಪಟ್ಟವು. ಇವುಗಳು ಹೆಚ್ಚು ಮೌಲ್ಯದ ಚಿಕ್ಕೋ ನೋಟು-ಪೇಪರುಗಳ ಮೇಲೆ ಟಾಯಿಪ-ರಾಯಿಟಿಂಗಿನಲ್ಲಿ ತಯಾರಿಸಲ್ಪಟ್ಟು, ಯುಕ್ತವಾದ ಲಕೋಟೆಗಳಲ್ಲಿಟ್ಟು, ಸದರಿ ಆಫೀಸಿನ ನೌಕರನಾದ ಇನಾಸ್, ಶೀನ ಇವರೇ ಮೊದಲಾದವರಿಂದ ಅದೇ ದಿವಸ ಸಾಯಂಕಾಲಕ್ಕೆ ಹಂಚಿಸಲ್ಪಟ್ಟವು. ದಸ್ಕತು ಮಾತ್ರ ಇಲ್ಲದ ಈ ಆಮಂತ್ರಣಗಳ ಕುರಿತು ಕೆಲವರಿಗೆ ಸ್ವಲ್ಪ ಸಂಶಯ ಉಂಟಾದಾಗ್ಯೂ ಇವುಗಳನ್ನು ತಯಾರಿಸಿದ ರೀತಿಯನ್ನಾಗಲೀ ಅಥವಾ ಇವುಗಳನ್ನು ಬಟವಾಡೆ ಮಾಡಿದ ರೀತಿಯನ್ನಾಗಲೀ ಚನ್ನಾಗಿ ಆಲೋಚಿಸಿದಲ್ಲಿ ದಸ್ಕತು ಮಾತ್ರ ಇಲ್ಲದ ಈ ಆಮಂತ್ರಣಗಳು ಸದರಿ ಆಫೀಸಿನ ಮೇಲ್ ಉದ್ಯೋಗಸ್ಥರಿಂದ ಕಳುಹಿಸಲ್ಪಟ್ಟದಲ್ಲವೆಂಬ ಸಂಶಯವು ಅನೇಕರಲ್ಲಿ ಉಂಟಾಗಲಿಲ್ಲ. ರಾತ್ರಿ ೮ ಘಂಟೆಗೆ ಸರಿಯಾಗಿ ಆಮಂತ್ರಿತರಲ್ಲಿ ಅನೇಕರು ಹೊಸ ಸೆನಿಟರೀ ಆಫೀಸಿನ ಕಡೆಗೆ ತೆರಳಿದರು. ಕಟ್ಟೋಣವು ಚನ್ನಾಗಿ ಅಲಂಕರಿಸಲ್ಪಟ್ಟು ದೀಪಗಳ ಪ್ರಕಾಶದಿಂದ ಶೋಭಾಯಮಾನವಾಗಿ ತೋರುತ್ತಿತ್ತು. ಆದರೆ ಬಂದ ಅತಿಥಿಗಳನ್ನು ಸತ್ಕರಿಸುವರೆ ಸದರಿ ಆಫೀಸಿನ ಕೀಳು ನೌಕರರಾದ ಪಾಂಡು ವಗೈರೆರು ಮಾತ್ರ ನಿತ್ತಿರುವದನ್ನೂ ಆಫೀಸಿನ ಒಳಗೆ ಉರಿಯುತ್ತಿರುವ ದೀಪಗಳನ್ನು ಮಾತ್ರ ಕಂಡು ಮೋಸಗೊಂಡೆವೆಂದು ಖಿನ್ನ ಹೃದಯರಾಗಿ ಹಿಂತೆರಳುವ ಅತಿಥಿಗಳು ತಮ್ಮನ್ನು ನೋಡಿ ತಮ್ಮಲ್ಲಿ ತಾವೇ ನಗಾಡುವ ಈ ಅಲ್ಪ ನೌಕರರನ್ನು ಕಂಡು ಇವರಲ್ಲಿ ಇಷ್ಟು ಸಾಮರ್ಥ್ಯವು ಹ್ಯಾಗೆ ತಾನೇ ಬಂತೆಂಬದನ್ನು ಆಲೋಚಿಸ ತೊಡಗಿದರು. ಇದೊಂದು ಚೋದ್ಯ! ಚೋದ್ಯವೆಂದರೆ ಪರಿಹಾಸ್ಯ; ಪರಿಹಾಸ್ಯವೆಂದರೆ ಬಂಡಾಟ, ಬಂಡಾಟವೆಂದರೆ ಯೆಂಡಾಟ!!

ಅಯ್ಯಾ, ಪತ್ರಕರ್ತರೇ, ಇದರೊಂದಿಗೆ [illegible] ಕೆಲವು ಆಮಂತ್ರಣ ಪತ್ರಗಳನ್ನು ತಾವು ನೋಡಿದರೆ ಅವುಗಳನ್ನು ಇಷ್ಟು ಚಮತ್ಕಾರದಿಂದ [illegible] ರಂಗನಾಗಿ ಯೋಗ್ಯ ಮನುಷ್ಯರಿಗೆ ಕಳುಹಿಸಿ ಅವರನ್ನು ಮಧ್ಯ ಶಹರಿನಲ್ಲಿ ಈ ರೀತಿ ಅವಮಾನಪಡಿಸುವ ಧೈರ್ಯವು ಈ ಅಲ್ಪ ನೌಕರರಲ್ಲಿ ಉಂಟಾದದ್ದು ಯಾವದರಿಂದ [illegible] ಪುರನಿವಾಸಿಕರಿಗೆ ಇನ್ನು ಮುಂದೆ ಬರಬಹುದಾದ ಕೆಡಕನ್ನು ತಾವೇ ಗ್ರಹಿಸಿರಿ.

"ಆಡುವವರ ಮಕ್ಕಳು ಆಡ ಬೇಕು; ಬೇಡುವವರ ಮಕ್ಕಳು ಬೇಡ ಬೇಕು" ಎಂಬ ಗಾದೆಯನ್ನು ಇವರ ನೆನಪಿಗೆ ಯಾರು ತರುವರೋ ತಿಳಿಯದು.

ಆಮಂತ್ರಿತರಲ್ಲಿ ನಾನೊಬ್ಬ.

~~~~~~~

ಮಂಗಳೂರು ತಾಲೂಕಿನ ತಿರುವೈಲ್ ಬೋರ್ಡು ಶಾಲೆಯೂ ಕುಲಶೇಕರ ಇಗರ್ಜಿಯ ಪಾದ್ರಿ ಸಾಹೇಬರೂ:

~~~~~~~

ಅಯ್ಯಾ ಪತ್ರಿಕಾಕರ್ತರೇ,

ಈ ವಿಷಯವಾಗಿ ತಮ್ಮ ಅಮೌಲ್ಯವಾದ ಪತ್ರದ ಮುಂಚಿನ ಸಂಚಿಕೆಯಲ್ಲಿ ಒಬ್ಬ ವಾತ್ಮಿದಾರರು ಬರೆದ ಕೆಲವು ಸಂಗತಿಗಳನ್ನು ಓದಿನೋಡಿ ಆಶ್ಚರ್ಯಪಟ್ಟೆನು. ವಾತ್ಮಿದಾರರು ಸೂಚಿಸುವ ಹಲವು ಸಂಗತಿಗಳು ಬರೇ ಸುಳ್ಳಾಗಿರುತ್ತವೆ. ಅವು ಯಾವುವೆಂದರೆ:—

ಸದ್ರಿ ತಿರುವೈಲು ಶಾಲೆಯಲ್ಲಿ ಆಚರಿಸಲ್ಪಟ್ಟ ಸರಸ್ವತಿ ಪೂಜೆಯ ದಿನ ಹಿಂದು ಮಕ್ಕಳನ್ನು ಕರೆಯೋಣಾಗಿತ್ತಲ್ಲದೆ ಕ್ರೈಸ್ತ ಬಾಲಕರಿಗೆ ಕರೆಯೋಣಾಗಿದ್ದಿಲ್ಲವೆಂತ ವಾತ್ಮಿದಾರರು ಸೂಚಿಸುತ್ತಾರೆ. ಆದರೆ ಸದ್ರಿ ಶಾಲೆಯ ಹೆಡ್ ಮಾಸ್ಟರರು ಹಿಂದೂ ಬಾಲಕರನ್ನು ಕರೆದದ್ದಕ್ಕಿಂತ ಹೆಚ್ಚಿನ ಮತ್ನಾಯದಿಂದ ಕ್ರೈಸ್ತ ಬಾಲಕರನ್ನು ಕರೆದಿದ್ದರು ಅಲ್ಲದೆ ಸದ್ರಿ ಪೂಜೆಯ ಸಮಯಗಳ ಹಿಂದೂ ಬಾಲಕರನ್ನು ಪೂಜೆ ನೋಡಲಿಕ್ಕೆ ಕೂತುಕೊಳ್ಳಿಸಿದ ಹಾಗೆಯೇ ಕ್ರೈಸ್ತ ಬಾಲಕರನ್ನೂ ಕೂತುಕೊಳ್ಳಿಸಿದರು; ಹಿಂದೂ ಬಾಲಕರಿಗೆ ಪ್ರಸಾದ ಹಂಚಿದ ಹಾಗೆಯೇ ಕ್ರೈಸ್ತ ಬಾಲಕರಿಗೂ ಪ್ರಸಾದವನ್ನು ಹಂಚಿದ್ದರು.

ಸದ್ರಿ ಪೂಜೆಯಾದ ಮರುದಿನ ಪೂಜೆಗೋಸ್ಕರ ಹೆಂಗಸರ ಹಾಗೆ ಮಾಡಿದಂಥಾ ಬೊಂಬೆಯನ್ನಿಟ್ಟು ಅದರ ಎರಡು ಪಾರ್ಶ್ವಗಳಲ್ಲಿಯೂ ದೀಪಗಳನ್ನು ಉರಿಸುತ್ತಾ ಸದ್ರಿ ದಿನವು ಸರಸ್ವತಿಯ ಮರುದಿನವಾದ್ದರಿಂದ ಪಾಠ ವಗೈರೆ ಮಾಡದೆ ಸುಮ್ಮನೆ ಕೂತುಕೊಳ್ಳಿರಿಯೆಂದು ಬಾಲಕರಿಗೆ ವಿಧಿಸಿದಲ್ಲದೆ ಗ್ರಾಮಸ್ಥರು ಶಾಲೆ ಇರುವ ದಿನ ಇದನ್ನೆಲ್ಲಾ ಯಾಕೆ ಇಟ್ಟದ್ದು ಎಂದು ಕೇಳಿದ್ದಕ್ಕೆ ಅದನ್ನು ಸರಸ್ವತಿಯ ಮರುದಿನದ ವರೆಗೂ ಇಡುವ ಪದ್ಧತಿ ನಮ್ಮಲ್ಲಿ ಉಂಟೆಂತ ಹೆಡ್ ಮಾಸ್ತರರು ಉತ್ತರ ಕೊಟ್ಟರು. ಶಾಲೆ ಇದ್ದ ದಿನ ಬೋರ್ಡ ಶಾಲೆಗಳಲ್ಲಿ ಹೀಗೆ ಮಾಡಲಿಕ್ಕೆ ಸರಕಾರದವರ ಅಪ್ಪಣೆ ಇದೆಯೋ!

ಸದ್ರಿ ಪೂಜೆಯಾದ ಮರುದಿನ ಕುಲಶೇಕರ ಇಗರ್ಜಿಯ ಪಾದ್ರಿ ಸಾಹೇಬರವರು ತಿರುವೈಲ್ ಶಾಲೆಗೆ ಹೋಗುವ ಕ್ರೈಸ್ತ ಬಾಲಕರ ಶಾಸ್ತ್ರದ ವಿಲೆವಾರಿಯನ್ನು ಮಾಡುವದಕ್ಕೋಸ್ಕರ ಸದ್ರಿ ತಿರುವೈಲು ಶಾಲೆಗೆ ಹೋಗಿ ಶಾಲೆಯನ್ನು ಸಂದರ್ಶಿಸಿದಾಗ ಸರಸ್ವತಿ ಪೂಜೆಗೋಸ್ಕರ ಮಾಡಿ ಇಟ್ಟ ವಸ್ತುಗಳನ್ನೂ ಚಿತ್ರಗಳನ್ನೂ ನೋಡುತ್ತಲೇ ಅವರಿಗೆ ಅದು ಶಾಲೆಯೋ, ಯಾ ದೇವಸ್ಥಾನವೋ, ಎಂಬ ಅನುಮಾನ ಕಂಡು ಬಂತೆಂತೆ. ಈ ಕುರಿತು ಆದಿತ್ಯವಾರ ಪೂಜೆಗೆ ಬಂದ ಕಥೋಲಿಕ್ ಜನಗಳೊಡನೆ ಸದ್ರಿ ಶಾಲೆಯಲ್ಲಿ ನಮ್ಮ ಮತದ ಶಾಸ್ತ್ರಕ್ಕೆ ವಿರೋಧವಾದ ವಸ್ತುಗಳು ಇರುವದರಿಂದ ಇನ್ನು ಮುಂದೆ ಆ ಶಾಲೆಗೆ ಕ್ರೈಸ್ತ ಬಾಲಕರನ್ನು ಕಳುಹಿಸಲಿಕ್ಕೆ ಕೂಡದೆಂಬದಾಗಿ ಅಪ್ಪಣೆ ಕೊಟ್ಟದ್ದಲ್ಲದೆ ಪಾದ್ರಿ ಸಾಹೇಬರವರಿಗೆ ಈ ವಿಷಯವಾಗಿ ಯಾರಾದರೂ ಹೇಳಿ ಕೊಟ್ಟದ್ದೂ ಇರುವದಿಲ್ಲ, ಯಾ ಗುರುಗಳು ಇಗರ್ಜಿ ಶಾಲೆಗೆ ಬಾಲಕರನ್ನು ಬರ ಬೇಕೆಂದು ಪತ್ತಾಯ ಪಡಿಸಿದ್ದೂ ಇರುವದಿಲ್ಲ. ಈ ವಿಷಯವಾಗಿ ವಾತ್ಮಿದಾರರು ಸೂಚಿಸುವದು ಬರೆ ಸುಳ್ಳು ಮಾತುಗಳು ಆಗಿರುತ್ತವೆ. ಅಯ್ಯೊಯ್ಯೊ, ಕ್ರೈಸ್ತ ಬಾಲಕರಿಗೆ ಸ್ವಮತದಲ್ಲಿ ಧರ್ಮ ಭಕ್ತಿ ವಿಶ್ವಾಸಗಳನ್ನು ಕಡಮೆ ಮಾಡಲಿಕ್ಕೆ ಮಾಡಿದ ಪ್ರಯತ್ನಗಳೇ!

ಇಗರ್ಜಿ ಶಾಲೆಗೆ ಹೋಗುವ ಹಿಂದೂ ಬಾಲಕರಿಗೆ [illegible] ನಿಲ್ಲಿಸುವದು ಮುಂತಾದ ಮತ ದೂಷಣೆಗಳನ್ನು ಹೇಳಿ ಕೊಡುತ್ತಾರೆಂದಾಗಿ ವಾತ್ಮಿದಾರರು ಸೂಚಿಸುತ್ತಾರೆ. ಆದರೆ ಇಗರ್ಜಿ ಶಾಲೆಯಲ್ಲಿ ತಮ್ಮ ಕ್ರೈಸ್ತ ಬಾಲಕರಿಗೆ ತಮ್ಮ ಶಾಸ್ತ್ರದ ವಿಷಯಗಳನ್ನು ಕಲಿಸುವದಲ್ಲದೆ ಹಿಂದೂ ಬಾಲಕರಿಗೆ ಇರುವ [illegible] ವಿಶ್ವಾಸಗಳನ್ನು ಕಡಮೆ ಮಾಡಲಿಕ್ಕೆ ಈ ತರದ ಪ್ರಯತ್ನಗಳೇನೂ ನಡೆಯುವದಿಲ್ಲ. ಹೀಗಿರುವಾಗ ತಾವು ಮಾಡಿದಂಥಾ ಕೃತ್ಯಗಳಿಂದ ತಮಗೆ [illegible] ಗಳನ್ನು ಮರೆಮಾಚಿಸುವದಕ್ಕೋಸ್ಕರ ಬರೇ ಸುಳ್ಳು [illegible] ವದು ಬುದ್ಧಿವಂತಿಗೆಯೋ!

[illegible]
~~~~~~~

ಯುದ್ಧ ಸಮಾಚಾರವು.

ತಾ. 6ನೇ ನವಂಬರ.

ತುರ್ಕಿ:—ತುರ್ಕಿಯೊಡನೆ ರಶ್ಯ, ಬ್ರಿಟಿಷ ಫ್ರಾಂಚ ರಾಜ್ಯಗಳು ಕೇಳಿಕೊಂಡ ಉದಾಹರಣೆಗೆ ತುರ್ಕಿಯು ಸಮರ್ಪಕವಾದ ಉತ್ತರ ಕೊಡದ್ದರಿಂದ ರಶ್ಯ ರಾಯಭಾರಿಯು ಕನಸ್ತಂತಿನೋಪಲನ್ನು ಬಿಟ್ಟು ಹೋದನು.

ಸೈಪ್ರಸಿನ ಮಹಮ್ಮದೀಯರು ಬ್ರಿಟಿಷ ಸಾಮ್ರಾಜ್ಯದ ಕಡೆಗಿರುವ ತಮ್ಮ ಸ್ವಾಮಿಭಕ್ತಿಯನ್ನು ತೋರ್ಪಡಿಸಿರುವರು.

ಕಲ್ಕತ್ತೆ, ಬಂಗಾಳ, ಸೀಲೋನ್, ಪಂಜಾಬು ಮೊದಲಾದ ಸ್ಥಳಗಳಲ್ಲಿ ಮಹಮ್ಮದೀಯ ಮುಂದಾಳುಗಳು ಸಭೆ ಕೂಡಿಸಿ ತುರ್ಕಿ ಮತ್ತು ಬ್ರಿಟಿಷ ಸಾಮ್ರಾಜ್ಯದೊಳಗೆ ತೊಡಗಿದ ಯುದ್ಧದಲ್ಲಿ ಹಿಂದೂಸ್ಥಾನದ ಮಹಮ್ಮದೀಯರು ಬ್ರಿಟಿಷ ಸಾಮ್ರಾಜ್ಯದ ಕಡೆಗೆ ರಾಜನಿಷ್ಠೆಯುಳ್ಳವರಾಗಿಯೂ ಸ್ವಾಮಿಭಕ್ತಿಯುಳ್ಳವರಾಗಿಯೂ ಇರಬೇಕೆಂಬ ನಿರ್ಣಯವನ್ನು ಮಾಡಿಕೊಂಡಿರುವರು.

ಅಕಾಬ ಕೊಲ್ಲಿಯಲ್ಲಿ ಬ್ರಿಟಿಷರ "ಮಿನರ್ವ" ಎಂಬ ಕ್ರೂಜರ್ ನಾವೆಯು ಪ್ರವೇಶಿಸಿದಾಗ ಆ ಸ್ಥಳದಲ್ಲಿ ಜರ್ಮನರೂ ದೇಶೀಯ ಸೈನಿಕರೂ ಇದ್ದದ್ದನ್ನು ಕಂಡು "ಮಿನರ್ವ" ನಾವೆಯು ಕೋಟೆಗೂ ಸೇನೆಗೂ ಗುಂಡು ಹಾರಿಸಿತು. ಸೈನಿಕರು ಪಟ್ಟಣವನ್ನು ಬಿಟ್ಟು ಹೋದರು. ಕೋಟೆಯನ್ನು ನಾಶಮಾಡಲು ಕ್ರೂಜರ್ ನಾವೆಯಿಂದ ಸೈನಿಕರು ಇಳಿದಿರುವರು. ಬ್ರಿಟಿಷರಲ್ಲಿ ಯಾರೂ ಹತರಾಗಲಿಲ್ಲ. ಶತ್ರುಗಳಲ್ಲಿ ತಕ್ಕಷ್ಟು ನಷ್ಟವಾಗಿರುವದು.

ಎಮ್ಡೆನ್ ನಾವೆಯ ಕೆಪ್ಟನನ ಹೆಸರು ಕೆಪ್ಟನ್ ವನ್ ಮುಲ್ಲರ್ ಎಂಬದಾಗಿರುವದು. ಇವನು ಶಿಕಾರಿ ಕ್ಲಬ್ಬಿನ ಒಬ್ಬ ಮೆಂಬರನಾಗಿರುವನು. ಇವನ ತಾಯಿಯೂ ಹೆಂಡತಿಯೂ ಇಂಗ್ಲಿಷರಾಗಿರುತ್ತಾರೆ.

~~~~~

ತಾ. 7ನೇ ನವಂಬರ.

ಜರ್ಮನರು ವೈಸರ್ ಕಾಲಿವೆಯ ಎಡಪಾರ್ಶ್ವವನ್ನು ಬಿಟ್ಟು ಹೋಗಿರುವರು. ವೈಸರ್ ಕಾಲಿವೆಯ ಪೂರ್ವ ದಿಕ್ಕಿನಲ್ಲಿ ಶತ್ರುಗಳು ಹಿಮ್ಮೆಟ್ಟುತ್ತಿದ್ದಾರೆ. ಬೆಲ್ಜಿಯನರು ಅನೇಕ ಜರ್ಮನರನ್ನು ಸೆರೆಹಿಡಿದಿರುವರು. ಜರ್ಮನರಲ್ಲಿ ೩೦,೦೦೦ ಮಂದಿ ನಷ್ಟವಾದರು. ಈ ಪೈಕಿ ೧೦ ಸಾವಿರ ಮಂದಿ ಹತರಾದರು ಎಂದು ಒಬ್ಬ ಜರ್ಮನ್ ಆಫೀಸರನು ಹೇಳಿರುವನು.

ವೈಸರ್ ಕಾಲಿವೆಯ ದಾರಿಗಳನ್ನು ಸಂಯುಕ್ತ ಸೇನೆಗಳು ಕಷ್ಟವಿಲ್ಲದೆ ಪುನಃ ಸ್ವಾಧೀನ ಮಾಡಿಕೊಂಡಿರುವವು. ಲೈಸಿನಲ್ಲಿ ಸಂಯುಕ್ತ ಸೇನೆಗಳು ಮುಂದರಿದಿರುವವು.

ಆರ್ಮೆಂಟಿಯರ್ಸಿನಲ್ಲಿ ಕೆಲವು ದಿವಸಗಳಲ್ಲಿಯೇ ಜರ್ಮನರ ೬೦೦೦ ಮಂದಿ ಹತರಾದರು ಎಂತಲೂ ಲೈಸಿನ ಉತ್ತರದಲ್ಲಿ ಜರ್ಮನರ ೧೫೦೦ ಶವ ಬಿದ್ದಿತ್ತೆಂತಲೂ ಒಬ್ಬ ಬಾತ್ಮಿದಾರರು ಬರೆದಿರುವರು.

ಭಾರತೀಯ ಸೈನಿಕರ ಸಾಹಸ ಮತ್ತು ಶೂರತನದ ಕೃತ್ಯಗಳಿಗಾಗಿ ಅವರಿಗೆ ನನ್ನ ಕೃತಜ್ಞತೆಯನ್ನು ತಿಳಿಸಬೇಕೆಂತ ಬ್ರಿಟಿಷ (ಸರ್ವಸೇನಾಧಿಪತಿಯಾದ) ಸರ್ ಜೋನ್ ಫ್ರೆಂಚರವರು ಭಾರತೀಯ ಸೇನೆಯ ಸೇನಾಧಿಪತಿಗೆ ಬರೆದಿರುವರು.

ನವಂಬರ ತಾ. ೧೫ ವರೆಗೆ ಎಪ್ರೆಯನ್ನು ಸ್ವಾಧೀನ ಮಾಡಿಕೊಳ್ಳುವದು ಅತ್ಯಗತ್ಯವಾಗಿದೆ. ಇಲ್ಲದಿದ್ದರೆ ನಾವು ರೈನನ್ನು ದಾಟಿ ಹಿಂದೆ ಸರಿಯ ಬೇಕಾಗುವದು ಎಂತ ಕೈಸರರು ಡ್ಯೂಕ್ ಆಫ್ ವರ್ಟೆಂಬರ್ಗರಿಗೆ ಪತ್ರ ಬರೆದಿದ್ದರು.

ಬ್ರಿಟಿಷ ಮತ್ತು ಫ್ರೆಂಚ ಯುದ್ಧನಾವೆಗಳು ದರ್ದಾನೆಲ್ಸಿಗೆ ಗುಂಡು ಹಾರಿಸುತ್ತಾ [illegible] ದೂರದಲ್ಲಿ ಈ ನಾವೆಗಳು ಗುಂಡು ಹಾರಿಸಿದವು. [illegible] ಕೋಟೆಯಿಂದಯೂ [illegible] [illegible] ನಾವೆಗಳಿಗೆ [illegible] [illegible]

ಬಸ್ರಾದಲ್ಲಿ, ತುರ್ಕರು ಬ್ರಿಟಿಷ ಕಾನ್ಸಲ್ಲರನ್ನೂ ಬ್ರಿಟಿಷ ಸಾಹುಕಾರರನ್ನೂ ಹೊರಗೆ ಬಿಡಲಿಲ್ಲ.

ಬಹುಮಾನಪಟ್ಟ ಅಬ್ದುಲ್ ರಹಿಮಾನರವರು ಈ ರೀತಿ ಹೇಳುವರು:—ನಾವು ಕಳೆದ ೯೦೦ ವರ್ಷಗಳಿಂದ ಬ್ರಿಟಿಷ ಪ್ರಜೆಗಳಾಗಿ ಸೀಲೋನಿನಲ್ಲಿ ವಾಸಿಸುತ್ತಿರುವೆವು. ಹಿಂದೂಸ್ಥಾನ ಮತ್ತು ಸೀಲೋನಿನಿಂದ ತುರ್ಕಿಗೆ ಸಹಾನುಭೂತಿಯು ದೊರಕದು. ತುರ್ಕಿಯು ತಟಸ್ಥವಾಗಿ ನಿಲ್ಲುವ ಹಾಗೆ ಕೇಳಿಕೊಳ್ಳುವ ಬಗ್ಗೆ ಇವರು ಒಂದು ಸಭಾ ಜನರ ಸಭೆ ಕೂಡಿಸಬೇಕೆಂದಿರುವರು.

~~~~~

ತಾ. 9ನೇ ನವಂಬರ.

ವೈಸರಿನ ಬಲಪಾರ್ಶ್ವದಲ್ಲಿ ಶತ್ರುಗಳು ಹಿಮ್ಮೆಟ್ಟಿರುವರು. ಎಡಪಾರ್ಶ್ವದಲ್ಲಿ ಜರ್ಮನರು ಒಂದು ಸೇತುವೆಯನ್ನು ಪುನಃ ಸ್ವಾಧೀನ ಮಾಡಿಕೊಂಡಿರುವರು. ಡಿಕ್ಸ್ ಮ್ಯುಡಿನಿಂದ ಲೈಸಿನ ವರೆಗೆ ಕಠಿಣ ಕಾಳಗವು ನಡೆಯುತ್ತಿದೆ. ಒಟ್ಟಿಗೆ ಸಂಯುಕ್ತ ಸೇನೆಗಳು ತಮ್ಮ ನೆಲೆಗಳನ್ನು ಕಾಪಾಡಿಕೊಂಡಿರುವವು.

ಪೂರ್ವ ರಣರಂಗ:—ಜರ್ಮನರು ಪೂರ್ವಪ್ರಶ್ಯದ ಸರಹದ್ದಿನಲ್ಲಿ ಹಿಮ್ಮೆಟ್ಟುತ್ತಿರುವರು. ರಶ್ಯನರು ಬಿಯಾಲೈನ ಪಟ್ಟಣವನ್ನು ಬಹಳ ಗುಂಡು ಮದ್ದುಗಳನ್ನೂ ಹಿಡಿದಿರುವರು. ವಿಸ್ಟುಲದಲ್ಲಿ ಶತ್ರುಗಳು ಬಹಳ ಅವಸರದಿಂದ ಓಡಿಹೋಗುತ್ತಿದ್ದಾರೆ. ಕ್ರೆಕೋ ಎಂಬಲ್ಲಿ ಆಸ್ಟ್ರಿಯನರು ಸೋತು ಹೋಗಿರುವರು. ರಶ್ಯನರು ಸೇಂಡ್ ಮಿರ್ ಪಟ್ಟಣವನ್ನೂ ಕೈಲ್ಸಿಯಲ್ಲಿ ಶತ್ರುಗಳ ೧೫,೦೦೦ ಸೈನಿಕರನ್ನೂ ಕೆಲವು ಮಷಿನ್ ತೋಫುಗಳನ್ನೂ ಸೆರೆಹಿಡಿದಿರುವರು.

ಗಾಲಿಸಿಯದಲ್ಲಿಯೂ ಆಸ್ಟ್ರಿಯನರು ರಶ್ಯನರ ಮುಂದೆ ಹಿಮ್ಮೆಟ್ಟುತ್ತಿರುವರು. ರಶ್ಯನರು ಸಿಟೋ ಮತ್ತು ಆಸ್ಟ್ರಿಕ ಪಟ್ಟಣಗಳನ್ನು ಸ್ವಾಧೀನ ಮಾಡಿಕೊಂಡಿರುವರು.

ತುರ್ಕಿ:—ಈಜಿಪ್ಟಿನಲ್ಲಿ ಬ್ರಿಟಿಷರು ಯುದ್ಧಕಾಲದ ಕಾನೂನನ್ನು ಜಾರಿಗೆ ತಂದಿರುವರು. ಕೌಕಾಸಸಿನಲ್ಲಿರುವ ಸೇನೆಗೆ ತುರ್ಕಿ ಸರಹದ್ದನ್ನು ದಾಟಿ ಒಳನುಗ್ಗಲು ಅಪ್ಪಣೆಯಾಗಿರುವದು. ತುರ್ಕಿ ನಾಯಕನಾವೆಯು ಸಂಗ್ರಾಮವನ್ನು ಬಿಟ್ಟಿರುವದು. ದರ್ದಾನೆಲ್ಸಿಗೆ ಬ್ರಿಟಿಷರೂ ಫ್ರೆಂಚರೂ ಗುಂಡು ಹಾರಿಸುತ್ತಲಿದ್ದಾರೆ. ದರ್ದಾನೆಲ್ಸ್ ಕೋಟೆಗಳಿಂದ ಹಾರಿಸಿದ ಗುಂಡಿನ ಹಾನಿಗೆ ಹಡಗಗಳು ಸಿಕ್ಕಲಿಲ್ಲ ನಮ್ಮ ನಾವೆಗಳಿಗೆ ಪೆಟ್ಟಾಗಲಿಲ್ಲ.

ತುರ್ಕಿಯ ಕೆಲವು ಮಂತ್ರಿಗಳು ರಾಜೀನಾಮೆ ಕೊಟ್ಟಿರುವರು.

ತುರ್ಕಿಯು ರಶ್ಯದ ವಿರುದ್ಧ ಮೊಲ್ಲಾಯಲು ಸೇನೆಯನ್ನು ಸಿದ್ಧಗೊಳಿಸುತ್ತಿರುವದು. ಕೌಕಾಸಸಿನಲ್ಲಿರುವ ರಶ್ಯದ ಸೇನೆಯು ಮುಂದರಿದು, ಮನ್ಸೂರ್ ಮತ್ತು ದಾಯಸೈನ್ ಎಂಬಲ್ಲಿ ತುರ್ಕರ ಸೇನೆಯು ಸೋಲ್ಡಾಯು ಆದಾಗಿಬಿಟ್ಟಿರುವಲ್ಲದೆ ಬೇಯಾಜಿದವನ್ನು ಸ್ವಾಧೀನ ಮಾಡಿಕೊಂಡಿರುವರು.

ಸೈಪ್ರಸನ್ನು ಬ್ರಿಟಿಷ ಸರಕಾರದವರು ಸ್ವಾಧೀನ ಮಾಡಿಕೊಳ್ಳಲಿಕ್ಕಿರುವರು.

ರಶ್ಯನರು ಸಹಾನ್ಸ್ಕದಲ್ಲಿ ಒಳ ನುಗ್ಗಿ ರಶ್ಯ ಸರಹದ್ದನ್ನು ದಾಟಿ ೧೭ ಮೈಲು ಮುಂದರಿಸಿರುವರು. ಮತ್ತು ಸಹಾನ್ಸ್ಕದಲ್ಲಿ ಎರೆಜರಮ್ ಎಂಬ ಸ್ಥಳದಿಂದ ೪೫ ಮೈಲು ಮುಂದರಿಸಿರುವರು.

ರಶ್ಯದ ಬಾಕು ಎಂಬಲ್ಲಿರುವ ೧೦,೦೦೦ ಮುಸಲ್ಮಾನರು ರಶ್ಯನರಿಗೆ ಜಯವಾಗುವ ಹಾಗೆ ಪ್ರಾರ್ಥನೆ ಮಾಡಿರುವರು.

ತುರ್ಕಿಯು ರಶ್ಯದ "ಬಿನೋಪ್" ಎಂಬ ಯುದ್ಧ ಹಡಗವನ್ನು ಮುಳುಗಿಸಿರುವದು.

ರಶ್ಯನರು ಬಯಾಜಿದವನ್ನು ಸ್ವಾಧೀನ ಮಾಡಿಕೊಂಡು ೩೦ ತಾಸಿನಲ್ಲಿ ೫೦ ಮೈಲು ಮುಂದರಿದಿರುವರು. ರಶ್ಯನರು ಈಗ ೧೦೦ ಮೈಲು ವಿಸ್ತೀರ್ಣದಲ್ಲಿರುವರು. ತುರ್ಕರು ಎರೆಜರಮಿನಲ್ಲಿ ಕೂಡಿರುವರು. ತುರ್ಕರ ೯೦ ಸಾವಿರ ಸೇನೆಯೂ ೩೦ ಸಾವಿರ ಕುರ್ಡಿಸ್ ಸೇನೆಯೂ ಅಲ್ಲಿರುವದೆಂತ ಅಂದಾಜಾಗಿದೆ. ಜರ್ಮನರ ಜನರಲ್ ಲಿಮಾನ್ ಎಂಬವನು ಈ ಸೇನೆಯನ್ನು ನಡೆಸುವನೆಂಬ ವಾರ್ತೆ ಇದೆ.

ರಶ್ಯನರು ಅರ್ಮೇನಿಯವನ್ನು ಒಳನುಗ್ಗಿರುವರು. ಇಲ್ಲಿ ತುರ್ಕರು ಹಿಮ್ಮೆಟ್ಟಿರುವರು.

[illegible] ಜರ್ಮನರ [illegible] ಬಂದದೆ.

ಬ್ರಿಟಿಷರು ತಮ್ಮ ಕಡೆಗೆ ಗುಂಡು ಹಾರಿಸುವರೆಂಬದಾಗಿ ಜರ್ಮನರು ಸುಳ್ಳು ವಾರ್ತೆಯನ್ನು ಹಬ್ಬಿಸಿರುವರು. ಆದರೆ ಈ ವಾರ್ತೆಯು ಬರೇ ಸುಳ್ಳಾಗಿರುವದೆಂತ ಸ್ಟೇಟ್ ಸೆಕ್ರೆಟರಿಯವರು ಪ್ರಕಟಿಸಿರುವರು.

ತುರ್ಕಿಯು ಯುದ್ಧಕ್ಕೆ ಸೇರಿದ್ದು ಕನಸ್ತಂತಿನೋಪಲಿನ ಜನಸಮೂದಾಯಕ್ಕೆ ಸಮಂಜಸವಾಗಿಲ್ಲ. ಯುದ್ಧ ಮಂತ್ರಿಯಾದ ಎನವರ್ ಪಾಶ ಮತ್ತು ಯ್ಯಂಗ್ ಟರ್ಕ್ಸ್ ಎಂಬ ತುರ್ಕಿ ಪಂಗಡದವರು ಜರ್ಮನರ ಪ್ರೇರಣೆಯಿಂದ ಯುದ್ಧಕ್ಕೆ ಸೇರಿದ್ದಾಗಿದೆ. ಅಲಪ್ಪೊ ಮತ್ತು ಡಮಾಸ್ಕದಲ್ಲಿ ತುರ್ಕರ ಒಂದು ಬಲಿಯ ಸೇನೆಯು ಇದೆ ಎಂದೂ ಅಲ್ಲಿಂದ ಈಜಿಪ್ತನ್ನು ನುಗ್ಗುವರು ಎಂದು ತಿಳಿದು ಬರುತ್ತದೆ. ಅವರು ಅಲ್ಲಿಂದ ರೈಲ್ ಹೆಡ್ ಎಂಬಲ್ಲಿಗೆ ಮುಂದರಿದು ಮರುಭೂಮಿಯನ್ನು ದಾಟಿ ಸೂವೆಜ್ ಕಾಲಿವೆಯ ಸಮೀಪ ಬರಲಿಕ್ಕಿದ್ದಾರೆಂಬ ವಾರ್ತೆ ಇದೆ. ಆದರೆ ಈ ಕಾರ್ಯವು ಸಫಲವಾಗುವದು ಕಷ್ಟಸಾಧ್ಯ. ಇನ್ನೊಂದು ಸಂಯುಕ್ತ ಸೇನೆಗಳು ಪಲೆಸ್ತೀನದಲ್ಲಿ ತಮ್ಮ ಸೇನೆಗಳನ್ನು ಇಳಿಸಿ ತುರ್ಕಿ ಸೇನೆಯ ವ್ಯವಹಾರವನ್ನು ಕಡಿಯುವದು ತುಂಬಾ ಸಾಧ್ಯವಾಗಿದೆ. ಈಜಿಪ್ತ ಸರಹದ್ದಿಗೂ ಕಾಲಿವೆಗೂ ಮಧ್ಯೆ ೧೨೭ ಮೈಲುಗಳ ಮರುಭೂಮಿಯು ಇದೆ. ಇಲ್ಲಿ ಕಲ್ಲುಗಳಲ್ಲದೆ ಏನೂ ನೋಡ ಸಿಕ್ಕದು ಎಂತ ಪ್ರಕಟವಾಗಿದೆ.

ತುರ್ಕಿ ಸುಲ್ತಾನರವರೂ ಅವರ ಪಾರ್ಟಿಯವರೂ ತಟಸ್ಥರಾಗಿರಬೇಕೆಂಬ ಆಲೋಚನೆಯವರಾಗಿರುವರು. ಆದರೆ ಸಲೋನಿಕ ಕಮಿಟಿಯವರು, ಜರ್ಮನ್ ಮಿಲಿಟರಿ ಮತ್ತು ನೌಕಾವಳಿ ಆಫೀಸರರ ಬಲವು ಹೆಚ್ಚಾದ್ದರಿಂದ ತುರ್ಕಿಯು ಯುದ್ಧಕ್ಕೆ ಸೇರಲು ಕಾರಣವಾಯಿತು ಎಂತ ಪ್ರಕಟವಾಗಿದೆ.

ತುರ್ಕಿ ಕ್ಯಾಬಿನೆಟ್ ಮಂದಿರದಲ್ಲಿ ಯುದ್ಧ ಮಾಡಬೇಕೋ ಬೇಡವೋ ಎಂಬ ಚರ್ಚೆ ನಡೆಯುತ್ತಿರುವಾಗ ಸುಲ್ತಾನರ ಮಗನು ಎನವರ್ ಪಾಶರ ಕಾಲಿಗೆ ಗುಂಡು ಹೊಡೆದರು ಎಂತ "ಮೊರ್ನಿಂಗ್ ಪೋಸ್ಟ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~~

ತಾ. 10ನೇ ನವಂಬರ.

ಲೋರ್ಡ್ ರೋಬರ್ಟ್ ಪ್ರಭುಗಳವರು ಹಿಂದೂಸ್ಥಾನದಿಂದ ರಣರಂಗಕ್ಕೆ ಹೋದ ಬ್ರಿಟಿಷ ಮತ್ತು ಹಿಂದೀ ಸೈನಿಕರ ಸಾಹಸವನ್ನು ಹೊಗಳಿ ಸ್ವಾತಂತ್ರ್ಯದ ಪರಿಪಾಲನೆಗಾಗಿಯೂ ಮಹಾ ಸಾಮ್ರಾಜ್ಯದ ಗೌರವ ಸಂರಕ್ಷಣೆಗಾಗಿಯೂ ಕಾದಾಡಲು ಬಂದ ನಿಮಗೆ ಸುಮಂಗಲವಾಗಲಿ ಎಂಬದಾಗಿ ಸಂಬೋಧಿಸಿರುವರು.

ಪೂರ್ವ ರಣರಂಗ:—ಬ್ಲೇಕ್ ಸೀಯಲ್ಲಿ ರಶ್ಯನರ ಬಂದರವಾದ ಬಟೂಮಿಗೆ ತುರ್ಕಿ ಕ್ರೂಜರ್ ನಾವೆಗಳು ಗುಂಡು ಹಾರಿಸುತ್ತಲಿವೆ.

ರಶ್ಯನರು ಎಲಸ್ಕರ್ಡ್ ಮತ್ತು ಕಾರಕಿಲ್ಸಾಸದ ಉತ್ತರದಲ್ಲಿ ತುರ್ಕರನ್ನು ಹಿಂದಟ್ಟಿರುವರು.

ರಶ್ಯನರು ಅರ್ಮೇನಿಯದಲ್ಲಿ ಬೆಯಜಿಟನ್ನು ಹಿಡಿದು ಕುರ್ಡಿಸ್ ಸೇನೆಯನ್ನು ಚದರಿಸಿ ದಯಡಿಯನ್ನು ಸ್ವಾಧೀನ ಮಾಡಿಕೊಂಡಿರುವರು.

ಇಂಗ್ಲಾಂಡಿನ ಶತ್ರುಗಳ ಕಡೆಗೆ ತಮಗೆ ಸಹಾನುಭೂತಿ ಇರುವದಿಲ್ಲವಾದ್ದರಿಂದ ತುರ್ಕಿಯು ಜರ್ಮನಿಯೊಡನೆ ಸೇರಬಾರದ್ದೆಂಬದಾಗಿ ಪಂಜಾಬಿನ ಮಹಮ್ಮದೀಯರು ತುರ್ಕಿಯ ಪ್ರಧಾನ ಮಂತ್ರಿಗೆ ತಂತಿ ಬಿಟ್ಟಿರುವರು.

~~~~~

ತಾ. 11ನೇ ನವಂಬರ.

ಭಾರತೀಯ ಸೇನಿಕರು ದಂಗೆ ಏಳುವ ಹಾಗೆ ಪ್ರೇರೇಪಿಸುವ ಪುಸ್ತಕಗಳನ್ನು ಜರ್ಮನರ ಹೊಫ್‌ಮೇನ್ ಎಂಬವನು ಪ್ರಕಟಿಸಿದ್ದನು. ಸ್ವಿಟ್ಜರ್‌ಲೇಂಡಿನ ಮಿಲಿಟರಿ ಅಧಿಕಾರಿಗಳು ಇಂಥಾ ಪುಸ್ತಕಗಳಲ್ಲಿ ೧೫೦೦ನ್ನು ಸುಟ್ಟುಬಿಟ್ಟಿರುವರು.

ಕಳೆದ [illegible] ಕೈಸರರು [illegible] ಯಾ[illegible]ತ್ತಿಲ್ಲ ಎಂಬದಾಗಿ [illegible] ಒಂದು ಬ್ರಿಟಿಷ [illegible] ೩೦ ನಿಮಿಷ [illegible]

ಅಲ್ಲಿಂದ ಹೊರಗೆ ಹೋಗಿದ್ದರು. ಈ ಬೊಂಬಿನಿಂದ ಕೈಸರ ಇಬ್ಬರು ನೈಗಾವಲಿಯವರು ಮೃತರಾದರು.

ನೌಕಾವಳಿ ಸಂಗ್ರಾಮ:—ಚಿಲ್ಲಾನ್ ಕರಾವಳಿಯಲ್ಲಿ ನಡೆದ ನೌಕಾವಳಿ ಕದನದ ವಾರ್ತೆಯು ನಿಜವಾದದ್ದೆಂದು ಬ್ರಿಟಿಷ ಸರಕಾರದವರು ಪ್ರಕಟಿಸಿರುವರು. "ಗುಡ್‌ಹೊಪ್" ಮತ್ತು "ಮೊನ್‌ಮೌತ್" ನಾವೆಗಳಿಗೆ ಮೊದಲಾಗಿ ಬೆಂಕಿ ಹಿಡಿಯಿತು. ಆದರೆ ಇವು ಅಂತ್ಯದವರೆಗೆ ಕಾದಾಡಿತು. ಇದರ ಜೊತೆಯಲ್ಲಿದ್ದ "ಗ್ಲಾಸ್‌ಗೋ" ನಾವೆಯು ತನ್ಮಧ್ಯೆ ಜರ್ಮನರ "ಲಿಪ್‌ಜಿಗ್" ಮತ್ತು "ಡ್ರೆಸ್‌ಡೆನ್" ನಾವೆಯೊಂದಿಗೆ ಕಾದಾಡಿತು. "ಗ್ಲಾಸ್‌ಗೋ" ನಾವೆಯು ಪೂರ್ಣ ನಾಶವಾಗಲಿಲ್ಲ. ಮೊನ್‌ಮೌತಿಗೆ ಏನಾಯಿತೆಂಬುದು ತಿಳಿಯಲಿಲ್ಲ. "ಒಟ್ರೆಂಟೋ" ಮತ್ತು "ಕೆನೋಪಸ್" ಎಂಬ ಬ್ರಿಟಿಷರ ನಾವೆಗಳು ಸನಿಹದಲ್ಲಿದ್ದರೂ ಕಾದಾಡಲಿಲ್ಲ. ಬ್ರಿಟಿಷರ ಇತರ ನಾವೆಗಳು ಬಹು ಶೂರತನದಿಂದ ಕಾದಾಡಿದರೂ "ಕೆನೋಪಸ್" ನಾವೆಯ ಸಹಾಯ ಸಿಕ್ಕದ್ದರಿಂದ ಮುಣುಗಿ ಹೋಯಿತು. ಹತಶೇಷರನ್ನು ಉಳಿಸುವದೆ ವಿಶೇಷ ಪ್ರಯತ್ನವು ನಡೆಯುತ್ತಿದೆ.

ಈ ಕದನವು ಸಮುದ್ರವು ಬಹು ಅಲ್ಲೋಲಕಲ್ಲೋಲವಾಗಿರುವಾಗ ನಡೆಯಿತು. ಜರ್ಮನರು ೬ ಮೈಲು ದೂರದಿಂದ ಗುಂಡು ಹಾರಿಸಿದರು. ಬ್ರಿಟಿಷ ನಾವೆಗಳ ಗುಂಡು ಅಷ್ಟು ದೂರ ಹೋಗಲಿಲ್ಲ. ಜರ್ಮನರ ಹಡಗುಗಳು ೪ ಮೈಲು ಹತ್ತಿರ ಬಂದಾಗ ಬ್ರಿಟಿಷ ನಾವೆಗಳು ಗುಂಡು ಹಾರಿಸಲು ಪ್ರಾರಂಭಿಸಿದವು. ಆದರೆ ಅಷ್ಟರೊಳಗೆ ಬ್ರಿಟಿಷ ನಾವೆಗಳಿಗೆ ವಿಶೇಷ ಹಾನಿಯಾಗಿತ್ತೆಂತ ಜರ್ಮನರು ಪ್ರಕಟಿಸಿರುವರು.

[illegible] ರಣರಂಗ:—ಅಕ್ಟೋಬರ ತಾ. [illegible]ರಿಂದ ನವಂಬರ ತಾ. ೪ರವರೆಗೆ ರುಶ್ಯನರು ಕ್ರಾಕೊ ಮತ್ತು ಥೊರ್ನ್ ವರೆಗಿನ ರಣರಂಗದಲ್ಲಿ ಶತ್ರುಗಳ [illegible] ಹೊವ್ವಿಜರ್ ಫಿರಂಗಿ; ೪೦ ಫೀಲ್ಡ್ ಗನ್ ತೋಫುಗಳು; [illegible] ಕ್ವಿಕ್‌ಫಯರ್ ತೋಫುಗಳು; ಬಹಳ ಯುದ್ಧ ಸಾಮಾಗ್ರಿಗಳನ್ನೂ [illegible] ಅಫೀಸರರನ್ನೂ ೧೫,೫೦೦ ಸೈನಿಕರನ್ನೂ ಸೆರೆಹಿಡಿದರು.

ಜರ್ಮನರು ವಿಸ್ತುಲದಲ್ಲಿ ವಿಶೇಷ ನಷ್ಟ ಹೊಂದಿ ಹಿಂದಟ್ಟಲ್ಪಟ್ಟಿರುವರು. ಜರ್ಮನ ಸೇನೆಯಲ್ಲಿ ಈ ವರೆಗೆ ಒಂದು ಮುಕ್ಕಾಲು ಮಿಲಿಯ ಸೈನಿಕರು ನಷ್ಟವಾಗಿರಬಹುದೆಂದು ಅಂದಾಜಾಗಿಯದೆ.

ರುಶ್ಯನರ ಕುದುರೆಪಡೆಯು ವಿಸ್ತುಲವನ್ನು ದಾಟಿ ಜರ್ಮನರ ಪ್ರದೇಶಕ್ಕೆ ನುಗ್ಗಿ ಕಾಲಿಶ್ಯಿಯ ಉತ್ತರ ಪಶ್ಚಿಮದಲ್ಲಿರುವ ರೈಲ್ವೆಯನ್ನು ನಾಶಪಡಿಸಿರುವರು. ಪೂರ್ವ ಪ್ರುಶ್ಯದಲ್ಲಿ ರುಶ್ಯನರು ಜರ್ಮನರ ಬಲವಾದ ಕೋಟೆಗಳನ್ನು ಹಿಡಿದು ಸ್ಟಾಲ್‌ಪೆನ್ ಮತ್ತು ಕಾನ ಎಂಬಲ್ಲಿಗೆ ಮುಂದರಿದಿರುವರು.

ನಿಡ್‌ಜಿಟ್ಸ ಎಂಬ ನದಿಯ ಪ್ರಾಂತ್ಯದಲ್ಲಿ ಆಸ್ಟ್ರಿಯನರ ೧೫೫ ಅಫೀಸರರೂ, ೨,೦೦೦ ಸೈನಿಕರೂ ರುಶ್ಯನರ ಸೆರೆ ಬಿದ್ದಿರುವರು. ಪ್ರಿಜೆಮೈಸ್ಲಿನ ದಕ್ಷಿಣದಲ್ಲಿ ೧೦೦೦ ಆಸ್ಟ್ರಿಯನ ಸೈನಿಕರು ರುಶ್ಯನರ ಸೆರೆ ಬಿದ್ದಿರುವರು. ಥೊರ್ನ್ ಮತ್ತು ಕ್ರಾಕೊದ ವರೆಗೆ ಜರ್ಮನ ಮತ್ತು ಆಸ್ಟ್ರಿಯಾನರ ೩ ಮಿಲಿಯ ಸೈನಿಕರಿರುವರೆಂತ ವಾರ್ತೆ ಬಂದದೆ.

ಅರ್ಮೇನಿಯದಲ್ಲಿ ಕಠಿಣ ಕಾಳಗ ಮಾಡಿ ರುಶ್ಯನರು ತುರ್ಕರನ್ನು ಸೋಲಿಸಿ ಎರ್ಜರೂಮಿಗೆ ಹೋಗುವ ದಾರಿಯಲ್ಲಿರುವ ಕೊಪಿರಿಂಕೊಯಿ ಪಟ್ಟಣವನ್ನು ಸ್ವಾಧೀನ ಮಾಡಿಕೊಂಡರು.

ರುಶ್ಯನರ ಯುದ್ಧ ನಾವೆಯು 'ಬ್ಲೇಕ್‌ಸಿ' ಕಡಲಲ್ಲಿ ತುರ್ಕರ ಯುದ್ಧ ಸಾಮಾಗ್ರಿಗಳು ಹೋಗುತ್ತಿದ್ದ ೩ ಹಡಗುಗಳನ್ನು ಸೈನಿಕರ ಸಹಿತ ಮುಣುಗಿಸಿರುವದು.

ತಾ. 12ನೇ ನವಂಬರ.

ಸಂಯುಕ್ತ ಸೇನೆಗಳು ರೆಮ್ಸ್‌ಕೆಪೆಲ್ಲಿಯನ್ನು ಬಿಡಬೇಕಾಗಿ ಬಂದಾಗ ೫೦೦೦ ಬಂಗಾಳಿ ಶೂಲಧರರು ಸಹಾಯಕ್ಕಾಗಿ ಅಲ್ಲಿಗೆ ಕಳುಹಿಸಲ್ಪಟ್ಟರು. ಇವರು ಕುದುರೆಯಿಂದ ಇಳಿದು ಶೂಲಗಳನ್ನು ಕೈಯಲ್ಲಿ ಹಿಡಿದು ಶತ್ರುಗಳ ಮೇಲೆ ಬಿದ್ದರು. ಸಂಯುಕ್ತ ಸೇನೆಗಳು ಇದನ್ನು ನೋಡಿ ಧನ್ಯವಾದವನ್ನಿತ್ತರು. ಬಂಗಾಳಿ ಸೈನಿಕರು ಶತ್ರುಗಳ ಮುಂದೆ ಹಾರಿ ಸನೀನುಗಳಿಂದ ಶತ್ರುಗಳನ್ನು ತಿವಿದರು. ರೆಮ್ಸ್‌ಕೆಪೆಲ್ಲಿಯ ಬೀದಿ ತುಂಬಾ ಶತ್ರುಗಳ ಹೆಣಗಳು ಬಿದ್ದವು. ಕಡೆಗೆ ಇವರು ೧೨ ಸೌಫಿರಂಗಿಗಳನ್ನೂ ೧೦೦೦ ಜರ್ಮನ ಸೈನಿಕರನ್ನೂ ಸೆರೆಹಿಡಿದರು.

ಜಪಾನ್:—ತ್ಸಿಂಗ್‌ಟಾವ್ಹೋದ ಮೇಲೆ ಕಡೇ ಸಾರಿ ಜಪಾನರ ಎರಡು ಕಾಲಾಳು ಸೇನಾಂಗಗಳೂ ಇಂಜಿನಿಯರ ಒಂದು ಯುದ್ಧ ನಾವೆಯೂ ಮೇಲ್ಬಾಯಿತು. ಮಧ್ಯೆ ಕೋಟೆಗಳು ಬೆಳಗ್ಗೆ ೬-೪೦ ಘಂಟೆಗೆ ಬಿದ್ದವು. ಜಪಾನರ ಎಡಪಾರ್ಶ್ವ ಸೇನೆಯು ಬೆಳಗ್ಗೆ ೫-೧೦ಕ್ಕೆ ರೆಟಿಂಜಾನ್ ಕೋಟೆಯನ್ನು ಸ್ವಾಧೀನ ಮಾಡಿಕೊಂಡಿತು. ಮಧ್ಯ ಸೇನೆಯು ೫-೩೫ಕ್ಕೆ ಟಿಯಾಟೆಸಿನ್ ಕೋಟೆಯನ್ನೂ ವಶಮಾಡಿಕೊಂಡಿತು. ಬಳಿಕ ಬಿಸ್ಮಾರ್ಕ ಮತ್ತು ಮೋಲ್ಟ್‌ಕೆ ಕೋಟೆಗಳು ಬೆಳಗ್ಗೆ ೭-೩೦ಕ್ಕೆ ಬಿದ್ದವು. ಜರ್ಮನರು ಕೂಡಲೇ ಬಿಳೇ ಬಾವುಟವನ್ನು ತೋರಿಸಿದರು. [illegible]ಕ್ಕೆ ಶರಣಾಗತರಾದರು. ಪಟ್ಟಣವನ್ನು ಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಮೊಲ್ಟ್‌ಕೆಯಲ್ಲಿ ಜರ್ಮನ ಮತ್ತು ಜಪಾನರೊಳಗೆ ಪ್ರಸ್ತಾಪ ನಡೆದು ಜಪಾನರ ಎಲ್ಲಾ ಶರ್ತಗಳಿಗೆ ಜರ್ಮನರು ಒಪ್ಪಿದರು. ಜರ್ಮನರ ೨,೩೦೦ ಸೈನಿಕರು ಜಪಾನರ ಸೆರೆಬಿದ್ದಿರುವರು. ಜಪಾನರಲ್ಲಿ ೧೪ ಅಫೀಸರರು ಗಾಯ ಬಡೆದರು. ೪೨೬ ಸೈನಿಕರು ಹತರಾದರು. ಬ್ರಿಟಿಷರಲ್ಲಿ ೬ ಮಂದಿ ಸ್ವಾಹಾ ಗಾಯ ಹೊಂದಿರುವರು.

ತುರ್ಕ:—ಹಿಂದುಸ್ಥಾನದಿಂದ ಹೋದ ಭೂಸೈನಿಕರೂ ಮತ್ತು ನೌಕಾದಳ ಸೈನಿಕರೂ ಪಾರಿಶ್ಯಕೊಲ್ಲಿಯ ಶಟೆಲ್ ಅರಾಬ್ ಎಂಬಲ್ಲಿರುವ ಫಾವೊ ಎಂಬ ಸ್ಥಳವನ್ನು ಒಂದು ತಾಸು ಕಾದಾಡಿ ಸ್ವಾಧೀನ ಮಾಡಿಕೊಂಡರು.

[illegible] ಬ್ರಿಟಿಷ ಕೌನ್ಸ್ಲರನ್ನು ತುರ್ಕರು ಕಾರಾಗೃಹದಲ್ಲಿ ಹಾಕಿರುವರು. ಆದರೆ ಕೆಲವು ಭಾರತೀಯರನ್ನೂ ಬ್ರಿಟಿಷ ಸಾಹುಕಾರರನ್ನೂ ಹೋಗ ಬಿಡಲಿಲ್ಲ.

ಉತ್ತರ ಹಿಂದೂಸ್ಥಾನ.

ಸದೇ ಕಳೆದ ತಾ. ೨೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೩೦೦ ಮಂದಿ ಪ್ಲೇಗುಬೇನೆಯಿಂದ ಮೃತರಾದರು. ಈ ಪೈಕಿ ಮುಂಬಾಯಿ ೫೧೯, ಮದ್ರಾಸ್ ೧೩೪; ಮೈಸೂರು ಮತ್ತು ಹೈದರಾಬಾದ್ ೧೬೫; ಪಂಜಾಬು ೧೫೪; ಸಂಯುಕ್ತಸಂಸ್ಥಾನ ೬೭; ಬಿಹಾರ್ ಮತ್ತು ಒರಿಸ್ಸ ೪೭; ಮಧ್ಯಸಂಸ್ಥಾನ ೩೭; ಬರ್ಮ ೨೦ ಮರಣಗಳಾದವು.

ವಾನ್‌ಕವರಿನಿಂದ ಸುಮಾರು ೩೦೦ ಸಿಕ್ಕರು ಕಲ್ಕತ್ತೆಯಲ್ಲಿ ಬಂದಿಳಿದರು. ಅನುಮಾನದ ಮೇಲೆ ಈ ಪ್ರಯಾಣಿಕರನ್ನು ಜಪ್ತಿಮಾಡಿದಲ್ಲಿ ಅವರೊಡನೆ ೫ ರಿವೋಲ್ವರುಗಳೂ ಎರಡು ಪಿಸ್ತೂಲುಗಳೂ ರಾಜದ್ರೋಹಕರವಾದ ಹಲವು ಪತ್ರಗಳೂ ದೊರಕಿದವು. ಇವರನ್ನು ಪೋಲೀಸಿನವರು ಕೈದು ಮಾಡಿರುವರು.

ಮರಾಟಿ ಭಾಷೆಯಲ್ಲಿ ಪ್ರಕಟವಾಗುವ "ಲಿಬರ್ಟಿ" (೪ನೇ ಭಾಗ) ಎಂಬ ಪಹಿಗೆಗೆ ಮುಂಬಾಯಿ ಸರಕಾರದವರು ಮುಟ್ಟುಗೋಲು ಹಾಕಿರುವರು.

೧೯೧೪-೧೫ನೇ ಇಸವಿಯ ವರೆಗೆ ಹಿಂದೂಸ್ಥಾನದ [illegible] ಹುಟ್ಟುವಳಿಯನ್ನು [illegible] [illegible]

ಹುಟ್ಟುವಳಿಯು ೧೧,೮೫೫,೫೦ ರೂಪಾಯಿಗೆ ತಗ್ಗಿರುವದು.

ಲಾಹೋರಿನ ಬಾದಶಾಹಿ ಮಸೀದಿಯ ಬಿದ್ದ ಗೋಡೆಗಳನ್ನು ದುರುಸ್ತಿ ಮಾಡಿಸುವ ಬಗ್ಗೆ ಭೋಪಾಲದ ಬೇಗಮರವರು ೬,೦೦೦ ರೂಪಾಯಿ ವಂತಿಗೆ ಕೊಟ್ಟಿರುವರು.

ವಾನ್‌ಕವರಿನ ಸಿಕ್ಕರ ಸಂಬಂಧವಾಗಿ ಕೆನಡಾ ಸರಕಾರದವರು ಈ ರೀತಿ ಪ್ರಕಟಿಸಿರುವರು:—ಕೊಮಗಾಟ್‌ಮಾರು ಎಂಬ ಹಡಗವು ವಾನ್‌ಕವರನ್ನು ಬಿಟ್ಟು ಒಂದು ತಿಂಗಳ ನಂತರ ಸ್ಥಳಿಕ ಸಿಕ್ಕರಲ್ಲಿ ಬಹಳ ಕಾಲದಿಂದಿದ್ದ ಜಗಳವು ವಿಶೇಷವಾಯಿತು. ಆಗೋಸ್ತು ತಿಂಗಳ ಮಧ್ಯಕಾಲ ಹರ್ನಾಮ್ ಸಿಂಘ್ ಎಂಬವನು ಫಕ್ಕನೇ ಕಾಣೆಯಾದನು. ಆಗೋಸ್ತು ತಾ. ೩೧ರಲ್ಲು ಕುತ್ತಿಗೆ ಕಡಿಯಲ್ಪಟ್ಟಿದ್ದ ಇವನ ಹೆಣವು ಸಿಕ್ಕಿತು. ಇವನ ಸ್ನೇಹಿತನು ಈ ಕಾರ್ಯವನ್ನು ಮಾಡಿರಬೇಕೆಂಬ ಅನುಮಾನವಿತ್ತು. ಎರಡು ದಿವಸದ ನಂತರ ಹರ್ನಾಮ ಸಿಂಘನ ಮರಣಕ್ಕಾಗಿ ವಿಶೇಷ ದುಃಖಪಡುತ್ತಿದ್ದ ಇವನ ಸ್ನೇಹಿತನಾದ ಅರ್ಜುನ್ ಸಿಂಘನನ್ನು ಸಿಕ್ಕ ದೇವಸ್ಥಾನ ಕಮಿಟಿಯ ಮೆಂಬರನೊಬ್ಬನು ಗುಂಡು ಹೊಡೆದು ಕೊಂದನು. ಇದನ್ನು ಕಣ್ಣಾರೆ ನೋಡಿದ ೪ ಮಂದಿ ಆಕಸ್ಮಾತ್ತಾಗಿ ಈ ಕಾರ್ಯವು ನಡೆಯಿತೆಂದು ಹೇಳಿದರು. ಇವರ ಶವ ಸಂಸ್ಕಾರವು ನಡೆದು ಹಿಂದೆ ಬರುವಾಗ ಬೇಲಸಿಂಘ್ ಎಂಬವನು ದೇವಸ್ಥಾನದಲ್ಲಿ ಫಕ್ಕನೆ ಹುಚ್ಚನಂತೆ ನಟಿಸಿ ಎರಡು ರಿವೋಲ್ವರನ್ನು ತೆಗದು ದೇವಸ್ಥಾನದಲ್ಲಿ ಕೂಡಿದ್ದ ಜನರಿಗೆ ಹೊಡೆದನು. ಇದರಿಂದ ೮ ಮಂದಿ ಘಾಯ ಒಡೆದರು. ಈ ಪೈಕಿ ಇಬ್ಬರು ಹತರಾದರು. ಇವರ ಉಪಟಳವು ಇಷ್ಟರಲ್ಲಿಯೇ ನಿಲ್ಲಲಿಲ್ಲ. ಒಂದು ವಾರದ ನಂತರ ಇಮಿಗ್ರೇಷನ್ ಇನ್ಸ್‌ಪೆಕ್ಟರ ಹೊಪ್‌ಕಿನರನ್ನೂ ಗುಂಡು ಹೊಡೆದು ಕೊಂದರು ಎಂಬ ವಾರ್ತೆ ಬಂದಿರುವದು.

ಹಿಂದೂಸ್ಥಾನ ಬೇಂಕಿನ ಮೆನೆಜಿಂಗ್ ಡೈರೆಕ್ಟರನಾಗಿದ್ದ ದೌಲತ್‌ರಾಯಿ ಮತ್ತು ಮೆನೇಜರನಾಗಿದ್ದ ಹರಿಚಂದನು ಬೇಂಕಿನ ಹಣ ದುರುಪಯೋಗ ಮಾಡಿದ್ದರೆಂದು ಆಪಾದಿಸಲ್ಪಟ್ಟಿದ್ದರು. ಇವರ ಮೇಲಿನ ಮೊಕದಮೆ ತನಕಿ ನಡೆದು ಮುಲ್ತಾನಿನ ಅಸಿಸ್ಟಾಂಟ್ ಕಮಿಷನರು ದೌಲತ್‌ರಾಯಿಗೆ ೭ ವರ್ಷಗಳ ಸಜಾ ಮತ್ತು ೧೫ ಸಾವಿರ ರೂಪಾಯಿ ಜುಲುಮಾನೆಯನ್ನೂ ಹರಿಚಂದನಿಗೆ ೨ ವರ್ಷಗಳ ಸಜೆಯನ್ನೂ ವಿಧಿಸಿದರು. ದೌಲತ್‌ರಾಯಿಯ ಮೇಲಿನ ಇನ್ನು ಎರಡು ತಕ್ಸೀರುಗಳಲ್ಲಿ ಒಂದಕ್ಕೆ ೫ ವರ್ಷಗಳ ಕಠಿಣ ಸಜೆ ೧೦ ಸಾವಿರ ರೂಪಾಯಿ ಜುಲುಮಾನೆ, ಮತ್ತೊಂದಕ್ಕೆ ೫ ವರ್ಷಗಳ ಸಜೆ ೫ ಸಾವಿರ ರೂಪಾಯಿ ಜುಲುಮಾನೆ ವಿಧಿಸೋಣಾಯಿತು.

ದಕ್ಷಿಣ ಕನ್ನಡ.

ವಿಟ್ಲ:—ಮದ್ರಾಸು ಗವರ್ನರ ಪ್ರಭುಗಳವರ ಯುದ್ಧ ಸಹಾಯಾರ್ಥ ಫಂಡಿಗೆ ವಂತಿಗೆಯನ್ನು ಕೂಡಿಸುವರೆ ವಿಟ್ಲ ಸಬ್ ರೇಂಜಿಗೆ ಸೇರಿದ ಉಪಾಧ್ಯಾಯರುಗಳು ಇದೇ ಶನಿವಾರ ತಾ. ೨೪ ಮಧ್ಯಾಹ್ನ ೧ ಘಂಟೆಗೆ ವಿಟ್ಲ ಸಬ್ ರೇಂಜ್ ಶಾಲೆಗಳ ಸುಪರ್‌ವೈಸರವರ ಅಧ್ಯಕ್ಷತೆಯಲ್ಲಿ ವಿಟ್ಲ ಬೋರ್ಡು ಶಾಲೆಯಲ್ಲಿ ಸಭೆ ಕೂಡಿದರು. ಅಧ್ಯಕ್ಷರು ಬ್ರಿಟಿಷ ರಾಜ್ಯಭಾರದಿಂದ ಜನರಿಗೆ ಉಂಟಾಗುವ ಪ್ರಯೋಜನದ ಕುರಿತು ಭಾಷಣ ಮಾಡಿದ ತರುವಾಯ ಯುದ್ಧ ಫಂಡಿಗೆ ವಂತಿಗೆಯನ್ನು ತೆಗೆದುಕೊಳ್ಳಬೇಕಾಗಿ ನಿರ್ಣಯವಾಯಿತು. ವಂತಿಗೆ ಪಟ್ಟಿಯನ್ನು ತೆರದಲ್ಲಿ ರೂಪಾಯಿ ೬೨-೪-೦ ಕೂಡಲೇ ಸಭೆಯಲ್ಲಿ ವಸೂಲಿಯಾಯಿತು. ಸದರಿ ವಂತಿಗೆಯ ಹಣವನ್ನು ಕಾಸರಗೋಡು ಉಪಾಧ್ಯಾಯರ ಸೆಂಟ್ರಲ್ ಕಮಿಟಿಯ ಸೆಕ್ರಿಟರಿಗಳವರ ಮುಖಾಂತರ ವಿಲೆವಾರಿ ಮಾಡುವರೆ ನಿಶ್ಚಯಿಸಿ ವಂತಿಗೆಯ ಮೊಬಲಗನ್ನು ಅಧ್ಯಕ್ಷರ ಸ್ವಾಧೀನ ಕೊಡೋಣಾಯಿತು.

ಈ ದಿನ ೯॥ ಗಂಟೆಗೆ ಮದ್ರಾಸು ಗವರ್ನರ ಪ್ರಭುಗಳವರ ಸವಾರಿಯು ಕೊಡಗಿಗೆ ಪ್ರಯಾಣ ಮಾಡುವಾಗ್ಯೆ ಇಲ್ಲಿಯ ಮ. ರಾ. ರಾ. ರವಿವರ್ಮ ನರಸಿಂಹ ರಾಜರವರು ವಿಟ್ಲಕ್ಕೆ ಮತ್ತು ಪುತ್ತೂರಿಗೆ ಹೋಗುವ ರಸ್ತೆ ಕೂಡುವಲ್ಲಿ [illegible] ವದನಗಳಿಂದಲೂ [illegible] ಪ್ರಭುಗಳವರಿಗೆ [illegible]

[illegible]

ಮಾರ್ಗವನ್ನು ಮಾಡಿಸಲು ಹೆಚ್ಚಿನ ಖರ್ಚು ಬೇಕಾಗಲಾರದು ಎಂದು ತಿಳಿಯುತ್ತೇವೆ. ಆದ್ದರಿಂದ ಲೋಕಲ್‌ಫಂಡು ಇಲಾಖೆಯವರು ಈ ವಿಷಯ ಆಲೋಚಿಸುತ್ತಿದ್ದರೆ ಲೋಕೋಪಕಾರವಾಗುತ್ತಿತ್ತು.

ರಾಜಭಕ್ತಿ ಪುರಸ್ಸರವಾಗಿ ಮಲ್ಹಾರು ಬೋರ್ಡು ಹಿಂದೂಸ್ಥಾನೀ ಮಕ್ಕಳೆಲ್ಲಾ ಜೊತೆಗೊಂಡು ರೂ ೨-೬-೦ನ್ನು ಯುದ್ಧದ ಫಂಡಿಗೆ ವಂತಿಗೆ ಕೊಟ್ಟಿರುವರು.

~~~~~

ಮಂಡತ್ಯಾರ್:—ಇಲ್ಲಿ ಹಲವು ವರ್ಷಗಳ ಲಾಗಾಯತು ಜುಗಾರಾಟವು ಆಗಾಗ್ಗೆ ನಡಿಯುತ್ತಾ ಇದೆ. ಈ ವರ್ಷ ಒಂದೆರಡು ವಾರಗಳ ಲಾಗಾಯತು ಮನೆ ಮನೆಗೆ ಹೋಗಿ ಬಾಗಲು ಹೊಡೆಯುವುದು, ಕಲ್ಲು ಬಿಸಾಡುವುದು ಮುಂತಾದ ಉಪಟಳವು ಶುರು ಆಗಿದೆ. ನಿವಾಸಿಕರಿಗೆ ಬಹಳ ಕಷ್ಟವಾಗಿದೆ. ಪೋಲಿಸ್ ಇಲಾಖೆಯವರು ನಿಗಾ ಕೊಡದೆ ಇದ್ದಲ್ಲಿ ಬೇಗನೆ ಡೊಂಬಿ ಆಗುವ ಸಂಭವಗಳು ಹೆಚ್ಚಿವೆ.

ಇಲ್ಲಿಯ ಇಗರ್ಜಿ ಶಾಲಾ ಮಕ್ಕಳು ತಮ್ಮ ರಾಜಭಕ್ತಿಯನ್ನು ತೋರ್ಪಡಿಸುವುದಕ್ಕಾಗಿ ಯುದ್ಧ ಫಂಡಿಗೆ ಕಳುಹಿಸುವ ಬಗ್ಗೆ ತಮ್ಮ ಶಕ್ತ್ಯಾನುಸಾರ ಚಿಲ್ಲರೆ ವಂತಿಗೆಯನ್ನು ಉಪಾಧ್ಯಾಯರ ಕೈಗೆ ಒಪ್ಪಿಸಿರುವರು. ವಸೂಲಾದ ರೂ. ೧-೧೨-೦ನ್ನು ಬೆಳ್ತಂಗಡಿ ಉಪಾಧ್ಯಾಯರ ಸಂಘದ ಸೆಕ್ರೆಟರಿಯವರಿಗೆ ಕಳುಹಿಸೋಣಾಗಿಯದೆ. ಸದರಿ ಸಂಘದ ವಂತಿಗೆಯೊಂದಿಗೆ ಇದನ್ನೂ ಸೇರಿಸಿಕೊಳ್ಳಲಾಗುವುದು.

~~~~~

ಕುಂಬಳೆ:—ಇಲ್ಲಿಯ ವ ಆಸಪಾಸ ಅನೇಕ ಗ್ರಾಮಗಳ ನಿವಾಸಿಕರು ಕಾಸರಗೋಡು, ಮಂಜೇಶ್ವರ, ವಿಟ್ಲ, ವಗೈರೆ ರಿಜಿಸ್ತ್ರಿ ಆಫೀಸುಗಳಲ್ಲಿ ಪತ್ರಗಳನ್ನು ರಿಜಿಸ್ತ್ರಿ ಮಾಡುವರೆ ಹೋಗಿ ಬರುವ ಕಷ್ಟ ನಷ್ಟಗಳನ್ನು ವಿವರಿಸಿ ಕುಂಬಳೆಯಲ್ಲಿ ಒಂದು ಸಬ್ ರಿಜಿಸ್ತ್ರಿ ಆಫೀಸನ್ನು ತೆರೆದು ಅನುಕೂಲಪಡಿಸಿಕೊಡುವಂತೆ ಮದ್ರಾಸ್ ರಿಜಿಸ್ಟ್ರೇಶನ್ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಮನವಿ ಮಾಡಿಕೊಂಡಿರುವರು. ಈ ಅರಿಕೆಯಂತೆ ಮಧ್ಯ ಸ್ಥಳವಾದ ಕುಂಬಳೆಯಲ್ಲಿ ಅವಶ್ಯವಾದ ಸಬ್ ರಿಜಿಸ್ತ್ರಿ ಆಫೀಸು ನಿರ್ಮಾಣವನ್ನು ಸರ್ವರೂ ಸಂತೋಷದಿಂದ ಎದುರು ನೋಡುತ್ತಿರುವರು.

~~~~~

ಹೊಸಂಗಡಿ:—ಈ ಹೊಸಂಗಡಿ ಗ್ರಾಮದಲ್ಲಿ ತಕ್ಕದಾದ ಹೊಸ ಕಟ್ಟೋಣ ಕಟ್ಟಿದರೆ ಬೋರ್ಡು ಶಾಲೆ ತೆರೆಯಲ್ಪಡುವದೆಂತ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರ ವಿಶ್ವೇಶ್ವರರಾಯರು ಅಪ್ಪಣೆ ಕೊಟ್ಟಿದ್ದರು. ಇವರ ಮಾತಿನ ಪ್ರಕಾರ ೨೦೦ ರೂಪಾಯಿ ಖರ್ಚ ಮಾಡಿ ಶಾಲೆಗೆ ಯೋಗ್ಯವಾದ ಕಟ್ಟೋಣವನ್ನು ಇಲ್ಲಿಯ ಮಾಜಿ ಬ್ರಾಂಚ ಪೋಸ್ಟಮಾಸ್ತರರಾಗಿದ್ದ ಸಾವಕಾರ ಅನಂತ ಕಮ್ತಿರು ಕಟ್ಟಿಸಿದ್ದಾರೆ. ಇದನ್ನು ಕಟ್ಟಿಸಿ ೭ ವರ್ಷವಾಗುತ್ತಾ ಬಂತು. ಇದು ವರೇಗೆ ಬೋರ್ಡು ಶಾಲೆಗೆ ಹುಕುಂ ಆಗಲಿಲ್ಲ. ಈ ಸಂಗತಿಗಳಿಂದ ಇಲ್ಲಿಯ ಪ್ರೈಮರಿ ಶಾಲೆ ಮಾಸ್ತರ ಕೆ. ಗೋಪಾಲಾಚಾರ್ಯರು ಮತ್ತು ಸೆಕೆಂಡ್ ಮಾಸ್ತರರೂ ಸಹಾ ಶಾಲೆ ನಡಿಸಿ ಬರಲಿಕ್ಕೆ ಮನಸ್ಸಿಲ್ಲದೇ ಇರುತ್ತಾರೆ; ಮಾತ್ರವಲ್ಲ; ಈ ವರ್ಷ ದಾಟಿದ ನಂತರ ಶಾಲೆ ನಡಿಯುವ ಸಂಭವ ಕಾಣುವದಿಲ್ಲ. ಆದದರಿಂದ ದಯಾಳು ಸರಕಾರದವರು ಈ ವಿಷಯ ನಿಗಾಕೊಟ್ಟು ಈ ಶಾಲೆಯನ್ನು ಬೇಗನೆ ಬೋರ್ಡಿಗೆ ಸೇರಿಸಿಕೊಂಡು ಇಲ್ಲಿಯ ಬಡ ಮಕ್ಕಳ ವಿದ್ಯಾಭಿವೃದ್ಧಿಯನ್ನು ವೃದ್ಧಿಗೊಳಿಸುವರೆಂದು ಹಾರೈಸುತ್ತೇವೆ.

ಇಲ್ಲಿಂದ ಮೈಸೂರು ಜಿಲ್ಲೆಗೆ ಹೋಗುವ ಘಾಟಿಯಲ್ಲಿ ಕೆಲವು ದಿನಗಳ ಮುಂಚೆ ಒಂದು ಚಿತ್ತಾ ಹುಲಿಗೂ, ಒಂದು ಕಾಡು ಹಂದಿಗೂ ರಸ್ತೆ ಬಳಿ ಒಂದು ದಿನವೆಲ್ಲಾ ಜಗಳ ಹತ್ತಿ ಹೋಗುವ ಬರುವ ಪ್ರಯಾಣಸ್ಥರಿಗೆ ಬಹಳ ತೊಂದರೆವುಂಟಾಗಿ ಕೊನೆಗೆ ಮರು ದಿನ ಮೈಸೂರ ಜಿಲ್ಲಾ ಗಡಿ ಸ್ಟೇಶನ ಹುಲಕಲ್ಲ ಎಂಬಲ್ಲಿಂದ ಒಬ್ಬ ಪೋಲಿಸ್ ದಫೇದಾರ ಚಂದ್ರ ಶೆಟ್ಟಿ ಬಂದು ಸದರಿ ಹುಲಿಯನ್ನೂ ಹಂದಿಯನ್ನೂ ಸಹ ಹೊಡೆದು ಈ ಜಿಲ್ಲೆಯಿಂದ ಸಾಗಿಸಿ ಹುಲಕಲ್ಲಿಗೆ ಕೊಂಡುಹೋಗಿದ್ದಾರೆ.

~~~~~

ಹೆಬ್ರಿ:—ಹಿಂದುಸ್ಥಾನದ ಚಕ್ರವರ್ತಿಯವರಿಗೂ ಜರ್ಮನಿಯವರಿಗೂ ಯುರೋಪ ಖಂಡದಲ್ಲಿ ನಡಿಯುವ ಘೋರವಾದ ಯುದ್ಧದ [illegible]

ಅಧ್ಯಕ್ಷರಾಗಿ ಸೇರಿಸಿ ತಾವು ಮಾಡಿದ ಸಹಾಯಾರ್ಥದ ರೂಪಾಯಿ ೯೭—೮—೦ ತೊಂಭತ್ತೇಳುವರೆ ರೂಪಾಯಿ ಅಧ್ಯಕ್ಷರ ಹತ್ತಿರ ವಸೂಲು ಕೊಟ್ಟು, ಎಲ್ಲವರೂ ನಮ್ಮ ಚಕ್ರವರ್ತಿಯವರಿಗೆ ಜಯವಾಗಲೆಂದು ದೇವರನ್ನು ಪ್ರಾರ್ಥಿಸಿ ನೆರದ ಸಭೆಯು ಅಗಲಿತು.

ಸಭೆಯಲ್ಲಿ ಕೂಡಿ ಬಂದ ರೂಪಾಯಿ ೯೭—೮—೦ ನ್ನು ಕಾರ್ಕಳ ತಾಲೂಕು ಖಜಾನೆಗೆ ಇರ್ಸಾಲು ಮಾಡೋಣಾಗಿಯದೆ.

~~~~~

ಮಂಗಳೂರು.

ಮಂಗಳೂರು ಹೋಬಳಿ ಯಾನೆ ತಾಲೂಕಿನ ಕುದ್ರೋಳಿ ಮಂಜಪ್ಪ ವ ಇತರ ಮೊಗೇರ ಜಾತಿಯ ಗುರಿಕಾರರು, ತಮ್ಮ ಜಾತಿಯವರಿಂದೆಲ್ಲಾ ವಂತಿಗೆಗಳನ್ನು ಒಟ್ಟು ಕೂಡಿಸಿ ತಂದ ರೂ ೩೫೮—೮—೦ ಮೊಬಲಗನ್ನು ಸ್ವೀಕರಿಸಿ ಅವರ ರಾಜಭಕ್ತಿ ಪುರಸ್ಸರವಾದ ಈ ಕೆಳಗಣ ಲೇಖನವನ್ನೋದಲು ಕಲೆಕ್ಟರ ದೊರೆಗಳವರು ತುಂಬಾ ಆನಂದ ಭರಿತರಾಗಿರುವರು.

ಮೊಬಲಗನ್ನು ಇಂಪೀರಿಯಲ್ ಕ್ಲೇಶ ನಿವಾರಣ ಫಂಡಿಗೆ ಜಮಾ ತೆಗೆದು ಕೊಂಡಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರ್ ದೊರೆಗಳವರ ಸನ್ನಿಧಾನಕ್ಕೆ,

ಸಂಗರಗಳವೇ ಇಸವಿ ಅಕ್ಟೋಬರ ತಾರೀಕು ೨೧ಲ್ಲಿ ಈ ಕೆಳಗೆ ದಸ್ಕತು ಮಾಡಿದ ಮಂಗಳೂರು ಹೋಬಳಿ ಯಾನೆ ತಾಲೂಕಿನ ಮೊಗೇರ ಜಾತಿಯ ಗುರಿಕಾರರು ಬರಕೊಂಡ ಅರ್ಜಿ...

ಸುರತ್ಕಲ್ ಗ್ರಾಮದ ಸಮುದ್ರ ಬದಿಯಲ್ಲಿರುವ ಶ್ರೀ ಮಹಾಬಲೇಶ್ವರ ದೇವಸ್ಥಾನದಲ್ಲಿ ಕಳೆದ ಆದಿತ್ಯವಾರ ನಾವೂ ನಮ್ಮ ಜಾತಿಯ ಹತ್ತು ಸಮಸ್ತರೂ ಮಹಾ ಸಭೆ ಕೂಡಿ ಬಂದು ನಮ್ಮ ಜಾತಿ ನೀತಿ ಧರ್ಮಗಳನ್ನೇ ರಕ್ಷಿಸಿ ಸದಾ ಕಾಪಾಡುತ್ತಿರುವ ಹಿಂದೂದೇಶದ ಚಕ್ರವರ್ತಿಗಳಾದ ಇಂಗ್ಲಿಷ್ ಸರಕಾರದವರಿಗೂ ಜರ್ಮನಿಯವರಿಗೂ ವಿಲಾಯತಿಯಲ್ಲಿ ನಡಿಯುವ ಮಹಾ ಯುದ್ಧದಲ್ಲಿ ಶತ್ರುಗಳು ಪರಾಜಯ ಹೊಂದಿ ನಮ್ಮ ಸರಕಾರಕ್ಕೆ ವಿಜಯ ಉಂಟಾಗುವಂತೆ ದೇವರು ಅನುಗ್ರಹಿಸಬೇಕಾಗಿ ಆ ಸನ್ನಿಧಿಯಲ್ಲಿ ನಾವೆಲ್ಲರೂ ಸಾಷ್ಟಾಂಗವೆರಗಿ ಪ್ರಾರ್ಥಿಸಿದೆವು. ಮತ್ತು ಈ ಮಹಾ ಯುದ್ಧವು ಅಂತ್ಯವಾಗುವ ವರೆಗೂ ಆಯಾಯ ಗ್ರಾಮ ದೇವಸ್ಥಾನಗಳಲ್ಲಿ ದೇವಾರಾಧನೆಗೆ ಕೂಡಿ ಬರುವ ಪ್ರತಿ ಒಂದು ನಮ್ಮ ಕೂಟದಲ್ಲಿಯೂ ಇದೇ ರೀತಿ ಎಲ್ಲರೂ ದೇವರಿಗೆ ಪ್ರಾರ್ಥಿಸುತ್ತಿರಬೇಕೆಂದು ಸಹಾ ನಿರ್ಣಯಿಸಿದ್ದೇವೆ.

ಮಹಾಸ್ವಾಮಿಯವರೇ,

ನಾವು ಬರೇ ಮಿನು ಶಿಕಾರಿ ವೃತ್ತಿಯವರಾಗಿದ್ದು ಹೆಚ್ಚಿನ ಸಂಪಾದನೆ ಇಲ್ಲದ ಬಡವರಾಗಿರುತ್ತೇವೆ. ಅಲ್ಲದೆ ಈಗ ಒಂದೆರಡು ವರುಷಗಳಿಂದ ಮಿನು ಶಿಕಾರಿಯು ಸಹಾ ಬಹಳ ಕಮ್ಮಿ ಆಗಿ ಇನ್ನಷ್ಟು ದೀನಾವಸ್ಥೆಯಲ್ಲಿರುತ್ತೇವೆ. ಆದುದರಿಂದ ಈ ಮಹಾ ಯುದ್ಧ ಸಂದರ್ಭದಲ್ಲಿ ಸರಕಾರಕ್ಕೆ ಹೆಚ್ಚಿನ ಸಹಾಯ ಮತ್ತು ಸೇವೆ ನಾವು ಮಾಡಲು ಅಶಕ್ತರಾಗಿರುತ್ತೇವೆ.

ಆದರೆ ಯುದ್ಧ ಸಂಕಷ್ಟ ನಿವಾರಣ ಫಂಡಿಗೆ ನಾವೂ ನಮ್ಮ ಯಥಾನುಶಕ್ತಿ ಕಿಂಚಿತ್ತಾದರೂ ದ್ರವ್ಯ ಸಹಾಯ ಮಾಡಬೇಕೆಂಬ ಅಪೇಕ್ಷೆಯು ಉಂಟಾಗಿ ಈ ಬಗ್ಗೆ ಮಂಗಳೂರು ಹೋಬಳಿಯಲ್ಲಿರುವ ನಮ್ಮ ಜಾತಿಯ ಪ್ರತೀ ಮನೆಯವರಿಂದಲೂ ಆಯಾಯ ಸ್ಥಳದ ಗುರಿಕಾರರಾದ ನಾವು ವಂತಿಗೆಗಳನ್ನು ಶೇಖರಿಸಿ ಒಟ್ಟು ಕೂಡಿಸಿದ ರೂಪಾಯಿ ೩೫೮—೮—೦ ನ್ನು ಇದರೊಂದಿಗೆ ತಂದಿರುತ್ತೇವೆ. ಪ್ರತಿ ಗ್ರಾಮದಲ್ಲಿ ವಸೂಲಾದ ವಂತಿಗೆ ಪಟ್ಟಿಯನ್ನು ಇದಕ್ಕೆ ಲಗ್ತಪಡಿಸಿರುತ್ತೇವೆ.

ಆದ್ದರಿಂದ ದಯಾಳು ದೊರೆಗಳವರು ನಮ್ಮ ಮನಃಪೂರ್ವಕವಾದ ರಾಜಭಕ್ತಿಯಿಂದ ನಾವು ತಂದಿರುವ ಈ ಹಣವನ್ನು ಸ್ವೀಕರಿಸಿ ಯಾವಂದರಿಗೆ ಯುಕ್ತ ತೋರುವೆ ಯುದ್ಧ ಸಂಕಷ್ಟ ನಿವಾರಣಾ ಫಂಡಿಗೆ ಕಳುಹಿಸಿ ಕೊಡ ಬಹುದಾಗಿ ಅತಿ ದೈನ್ಯ ಭಾವದಿಂದ ಪ್ರಾರ್ಥಿಸುತ್ತೇವೆ.

ಪ್ರತಿ ಗ್ರಾಮದಲ್ಲಿ ವಸೂಲಾದ ವಂತಿಗೆ ಪಟ್ಟಿಯು:— ಕುದ್ರೋಳಿಯವರಿಂದ ರೂ. ೨೫; ಕದಿಕೆಯವರಿಂದ ರೂ. ೨೫; ಉಳ್ಳಾಲದವರಿಂದ ರೂ. ೨೫; ಬೋಳಾರದವರಿಂದ ರೂ. ೨೫; ಹೊಗೆಬಜಾರದವರಿಂದ ರೂ. ೨೫; ಬೋಳೂರಿನವರಿಂದ ರೂ. ೨೫; ಬೈಕಂಪಾಡಿಯವರಿಂದ ೨೫; ಹೊಸಬೆಟ್ಟಿನವರಿಂದ ರೂ. ೨೫; ಗುಡ್ಡೆಕೊಪ್ಲದವರಿಂದ ರೂ. ೧೫; ಚಿತ್ರಾಪುವವರಿಂದ ರೂ. [illegible]

[illegible] ಯದವರಿಂದ ರೂ. ೧೦; ಬಪ್ಪನಾಡಿನವರಿಂದ ರೂ. [illegible] ಬೆಟ್ಟಿನವರಿಂದ ರೂ. ೧೦; ಹೊಸಕೊಪ್ಲದವರಿಂದ ರೂ. ೮; ಖಂಡಿಗೆಯವರಿಂದ ರೂ. ೮; ದೊಡ್ಡಕೊಪ್ಲದವರಿಂದ ರೂ. ೭; ಸುರತಕಲ್ಲಿನವರಿಂದ ರೂ. ೩. ಒಟ್ಟು ಜುಮುಲಾ ರೂಪಾಯಿ ೩೫೮—೮—೦.

ಇದೇ ಕಳೆದ ಒಕ್ಟೋಬರ ತಿಂಗಳ ತಾ. ೩೧ನೇ ಶನಿವಾರ ಇಲ್ಲಿಯ ಬಿ. ಇ. ಮಿಶ್ಯನ್ ಹೈಸ್ಕೂಲಿನ ವಿಶ್ರಾಂತಿ ಭವನದಲ್ಲಿರುವ ವಿದ್ಯಾರ್ಥಿಗಳು "ಹೊಸ್ಟೆಲ್ ಡೇ" (Hostel Day) ಎಂಬೀ ದಿವಸವನ್ನು ಬಹಳ ಸಡಗರದಿಂದ ಆಚರಿಸಿದರು. ಈ ವರ್ಧಂತಿಯ ಸಲುವಾಗಿ ತಾ. ೩೦ನೇ ಶುಕ್ರವಾರ ವಿಶ್ರಾಂತಿಭವನದ ವಿದ್ಯಾರ್ಥಿಗಳು ಕನ್ನಡ ಭಾಷೆಯಲ್ಲಿ ಚಂದ್ರಹಾಸ ನಾಟಕವನ್ನು ಆಡಿದರು. ಬಾಲಚಂದ್ರಹಾಸನ ವೇಷವನ್ನು ಧರಿಸಿದ ೫ನೇ ತರಗತಿಯ ವಿದ್ಯಾರ್ಥಿಯಾದ ಎಸ್. ನಾರಾಯಣರಾವು ಎಂಬೀ ಬಾಲಕನ ರಾಗ ಜ್ಞಾನವೂ ಸಭಾ ಕಂಪನೆ ಏನೇನೂ ಇಲ್ಲದೆ ನಟಿಸಿದ ನಟನೆಯೂ ಜನಸಮೂಹವನ್ನು ವಿಸ್ಮಯಗೊಳಿಸಿತೆಂದರೆ ಅತಿಶಯೋಕ್ತಿಯಾಗದು. ಸಾವಿರಾರು ಜನರು ಶಾಲಾ ವಠಾರದಲ್ಲಿ ನಿಬಿಡವಾಗಿ ನೆರೆದಿದ್ದರು. ತಾ. ೩೧ನೇ ಶನಿವಾರ ಬೆಳಿಗ್ಗೆ ಶಾಲಾ ಮಕ್ಕಳಿಂದ ತರತರದ ಸ್ಪರ್ಧೆದಾಟಗಳು ಮಾಡಿಸೋಣಾದವು. ಅಂದೇ ಸಾಯಂಕಾಲ ೩ರಿಗೆ ಸದರಿ ವಿದ್ಯಾರ್ಥಿಗಳು "ಮರ್ಚೆಂಟ್ ಒಫ್ ವೆನಿಸ್" (Merchant of Venis) ಎಂಬ ನಾಮಾಂಕಿತದ ಕಥೆಯನ್ನು ಇಂಗ್ಲಿಷ್ ಭಾಷೆಯಲ್ಲಿ ನಾಟಕವಾಡಿ ನಿಬಿಡವಾಗಿ ನೆರೆದಿರುವ ಜನ ಸಮೂಹವನ್ನು ತುಂಬಾ ಆನಂದಗೊಳಿಸಿದರು. ನಾಟಕ ನಡೆದಿದ್ದ ಉಭಯ ದಿವಸಗಳಲ್ಲೂ ಕಣ್ಣನ್ನು ಕುಕ್ಕುವ ಹಾಗೆ ಅಲಂಕರಿಸಿದ ಸಭೆಯು ಬಹು ದೀಪಗಳಿಂದ ಅಲಂಕರಿಸಲ್ಪಟ್ಟಿತು.

ಉಪಾಧ್ಯಾಯರ ಪ್ರಾಕ್ಟಿಕಲ್ ಪರೀಕ್ಷೆಯಲ್ಲಿ ೪೭ ಉಪಾಧ್ಯಾಯರಲ್ಲಿ ೧೭ ಜನರು ಪಾಸಾಗಿರುತ್ತಾರೆ. ಪುತ್ತೂರು ಸಬ್ ರೇಂಜಿನಿಂದ ಹೋದ ೪ ಜನ ಉಪಾಧ್ಯಾಯರೂ ಕೂಡಾ ಪಾಸಾಗಿರುವರು. ಈ ವರ್ಷ ಪ್ರಾಕ್ಟಿಕಲ್ ಪರೀಕ್ಷೆಯಲ್ಲಿ ಪಾಸಾದ ಉಪಾಧ್ಯಾಯರ ಸಂಖ್ಯೆಯನ್ನು ನೋಡಿದರೆ ಕಾಸರಗೋಡು ಮತ್ತು ಮಂಗಳೂರು ರೇಂಜಿನಲ್ಲಿ ಪುತ್ತೂರು ಸಬ್ ರೇಂಜಿಗೆ ಪ್ರಥಮ ಸ್ಥಾನವನ್ನು ಕೊಡಬೇಕಾಗುವುದು.

ತಹಸೀಲದಾರ ಮಿ ಅಲ್ಬುಕರ್ಕರು ರಜೆಯ ಮೇಲಿರುವದರಿಂದ ಲೇಂಡ್ ರಿಕೊರ್ಡ್ ತಹಸೀಲದಾರರಾದ ಮಿ ರಾ ರಾ ಡಿ. ಆನಂದರಾಯರು ಆಕ್ಟಿಂಗ್ Vನೇ ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು.

ಪ್ರಿನ್ಸ್ ಆಫ್ ರಿಲೀಫ್ ಫಂಡ್ ಮತ್ತು ಮದ್ರಾಸ್ ಯುದ್ಧ ಫಂಡಿಗೆ ವಂತಿಗೆ ಕೊಟ್ಟವರ ಹೆಸರುಗಳು ಮೊಬಲಗುಗಳು.

(ಕಳದ ಸಂಚಿಕೆಯಿಂದ ಮುಂದರಿಸಿದುದು.)

ಮಿ ರಾ ರಾ ಸಾಹುಕಾರ ಎಮ್. ಪಾಂಡುರಂಗ ಪೈ ರೂ. ೫೧; ಮಿ ರಾ ಸಾ. ಎಮ್. ರಂಗಪ್ಪೈ ರೂ. ೫೧; ಮಿ ರಾ ಸಾಂತಪ್ಪ ಲಕ್ಷ್ಮಣಪಾಲ್ ಎಂಡ್ ಬ್ರದರ್ಸ್ ರೂ. ೫೧; ಮೆ. ಪಿ. ಎಫ್. ಎಕ್ಸ್ ಸಲ್ದಾನ್ಹ ರೂ. ೫೦; ಮಿ ರಾ/ಎ. ಸುಬ್ಬರಾವ್ ರೂ. ೫೦, ಮಿ ಎ. ಇ. ಸಿ. ಪಾಸ್ ರೂ. ೫೦; ರಾವ್‌ಬಹದ್ದೂರ್ ಎ. ರಾಮಯ್ಯ ಪುಂಜ ರೂ. ೫೦; ಮಿ ರಾ ಎ. ಶ್ರೀನಿವಾಸಪೈ ರೂ. ೫೦; ಮೆ. ಎ. ಜೆ. ಲೋಬೊ ರೂ. ೪೦, ಫಾದರ್ ಮುಲ್ಲರ ಆಸ್ಪತ್ರೆಯ ದಾಕ್ತಾರರೂ, ಇತರರೂ ರೂ. ೪೦; ಮಿ ರಾ ಎಸ್. ವೆಂಕಟಸುಬ್ಬರಾವ್ ರೂ. ೪೦; ರಾ ಟಿ. ಅನಂತಯ್ಯ ರೂ. ೪೦; ರಾ ಎಮ್. ಮುಕುಂದರಾವ್ ಮತ್ತು ಎಮ್. ವಿ. ಪ್ರಭು ರೂ. ೪೦; ದಿವಾನ್ ಬಹದ್ದೂರ್ ಎ. ಪಿಂಟೊ ರೂ. ೪೦; ರಾಯಸಾಹೇಬ್ ಕೆ. ಕೃಷ್ಣನ್ ನಾಯರ್ ರೂ. ೩೫; ಮಿ ರಾ ಎಸ್. ರಘುನಾಥಯ್ಯ ರೂ. ೩೭; ಮಿ ರಾ ಯು. ಬಾಬುರಾವ್ ರೂ. ೩೫; ಮಿ ಪಿ. ಎಫ್. ಡಿ. ಅಲ್ಬುಕರ್ಕ ರೂ. ೩೦; ಮಿ ರಾ ಎಮ್. ರಘುನಾಥರಾವ್ ರೂ. ೩೦; ಮಿ ರಾ [illegible] ಸುಬ್ಬರಾವ್ ರೂಪಾಯಿ ೩೦; [illegible] ರ್ಸ್‌ತ್ರೀಸ್ ರೂ. ೨೫; ಮಿ ರಾ [illegible] ರೂ. ೨೫; ಮಿ ಎಮ್. [illegible]
~~~~~

ಶಿವರಾವ್ ರೂ. ೨೫; ಮ॥ ರಾ॥ ಆರ್. ಎಸ್. ರೇ. ರೂ. ೨೫; ಮ॥ ರಾ॥ ಎಸ್. ವ್ಯಾಸರಾವ್ ರೂ. ೨೫; ಮ॥ ರಾ॥ ಬಸ್ತಿ ದೇವಪ್ಪ ಶ್ಯಾನುಭೋಗ ರೂ. ೨೫; ಮ॥ ರಾ॥ ವಿಜಾಪ್ ಶಿವಪ್ಪಶೆ ಎಂಡ್ ಬ್ರದರ್ಸ್ ರೂ. ೨೫; ಮ॥ ಜಾಫರ್ ಮಗ್ಗಿ ಸೇಟ್ ಸಾಹೇಬ್ ರೂ. ೨೫; ಮ॥ ಜೊನ್ ಎಫ್ ಫೆರ್ನಾಂಡಿಸ್ ರೂ. ೨೫; ಮ॥ ಜೆ. ಸಾರೆಟ್ಟೊ ರೂ. ೨೦; ದಿವಾನ್ ಬಹದ್ದೂರ್ ಎಮ್. ಎಮ್. ಬಂಗೇರ ರೂ. ೨೦; ಮ. ಜೋಸೆಫ್ ಪ್ಯಾಸ್ ರೂ. ೨೦; ಮ॥ ರಾ॥ ವಿ. ರಾಮನ್ ಮೆನೊನ್ ರೂ ೨೫; ಮ॥ ಸಿಮೋನ್ ಅಲ್ವರೀಸ್ ರೂ. ೨೦; ಮ॥ ರಾ॥ ಎಸ್. ನಾಗಪ್ಪಸ್ವಾಮಿ ಮತ್ತು ಎಮ್. ರಂಗಪ್ಪೆ ರೂ. ೨೧; ಮ॥ ರಾ॥ ಕೆ. ಪಿ. ರಾಘುರಾವ್ ರೂ. ೩೦; ಮ॥ ರಾ॥ ಎಮ್. ವೆಂಕಟರಾವ್ ರೂ. ೩೦; ಮ॥ ರಾ॥ ಎಸ್. ವಿ. ಕೃಷ್ಣರಾವ್ ರೂ. ೨೦; ಮ॥ ರಾ॥ ಕೆ. ಎಲ್. ನಾರಾಯಣರಾವ್ ರೂ. ೨೦; ಮ॥ ಎಚ್. ಫರ್ನೆಲ್ ರೂ. ೧೫. ಮೆಸ್ಸರ್ಸ್ ಜೊಕಿಮ್‌ಪ್ಯಾಸ್ ಎಂಡ್ ಬ್ರದರ್ಸ್ ರೂ. ೧೫; ಮ॥ ರಾ॥ ಬಿ. ಮಹಾಬಲ ಹೆಗ್ಗಡೆ ರೂ. ೧೫; ಮ॥ ಎಸ್. ಎಕ್ಸ್. ಸಾಲ್ಡಾನ್ಹ ರೂ. ೧೫. ಮ॥ ರಾ॥ ಯು. ಸಿ. ಕೃಷ್ಣಭಟ್ಟ ರೂ. ೧೫; ಮ॥ ರಾ॥ ವಿ. ರಾಮರಾವ್ ರೂ. ೧೫; ಮ॥ ರಾ॥ ಕುಡ್ವ ರಘುನಾಥ ಶೆಣ್ಯೆ ರೂ. ೧೫; ಮ॥ ರಾ॥ ಮಾರೂರು ಗಣಪತಿಶ್ಯೆ ಕುಡ್ವ ಗೋಪಾಲ ಶೆಣ್ಯೆ ರೂ. ೧೫; ಮೆಸ್ಸರ್ಸ್ ಸೈಮೊಂಡ ಅಲ್ಬುಕರ್ಕ ಎಂಡ್ ಬ್ರದರ್ಸ್ ರೂ. ೧೫; ಮ॥ ಮರಿಯನ್ ಎಸ್. ಪ್ಯಾಸ್ ರೂ. ೧೦; ಮ॥ ಜೆ. ಎಲ್. ಸಾಲ್ಡಾನ್ಹ ರೂ. ೧೦; ರಾವ್ ಬಹದ್ದೂರ್ ಸಿ. ಗೋಪಾಲನ್ ನಾಯರ್ ರೂ. ೧೦; ಮ॥ ರಾ॥ ಎಸ್. ಜಿ. ಸುವರ್ಣ ರೂ. ೧೦; ಮ॥ ರಾ॥ ಕೆ. ಕೃಷ್ಣಯ್ಯ ಸುಲಾಯ ರೂ. ೧೦; ಮ॥ ರಾ॥ ಭುಜಂಗ ಸುಲಾಯ ರೂ. ೧೦; ಡಾಕ್ಟರ್. ಎಲ್. ಪಿ. ಫೆರ್ನಾಂಡಿಸ್ ರೂ. ೧೦; ಮ॥ ಬಿ. ಕುಲಾಸೊ ರೂ. ೧೦; ಮ॥ ಎ. ಬಿ. ಪಿಂಟೊ ರೂ. ೧೦; ಮ॥ ಪ್ರಾಂಕೋ ರೂ. ೧೦. ಮ॥ ರಾ॥ ಕೆ. ಎಸ್. ಅಡಿಗ ರೂ. ೧೦.

ಮುಂದುವರಿಯುವದು.

ಕೀರ್ತಿಶೇಷ ಆನೆಗುಂಡಿ ಸುಬ್ರಾಯಶ್ಯೆನವರ ಜನನ ದಿವಸ ಉತ್ಸವವು ಇದೇ ನವಂಬರ ತಿಂಗಳ ತಾ. ೨೨ನೇ ಆದಿತ್ಯವಾರ ದಿವಸ ಸಾಯಂಕಾಲ ೪ ಘಂಟೆ ಸಮಯಕ್ಕೆ ಕೆನರಾ ಹ್ಯಾಸ್ಕೂಲಿನಲ್ಲಿ ಆಚರಿಸೋಣಾಗುವದೆಂಬದಾಗಿ ತಿಳಿಯುತ್ತೇವೆ.

~~~~~

ಹಿರಿಯಡ್ಕ:— ನಮ್ಮ ಸಂಸ್ಥಾನದ ಗವರ್ನರ್ ದೊರೆಗಳವರಾದ ಬಹುಮಾನಪಟ್ಟ ಪೆಣ್ಟ್ಲಾಂಡ್ ಬೆರನ್, ಪೆಂಟಲೀಂಡ್ ಆಫ್‌ಲೀತ್ ಪಿ. ಸಿ. ಜಿ. ಸಿ. ಐ. ಇ. ರವರು ತಾ. ೧೦ನೇ ಸೋಮವಾರ ಬೆಳಗ್ಗೆ ಘಂಟೆ ೮-೧೫ಕ್ಕೆ ಇಲ್ಲಿಗೆ ಚಿತ್ತೈಸಿದರು. ಪ್ರಭುಗಳವರನ್ನು ಸ್ವಾಗತೋಪಚಾರಗಳಿಂದ ಎದುರ್ಗೊಳ್ಳುವದಕ್ಕೆ ಇಲ್ಲಿ ಪೇಟೆಯನ್ನು ಬಹು ಅಂದವಾದ ರೀತಿಯಿಂದ ಧ್ವಜಪತಾಕೆ ತೋರಣಾದಿಗಳನ್ನು ಕಟ್ಟಿ ಅಲಂಕರಿಸುವದರಲ್ಲಿ ಇಲ್ಲಿಯ ಪ್ರಸಿದ್ಧ ಪುರುಷರಾದ ಮ॥ ರಾ॥ ಎ. ಶ್ರೀನಿವಾಸ ಭಟ್ಟರೂ, ಮ॥ ರಾ॥ ಎಚ್. ವಿಠ್ಠಲ ವೆಂಕಟ್ರಮಣಯ್ಯ ಮತ್ತು ಎಚ್. ವಿಟ್ಠಲರಾವ್ ಇವರುಗಳು ಮುಂದಾಳುಗಳಾಗಿದ್ದರು. ಇಲ್ಲಿಯ ಶ್ರೀ ವಿಠೋಬ ದೇವಸ್ಥಾನದ ಮೆನೇಜರ್ ಮ॥ ರಾ॥ ಸುಬ್ಬಯ್ಯ ಕರ್ಣಹೆಗ್ಗಡೆಯವರು ಮತ್ತು ಪೇಟೆಯ ವ ಆಸುಪಾಸಿನ ನಿವಾಸಿಕರು ಕೂಡಾ ಧ್ವಜಪೋಷಗಳೊಡನೆ, ಪ್ರಭುಗಳವರನ್ನು ಸ್ವಾಗತ ಮಾಡಿಕೊಂಡಾಗ ಪ್ರಭುಗಳವರು ೫ ನಿಮಿಷ ಮೋಟರು ಬಂಡಿಯನ್ನು ನಿಲ್ಲಿಸಿದರು. ಆಗ ನಮ್ಮ ಡಿಸ್ಟ್ರಿಕ್ಟ ಕಲೆಕ್ಟರರವರಾದ ಬಹುಮಾನಪಟ್ಟ ಎಮ್. ಇ. ಕೌಚ್‌ಮೇನ್ ದೊರೆಗಳವರು ಮ॥ ರಾ॥ ಸುಬ್ಬಯ್ಯ ಕರ್ಣ ಹೆಗ್ಗಡೆರವರ ಪರಿಚಿತಿಯನ್ನು ಪ್ರಭುಗಳವರಿಗೆ ತಿಳಿಸಿದರು. ಪ್ರಭುಗಳವರು ಇಲ್ಲಿಯ ಮ॥ ರಾ॥ ಹೆಗ್ಗಡೆಯವರ ಮತ್ತು ಪೇಟೆಯ ಪ್ರಜಾಜನರ ರಾಜಭಕ್ತಿಗೆ ಸಂತೋಷಪಟ್ಟರು. ನಂತರ ಪ್ರಭುಗಳವರು ಮೋಟರು ಭಂಡಿಯಲ್ಲಿ ಉಡ್ಪಿಗೆ ತೆರಳಿದರು.

~~~~~

ಪುತ್ತೂರು:— ನಮ್ಮ ಸಂಸ್ಥಾನದ ಗವರ್ನರ ದೊರೆಗಳವರು [illegible]ರಿಗಾಗಿ ಮಡಿಕೇರಿಗೆ ಪ್ರಯಾಣ ಮಾಡುವ ವದಂತಿ ಬಂದದ್ದರಿಂದ ತಾ. ೯ನೇ ದಿನ ನಮ್ಮ ಪೇಟೆಯ ರಸ್ತೆಗಳು, ಮನೆಗಳು [illegible]ವಾಗಿ ಇಡಲ್ಪಟ್ಟದ್ದವು. ನಮ್ಮಿಯಿಂದ ಗವರ್ನರ್ ದೊರೆಗಳು ಹೋಗುವ ವರೆಗೆ ಪೋಲೀಸಿನವರ ಬಂದೋಬಸ್ತಿಯು ಟೋಲುಗೇಟಿನ ವರೆಗೆ ರಸ್ತೆಯಲ್ಲಿ ಬಹು ಚಲೋದ್ದಾಗಿತ್ತು. ಪೇಟೆಯು ಧ್ವಜಪತಾಕೆಗಳಿಂದಲೂ, ತೋರಣಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ತಾ. ೧೦ರಲ್ಲು ದೊರೆಗಳವರನ್ನು ನೋಡುವವರನ್ನು ಎರಡು ತುಕಡಿಗಳಾಗಿ ವಿಭಾಗಿಸಿ ಪೋಲೀಸಿನವರು, ಸರಕಾರಿ ಉದ್ಯೋಗಸ್ಥರು [illegible] ಲೋಕಲ್ ಬೋರ್ಡ್ [illegible] [illegible] ಉಪಾಧ್ಯಾಯರೂ, ವಿದ್ಯಾರ್ಥಿಗಳು [illegible] ರಾ॥ ಮೋಕದಮ್ [illegible] ತೋರಣಗಳಿಂದ ಅಲಂಕರಿಸಿದ [illegible]

ಸಾಲಾಗಿ ನಿಂತಿದ್ದರು. ಮೋಟರ್ ಗಾಡಿ [illegible] ಬರುತ್ತಲೇ ಪೋಲೀಸಿನವರು ಸೆಲ್ಯೂಟ್ ಮಾಡಿದರು. ತಾ. ೧೦ನೇ ಬೆಳಗ್ಗೆ ೧೦ ಘಂಟೆಗೆ ಫೊನೊಗ್ರಾಫ್ ರಾಗಮಾಲೆಯು ರಾಜಗೀತವನ್ನು ಹಾಡುವದಕ್ಕೆ ಆರಂಭಿಸುವಷ್ಟರ ಒಳಗೆ ಮೋಟರ್ ಗಾಡಿಯು ನಿಲ್ಲದೆ ಮುಂದರಿಸಿಯೇ ಹೋಯಿತು. ೨ನೇ ತುಕಡಿಯವರು ಇಲ್ಲಿಯ ತಾಲೂಕ್ ಬೋರ್ಡು ಮೆಂಬರರು ೫ ಸಾವಕಾರ ಮ. ರಾ. ರಾ. ಜನಾರ್ಧನ ಭಟ್ಟರು ಮತ್ತು ಪುರುಷೋತ್ತಮ ಶಾನಭಾಗ ಕಂಪೆನಿಯವರ ಧ್ವಜಪತಾಕೆಗಳಿಂದಲೂ, ತೋರಣಗಳಿಂದಲೂ ಅಲಂಕರಿಸಿದ ತೋರಣಗಳ ಚಪ್ಪರದ ಬಳಿ ಕಲವು ವಕೀಲರೂ, ಸಾವುಕಾರರೂ, ಊರ ನಿವಾಸಿಕರೂ ಮತ್ತು ಗವರ್ನಮೆಂಟ ಹುಡುಗಿಯರ ಶಾಲಾ ಉಪಾಧ್ಯಾಯನಿಯರೂ ವಿದ್ಯಾರ್ಥಿಗಳೂ ಧ್ವಜಪತಾಕೆ ಹೂಗಳು ಹಿಡಕೊಂಡು ಸಾಲುಸಾಲಾಗಿ ನಿಂತಿದ್ದರು. ದೊರೆಗಳ ಮೋಟರು ಗಾಡಿಯನ್ನು ಇಗರ್ಜಿ ಬಳಿ ಕಂಡ ಕೂಡಲೆ ರಾಜಗೀತೆಯನ್ನು ಶಾಲಾ ಮಕ್ಕಳು ಹಾಡಿದರು. ದೊರೆಗಳು ಕೇಳಿ ತಮ್ಮ ಮೋಟರು ಗಾಡಿಯನ್ನು ಸಾವುಕಾರ ಜನಾರ್ಧನ ಭಟ್ಟರು ಧ್ವಜಪತಾಕೆ ವ ತೋರಣಗಳಿಂದ ಅಲಂಕರಿಸಿದ ಚಪ್ಪರಕ್ಕೆ ತಲ್ಪದೊಡನೆ ಮೋಟರು ಬಂಡಿಯನ್ನು ನಿಲ್ಲಿಸೋಣಾಯಿತು. ಸಣ್ಣ ಮಕ್ಕಳಿಂದ ದೊರೆಗಳವರಿಗೆ ಪುಷ್ಪ ಮಾಲೆಗಳು ಹಾಕುವಾಗ್ಯೆ ನಗಾಡಿ ನಗಾಡಿ ತಲೆ ಬಗ್ಗಿಸಿದರು. ಅನಂತರ ಶಾಲಾ ಹೆಣ್ಣು ಮಕ್ಕಳ ವ ಶಾಲೆ ವ ರೋಮನ್ ಕೆಥೋಲಿಕರ ಇಗರ್ಜಿ ವಿಷಯ ಶಾಲಾ ಹೆಡ್ ಮಿಸ್ಟ್ರೆಸ್ ತೆರೆಜಿ ಮಿನೆಜೆಸ್ ಮತ್ತು ವಕೀಲ ಮ. ರಾ. ರಾ. ಬಿ. ವೆಂಕಟಕೃಷ್ಣ ರಾವ್ ಇವರನ್ನು ಮಾತನಾಡಿ ತಮ್ಮ ಸಂತೋಷವನ್ನು ಶಾಲಾ ಮಕ್ಕಳಿಗೂ ಕೂಡಿದವರಿಗೂ ಸುಖವಾಗಲೆಂಬ ಅಭಿವಂದನವನ್ನು ಹೇಳಿ ಮೋಟರ್ ಗಾಡಿಯನ್ನು ಮುಂದರಿಸುವಾಗ ವಕೀಲ ವೆಂಕಟ ಕೃಷ್ಣ ರಾಯರು ಹಿಪ್ ಹಿಪ್ ಹುರ್ರೆ ಎಂಬ ಜಯ ಘೋಷವನ್ನು ಹೇಳಿದೊಡನೆ ಸರ್ವರೂ ಆರ್ಭಟಿಸಿದರು. ಜನಸಂದಣಿಯಲ್ಲದೆ ಮಂಗ್ಳೂರಿನವರಿಗಿಂತಲೂ ಈ ಚಪ್ಪರದಲ್ಲಿ ನಿಂತವರಿಗೆ ದೊರೆಗಳವರು ನೋಡಲಿಕ್ಕೆ ಸಿಕ್ಕಿದ್ದಕ್ಕೆ ದೊಡ್ಡ ಸಂತೋಷವಾಯಿತು. ಇದಲ್ಲದೆ ನಮ್ಮ ತಾಲೂಕಿನ ಮಾರ್ಗವಾಗಿ ಗವರ್ನರು ದೊರೆಗಳವರು ಬಂದದ್ದು ಇದು ಪ್ರಥಮ ಸರ್ತಿ ಆಗಿರುವುದು. ಇದೇ ರೀತಿ ಗವರ್ನರ ದೊರೆಗಳವರನ್ನು ನೋಡುವ ಬಗ್ಗೆ ಹಳ್ಳಿ ಹಳ್ಳಿಗಳ ಜನರು ಅಲ್ಲಲ್ಲಿ ನಿಂತು ಮೋಟರ್ ಗಾಡಿಯನ್ನು ಕಾಯುತ್ತಾ ನಿಂತಿದ್ದರು.

ಇದೇ ತಿಂಗಳ ತಾ ೮ರ ವರೆಗೆ ಸುಬ್ರಮಣ್ಯ ಕುಲ್ಕುಂದದ ಜಾನುವಾರು ಸಂತೆಗೆ ಒಟ್ಟಿಗೆ ೧೭,೩೧೪ ಜಾನುವಾರುಗಳು ಬಂದಿರುತ್ತವೆ. ಈ ವರ್ಷ ಜಾನುವಾರು ಕ್ರಯ ರೂಪಾಯಿ ೨೧೫೧— ೧೨—೦ ವಸೂಲು ಆಗಿದೆಯೆಂದೂ ತಿಳಿದು ಬರುವದು. ಕಳದ ವರುಷ ಇಷ್ಟೇ ವರೆಗೆ ೧೭,೧೬೧ ಜಾನುವಾರುಗಳು ಮಾತ್ರ ಬಂದಿದ್ದವು.

ಇದೇ ತಿಂಗಳ ತಾ ೭೮ ವರೆಗೆ ೧೬೧ ರಾಟಿ ೧೩೩ ಸೆಂಟ್ಸು ಮಳೆ ಬಿದ್ದಿರುವದು.

ನಮ್ಮ ತಾಲೂಕು ತಹಶೀಲದಾರರವರು ರಜೆಯಿಂದ ಸವಣೂರು ಸುಬ್ರಮಣ್ಯಕ್ಕೆ ಹೋಗಿರುವರು.

~~~~~

ಬಂಟವಾಳ. ಮಹಾಮಾನ್ಯರಾದ ಗವರ್ನರ ದೊರೆಗಳವರ ಆಗಮನವು ಇಲ್ಲಿ ಇದೇ ತಾ. ೧೦ರಲ್ಲು ಪ್ರಾತಃಕಾಲ ೭-೪೦ ಮಿನಿಟುಗಳಿಗೆ ನಿರೀಕ್ಷಿಸಲ್ಪಟ್ಟಿತು. ದೊರೆಗಳವರೊಡನೆ ಜಿಲ್ಲಾ ಕಲೆಕ್ಟರ ದೊರೆಗಳವರೂ ಪೋಲಿಸು ಸುಪರಿಂಟೆಂಡೆಂಟರವರೂ ಮೋಟೊರ್ ಬಂಡಿಯಲ್ಲಿದ್ದರು. ಗವರ್ನರರು ಇಲ್ಲಿಗೆ ಇದುವರೆಗೆ ಬಂದುದು ಇದೇ ಪ್ರಥಮ ಬಾರಿಯಾಗಿದ್ದುದರಿಂದಲೂ ಯುಷ್ಟ ಸಂಬಂಧ ರೀತಿಯ ಬ್ರಿಟಿಷರ ವಿಜಯಧ್ವಜಕ್ಕೆ ತಮ್ಮ ಕೃತಜ್ಞತೆಯನ್ನು ಪ್ರತ್ಯಕ್ಷ ಸಮರ್ಪಿಸಲೆಳಸಿದ ಇಲ್ಲಿಯ ಪ್ರಜಾಜನರಿಗೆ ಅತ್ಯನುಕೂಲವಾಗಿದ್ದುದರಿಂದಲೂ ಪಟ್ಟಣವೆಲ್ಲವೂ ಮಂಟಪಗಳಿಂದಲೂ ಬಾವುಟಗಳಿಂದಲೂ ತೋರಣಗಳಿಂದಲೂ ಅತಿ ಸುಂದರವಾಗಿ ಕಂಗೊಳಿಸಲ್ಪಟ್ಟಿದ್ದಿತು. ದೊರೆಗಳವರು ಕೋಆಪರೇಟಿವ್ ಸೊಸೈಟಿಯ ಬಳಿ ಒಂದೆರಡು ಮಿನಿಟು ಇದಕ್ಕೆ ಮೊದಲೇ ಬಿನ್ನವಿಸಿಕೊಂಡಂತೆ ತಂಗಿಕೊಂಡು, ಇಲ್ಲಿಯ ಶಾಖೆಯ ಅಧ್ಯಕ್ಷರಾದ ರಾ॥ ಕೆ. ಕೃಷ್ಣರಾಯರೊಡನೆ ಸಂಘದ ಏಳಿಗೆ, ವಹಿವಾಟಗಳು ವ ಮೆಂಬರರ ಸಂಖ್ಯೆ ಕುರಿತಾಗಿ ವಿಚಾರಿಸಿಕೊಂಡು ಸದುತ್ತರಗಳಿಂದ ಸಂತೋಷಪಟ್ಟರು. ಅನಂತರ ಶ್ರೀ ತಿರುಮಲ ಟೆಂಪಲ್ ಸೆಕೆಂಡರಿ ಶಾಲಾ ಬಳಿ ಕಟ್ಟಿಸಲ್ಪಟ್ಟ ಚಪ್ಪರದ ಬಳಿಗೆ ಸವಾರಿಯನ್ನು ಚಿತ್ತೈಸಿ ಅಲ್ಲಿ ಆಗಲೇ ಬಿನ್ನವಿಸಿಕೊಂಡಂತೆ ಐದು ಮಿನಿಟುಗಳ ಪರ್ಯಂತರ [illegible] ತಂಗಿದರು, ಶ್ರೀ ದೇವರ [illegible] [illegible]

ನಡೆವ ವ ಇನ್ನು ಮುಂದಕ್ಕೆ ನಡೆವ ವರ್ತಮಾನಗಳನ್ನು ಕುರಿತು ಸಂತಸಗೊಂಡರು. ಮುಂದಣ ವ್ಯವಸ್ಥೆಗಳು ವಿಚಾರಣೆ ಮಾಡಲ್ಪಡುವ ಕಾಲದಲ್ಲಿ ಯಥೋಚಿತವಾಗಿ ವಿವೇಚಿಸಲ್ಪಡುವುದೆಂದ ಸಹಾನುಭೂತಿಯೊಡನೆ ಅಪ್ಪಣೆ ಕೊಡಿಸಿದರು. ಅದೇ ಕುರಿತು ರಾ॥ ನಾರಾಯಣ ಚಿದ್ಬುಲಾಗರವರೂ ಅರಿಕೆಮಾಡಿಕೊಂಡರು. ಪ್ರಜಾಕರ್ತೃತ್ವದಿಂದುಂಟಾದ ಇಂತಹ ವಿದ್ಯಾಸಂಘಗಳಿಗೆ ಸರಕಾರದ ದಯಾದೃಷ್ಟಿಯು ಇದ್ದೇ ಇರುವುದು. ಇದಲ್ಲದೆ ಈ ಊರಿನ ಅನ್ಯ ವಿದ್ಯಾಶಾಲೆಗಳ ಕುರಿತಾಗಿಯೂ ವಿಚಾರಿಸಿಕೊಂಡು ಬಾಲಕ ಬಾಲಕಿಯರಿಂದ ಹೂಮಾಲೆಗಳನ್ನು ಸ್ವೀಕರಿಸಿ ರಾಜಗೀತವನ್ನು ಮಕ್ಕಳು ಹಾಡುತ್ತ ಜಯಧ್ವನಿಮಾಡಲು ಮುಂದಕ್ಕೆ ಪ್ರಯಾಣವನ್ನು ಬೆಳಸಿದರು.

ಮಿಶನ್ ಶಾಲೆಯ ಇದಿರು, ರಾ॥ ಪ್ರಭುಗಳ ಮನೆ ಇದಿರು, ಕಚೇರಿ ಸಮೀಪ, ಡಾಕ್ಟರರ ಮನೆ ಇದಿರು, ಮಜೀದಿ, ಪೋಸ್ಟಾಫೀಸು, ಮಿಷಿಲ್ಲಾ ಶಾಲೆ ಇತ್ಯಾದಿ ಸ್ಥಳದಲ್ಲಿದ್ದ ತೋರಣ ಶೃಂಗಾರವನ್ನು ಕಾಣುತ್ತ ನದಿಯನ್ನು ದಾಟಿ ೮ ಗಂಟೆಗೆ ಪಾಣೆಮಂಗಳೂರಿಗೆ ತಲುಪಿದರು. ಅಪೂರ್ವ ದಯೆಯಿಂದ ಈ ರೀತ್ಯಾ ನಮ್ಮೊಡನೆ ಉಳಿದು ಯಥೇಚ್ಛ ಪರಿಚಯವನ್ನಿತ್ತ ಮಾನ್ಯ ದೊರೆಗಳವರ ಭೇಟಿಯನ್ನು ಯಾವತ್ಕಾಲಕ್ಕೂ ಬಂಟವಾಳದಲ್ಲಾರೂ ಮರೆವಂತಿಲ್ಲ. ಶ್ರೀ ದೇವರು ಅವರಿಗೆ ಮಂಗಳವನ್ನುಂಟುಮಾಡಲಿ!

~~~~~

HOUSE TO RENT.

~~~~~

ಬಲ್ಮಠ ಹೊಸ ರಸ್ತೆಯಲ್ಲಿ ಡಾಕ್ಟರ ಪೀಟರ್ಸ್‌ರವರ ಬಾಬ್ತು ಮನೆಯು ಬಾಡಿಗೆಗೆ ಕೊಡಲಾಗುವದು. ಬಾಡಿಗೆ ತಿಂಗಳೊಂದಕ್ಕೆ ರೂ. ೧೦ ಮಾತ್ರ. ಮನೆಯು ಮಾರ್ಗದ ಬದಿಯಲ್ಲಿರುವದಲ್ಲದೆ, ಬಾವಿ ವಗೈರೆ ಮನೆಯ ಸಮೀಪವೇ ಇರುವದರಿಂದ ಬಹಳ ಅನುಕೂಲತೆಯುಳ್ಳದ್ದಾಗಿರುತ್ತದೆ.

~~~~~

ಜೀನಸು ಧಾರಣೆ. (ರಖಂ)

ಅವ್ವಲ್ ಮುಸ್ಕಿ ಅಕ್ಕಿ .	5 — 6 — 0	5 — 11 — 0
ದುಯಂ ,, ,, .	5 — 3 — 0	5 — 6 — 0
ಸುಗ್ಗಿ ,, .	5 — 0 — 0	5 — 3 — 0
ಗಾಡಿ ಸುಗ್ಗಿ ,, .	4 — 11 — 0	4 — 12 — 0
ಗುಡ್ಡು ,, .	5 — 0 — 0	5 — 2 — 0
ದುಯಂ ಗುಡ್ಡು ,, .	4 — 11 — 0	4 — 12 — 6
ಅವ್ವಲ್ ಬೆಳ್ತಿಗೆ ,, .	5 — 8 — 0	5 — 10 — 0
ಗುಡ್ಡು ಬೆಳ್ತಿಗೆ ,, .	4 — 12 — 0	5 — 0 — 0
ರಂಗೂನು ಬೆಳ್ತಿಗೆ ಗೋಣಿ ೧ರ	9 — 0 — 0	9 — 6 — 0
ಗೋದಿ ಗೋಣಿ ೧ರ ...		14 — 4 — 0
ಹುರುಳಿ ಗೋಣಿ ೧ರ ...		8 — 10 — 0
ಕಡಲೆ ಗೋಣಿ ೧ರ. ...		11 — 0 — 0
ತೊಗರಿ ಗೋಣಿ ೧ರ ...		12 — 0 — 0
ತೊಗರಿ ಬೇಳೆ ಗೋಣಿ ೧ರ.	12 — 0 — 0	15 — 0 — 0
ಉದ್ದು ಗೋಣಿ ೧ರ ...		10 — 8 — 0
ಊರು ಬೆಲ್ಲ ಖಂಡಿ ೧ರ ...		56 — 0 — 0
ಉಪ್ಪು ಗೋಣಿ ೧ರ .		4 — 4 — 0
ಕೊಬ್ರಿ ಖಂಡಿ ೧ರ .	70 — 0 — 0	80 — 0 — 0
ಕೊಬ್ರಿ ಹಿಂಡಿ ಖಂಡಿ ೧ರ		26 — 8 — 0
ಎಳ್ಳಿಂಡಿ ಖಂಡಿ ೧ರ		32 — 8 — 0
ಕೊಬ್ರಿ ಎಣ್ಣೆ ಮುಡಿ ೧ರ		5 — 11 — 0
ಎಳ್ಳೆಣ್ಣೆ ಮುಡಿ ೧ರ		7 — 0 — 0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ		6 — 0 — 0
ಮೋರಿಸ್ ಸಕ್ಕರೆ ಮುಡಿ ೧ರ		4 — 0 — 0
ಕಾಫಿ ಖಂಡಿ ೧ರ.	175 — 0 — 0	200 — 0 — 0
ಬೀಗೋಟು ಖಂಡಿ ೧ರ.	116 — 0 — 0	118 — 0 — 0
ಕಾಂಬ್ರಿ ಕಡು ಮುಡಿ ೧ರ		17 — 0 — 0
,, [illegible]		22 — 0 — 0
[illegible]		[illegible] — 8 — 0
[illegible]		[illegible] — 0 — 0
[illegible]		[illegible] — 0 — 0

ಮುಳಿಯಿಲ್‌ರವರ ದಿವ್ಯಾವಧಗಳು.

ಮಸ್ತಕಾಮೃತ ತೈಲ—ಕುಡ್ತೆ 1ಕ್ಕೆ ಕ್ರಯ 10 ಆಣೆ. ಇದು ಎಲ್ಲಾ ತರದ ಶಿರೋರೋಗಿಗೆ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

.....................ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವುದರಿಂದ ನನ್ನ ಮುದೀ ಮೆದುಳು ಯೌವ್ವನ ಪ್ರಾಯದಲ್ಲಿರುವದು. ಈ ದಿವ್ಯ ತೈಲ ಸಹಾಯವಿಲ್ಲದೆ [illegible] ನಾನು ಕೆಲಸಮಾಡಲಾರೆನು; ನನ್ನ ನೇತ್ರೇಂದ್ರಿಯಗಳು ವಿಶ್ರಮಿಸವು.

ರೆವೆರೆಂಡ್ ಇ. ಸೋನ್ಸ್,
ಮುಲ್ಕಿ.

ತಾ. 15—4—13.

ಮುಳಿಯಿಲ್ಸ್ ಹೇರ್ ಓಯಿಲ್—ಕ್ರಯ 12 ಆಣೆ. ಕೂದಲಿಗೆ ಅಮೃತದಂತಿರುವ ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ. ಪಿ. ಮೂಲಕ ರವಾನಿಸಿರಿ.

ಮಿಸಿಸ್. ವೈ. ಕುರಿಯಾನ್,
ಗ್ರೀನ್‌ವಿಲ್ಲಾ, ಕಲ್ಲಿಕೋಟೆ.

ತಾ. 23—5—13.

............ಮುಳಿಯಿಲ್ಸ್ ಹೇರ್ ಓಯ್ಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು. ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ಅವಶ್ಯ ತ್ವರೆಯಲ್ಲಿ ರವಾನಿಸಿರಿ.

ಮಿಸ್. ಎಸ್. ಸೋನ್ಸ್,
ಸ್ಕೂಲು ಮಿಸ್ಟ್ರೆಸ್, ಮಂಗಳೂರು.

21ನೇ ಅಕ್ಟೋಬರ 1913.

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ. ಇದು ಒಳ್ಳೇ ಗುಣಕರವೆಂಬದಾಗಿ ಹೇಳುವರೆ ಅನುಮಾನವಿಲ್ಲ.

ಎ. ಪೊಕ್ರು ಹೆಗ್ಗಡೆ,
ಕುಕ್ಕುಂಜೆ, ಕಾರ್ಕಳ.

ತಾ. 13—6—13.

ವಯೊಲೆಟ್ ಹೇರ್ ಓಯ್ಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆವೇದನೆಯು ಗುಣಪಡುವದು. ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ. ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಮೊಮ್ಮಗಳಿಗೆ ತಮ್ಮಿಂದ ತಕ್ಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು. ಹೆಚ್ಚಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ.

M. JACOBI,
IId. Clerk, CALICUT.

4—7—13

ವಿಳಾಸ:— **ಮುಳಿಯಿಲ್ ಎಂಡ್ ಸನ್ಸ್**, ಕಾಸರಗೋಡು, ದ. ಕ.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ದ್ವಿಟೊನಿಲ್ಲಿಂಗ್
2. ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು.

ತರಿಸಿರಿ! ಓದಿರಿ!!

ವಿಕಟಪ್ರತಾಪನೆಂಬ

ಮಾಸ ಪತ್ರಿಕೆ.

ಎಂತಹ ಚಿಂತೆಯಲ್ಲಿರುವವರಿಗೂ ನಗುಬರುವಂತೆ ಹಾಸ್ಯರಸದಿಂದ ಕೂಡಿದ ಸಚಿತ್ರವೂ, ವಿಚಿತ್ರವೂ ಆದ ವಿಷಯಗಳು ಇದರಲ್ಲಿ ಮುದ್ರಿಸಲ್ಪಡುವದು! ತಿಂಗಳಲ್ಲೂ ಪ್ರಕಟವಾಗುವದು! ಇದರ ವಾರ್ಷಿಕ ಚಂದಾ ವಿ. ಪಿ. ಮೂಲಕ ಮುಂಗಡ ಒಂದೇ ರೂಪಾಯಿ. ಚಂದಾದಾರರಾಗುವವರಿಗೆ 90 ಪುಟಗಳನ್ನೊಳಗೊಂಡ ಯಯಾತಿ ಚರಿತ್ರಂ ಎಂಬ ಪುಸ್ತಕವು ಉಚಿತವಾಗಿ ದೊರೆಯುವದು.

ವಿಕಟಪ್ರತಾಪ ಆಫೀಸ್,
[illegible] ರೋಡ್.

ಹೊಸ ಗ್ರಂಥಗಳು.

ಬೆಲೆ ಕಡಿಮೆ! ಓದುವದಕ್ಕೆ ಆನಂದ!!

ಮಂಜುಘೋಷಾಶೃಂಗಾರಾದ್ಭುತ ಕಥೆ.

ಇದು ಶೃಂಗಾರ ರಸಭರಿತವಾದ ಕಾದಂಬರಿ ಕಥೆಯು. ಇದರಲ್ಲಿ ಮಂಜುಘೋಷೆಯು ತನಗೆ ಎಂಥ ಸಂಕಟ ಬಂದರೂ ಸಹ ಎದೆಗುಂದದೆ ತನ್ನ ಪತಿಯಾದ ವಸಂತ ಮಾಧವನೊಡನೆ ವನದಲ್ಲಿ ಸಂಚರಿಸಿ, ಆ ಮೇಲೆ ಪತಿಯನ್ನಗಲಿ, ಪುತ್ರನನ್ನಗಲಿ, ಅತಿ ಕಷ್ಟಕ್ಕೆ ಗುರಿಯಾಗಿ, ಜಗದೀಶ್ವರನ ಪಾದಾರವಿಂದದಲ್ಲಿ ಭಕ್ತಿಯನ್ನಿಟ್ಟು ವರ್ತಿಸಿದ್ದರಿಂದ ಪರಮೇಶ್ವರನು ಕರುಣಿಸಿ ಪತಿ, ಸುತ, ಮಾತಾಪಿತೃಗಳ ದರ್ಶನಮಾಡಿಸಿದನು ಎಂಬ ವಿಷಯ ಗರ್ಭಿತವಾದದ್ದಿದ್ದು ಕೇವಲ ತಿಳಿಗನ್ನಡದಿಂದ ಮುದ್ರಿಸಲ್ಪಟ್ಟಿದೆ. ಇದರ ಪ್ರಥಮ ಮುದ್ರಣವು ಮೂರೇ ತಿಂಗಳಲ್ಲಿ ಮುಗಿದುಹೋದುದರಿಂದ ಇದರ ಗುಣವು ಎಷ್ಟರ ಮಟ್ಟಿಗೆ ಇರುವದೆಂಬದು ಓದುವವರಿಗೆ ತಾನೇ ಕಂಡುಬರುವದು ಈಗ ದ್ವಿತಿಯ ಮುದ್ರಣವು ಬೆಲೆಗೆ ಸಿದ್ಧವಾಗಿದೆ. ಕ್ರಯ ೮ ಆಣೆ.

ಹಾತೀಮತಾಯಿ ಕಥೆ.

ಇದು ಕೇವಲ ಪರೋಪಕಾರ ದಿಗ್ದರ್ಶನ ವಿಷಯಕವಾದದ್ದಿದ್ದು ಪ್ರತಿಯೊಬ್ಬನು ಅನುಕರಣೆಯ ಮಾಡಲಿಕ್ಕೆ ಯೋಗ್ಯವಾಗಿದೆ. ಇದರಲ್ಲಿ ಕಥಾ ನಾಯಕನಾದ ಹಾತೀಮನು, ಕಥಾನಾಯಕಿಯಾದ ಹುಸೇನಬಾನು ಎಂಬವಳ ಏಳು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಹೇಳಿ, ಆಕೆಯನ್ನು ಮುನೀರಷಹನೆಂಬ ರಾಜಪುತ್ರನಿಗೆ ವಿವಾಹಮಾಡಿಸಿದನೆಂಬ ಸಂದರ್ಭವು ವರ್ಣಿಸಲ್ಪಟ್ಟಿದೆ ಈ ಕಥೆಯು ಹಿಂದೂಸ್ಥಾನಿ, ಮಹಾರಾಷ್ಟ್ರ, ಭಾಷೆಗಳಲ್ಲಿ ಪ್ರಚುರವಾಗಿ ಲಕ್ಷಾವಧಿ ಪ್ರತಿಗಳ ಖರ್ಚಾಗಿ ಹೋದದ್ದನ್ನೂ, ಹೋಗುತ್ತಿರುವದನ್ನೂ ಕಂಡು, ಕನ್ನಡ ಭಾಷೆಯಲ್ಲಿ ಭಾಷಾಂತರ ಮಾಡಿಸಿ, ವಿಕ್ರಯಕ್ಕೆ ಸಿದ್ಧಮಾಡಲ್ಪಟ್ಟಿದೆ. ಕ್ರಯ ೮ ಆಣೆ.

ವಿಷ್ಣುಶರ್ಮ ಪಂಚತಂತ್ರ ಕಥೆಗಳು.

ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ಸರ್ವಾಂಗ ಸುಂದರವಾಗಿದ್ದು, ಅದರಂತೆಯೇ ತಿಳಿಗನ್ನಡದಲ್ಲಿ ಮಿತ್ರಭೇದ, ಸುಹೃಲ್ಲಾಭ, ಸಂಧಿವಿಗ್ರಹ, ಲಬ್ಧನಾಶ, ಅಸಂಪ್ರೇಕ್ಷ್ಯಕಾರಿತ್ವವೆಂಬ ಐದು ತಂತ್ರಗಳನ್ನು ಒಳಗೊಂಡಿದೆ. ಇದರಲ್ಲಿ ವಿಷ್ಣುಶರ್ಮನಿಂದ ಬೋಧಿತರಾದ ಉರ್ವರು ರಾಜಪುತ್ರರು ಸನ್ಮಾರ್ಗವರ್ತಿಗಳಾದ ಸಂಗತಿಯನ್ನೂ ಅಲ್ಲಲ್ಲಿ ಕಥಾ ಸಂದರ್ಭಾನುಸಾರವಾಗಿ ಹೇಳಿದ ನೀತಿಪರವಾದ ಸಂಸ್ಕೃತ ಶ್ಲೋಕಗಳೂ, ಅವುಗಳ ಟೀಕೆಯು ಸಹಿತವಾಗಿದ್ದು ಸುಬೋಧವಾಗಿರುವ ಉಪಕಥೆಗಳನ್ನೂ ಒಳಗೊಂಡದ್ದಾಗಿದೆ. ಈ ಗ್ರಂಥ ವಾಚನದಿಂದ ಪ್ರತಿಯೊಬ್ಬ ಮನುಷ್ಯನು ಸನ್ಮಾರ್ಗವರ್ತಿಯಾಗುವನೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಈ ಗ್ರಂಥವು ಕನ್ನಡ ಭಾಷೆಯಲ್ಲಿ ನೂತನವಾಗಿ ಪ್ರಕಟವಾಗಿದೆ. ಕ್ರಯ ೮ ಆಣೆ.

ಮೋಹನಾಂಗಿಯ ಕಥೆ.

ಈ ಕಥೆಯು ವಾಚಕರು, ಓದಿದರೆ ಉಲ್ಲಾಸವನ್ನುಂಟುಮಾಡುತ್ತದೆ. ಮೋಹನಾಂಗಿಯು ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವದರ ದೆಸೆಯಿಂದ, ತನಗೆ ಎಂಥಾ ವಿಪತ್ತು ಬಂದಾಗ್ಯೂ, ಭಗವಂತನ ಅನುಗ್ರಹದಿಂದ ಪಾರಾಗಿ ತನ್ನ ಭರ್ತನನ್ನು ಕೂಡಿದಳು. ಇದರಿಂದ ಸ್ತ್ರೀಯರಿಗೂ ಪುರುಷರಿಗೂ ಸಹ ನೀತಿಯನ್ನುಂಟುಮಾಡುವುದು. ಕ್ರಯ ೪ ಆಣೆ.

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜೋತಿಷ್ಯ ಗ್ರಂಥಗಳು, ವೈದ್ಯಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವ ಮತ ಗ್ರಂಥಗಳು, ನಾಟಕಗಳು, ಕನ್ನಡ ಸಂಸ್ಕೃತ ಗ್ರಂಥಗಳು ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೊ ಏಜಂಟ್, [illegible]

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವು ಪ್ರಕಟವಾಗುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ [illegible] ಉಂಟುಮಾಡುವಂಥ ಚಟುವಟಿಕೆಯ ಲೇಖಗಳು [illegible] ತರಗತಿಯ ಈ ಪತ್ರವನ್ನು [illegible]

[illegible]

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ಪ್ರಿಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ		12-0-0	ಅರಗಜ	ತೊಲೆ 1ಕ್ಕೆ		2-0-0
ಅಂಬರ್ ಬತ್ತಿ	,,	,,	6-0-0	B ಅರಗಜ	,,	,,	1-0-0
ಕಸ್ತೂರಿ ಬತ್ತಿ	,,	,,	3-0-0	ಕಸ್ತೂರಿ ಬಿಲ್ಲೆ	,,	,,	2-0-0
ಜವಾಜಿ ಬತ್ತಿ	,,	,,	2-0-0	ಜವಾಜಿ ಬಿಲ್ಲೆ	,,	,,	1-0-0
ಘೃಣಾಗಿನ ಬತ್ತಿ	,,	,,	1-8-0	ಕೇಸರಿ ಬಿಲ್ಲೆ	,,	,,	0-8-0
ಪನ್ನೀರ್ ಬತ್ತಿ	,,	,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ			0-4-0
ಮಸಾಲಾ ಬತ್ತಿ	,,	,,	0-6-0	ದಶಾಂಗ ಡಬ್ಬಿ 1ಕ್ಕೆ			0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು

ತಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

THE BOMBAY LIFE ASSURANCE CO. LTD.

Estabhedlis 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

"There can be no doubt that the Policy Contracts are well secured".

Chairman:—The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co Ltd., The Tata Mills Co. Ltd., Managing gent of Messrs. Marsland Price & Co. Ltd., and fellow of the Bombay University.

Actuary:—George King Esq. F. F. A., F. I. A., London.)

Medical Referee —Dr. R. Row, M. D. D. Sc. London.)

Managing Director:—Framrose R. Joshi, Justice of the Peace, The Honorary Presidency Magistrate & etc,

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin.

ಮುಂಬಯಿ ಲ್ಯಾಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(೧೯೦೮ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಬಗ್ಗೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್‌ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೋಲಿಕ್ ಮಾರ್ಸ್ ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು.

ಎಕ್ಚುಯುಯರಿ:—ಮಿ। ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ್ ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್).

ಮೆನೇಜಿಂಗ್ ಡ್ಯಾರೆಕ್ಟರ್:—ರಾ। ಫ್ರೆಮ್‌ರೋಜ್ ಆರ್. ಜೋಶಿ ಓನರೆರಿ ಪ್ರೆಸಿಡನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು, ಧಾರಾಳವಾದ ಕಮಿಶನ್ ಕೊಡೋಣಾಗುವದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್.

[illegible]

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ

ಜೀವನ (ಹಾರುವಿಕೆ), ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಶಾಸ್ತ್ರಜ್ಞರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವವು ರಕ್ತಮಿತಿ ಸ್ಥಿತಿ)ವೆಂದೂ ನಿರ್ಧರಿಸಿರುವರು. ರಕ್ತದಾಧಿಕ್ಯಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡೆಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಫುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಇವೇ ಮೊದಲಾದ ಸ್ವತ್ವಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಆದನೆ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಉತ್ಪಾದಿಸಿಕೊಂಡಿರುತ್ತದೋ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವೀರ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರೋಕ್ತ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಚತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತೆಗೆದುಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಒಟ್ಟಿಗೆ ಒಂದೇ 4ಜ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು

ಕರ್ನಾಟಕ ವನೌಷಧಾಲಯ ಶಿರಸಿ.

ಔಷಧಗಳ ಗುಣದ ಬಗ್ಗೆ ಡಾಕ್ತಾರ ಮುಂತಾದವರ ಕಡೆಯಿಂದ ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ.

೧. ರೋಗನಾಶಕ. ರಕ್ತ, ಧಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೦ ಟಿ. ಬಿ. ಸಹ ಕ್ರಯ ರೂ. ... ೨—೪—೦

೨. ಪ್ರವಾಳ ಕ್ಷೀರ ಅಮೃತಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ಧಕ ಗುಳಿಗೆ ೪೨ ಕ್ರಯ ರೂ. ೨—೪—೦

೩. ಗರ್ಮಿ ರೋಗನಾಶಕ ಗುಳಿಗೆ. ೭ ದಿವಸದಲ್ಲಿ ಖಚಿತ ಗುಣ ೪೦ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ. ... ... ೩—೪—೦

೪. ಹಾಕಿಕಜ್ಜಿನಾಶಕ ಮಲಮು. ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦

೫. ವಾತನಾಶಕ ತೈಲ. ಯಾವದೇ ತರದ ವಾತವಿದ್ದರೂ ಗುಣ. ಕುಪ್ಪಿ ೧ಕ್ಕೆ ಕ್ರಯ ರೂ. ... ... ೧—೪—೦

೬. ಭೃಂಗಾಮಲಕಾದ್ಯ ತೈಲ. ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ. ಕುಪ್ಪಿ ೧ಕ್ಕೆ ಕ್ರಯ ರೂ. ... ... ೧—೪—೦

೭. ಜಂಬೀರ ತೈಲ ಮೇಲಿನಂತೆ ಗುಣ. ಕುಪ್ಪಿ ೧ಕ್ಕೆ ಕ್ರ. ರೂ. ೧—೨—೦

೮. ಮೂಲವ್ಯಾಧಿ ಹರಚೂರ್ಣ. ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦

೯. ಕಫದಮ್ಮುಹರ ಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦

೧೦. ಇಸುಬುರುತ್ತಿ ಮಲಮು ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦

೧೧ ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು.... ... ೧—೪—೦

೧೨. ಮದನೋದ್ಭವ ಚೂರ್ಣ ಡಬ್ಬಿ ೧ಕ್ಕೆ ರೂ. ... ೧—೨—೦

೧೩. ಅಮೃತಪಾಕ (ವೃದ್ಧನಾದರೂ ಸಶಕ್ತನಾಗುತ್ತಾನೆ) ಅತ್ಯಂತ ಪೌಷ್ಟಿಕ ಶಕ್ತಿವರ್ಧಕ. ೪೦ ತೊಲೆ ಡಬ್ಬಿ ೧ಕ್ಕೆ ... ೩—೮—೦

೧೪. ಅಮೃತಗುಟಿ ಅಗ್ನಿವೃದ್ಧಿಕರ ಪಿತ್ತಕಫನಾಶಕ ಜ್ವರಗಡ್ಡೆ ಅಸ್ಥಿಗತಜ್ವರ ನಾಶವಾಗಿ ಶಕ್ತಿ ಬರುತ್ತದೆ. ದಮ್ಮು ಕೆಮ್ಮು ಗುಣವಾಗುತ್ತದೆ. ಗುಳಿಗೆ ೪೨ರ ಕ್ರಯ ರೂ. ... ೨—೦—೦

ಈ ಶಿವಾಯ ಇನ್ನೂ ಅನೇಕ ಔಷಧಗಳು ಶಿಕ್ಕುತ್ತವೆ. ರೋಗದ ಲಕ್ಷಣ ಪೂರ್ಣವಾಗಿ ತಿಳಿಸಿದರೆ ಯೋಗ್ಯ ಕಿಮ್ಮತಿಗೆ ಉತ್ತಮ ಔಷಧಗಳು ರವಾನಾಗುವದು.

ಪತ್ತೆ:—ಆರ್. ಯಸ್. ವಸ್ತು ಕಾಪ, ವೈದ್ಯಭೂಷಣ,

[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಲಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ. ಎಮ್. ನಾಥ್ ಮತ್ತು ಕಂಪೆನಿ,

ವೇಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸಿಯ ಜ್ವರ ಮುಂತಾದ ಎಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯು ಇದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*

Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಹಾರ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

[illegible] ಒಂದು ಪರೀಕ್ಷಿಸಿರಿ!

[illegible]

ಡೋಂಗರೆ

ಇವರ

ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ, ಎಲ್. ಎಲ್. ಬಿ. ಹೆಡ್ ಮಾಸ್ತರ ಹೈಸ್ಕೂಲು ಜುನಾಗಡ ಇವರು ಬರೆದದು:

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದೆಂದು ನನಗೆ [illegible] ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

[illegible] 0-4-0

K. T. Dongre & Co., [illegible]

[illegible]

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ **ಔಷಧವಾಗಿದೆ.**

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, **ಉಸುರುಕಟ್ಟುವದು ಕಡಿಮೆ ಯಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು** ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ **ನಿವಾರಣೆಯಾಗುವದು.**

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರೆ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd. 1888. ಸ್ಥಾಪನೆ 188೮.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳೆತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦–೨೫ ವರ್ಷಗಳ ಹಳೆತ, ಮೈಮನೆ ಮಾಡಿಕೊಂಡಿದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲಾ

ಇದರಲ್ಲಿ ಪಾರಜವಿಲ್ಲಾ.

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ಕಾಲ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲೆಯು. ಕಿಂಮತ್ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತೆಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪನಿ, ಗಿರಗಾಂವ ನಂ. ೪ ಮುಂಬಯಿ.

Canarese Novels Etc.

ಕನ್ನಡ ಪುಸ್ತಕಗಳು.

ಮ|| ರಾ|| ರಾ|| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.		ರೂ. ಆ.
ಬಂಗವಿಜೇತ ಹೊಸ ನಾವಿಲ್	1–4	ಕಮಲಾ ಕಾಂತ ದ್ವಿ. ಮು.	0–2
ದುರ್ಗೇಶನಂದಿನಿ ಸರ್ವೋತ್ಕೃಷ್ಟ ನಾವಿಲ್	1–4	ಲೀಲೆ [ಸಮಾಜ ಚಿತ್ರ]	0–4
ಮೃಣಾಲಿನಿ ಡಿಟೊ 2ನೇ ಭಾಗ	1–8	ಮಾಲತಿ [ಅತಿ ಮನೋಹರ] ದ್ವಿ. ಮು.	0–3
ಸೀತಾರಾಮ (ಇತಿಹಾಸ)	1–8	ರಾಧಾರಾಣಿ [ಕಾದಂಬರಿ] ತೃ. ಮು.	0–3
ವಿಷವೃಕ್ಷ ದ್ವಿ. ಮು.	1–4	ಯುಗುಳಾಂಗುರೀಯ ,,	0–3
ದೇವೀ ಚೌಧುರಾಣಿ ಡಿಟೊ	1–4	ಭ್ರಾಂತಿವಿಲಾಸ ,,	0–8
ರಾಜಸಿಂಹ (ಇತಿಹಾಸ)	1–5	ಸೊಂಪನುಡಿ [ಸ್ತ್ರೀನೀತಿ]	0–2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0–2
ಮೃಣ್ಮಯಿ ಡಿಟೊ 2ನೇ ಭಾಗ	1–1	ವೈಜ್ಞಾನಿಕ ಪ್ರಹಸನ [ನಕಲಿ]	0–4
ಕೃಷ್ಣಕಾಂತನ ಉಯಿಲು	1–0	ಚಿರತ್ನನಾಟಕರತ್ನ ಡಿಟೊ	0–7
ಪೋಲೆಂಡ್, ಬೆಲ್ಜಿಯಮ್ ಮೊದಲಾದ ಪ್ರಾಂತ್ಯಗಳಲ್ಲಿ ಜರ್ಮನರು ಕಾಳಗಗಳಲ್ಲಿ ನಿರಾಶೆಹೊಂದಿರುವಾಗ ತುರ್ಕಿಯು ಜರ್ಮನರನ್ನು ಸೇರಿಕೊಂಡದ್ದರಿಂದ ಪ್ರಯೋಜನವೇನು? ತುರ್ಕಿಯ ಈ ವರ್ತನೆಯಿಂದ ತುರ್ಕಿಗೆ ಹ್ಯಾಗೂ ಹಾನಿಯುಂಟಾಗುವದಲ್ಲದೆ ಕ್ಷೇಮವಿರದು. ಯುದ್ಧದಲ್ಲಿ ಸಹ ಜರ್ಮನಿಗೆ ತುರ್ಕಿಯಿಂದ ಪ್ರಯೋಜನವನ್ನು ಪಡಕೊಳ್ಳುವ ಸಂಭವಗಳಿರವು. ತುರ್ಕಿಯು ಯುದ್ಧವನ್ನು ಸೇರಿದ್ದರಿಂದ ಭೂಮಧ್ಯ ಸಾಗರದಲ್ಲಿ ಒಂದು ವೇಳೆ ಯುದ್ಧದ ಚಳವಳವು ತೋರಿಬರಬಹುದು. ಇಂಗ್ಲೆಂಡು ಮತ್ತು ಹಿಂದೂಸ್ಥಾನದ ಮಧ್ಯವಿರುವ ಜಲಮಾರ್ಗಗಳಲ್ಲಿ ಅಲ್ಪಸ್ವಲ್ಪ ಸ್ವಸ್ಥತೆಯಿಲ್ಲದೆ ಹೋಗಬಹುದೆಂದೆಣಿಸಬಹುದು. ಆದರೆ ಹೀಗೆ ತೋರಿಬರುವ ಅಡಚಣೆಗಳ ನಿವಾರಣೆ ಬಗ್ಗೆ ಭೂಲೋಕದ ನೌಕಾಪಡೆಯನ್ನು ಎದುರಾಡುವಷ್ಟು ಸಾಮರ್ಥ್ಯವುಳ್ಳ ಫ್ರೆಂಚ ಮತ್ತು ಬ್ರಿಟಿಷರ ನೌಕಾವಳಿಯು ಸಿದ್ಧವಿರುವ್ಯದರಿಂದ ಈ ಮಟ್ಟಿಗೆ ತುರ್ಕಿಯಿಂದಾಗಲಿ ಜರ್ಮನಿಯಿಂದಾಗಲಿ ಏನೂ ಮಾಡಲು ಸಾಧ್ಯವಿರದು. ಆದ್ದರಿಂದ ಮಿತ್ರಮಂಡಳಿಯವರ ಒಟ್ಟು ಕೂಡಿದ ನೌಕಾಪಡೆಯು ಡಾರ್ಡನೆಲ್ಸ ಮೇಲೆ ತೋಫುಗಳ ಸುರಿಮಳೆಯನ್ನು ಗರೆಯುತ್ತಲಿವೆ ಎಂತ ಕೇಳುತ್ತೇವೆ. ಜರ್ಮನರ ನೌಕಾಪಡೆಯು ಇಂಥಾ ಸಂದರ್ಭದಲ್ಲಿ ತುರ್ಕಿಗೆ ಸಹಾಯವನ್ನು ಮಾಡಲು ತಾನು ಹೆಲಿಗೋಲೆಂಡ್ ಎಂಬಲ್ಲಿ ಸಿಕ್ಕಿಬಿದ್ದ ಸ್ಥಳದಿಂದ ಹೊರಟಿದ್ದೇ ಆದರೆ ಇಂಗ್ಲೀಷರಿಗೂ ಫ್ರೆಂಚರಿಗೂ ಜರ್ಮನರೊಡನೆ ಸಮುದ್ರಸಮರವನ್ನು ಬೆಳಸುವ ಸರಿಯಾದ ಸಂದರ್ಭವು ದೊರಕಿದ್ದಕ್ಕೆ ಮಿತ್ರಮಂಡಳಿಯವರು ಬಹಳ ಸಂತೋಷ ಪಡುವರು.

ಯುದ್ಧದಲ್ಲಿ ಹೆಚ್ಚಿನ ಪರಿಣಾಮಗಳು ಇನ್ನು ಯಾವ ವಿಧದಲ್ಲಿಯಾದರೂ ಆಗಲಾರವಾದರೂ ತುರ್ಕಿಯು ಜರ್ಮನಿಯನ್ನು ಸೇರಿದ್ದರಿಂದ ಯುದ್ಧರಂಗದ ವಿಸ್ತಾರವು ಬೆಳೆಯುವ ಹೆಚ್ಚಿನ ಸಂಭವವಿದೆ. ಇಂಗ್ಲೆಂಡಿನ ಮೈತ್ರಿಯು ತುರ್ಕಿಗೆ ಈ ತನಕವಿದ್ದುದರಿಂದ ಬಲ್ಕಾನ್ ಸಂಸ್ಥಾನದ ರಾಷ್ಟ್ರಗಳಿಗೆ ತುರ್ಕಿಯ ಮೇಲೆ ಸರಿಯಾಗಿ ಇಷ್ಟವಿದ್ದಂತೆ ಕೈದುಡಿಕಲು ಭೀತಿಯಿತ್ತು. ಇಂಗ್ಲೆಂಡಿನ ಸ್ನೇಹವನ್ನು ತುರ್ಕಿಯು ಕಳಕೊಂಡಿರುವದರಿಂದ ಈ ತನಕ ತಟಸ್ಥರಾಗಿದ್ದ ಇಟೆಲಿ, ಗ್ರೀಸ್ ಮತ್ತು ಬಲ್ಕಾನ್ ಸಂಸ್ಥಾನಗಳು ಇನ್ನು ಬೇಗನೆ ಯುದ್ಧಸನ್ನದ್ಧರಾಗಿ ಮಿತ್ರಮಂಡಳಿಯವರ ಪರವಾಗಿ ತುರ್ಕಿಯನ್ನು ಪೂರ್ಣವಾಗಿ ನಾಶಮಾಡಿ ಬಿಡಬಹುದು. ಈ ಬಗ್ಗೆ ಗ್ರೀಸ್ ದೇಶವು ಎದ್ದುಕೊಂಡು ಸಿದ್ಧವಾಗಿರುವದು. ಬಲ್ಗೇರಿಯಾ ರೊಮೇನಿಯಾ ದೇಶಗಳು ಸುಮ್ಮನಿರಲಾರವು. ಮತ್ತೊಂದು ಕಡೆಯಲ್ಲಿ ಶತ್ರುಗಳೊಡನೆ ಕಠಿಣ ಕಾಳಗಗಳನ್ನು ಮಾಡುತ್ತಿರುವ ಸರ್ವಿಯಾ ದೇಶವು ತುರ್ಕಿಯೊಡನೆ ತನ್ನ ಹಗೆಯನ್ನು ತೀರಿಸದೆ ಬಿಡದು. ಗ್ರೀಸ್, ರುಮೇನಿಯಾ ಮತ್ತು ಬಲ್ಗೇರಿಯಾ ದೇಶಗಳು ರುಶ್ಯ ದೇಶದವರ ಪ್ರೀತಿಯ ಅಪ್ಪರಲ್ಲವಾದರೂ ಜರ್ಮನರಿಗೆ ಇವರು ಎಂದೂ ಅನುಕೂಲವಾಗಿರರು. ಅದಲ್ಲದೆ ಗ್ರೀಸ ಮತ್ತು ಸರ್ವಿಯಾ ದೇಶಗಳೊಳಗೆ ಒಪ್ಪಂದವಿರುವುದರಿಂದ ಗ್ರೀಸು ದೇಶವು ಸರ್ವಿಯಾಕ್ಕೆ ಬೆಂಬಲವನ್ನು ಕೊಡಬೇಕಾಗಿರುತ್ತದೆ. ಇಂಥಾ ವಿದ್ಯಮಾನಗಳಲ್ಲಿ ತುರ್ಕಿಯ ಮುಂದಿನ ಅದೃಷ್ಟದ ಬಗೆಯು ಹೇಗಾಗುವುದೆಂತ ಹೇಳುವುದು ಅಗತ್ಯವೋ?

ಸರ್ವ ಜನರನ್ನು ಸಮತ್ವ ಭಾವದಿಂದ ಕಾಣುವಂಥಾ ಮತ್ತು ಸರ್ವ ಮತಗಳನ್ನು ಉದಾರಭಾವದಿಂದ ಪಾಲಿಸುವಂಥಾ ಬ್ರಿಟಿಷರ ಮೈತ್ರಿಯನ್ನು ಬಿಟ್ಟು ತುರ್ಕಿಯು ರಾಷ್ಟ್ರತ್ವನ್ನೆಯಿಂದ ತನ್ನ ಸ್ವಂತ ಅಭ್ಯುದಯಕ್ಕಾಗಿ ಸರ್ವರ ನಾಶನವನ್ನು ಮಾಡಲು ಅಂಜದ ಜರ್ಮನಿಯನ್ನು ಸೇರಿರುತ್ತದೆ. ಕಟ್ಟುಕಥೆಯಲ್ಲಿಯ ಹಸಿದ ತೋಳವು ಕುರಿಮರಿಯನ್ನು ಕಾರಣವಿಲ್ಲದೆ ಹಿಡಿದು ತಿಂದುಬಿಟ್ಟಂತೆಯೇ ಜರ್ಮನಿಯು ತುರ್ಕಿಯೊಂದಿಗೆ ವರ್ತಿಸುವುದೆಂಬುವದರಲ್ಲಿ ಸಂಶಯವಿರದು.

ಭೂಲೋಕದಲ್ಲಿರುವ ಮಹಮ್ಮದೀಯರಲ್ಲಿ ಹಲವರು ಬ್ರಿಟಿಷ ಮತ್ತು ಫ್ರೆಂಚ ಪ್ರಭುತ್ವದೊಳಗಿರುವರು. ಮಹಮ್ಮದೀಯ [illegible] ತುರ್ಕಿಯನ್ನು ಯುದ್ಧಕ್ಕೆ ಕೆಣಕಿಸಿದ್ದರಿಂದ [illegible] ಕುಂಟಾಗಿ ಏನಾದರೂ ಅಡಚಣೆಗಳು [illegible] ಜರ್ಮನಿಯು ಈ ದುಸ್ಸಾಧನೆಯನ್ನು ಮಾಡಿರಲೂ ಬಹುದು. ಆದರೆ ಜರ್ಮನಿಯ ಪ್ರಯತ್ನವು ಈ ಭಾಗದಲ್ಲಿ ಸಹ ರವಷ್ಟಾದರೂ ಫಲವಿಲ್ಲದೆ ಹೋಯಿತು. ತುರ್ಕಿಯ ಪ್ರಜಾಜನರ ಅಭೀಷ್ಟಕ್ಕೆ ವಿರೋಧವಾಗಿ ತುರ್ಕಿಯು ಈ ಯುದ್ಧವನ್ನು ಸೇರಿರುತ್ತದೆ. ತುರ್ಕಿಯಲ್ಲಿ ಎರಡು ಪಕ್ಷಗಳಿವೆ. ಅಲ್ಲಿಯ ಯುವಕ ಸಂಘದವರಿಗೂ ವೃದ್ಧ ಸಂಘದವರಿಗೂ ಹಲವು ವಿಷಯಗಳಲ್ಲಿ ಅಭಿಪ್ರಾಯ ಭೇದವಿರುತ್ತದೆ. ತುರ್ಕಿಯಲ್ಲಿ ಪ್ರಜಾ ಅನ್ಯೈಕ್ಯದ ಪ್ರಯೋಜನವನ್ನು ಜರ್ಮನಿಯು ನೀಚತನದಿಂದ ಪಡದು ತುರ್ಕಿಯ ಯುವಕ ಸಂಘದವರನ್ನು ತನ್ನ ಪಕ್ಷಕ್ಕೆ ಸೇರಿಸಿಕೊಂಡು ಜರ್ಮನಿಯು ಬಲಾತ್ಕಾರದಿಂದ ಆಯುಧವನ್ನು ತುರ್ಕಿಯ ಕೈಗೆ ತುರುಕಿದೆ. ಬಹುಕಾಲದಿಂದ ತನ್ನ ಕ್ಷೇಮಚಿಂತಕರಾಗಿದ್ದರಂಥಾ ಇಂಗ್ಲೆಂಡಿಗೆ ಎದುರಾಗಿ ನಿಲ್ಲುವುದು ಧರ್ಮವೂ ಅಲ್ಲ, ತನಗೆ ಶುಭಕರವೂ ಅಲ್ಲ. ಜರ್ಮನಿಯು ಸ್ವಾರ್ಥಸಾಧನೆಗಾಗಿ ತುರ್ಕಿಯನ್ನು ಹೀಗೆ ಯುದ್ಧಕ್ಕೆ ಕೆಣಕಿಸಿರುವುದೆಂದೂ ತುರ್ಕಿಯ ಸುಲ್ತಾನರೂ ಮಂತ್ರಿ ಮಂಡಲದವರೂ ತಿಳಿದೇ ಇರುವರು. ಜರ್ಮನಿಗೂ ತುರ್ಕಿಗೂ ದ್ರವ್ಯ ವ್ಯವಹಾರ ಸಮ್ಮಂಧವು ಬಹಳ ವಿಶೇಷವಾಗಿರುವುದು. ತುರ್ಕಿಯ ಸೇನೆಯು ಸಹ ಬಹಳ ಮಟ್ಟಿಗೆ ಜರ್ಮನ ಸೇನಾನಾಯಕರ ಆಧೀನದಲ್ಲಿದೆ. ಆದ್ದರಿಂದ ಜರ್ಮನಿಯು ಪ್ರಜಾಜನರ, ಸುಲ್ತಾನರ, ಮಂತ್ರಿ ಮಂಡಲದವರ ಅಪೇಕ್ಷೆಗೆ ವಿರೋಧವಾಗಿ ತುರ್ಕಿಯನ್ನು ಒತ್ತಾಯದಿಂದ ಯುದ್ಧರಂಗಕ್ಕೆ ದೂಡಿಬಿಟ್ಟಿರುವುದು. ಈ ವಿವರವೆಲ್ಲವನ್ನು ಸರ್ವ ಮಹಮ್ಮದೀಯರೂ ಚನ್ನಾಗಿ ತಿಳಕೊಂಡು ಜರ್ಮನಿಯ ಈ ಲುಚ್ಚತನವನ್ನು ಕಂಡು ಸಿಟ್ಟಿನಿಂದ ರೇಗುತ್ತಿರುವರು. ಬ್ರಿಟಿಷ ಆಧಿಪತ್ಯದಲ್ಲಿ ಸಂತುಷ್ಟರಾಗಿರುವ ಮಹಮ್ಮದೀಯರೂ, ಶಿಕ್ಷಿತರೂ ಏನೂ ತಿಳಿಯಲಾರದ ಅಶಿಕ್ಷಿತ ಸಾಮಾನ್ಯರೂ ಸಹ ಅಲ್ಲಲ್ಲಿ ಸಭೆಕೂಡಿ ತಮ್ಮ ನಿಶ್ಚಲವಾದ ರಾಜಭಕ್ತಿಯನ್ನು ಪ್ರದರ್ಶಿಸಿ ಸ್ವಾರ್ಥಸಾಧನೆಗಾಗಿ ಜಗತ್ತಿನ ಶಾಂತಿಯನ್ನೆಲ್ಲಾ ಕೆಡಿಸುತ್ತಿರುವ ಜರ್ಮನಿಯ ಬಾಹುಬಲವನ್ನು ಸಂಪೂರ್ಣವಾಗಿ ಮುರಿದುಬಿಟ್ಟು ಬ್ರಿಟಿಷರಿಗೆ ಯುದ್ಧದಲ್ಲಿ ಜಯವು ಪ್ರಾಪ್ತಿಸಲೆಂದು ಸರ್ವ ಮಹಮ್ಮದೀಯರು ಈ ಸಂದರ್ಭದಲ್ಲಿ ಜಗದೀಶ್ವರನನ್ನು ಅನುನಿತ್ಯವೂ ಪ್ರಾರ್ಥಿಸುತ್ತಿದ್ದಾರೆ. ಹೀಗೆ ಅಧರ್ಮ ವರ್ತನೆಯ ಜರ್ಮನರ ಪ್ರಯತ್ನಗಳು ಅವರಿಗೇನೇ ಪ್ರತಿಕೂಲವಾಗಿ ಪರಿಣಮಿಸಿಯವೆ.

ಆದ್ದರಿಂದ ತುರ್ಕಿಯು ಯುದ್ಧದಲ್ಲಿ ಪ್ರವೇಶಿಸಿದುದರಿಂದ ಫಲವೇನು?

ಎಮ್ಡನ್ ನಾವೆಯ ನಾಶವು.

ಹಿಂದೂಸ್ಥಾನದ ಕರಾವಳಿಗಳಲ್ಲಿ ವ್ಯಾಪಾರವನ್ನು ಬಹಳವಾಗಿ ನಿರ್ಬಂಧ ಪಡಿಸಿದಂಥಾ ಎಮ್ಡನ್ ಅಥವಾ ಸಾಮಾನ್ಯರು 'ಯಮದಂಡ'ವೆಂತ ಕರೆಯುತ್ತಿದ್ದ ಜರ್ಮನರ ಯುದ್ಧನಾವೆಯು ನಾಶವಾದದ್ದನ್ನು ತಿಳಿದು ವ್ಯಾಪಾರಸ್ಥರೂ ಇತರರೂ ಸಂತೋಷಪಡದೆ ಇರಲಾರರು. ಹುಚ್ಚು ನಾಯಿಯಂತೆ ತಲೆತಪ್ಪಿಸಿಕೊಂಡು ಅತ್ತಿತ್ತ ಅಲೆದಾಡುತ್ತಿದ್ದ ಎಮ್ಡನ್ ನಾವೆಯು ನಾಶ ಹೊಂದಿದ ವರ್ತಮಾನದೊಡನೆ "ಕೊನಿಗ್ಸಬರ್ಗ" ಎಂಬ ಶತ್ರುಗಳ ಇನ್ನೊಂದು ಯುದ್ಧ ನಾವೆಯನ್ನು ಜರ್ಮನಿಯ ಪೂರ್ವ ಆಫ್ರಿಕದ ಪ್ರಾಂತ್ಯಗಳ ಒಂದು ನದಿಯಲ್ಲಿ ಅತ್ತಿತ್ತ ಅಲ್ಲಾಡದಂತೆ ಚೆಟೆಮ್ ಎಂಬ ಬ್ರಿಟಿಷ್ ನಾವೆಯು ಬಂಧಿಸಿ ಬಿಟ್ಟಿರುವುದೆಂಬುದಾಗಿ ತಿಳಿದು ಬಂದದ್ದರಿಂದ ವ್ಯಾಪಾರ ಮೈವಾಟಗಳಿಗೆ ಶತ್ರುಗಳಿಂದ ಬರಬಹುದಾದ ಪ್ರತಿ ಬಂಧಕಗಳು ಇನ್ನು ಇರವು. ಶಾಂತ ಸಾಗರದಲ್ಲಿ ದಕ್ಷಿಣ ಅಮೇರಿಕದ ಚಿಲಿಯನ್ ಕರಾವಳಿಗಳ ಸಮೀಪ ವ್ಯಾಪಾರ ಹಡಗುಗಳಿಗೆ ಆತಂಕ ಉಂಟಾಗ ಬಹುದೆಂಬ ಅನುಮಾನವು ಒಂದು ವೇಳೆ ಕಂಡು ಬಂದರೂ ಇಂಥಾ ಆತಂಕ ನಿವಾರಣೆಗೆ ಬ್ರಿಟಿಷ್ ಸಾಮ್ರಾಜ್ಯದ ಆಸ್ಟ್ರೇಲಿಯಾ ದೇಶದ ಬಲವಾದ ಹಡಗು ಪಡೆ ಇದೆ. ಇದಲ್ಲದೆ ಜಪಾನ ಹಡಗು ಪಡೆಯ ಕೆಲಸವು ತ್ಸಿಂಗ್‌ಟೋ ಸಮೀಪ ಪೂರ್ಣವಾಗುತ್ತ ಬರುತ್ತಿರುವುದರಿಂದ ಶಾಂತ ಸಾಗರವೆಲ್ಲವು ಜಪಾನೀಯ ನೌಕಾಸೇನೆಯ ಕಾವಲಿನಲ್ಲಿ ಇನ್ನು ಸುರಕ್ಷಿತವಾಗಿದ್ದು ಲೋಕದ ವ್ಯಾಪಾರವು ಯಥಾ ರೀತಿ ನಡೆಯುವಂತೆ ಉಪಾಯವಾಗುವುದು.

ಎಮ್ಡನ್ ನಾವೆಯನ್ನು ನಾಶ ಮಾಡಿದ ವಾರ್ತೆಯು ಈ ಪ್ರಕಾರವಾಗಿರುವದು. ಎಮ್ಡನ್ ನಾವೆಯು ಈಚೆಗೆ ತಾನೇ ಬೆನ್ನಿಗೆ ಕಟ್ಟಿಕೊಂಡಿದ್ದ "ಬುರೆಸ್ಕ" ಕಲ್ಲಿದ್ದಲು ನಾವೆಯೊಡನೆ ಕೊಕೊಸ್ ದ್ವೀಪದ ಬಳಿಗೆ ಸಮೀಪಿಸಿತು. ಈ ದ್ವೀಪ ಸಮೂದಾಯದ ಉತ್ತರ ಪೂರ್ವದ ಒಂದು ದ್ವೀಪದಲ್ಲಿದ್ದ "ಸಬ್‌ಮೆರಿನ್" ಸಮುದ್ರದಡಿಯಲ್ಲಿರುವ ತಂತಿಯನ್ನು ಕಡಿದು ಬಿಡುವದೇ ಎಮ್ಡನ್ ನಾವೆಯ ಕೆಪ್ಟನನ ಉದ್ದೇಶವಾಗಿತ್ತು. ಈ ದ್ವೀಪ ಸಮೂದಾಯದಲ್ಲಿ ಕೇಪ್ ಆಸ್ಟ್ರೇಲಿಯನ್ [illegible] ಸ್ಟೇಶನಲ್ಲದೆ ೩೫೦೦ ಮೈಲುಗಳ ದೂರಕ್ಕೆ ಕಳುಹಿಸಬಹುದಾದ ತಂತಿ ಇಲ್ಲದ ಬಲವಾದ ಟೆಲಿಗ್ರಾಫ್ ಸ್ಟೇಶನೂ ಇತ್ತು. ಈ ಸ್ಟೇಶನನ್ನು ಹಾಳುಮಾಡುವದೂ ಸಮುದ್ರದಡಿಯಲ್ಲಿರುವ ತಂತಿಯನ್ನು ಕಡಿಯುವುದೂ ಎಮ್ಡನ್ ನಾವೆಯ ಉದ್ದೇಶವಾಗಿದ್ದು ಅದನ್ನು [illegible] ಬಿಡುವರೆ ೩ ಆಫೀಸರರನ್ನೂ ೪೦ ಸೈನಿಕರನ್ನೂ [illegible] ಸಹಿತ [illegible] ಸಿತು. ಆದರೆ ಈ ಕಾಲದಲ್ಲಿ ಎಮ್ಡನ್ ನಾವೆಯ ಕೆಪ್ಟನ್ ವನ್‌ಮುಲ್ಲರರ [illegible] ದೇವತೆಯು ಅವನನ್ನು ಬಿಟ್ಟು [illegible] ಮಾಡಿದ ಅನುಸಾರ [illegible] ಜರುತ್ತಿರುವ [illegible] ಬಹು [illegible] ಎಮ್ಡನ್

ನಾವೆಯನ್ನು ಕೆಲವು ಸಮಯದಿಂದ ಹುಡುಕುತ್ತಲಿದ್ದ ಬ್ರಿಟಿಷ, ಜಪಾನ್, ಆಸ್ಟ್ರೇಲಿಯ ನಾವೆಗಳಲ್ಲಿ ಒಂದಾದ "ಸಿಡ್ನೆ" ನಾವೆಯು ದೈವವಶಾತ್ ಕೊಕೊಸ್ ದ್ವೀಪಕ್ಕೆ ೫೦ ಮೈಲು ದೂರದಲ್ಲಿ ಮಾತ್ರವಿತ್ತು. ಈ ಸಿಡ್ನೆ ನಾವೆಯು "ಸಹಾಯ" ಎಂಬ ಶಬ್ದವನ್ನು ಹಡಗದಲ್ಲಿದ್ದ ತಂತೀ ಯಂತ್ರ ಮೂಲಕ ಹಿಡಿದು ಅದಷ್ಟು ತೀವ್ರವೇಗದಿಂದ ಮುಂದರಿಯಿತು. ತನ್ಮಧ್ಯೆ ದಡಕ್ಕೆ ಇಳಿದ ಎಮ್ಡೆನ್ ನಾವೆಯ ಆಫೀಸರರು ತಂತೀ ಇಲ್ಲದ ಟೆಲಗ್ರಾಮ್ ಸ್ಟೇಶನನ್ನು ತಕ್ಕಷ್ಟು ಹಾಳು ಪಡಿಸಿದ್ದರು. "ಸಿಡ್ನೆ" ನಾವೆಯು ತಕ್ಷಣ ಎಮ್ಡೆನ್ ನಾವೆಗೆ ಗುಂಡು ಹಾರಿಸಿ ಕದನಕ್ಕೆ ನಿಂತಿತು. ಅತ್ತಕಡೆ ಕೆಳಗಿಳಿದ ಜರ್ಮನ್ ಆಫೀಸರರೂ ಸೈನಿಕರೂ "ಬ್ರುಸಿಕ್" ಕಲ್ಲಿದ್ದಲು ನಾವೆಯನ್ನು ಮುಣುಗಿಸಿ ಕೊಕೊಸ್ ದ್ವೀಪದ ಅವಸನಂಬದಾಗಿ ಕರೆಯಲ್ಪಡುವ ಮಿ। ಸಿಷ್ನ ಕ್ಲನಿಸ್ ರೊಸ್ ಎಂಬವರ ಖಾಸಗಿ ಹಡಗವಾದ "ವೇಶ್ಯ" ಎಂಬ ಹಡಗದಲ್ಲಿ ತಲೆ ತಪ್ಪಿಸಿಕೊಂಡರು. ಇತ್ತಕಡೆ ಸಿಡ್ನೆ ನಾವೆಯು ಎಮ್ಡೆನಿಗೆ ಹೊಡೆದ ೩ ಗುಂಡುಗಳಿಂದ ಎಮ್ಡೆನ್ ನಾವೆಗೆ ಬೆಂಕಿ ಹತ್ತಿಕೊಂಡಿತು. ಅನಂತರ "ಸಿಡ್ನೆ" ನಾವೆಯು ಎಮ್ಡೆನ್ ನಾವೆಯ ಹತಶೇಷರನ್ನು ಉಳಿಸುವ ಕೆಲಸದಲ್ಲಿ ಉದ್ಯುಕ್ತವಾಯಿತು.

ಈ ಕದನದಲ್ಲಿ "ಎಮ್ಡೆನ್" ನಾವೆಯು ಸುಮಾರು ೨೦೦ ಮಂದಿಯನ್ನು ಕಳಕೊಂಡಿತು. ಕೆಪ್ಟನನೂ ಕೈಸರರ ಸೋದರಳಿಯನೂ ಸೆರೆಸಿದ್ದರು. "ಸಿಡ್ನೆ" ನಾವೆಯಲ್ಲಿ ೩—೪ ಮಂದಿ ಮಾತ್ರ ಪ್ರಾಣನಾಶ ಹೊಂದಿದರು.

ಗವರ್ನರ ದೊರೆಗಳವರ ಮುಂದೆ ಪಂಚಮರ ಪ್ರತಿನಿಧಿಗಳ ಕಡೆಯಿಂದ ಚರ್ಚಿಸಲ್ಪಟ್ಟ ವಿಷಯಗಳು.

1\. ಪಂಚಮ ಶಾಲೆಗಳಿಗೆ ಇತರ ಶಾಲೆಗಳಿಗಿಂತಲೂ ವರುಷಾವಧಿ ಗ್ರಾಂಟು ಹೆಚ್ಚಿಗೆ ದರದಲ್ಲಿ ಕೊಡೋಣಾಗಬೇಕು.

2\. ಮಂಗಳೂರು ಟ್ರೈನಿಂಗ್ ಶಾಲೆಯಲ್ಲಿ ಪಂಚಮ ವಿದ್ಯಾರ್ಥಿಗಳನ್ನು ಟ್ರೈನಿಂಗ್ ಬಗ್ಗೆ ಹೇಗೆ ತೆಗೆದುಕೊಂಡು ಪ್ರತ್ಯೇಕ ಬೇಂಚಿನಲ್ಲಿ ಕೂಡ್ರಿಸುತ್ತಾರೋ ಅದೇ ರೀತಿ ಪಂಚಮ ವಿದ್ಯಾರ್ಥಿಗಳನ್ನು ಬೇರೆ ಎಲ್ಲಾ ಶಾಲೆಗಳಲ್ಲಿಯೂ ತೆಗೆದುಕೊಳ್ಳುವಂತೆ ಅಪ್ಪಣೆಯಾಗಬೇಕು.

3\. ಪಂಚಮ ಶಾಲೆಗಳನ್ನು ಅಥವಾ ಇತರ ಪ್ರಾಥಮಿಕ ಶಾಲೆಗಳನ್ನು ಕಟ್ಟಿಸುವ ಪದ್ಧತಿ ಪ್ರಕೃತ ಜಾರಿಯಲ್ಲಿರುವ ರೂಲುಗಳ ಪ್ರಕಾರ ನಕ್ಷೆ ಮತ್ತು ಅಂದಾಜು ಪಟ್ಟಿ ಮಾಡಿಸುವುದಕ್ಕೆ ಇಂಜೀನಿಯರ ಇಲಾಖೆಯವರ ಸಹಾಯ ಪಡಕೊಳ್ಳುವುದು ಬಹಳ ಪ್ರಯಾಸವು. ಆದುದರಿಂದ ಶಾಲೆಯ ಇನ್ಸಪೆಕ್ಟರರೇ ಅವರಿಗೆ ಯುಕ್ತ ಕಂಡಂತೆ ಕಟ್ಟೋಣಗಳ ಗ್ರಾಂಟು ಕೊಡುವಂತೆ ಕ್ರಮ ಮಾಡಬೇಕು.

4\. ಲೋಕಲ್ ಬೋರ್ಡುಗಳು ಪಂಚಮರ ವಿದ್ಯಾಭಿವೃದ್ಧಿ ಕುರಿತು ಮನಸ್ಸು ಕೊಡುವುದು ಕಡಿಮೆ. ಆ ಕುರಿತು ಅವರ ಕಡೆ ರಿಪೋರ್ಟಿನಲ್ಲಿ ಏನೂ ಪ್ರಸ್ತಾಪ ಇರುವದಿಲ್ಲ. ಆದುದರಿಂದ ಪ್ರತೀ ವರುಷವೂ ನಿಶ್ಚಿತ ಹಣ ಪಂಚಮರ ಪ್ರಯೋಜನದ ಬಗ್ಗೆ ಲೋಕಲ್ ಬೋರ್ಡುಗಳು ಖರ್ಚು ಮಾಡಬೇಕೆಂತ ಅಪ್ಪಣೆಯಾಗಬೇಕು.

5\. ಸರಕಾರಿ ಬಾವಿಗಳೆಲ್ಲಾ ಪಂಚಮರ ಉಪಯೋಗಕ್ಕೆ ಸಹಾ ಸಿಕ್ಕುವ ಹಾಗೆ ಮಾಡಬೇಕು. ಪಂಚಮರು ಬಾವಿಗಳಿಗೆ ಮುಟ್ಟುವದಕ್ಕೆ ಆಕ್ಷೇಪ ಕಾಣುವ ಸಂಗತಿಯಲ್ಲಿ ಅಂತಹ ಬಾವಿಗಳ ಸಮೀಪ ಒಂದು ಟಾಂಕಿ ಕಟ್ಟಿಸಿ, ಅದರಲ್ಲಿ ಪಂಚಮರ ಬಗ್ಗೆ ನೀರು ಹಾಕಿಸುವ ಹಾಗೆ ಮಾಡಬೇಕು.

ಗವರ್ನರ ದೊರೆಗಳವರು ಕೊಟ್ಟ ಅಭಯವು.

1\. ವಿದ್ಯಾಖಾತೆಯ ಹಳೇ ಕ್ರಮಗಳ ಮೇರೆಗೆ ಕೊಡುವ ಗ್ರಾಂಟಿನ ದರಕ್ಕಿಂತ ಮತ್ತು ಈಗ ಹೊಸ ಕ್ರಮಗಳ ಪ್ರಕಾರ ದುಬಾರಿಗಿಂತಲೂ ಹೆಚ್ಚು ದರದಲ್ಲಿ ಗ್ರಾಂಟು ಸಿಕ್ಕುತ್ತದೆ.

2\. ಟ್ರೈನಿಂಗ್ ಶಾಲೆಯಲ್ಲಿ ಪಂಚಮರನ್ನು ಸ್ವೀಕರಿಸಿಕೊಂಡಂತೆಯೇ, ಪಂಚಮರನ್ನು ಸ್ವೀಕರಿಸುವ ಸಂಭವ ತೋರುವ ಶಾಲೆಗಳಲ್ಲಿ ಅವರನ್ನು ತೆಗೆದುಕೊಳ್ಳುವಂತೆ ಮಾಡಬಹುದು. ಹೊರತು ಪ್ರತೀ ಮೇಲು ದರ್ಜೆ ಶಾಲೆಗಳಲ್ಲಿ ತೆಗೆದುಕೊಳ್ಳುವಂತೆ ಮಾಡುವದು ಯುಕ್ತವಲ್ಲ. ಇಂತಹ ಸಂಗತಿಯಲ್ಲಿ [illegible] ಮೆಲ್ಲನೆ ಆಗಬೇಕು.

3\. ಶಾಲಾ ಕಟ್ಟೋಣಗಳು ಕಟ್ಟಿಸುವದಕ್ಕೆ ಆಗುವ ಪ್ರಯಾಸದ ಸಂಬಂಧ ರೂ. ೫೦೦೦ರ ಮಟ್ಟಿಗೆ ಗ್ರಾಂಟು ಶಾಲಾ ಇನ್ಸಪೆಕ್ಟರರೇ ಕೊಡುವಂತೆ ಮಾಡಬಹುದು.

4\. ಪಂಚಮರ ಬಗ್ಗೆ ಪ್ರತಿ ವರುಷವೂ ಹಣ ಪ್ರತ್ಯೇಕ ಇಡುವುದು ಯುಕ್ತ ತೋರುವುದಿಲ್ಲ. ಪಂಚಮರಿಗೆ ಅಗತ್ಯವಿರುವ ನಿವೃತ್ತಿಗಳು ಸರಕಾರದವರ ತಿಳುವಳಿಕೆಗೆ ಬರುವುದು ನ್ಯಾಯವಾದುದರಿಂದ ವರ್ಷಾವಧಿ ರಿಪೋರ್ಟುಗಳಲ್ಲಿ ಈ ಕುರಿತು ಲೋಕಲ್ ಬೋರ್ಡು ಪ್ರೆಸಿಡೆಂಟರು ಪ್ರಸ್ತಾಪ ಬರೆಯುವದು ಒಳ್ಳೇದು.

5\. ಪಂಚಮರಿಗೆ ಬಾವಿಗಳ ಪ್ರಯೋಜನ ಸಿಕ್ಕುವಂತೆ ಪ್ರತ್ಯೇಕ ಬಾವಿಗಳು ಅಗತ್ಯ ಕಂಡಂತೆ ಕೊಡೋಣಾಗುತ್ತವೆ. ಪ್ರತಿ ಸಂಗತಿಯ ವಿದ್ಯಮಾನಗಳ ಮೇರೆಗೆ ನಿವೃತ್ತಿ ಸಿಕ್ಕುವಂತೆ ಅಧಿಕಾರಿಗಳು ಮನಸ್ಸನ್ನು ಕೊಡುವ ಹಾಗೆ ಮಾಡಬಹುದು.

ಪಂಚಮ ವಿದ್ಯಾರ್ಥಿಗಳಿಗೆ ಕೊಡಬೇಕಾದ ವೇತನ ಅಥವಾ ಸಹಾಯದ ಹಣ, ಪ್ರತ್ಯೇಕ ಕಾನೂನು ನಿಬಂಧನೆಗಳು ಮೊದಲಾದ ಅರ್ಜಿಯಲ್ಲಿ ಕೇಳಿದ ಇತರ ನಿವೃತ್ತಿಗಳ ಕುರಿತು ಪ್ರಭುಗಳವರು ಚರ್ಚೆ ಮಾಡಲಿಲ್ಲ. ಈ ಕುರಿತು ಮು। ರಾ। ರಾ। ರಂಗರಾಯರಿಂದ ಅಭಿಪ್ರಾಯಗಳನ್ನು ಬರಹ ಮೂಲಕ ಪಡಕೊಂಡಿರುತ್ತಾರೆ.

ಹೊನ್ನಾವರ (ಉತ್ತರ ಕನ್ನಡ) ಸಮಾಚಾರವು.

ಅಯ್ಯಾ,

ವ್ಯಾಪಾರದ ಸ್ಟೀಮರುಗಳ ಚಲಾವಣೆಯು ಈ ಪ್ರಾಂತ್ಯಗಳಲ್ಲಿ ಕ್ರಮವಾಗಿ ಬಿಟ್ಟಿದ್ದುದರಿಂದ ಜಿನಸುಗಳ ಕ್ರಯವು ಜಾಸ್ತಿಯಾಗಿರುವುದು. ಖಂಡಿಯೊಂದಕ್ಕೆ ರೂಪಾಯಿ ೫೦ರ ವರೆಗಿದ್ದ ಮೆಣಸಿನ ಕ್ರಯವು ಖಂಡಿ ಒಂದಕ್ಕೆ ರೂಪಾಯಿ ೫೦ಂ ಕ್ಕೆ ಏರಿತ್ತು. ಕೆಲವು ದಿನಗಳ ಹಿಂದೆ ಮುಂಬಯಿಂದ ಬಂದಂಥಾ ಸ್ಟೀಮರಿನಿಂದ ಇಳಿಸೋಣಾದ ಇತರ ಡಾಗಿನುಗಳೊಡನೆ ಮೆಣಸಿನ ಡಾಗಿನುಗಳು ಕೆಲವಿದ್ದವು. ಕೆಲವು ವ್ಯಾಪಾರಸ್ಥರು ಈ ಮೆಣಸನ್ನು ಖಂಡಿ ಒಂದಕ್ಕೆ ರೂಪಾಯಿ ೬೦ರಂತೆ ಮಾರಬೇಕೆಂಬ ಪ್ರಯತ್ನ ನಡಿಸಿದರು. ಆದರೆ ಸುದೈವವಶಾತ್ ಇಲ್ಲಿಯ ರಾ। ಬಿ. ಎಮ್ ಬಸ್ರೂರ್ ಮತ್ತು ರಾ। ಕೆ. ಎಸ್ ಬಾಳ್ಯರು ಎಂಬವರು ಎಲ್ಲಾ ಮೆಣಸನ್ನು ತೆಗೆದುಕೊಂಡು ಪ್ರಕೃತ ಖಂಡಿ ಒಂದಕ್ಕೆ ರೂಪಾಯಿ ೩೦ರಂತೆ ಮಾರುತ್ತಾರೆ. ಈ ಪುಣ್ಯಾತ್ಮರು ಬಡ ಜನರ ಪರವಾಗಿ ಈ ರೀತಿ ಮೆಣಸಿನ ಕ್ರಯವು ಏರದಂತೆ ಪ್ರಯತ್ನ ಪಟ್ಟದ್ದರಿಂದ ಬಹಳ ಉಪಕಾರವಾಯಿತು.

ಕೆಲವು ದಿವಸಗಳ ಹಿಂದೆ ಸುಂಟರ ಗಾಳಿಯು ಇಲ್ಲಿ ಬೀಸಬಹುದೆಂತ ನಿರೀಕ್ಷಿಸಲ್ಪಟ್ಟದ್ದರಿಂದ ಸರ್ವರೂ ಈ ವಿಷಯದಲ್ಲಿ ಜಾಗರೂಕರಾಗಿದ್ದರು. ಆದರೆ ಇಂಥಾ ಸುಂಟರ ಗಾಳಿಯು ನಮ್ಮ ಮುನ್ಸಿಪಲ್ ಕೌನ್ಸಿಲಿನಲ್ಲಿ ಮಾತ್ರ ಬೀಸಿತು ವಿನಹ ಇತರ ಸ್ಥಾನದ ಕಡೆಯಲ್ಲಾದರೂ ಇಂಥಾ ಗಾಳಿಯು ಇದ್ದಿಲ್ಲ. ಪತ್ರಕರ್ತರೇ, ನಮ್ಮಲ್ಲಿಯ ಜಿಲ್ಲೆ ಕಾರವಾರದ ಹೊರತಾದ ಪಟ್ಟಣಗಳಲ್ಲಿ ಮುನ್ಸಿಪಾಲಿಟಿಯು ಇಲ್ಲದೆ ಹೋದರೂ ಹೊನ್ನಾವರದಲ್ಲಿ ಮುನ್ಸಿಪಾಲಿಟಿಯೊಂದಿದೆ. ಮುನ್ಸಿಪಲ್ ಆಡಳಿತೆಯು ಹೊನ್ನಾವರದಲ್ಲಿ ಜಾರಿಗೆ ಬಂದು ಸಾಧಾರಣ ೨೫ ವರುಷಗಳ ಕಾಲ ಕಳೆದಿರಬಹುದು. ಈ ಮುನ್ಸಿಪಾಲಿಟಿಯ ಚರಿತ್ರೆ ಬಹಳ ಮನೋರಂಜಕವಾಗಿರುವುದು. ಅದನ್ನು ಇನ್ನೊಮ್ಮೆ ನಿಮಗೆ ಬರಕೊಳ್ಳುವೆನು. ಈ ಮುನ್ಸಿಪಾಲಿಟಿಯ ಲೆಕ್ಕಕ್ರಮ ಕೆಲಸಗಳನ್ನು ನಡಿಸುವ ವಿವರ ಎಲ್ಲವೂ ಇತರ ಕಡೆಗಳಿಗಿಂತ ಬಹಳ ವಿಶೇಷವಾಗಿರುವುದು. ಲಾಟೀನುಗಳನ್ನು ಬೆಳಗಿಸುವ ಕ್ರಮವು ರಾತ್ರಿಕಾಲದಲ್ಲಿದ್ದರೂ ಇದರ ಜಾರಿಯು ಬಹಳ ಮಟ್ಟಿಗೆ ಲೆಕ್ಕಪತ್ರದಲ್ಲಿಯೇ ಇರುತ್ತದೆ. ರಸ್ತೆಗಳು ಅಂತರ್ಗೋಳವುಳ್ಳವುಗಳಾಗಿ ಸಾಧಾರಣ ಕಲ್ಲು ಮಣ್ಣು ಬಿದ್ದಿರುವ ಕಾಲುವೆಗಳಂತೆ ತೋರುತ್ತಿವೆ. ಮಳೆಗಾಲದಲ್ಲಿ ಮಾರ್ಗ ತುಂಬ ನೀರು, ಮಾರ್ಗಗಳ ಬದಿಯಲ್ಲಿ ನೀರು ಹರಿಯಲು ತೋಡುಗಳ ಅಗತ್ಯವು ಹೊನ್ನಾವರದ ಮಾರ್ಗಗಳಿಗೆ ಇರದು. ಇತ್ತಲಾಗೆ ಹಲವು ವರುಷಗಳಿಂದ ಈ ಮಾರ್ಗಗಳ ದುರಸ್ತಿಯು ಆಗಿರದು. ಇತ್ತಲಾಗೆ ಒಂದೆರಡು ಮಾರ್ಗಗಳಲ್ಲಿ ದುರುಸ್ತಿ ಕೆಲಸವನ್ನು ಹಿಡಿದಿರುತ್ತಾರೆ. ಇಲ್ಲಿ ಮಾರ್ಗಗಳ ದುರುಸ್ತಿ ಅಂದರೆ ಮಾರ್ಗಗಳ ಬದಿಯಲ್ಲಿ ಕೆಸರು ತುಂಬಿರುವ ತೋಡುಗಳಿಂದ ಮಣ್ಣನ್ನು ತೆಗೆದು ಮಾರ್ಗಗಳ ಅಂತರ್ಗೋಳದಲ್ಲಿ ತುಂಬಿ ಬಿಡುವದು, ಮತ್ತೇನೂ ಇರದು.

ಮುನ್ಸಿಪಲ್ ಕೌನ್ಸಿಲಿನಲ್ಲಿ ಮಾತ್ರ ಸುಂಟರ ಗಾಳಿಯು ಸುಳಿದು [illegible] ದೆನಲ್ಲ. ಅದೇನಂದರೆ ಕಟ್ಟೋಣಗಳ ಮೇಲಿನ ತೆರಿಗೆಯು [illegible] ರುವುದು. ನಿವಾಸಿಕರಲ್ಲಿ ಹಲವರು [illegible] ತೆರಿಗೆಯನ್ನು [illegible] ಮೆ ಮಾಡಬೇಕೆಂದು ಕೌನ್ಸಿಲಿನವರಿಗೆ [illegible] ದಲ್ಲಿ ಹೆಚ್ಚಿನ ಮನೆಗಳು [illegible]

ಹೊಂದಿರುವ ಮನೆಗಳು [illegible] ಮುನ್ಸಿಪಾಲಿಟಿಯಲ್ಲಿ [illegible] ಅಥವಾ [illegible] ವಿಕೃತ [illegible] ನಮೂನೆಯವುಗಳೇ. ದೊಡ್ಡದಾದ ಕಿಟಕಿ ಬಾಗಿಲುಗಳು ಮನೆಗಳಿಗೆ ಇದ್ದು ಗಾಳಿ ಸಂಚಾರ ಸರಿಯಾಗಿ ಒಂದು ಮನೆಯಲ್ಲಿಯಾದರೂ ಇರದು. ಸರಕಾರದ ಆಫೀಸುಗಳು ಇರುವ ಕಟ್ಟೋಣಗಳು ಸಹ ಈ ಸ್ಥಿತಿಯವುಗಳಾಗಿವೆ. ಈ ವರುಷದಲ್ಲಿ ಮಾತ್ರ ತಾಲೂಕು ಆಫೀಸಿನ ಕಟ್ಟೋಣವನ್ನು ಹೊಸ ಮಾದರಿಯಲ್ಲಿ ಕಟ್ಟಲು ಪ್ರಾರಂಭಿಸಿರುತ್ತಾರೆ. ಇಂಥಾ ಕಟ್ಟಡಗಳನ್ನು ನೋಡಿ ಜನರು ಸಹ ತಮ್ಮ ಕಟ್ಟೋಣಗಳನ್ನು ತಿದ್ದಿ ಕಟ್ಟಿಸಬೇಕಾದರೆ ಇನ್ನೂ ಸ್ವಲ್ಪ ಕಾಲವು ಕಳೆದು ಹೋಗಬೇಕು. ಆದ್ದರಿಂದ ಕಟ್ಟೋಣಗಳ ಮೇಲೆ ಇಂಥಾ ವಿದ್ಯಮಾನಗಳಲ್ಲಿ ತೆರಿಗೆಯನ್ನು ಹೆಚ್ಚಿಸಕೂಡದಾಗಿತ್ತು. ಕಟ್ಟೋಣಗಳ ಮೇಲಣ ತೆರಿಗೆಯು ಎಲ್ಲಾ ಸಂಗತಿಗಳಲ್ಲಿ ಒಂದೇ ಪ್ರಕಾರವಾಗಿ ಏರಿಸಲ್ಪಟ್ಟಿರುವುದಿಲ್ಲ. ಈ ಕಂಡಿಕವನ್ನು ತೋರಿಸಿಕೊಟ್ಟು ಅಪೀಲು ಮಾಡಿದ ಕಟ್ಟೋಣದ ಮಾಲಿಕನೊಬ್ಬನ ಮೇಲೆ ಕೌನ್ಸಿಲ ಮೆಂಬರ ರೊಬ್ಬರು ತಮ್ಮ ಕೋಪಾನುಗ್ರಹವನ್ನು ಕಾಣಿಸಿಕೊಂಡದ್ದರಿಂದ ಸಂಟರ ಗಾಳಿಯ ಹುಳಿವಿನ ಉದ್ರೇಕದಿಂದ ಕೌನ್ಸಿಲಿನಲ್ಲಿ ಅಲ್ಲೋಲಕಲ್ಲೋಲ ಉಂಟಾಯಿತು. ಕೌನ್ಸಿಲರರ ಇಂಥಾ ವರ್ತನೆಯು ಸಲ್ಲದೆಂದು ಹೇಳುವವರು ಕೌನ್ಸಿಲಿನಲ್ಲಿ ಯಾರೂ ಇರಲಿಲ್ಲ.

ಕಟ್ಟೋಣಗಳ ಮೇಲೆ ಏರಿಸೋಣಾದ ತೆರಿಗೆ ವಳಿ ಒಂದು ಬೆಳೆಯು ಕೆಟ್ಟುಹೋದುದರಿಂದ ಉಂಟಾದ ನಷ್ಟ, [illegible] ದರ ದೀನಸ್ಥಿತಿ, ಧಾನ್ಯಗಳ ಚಪಾವಾದ ಬೆಲೆಯು—ಇವೆಲ್ಲವನ್ನು ಪರಿಗ್ರಹಿಸಿದರೆ ಇಲ್ಲಿ ಪ್ರಕೃತ ಕಾಲವು ಸುಖಕಾಲವಾಗಿ ಕಂಡುಬಾರದು.

ಹೊಸತಾಗಿ ಏರಿಸಿದ ಕಟ್ಟೋಣಗಳ ತೆರಿಗೆ ದರವನ್ನು ತೆಗೆದುಹಾಕಬೇಕು, ಕೌನ್ಸಿಲರುಗಳ ಚುನಾವಣೆಯು ತಿರಿಗೊಮ್ಮೆ ಆಗಬೇಕು. ಕೌನ್ಸಿಲರರ ಜವಾಬ್ದಾರಿಯನ್ನು ತಿಳಕೊಳ್ಳುವಂಥವರು ಕೌನ್ಸಿಲಿನ ಮೆಂಬರಾಗಿ ಆರಿಸಲ್ಪಡಬೇಕು. ಜನರಲ್ಲಿ ಇಂಥಾ ಆಶೆಯೂ ಉಂಟಾಗಿರುತ್ತದೆ. ಹೊನ್ನಾವರದಲ್ಲಿ ಈ ಮೊದಲು ಹೇಳಿದಂತೆ ಹುಲ್ಲುಛಾವಣಿಯ ಮನೆಗಳು ಹೆಚ್ಚಾಗಿದ್ದರಿಂದ ಬೆಂಕಿಯ ಅಪಘಡಗಳು ಇಲ್ಲಿ ಹೆಚ್ಚಾಗಿವೆ. ಕೆಲವು ವರುಷಗಳ ಹಿಂದೆ ಹೊನ್ನಾವರ ಪೇಟೆಯಲ್ಲಾ ಬೆಂಕಿ ಬಿದ್ದು ಒಂದು ಹಪ್ಪೆಯ ತನಕ ಇದ್ದ ಪೇಟೆಯನ್ನು ನಾಶಮಾಡಿತ್ತು. ಕಳೆದ ಏಪ್ರಿಲ್ ಮೇ ತಿಂಗಳುಗಳಲ್ಲಿ ಸಹ ಕೆಲವು ಮನೆಗಳಿಗೆ ಬೆಂಕಿ ಬಿದ್ದಿದೆ. ಇಂಥಾ ಊರಲ್ಲಿ ಮುನ್ಸಿಪಾಲಿಟಿಯವರು ಒಂದು ನೀರು ಹಾರಿಸುವ ಯಂತ್ರವನ್ನು ಸ್ಥಾಪಿಸಿದ್ದು ಉಚಿತವಾಗಿದೆ.

ಹೊನ್ನಾವರದಿಂದ ಕುಮಟೆಗೆ ಪ್ರಯಾಣಿಕರನ್ನು ಒಯ್ಯಲು ಇತ್ತಲಾಗ ಮೋಟಾರ ಗಾಡಿಗಳ ಏರ್ಪಾಡನ್ನು ಮಾಡಿರುವರು. ಗಾಡಿಗಳ ಚಲಾವಣೆಯು ತೃಪ್ತಿಕರವಾಗಿರುವದು.

~~~~~~

ಪತ್ರವ್ಯವಹಾರ

~~~~~~

ಸ್ವದೇಶಾಭಿಮಾನಿ ಪತ್ರಿಕಾಕರ್ತರೇ,

[illegible] ಲೋಕರಕ್ಷಾಧ್ಯಕ್ಷರಾದ ಪೋಲೀಸಿನವರ ಠಾಣಿನ ಸಮಕ್ಷದಲ್ಲಿ ರಾಜಬೀದಿಯಲ್ಲಿ ಘಂಟಾರಹಿತವಾದ ದ್ವಿಚಕ್ರಿಯಾನೆ ಬೈಸಿಕಲ್ಲನ್ನು ಕುರುಡ ಭಿಕ್ಷುಕನ ಮೇಲೆ ಹಾರಿಸಿದಲ್ಲಿ "ನ್ಯೂಸೆನ್ಸ" ಎಂಬ ಜಿಲ್ಲರೆ ತಪ್ಪಿತವಾಗುವದೋ ಎಂಬ ಸಂಗತಿಯನ್ನು ತಮ್ಮ ಉತ್ಕೃಷ್ಟ ವಾಚಕವೃಂದದಲ್ಲಿ ಕಾನೂನು ತಿಳಿದ ಮಹಾನುಭಾವರು ತಿಳಿಸಿದರೆ ದೀನ ರಕ್ಷೆಯಾಗುತ್ತಿತ್ತು. ಏಕೆಂದರೆ ಪ್ರಕೃತದಲ್ಲಿ ನವ್ಯಾರಲ್ಲಿ ಮೇಲಣ ಸಂದರ್ಭದಲ್ಲಿ ಜಖಮಾದ ಒಡ ಕುರುಡನು ಆಸ್ಪತ್ರೆಯಲ್ಲಿ ಈಗ ಕೆಲವು ದಿವಸಗಳಿಂದ ಔಷಧೋಪಚಾರ ಹೊಂದಿಯೂ ಪೂರ್ಣಗುಣವಾಗದೆ ನರಳುತ್ತಿರುತ್ತಾನೆ. ಕುರುಡು ಕಾಸು ಕೂಡಾ ಇಲ್ಲದ ಕುರುಡರಿಗೆ ಜಖಂ ಆದರೆ ಅದಕ್ಕೆ ಕಾರಣಭೂತನಾದ ಬೈಸಿಕಲ್ ರಥಿಕನ ಮೇಲೆ ತಕ್ರಾರು ಆಗುತ್ತದೋ ಎಂತ ನ್ಯೂಸೆನ್ಸ ಆಕ್ಟನ್ನು ಇನ್ನೂ ಪೋಲಿಸಿನವರು ಮುಗುಚಿ ಮಗುಚಿ ಶೋಧಿಸುತ್ತಿರುತ್ತಾರೆಂತ ಕೇಳಿ ತಮಗೆ ನಿವೇದಿಸಿರುತ್ತೇನೆ.

ಮಂಜೇಶ್ವರ ಕುರುಡ.

ರೋಗಿ ಬಯಸಿದ್ದೇ ವೈದ್ಯ ತರಿಸಿದ.

ಅಯ್ಯಾ ಸ್ವದೇಶಾಭಿಮಾನಿ ಪತ್ರಕರ್ತರೇ,

[illegible] ಸಂಚಿಕೆಯಲ್ಲಿ ಪ್ರಕಟವಾದ "ಆಡುವವರ ಮಕ್ಕಳು ಆಡಬೇಕು, [illegible] ಬೇಡಬೇಕು" ಎಂಬ ಲೇಖನವನ್ನು ಓದಿನೋಡಿ [illegible] ಕೋರ್ಟು ಹಂಪನ ಕಟ್ಟೆಯಿಂದ ರಥಬೀದಿಗೆ [illegible] ಗ್ರಾಮ ಮುನ್ಸೀಫ್ ಕೋರ್ಟಿನಲ್ಲಿ ಸನಿಟರಿ ಆಫೀಸು [illegible] ಸಂಬಂಧ ಪಟ್ಟ ಮೇಲಾಫೀಸರರು ಈ ಏರ್ಪಾಡನ್ನು ಮಾಡಿದ್ದು ಸಮಂಜಸವಾಗಿಲ್ಲವೆಂಬ ಅಭಿಪ್ರಾಯವು ನನ್ನಲ್ಲಿ ಹುಟ್ಟಿ, ತಮ್ಮ ಪತ್ರಿಕೆಯ ಮೂಲಕ ಬರೆಯ ಬೇಕೆಂದಿದ್ದರೂ, ಹಲವು ಕಾರಣಗಳಿಂದ ವಿಳಂಬವಾಗಿ ಹೋಯಿತು. ನಂತರ ಗವರ್ನರ ಧೊರೆಗಳ ಸಂದರ್ಶನೆಯ ಗದ್ದಲವಲ್ಲಿ ಈ ವಿಷಯವನ್ನು ಬರೆಯದೆ ಬಾಕಿ ಇಟ್ಟೆನು. ದೈವವಶಾತ್ ಕಳೆದ ವಾರದ ಪತ್ರಿಕೆಯಲ್ಲಿ "ಆಡುವವರ ಮಕ್ಕಳು ಆಡಬೇಕು, ಬೇಡುವವರ ಮಕ್ಕಳು ಬೇಡಬೇಕು" ಎಂಬ ಲೇಖನವನ್ನು ನೋಡುತಲೇ "ರೋಗಿ ಬಯಸಿದ್ದೇ ವೈದ್ಯ ತರಿಸಿದ" ಎಂಬ ಮಾತು ಸ್ಮರಣೆಗೆ ಬಂತು. ಗ್ರಾಮ ಮುನ್ಸಿಫ್ ಕೋರ್ಟನ್ನು ಮುನಿಸಿಪಾಲಿಟಿಗೆ ದಾನ ಮಾಡಿ, ಸನಿಟರಿ ಆಫೀಸರರ ಸ್ವಾಧೀನ ಕೊಟ್ಟು, ಒಂದು ಮಾಸ ಕಳೆಯುವದರೊಳಗೆ ಪಟ್ಟಣದ ಕೆಲವು ಗೃಹಸ್ಥರಿಗೆ ಪರಿಹಾಸ್ಯದ ಆಮಂತ್ರಣ ಪತ್ರಗಳು ದೊರಕಿದವು. ಒಂದು ವರ್ಷ ಕಳೆಯುವದರಲ್ಲಿ ಈ ಕಟ್ಟೋಣದಿಂದ ಏನೇನು ಆಗಲಿಕ್ಕಿದೆಯೋ, ಪರಮಾತ್ಮನೇ ಬಲ್ಲ!

ಸ್ವಾಮಿಾ, ಅದು ಹಾಗಾಯಿತು. ಇತ್ತಕಡೆ "ಆಮಂತ್ರಿತರಲ್ಲಿ ನಾನೊಬ್ಬ"ರು ಆಮಂತ್ರಿಸಲ್ಪಟ್ಟ ಕಟ್ಟೋಣದ ಒಳಗೆ ಹೋಗುವಾಗ "ಕಟ್ಟೋಣವು ಚೆನ್ನಾಗಿ ಅಲಂಕರಿಸಲ್ಪಟ್ಟು ದೀಪಗಳ ಪ್ರಕಾಶದಿಂದ ಶೋಭಾಯಮಾನವಾಗಿತ್ತು. ಅತಿಥಿಗಳನ್ನು ಸತ್ಕರಿಸ ಪಡೆ ಶಾಂತ ಮೂರ್ತಿರು ಮಾತ್ರ ನಿಂತಿದ್ದರು" ಎಂದು ಬರೆಯುವರು. ಆಫೀಸನ್ನು ಅಲಂಕರಿಸಿ, ದೀಪ ಮೊದಲಾದವುಗಳನ್ನು ಹಚ್ಚಿಡಲು ಕಾರಣವೇನು? ರಾತ್ರಿ ಕಾಲವೂ ಸನಿಟರಿ ಆಫೀಸರರಿಗೆ ಯಾ ಶಾಂತ ಮೂರ್ತಿರಿಗೆ ಈ ಆಫೀಸಿನಲ್ಲಿ ಕೆಲಸವಿದೆಯೋ? ಎಂಬದೊಂದು ವಿಚಾರವು ಹುಟ್ಟಿತು. ಸನಿಟರಿ ಆಫೀಸರರು ಯಾ ಇವರ ಶಾಂತ ಮೂರ್ತಿರು ಹಗಲಲ್ಲಿಯೂ ರಾತ್ರಿಯಲ್ಲಿಯೂ ದೀಪ ಹಚ್ಚಿ ಪಟ್ಟಣದ ಆರೋಗ್ಯ ಸಂಬಂಧವಾದ ಕೆಲಸ ಮಾಡುತ್ತಿರುವದು ಪಟ್ಟಣಿಗರ ಪುಣ್ಯವೆಂದೇ ಹೇಳಬೇಕಾಗಿದೆ. ಸಂತೆ ಪೇಟೆಯ ಮೂಲೆಗಳಲ್ಲಿರುವ ಕಸಕಡ್ಡಿಗಳನ್ನೂ ಕೊಳಕನ್ನೂ ತೋಡಿನಲ್ಲಿ ಹರಿಯುತ್ತಿರುವ ಕೊಳಕು ನೀರನ್ನೂ ಕೆಲವು ಬೀದಿಗಳ ಬದಿಯಲ್ಲಿ ಬಿದ್ದಿರುವ ಮಲ ಇತ್ಯಾದಿಗಳನ್ನು ನೋಡಿದವರೂ, ಪಾಯಖಾನೆಗಳಲ್ಲಿ ತೊಂಬೆಗಳನ್ನು ಸಮಾಧಿಯೂ ಬಾರದೆ ಇರುವದರಿಂದ ಪಾಯಖಾನೆಗೆ ಹೋಗಲು ಉಪಾಯವಿಲ್ಲದೆ ಪೇಚಾಡುವ ಪಟ್ಟಣಿಗರೂ, ಪಟ್ಟಣದ ಸನಿಟರಿಗಳು,—ರಾ ಋ—ರಿಂ [illegible] ತಿನ್ನುವ ಈ ಆಫೀಸರರು—ಇವರ ಕಾಲಿಗೆ ಸಿಗದಿಯೂ ಯಾವ ಕೆಲಸ ಮಾಡುತ್ತಾರೆ ಎಂದು ಕೇಳಲೂ ಬಹುದು. ಈ ಪ್ರಶ್ನೆಗೆ ತಕ್ಕ ಉತ್ತರವು ಪಟ್ಟಣದ ವಾಚಕರೆಲ್ಲರಿಗೆ ಗೊತ್ತಿರುವದರಿಂದ ಇಲ್ಲಿ ಪ್ರತ್ಯೇಕ ಬರೆಯುವದು ಅವಶ್ಯವಿಲ್ಲವೆಂದೆಣಿಸುತ್ತೇನೆ. ಈ ಸಂಬಂಧವಾಗಿ ಮಾಡತಕ್ಕ ಕೆಲಸಗಳು "ಆಮಂತ್ರಿತರಲ್ಲಿ ನಾನೊಬ್ಬ"ರು ಬರೆದ ಲೇಖನದಿಂದ ಮತ್ತಷ್ಟು ಖಾತ್ರಿಯಾಗುತ್ತಾಯಿತು.

ಸ್ವಾಮಿಾ, ಇನ್ನೊಂದು ಮಾತು, ಈ ಗ್ರಾಮ ಮುನ್ಸಿಫ ಕೋರ್ಟ ಕಟ್ಟೋಣದ ಬಗ್ಗೆ ಸರಕಾರದವರು ಕಮ್ಮಿ ಎಂದರೆ ಒಂದೆರಡು ಸಾವಿರ ರೂಪಾಯಿ ಖರ್ಚು ಮಾಡಿರುವರು. ಅದಲ್ಲದೆ ಇದು ಪಟ್ಟಣದ ಮಧ್ಯಸ್ಥವಾಗಿದ್ದು ಸುತ್ತುಮುತ್ತಲಿನ ಗ್ರಾಮಸ್ಥರು ಹೋಗಿ ಬರಲಿಕ್ಕೆ ಸಾಧ್ಯವಾಗುವ ಸ್ಥಳವಾಗಿರುವದು. ಈ ಕಟ್ಟೋಣದಲ್ಲಿ ದಾಖಲಾದ ಮೊಕದ್ದಮೆಗಳ ಸಂಖ್ಯೆಯನ್ನೂ ರಥಬೀದಿಯಲ್ಲಿ ಹಿಂದೆ ಒಂದೆರಡು ಸಲ ಗ್ರಾಮ ಮುನ್ಸಿಫ್ ಕೋರ್ಟ ಇರುವಾಗ ದಾಖಲಾದ ಸಂಖ್ಯೆಯನ್ನೂ ನೋಡಿದರೆ ಗ್ರಾಮ ಮುನ್ಸಿಫ್ ಕೋರ್ಟಿಗೆ ಹಂಪನ ಕಟ್ಟೆಯೇ ಉತ್ತಮ ಸ್ಥಳವೆಂದು ಗೊತ್ತಿಗೆ ಬಾರದಿರದು. ಹೀಗಿದ್ದರೂ ಸನಿಟರಿ ಆಫೀಸರರಿಗೆ ಈ ಕಟ್ಟೋಣವನ್ನು ಬಿಟ್ಟು ಕೊಡಲು ಕಾರಣವೇನು? ಈಗಲಿರುವ ಮುನ್ಸಿಪಲ್ ಆಫೀಸು ಅತಿ ದೊಡ್ಡದಾಗಿರುವುದು. ಆಫೀಸು ಕೆಲಸವೆಲ್ಲಾ ಮೇಲ್ಮಾಳಿಗೆಯಲ್ಲಿಯೇ ನಡೆಯುತ್ತಲಿದೆ. ಕೆಳಗಿನ ಕೆಲವು ಕೋಣೆಗಳು ಖಾಲಿ ಖಾಲಿ ಬಿದ್ದಿರಲು ಸಾಕು. ಅದಲ್ಲದೆ ಮುನ್ಸಿಪಲ್ ಚೇಯರ್ಮೇನರು [illegible] ಸದಾ ಆಫೀಸಿನಲ್ಲೇ ಇರುತ್ತಿದ್ದು ಸನಿಟರಿ ಆಫೀಸರರ ಕೆಲಸಗಳನ್ನು [illegible] ಲಿಕ್ಕಾಗುವ ಈ ಸ್ಥಳವನ್ನು ಬಿಟ್ಟು ಹಂಪನ ಕಟ್ಟೆಯಲ್ಲಿ ಗ್ರಾಮ ಮುನ್ಸಿಫ [illegible] ಗೆಂದು ಕಟ್ಟಿಸಿದ ಈ ಕಟ್ಟೋಣವನ್ನು ಸನಿಟರಿಗಳಿಗೆ [illegible] ಕಟ್ಟೋಣವು ಸನಿಟರಿ ಆಫೀಸರರಿಗೆ ಬಿಟ್ಟು ಕೊಟ್ಟ [illegible] ಕರೆಯಲ್ಪಡುತ್ತಿದ್ದ ಗ್ರಾಮ ಮುನ್ಸಿಫ ಕೋರ್ಟ [illegible] ಕರೆಯಲ್ಪಡುವಂತೆ [illegible]

[illegible]

...ಗೊಟ್ಟು, ಸೆನಿಟರಿ ಆಫೀಸನ್ನು ಮುನ್ಸಿಪಲ್ ಆಫೀಸಿನಲ್ಲಿ ಸೆಕ್ರೆಟರಿಗಳ ಯಾ ಚೇಯರ್ಮೆನರ ಸಮಕ್ಷಮ ಹಾಕಿ, ಈ ಸೆನಿಟರಿ ಆಫೀಸಿನಿಂದ ಪಟ್ಟಣಿಗರಲ್ಲಿ ಉಂಟಾಗಿರುವ ಭಯವನ್ನು ಹೋಗಲಾಡಿಸಬೇಕಾಗಿ ಅಪೇಕ್ಷಿಸುವ,

ಪಟ್ಟಣಿಗ.

ಗ್ರಾಮ ಕೋರ್ಟುಗಳು

ಗ್ರಾಮಕೋರ್ಟು ಕಾನೂನು ಹಲವು ಕೋರ್ಟುಗಳಲ್ಲಿ ಹಲವು ವಿಧವಾಗಿ ಜಾರಿ ನಡೆಯುತ್ತಿದೆ. ಕೆಲವು ಗ್ರಾಮಕೋರ್ಟುಗಳಲ್ಲಿ ಪ್ರತಿವಾದಿಯು ಲೇವಾದೇವಿ ನಡೆದ ಗ್ರಾಮಕೋರ್ಟಿನ ಸರಹದ್ದಿನ ಒಳಗೆ ಇಲ್ಲದೆ ಇತರ ಗ್ರಾಮದಲ್ಲಿ ವಾಸಿಸಿದರೂ ಕೈಫೇತುಗಳು ದಾಕಲು ಮಾಡಿಕೊಂಡು ಡಿಸ್ಟ್ರಿಕ್ಟ್ ಮುನ್ಸಿಪ್‌ಕೋರ್ಟು ಮುಖಾಂತರ ಪ್ರೊಸೆಸ್ ಜಾರಿ ನಡೆಸಿ ವ್ಯಾಜ್ಯಗಳ ಇತ್ಯರ್ಥ ನಡೆಯುತ್ತದೆ. ಇನ್ನು ಕೆಲವು ಗ್ರಾಮಕೋರ್ಟುಗಳಲ್ಲಿ ಪ್ರತಿವಾದಿಯು ಯಾವ ಗ್ರಾಮಕೋರ್ಟಿನ ಸರಹದ್ದಿನಲ್ಲಿ ವಾಸ್ತವಿಸಿರುವನೋ ಆ ಗ್ರಾಮಕೋರ್ಟಿನಲ್ಲಿಯೇ ಕೈಫೇತ ದಾಕಲು ಮಾಡಬೇಕಾಗಿ ಹೇಳಿ ಲೇವಾದೇವಿ ನಡೆದ ಸ್ಥಳದ ಕೋರ್ಟಿನಲ್ಲಿ ಕೈಫೇತು ತೆಗೆದುಕೊಳ್ಳಲು ತಿರಸ್ಕರಿಸುವರು. [illegible] ಪ್ರತಿವಾದಿಯು ಲೇವಾದೇವಿಯು ನಡೆದ ಕೋರ್ಟಿನಿಂದ [illegible] ಮೈಲು ದೂರವಿದ್ದರೆ ಯಾ ಡಿಸ್ಟ್ರಿಕ್ಟ್ ಮುನ್ಸಿಪರ ಕೋರ್ಟಿನ ಪಕ್ಕದಲ್ಲಿ [illegible] ಪ್ರತಿವಾದಿಯ ಮೇಲೆ ಕೈಫೇತು ದಾಕಲು ಮಾಡುವ ಪರವಾದಿಯು [illegible] ಕೋರ್ಟಿಗೆ ಹೋಗಬೇಕಾಗುವದು. ಹೀಗೆ ಹೋಗಿ ವ್ಯಾಜ್ಯ ದಾಕಲು ಮಾಡುವದರಿಂದ ಉಂಟಾಗುವ ಖರ್ಚು ಎಷ್ಟು [illegible] ಗ್ರಾಮಕೋರ್ಟಿನ ಆಕ್ಟಿನ [illegible] ಪ್ರಕರಣ [illegible] ವ್ಯಾಜ್ಯವು ಪ್ರತಿವಾದಿಯು [illegible] ವ್ಯಾಜ್ಯದ ಆರಂಭದ ಕಾಲದಲ್ಲಿ [illegible] ಗ್ರಾಮ [illegible] ಕೋರ್ಟಿನ ಅಧಿಕಾರ ಸರಹದ್ದಿನ ಒಳಗೆ ವಾಸ್ತವಿಸಿರುವನೋ [illegible] ಆ ಗ್ರಾಮಕೋರ್ಟಿನಲ್ಲಿ ವ್ಯಾಜ್ಯ [illegible] ಪ್ರಕರಣ [illegible] ಗ್ರಾಮ ಕೋರ್ಟಿನ [illegible] ಪ್ರತಿವಾದಿ [illegible] ಡಿಸ್ಟ್ರಿಕ್ಟ್ ಮುನ್ಸಿಫರ ಮುಖಾಂತರ ಜಾರಿ ನಡಿಸಬೇಕೆಂದಾಗಿ ಹೇಳೋಣವಾಗಿದೆ. [illegible] ಪ್ರತಿವಾದಿಯು ಲೇವಾದೇವಿ ನಡಿಸಿದ [illegible] ಕೋರ್ಟಿನ ಸರಹದ್ದಿನ ಹೊರಗೆ [illegible] ಲೇವಾದೇವಿ ನಡಿಸಿದ ಸ್ಥಳದ ಕೋರ್ಟಿನಲ್ಲಿ ದಾವಾ [illegible] ಈ ಪ್ರತಿವಾದಿಯು ವಾಸ್ತವ್ಯ ಇರುವ ಕೋರ್ಟಿನಲ್ಲಿ ದಾಕಲು ಮಾಡಬೇಕೆಂದೋ? ಪ್ರತಿವಾದಿಯು ವಾದಿ ಕೂಡ ಲೇವಾದೇವಿ ನಡಿಸಿ [illegible] ಕೋರ್ಟಿನಲ್ಲಿ ದಾವಾ ದಾಕಲು ಮಾಡಬೇಕಾದರೆ ಪ್ರತಿವಾದಿ [illegible] ಬಿನ ಮೇಲೆ ದಾವಾ ದಾಕಲು ಮಾಡ [illegible] ಕಾರಣವೇನು? ಹಲವು ಗ್ರಾಮ ಕೋರ್ಟಿನಲ್ಲಿ ಪ್ರತಿವಾದಿಯು ಬೇರೆ ಗ್ರಾಮ [illegible] ಲೇವಾದೇವಿ ನಡೆದ ಸ್ಥಳದ ಗ್ರಾಮಕೋರ್ಟಿನಲ್ಲಿ ದಾವಾ ತೆಗೆದುಕೊಂಡು ಡಿಸ್ಟ್ರಿಕ್ಟ್ ಮುನ್ಸಿಫರ ಮುಖಾಂತರ ಪ್ರೊಸೆಸುಗಳ ಜಾರಿ ನಡಿಸಿ ವ್ಯಾಜ್ಯಗಳ ಇತ್ಯರ್ಥ ಕಡಿಸಲು ಕಾರಣವೇನ?

ಪುತ್ತೂರು
ತಾ 17-11-1914

ವಿಚಾರಿ

ಅಯ್ಯಾ ಪತ್ರಾಧಿಪರೇ,

ಈ ಕೆಳಗಿನ ವಿಶಯಕ್ಕೆ ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ತುಸ ಸ್ಥಳವನ್ನು ದಯಪಾಲಿಸಬೇಕಾಗಿ ವಿನಯಪೂರ್ವಕದಿಂದ ಬೇಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ನಮ್ಮ ಗೌಡಜಾತಿಯ ಆಚಾರವಿಚಾರ ಅಧಿಕಾರಸ್ಥರೂ, ಸ್ವಜಾತಿಯ ಇತರ ಯೋಗ್ಯರಾದ ಗೃಹಸ್ಥರೂ ಸೇರಿ ಕಳೆದ ೧೯೧೦ರಲ್ಲು ಮರುಳ್ಯ, ೧೯೧೧ರಲ್ಲು ಚೊಕ್ಕಾಡಿ, ೧೯೧೨ರಲ್ಲು ಸುಳ್ಯ, ಈ ಮೂರು ಸ್ಥಳಗಳಲ್ಲಿ ಮೂರು ಮಹಾ ಸಭೆಗಳನ್ನೂ ಅಲ್ಲಲ್ಲಿ ಕೆಲವು ಉಪಸಭೆಗಳನ್ನೂ ಕೂಡಿಸಿ ಸ್ವಜಾತಿಯವರ ಮುಂದಿನ ಅಭಿವೃದ್ಧಿಗೋಸ್ಕರ ಒಂದು ಫಂಡನ್ನು ಸ್ಥಾಪಿಸಿ ಅದಕ್ಕಾಗಿ ವಸೂಲು ಮಾಡಿದ ಅಲ್ಪಸ್ವಲ್ಪ ಚಂದಾ ಹಣದಿಂದ ಖರ್ಚು ಕಳೆದು ಉಳಿದ ರೂಪಾಯಿ ನೂರನ್ನು ಮಾತ್ರ ಪುತ್ತೂರು ಪರಸ್ಪರ ಸಹಾಯಕ ಸಂಘದಲ್ಲಿ ಬಡ್ಡಿಗೆ ಇಟ್ಟಿದ್ದರು. ಕಳೆದ ೧೯೧೩ನೇ ಇಸವಿಯ ಮಹಾ ಸಭೆಯ ವರ್ತಮಾನವಾಗಲೀ ಈ ಚಾಲ್ತಿ ವರ್ಷದಲ್ಲಿ ಜರಗತಕ್ಕ ಮಹಾ ಸಭೆಯ ಪ್ರಸ್ತಾಪಗಳಾಗಲೀ ಇದು ವರೆಗೆ ತಿಳಿದು ಬಾರದ್ದರಿಂದ ಸ್ವಜಾತಿಯ ಕುಲಸ್ಥರು ಆಶ್ಚರ್ಯ ಮತ್ತು ಅನುಮಾನ ಪಡಲು ಕಾರಣವಾಗುತ್ತದೆ.

ಆದ್ದರಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಗೌಡ ಜಾತಿಯ ಆಚಾರ ವಿಚಾರ ಅಧಿಕಾರಸ್ಥರಾದ ಕಟ್ಟೆ ಮನೆಯವರೂ ಸ್ವಜಾತಿಯ ಇತರ ಮಾನ್ಯ ಗೃಹಸ್ಥರೂ [illegible] ಅಂಥಾ ಪಟ್ಟನ್ನು ಸ್ವಲ್ಪ ಸ್ವಲ್ಪವಾಗಿ ಅಭಿವೃದ್ಧಿಗೊಳಿಸುತ್ತಾ ಮುಂದರಿಂದ [illegible] ತುಸ ಹಣವನ್ನಾದರೂ [illegible] ಮಹಾ ಧನವೆಂದೇ [illegible] ಫಂಡಿನಲ್ಲಿ ಇಟ್ಟು ನಮ್ಮ ಸ್ವಜಾತಿಯವರ ಮುಂದಿನ ಏಳಿಗೆಯನ್ನು ಬಯಸುತ್ತಾ ಧರ್ಮ ಕಾರ್ಯಗಳನ್ನು ನೆರವೇರಿಸುತ್ತಾ ಇರುವಂಥಾದ್ದು ಶ್ರೇಯಸ್ಕರವೂ ಹಿತಕರವೂ ಆಗಿರುತ್ತದೆ. ಅಲ್ಲದೆ "ಅಪ್ಪ ನೆಟ್ಟ ಆಲದ ಮರ" ಎಂಬಂತೆ ಹಿರಿಯರು ಪಡೆದ ಮಾನ ಮರ್ಯಾದೆಯು ಎಲ್ಲಿ ಹೋಗುತ್ತದೆ? ನಾವೇಕೆ ಕಷ್ಟ ನಷ್ಟಗಳನ್ನು ಹೊಂದಬೇಕು ಎಂಬದಾಗಿ ಭಾವಿಸಿಕೊಂಡಿದ್ದ ಪಕ್ಷದಲ್ಲಿ ಅಪಕೀರ್ತಿಯೂ ದುಃಖವೂ ಸಂಭವಿಸುವುದರಲಿ ಸಂಶಯವಿಲ್ಲ.

ಪ್ರಖ್ಯಾತರಾದ ಗೌಡ ಜಾತಿಯ ಮುಖ್ಯಸ್ಥರೇ, ಸ್ವಜಾತಿಯ ಇತರ ಮಾನ್ಯ ಗೃಹಸ್ಥರೇ, ನಮ್ಮ ದಯಾಳು ಸರಕಾರದವರು ನಮ್ಮವರ ಬಡಸ್ಥಿತಿಯನ್ನೂ ವಿದ್ಯಾಹೀನತೆಯನ್ನೂ ಮನನ ಮಾಡಿಕೊಂಡು ಇದೇ ಚಾಲ್ತಿ ಇಸವಿಯ ಆರಂಭದಿಂದಲೇ ಗೌಡ ಜಾತಿಯ ಬಾಲಕರಿಗೆ ಎಲಿಮೆಂಟರಿ ಶಾಲೆಗಳಲ್ಲಿ ಪೂರಾ ಸ್ಕೂಲ್ ಫೀಸನ್ನೂ ಮೇಲಿನ ಶಾಲೆಗಳಲ್ಲಿ ಅರ್ಧ ಫೀಸನ್ನೂ ಮಾಫಿ ಮಾಡಿರುತ್ತಾರೆ. ಇದಲ್ಲದೆ ಬಡವರಿಗೆ ಸ್ಲೇಟು ಪುಸ್ತಕ ಕಡ್ಡಿ ಮುಂತಾದ ಉಪಕರಣಗಳನ್ನು ಸಹಾಯಮಾಡುತ್ತಿರುವಾಗ, ನಾವು ಕಣ್ಣು ಮುಚ್ಚಿ ಮಲಗಿಕೊಂಡಿರುವುದು ನ್ಯಾಯವಲ್ಲ. ಇನ್ನಾದರೂ ಈ ನಮ್ಮ ಜಾತಿಯವರ ಉದ್ಧರಣೆ ಬಗ್ಗೆ ಆರಂಭದಲ್ಲಿ ಏರ್ಪಡಿಸಿದ ವಿದ್ಯಾಭಿವೃದ್ಧಿ ಮತ್ತು ಮದ್ಯಪಾನ ವರ್ಜನ ಎಂಬ ಈ ಎರಡು ಸಂಘಗಳನ್ನು ಜಾರಿಯಲ್ಲಿಟ್ಟುಕೊಂಡು ಮುಂದೆ ನಮ್ಮವರೂ ಕೂಡ ಇತರರಂತೆ ಉತ್ತರೋತ್ತರವಾಗಿ ಅಭಿವೃದ್ಧಿ ಹೊಂದುವ ಹಾಗೆ ನಮ್ಮ ಸಂಘವನ್ನು ಸ್ಥಿರಪಡಿಸಿ ವೃದ್ಧಿಗೊಳಿಸುವ ಮುಖ್ಯಸ್ಥರಿಗೂ ಇತರರಿಗೂ ಆಯುರಾರೋಗ್ಯ ಉಂಟಾಗುವ ಹಾಗೆ ಪರಮಾತ್ಮನನ್ನು ಬಯಸುವೆವು.

ನಾನೊಬ್ಬ ಗೌಡ.

ಗುರುಭಕ್ತಿಯೆಂಬ ಹೆಸರಿನ ಪೋಕ್ರಿ ಯುಕ್ತಿ.

ಅಯ್ಯಾ ಪತ್ರಕರ್ತರೇ,

ಕಳೆದ ಹಪ್ತೆಯಲ್ಲಿ [illegible] ಮಾನ್ಯ ಗೃಹಸ್ಥನು ಮೃತನಾದನು. ಆತನ ಸಪಿಂಡಿಕರಣದ ದಿನ ಅನೇಕ ವೈದಿಕರು ಊರಿನಿಂದಲೂ ಪರವೂರಿನಿಂದಲೂ ಬಂದಿದ್ದರು. ಇವರಿಗೆ ಯಾರಿಗೂ ಆಮಂತ್ರಣ ಇರಲಿಲ್ಲ. ದೊಡ್ಡವರಲ್ಲಿ ಸಿಕ್ಕುವ ದಾನ, ಭೋಜನ, ದಕ್ಷಿಣೆ ಇವುಗಳ ಆಶೆಯಿಂದ ಬಂದಿದ್ದರು. ಕರ್ಮಾಂಗ ಮುಗಿದ ಬಳಿಕ ಊಟಕ್ಕೆ ಎಲೆಗಳು ಹಾಕಿ ವೈದಿಕರು ಊಟಕ್ಕೆ ಕೂತುಕೊಂಡರು. ಬಡಿಸಲಿಕ್ಕೆ ತರುವಷ್ಟರಲ್ಲಿ ಒಬ್ಬ ವೈದಿಕನಿಗೆ ಇನ್ನೊಬ್ಬ ವೈದಿಕನ ಮೇಲೆ ಇರುವ ಹೊಟ್ಟೆಕಿಚ್ಚಿನಿಂದಲೋ ಏನೋ ಗಲಭೆಯಾಗಿ ಊರು ವೈದಿಕರಲ್ಲಿ ಒಬ್ಬನು ಎದ್ದು, ಮನೆಯ ಹೆಂಗಸರಿಗೆಂತ ಹಾಕಿದ ಎಲೆಗಳ ಮೇಲೆ ಕೂತುಕೊಂಡನು. ಬಡಿಸಲಿಕ್ಕೆ ತರುವಷ್ಟರಲ್ಲಿ ಊರವರು ಒಂದು ತಂಡು, ಪರವೂರವರು ಒಂದು ತಂಡು, ಹೀಗೆ ೨ ಪಕ್ಷದವರಾಗಿ ಗುಣುಗುಟ್ಟ ಮಾತಾಡಲಾರಂಭಿಸಿದರು. ಆ ದಿನದ ಶ್ರಾದ್ಧಕರ್ತರಲ್ಲಿ ಮೂವರೂ ಏನೂ ಅರಿಯದ ಯುವಕರು. ಈ ತರದ ಗಲಭೆ ಮಾಡುವ ಒಳಸಂಚು ಬೆಳಿಗ್ಗಿನಿಂದ ಕೆಲವು ವೈದಿಕರು ಮಾಡುತ್ತಿದ್ದರೆಂದು ನಂತರ ವಿಚಾರದಿಂದ ತಿಳಿದು ಬಂತು. ಆದರೆ ಮನೆಯವರಿಗೆ ಅಂಥಾ ಸಂಶಯಗಳು ಇರಲಿಕ್ಕೆ ಕಾರಣವಿದ್ದಿಲ್ಲಾ. ಯಾಕಂದರೆ ಇದೇ ಮನೆಯಲ್ಲಿ ಕೆಲವು ತಿಂಗಳ ಮೊದಲು ಆದ ಮದುವೆಗಳಲ್ಲಿ ಇದೇ ವೈದಿಕನು ಪುರೋಹಿತಕ್ಕೆ ಬಂದಾಗ ಸಹಪಂಕ್ತಿಯಲ್ಲಿ ಇವರೆಲ್ಲರೂ ಊಟ ಉಪಚಾರಗಳನ್ನು ಸಾಂಗ್ಯರೀತ್ಯಾ ನಡಿಸಿದವರಾದ ಕಾರಣ ಈಗ ಮಾತ್ರ ಈ ರೀತಿ ಮಾಡ್ಯಾರೆಂದು ಯಾರೂ ಗ್ರಹಿಸಲಿಲ್ಲ. ಆದರೆ ಊಟಕ್ಕೆ ಬಂದ ಬ್ರಾಹ್ಮಣರು ಊಟವನ್ನು ಬಿಟ್ಟು ಎದ್ದು ಹೋದರೆ ಸ್ವರ್ಗಕ್ಕೆ ಹೋಗುವ ಪಿತೃಗಳಿಗೆ ನರಕ ಪ್ರಾಪ್ತಿಯಾಗುತ್ತದೆಂಬ ನಂಬಿಕೆ ಜನಪದದಲ್ಲಿರುವದರಿಂದ ಈ ಸಮಯದಲ್ಲಿ ಇಂತಹ ಗಲಭೆಮಾಡಲಿಕ್ಕೆ ಯುಕ್ತಿ ನಡಿಸಿದ್ದು ಎಂತ ಕಂಡು ಬಂತು. ಯಾವ ಪಕ್ಷದವರು ಎದ್ದು ಹೋದರೂ ನರಕ ಪ್ರಾಪ್ತಿ ತಪ್ಪದು ಎಂಬ ವಿಶ್ವಾಸವು ಹೆಂಗಸರಲ್ಲಿ ಜಾಸ್ತಿ ಇದ್ದದರಿಂದ ಇದರ ಪ್ರಯೋಜನ ಹೊಂದುವ ಉದ್ದೇಶ ಈ ವೈದಿಕರು ಮೊದಲು ಒಮ್ಮೆ ಸಹಪಂಕ್ತಿಯಲ್ಲಿ ಉಂಡು, ಈಗ ಮಾತ್ರ ಭಂಡಾಟ ಮಾಡಿದ್ದು ಎಂತ ಖಂಡಿತವಾಯಿತು. ಜಗಲಿಯಲ್ಲಿದ್ದವರ ಭಂಡಾಟ ಕೇಳಿ ಒಳಗಿದ್ದ ಮೃತನ ಮುದಿ ತಾಯಿಯು ಗೋಳಾಟಕ್ಕೆ ಆರಂಭಿಸಿದಳು. ಆಗ ಶ್ರಾದ್ಧಕರ್ತ ಯುವಕನು ಮುಖ ಬಾಡಿದವನಾಗಿ ಯಾರೋ ಒಬ್ಬ ವಯೋವೃದ್ಧನನ್ನು ಕರಕೊಂಡು ಬಂದು ಭಂಡಾಟ ಮಾಡುವವರ ಹತ್ತರ ಕೆಲವು ಮಾತುಗಳನ್ನು ರಹಸ್ಯದಲ್ಲಿ ಮಾತಾಡಿದ ಕೂಡಲೇ ಗಲಭೆಯು ಶಾಂತವಾಯಿತು. ಎಲ್ಲರೂ ತೃಪ್ತರಾಗಿ ಊಟ ಉಪಚಾರಗಳು ಸಾಂಗ್ಯವಾಗಿ ಆದವು. ಮರುದಿನ ಊರಿಗೆ [illegible] ವೈದಿಕರ ಸಹಪಂಕ್ತಿಯಲ್ಲಿ ಊರು ವೈದಿಕರು ಏನೊಂದು [illegible] ಇಲ್ಲದೆ ಊಟಮಾಡಿದ್ದು ನೋಡಿ ಸಮಸ್ತರು ಆಶ್ಚರ್ಯಪಟ್ಟರು. [illegible] ಈಗ ಇಂಗ್ಲಿಷ್ ಕಲಿಯುವ ಯೌವಕರಿಗೆ [illegible] ವಿಶ್ವಾಸಕ್ಕೆ ಭಂಗ [illegible] ವೈದಿಕರೇ ಕಾರಣ [illegible] ಕಲಿಯುಗ [illegible] ಕಲಿಪುರುಷರು ಯಾರು [illegible]?

[illegible]

ಯುದ್ಧ ಸಮಾಚಾರವು.

ತಾ 13ನೇ ನವಂಬರ.

ಫ್ಲೆಂಡರಿನ ಪಶ್ಚಿಮದಲ್ಲಿ ಹಿಂದೀ ಸೈನಿಕರು ತೋರಿ..ದ ಆಸಕ್ತಿ ಮತ್ತು ಸಾಹಸಗಳಿಂದ ಇಡೀ ಸೇನೆಯು ಬೆರಗಾಗಿ ಹೋಗಿರುವದು. ಗುರ್ಕ ಸೈನಿಕರು ಹಲವು ಸಾರಿ ಜರ್ಮನರ ಮೇಲೆ ಬಿದ್ದು ಅವರನ್ನು ಕಂದಕಗಳಿಂದ ಅಟ್ಟಿದರು ಗುರ್ಕರು ರಾತ್ರಿಕಾಲ ಅಂಬೆಗಾಲಿನಲ್ಲಿ ಹೋಗಿ ಶತ್ರುಗಳ ಮೇಲ್ಬಾಯ್ದು ಅನೇಕರನ್ನು ಕೊಂದು ಸುರಕ್ಷಿತವಾಗಿ ಸೇನಾ ನೆಲೆಗೆ ಹಿಂದೆ ಬಂದು ಸೇರಿರುವರು ಎಂತ ..ಟೈಮ್ಸ್ ಪತ್ರಿಕೆಗೆ ತಂತೀ ಬಂದಿರುವದು

ಶತ್ರುಗಳು ಹಿಂದೀ ಸೈನಿಕರಿಗೆ ಬಹಳವಾಗಿ ಹೆದರಿರುವರು ಗುರ್ಕ ಸೈನಿಕರು ತಮ್ಮ ರೈಫಲ್ ಕೋವಿಗಳನ್ನೂ ಇತರ ಆಯುಧಗಳನ್ನೂ ತೆಗೆದಿಟ್ಟು ರಾತ್ರಿ ಕಾಲ ವೇ..ನೆ ತಮ್ಮ ಕಂದಕಗಳನ್ನು ಬಿಟ್ಟು ಏನೊಂದೂ ಸದ್ದು ಇಲ್ಲದೆ ಜರ್ಮನರ ಕಂದಕಗಳ ಬಳಿ ಸೇರಿ ಜರ್ಮನರನ್ನು ಹತ ಮಾಡುತ್ತಿರುವರು ಹೀಗೆ ಗುರ್ಕರು ರಾತ್ರಿಕಾಲ ಮೇಲ್ಬಾಯ್ದು ಬ್ರಿಟಿಷರಿಗೆ ದಾರಿ ಬಿಡಿಸಿಕೊಡುತ್ತಿರುವರು

ರುಶ್ಯನರು ಪೂರ್ವ ಪ್ರುಶ್ಯದಲ್ಲಿ ಸೋಲ್ಡಾವೋ ಎಂಬ ಪಟ್ಟಣವನ್ನು ವಶಮಾಡಿಕೊಂಡಿರುವರು ವಿಸ್ಟ್ಯುಲದಲ್ಲಿ ಶತ್ರುಗಳು ಇನ್ನೂ ಹಿಂದೆ ಓಡುತ್ತಿರುವರು ಪ್ರಿಜೆಮೈಸ್ಲಿನ ದಕ್ಷಿಣದಲ್ಲಿ ಪುನಃ ಆಸ್ಟ್ರಿಯಾನರ ೧೦೦೦ ಸೈನಿಕರು ಸೆರೆ ಬಿದ್ದಿರುವರು

ನೌಕಾವಳಿ ಸಂಗ್ರಾಮಃ — ಜರ್ಮನರ ಕೊನಿಗ್ಸ್‌ಬರ್ಗ್ ಕ್ರೂಜರ್ ನಾವೆಯು ಜರ್ಮನ ಪೂರ್ವ ಆಫ್ರೀಕದ ರುಫ್ಜಿನದಿಯ ದ್ವಾರದಲ್ಲಿ ಒಳನುಗ್ಗಿದಾಗ ಬ್ರಿಟಿಷರ "ಛಾದ ವ.." ಎಂಬ ಕ್ರೂಜರ್ ನಾವೆಯು ಅದಕ್ಕೆ ಗುಂಡು ಹಾರಿಸಿತು ಕೊನಿಗ್ಸ್‌ಬರ್ಗ್ ನಾವೆಯ ನಾವಿಕರಲ್ಲಿ ಕೆಲವರು ನದಿಯ ದಡದಲ್ಲಿ ಕಂದಕಗಳ ಮರೆ ಹೊಕ್ಕೊಂಡರು ನದಿಯ ಪಕ್ಕದಲ್ಲಿ ತುಂಬಾ ಬೈನಿ ಮರಗಳು ಬೆಳೆದಿರುವುದರಿಂದ ಜರ್ಮನರ ನಾವೆಯಲ್ಲಿ ಆದ ನಷ್ಟವು ತಿಳಿದುಬರಲಿಲ್ಲ ಆದರೆ ನದಿಯ ದ್ವಾರದಲ್ಲಿಯೇ ಕೊನಿಗ್ಸ್‌ಬರ್ಗ್ ನಾವೆಯೊಡನೆ ಇದ್ದ ಕಲ್ಲಿದ್ದಲಿನ ನಾವೆಯನ್ನು ಮುಣುಗಿಸಿ ಬಿಟ್ಟದ್ದರಿಂದ ಕೊನಿಗ್ಸ್‌ಬರ್ಗ್ ನಾವೆಯು ಸೆರೆಬಿದ್ದಂತಾಯಿತು.

ಜೆಡ್ಡದ ನೆರೆಹೊರೆಯಲ್ಲಿ ತುರ್ಕರು ಎಲ್ಲಾ ದೀಪಗಳನ್ನು ನೊಂದಿಸಿ ಬಿಟ್ಟಿರುವರು.

ಕೌಕಾಸಸಿನಲ್ಲಿರುವ ರುಶ್ಯನರ ಪೋಟಿ ಎಂಬ ಸ್ಥಳಕ್ಕೆ ತುರ್ಕರ ಕ್ರೂಜರ್ ನಾವೆಯು ಗುಂಡು ಹಾರಿಸಿರುವದು ಆದರೆ ರುಶ್ಯನರು ತೋಪು ಹಾರಿಸಿ ತುರ್ಕರ ಕ್ರೂಜರ್ ನಾವೆಯನ್ನು ಓಡಿಸಿದರು.

ಈಗ ಚಿಲ್ಲಾನ್ ಕರಾವಳಿ ಒಂದೆರಲ್ಲಿಯಲ್ಲದೆ ಶಾಂತ ಸಾಗರದ ಮತ್ತು ಹಿಂದೂ ಸಾಗರದ ಕರಾವಳಿಗಳು ಜರ್ಮನ್ ಯುದ್ಧ ನಾವೆಗಳಿಂದ ಬಿಡುಗಡೆ ಹೊಂದಿದಂತಾಯಿತು.

ಎಮ್ಡೆನ್ ನಾವೆಯ ಹತಶೇಷರನ್ನು ರಕ್ಷಿಸುವರೆ ಸಹಾಯವು ಮಾಡಲ್ಪಟ್ಟಿದೆ.

ತಾ. 14ನೇ [illegible]

[illegible]

ವನ ಮೇಲೆ [illegible]

ಅವಶನ್ನು [illegible]

[illegible]

[illegible]ವೆ ಇಲ್ಲದೆ ಕಾದಾಡುವರೆ ಸಿದ್ಧರಾಗಿದ್ದು, ಬ್ರಿಟಿಷ ಸೈನಿಕರು ತೋರಿಸುವ ಧೈರ್ಯ ಮತ್ತು ಸಾಹಸಗಳನ್ನು ಹೊಗಳಿ ಜೋರ್ಜ-ಚಕ್ರವರ್ತಿಯವರು ಸರ್ ಜೋನ್ ಫ್ರೆಂಚರಿಗೆ ತಂತೀ ಬಿಟ್ಟಿರುವರು

ಕೊಂಗೋದಿಂದ ಫ್ರೆಂಚರು ಜರ್ಮನರನ್ನು ಓಡಿಸಿರುವರು

ಪೂರ್ವ ರಣರಂಗ: — ರುಶ್ಯನರು ಪೋಲೆಂಡಿನ ಉತ್ತರ ಭಾಗವನ್ನು ಪಡಕೊಂಡು ಪ್ಲೋಕ್ ಲೊಡ್ಜ್ ಪೆಟ್ರಿಕಾವೋ, ಕೆಲಿಸ್ ಸೆಂಡೊಮಿರ್ ಜಾರ್ಸ್ಲೊ ಮತ್ತು ಸಾನ್ ನದಿಗೆ ಹೋಗುವ ದಾರಿಗಳನ್ನೂ ಸ್ವಾಧೀನ ಮಾಡಿಕೊಂಡಿರುವರು ಜರ್ಮನರು ವಾರ್‌ಸೋದ ದಕ್ಷಿಣ ಪ್ರದೇಶದಿಂದ ಓಡಿಸಲ್ಪಟ್ಟಿರುವರು ಪ್ರಖ್ಯಾತಿ ಪಡೆದ ರುಶ್ಯನ ಕೌಕಾಸಸ್ ಸೇನೆಯು ಇವನ್‌ಗೋರ್ಡಿನ ಸವಿ[illegible] ವಿಸ್ಟ್ಯುಲದ ದಾರಿಯನ್ನು ಸ್ವಾಧೀನ ಮಾಡಿಕೊಳ್ಳುವದಕ್ಕೆ ಪ್ರಯತ್ನಿಸಿರುವದು ಜರ್ಮನರ [illegible] ವಿಶೇಷ ಹೊಡೆತವನ್ನು ಲಕ್ಷ್ಯ[illegible] ರುಶ್ಯನರ ಸೇನೆಯು ನದಿಯನ್ನು ಕಡವು ದೂ[illegible] ದಾಟಿರುವದು

[illegible] ಜರ್ಮನರು ತಯಾರಿಸಿದ ಕಂದಕಗಳನ್ನು ಬಿಟ್ಟು [illegible] ಪ್ರಕಟವಾಗಿರುವದು

[illegible] ರುಶ್ಯನರ [illegible] ಮರವೆ ಇಲ್ಲದ ಶತ್ರುಗಳೊದನೆ [illegible] ಓಡಿಸಿರುವರು ರುಶ್ಯನರ [illegible] ಜರ್ಮನರನ್ನು ಸೋಲಿಸಿ [illegible] ಹಿಡಿದು [illegible] ಸ ಕಗಳನ್ನು ನಾಶಪಡಿಸಿರವುದು ಜರ್ಮನರ [illegible] ಕಡೆಗೆ ಹಿ[illegible]ದಿರುವದು ಕ್ರಾಕೋದ ದಾರಿಯಲ್ಲಿದ್ದ ರುಶ್ಯನರ [illegible] ತಲಪಿರುವರು ರುಶ್ಯನರು ರೆಜಿಕೊ [illegible] ಪಟ್ಟಣವನ್ನು ಸ್ವಾಧೀನ ಮಾಡಿಕೊಂಡಿರುವರು

ರುಶ್ಯನರಿಗೆ [illegible] ವಿಶೇಷ ಜಯಗಳಿಂದ ಜರ್ಮನಿಯು ಹೆದರಿಕೊಂಡು ಸಂಧಾನ ಮಾಡಬೇಕೆಂದು ರುಶ್ಯವನ್ನು ಕೇಳಿಕೊಂಡಿರುವುದೆಂತಲೂ ರುಶ್ಯವು ಅದಕ್ಕೆ ಒಪ್ಪಲಿಲ್ಲವೆಂತಲೂ ಮೊರ್ನಿಂಗ್ ಪೋಸ್ಟು ಪತ್ರಿಕೆಯಲ್ಲಿ ಪ್ರಕಟವಾಗಿದೆ

ನೌಕಾವಳಿ ಸಂಗ್ರಾಮ —ಸಪ್ಟಂಬರ ತಾ ೧೮ರಲ್ಲಿ ಜರ್ಮನರ ಕೊನಿಗ್ಸ್‌ಬರ್ಗ್ ನಾವೆಯು ಬ್ರಿಟಿಷರ ಪೆಗಾಸಸ್ ನಾವೆಯ [illegible] ಪೂರ್ವ ಆಫ್ರಿಕದ ಸಮುದ್ರದಲ್ಲಿ ಇದನ್ನು [illegible] ಬಹಳ ಪ್ರಯತ್ನದಿಂದ ಇದ[illegible] ನದಿಗೆ [illegible] ಮೈಲು ದೂರದಲ್ಲಿ [illegible] ನಾವೆಗೆ ತಿಳಿದು ಬಂತು ಎಂತ ಪ್ರಕಟವಾಗಿದೆ

ಎಮ್ಡೆನ್ ನಾವೆಯ ಕೆಪ್ಟನನೂ ಆದರಲ್ಲಿದ್ದ ಕೈಸರರ ಸೋದರಳಿಯ ಪ್ರಿನ್ಸ್ ಫ್ರಾನ್ಸ್ ಜೋಸೆಫರೂ ಸೆರೆ ಬಿದ್ದಿರುವರು ಇವರಿಬ್ಬರೂ ಘಾಯ ಒಡೆಯಲಿಲ್ಲ

ಎಮ್ಡೆನ್ ನಾವೆಯ ಹತಶೇಷರಿಗೆ ಬೇಕಾದ ಯುದ್ಧ ಬಹುಮಾನಗಳು ಕೊಡಲ್ಪಟ್ಟಿರುವವು ಕೆಪ್ಟನ್ ಮತ್ತು ಆಫೀಸರರ ಖಡ್ಗಗಳನ್ನು ತೆಗೆದು ಕೊಳ್ಳಲಿಲ್ಲ ಎಂದು ಪ್ರಕಟವಾಗಿದೆ

ಎಮ್ಡೆನ್ ನಾವೆಯಲ್ಲಿ ೨೦೦ಮಂದಿ ಹತರಾದರು ೩೦ ಮಂದಿ ಘಾಯ ಒಡೆದಿರುವರು

ತುರ್ಕ.—ಅರ್ಮಿನಿಯದ ಕಿಪ್ರಿಕೆ ಪ್ರಾಂತ್ಯದಲ್ಲಿ ಕಠಿಣ ಕಾಳಗ ನಡೆದು ತುರ್ಕರು ಹಿಮ್ಮೆಟ್ಟಿರುವರು.

ಜಂಜೀಬಾರಿನ ಸುಲ್ತಾನರೂ ಅಲ್ಲಿಯ ಮುಸಲ್ಮಾನರೂ ಸೈಪ್ರಸಿನ ಮುಸಲ್ಮಾನರೂ ಬ್ರಿಟಿಷ ಸಾಮ್ರಾಜ್ಯದ ಕಡೆಗೆ ತೋರಿಸಿದ ರಾಜಭಕ್ತಿಯನ್ನು ಮಾನ್ಯಮಾಡಿ ಬ್ರಿಟಿಷ್ ಸರಕಾರದವರು ಅವರಿಗೆ ತಮ್ಮ ಕೃತಜ್ಞತೆಯನ್ನು ತೋರ್ಪಡಿಸಿರುವರು.

ಹೈದರಾಬಾದಿನ ನೈಜಾಮರವರು ತಾನು ಮತ್ತು ತನ್ನ ದೇಶದ ಮಹಮ್ಮದೀಯರು ಬ್ರಿಟಿಷ ಸಾಮ್ರಾಜ್ಯಕ್ಕೆ ಸದಾ ಸಹಾಯ [illegible] ತಂತೀಯನ್ನು ವೈಸರಾಯ ಪ್ರಭುಗಳವರಿಗೆ [illegible]ರುವರು.

ತಾ. 15ನೇ ನವಂಬರ.

[illegible] ಎಡೆಮಾಲ್ಲಿಯಲ್ಲಿ [illegible] ನಡೆಯಲು [illegible]

ಸಂಯುಕ್ತ ಸೇನಾ ನೆಲೆಯು ಇದ್ದ ಸ್ಥಿತಿಯಲ್ಲಿ ಹಾಗೆ ಇದೆ. ..ಲ್ಲೊಂಬಾರ್ಟ್‌ಜೈಡ್ ಎಂಬ ಸ್ಥಳವನ್ನು ಸಂಯುಕ್ತ ಸೇನೆಗಳು ಪುನಃ ವಶ ಮಾಡಿಕೊಂಡಿರುವವು.

ದಿವಸದಂತ್ಯದಲ್ಲಿ ಜರ್ಮನರು ಡಿಕ್ಸ್‌ಮ್ಯೂಡನ್ನು ಸ್ವಾಧೀನ ಮಾಡಿಕೊಂಡರು, ಸಂಯುಕ್ತ ಸೇನೆಗಳು ನ್ಯೂಪೋರ್ಟಿನಿಂದ ಎಪ್ರೆಯ ವರೆಗೆ ಪಟ್ಟಣದ ಆಜುಬಾಜನ್ನು ಹಿಡಕೊಂಡಿರುವವು. ಈ ಕಡೆಗಳಲ್ಲಿ ನಡೆದ ಕದನವು ಬಹು ಕಠಿಣ ತರದ್ದಾಗಿತ್ತು ಕೆಲವು ಕಡೆಗಳಲಿ ಶತ್ರುಗಳು ಬ್ರಿಟಿಷರ ಮೇಲ್ಬಾಯಿದರು, ಆದರೆ ಪ್ರತಿ ಒಂದು ಸ್ಥಳದಲ್ಲಿಯೂ ಶತ್ರುಗಳ ಮುಂದರಿಯೋಣವು ತಡೆಯಲ್ಪಟ್ಟಿರುವದು

ಸಂಯುಕ್ತ ಸೇನೆಗಳ ಸ್ವೊಸನ್ಸ್ ಮತ್ತು ಪ್ರೆಲೆಯ ಪಶ್ಚಿಮ ಕಡೆಯಲ್ಲಿ ವ[illegible]ದರಿಸಿದ ಹಲ್ಲದೆ ಇತರ ರಣರಂಗದಲ್ಲಿ ಬದಲಾವಣೆಯಾಗಲಿಲ್ಲ

ಶತ್ರುಗಳು ದಿನವೆಲ್ಲಾ ಮೇಲ್ಬಾಯಿದರೂ ಹೊಸ ಜಯಹೊಂದಲಿಲ್ಲ. ಬಿಕ್ಸ್‌ಚೂಟಿನಲ್ಲಿ ಶತ್ರುಗಳು ಪುನಃ ಮೇಲ್ಬಾಯಿದು ಹಿಮ್ಮೆಟ್ಟಿದರು ಡಿಕ್ಸ್‌ಮ್ಯೂಡಿನಿಂದ ಶೈಸರಿನ ಎಡಪಾರ್ಶ್ವಕ್ಕೆ ಮುಂದರಿಯಲು ಮಾಡಿದ ಪ್ರಯತ್ನವೂ ಸಫಲವಾಗಲಿಲ್ಲ

[illegible]ಮಿನಲ್ಲಿ ಈಚೆಗೆ ಜರ್ಮನರು ಮಾಡುತ್ತಿರುವ ನಿಷ್ಪ್ರಯೋಜಕವಾದ ಕದನಗಳಲ್ಲಿ ಅವರ ಸೇನೆಯ ಕಾಲು ಅಂಶವು ನಷ್ಟವಾಗಿರುವದೆಂತ ಪೊಯುನಿಯರ್ ಪತ್ರಿಕೆಯ ಲಂಡನ್ ವಾರ್ತಾದಾರರು ಬರೆಯುವರು

ಒಕ್ಟೋಬರ ತಾ ೩೧ರ ಒಳಗೆ ಬ್ರಿಟಿಷ ಸೇನೆಯಲ್ಲಿ ೫೭ [illegible] ಇದು ವಿಪರೀತವಲ್ಲ ಇತರ ಮಿತ್ರ ರಾಜ್ಯಗಳ [illegible] ಸಂಖ್ಯೆಯ ಅಂದಾಜು ಹೇಳುವದು ತನಗೆ [illegible] ಅಸ್ಕ್ವಿತರವರು ಹೇಳಿರುವರು

[illegible] ಸಣ್ಣ ಗನ್‌ಬೋಟ್ ನಾವೆಯು ಜರ್ಮನ [illegible] ಮುಣುಗಿಸಿರುವದು

ಜೋಜ [illegible] ತಾ ೧೧ರಲ್ಲಿ ಪಾರ್ಲಿಮೆಂಟ್ [illegible] ತೆರೆದು ಕಾಲೋಚಿತ ಭಾಷಣಕೊಟ್ಟರು ಸಭೆಯಲ್ಲಿ ಪಕ್ಷಭೇದದ ಭಾಷಣಗಳೇನೂ ಇರಲಿಲ್ಲ ಪಾರ್ಲಿಮೆಂಟ್ ಪ್ರಥಮ ದಿವಸದಲ್ಲಿ ಹೆಚ್ಚಿನ ಮೆಂಬರರು ಹಾಜರಿದ್ದರು ಹೆಚ್ಚಿನವರು ದುಃಖ ಸೂಚಕವಾದ ವಸ್ತ್ರಗಳನ್ನು ಧರಿಸಿದ್ದರು

ಜರ್ಮನರ ಸೈನಿಕರಲ್ಲಿ ಈ ವರೆಗೆ ನಷ್ಟವಾದ ಸಂಖ್ಯೆ ೧೧ ಲಕ್ಷವಾಗಿರುವದು ಸೇನೆಯ ಒಂದು ಮೂರನೇ ಅಂಶ ಆಫೀಸರರು ಹತರಾಗಿರುವರೆಂತ ಪ್ರಕಟವಾಗಿದೆ

ಲಿಕ್ಸೆಂಬರ್ಗನ್ನು ದಾಟಿಹೋದುದಕ್ಕೆ ಜರ್ಮನರು ಪರಿಹಾರದ್ರವ್ಯವನ್ನು ಕೊಟ್ಟಿರುವರೆ ಬದ್ಧರಾಗಿ ಲಿಕ್ಸೆಂಬರ್ಗಿನ ಗ್ರೇಂಡ್ ಡಚ್ಚೆಸರು ಲಿಕ್ಸೆಂಬರ್ಗ್ ಪಾರ್ಲಿಮೆಂಟನ್ನು ತೆರೆದು ಹೇಳಿರುವರು

ಪೂರ್ವ ರಣರಂಗ — ಪೂರ್ವ ಪ್ರುಶ್ಯದಲ್ಲಿ ರುಶ್ಯನರು ಮೆಜೂರಿಯನ್ ಸರೋವರದ ವರೆಗೆ ಮುಂದರಿದಿರುವರು ಗೋಲ್ಡಾಪ್ ಮ್ಲಾವ ಮತ್ತು ಸೋಲ್ಡಾನಿನಲ್ಲಿ ಸಮರಗಳು ನಡೆದು ರುಶ್ಯನರು ಜಯಪ್ರದರಾಗಿರುವರು ಗೆಲೀಸಿಯದಲ್ಲಿಯೂ ರುಶ್ಯನರು ಬಲವಾಗಿ ಮುಂದೊತ್ತಿರುವರು

ಪೂರ್ವ ಪ್ರುಶ್ಯದ ಕದನದಲ್ಲಿ ಜರ್ಮನ ಆಫೀಸರರು ಶೇಕಡಾ ೭೦ರಂತೆ ಪ್ರಾಣಾಪಾಯ ಹೊಂದಿದರು. ಒಕ್ಟೋಬರ ತಾ ೨೩ರಿಂದ ನವಂಬರ ತಾ ೫ರ ವರೆಗೆ ರುಶ್ಯನರು ಜರ್ಮನರ ೮ ಹೊವೈಜರ್ ತೋಪು, ರಾಶಿರಾಶಿ ಫಿರಂಗಿ ಮತ್ತು ಯುದ್ಧ ಸಾಹಿತ್ಯಗಳು, ೩೨೩ ಆಫೀಸರರನ್ನೂ ೨೧,೭೫೦ ಸೈನಿಕರನ್ನೂ ಸೆರೆ ಹಿಡಿದರು

ಜರ್ಮನರು ಭಯಹಿಡಿದವರಾಗಿ ಪೋಸೆನ್, ಥೋರ್ನ್, ಬ್ರೆಸ್ಲೊ ವರೆಗೆ ಕೋಟೆಗಳಿಂದ ನೆಲೆಗಳನ್ನು ಬಲಕಾಯಿಸುತ್ತಿದ್ದಾರೆ. ಕ್ರಾಕೋ ಪ್ರಾಂತ್ಯದಲ್ಲಿ ಆಸ್ಟ್ರಿಯನರನ್ನು ಸುತ್ತು ಹಾಕಲಿಕ್ಕಾಗಿ ಮತ್ತೊಂದು ರುಶ್ಯನರ ಸೇನೆಯು ಜರ್ಮನರ [illegible] ಮೇಲ್ಬಾಯಲು ಪ್ರಯತ್ನಿಸುತ್ತಿದೆ.

ರುಶ್ಯನರು [illegible]ರು. ಆಸ್ಟ್ರಿಯನರ ಸೇನೆಯು [illegible] ವರು. [illegible] ಜರ್ಮನರು [illegible] ರುವರು.

[illegible]

ಹಿಂದೂಸ್ಥಾನ:—ಗ್ವಾಲಿಯೋರಿನಲ್ಲಿ ೨೫,೦೦೦ ಮಂದಿ ಸೇನೆಗೆ ಸೇರಲು ಒಪ್ಪಿಕೊಂಡಿರುವರು. ಬಿಕಾನೀರ್ ಸಂಸ್ಥಾನದಲ್ಲಿಯೂ ಇಷ್ಟೇ ಮಂದಿ ಸೇನೆಯಲ್ಲಿ ಸೇರಲು ಸಿದ್ಧರಾಗಿರುವರು. ಮಧ್ಯ ಹಿಂದೂಸ್ಥಾನದ ಕೆಲವು ದೇಶಿಯ ರಾಜ್ಯಗಳು ಯುದ್ಧದ ನಿಜವಾದ ಸ್ಥಿತಿಯನ್ನು ನಿವಾಸಿಕರಿಗೆ ತಿಳಿಸುವ ಬಗ್ಗೆ ಪತ್ರಿಕೆಗಳನ್ನು ಧರ್ಮಾರ್ಥವಾಗಿ ಹಂಚುತ್ತಿವೆ. ಕೆಲವು ಮಹಾರಾಜರು ರಣರಂಗಕ್ಕೆ ಹೋಗಲು ಪುನಃ ಸಿದ್ಧರಾಗಿರುವರು.

ದಕ್ಷಿಣ ಅಫ್ರೀಕ:—ತಾ. ೨೧ರ ವರೆಗೆ ಶರಣಾಗತರಾಗುವ ಬುವರ್ ದಂಗೆಗಾರರ ಸೈನಿಕರಿಗೆ ಮಾಫಿ ಕೊಡಲಾಗುವದು. ಆದರೆ ಮುಂದಾಳುಗಳಿಗೆ ಮಾಫಿ ಕೊಡಲಾಗದು ಎಂತ ಯೂನಿಯನ್ ಸರಕಾರದವರು ಪ್ರಕಟಿಸಿರುವರು. ಜನರಲ್ ಕೆಂಪನ ಸೈನ್ಯದೊಡನೆ ದಂಗೆಗಾರರಿಗೆ ಕದನವಾಗುತ್ತಿದೆ. ಜನರಲ್ ಬುಥಾರ ಸೇನೆಯು ದಂಗೆಗಾರ ಬೈಯರನ ಸೇನೆಯನ್ನು ಚದರಿಸಿ ೩೬೦ ಮಂದಿಯನ್ನು ಸೆರೆ ಹಿಡಿದಿರುವದು. ಜನರಲ್ ಬೋಥರವರು ತನ್ನ ಸೇನೆಯೊಡನೆ ವಿನ್‌ಬರ್ಗನ ಪೂರ್ವದಲ್ಲಿ ದಂಗೆಗಾರರನ್ನು ಸೋಲಿಸಿ ೨೫೦ ಮಂದಿಯನ್ನು ಸೆರೆ ಹಿಡಿದಿರುವರು.

~~~~~

ತಾ. 17ನೇ ನವಂಬರ.

ವೈಸರಿನಲ್ಲಿ ಕದನ ಪ್ರಾರಂಭವಾಗುವಾಗ ಜರ್ಮನರಲ್ಲಿ ಅರ್ಧ ಮಿಲಿಯ ಸೈನಿಕರು ರಣರಂಗದಲ್ಲಿ ಇದ್ದರು. ಇಲ್ಲಿ ಜರ್ಮನರಲ್ಲಿ ೯೦,೦೦೦ ಸೈನಿಕರೂ ೪ ಜನರಲರೂ ಪ್ರಾಣಹಾನಿಯ ಹೊಂದಿದರೆಂತ ಸೆರೆಬಿದ್ದ ಒಬ್ಬ ಜರ್ಮನ ಅಧಿಕಾರನು ಹೇಳುವನು.

ಲೀಜ್ ಕೋಟೆಯಿಂದ ತಂದ ಜರ್ಮನರ ೧೮|| ಅಂಗುಲ ಬಾಯಿಯ ಫಿರಂಗಿಯನ್ನು ಬ್ರಿಟಿಷರ ಫಿರಂಗಿಗಳು ಹಾಳು ಮಾಡಿರುವವೆಂತ ಪ್ರಕಟವಾಗಿದೆ.

ಎಸ್ಟ್ರಿಯಲ್ಲಿ ಕಾವಲಿರುವ ಬ್ರಿಟಿಷ ಕಾಲಾಳು ಸೇನೆಯು ಅತಿ ಉತ್ಕೃಷ್ಟವಾದದ್ದೆಂದೂ ಅವರ ತೋಪುಗಳು ಜರ್ಮನ ಮತ್ತು ಸ್ಟ್ರಾಂಗ ತೋಪುಗಳಿಗೆ ಸಮಾನವಾಗಿದೆಂದೂ ಕಂದಕಗಳಲ್ಲಿರುವ ಬ್ರಿಟಿಷರ ನೌಕಾದಳ ಫಿರಂಗಿಗಳು ಸೇನೆಗಳನ್ನು ರಕ್ಷಣೆ ಮಾಡುತ್ತವೆಂದೂ ಸೆರೆಸಿಕ್ಕಿರುವ ಒಬ್ಬ ಜರ್ಮನ್ ಪತ್ರ ಸಂಪಾದಕನು ಬರೆದಿರುವನು.

ಟೊವರ್ ಜಲಸಂಧಿಯಲ್ಲಿ ಜರ್ಮನರ ಎರಡು ಸಮುದ್ರ ನಾವೆಗಳು ಮುಳುಗಿಸಲ್ಪಟ್ಟವು.

ಕಿಯಾಚೋ ಆಕಾಶದಲ್ಲಿ ಜಪಾನರ ಟೊರ್ಪಿಡೋ ದೋಣಿಯು ಪಿಡಿದುಬಿದ್ದ ನಗರಗಳನ್ನು ರೆಗೆಯುವ ಕೆಲಸ ಮಾಡುತ್ತಿರುವಾಗ ಒಂದು ಸಿಡಿಮದ್ದು ತಗಲಿ ಹಾನಿ ಮುಳುಗಿಹೋಯಿತು.

ಮೆಸ್ಲೊರಿಗ್ ಸ್ಟೋವರಿನ ಪೂರ್ವ ಕಡೆಯ ತಡಿಬುಗಳನ್ನು ಹಿಡಿಯುವ ಬಗ್ಗೆ ಗ್ಯಾಲಿಶಿಯಾ ಪ್ರಾಂತ್ಯದಲ್ಲಿ ಕದನ ನಡೆಯುತ್ತಿದೆ. ಪೋಲ್ಯಾಂಡಿನಲ್ಲಿಯೂ ಕದನವು ಆಗುತ್ತಲಿದೆ. ಜರ್ಮನರು ಪೋರ್ಟ ತ್ರಿಸ್ಟಿನಲ್ಲಿ ವಿಸ್ಚುಲ ನದಿಯ ಎರಡು ಪಾರ್ಶ್ವದಲ್ಲಿಯೂ ಕದನಕ್ಕೆ ನಿಂತಿರುವರು. ರೈನಿಂದ ಜರ್ಮನರು ತಮ್ಮ ಸೇನೆಯ ಒಂದಂಶವನ್ನು ಪೂರ್ವ ಕಡೆಗೆ ಕಳುಹಿಸಿರುವರು. ಸೆರ್ವಿಯಾದೇಶದಲ್ಲಿ ರಷ್ಯನರು ಹಿಮ್ಮೆಟ್ಟುತ್ತಿರುವರು.

ಸ್ಕಾಲ್‌ಪೂರೆನ್ ಮತ್ತು ಸಪ್ಪಾ ಎಂಬ ಜರ್ಮನರ ಪ್ರದೇಶದಲ್ಲಿಯೂ ಕಠಿಣ ಕಾಳಗ ನಡೆಯುತ್ತಿದೆ.

ತುರ್ಕಿ:—ಅರ್ಮೇನಿಯದಲ್ಲಿ ರಷ್ಯನರು ತಮ್ಮ ನೆಲೆಗಳನ್ನು ಕಾಪಾಡಿಕೊಂಡಿರುವರು.

ಗೊಯೆಬೆನ್ ಎಂಬ ತುರ್ಕರ ಹಡಗಕ್ಕೆ ಡರ್ಡನೆಲ್ಸಿಗೆ ಸುಂಡು ಹಾರಿಸುತ್ತಿರುವಾಗ ಅಕಸ್ಮಾತ್ತಾಗಿ ತೂತು ಬಿದ್ದದೆ ಎಂಬ ವಾರ್ತೆ ಇದೆ.

~~~~~

ತಾ. 18ನೇ ನವಂಬರ.

ಸಮುದ್ರದಿಂದ ಲಿಸ್ಟಿಯ ಉತ್ತರದ ವರೆಗಿನ ಪ್ರದೇಶದಲ್ಲಿ ಜರ್ಮನರು ಹಿಮ್ಮೆಟ್ಟಿರುವರು. ಡಿಕ್ಸ್‌ಮಡ್ ಮತ್ತು ಎಪ್ರೆಯ [illegible] [illegible] ಜರ್ಮನರು [illegible] [illegible] [illegible] [illegible] ಮತ್ತು [illegible] [illegible] [illegible]

ಬ್ರಿಟಿಷರ ನೆಲೆಗಳನ್ನು ಮುರಿಯಲು ಜರ್ಮನರು ಮಾಡಿದ ಪ್ರಯತ್ನವೂ ಸಫಲಹೊಂದಲಿಲ್ಲ. ಈ ಪ್ರಯತ್ನದಲ್ಲಿ ಜರ್ಮನರಲ್ಲಿ ೫೦,೦೦೦ ಮಂದಿ ಹತರಾಗಿರುವರು. ಇತ್ತೀಚಿಗೆ ಬ್ರಿಟಿಷರ ಸಂಗಡ ನಡೆದ ಕದನದಲ್ಲಿ ಜರ್ಮನರು ೩೦೦,೦೦೦ ಮಂದಿಯನ್ನು ಕಳಕೊಂಡಿರುವರು.

ಜರ್ಮನರು ವೈಸರ್ ಕಾಲುವೆಯ ಬಲದಡದಿಂದ ಹಿಂದೆ ಅಟ್ಟಲ್ಪಟ್ಟಿರುವರು. ವೈಸರಿನ ಎಡಪಾರ್ಶ್ವದ ಒಂದಂಶವನ್ನು ಹಿಡಕೊಂಡಿದ್ದ ಜರ್ಮನರೂ ಅದನ್ನು ಪೂರ್ಣವಾಗಿ ಬಿಟ್ಟಿರುವರು.

ಐನೆಯಲ್ಲಿ ಪುನಃ ಕದನ ಪ್ರಾರಂಭವಾಗಿರುವದು. ಇಂಗ್ಲಿಷ್ ಸವಾರರು ಜರ್ಮನರ ಪಕ್ಷದ ಸೇನೆಯ ಮೇಲೆ ಬಿದ್ದು ಸಾಹಸದಿಂದ ಕಾದಾಡಿದರು. ಸವಾರರು ಫಿರಂಗಿಗಳ ನೆಟ್ಟಿಗೆ ಒಂದು ಮೈಲು ದೂರ ಹೋಗಿ ೧೦ ನಿಮಿಷದೊಳಗೆ ಜರ್ಮನರ ಫಿರಂಗಿ ಸೈನಿಕರನ್ನು ಹತಮಾಡಿದರು.

ರೋಬರ್ಟ್ ಪ್ರಭುಗಳವರ ಮರಣ:—ರೋಬರ್ಟ್ ಪ್ರಭುಗಳವರು ದೈವಾಧೀನರಾದರು. ಇವರು ಫ್ರಾನ್ಸಿನಲ್ಲಿರುವ ಭಾರತೀಯ ಸೈನಿಕರನ್ನು ನೋಡಲು ಹೋಗಿದ್ದರು. ಅವರಿಗೆ ಅಲ್ಲಿ ಥಕ್ಕನೇ ಛಳಿ ಜ್ವರವಾಗಿ ಪಕ್ಷಪಾತ ರೋಗದಿಂದ ಒಂದೇ ದಿನದ ಅಸ್ವಸ್ಥದಲ್ಲಿ ಮೃತರಾದರು. ಇದೀಗ ಬ್ರಿಟಿಷ ಸಾಮ್ರಾಜ್ಯವು ಇವರ ಮರಣದಿಂದ ಒಬ್ಬ ವಿಶೇಷ ಪುರುಷನನ್ನು ಕಳಕೊಂಡ ಹಾಗಾಯಿತು. ಇವರು ಬ್ರಿಟಿಷ ಸೇನೆಯ ಮಧ್ಯದಲ್ಲಿಯೇ ದೈವಾಧೀನರಾದರು.

ಕಳೆದ ಬುಧವಾರ ಇವರು ಇಂಗ್ಲಾಂಡಿನಿಂದ ಲೇಡಿ ಐಲೀನ್ ರೋಬರ್ಟ್ ಮತ್ತು ಅಳಿಯನೊಂದಿಗೆ ಫ್ರಾನ್ಸಿಗೆ ಹೊರಟರು. ಬೃಹಸ್ಪತಿವಾರ ಮತ್ತು ಶುಕ್ರವಾರ ಬ್ರಿಟಿಷ ಸೇನೆಗಳನ್ನೂ ಭಾರತೀಯ ಸೇನೆಯನ್ನೂ ಸಂದರ್ಶಿಸಿ ಮತ್ತು ಜನರಲರೊಡನೆ ಯುದ್ಧ ಸಂಬಂಧವಾದ ಸ್ವಸ್ಥ ಸಮಾಚಾರ ತಿಳಿದು, ಶುಕ್ರವಾರ ರಾತ್ರಿ ಊಟದ ಹೊತ್ತಿಗೆ ಸ್ವಲ್ಪ ಛಳಿಯಾಗುತ್ತದೆಂದು ಹೇಳಿದರು. ನಂತರ ಜ್ವರ ಪ್ರಾರಂಭವಾಯಿತು. ಕೂಡಲೇ ಡಾಕ್ಟರನು ಕರೆಯಲ್ಪಟ್ಟರು. ಡಾಕ್ಟರರು ನೋಡಿ ರೋಗವು ಕಠಿಣವೆಂದು ಹೇಳಿ ಸಹಾಯಕ್ಕೆ ಇತರ ಇಬ್ಬರು ಡಾಕ್ಟರರನ್ನು ಕರೆಯಿಸಿದರು. ಅನಂತರ ರೋಬರ್ಟ್ ಪ್ರಭುಗಳವರಿಗೆ ಪ್ರಜ್ಞೆ ಬಂತು. ನಿದ್ರೆಯಿಂದ ಏಳಲೇ ಇಲ್ಲ. ಲಂಡನಿನ ಸಾರ್ವಜನಿಕ ಸ್ಥಳಗಳಲ್ಲಿ ಇವರ ಮರಣದಿಂದ ಉಂಟಾದ ಶೋಕವನ್ನು ತೋರಿಸಿದವು. ಇವರಿಗೆ ಸೈನ್ಯ ವಿಶ್ರಾಂತಿಯನ್ನು ಬಯ ಸುವರೆಂದೂ ದೇವಾಲಯದಲ್ಲಿ ನಡಿಸಲ್ಪಟ್ಟಿತು.

ತುರ್ಕಿ:—ಸೆರೆಬಿದ್ದ ತುರ್ಕ ಸೈನಿಕರು ತಾವು ಮನಸ್ಸಿಲ್ಲದೆ ಯುದ್ಧ ಮಾಡುತ್ತೇವೆಂದೂ ಜರ್ಮನಿಗೆ ಸಹಾಯವಾಗಿ ತುರ್ಕಿಯು ಯಾಕೆ ಕಾದಾಡುತ್ತದೆಂಬುದು ತಮಗೆ ತಿಳಿಯದು ಎಂದೂ ಹೇಳುವರು.

ಎರಜರಮಿನಲ್ಲಿ ಜರ್ಮನರು ಕೋಟೆಗಳನ್ನು ಕಟ್ಟುತ್ತಿರುವರು. ತುರ್ಕಿಯು ಇತ್ತಲಾಗಿ ಜರ್ಮನಿಯು ಕೆಲವು ನೂರು ಅಧಿಕಾರರನ್ನು ಕಳುಹಿಸಿಕೊಡಬೇಕೆಂದು ಜರ್ಮನಿಯನ್ನು ಕೇಳಿಕೊಂಡಿತು. ಆದರೆ ಜರ್ಮನಿಯು ಎಲ್ಲಾ ಜರ್ಮನಿ ಅಧಿಕಾರರನ್ನು ಕಳುಹಿಸಿಕೊಡುವದು ಅಸಾಧ್ಯವೆಂದೂ ಆಸ್ಟ್ರಿಯನ ಅಧಿಕಾರರನ್ನು ಕಳುಹಿಸಿಕೊಡಬಹುದೆಂದೂ ಉತ್ತರ ಕೊಟ್ಟಿರುವದು. ತುರ್ಕಿ ಸೇನೆಯಲ್ಲಿ ಜರ್ಮನಿಗೆ ವಿರೋಧವಾದ ಭಾವವು ದಿನೇ ದಿನೇ ಹೆಚ್ಚುತ್ತಿದೆ.

ಈಜಿಪ್ತಿನ ಎಲ್ಲಾ ಅಧಿಪತಿಗಳೂ ಮುಸಲ್ಮಾನರ ಮುಂದಾಳುಗಳೂ ಸಹ ಕೂಡಿ ಈಜಿಪ್ತಿನ ಮುಸಲ್ಮಾನರು ಶಾಂತತೆಯನ್ನು ಕಾಪಾಡಿಕೊಂಡಿರಬೇಕೆಂಬದಾಗಿ ಅಲ್ಲಿಯ ಮುಸಲ್ಮಾನರನ್ನು ವಿಜ್ಞಾಪಿಸಿಕೊಂಡಿರುವರು. ಸೌದಾನಿನ ಶೇಖರೂ ತಾವು ಬ್ರಿಟಿಷ ಸರಕಾರಕ್ಕೆ ರಾಜಭಕ್ತಿಯುಳ್ಳವರಾಗಿರುವವೆಂಬದಾಗಿ ತಿಳಿಯಪಡಿಸಿರುವರು. ಕೆಲಸ್ತಾನಿನ ಸುಲ್ತಾನರೂ ರಾಜಭಕ್ತಿಯನ್ನು ತೋರ್ಪಡಿಸಿರುವರು.

ಜಪಾನ್:—ತ್ಸಿಂಗ್‌ಟಾವೊದಲ್ಲಿದ್ದ ಜರ್ಮನರ "ಇಟ್ಸ್", "ಜಾಗೊರ್" "ಕೊರಮೊರನ್" "ಟೈಗರ್" ಮತ್ತು "[illegible]" ಎಂಬ ಗನ್‌ಬೋಟ್ ಎಂಬ ನಾವೆಗಳೂ "[illegible]" ಎಂಬ [illegible] ನಾವೆಯೂ ಕಲ್ಲಿದ್ದಲನ್ನು ಹಾಕುವರ ಪ್ರಯೋಗಿಸುವ [illegible] [illegible] ಎಂಬ ನಾವೆಯೂ ಆಸ್ಟ್ರಿಯನರ [illegible] [illegible] ಎಂಬ ಕ್ರೂಸರ್ ನಾವೆಯೂ [illegible] [illegible] ಹೋಗಿರುವದು.

[illegible]

ಪ್ರದೇಶದಿಂದ "[illegible]" [illegible] [illegible] ಹೋಗಿರುವದರಿಂದ ಹತಗಡಿವರು ಎಲ್ಲರದಾಗಿರಬೇಕೆಂಬದಾಗಿ ಬರ್ಲಿನದ ಫ್ರಾಂಕ್‌ಫರ್ಟ ಆಫೀಸರು ಪ್ರಕಟಿಸಿರುವರು.

~~~~~

ತಾ. 19ನೇ ನವಂಬರ.

"ನನ್ನ ಹಳೇ ಜತೆಗಾರರು ಕಾದಾಡುತ್ತಿರುವಾಗ ನಾನು ನನ್ನ ಮನೆಯಲ್ಲಿ ಕುಳ್ಳಿರುವದು ಸರಿಯಲ್ಲ" ವೆಂದು ರೋಬರ್ಟ್ ಪ್ರಭುಗಳು ಫ್ರಾನ್ಸಿಗೆ ಹೋಗಬಾರದೆಂದು ತಡೆದ ಒಬ್ಬ ಮಹನೀಯರ ಕೂಡೆ ಹೇಳಿದ್ದರಂತೆ.

ಫ್ರಾನ್ಸಿನಲ್ಲಿ ಬೃಹಸ್ಪತಿವಾರ ದಿನ ಇವರು ಭಾರತೀಯ ಸೈನಿಕರನ್ನು ಸಂದರ್ಶಿಸುವಾಗ, ಮೇಲಂಗಿಯನ್ನು ಹಾಕಿಕೊಳ್ಳಲು ನಿರಾಕರಿಸಿದರು. ಶುಕ್ರವಾರ ದಿನ ಕಠಿಣ ಗಾಳಿ ಮಳೆಯಲ್ಲಿಯೂ ರಣರಂಗಕ್ಕೆ ಹೋಗಿ ಕದನವನ್ನು ನೋಡಿ ಬಂದರು. ಇದರಿಂದ ಥಕ್ಕನೇ ಛಳಿ ಶುರುವಾಗಿ ಶೀತ ಹಿಡಕೊಂಡಿತು. ಇವರ ಮರಣ ವಾರ್ತೆಯನ್ನು ಕೇಳಿದಾಕ್ಷಣ ಅನೇಕ ಭಾರತೀಯ ಸೈನಿಕರು ನಿಟ್ಟುಸಿರಿಟ್ಟರು. ಇವರ ಮರಣದಿಂದುಂಟಾದ ವಿಷಾದವನ್ನು ತೋರಿಸಿ ಸರ್ ಜೊನ್ ಫ್ರೆಂಚರವರು ರೋಬರ್ಟ್ ಪ್ರಭುಗಳವರ ಪತ್ನಿಗೆ ತಂತೀ ಬಿಟ್ಟಿರುವರು. ವೆಸ್ಟ್ ಮಿನಿಸ್ಟರಿನಲ್ಲಿ ಇವರ ಶವವನ್ನು ಹೂಣಿಸುವದು ಬೇಡವೆಂಬದಾಗಿ ರೋಬರ್ಟ್ ಪ್ರಭುಗಳವರ ಪತ್ನಿಯವರು ಹೇಳಿರುವರೆಂತ ಪ್ರಕಟವಾಗಿದೆ. ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಪ್ರಧಾನ ಮಂತ್ರಿಯವರು ಇವರ ಮರಣದಿಂದ ಉಂಟಾದ ವಿಷಾದವನ್ನು ತೋರ್ಪಡಿಸಿದರು. ವೈಸರಾಯ ಪ್ರಭುಗಳವರಿಂದಲೂ ಮುಂಬಾಯಿ, ಕಲ್ಕತ್ತೆ ಮೊದಲಾದ ಸ್ಥಳಗಳಿಂದಲೂ ಇವರ ಮರಣದಿಂದುಂಟಾದ ಶೋಕವನ್ನು ತೋರ್ಪಡಿಸುವ ತಂತಿಯು ಕಳುಹಿಸಲ್ಪಟ್ಟಿರುವದು.

ಸರ್ ಜೇಮ್ಸ್ ವಿಲ್‌ಕೊಕ್ಸರ ಕೆಳಗಿರುವ ಭಾರತೀಯ ಸೇನೆಯು ಈ ಯುದ್ಧದಲ್ಲಿ ಸರಿಯಾಗಿ ಕಾದಾಡಲು ಸಮರ್ಥವಾದುದ್ದಾಗಿದೆ. ನಾನು ಭಾರತೀಯ ರಾಜರುಗಳನ್ನು ನೋಡಿದೆನು. ಬ್ರಿಟಿಷರಿಗೆ ಬಹು ಸಾಹಸದಿಂದ ಸಹಾಯ ಮಾಡುತ್ತಿದ್ದ ಕಾದಾಡುವದಕ್ಕೆ ಆಸಕ್ತಿಯಿಂದಿರುವ ಭಾರತೀಯ ಸೈನಿಕರನ್ನು ನೋಡಿ ತಾನು ತುಂಬಾ ತೃಪ್ತಿಪಟ್ಟಿರುವೆನೆಂತ ಸರ್ ಜೋನ್ ಫ್ರೆಂಚರವರು ವೈಸರಾಯ ಪ್ರಭುಗಳವರಿಗೆ ತಂತೀ ಬಿಟ್ಟಿರುವರು.

ಯುದ್ಧದ ಖರ್ಚಿನ ಬಗ್ಗೆ ೨೨೫ ಮಿಲಿಯ ಪವನುಗಳನ್ನು ಪುನಃ ವೆಚ್ಚ ಮಾಡುವ ಮತ್ತು ಒಂದು ಮಿಲಿಯ ಜನರನ್ನು ಕೂಡಿಸುವ ಆಲೋಚನೆಯು ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ಈ ಸಂಬಂಧ ಆಸ್ಕ್ವಿತ ಪ್ರಭುಗಳವರು ಕೊಟ್ಟ ಭಾಷಣದಲ್ಲಿ ದಿವಸಕ್ಕೆ ಯುದ್ಧದ ಖರ್ಚಿನ ಬಗ್ಗೆ ಒಂದು ಮಿಲಿಯ ಪವನು ಬೇಕಾಗುತ್ತದೆಂದೂ ಈಗ ಅಂದಾಜು ಮಾಡಿದ ೨೨೫ ಮಿಲಿಯ ಪವನುಗಳು ಎಪ್ರೀಲ್ ತಿಂಗಳ ವರೆಗೆ ಸಾಕೆಂದೂ ಹೇಳಿರುವರು.

ಭಾರತೀಯ ಸೇನೆಯು "ಡ್ಯೂಕ್ ಆಫ್ ಎಡಿನ್ ಬರ್ಗ್" ಎಂಬ ಬ್ರಿಟಿಷರ ಕ್ರೂಸರ್ ನಾವೆಯ ಸಹಾಯದಿಂದ ಸೇಕ್ ಸಯ್ಯದಿನ ತುರ್ಕರ ಕೋಟೆಗಳನ್ನೂ ಬಾಬೆಲ್ ಮಂಡೆಬ್ ದ್ವೀಪದ ಪೂರ್ವಕ್ಕಿರುವ ಕೋಟೆಗಳನ್ನೂ ಸ್ವಾಧೀನ ಮಾಡಿಕೊಂಡಿರುವದು. ಯುದ್ಧ ಹಡಗವು ಕೋಟೆಗಳ [illegible] [illegible] ಕೆಡವಿದನಂತರ ಸೈನಿಕರು [illegible] [illegible] [illegible] ಹಿಡಿದು ಕೋಟೆಗಳನ್ನು [illegible] [illegible]. ರಾತ್ರಿ ಯುದ್ಧ ಸಾಮ [illegible] [illegible] ಎಂಬ ಫಿರಂಗಿಗಳೂ ದೊರಕಿದವು. [illegible] ಬ್ರಿಟಿಷ ಸೇನೆಯಲ್ಲಿ ೪ ಮಂದಿ ಹತರಾದರು.

[illegible] ಯುದ್ಧ ಭೂಮಿಯಿಂದ [illegible] [illegible] [illegible] ೧೦ [illegible] [illegible] [illegible] [illegible]
~~~~~

ಉತ್ತರ ಹಿಂದೂಸ್ಥಾನ.

ಇಂಪೀರಿಯಲ್ ಕೋಆಪರೇಟಿವ್ ಕಮಿಟಿಯು ಸಭೆಯು ಮುಂಬಾಯಿಯಲ್ಲಿ ಕೂಡಿ [illegible] ಪರಸ್ಪರ ಸಹಾಯಕ ಸಂಘಗಳ ವಿಷಯವಾಗಿ ಜನರ ಅಭಿಪ್ರಾಯಗಳನ್ನು ತಿಳಕೊಳ್ಳುವದೇ ಈ ಕಮಿಟಿಯ ಉದ್ದೇಶವಾಗಿದೆ.

ಮುಂಬಾಯಿಯಲ್ಲಿ ಅಮೇರಿಕನ್ ಕಾನ್ಸಲ್ ರಾದ ಮಿ। ಹೆನ್ರಿ ಬೇಕರರವರು [illegible] ವರ್ಗಾಯಿಸಲ್ಪಟ್ಟಿರುವರು.

ತಾತರವರ ಸ್ಟೀಲ್ ಕಂಪೆನಿಯ ವರ್ಷಾಂತಿಕ ಸಭೆಯು ತಾ. ೧೩ರಲ್ಲಿ ಮುಂಬಾಯಿಯಲ್ಲಿ ಕೂಡಿತು. ಸರ್ ಡಿ. ತಾತರವರು ಈ ಸಭೆಯಲ್ಲಿ ಅಧ್ಯಕ್ಷರಾಗಿದ್ದು ವರ್ಷದಲ್ಲಿ ಈ ಕಂಪೆನಿಯು ವಿಶೇಷವಾಗಿ ಅಭಿವೃದ್ಧಿ ಹೊಂದಿತೆಂದು ತಿಳಿಯ ಪಡಿಸಿದುದಲ್ಲದೆ ಯುದ್ಧದಿಂದ ಜರ್ಮನಿ ವ್ಯಾಪಾರಕ್ಕೆ ತಡೆಯಾದರೂ ಅದರ ಬದಲಿಗೆ ಈ ಕಂಪೆನಿಯು ಬೇಕಾದ ಸಾಮಾನುಗಳನ್ನು ಒದಗಿಸಿ ಕೊಟ್ಟಿರುವದೆಂದೂ ಸ್ವಾವಲಂಬನೆಯ ಮಾರ್ಗವು ಈ ಯುದ್ಧದಿಂದ ಹುಟ್ಟುವ ಹಾಗಾಯಿತೆಂದೂ ತಿಳಿಯ ಹೇಳಿದರು. ವರ್ಷಕಾಲದಲ್ಲಿ ಈ ಕಂಪೆನಿಯಲ್ಲಿ ೩೩,೬೩,೭೭೦ ರೂಪಾಯಿಗಳ ಲಾಭವಾಗಿರುವದು. ಲಾಭವನ್ನು ಪಾಲುಮಾಲಿಕರಿಗೆ ರೂ ೮—೧೩—೩ ಮತ್ತು ರೂ ೪—೮—೦ರ ಪ್ರಕಾರ ಹಂಚಿಕೊಡೋಣಾಗಿರುವದು.

ಬಹುಮಾನಪಟ್ಟ ಗೋಖಲೆಯವರು ತಾ. ೧೩ರಲ್ಲಿ ಶೀಮೆಯಿಂದ ಮುಂಬಾಯಿಗೆ ತಲಪಿ, ಪೂನೆಗೆ ಹೋಗಿರುವರು. ದಶಂಬರ [illegible] ವರೆಗೆ ಪೂನೆಯಲ್ಲಿಯೇ ಇದ್ದು ಅನಂತರ ಜನವರಿಯಲ್ಲಿ ಕೂಡುವ ಡಿಲ್ಲಿ ಇಂಪೀರಿಯಲ್ ನ್ಯಾಯವಿಧಾಯಕ ಸಭೆಗೆ ಹೋಗುವರು. ರಾಜಕೀಯೋದ್ಯೋಗ ಸಭೆಯ ವಿಷಯ ಪತ್ರ ಪ್ರತಿನಿಧಿಗಳು ಮಾತನ್ನಾಡಿದಲ್ಲಿ ಹೆಚ್ಚಿಗೆ ಏನೂ ಹೇಳದೆ "ನಾವು ಈ ಸಭೆಯ ಮುಖ್ಯ ಕೆಲಸವನ್ನು ತೀರಿಸಿರುವೆವು. ಉಳಿದ ಕೆಲಸವು ಬರುವ ಎಪ್ರೀಲ್ ತಿಂಗಳಿಗೆ ಮುಂದರಿಸಿಡೋಣಾಗಿರುವದು" ಎಂದು ಹೇಳಿರುವರು. ಇಂಗ್ಲಾಂಡಿನ ಛಳಿಯನ್ನು ತಡೆಯಲಾರದೆ ತಾನು ಈಗ ಹಿಂದೆ ಬರಬೇಕಾಯಿತು ಎಂದು ಹೇಳಿರುವರು. ಯುದ್ಧದ ಸಂಬಂಧವಾಗಿ ನಮ್ಮ ದೇಶದವರು ತೋರಿಸಿದ ರಾಜಭಕ್ತಿಯ ಈ ದೇಶದ ಪ್ರತಿಬಂದು [illegible] ಒಗ್ಗಟ್ಟಾಗಿ ಸಾಮ್ರಾಜ್ಯಕ್ಕೆ ಸಹಾಯ ಮಾಡುತ್ತಿರುವ ಕೆಲಸವೂ ಬಹು ಶ್ಲಾಘನೀಯವಾದುದೆಂದೂ ಇದರಿಂದ ಇಂಗ್ಲಾಂಡಿನಲ್ಲಿ ಭಾರತೀಯರ ವಿಷಯವಾದ ನಿಜ ಭಾವನೆಯು ಮೂಡಿರುವದೆಂದೂ ಹೇಳಿರುವರು.

ಕೆನಡಾ ದೇಶಕ್ಕೆ ಹಿಂದುಸ್ಥಾನದ ಕೂಲಿಯಾಳುಗಳನ್ನು ಬರುವ ಮಾರ್ಚ ತಾ. ೩೧ರ ವರೆಗೆ ಹೋಗಬಿಡುವದಿಲ್ಲವೆಂದು ಪ್ರಕಟವಾಗಿದೆ.

ಹಿಂದುಸ್ಥಾನದಲ್ಲಿ ಸ್ತ್ರೀಯರ ವಿದ್ಯಾಭ್ಯಾಸದಗೋಸ್ಕರ ಸ್ಥಾಪಿಸೋಣಾದ ಕಾಲೇಜುಗಳು ೧೨. ಇವುಗಳಲ್ಲಿ ಕಲಿಯುವ ಹುಡುಗಿಯರು [illegible] ಮೆಟ್ರಿಕ್ಯುಲೇಶನ್ [illegible] ಎಫ್.ಎ. ಮತ್ತು ಬಿ.ಎ. ಪರೀಕ್ಷೆಗಳಾಗಿ ಕಲಿಯುವ ಹುಡುಗಿಯರು ೧೭೩. ಹೈಸ್ಕೂಲುಗಳು ೧೩೫. ಇವುಗಳಲ್ಲಿ ಕಲಿಯುವ ಹುಡುಗಿಯರು ೧೫,೩೪೯. ಇಂಗ್ಲಿಷು ಕಲಿಸುವ ಮಿಡ್ಲಸ್ಕೂಲುಗಳು ೧೯೩. ಇವುಗಳಲ್ಲಿ ಕಲಿಯುವ ಹುಡುಗಿಯರು ೧೫,೦೩೩; ದೇಶಭಾಷೆ ಮಿಡ್ಲಸ್ಕೂಲುಗಳು ೧೯೮. ಇವುಗಳಲ್ಲಿ ಕಲಿಯುವ ಹುಡುಗಿಯರು ೧೩,೮೦೭; ಪ್ರಾಥಮಿಕ ಶಾಲೆಗಳು [illegible]. ಇವುಗಳಲ್ಲಿ ಕಲಿಯುವ ಹೆಣ್ಣು ಮಕ್ಕಳು [illegible]. ೩೦ ಕೋಟಿ ಜನಸಂಖ್ಯೆ ಇರುವ ಇಂಡಿಯಾದಲ್ಲಿ ಎಫ್.ಎ ಮತ್ತು ಬಿ.ಎ. ಪರೀಕ್ಷೆಗೆ ಕಲಿಯುವ ಸ್ತ್ರೀಯರು ೧೭೩ ಮಾತ್ರ ಇರುವದಾದರೆ ವಿದ್ಯಾಪ್ರಸಾರದ ಮಟ್ಟಿಗೆ ಹಿಂದುಸ್ಥಾನದ ಜನರ ಸ್ಥಿತಿಯು ಎಷ್ಟರ ಮಟ್ಟಿಗೆ ದುಃಖಕರವೆಂಬದು ವ್ಯಕ್ತವಾಗುತ್ತದೆ. ಮೇಲಿನ ಸಂಖ್ಯೆಯಲ್ಲಿ ದೇಶೀಯ ಸಂಸ್ಥಾನಗಳ ಶಾಲೆಗಳು ಸಹ ಸೇರಿವೆ.

ದಕ್ಷಿಣ ಹಿಂದುಸ್ಥಾನ.

ಮದ್ರಾಸ್ ಗವರ್ನರರಾದ [illegible] ಬೆಲ್ಲಾರಿ ಮತ್ತು ದಕ್ಷಿಣ [illegible] ರಿಂದ) ತಾ. [illegible]

ದಕ್ಷಿಣ ಕನ್ನಡ.

ಉಳ್ಳಾಲ:—ಇದೇ ನವೆಂಬರ ತಿಂಗಳ ೧ನೇ ತಾರೀಕು ಆದಿತ್ಯವಾರ ದಿವಸ ಉಳ್ಳಾಲ ಮುನಿಸಿಪಲ್ ಬೋರ್ಡು ಶಾಲೆಯ ಹೊಸ ಕಟ್ಟೋಣದಲ್ಲಿ ಶಾಲಾ ಹುಡುಗರು ವಗೈರೆ ವಿಜೃಂಭಣೆಯಿಂದ ಶುಮಾರು ೧೦ ಗಂಟೆ ಸಮಯಕ್ಕೆ ಹೊಸಕಟ್ಟೋಣವನ್ನು ಪ್ರವೇಶಿಸಿದರು. ಒಳ್ಳೇ ಮುಹೂರ್ತದಲ್ಲಿ ಪದ್ಧತಿ ಪ್ರಕಾರ ಪಾಠವನ್ನು ಪ್ರಾರಂಭಿಸಿ ಮನ್ಸೂಲೂದ್ ಓದಿದ ಬಳಿಕ ಶಾಲಾ ಮ ಇತರ ಹುಡುಗರಿಗೆ ಮಿಠಾಯಿ ಬಾಳೆಹಣ್ಣು ಕಟ್ಟು ಹಂಚಿದ ನಂತರ ಶುಮಾರು ೩ ಗಂಟೆ ಸಮಯಕ್ಕೆ ಊರಿನ ಎಲ್ಲಾ ಮಾಪಿಳ್ಳೆಯರು ಮ ಇತರ ಗೃಹಸ್ಥರು ಕೂಡಿದ್ದರು. ಶಾಲಾಧಿಕಾರಿಗಳಾದ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರೂ ರಾವು ಬಹದ್ದೂರ್ ಅಸಿಸ್ಟಾಂಟ್ ಇನ್ಸ್ಪೆಕ್ಟರರೂ ಜನಾಬ್ ಹಾಜಿ ತಾಲಿಬಲಿ ಸಾಹೇಬರೂ ಬಂದಿದ್ದರು. ಈ ಶಾಲಾಧಿಕಾರಿಗಳನ್ನು ಶಾಲಾ ವಿದ್ಯಾರ್ಥಿಗಳು ಬಹಳ ವಿಜೃಂಭಣೆಯಿಂದ ಸ್ವಾಗತಮಾಡಿ ಶಾಲೆಯನ್ನು ಪ್ರವೇಶಿಸಿದರು. ಈ ನೆರೆದಿದ್ದ ಸಭೆಯಲ್ಲಿ ಮ. ರಾ. ರಾ. ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರೂ ಅಧ್ಯಕ್ಷರಾಗಿದ್ದು ಇಲ್ಲಿಯ ಮುಖ್ಯೋಪಾಧ್ಯಾಯರಿಗೆ ಇರುವ ವಿದ್ಯಾತುರವನ್ನು ತೋರ್ಪಡಿಸಿದ ನಂತರ ಮ. ರಾ. ರಾ. ರಾವು ಬಹದ್ದೂರು ಅಸಿಸ್ಟಾಂಟ್ ಇನ್ಸ್ಪೆಕ್ಟರರವರು ಬ್ರಿಟಿಷ್ ರಾಜಭಾರದಲ್ಲಿರುವ ಸೌಕರ್ಯವನ್ನೂ ವಿವರಿಸಿದ ಬಳಿಕ ಅಧ್ಯಕ್ಷರು ಕಾಲೋಚಿತವಾದ ಭಾಷಣವನ್ನು ಕೊಟ್ಟರು. ಅಧ್ಯಕ್ಷರ ಭಾಷಣಾನಂತರ ಊರಿನ ಮಹಮ್ಮದೀಯರೆಲ್ಲರೂ ಬ್ರಿಟಿಷರಿಗೂ ಜರ್ಮನರಿಗೂ ಈಗ ನಡಿಯುತ್ತಿರುವ ಯುದ್ಧದಲ್ಲಿ ಸಾಮ್ರಾಜ್ಯದ ಕಡೆಗಿರುವ ರಾಜಭಕ್ತಿಯನ್ನು ತೋರ್ಪಡಿಸಿ, ಜಯ ಉಂಟಾಗುವಂತೆ ಪ್ರಾರ್ಥಿಸಿದ ಬಳಿಕ ಶಾಲಾ ಮಾಸ್ತರ್ ಕೆ. ಮಹಮ್ಮದ್ ಹಾರೂನ್ ಸಾಹೇಬರು ಸಮ್ರಾಟ ಐದನೆ ಚಕ್ರವರ್ತಿಯವರ ಮೇಲೆ ಜಯವಾಗಲೆಂದು ಹಿಂದೂಸ್ಥಾನಿ ಭಾಷೆಯಲ್ಲಿ ಪದ್ಯವನ್ನು ಹಾಡಿದರು. ಕಡೆಗೆ ರಾಜರಿಗೆ ಜಯವಾಗಲಿ ಎಂದು ಸಭಿಕರೆಲ್ಲರೂ ಹರಸಿ ಸಭೆಯು ಅಂತ್ಯವಾಯಿತು.

ಬಂಗ್ರಮಂಜೇಶ್ವರ:—ಇಲ್ಲಿಯ ರಾಜರಸ್ತೆಯಿಂದ ಮಿಶನ್ ಶಾಲೆಗೆ ಆಗುವ ರಸ್ತೆಗೆ [illegible] ಗುಡ್ಡೆ ದಾರಿಯು ತಾಲೂಕಧಿಕಾರಿಗಳಾಗಲೀ ಇತರರಾಗಲೀ ಈ ವರೆಗೂ ದುರುಸ್ತಿ ವಗೈರೆ ಮಾಡಿಸದೆ ಇದ್ದುದರಿಂದ ಶಾಲಾ ಬಾಲಕರು ಮೊನೆ ಕಲ್ಲುಗಳಿಂದ ಸಂಕಷ್ಟಪಡುವುದನ್ನು ಇಲ್ಲಿಯ ದೇವಮೂರ್ತಿ ವಿಟ್ಲ ಬತ್ತಿಯವರು ನೋಡಿ ತಮ್ಮ ಖರ್ಚಿನಿಂದ ಸದರಿ ಮಾರ್ಗವನ್ನು ಬಹಳ ಚೊಕ್ಕಟವಾಗಿ ದುರುಸ್ತಿಪಡಿಸಿದ ಸಂಗತಿಯನ್ನು ತಿಳಿಸುವದೆ ಸಂತೋಷಪಡುತ್ತೇನೆ.

ಇಲ್ಲಿಯ ಕಡಲಿನ ಗುತ್ತಿಗೆದಾರನು ಕ್ರಮಪ್ರಕಾರ ಕಡವಿನಲ್ಲಿ ದೋಣಿಗಳೂ [illegible] ಇಲ್ಲದೆ ಜನರನ್ನು ಕಷ್ಟಕ್ಕೆ ಒಳಪಡಿಸುತ್ತಾ ಬಂದ್ದರಿಂದ [illegible] ಸರಕಾರದವರು ಈ ಊರ ಜನರ ಅರ್ಜಿಗಳನ್ನು ತನಿಕೆ ನಡಿಸಿ ಆತನ ಗುತ್ತಿಯನ್ನು ರದ್ದು ಪಡಿಸಿ ಸದರಿ ಗುತ್ತೆಯನ್ನು ಇದೇ ನವಂಬರ ತಾ. ೨೧ಕ್ಕೆ ಮಂಜೇಶ್ವರ ಮೊಕ್ಕಾಮಿನಲ್ಲಿ ಪುನಃ ಏಲಮಿಗೆ ಇಟ್ಟಿರುತ್ತದೆ.

ಇಲ್ಲಿ ಸಂಬಂಧ ಶಾಲಾ ಹೆಡ್ ಮಾಸ್ತರ ಮತ್ತು ಆತನ ಸಂಬಂಧಿಕನ ಮೇಲೆ ನಡಿಸಿದ "ಸ್ಯೂಕೇಸ್" ನಂಬರವು ಇನ್ನೂ ಪೂರ್ತಿ ತನಿಖೆಯಾಗದೆ ಇದೇ ನವಂಬರ ೨೧ಕ್ಕೆ ಮುಂದರಿಸಿಟ್ಟಿರುತ್ತದೆ.

ಹಿರಿಯಡ್ಕ:—ಈ ಪೇಟೆಯು ಕಾರ್ಕಳದಿಂದ ಉಡ್ಪಿ ಅತ್ತ ಕಡೆ ಹೋಗುವ ರಾಜ ಮಾರ್ಗವಾಗಿಯೂ ಮೈಸೂರು ಪ್ರೊವಿನ್ಸ್ನಿಂದ ಆಗುಂಬೆ ಮಾರ್ಗವಾಗಿ ಉಡ್ಪಿಗೆ ಬರುವ ರಾಜಮಾರ್ಗವಾಗಿಯೂ ಮತ್ತು ಕುಂದಾಪುರದಿಂದ ಬ್ರಹ್ಮಾವರಕ್ಕಾಗಿ ಕಾರ್ಕಳಕ್ಕೆ ಹೋಗುವ ರಾಜಮಾರ್ಗವಾಗಿಯೂ ಇದ್ದು ಈ ಎಲ್ಲಾ ರಾಜಮಾರ್ಗಗಳು ಬಂದು ಒಟ್ಟು ಕೂಡಿದ ಮಧ್ಯ ಸ್ಥಳವಾಗಿರುತ್ತದೆ. ದೂರ ದೇಶದಿಂದ ಬರುವ ಪ್ರಯಾಣಿಕರು ಯಾವ ಮಾರ್ಗ, ಎಲ್ಲಿಗೆ ಹೋಗುತ್ತದೆ ಎಂಬದಾಗಿ ತಿಳಿಯದೆ ತೊಂದರೆಪಡುವದರಿಂದ ನಮ್ಮ ಪ್ರಭುಗಳ ಗವರ್ನಮೆಂಟಿನವರು ಇಲ್ಲಿಗೆ ಎರಡು ಕೈಕಂಭಗಳನ್ನು ದಯಮಾಡಿ ಇಡಿಸಿದಲ್ಲಿ ಬಡ ಪ್ರಯಾಣಿಕರಿಗೆ ತುಂಬಾ ಉಪಕಾರವಾಗುತ್ತಿತ್ತು.

ಸಂಪಾಜೆ:—ನವಂಬರ ತಾ. ೧೦ನೇ ಮಂಗಳವಾರ [illegible] ೧೧ ಗಂಟೆ ಸಮಯಕ್ಕೆ ಬಹುಮಾನಪಟ್ಟ [illegible] ದೊರೆಗಳವರು [illegible] ನಮ್ಮ ಸಂಪಾಜೆಗಾಗಿ [illegible] ಸಂಪಾಜೆ [illegible] ಬೋರ್ಡು ಸ್ಕೂಲುಗಳ [illegible] ಶ್ರೀ ದೊರೆಗಳವರ ಗಾಡಿಯು [illegible] ದಯಮಾಡಿಸಿದ್ದರಿಂದ ಇಲ್ಲಿ ರಸ್ತೆಯ ಇಕ್ಕೆಡೆ ಕಟ್ಟಿದ್ದ ಚಿತ್ರವಿಚಿತ್ರ ತೋರಣ ಮ ಶೃಂಗಾರದ [illegible] ರಸ್ತೆಯ ಇಕ್ಕೆಡೆಯಲ್ಲೂ ಶಾಲಾ ಹುಡುಗರು ಸಾಲಾಗಿ ನಿಂತಿದ್ದವರು ಸಂತೋಷದಿಂದ ಪುಷ್ಪವೃಷ್ಟಿಯನ್ನು ಗರೆದರು. ಬಹುಮಾನಪಟ್ಟ ಪ್ರಭುಗಳವರು ಬಂಡಿಯಲ್ಲಿ ಒಂದೆರಡು ಮೂರು ಅಡಿಗಳಷ್ಟು ಮುಂದಕ್ಕೆ ಹೋಗಲಾಗಿ ಶಾಲಾ ಉಪಾಧ್ಯಾಯರುಗಳಿಂದ [illegible] ನೀಡಲ್ಪಟ್ಟ ಪುಷ್ಪ ಕಾಣಿಕೆಗಳನ್ನು ಸ್ವೀಕರಿಸುತ್ತಾ ಮುಂದೆ ನಿಂತಿದ್ದ ಗ್ರಾಮಾಧಿಕಾರಿ ಪಟೇಲ ಮ ಗ್ರಾಮ ಮುಖ್ಯಸ್ಥರ ಅಭಿವಂದನೆಗಳನ್ನು ಕೈಕೊಂಡು ಪರಮೋಲ್ಲಾಸಭರಿತರಾಗಿ ಕೂಡಿದ ಜನರಿಗೆ ಸ್ವಸ್ಥಾಭಿಮುಖರಾಗಲು ಅಪ್ಪಣೆ ಕೊಟ್ಟು ತಾವು ಪಯಣ ಬೆಳಸಿದರು. ಬಹುಮಾನಪಟ್ಟ ಶ್ರೀ ಗವರ್ನರ ದೊರೆಗಳವರು ಚಿಕ್ಕ ಹಳ್ಳಿಯ ಬಡ ರೈತರ ಅಭಿವಂದನೆಯಲ್ಲಿ ಇಷ್ಟು ಸಂತೋಷವನ್ನು ತೋರಿಸಿದ್ದರಿಂದ ಎಲ್ಲಾ ಜನರೂ ಸಂತೋಷಭರಿತರಾದರು.

ಪುತ್ತೂರು:—ಇದೇ ತಾ. ೧೬ರಲ್ಲು ಇಲ್ಲಿಯ ಡಿವಿಜನಲ್ ಆಫೀಸಿನ ಕಟ್ಟೋಣದಲ್ಲಿ ಗ್ರಾಮ ಉದ್ಯೋಗಸ್ಥರ ಪರೀಕ್ಷೆಯು ಡಿವಿಜನಲ್ ಆಫೀಸರವರ ಮೇಲ್ವಿಚಾರದಲ್ಲಿಯೇ ನಡಿಯಿತು. ೩೬ ಉಮೆದ್ವಾರರ ಪೈಕಿ ೧೮ ಉಮೆದ್ವಾರರು ಮಾತ್ರ ಹಾಜರಾಗಿದ್ದರು.

ನಮ್ಮ ಡಿವಿಜನಲ್ ಆಫೀಸರರು ನವಂಬರ ತಾ. ೨೦ರಲ್ಲು ಪುತ್ತೂರಿಂದ ಪೆರಾಲ, ತಾ. ೨೧ ಕಾಸರಗೋಡು, ತಾ. ೨೨ ನೀಲೇಶ್ವರ, ತಾ. ೨೩ ತಾ. ೨೪ರಿಂದ ದಶಂಬರ ೫ರ ವರೆಗೆ ಕುಮ್ರಿ ಗ್ರಾಮುಗಳಲ್ಲಿ ಸರ್ಕೀಟು ಬೆಳಸುವರು.

ನಮ್ಮ ಟೌನಿನ ದೀಪಸ್ತಂಭಗಳು ಉರಿಸದೆ ಇರಲಿಕ್ಕೆ ರಜೆ ದಿವಸಗಳು ಯಾವ್ಯಾವವು? ತಾ. ೮ ಮತ್ತು ೯ನೇ ದಿವಸಗಳಲ್ಲಿ ದೀಪಸ್ತಂಭಗಳಿಗೆ ಯಾವ ಕಾರಣದಿಂದ ರಜೆ ಕೊಡೋಣಾಗಿತ್ತು? ದೀಪಸ್ತಂಭಗಳು ರಾತ್ರಿ ೮॥ ಗಂಟೆ ವರೆಗೆ ಉರಿಯಬೇಕೆಂಬ ನಿಯಮ ಯಾವಾಗ ಜಾರಿಗೆ ಬಂದದ್ದು? ೨೩ ದೀಪಸ್ತಂಭಗಳಲ್ಲಿ ಕೊಟ್ಟೊಟ್ಟು ಜೈಲಿಗೆ ಹೋಗುವ ದಾರಿ ಬಳಿಯ ಇರುವ ದೀಪಸ್ತಂಭಕ್ಕೆ ಎಷ್ಟು ಕಾಲದ ಫರ್ಲೋ ರಜೆ? ಯಾವ ಕಾರಣದಿಂದ?

ಪದಾರ್ಥಾಸ್ಯಗಳ ಬೆಲೆ ವಿಪರೀತ ತಗ್ಗಿಕೊಂಡಿದ್ದು ಅಕ್ಕಿಯ ಬೆಲೆ ಇತ್ತಲಾಗೆ ೩ ದಿವಸಗಳಿಂದ ಏರುತ್ತಲೇ ಬರುವದು. ಇಲ್ಲಿ ಹೊಸ ಅಕ್ಕಿಗೆ ಮುಡಿ ೧೮ ರೂಪಾಯಿ ೪-೨-೦ರಿಂದ ೫ರವರೆಗೆ ಇರುವದು ಕಾರಣವೇನೋ ತಿಳಿಯದು.

ಕಾಪು:—ಪಾಂಗಾಳ ಹೊಳೆಗೆ ಸೇತುವೆ ಆಗುವದೆಂದು ಕೇಳಿ ಎರಡು ಮಳೆಗಾಲ ದಾಟಿದಾಗ್ಯೂ ಕೆಲಸ ಪ್ರಾರಂಭಿಸಿದರಂತೆ ಕಂಡುಬರುವದಿಲ್ಲ. ಲೋಕಲ್ ಫಂಡ್ ಇಲಾಖೆಯವರೇ ಕಟ್ಟಿಸುವರೆ ವಹಿಸಿಕೊಂಡಿರುವದರಿಂದ ಬರುವ ಮಳೆಗಾಲದೊಳಗಾದರೂ ಆಗುತ್ತಿದ್ದರೆ ಜನರಿಗೆಲ್ಲಾ ಎಷ್ಟೋ ಉಪಕಾರವಿದೆ.

ಇತ್ತಲಾಗೆ ಅಲ್ಲಲ್ಲಿ ಬ್ರೇಂಚ್ ಟಪ್ಪಾಲಾಫೀಸುಗಳು ತೆರೆಯಲ್ಪಟ್ಟ ವಾರ್ತೆ ಸ್ವದೇಶಾಭಿಮಾನಿ ಪತ್ರಿಕೆಯಿಂದ ತಿಳಿದು ಬಂದಾಗ್ಯೂ ಯಮರ್ಗಳ ಬ್ರೇಂಚಾಫೀಸು ಇನ್ನೂ ತೆರೆಯಲು ದಿನಬಾರದೆ ಇದ್ದದ್ದು ಯಮರ್ಗಳ ನಿವಾಸಿಕರ ಭಾಗ್ಯವೆಂದು ತಿಳಿಯಬೇಕಾಗಿದೆ.

ಪಡುಬಿದ್ರೆ ಬ್ರೇಂಚಾಫೀಸು ಸ್ಥಾಪನೆ ಆಗುವ ಎಷ್ಟೋ ವರ್ಷಗಳ ಮೊದಲು ಕಾಪು ಬ್ರೇಂಚಾಫೀಸು ತೆರೆಯಲ್ಪಟ್ಟು ಅಲ್ಲಿಗಿಂತ ಹೆಚ್ಚಿನ ಉತ್ಪತ್ತಿ ಕೆಲಸಗಳು ಇಲ್ಲಿರುತ್ತಾ ಸಂಬಳದಲ್ಲಿ ಮಾತ್ರ ಇಲ್ಲಿಯ ಆಫೀಸು ಆ ಆಫೀಸಿಗಿಂತ ಕೆಳಸ್ಥಾನದಲ್ಲಿರುವ ಕಾರಣವೇ ತಿಳಿಯದು. ಈ ವಿಷಯ ಟಪ್ಪಾಲಾಧಿಕಾರಿಗಳು ಸ್ವಲ್ಪ ಗಮನ ಕೊಟ್ಟಿದ್ದರೆ ಉಪಕಾರವಿದೆ.

ವಿದ್ಯಾ ಇಲಾಖೆಯ ೮ ನೇ ಸರ್ಕಲು ಇನ್ಸ್ಪೆಕ್ಟರರಾದ [illegible] ಒ. ಹೊಜೆಸ್ ದೊರೆಗಳವರೂ ದಕ್ಷಿಣ ಕನ್ನಡ [illegible] ಅಸಿಸ್ಟಾಂಟು ಇನ್ಸ್ಪೆಕ್ಟರರೂ ಈ ದಿನ ಮಂಗಳೂರಿಗೆ [illegible] ಹೋಗುವಂಥವರು [illegible] ಕನ್ನಡ ಶಾಲೆಯನ್ನು ಸಂದರ್ಶಿಸಿ [illegible] ಸಂತೋಷಪಟ್ಟರು.

[illegible]:— [illegible]

ವಾರ ದಿನ ಶಾಪೂರು ಬೋರ್ಡು ಶಾಲೆಯಲ್ಲಿ ಕಳ್ಳಿಗೆ ಬೋರ್ಡು ಶಾಲಾ ಮಾಸ್ತರ ರಾ। ಅ. ವಾಸ್ತೀವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿತು. ಸಭೆಯ ಉದ್ದೇಶವನ್ನು ಯುದ್ಧ ಸಮ್ಮಂಧವಾದ ಶಿಕ್ಷನಷ್ಟಗಳನ್ನೂ ತೋರಿಸಿಕೊಟ್ಟು ಸದರಿ ಸಂಘದ ಸೆಕ್ರೆಟರಿ ರಾ। ೩. ರಾಮಚಂದ್ರ ಹೆಗ್ಡೆಯವರು ಮಾತಾಡಿದರು. ಬ್ರಿಟಿಷ್ ರಾಜ್ಯಭಾರದಿಂದ ನಮಗುಂಟಾದ ಪ್ರಯೋಜನಗಳನ್ನು ಕುರಿತು ಇತರರಿಂದ ವಿವರಿಸಲಾಯಿತು. ಕಳ್ಳಿಗೆ ಬೋರ್ಡು ಶಾಲೆಯ ಹೆಡ್ ಮಾಸ್ಟರ್ ಬಿ. ಶಂಕರನಾರ್ಣಪ್ಪಯ್ಯರು ಸೂಚಿಸಿದ ಮೇರೆಗೆ ಒಂದು ವಂತಿಗೆ ಪಟ್ಟಿಯು ತೆರೆಯೋಣಾಯಿತು. ವಂತಿಗೆಯ ಹಣವನ್ನು ಶಾಲಾ ಅಧಿಕಾರಸ್ಥರ ಮುಖಾಂತರ ಯುದ್ಧ ಫಂಡಿಗೆ ಕಳುಹಿಸುವಂತೆ ನಿರ್ಣಯಿಸಲ್ಪಟ್ಟಿತು. ವಿದ್ಯಾರ್ಥಿಗಳನೇಕರು ಸದರಿ ಫಂಡಿಗೆ ತಮ್ಮ ಯಥಾನುಶಕ್ತಿ ಸಹಾಯವನ್ನು ಕಳುಹಿಸಬೇಕೆಂದು ಕುತೂಹಲಪಡುತ್ತಿರುವದರಿಂದ ಸದರಿಯವರ ಹಣವನ್ನು ಸೆಕ್ರೆಟರಿ ಮುಖಾಂತರ ಕಳುಹಿಸಬಹುದಾಗಿ ನಿರ್ಣಯಿಸಲ್ಪಟ್ಟಿತು. ಉಪಾಧ್ಯಾಯರೆಲ್ಲಾ ಯುದ್ಧದ ಸಮಾಚಾರಗಳನ್ನು ಹಪ್ತೆಗೆ ಒಂದಾವರ್ತಿಯಾದರೂ ತಮ್ಮ ವಿದ್ಯಾರ್ಥಿಗಳಿಗೆ ವಿವರಿಸಿ ಯುದ್ಧದ ಸಂಕಷ್ಟಗಳನ್ನು ನಿವಾರಿಸಿ ನಮ್ಮ ಸಾರ್ವಭೌಮನಿಗೆ ಜಯ ಉಂಟಾಗಲಿ ಎಂದು ದೇವರ ಕೂಡೆ ಪ್ರಾರ್ಥಿಸುವಂತೆ ಮಾಡಬೇಕಾಗಿ ಸಹ ನಿರ್ಣಯಿಸಲ್ಪಟ್ಟಿತು. ಸಭೆಯಲ್ಲಿ ರೂ ೩೦—೮—೦ ಜಮೆಯಾಯಿತು.

~~~~~~

ಕಿನ್ನಿಗೋಳಿ

ವಿಲಾಯತಿಯಲ್ಲಿ ನಡೆಯುತ್ತಿರುವ ಈಗಿನ ಮಹಾ ಯುದ್ಧದಲ್ಲಿ ಕಾದಾಡುತ್ತಿರುವ ಸೇನಾ ವೀರರ ಸಹಾಯಾರ್ಥವಾಗಿ ಮದ್ರಾಸ್ ಗವರ್ನರರವರು ಏರ್ಪಡಿಸಿರುವ ಯುದ್ಧ ಫಂಡಿಗೆ ಚಂದಾ ಕೂಡಿಸುವ ಬಗ್ಗೆ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಮ್ಮೇಳನದ ವಿಶೇಷ ಕೂಟವೊಂದು ಇದೇ ನವಂಬರ ತಿಂಗಳ ತಾರೀಕು ೭ನೇ ಶನಿವಾರ ಮಧ್ಯಾಹ್ನ ೩ ಗಂಟೆಗೆ ಕಿನ್ನಿಕಂಬಳ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ನೆರೆಯಿತು. ಈ ಸಮ್ಮೇಳನಕ್ಕೆ ಸೇರಿದ ೨೪ ಶಾಲೆಗಳಿಂದ ೨೧ ಮಂದಿ ಉಪಾಧ್ಯಾಯರು ಹಾಜರಾಗಿದ್ದರು. ಸಭಿಕರ ಅಭಿಮತಾನುಸಾರವಾಗಿ ಅಧ್ಯಕ್ಷಸ್ಥಾನವನ್ನು ವಹಿಸಿದ ಸಂಘದ ಕಾರ್ಯದರ್ಶಿಯು ಯಥೋಚಿತವಾದ ಮಾತುಗಳಿಂದ ಬ್ರಿಟಿಷರ ಆಳಿಕೆಯಲ್ಲಿ ಅದರಲ್ಲೂ ನಮ್ಮ ಪ್ರಿಯ ಜಾರ್ಜ ಚಕ್ರವರ್ತಿಯವರ ಆಳಿಕೆಯಲ್ಲಿ ನಮಗೆ ಲಭಿಸಿದ ಮಹತ್ತರವಾದ ಅನೇಕಾನೇಕ ಉಪಕಾರಗಳನ್ನು ಚನ್ನಾಗಿ ವಿವರಿಸಿದ ಮೇಲೆ ಶಾಲೋಪಾಧ್ಯಾಯರೆಲ್ಲಾ ತಂತಮ್ಮ ಶಕ್ತ್ಯಾನುಸಾರವಾಗಿ ವಂತಿಗೆಯನ್ನು ಕೂಡಿಸಿ ಈ ತಿಂಗಳ ತಾ [illegible] ಶನಿವಾರ ನಡೆಯಲಿಕ್ಕಿರುವ ಉಪಾಧ್ಯಾಯರ ಸಮ್ಮೇಳನದ ಮುಂದೆ [illegible] ಹುಡುಗರ ಹೆಸರು ಪಟ್ಟಿ ಮತ್ತು ಮೊಬಲಗುಗಳ [illegible] ಪಟ್ಟಿಗಳ ಸಹಿತ ಆ ಹಣವನ್ನು ಸಂಘದ ಕಾರ್ಯದರ್ಶಿಯವರಿಗೆ ಕೊಡಬೇಕು. ಈ ಕೂಟಕ್ಕೆ ಹಾಜರಾಗದೆ ಇರುವ ಶಾಲಾ ಮುಖ್ಯೋಪಾಧ್ಯಾಯರು ಸಹಾ ತಮ್ಮ ಶಾಲೆಗಳಲ್ಲಿ ಇದೇ ರೀತಿಯಲ್ಲಿ ನಡಕೊಳ್ಳುವ ಹಾಗೆ ಈ ನಿರ್ಣಯದ ಪ್ರತಿಗಳನ್ನು ಆ ಮುಖ್ಯೋಪಾಧ್ಯಾಯರ ತಿಳುವಳಿಕೆಗಾಗಿ ಕಾರ್ಯದರ್ಶಿಯು ಕಳುಹಿಸಬೇಕು.

ಈ ಎರಡು ಸೂಚನೆಗಳ ಸಭಿಕರೆಲ್ಲಾ ಏಕಮತವಾಗಿ ಅಂಗೀಕರಿಸೋಣಾದವು.

~~~~~~

ಮುಲ್ಕಿ — ಕರಾವಳಿ ಕಾಹಿಲೆಯಲ್ಲಿದ್ದ ಮನೆಯು ದೂರವಾಗಿ ದಿನಾವಹಿ ಚಿಕಿತ್ಸೆಗೆ ಆಸ್ಪತ್ರೆಗೆ ಬರಲು ಅಸಾಧ್ಯವಾಗಿ ಪೇಟೆಯಲ್ಲಿ ಬಿಡಾರವಿಟ್ಟು ಚಿಕಿತ್ಸೆ ನಡಿಸಿಕೊಳ್ಳುವರೆ ಆಸ್ಪದವಿಲ್ಲದ ಅತಿ ಬಡವರ ಬಗ್ಗೆ ಇಲ್ಲಿ "ಮುಲ್ಕಿ ಡಿಸ್ಪೆನ್ಸರಿಯ ಅನಾಥ ರೋಗಿಗಳ ಫಂಡು" ಎಂಬದೊಂದು ಫಂಡು ೧೯೧೩ನೇ ಇಸವಿಯಲ್ಲಿ ಇಲ್ಲಿಯ ದಾಕ್ತಾರ ಕೆ. ರಾಮರಾಯರ ಪ್ರಯತ್ನದಿಂದ ಸ್ಥಾಪಿಸಲ್ಪಟ್ಟಿತ್ತು. ಕಳೆದ ವರ್ಷ ಈ ಊರಿನ ಗೃಹಸ್ಥರಿಂದ ಈ ಫಂಡಿಗೆ ರೂ ೨೫೩—೦—೦ ವಸೂಲಾಯಿತು. ಆಸ್ಪತ್ರೆಯಲ್ಲಿಟ್ಟ ಅನಾಥರ ಡಬ್ಬಿಯಲ್ಲಿ ರೂ ೮—೧—೧೦ ಜಮೆಯಾಯಿತು. ಕಳೆದ ಮಾರ್ಚಿ ತಿಂಗಳ ವರೆಗೆ ಬಂದ ಬಡ್ಡಿ ರೂಪಾಯಿ ೫—೧೩—೫ ಜುಮಲಾ ರೂಪಾಯಿ [illegible]—೧[illegible]—೩ ಈ ಫಂಡಿನ ಕಳೆದ ವರ್ಷದ ಉತ್ಪತ್ತಿಯಾಗಿರುವುದು. ಇದರಿಂದ ರೂ. ೮—೪—೦ ಅನಾಥ ರೋಗಿಗಳ ಬಗ್ಗೆ ಖರ್ಚಾಗಿರುವುದು. ಉಳಿಕೆ ಬಾಕಿ ರೂ. [illegible]—೧೧—೩ ಸೇವಿಂಗ್ಸ್ ಬೇಂಕಿನಲ್ಲಿರುವದು. ಕಳೆದ ವಾರ ಕೂಡಿದ [illegible] ದಿನ ಮೀಟಿಂಗಿನಲ್ಲಿ ತಾಲೂಕು ಬೋರ್ಡು ಪ್ರೆಸಿಡೆಂಟರು [illegible] ಆಲೋಚನೆ ಪ್ರಕಾರ ಈ ಹಣವನ್ನು ಕೋಪರೇಟಿವ್ ಬೇಂಕಿನಲ್ಲಿ [illegible] [illegible]

ಇಲ್ಲಿ ೭-೮ ವರ್ಷಗಳಿಂದ ಪೋಸ್ಟುಮಾಸ್ತರರಾಗಿದ್ದು ನಂಬಿಕೆಯಿಂದಲೂ ಜನರ ಪ್ರೀತಿಪಾತ್ರರಾಗಿಯೂ ಕೆಲಸ ಮಾಡಿದ ರಾ। ಎ. ಆನಂದರಾಯರವರು ತ್ರಿಚನಾಪಳ್ಳಿಗೆ ವರ್ಗಾಯಿಸಲ್ಪಟ್ಟದ್ದು ನಮ್ಮಗಳಿಗೆ ಅಸಂತೃಪ್ತಿಯ ವಿಷಯವಾದರೂ ಇವರ ಬದಲಿಗೆ ನಮ್ಮ ಊರ ಮನೆಯ ಮೆ। ಅನಾಜ್ಞರವರು ಇಲ್ಲಿಗೆ ವರ್ಗಾಯಿಸಲ್ಪಟ್ಟದ್ದು ಸಂತೋಷಕರವೇ ಆಯಿತು. ಪರಂತು, ಮೆ। ಅರಜ್ಞರವರು ಇಲ್ಲಿಗೆ ವರ್ಗಾಯಿಸಲ್ಪಟ್ಟು ಆರು ತಿಂಗಳೊಳಗೆ ೬೦೦ ರೂಪಾಯಿಯ ಇನ್ಶೂರು ಕಾಗದವನ್ನು ಕಳಕೊಂಡದ್ದರಿಂದ ತುಂಬಾ ವಿಶಾದಪಡುತ್ತೇವೆ.

~~~~~~

ಮಂಗಳೂರು

ಜಿಲ್ಲಾ ಕಲೆಕ್ಟರ ದೊರೆಗಳವರ ಸರ್ಕಿಟು ಕ್ರಮಪಟ್ಟಿ — ತಾ ೨೧ ಕೊಂಬ್ರ್ ತಾ ೨೨ ಕುಲಕುಂದ ತಾ ೨೩ ಕಡಬಾ ತಾ ೨೪ ಪಾಣಿ ತಾ ೨೫ ಉಪ್ಪಿನಂಗಡಿ ತಾ ೨೬ ಉಪ್ಪಿನಂಗಡಿ ತಾ ೨೭ ಪಾಣೆಮಂಗಳೂರು ತಾ ೨೮ ಮಂಗಳೂರು.

ಮುಂಬಯಿ ಸಾವಕಾರ ಮೃತ ದಾಮೋದರದಾಸ್ ಗೋವರ್ಧನದಾಸ್ ಸುಖಡವಾಲ ಎಂಬವರು ವಿಲಿನಲ್ಲಿ ವಿಧಿಸಿದ್ದ ಪ್ರಕಾರ ಅವರ ಉತ್ತರಾಧಿಕಾರಿಗಳ ರೂ ೧೦೦೦ ಮಂಗಳೂರು ಬ್ರಹ್ಮ ಸಮಾಜಕ್ಕೆ ದಾನವಾಗಿ ಕಳುಹಿಸಿದ್ದಾರೆ.

ಇದೇ ತಿಂಗಳ ೧೨ನೆ ತಾರೀಕಿಗೆ ಕೂಡಿದ ಮಂಗಳೂರ ತಾಲೂಕು ಬೋರ್ಡು ಮೀಟಿಂಗಿನಲ್ಲಿ ಮ। ರಾ। ಮುಲ್ಕಿ ಶೀನು ಶೆಟ್ಟಿ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರಾಗಿ ಚುನಾಯಿಸಲ್ಪಟ್ಟರು.

ಇಲ್ಲಿಯ ಶಾಲೆಗಳ ಜಿಮ್ನಾಸ್ಟಿಕ್ ಪಂದ್ಯಾಟದಲ್ಲಿ ಮಿಶ್ಯನ್ ಹಾಯಸ್ಕೂಲಿನ ಜೂನಿಯರ್ ಮತ್ತು ಸೀನಿಯರ್ ಪಂಗಡದವರು ಗವರ್ನ್ಮೆಂಟ್ ಕಾಲೇಜಿನ ಸೀನಿಯರ್ ಮತ್ತು ಜೂನಿಯರ್ ಕಪ್ಪುಗಳನ್ನೂ ಬಹುಮಾನವಾಗಿ ಹೊಂದಿದರು.

ಕಳೆದವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೧ ಪ್ಲೇಗು ಮರಣ ಮತ್ತು ೧ ಕೋಲೆರಾ ಮರಣ ಇತ್ತು.

ಇಲ್ಲಿ ಕ್ರಿಕೆಟ್ ಮೊದಲಾದ ಆಟಗಳಲ್ಲಿ ಪ್ರವೀಣರೂ ಸಾಧು ಸ್ವಭಾವದವರೂ ಎಂದು ವಿದ್ಯಾರ್ಥಿ ವರ್ಗದವರಿಗೆಲ್ಲಾ ಪರಿಚಿತರಾಗಿದ್ದ ಮ। ರಾ। ರಾ। ವಕೀಲ ರಂಗಪ್ಪ ಭಂಡಾರಿಗಳವರ ಮಗ ಗೋಪಾಲಕೃಷ್ಣ ಭಂಡಾರಿಗಳಿಗೆ ಕಳೆದ ಸೋಮವಾರ ತಾ ೧೬ನೇ ಸಾಯಂಕಾಲ ಮಂಗಳೂರಲ್ಲಿ ಸಂಭವಿಸಿದ ಅಕಾಲಮರಣವನ್ನು ತಿಳಿಸಲು ಬಹಳ ವಿಷಾದಪಡುತ್ತೇವೆ.

ಇಲ್ಲಿಯ ರೋಮನ್ ಕೆಥೊಲಿಕ ಪ್ರತಿನಿಧಿಗಳು ಗವರ್ನರ ದೊರೆಗಳವರನ್ನು ಸಂದರ್ಶಿಸಿ ದೊರೆಗಳವರ ಮುಂದಿರಿಸಿದ ವಿಜ್ಞಾಪನೆಗಳೂ ದೊರೆಗಳವರು ಈ ವಿಜ್ಞಾಪನೆಗಳಿಗೆ ಕೊಟ್ಟ ಉತ್ತರವೂ ಇತ್ತಲಾಗೆ ಪ್ರಕಟವಾಗಿರುವವು. ಹಂಡದ ದರವನ್ನು ಕಡಮೆ ಮಾಡಬೇಕು, ಕ್ರಿಸ್ತಿಯನ್ ಸಮುದಾಯದವರ ಪೂರ್ವಜರು ಸಹಾಯವಾಡಿದ ಮೈಸೂರ್ ಗಳ [illegible] ಕೋವಿಗಳನ್ನು ಪಡಿಯಲಿಕ್ಕೆ ಅಪ್ಪಣೆ ಕೊಡಬೇಕು, ಮತ್ತು ಟೆಲಿಗ್ರಾಫ್ ರೈಲ್ವೇ ಮೊದಲಾದ ಇಲಾಖೆಗಳಲ್ಲಿ ಯುರೇಸಿಯನರಂತೆ ಹುದ್ದೆಗಳು ದೊರಕುವಂತಾಗಬೇಕು, ಮೊದಲು ಟೀಪು ಸುಲ್ತಾನನ ಉಪಟಳದಿಂದ ರೋಮನ ಕೆಥೊಲಿಕರು ಬಹಳ ಆಸ್ತಿ ನಷ್ಟವನ್ನು ಹೊಂದಿರುವದರಿಂದ ಕೆಥೊಲಿಕ ಬಡವರ ಪರವಾಗಿ ಖಾಲಿ ಸ್ಥಳವನ್ನು ಸುಲಭ ದರದ ಬೇರೇ ಜನಲ್ಲಿ ಕೊಡಿಸೋಣಾಗುವಂತೆ ಅಪ್ಪಣೆಯಾಗಬೇಕು. ಈ ವಿಜ್ಞಾಪನೆಗಳಿಗೆ ಗವರ್ನರ ದೊರೆಗಳವರ ಉತ್ತರವು ಈ ರೀತಿಯಾಗಿತ್ತೆಂಬುದಾಗಿ ಕೇಳುತ್ತೇವೆ. ಹೆಂಡದ ಗುತ್ತೆಗಳು ಈ ಮೊದಲೇ ದರಖಾಸ್ತಾಗಿ ಹೋಗಿರುವದರಿಂದ ಈ ವರುಷದಲ್ಲಿ ಈ ಸಂಗತಿಯನ್ನು ಪರ್ಯಾಲೋಚಿಸಲು ಉಪಾಯವಿಲ್ಲದ. ಬರುವ ವರುಷ ಇದನ್ನು ಪರ್ಯಾಲೋಚಿಸಬಹುದು. ದೇಶೀಯರ ಮತ್ತು ಯುರೇಸಿಯನರೆಂಬ ಭೇದವನ್ನುಂಟುಮಾಡುವ ಸರಕಾರದವರ ಕ್ರಮವಾಗಲಿ, ವಿಧಿಯಾಗಲಿ ಇಲ್ಲದಿರುವದೆಂಬ ಎರಡನೇ ವಿಜ್ಞಾಪನೆಗೆ ಉತ್ತರ ದೊರಕಿರುತ್ತದೆ. ಖಾಲಿ ಸ್ಥಳಗಳನ್ನು ದರಖಾಸ್ತಿಗೆ ಕೊಡುವ ವಿಷಯದಲಿ ಕಲೆಕ್ಟರ ದೊರೆಗಳವರು ತಮಗೆ ಯುಕ್ತ ಕಂಡ ವಿಚಾರವನ್ನು ಮಾಡುವರಾಗಿ ಮೂರನೇ ವಿಜ್ಞಾಪನೆಗೆ ಉತ್ತರವನ್ನು ದಯಪಾಲಿಸಿದರೆಂಬದಾಗಿ ಕೇಳುತ್ತೇವೆ.

ಕ್ರಿಸ್ತರಾಯ ಪ್ರಭುಗಳ ಮತ್ತು ಮದ್ರಾಸ್ ಯುದ್ಧ ಫಂಡಿಗೆ ವಂತಿಗೆ ಕೊಟ್ಟವರ ಹೆಸರೂ [illegible] ಕಳೆದ ಸಂಚಿಕೆಯಿಂದ ಮುಂದರಿದುದು.

[illegible] ಆಚಾರಿಯರ್ [illegible] ಎಲ್. ರಾಮರಾವ್ ರೂ ೧೦; ಮ। ರಾ। ಕೆ. ರಾಮರಾವ್ ರೂ. ೧೦; ಮ। ರಾ। ಯು. ರಾಮರಾವ್ ರೂ. ೧೦, ಮ। ರಾ। ಕೆ. ರಾಮಗಣೇಶ ಕಾಮತ್ ಎಂಡ್ ಬ್ರದರ್ಸ್ ರೂ. ೧೦, ಮ। ರಾ। ಬೋಳ ನಾಗೇಶರಾವ್ ರೂ. ೧೦; ಮ। ರಾ। ಜಾಗೀರ್ದಾರ್ ಸುಬ್ರಾಯ ಕಮ್ತಿ ರೂ. ೧೦; ಮ। ರಾ। ಕುಂಡಮೂಲ್ ನಾರಾಯಣ ಶ್ಯಾನುಭೋಗ ರೂ. ೧೦; ಮ। ರಾ। ನರಸಿಂಹ ಕಮ್ತಿ ಎಂಡ್ ಬ್ರದರ್ಸ್ ರೂ ೧೦; ಮ। ರಾ। ಮಂಗಳಪಾಡಿ ಸುಬ್ರಾಯ ಶ್ಯಾನುಭೋಗ ರೂ. ೧೦; ಮ। ರಾ। ಎಮ್. ಮಾಧವರಾವ್ ರೂ. ೧೦, ಮ। ರಾ। ಅಬ್ದುಲ ಖಾದ್ರಿ ಬ್ಯಾರಿ ರೂ. ೧೦, ಮ। ರಾ। ಹಾಜಿ ಇಬ್ರಾಹಿಮ್ ಎಲಿಯಾಸ್ ಸಾಹೇಬ್ ರೂ. ೧೦, ಮ। ಮೋಥಿಖಾನ್ ಅಲಿ ಸಾಬ್ ಸಾಹೆ ಮೈದಿನ್ ಸಾಹೇಬ್ ರೂ. ೧೦, ಮ। ಸಿಯಾಲಿ ಬ್ಯಾರಿ ರೂ. ೧೦, ಮ। ಮೋಥಿಖಾನ್ ಮಹಮ್ಮದ್ ಮಿರಾನ್ ಹಸನ್ ಬಾವ ಸಾಹೇಬ್ ರೂ. ೧೦, ಮ। ದೀವಿದಲಾಲ್ ಅಬ್ದುಲ್ಲ ಕಾದರ್ ಬ್ಯಾರಿ ರೂ. ೧೦, ಮ। ಜ ಡಿ ತಯ್ಯಬ್ ಹುಸೇನ್ ಶೇಟ್ ಸಾಹೇಬ್ ರೂ.೧೦, ಮ। ಈಸಾ ಹಾಜಿ ಶೇಟ್ ಮಹಮ್ಮದ್ ಶೇಟ್ ಸಾಹೇಬ್ ರೂ. ೧೦, ಮ। ಎಮ್ ಮಹಮ್ಮದ್ ಖಾನ್ ಸಾಹೇಬ್ ರೂ. ೧೦, ಮ। ಎಚ್. ಮಹಮ್ಮದ್ ಪುತ್ತೂರು ಸಾಹೇಬ್ ರೂ. ೧೦, ಮ। ದೊಡ್ಡ ಮನೆ ಇದ್ದಿನ ಬ್ಯಾರಿ ರೂ ೧೦ ಮ। ಮಹಮ್ಮದ್ ಪುತ್ತಾಬ ಸಿ. ಅಬ್ದುಲ್ ರಹಿಮಾನ್ ಹಾಜಿ ಸಾಹೇಬ್ ರೂ ೧೦; ಮ। ಅಬ್ದುಲ್ ರಹಿಮಾನ್ ಅಫಾನಿ ಸಾಹೇಬ್ ರೂ. ೧೦, ಮ. ರಾ ಪಿ. ಭೋಜರಾವ್ ರೂ ೧೦ ಮ। ಹುಸೇನ್ ಸೇಟ್ ಸಾಹೇಬ್ ರೂ ೧೦, ಮ। ಎ ಐ ಒಡೆಯರ್ ರೂ ೯, ಮ। ಬಿ ಎಸ್. ಅಲ್ಬುಕರ್ಕ ರೂ ೮ ಮ। ಎ ಎಸ್ ಉಸ್ಮಾನ್ ಸಾಹೇಬ್ ರೂ. ೮, ಮ। ಸಜೀಫ್ ಅಹಮ್ಮದ್ ಬ್ಯಾರಿ ರೂ ೮ ಮ। ರಾ। ಪಿ ಎನ್ ಭಂಡಾರ್ಕಾರ್ ರೂ ೮ ಮ। ಎ ಎಲ್ ಟಾರೋ ರೂ ೬, ಮ। ಸೂಪಿ ಮಾಯಬ್ಯಾರಿ ರೂ ೬ ಮ। ಎ ಜೆ ಕುಲಾಸೋ ರೂ. ೬, ಮ। ರಾ। ಸರಾಫ ಅಪ್ಪಾಜಿ ಅಚ್ಯುತ ಸೇಟ್ ರೂ. ೬, ಮ। ರಾ। ಕೊಡಿಕಲ್ ರಾಮರಾವ್ ರೂ ೬.

ಮುಂದರಿಯುವುದು

~~~~~~

ಜೀನಸು ಧಾರಣೆ. (ರಖಂ)

ಅವ್ವಲ್ ಮಸ್ಕತಿ ಅಕ್ಕಿ .	5—12—0	6—0—0
ದುಯಂ ,, ,, .	5—8—0	5—10—0
ಸುಗ್ಗಿ ,, .	5—3—0	5—7—0
ಗಾಡಿ ಸುಗ್ಗಿ ,, .	4—13—0	4—15—0
ಗುಡ್ಡು ,, .	5—3—0	5—6—0
ದುಯಂ ಗುಡ್ಡು ,, .	4—14—0	5—0—0
ಅವ್ವಲ್ ಬೆಳ್ತಿಗೆ ,, .	5—12—0	5—14—0
ಗುಡ್ಡು ಬೆಳ್ತಿಗೆ ,, .	5—6—0	5—10—0
ರಂಗೂನು ಬೆಳ್ತಿಗೆ ಗೋಣಿ ೧ರ	9—0—0	9—6—0
ಗೋದಿ ಗೋಣಿ ೧ರ ...		14—4—0
ಹುರುಳಿ ಗೋಣಿ ೧ರ ...		8—8—0
ಕಡಲೆ ಗೋಣಿ ೧ರ. ...		11—0—0
ತೊಗರಿ ಗೋಣಿ ೧ರ ...		12—0—0
ತೊಗರಿ ಬೇಳೆ ಗೋಣಿ ೧ರ	12—0—0	15—0—0
ಉದ್ದು ಗೋಣಿ ೧ರ ...		10—8—0
ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0 **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು** ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು [illegible] ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ [illegible] ವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಹೊಸ ಗ್ರಂಥಗಳು

ಬೆಲೆ ಕಡಿಮೆ! ಓದುವದಕ್ಕೆ ಆನಂದ!!

ಮಂಜುಘೋಷಾಶೃಂಗಾರಾದ್ಭುತ ಕಥೆ.

[illegible] ರಸಭರಿತವಾದ ಕಾದಂಬರಿ ಕಥೆಯು ಇದರಲ್ಲಿ ಮಂಜುಘೋಷೆಯು [illegible] ತನ್ನ ಪತಿಯಾದ ವಸಂತ ಮಾಧವನೊಡನೆ ವಿಮಾ[illegible] ಅತಿ ಕಷ್ಟಕ್ಕೆ ಗುರಿಯಾಗಿ, ಜಗನಿ[illegible] ಕರುಣಿಸಿ ಪತಿ, ಸುತ, ಮಾತಾಪಿತೃಗಳ ದರ್ಶನ[illegible] ಕೇವಲ ತಿಂಗಳಿನದರಿಂದ [illegible] ತಿಂಗಳಲ್ಲಿ ಮುಗಿದುಹೋದುದರಿಂದ [illegible] ಕೊಂಡುಬರುವದು. ಈಗ ದ್ವಿತೀಯ ಮುದ್ರಣವು [illegible] ಕ್ರಯ ೮ ಆಣೆ

ಹಾತೀಮತಾಯಿ ಕಥೆ.

ಇದು ಕೇವಲ [illegible] ಪ್ರತಿಯೊಬ್ಬನು ಅನುಕರಣೀ[illegible] ಕಥಾನಾಯಕ [illegible], ಕಥಾನಾಯಕಿಯಾದ [illegible] ಪ್ರಶ್ನೆಗಳಿಗೆ [illegible] ಪ್ರಶ್ನೆಗಳನ್ನು ಹೇಳಿ, ಅವಳನ್ನು [illegible] ವರ್ಣಿಸಲ್ಪಟ್ಟಿದೆ ಈ ಕಥೆ [illegible] ಪ್ರತಿಗಳು [illegible] ಕನ್ನಡ ಭಾಷೆಯಲ್ಲಿ ಭಾಷಾಂತರ [illegible] ವಿಕ್ರಯಕ್ಕೆ [illegible] ಕ್ರಯ ೮ ಆಣೆ

ವಿಷ್ಣುಶರ್ಮ ಪಂಚತಂತ್ರ ಕಥೆಗಳು.

ಈ [illegible] ಅದರಂತೆಯೇ ಇವುಗಳನ್ನು [illegible] ವೆಂಬ ಐದು [illegible] ಇದರಲ್ಲಿ ವಿಷ್ಣುಶರ್ಮ [illegible] ರಾಜಪುತ್ರರು [illegible] ಅಲ್ಲಲ್ಲಿ ಕಥಾ [illegible] ಹೇಳಿದ ನೀತಿಪರ [illegible] ಉಪಕಥೆಗಳನ್ನೂ ಒಳಗೊಂಡದ್ದಾಗಿದೆ ಈ ಗ್ರಂಥ ವಾಚನದಿಂದ ಪ್ರತಿಯೊಬ್ಬ ಮನುಷ್ಯನು ಸನ್ಮಾರ್ಗವರ್ತಿಯಾಗ[illegible] ಈ ಗ್ರಂಥವು ಕನ್ನಡ ಭಾಷೆಯಲ್ಲಿ ನೂತನವಾಗಿ ಪ್ರಕಟವಾಗಿದೆ ಕ್ರಯ ೮ ಆಣೆ

ಮೋಹನಾಂಗಿಯ ಕಥೆ.

ಈ ಕಥೆಯ ವಾಚಕರು, ಓದಿದರೆ [illegible] ಮೋಹನಾಂಗಿಯು ತನ್ನ ಪಾತಿವ್ರತ್ಯವನ್ನು [illegible] ತನಗೆ ಎಂಥಾ ವಿಪತ್ತು ಬಂದಾಗ್ಯೂ, ಭಗವಂತನ ಅನುಗ್ರಹದಿಂದ [illegible] ತನ್ನ ಭರ್ತನನ್ನು [illegible] ಇದರಿಂದ ಸ್ತ್ರೀಯರಿಗೂ ಪುರುಷರಿಗೂ ಸಹ [illegible] ಕ್ರಯ ೪ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜೋತಿಷ್ಯ ಗ್ರಂಥಗಳು, ವೈದ್ಯಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವ ಮತ ಗ್ರಂಥಗಳು ನಾಟಕಗಳು, ಕನ್ನಡ ಸಂಸ್ಕೃತ ಗ್ರಂಥಗಳು ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ —

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,

ಕರ್ನಾಟಕ ಬುಕ್ ಡಿಪೋ ಏಜಂಟ್, ಬಳ್ಳಾರಿ.

ದಸರ್ಾ ಬಹುಮತೆ ಗಡಿಯಾರ.

15 ಸಾಮಾನು ಬಹುಮತೆ ಸಹಿತ ರೂ. 3—14—0



ಇದರಲ್ಲಿ ನಮೂದಿಸಿರುವ 7 ರೂ[illegible] ಬೆಲೆವುಳ್ಳ ಗಡಿಯಾರವನ್ನು ದಸರಾ ಒಳಗ ತರಿಸಿಕೊಳ್ಳುವವರಿಗೆ ರೂ 3—14—0ಗೆ 15 ಬಹುಮಾನಗಳ ಉಚಿತವಾಗಿ ಕೊಡುತ್ತೇವೆ

1. ಉತ್ತರ ಮುಖಿ 2 ಪೇನಾಕತ್ತಿ 3 ಬ್ಲೂಬ್ಲೆಕ್ ಶಾಯಿ ಪೊಟ್ಲೆ, 4 ಹಣ[illegible] 5 [illegible] ಸರ ಪಣಿ, 6 ಎಲೆಕ್ಟ್ರಿಕ್ ಬಂಗಾರ[illegible] ಕ್ಯಾಮಂತಿಗೆ ಹೂವು, 7 ಇಮಿಟೇಷನ್ ಡೈಮಂಡ್ ಶರಟು [illegible], 8 ಜರ್ಮನ್ ಬೆಳ್ಳಿಯ ಕುಂಕುಮ ಭರಣಿ, 9. ಡಿಟೋ ಸಾದಿನ ಚಿಪ್ಪು, 10 ಡಿಟೋ ಕಣ್ಣು ಕಪ್ಪಿನ ಭರಣಿ, 11. ಡಿಟೋ ನಶ್ಯದ ಡಬ್ಬಿ, 12 ಇಮಿಟೇಷನ್ [illegible] ಮೂಗ ಬಟ್ಟು, 13. ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ, 14 ಎಲೆಕ್ಟ್ರೋ ಸೀಲು ಉಂಗುರ, 15. ಕತ್ರಿ

ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯುತ್ತೆ

ಮಧುರೆ ಚುನ್ನಡ ಸೀರೆ ಒಂದಕ್ಕೆ ರೂ. 2—3—0.

ಮಧುರೆ ಕೆಂಪು ಸೀರೆ ರೂ. 3—0—0.

ತಂಜಾವೂರು ಗೆಜ್ಜೆ ಅಡ್ಡಿಗೆ ಆಣೆ 6.

ವಿಳಾಸ:—

ಕೆ. ರಾಧಾಕೃಷ್ಣ,

[illegible] ಸ್ಟ್ರೀಟು,

[illegible]

[illegible]

150 ಪುಟಗಳ ಪುಸ್ತಕವು

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ [illegible]. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗ[illegible] ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುಷ್ಯ[illegible] ಡುವದು. ಈ ಪುಸ್ತಕವು ಇನಾಮಾಗಿ [illegible] ಅಂಚೆ ಹಾಸಲು ಕೂಡಾ [illegible] ವಾಗಿಯೇ [illegible].

[illegible]

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, ಪಿ. ಡಿ ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉತ್ಕೃಷ್ಟ ತೊಡವುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು ಎಲ್ಲಾ ಒರ್ಡರು ಗಳನ್ನು ವಿ ಪಿ ಮೂಲಕ ಕಳುಹಿಸಿಕೊಡುವೆವು ಸಂದೇಹಪಡಬೇಡಿರಿ (1) ಜರಿತಾರಿನ ರೇಶ್ಮೆ, ನಾನಾ ತರದ ಬರಿವೆಗಳು, ಶಿಂಪಿಗಳು, ಸವಕೆ ಶಾಲುಗಳು, ಲಂಗ ವಸ್ತ್ರ ಇತ್ಯಾದಿ (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳಲ್ಲವುಗಳಿಗೂ ಬರೆಯಬಹುದು.

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸಲಾಗುವುದು

ನಮ್ಮ ವಿಳಾಸ— ಪಿ ಡಿ ನೀಲಕಾಂತ ಎಂಡ್ ಕೊ,

ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್ ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ರವಸ್ಯವಾದ ವಾಚಕರಿಗೂ, ಎಫ್ ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ್ ಪುಸ್ತಕವಾಗಿ ಇಡಲಿಕ್ಕೂ ತಕ್ಕದಾಗಿದೆ ಕ್ರಯ 0—8—0

ವಿಳಾಸ —

ಕೆನರಾ ಹೈಸ್ಕೂಲು ಕನ್ನಡ ಪಂಡಿತ

ಎಮ್ ತಿಮ್ಮಪ್ಪಯ್ಯ,

ಮಂಗಳೂರು

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟಾಂಡರ್ಡ್ ಗಣಿತ	0—3—0
IIIನೇ ,, ,,	0—4—0
IVನೇ ,, ,,	0—6—0
3ನೇ ಪುಸ್ತಕ ಶಬ್ದಾರ್ಥ, ಪ್ರಾಕ್ಟಿಕಲ್ ವನಸ್ಪತಿಶಾಸ್ತ್ರ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ	0—2—6
4ನೇ ಪುಸ್ತಕದ ಶಬ್ದಾರ್ಥ	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು ಇದರಲ್ಲಿ ವೃತ್ತಿಗಳೂ ಕಥೆಗಳೂ ಅಭಿನಯದ ಹಾಡುಗಳೂ ಇರುತ್ತವೆ.	0—1—6
ಗಣಿತಸಾರ ಎಂಬ ವರ್ಗ್ಗ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ 1ನೇ ಭಾಗ	0—1—6
,, 2ನೇ ಭಾಗ.	0—1—6

ಒಂದನೆಯ ಪುಸ್ತಕ
ಎರಡನೆಯ ,,
ಮೂರನೆಯ ,,
ನಾಲ್ಕನೆಯ ,,
(ತಯ್ಯಾರಿಯಲ್ಲಿವೆ.)

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ವಿ. ಲಕ್ಷ್ಮಣರಾವ್,

ಸ್ಕೂಲ್ ಮಾಸ್ಟರ್, ಉಡುಪಿ.

ಯುನಿವರ್ಸಲ್ ಎಸ್ಯುರೆನ್ಸ್ ಕ್ಯೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಸೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಸೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

		ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	ರೂ.	13,329—0—0	23,549—0—0
,, (ವಿವಾಹ)	,,	25,670—0—0	38,933—0—0
ಒಟ್ಟು ಕೇಸುಗಳು	,,	38,999—0—0	61,482—0—0
ವಸೂಲಾದ ಪ್ರಿಮಿಯಮ್	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	,,	10,000—0—0	50,000—0—0
(ಜನರಲ್) ರಕ್ಷಿತ ಧನ		37,220—0—0	23,778—3—2

ಲಾಭವು ಸೇಕಡಾ ನೂರಕ್ಕೆ ಹಂಚಿ ಕೊಡಲ್ಪಟ್ಟಿದೆ ಸೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ,

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1 ಅದು 1912ನೇ ಲೈಫ್ ಎಸ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2 ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾಧ್ಯತೆಗಳನ್ನು ಕೊಟ್ಟಿದೆ. 5 ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ 7 ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ 9 ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು 10 ಕೊಟ್ಟ ಪ್ರಿಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

ಬೆಂಗಾಳಿ —14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡ ಇದೆ ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು. ಸಮಾರು 3 ಲಕ್ಷ ಭಾಧ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟರುಗಳು ಬೇಕಾಗಿವೆ ಎಲ್ಲಾ ವಿಧದ ಏಜಂನ್ಸಿ ಶರ್ತಗಳಿಗೆ—

ವಿಳಾಸ — ಲಕ್ಷ್ಮಣರಾವ್ ಬ್ರದರ್ಸ್,

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಪಾಳ್ಯದ ವೆಂಕಟಾಚಲ ಪಂಡಿತರ

ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡತ (ಬಾರ), ಮೈ ನಡುಕ, ಶೀತ



ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲೆ, ಮಕ್ಕಳ ಎಳವು, ಜ್ವರ, ನಾಟ್ಟುಜ್ವರ, ಕ್ಷಯಶ್ವಾಸಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ

೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಬಿಡಲಿಕ್ಕೆಂದು ತೋರಿದಾಗಲೂ ಆಶ್ಚರ್ಯಕರವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಬೇಕಾಗುತ್ತದೆ! ಒಂದೇ ಒಂದು ಬುಡ್ಡಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ—ಶ್ರೀ ಸೀತಾರಾಘವ ವೈದ್ಯಶಾಲಾ

ಮೈಸೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಖು 27ನೇ ನವಂಬರ 1914.

ದೇವಸ್ಥಾನಗಳಲ್ಲಿ ವಿನಿಯೋಗಗಳ ಖರ್ಚನ್ನು ಕಳೆದು ಉಳಿಯುವ ಹಣವನ್ನು ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸುವುದರಲ್ಲಿ ಉಪಯೋಗಿಸಬಹುದೋ?

ಕಳೆದ ಶನಿವಾರ ಮದ್ರಾಸಿನಲ್ಲಿ ಕೂಡಿದ ನ್ಯಾಯ ನಿರ್ಮಾಣ ಸಭೆಯಲ್ಲಿ ಮಂಜೂರಾದ ತಿರುಪತಿ ದೇವಸ್ಥಾನದ ಶಾಲೆಗಳ ಬಗ್ಗೆ ಏರ್ಪಡಿಸಿದ ಕಾನೂನು ಮಸೂದೆಯಲ್ಲಿ ಮೇಲಣ ಪ್ರಶ್ನೆಗೆ ಸರಿಯಾದ ಉತ್ತರವು ದೊರಕಿರುವುದು. ದೇವಸ್ಥಾನದ ಭಂಡಾರಗಳ ಸಿಲುಕಿನ ಕೆಲವಂಶವನ್ನಾದರೂ ದೇವತಾ ವಿನಿಯೋಗಗಳ ಹೊರತು ಮಿಕ್ಕ ಯಾವ ಉದ್ದೇಶಕ್ಕಾದರೂ ಉಪಯೋಗಿಸುವುದು ನೀತಿ ಧರ್ಮಗಳಿಗೆ ಸರಿಯಾಗಿದ್ದರೂ ಅದು ಕಾನೂನಿಗೆ ವಿರೋಧವಾಗಿರುವುದೆಂಬ ಅಭಿಪ್ರಾಯವನ್ನು ಮದ್ರಾಸು ಹೈಕೋರ್ಟಿನವರು ಆದರಿಸಿದ್ದರಿಂದ ತಿರುಪತಿ ದೇವಸ್ಥಾನಗಳ ಘಂಟಿನಿಂದ ನಡಿಸೋಣಾಗುತ್ತಿದ್ದ ಎರಡು ಮೂರು ಶಾಲೆಗಳೂ ಕಳೆದ ೩೦ ವರುಷಗಳಿಂದ ಈ ದೇವಸ್ಥಾನಗಳು ನಡೆಸುತ್ತಿದ್ದ ಸಂಸ್ಕೃತ ಪಾಠಶಾಲೆಯೂ ಸಹ ದೇವಸ್ಥಾನಗಳ ಘಂಟಿನ ಸಹಾಯವಿಲ್ಲದೆ ಬಿದ್ದು ಹೋಗುವ ಸಂಭವವು ತಲೆದೋರಿತು. ಅಗ್ಗ ಮದ್ರಾಸು ನ್ಯಾಯ ವಿಧಾಯಕ ಸಭೆಯ ಮೆಂಬರರಾಗಿದ್ದ ಪ್ರಕೃತ ಹೈಕೋರ್ಟು ಜಡ್ಜರಾಗಿರುವ ಬಹುಮಾನಪಟ್ಟ ಟಿ. ವಿ. ಶೇಷಗಿರಿ ಅಯ್ಯರರವರು ಕಾನೂನಿಗನುಗುಣವಾಗಿರುವ ಈ ಅಭಿಪ್ರಾಯದಿಂದ ಉಂಟಾಗುವ ಅನರ್ಥ ನಿವಾರಣೆ ಬಗ್ಗೆ ತಿರುಪತಿ ದೇವಸ್ಥಾನದ ಶಾಲೆಗಳ ಕಾನೂನು ಮಸೂದೆಯನ್ನು ಸರಕಾರದವರ ಮುಂದಿರಿಸಿದರು. ಈ ಸರ್ತಿ ಕೂಡಿದ ಸಭೆಯಲ್ಲಿ ಈ ಕಾನೂನು ಮಸೂದೆಯು ಬಹುಮಾನಪಟ್ಟ ವಿ. ಯಸ್. ಶ್ರೀನಿವಾಸ ಶಾಸ್ತ್ರಿಗಳವರಿಂದ ಸಭೆಯ ಮುಂದಿಡೋಣಾಯಿತು. ಪ್ರಜಾ ಪ್ರತಿನಿಧಿಗಳ ಸಹಿತ ಪೂರ್ಣ ಸಹಾನುಭೂತಿಯಿಂದ ಸರಕಾರದವರು ಈ ಕಾನೂನು ಮಸೂದೆಯನ್ನು ಕೂಡಲೇ ಮಂಜೂರು ಮಾಡಿದರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ದೇವಸ್ಥಾನಗಳ ಭಂಡಾರಗಳಲ್ಲಿ ಉಳಿಯುವ ಸಿಲುಕಿನ ಹಣವನ್ನು ವಿದ್ಯಾ ಕಾರ್ಯಗಳಲ್ಲಿ ವಿನಿಯೋಗಿಸುವುದು ತಪ್ಪಲ್ಲವೆಂತ ಪ್ರಜಾ ಮುಂದಾಳುಗಳಿಗೆ ಕಂಡು ಬಂದಂತೆಯೇ ಸರಕಾರದವರಿಗೆ ಸಹ ಕಂಡು ಬಂದದ್ದರಿಂದ ವಿದ್ಯಾಭಿವೃದ್ಧಿ ಸಾಧನೆಗೆ ವಿಶೇಷ ಪ್ರೋತ್ಸಾಹವು ಈ ಮೂಲಕ ಇನ್ನೊಂದು ವಿಧಾನದಿಂದ ದೊರಕಿದಂತಾಯಿತು. ದೇವಸ್ಥಾನಗಳ ವಿನಿಯೋಗಗಳನ್ನು ಸಾಂಗವಾಗಿ ನಡಿಸಿದ ಬಳಿಕ, ಭಜಕರು ಇಂಥಿಂಥಾ ವಿನಿಯೋಗಗಳ ಬಗ್ಗೆ ಎಂತ ಉದ್ದೇಶಿಸಿಕೊಟ್ಟ ಹಣದಿಂದ ಅಂಥಾ ವಿನಿಯೋಗಗಳನ್ನು ನಡೆಸಿದ ನಂತರ ಉಳಿಯುವ ಹಣದಿಂದ ಅನ್ನಛತ್ರಗಳು, ಆಸ್ಪತ್ರೆಗಳು, ಪಾಠಶಾಲೆಗಳು ಮೊದಲಾದವುಗಳು ದೇವಸ್ಥಾನಗಳ ಭಂಡಾರದಿಂದ ನಡಿಸೋಣಾಗುವ ವಾಡಿಕೆಯು ಬಹುಮಾನಪಟ್ಟ ಶಾಸ್ತ್ರಿಗಳು ಹೇಳಿದಂತೆ ನೂತನವಲ್ಲ, ಪ್ರಾಚೀನ ಕಾಲದಿಂದಲೂ ಇಂಥಾ ವಾಡಿಕೆಯು ನಡೆದು ಬಂದ ದೃಷ್ಟಾಂತಗಳಿವೆ. ದೇವಸ್ಥಾನಗಳೆಂಬ ಸಂಸ್ಥೆಗಳು ಪ್ರಾಚೀನ ಕಾಲದಲ್ಲಿ ಹೇಗೆ ಸ್ಥಾಪಿಸಲ್ಪಟ್ಟವು, ಭಜಕರ ಸಕಲ ಕ್ಷೇಮವೃದ್ಧಿಯನ್ನು ಈ ಸಂಸ್ಥೆಗಳು ಹೇಗೆ ಸಾಧಿಸುತ್ತಿದ್ದವು, ದೇವಸ್ಥಾನಗಳಲ್ಲಿ ನಡೆಯತಕ್ಕ ವಿನಿಯೋಗಗಳು ಯಾವ ಬಗ್ಗೆ ಏರ್ಪಡಿಸೋಣಾದವೆಂಬುದನ್ನು ಚನ್ನಾಗಿ ಶೋಧಿಸಿ ಪರ್ಯಾಲೋಚಿಸಿ ನೋಡಿದರೆ ವಿದ್ಯಾ ಪ್ರಸರಣೆಯ ಕಾರ್ಯವನ್ನು ದೇವಸ್ಥಾನಗಳು ಕೈಕೊಳ್ಳುವುದು ಇತರ ಎಲ್ಲಾ ವಿನಿಯೋಗಗಳಿಗಿಂತ ಮೇಲಾದ ಕಾರ್ಯವೆಂತ ತೋರದೆ ಇರದು. ಪ್ರಜಾ ಜನರೂ ಸರಕಾರದವರೂ ಒಂದಾಗಿ ಸೇರಿಕೊಂಡು ಮಾಡಿದ ತಿರುಪತಿ ದೇವಸ್ಥಾನಗಳ ಶಾಲಾ ಕಾನೂನು ಮಸೂದೆಯು ಸೂಚಿಸುವ ಸದಭಿಪ್ರಾಯವನ್ನು [illegible] ದೇವಸ್ಥಾನಗಳ ಅಧಿಕಾರಿಗಳು ಮನಸ್ಸಿಗೆ ತಂದುಕೊಂಡು ವಿದ್ಯಾಸಾಧನ ಕಾರ್ಯಗಳಲ್ಲಿ [illegible] ಗುವ ಸಹಾಯವನ್ನು [illegible]

ಈ ಸರ್ತಿ ಕೂಡಿದ ನ್ಯಾಯವಿಧಾಯಕ ಸಭೆಯಲ್ಲಿ ಪರ್ಯಾಲೋಚಿಸತಕ್ಕ ಇನ್ನೂ ಕೆಲವು ವಿಷಯಗಳಿವೆ. ಅವುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ವಿದ್ಯಾವಂತ ತರುಣರೂ ಲೋಕಲ್‌ಬೋರ್ಡು ಮತ್ತು ಮುನಿಸಿಪಾಲಿಟಿಗಳೂ.

ಈ ತಿಂಗಳ ತಾ. ೧೯ರಲ್ಲಿ ಮದ್ರಾಸಿನಲ್ಲಿ ಕೂಡಿದ ಮದ್ರಾಸು ಯುನಿವರ್ಸಿಟಿಯ ಕನ್ವೊಕೇಶನ್ ಸಭೆಯಲ್ಲಿ ಗವರ್ನರ ದೊರೆಗಳವರ ಕಾರ್ಯನಿರ್ವಾಹಕ ಕೌನ್ಸಿಲಿನ ಮೆಂಬರರಾದ ಬಹುಮಾನಪಟ್ಟ ಪಿ. ಯಸ್. ಶಿವಸ್ವಾಮಿ ಅಯ್ಯರರವರು ಮಾಡಿದ ಭಾಷಣದಲ್ಲಿ ಸಭೆಯಲ್ಲಿ ಕೂಡಿದ ವಿದ್ಯಾವಂತ ತರುಣರಿಗೆ ಹಲವು ವಿಧದ ಬುದ್ಧಿವಾದವು ಹೇಳೋಣಾಗಿರುವುದು. ಲೋಕಲ್‌ಬೋರ್ಡುಗಳ ಮತ್ತು ಮುನಿಸಿಪಾಲಿಟಿಗಳ ವಿಷಯ ಅಯ್ಯರರವರು ಹೇಳಿದ ಮಾತುಗಳನ್ನು ಏನೆಂತ ತಿಳಿಯುವುದು ಪ್ರಕೃತ ಅಗತ್ಯವಾಗಿರುವುದು. ಸಮರ್ಥರೂ ವಿದ್ಯಾವಂತರೂ ಆದ ಹಲವರು ಈ ದೇಶದಲ್ಲಿ ಮುನ್ಸಿಪಲ್ ಮತ್ತು ಲೋಕಲ್‌ಬೋರ್ಡುಗಳ ಆಡಳಿತೆಯಲ್ಲಿ ಪೂರ್ಣ ಅಭಾವವನ್ನು ತೋರುವರು. ವೋಟುಗಳನ್ನು ಪಡಿಯಬೇಕಾದರೆ ಅಯುಕ್ತ ಮತ್ತು ಅಸಭ್ಯವಾದ ರೀತಿಗಳಲ್ಲಿ ವರ್ತಿಸಬೇಕಾದುದರಿಂದ ಯಥಾರ್ಥವಂತರೂ ಆತ್ಮ ಗೌರವವುಳ್ಳವರೂ ವೋಟುಗಳ ಚುನಾವಣೆಯಲ್ಲಿ ಜಯಶೀಲರಾಗುವುದು ದುರ್ಲಭವೆಂತ ಹೇಳುವರು. ಇಂಥಾ ವಿದ್ಯಮಾನಗಳಲ್ಲಿ ಲೋಕಲ್‌ಬೋರ್ಡುಗಳ ಗೋಜಿಗೆ ಹೋಗದೆ ಸುಮ್ಮನಿರುವುದು ಉಚಿತವಲ್ಲ. ವೋಟು ಕೊಡುವಂಥವರಿಗೆ ಅವರ ಜವಾಬ್ದಾರಿಯೇನು, ಅವರ ಕರ್ತವ್ಯವೇನೆಂಬುದನ್ನು ಸರಿಯಾಗಿ ತಿಳಿಯ ಹೇಳಿ ಯೋಗ್ಯರಾದವರನ್ನೇ ಅವರು ಚುನಾಯಿಸಲು ಬೇಕಾದ ಬೋಧೆಯು ಅವರಲ್ಲಿ ಉಂಟಾಗುವಂತೆ ಪ್ರಯತ್ನ ಪಡಬೇಕು. ಸಾಮಾನ್ಯದೊಳಗಿರುವ ಜಾತಿ, ಮತ ವೈಷಮ್ಯಗಳನ್ನು ಇದಿರಿಗೆ ತಂದು ಇವುಗಳ ಮೂಲಕ ಎಂದೂ ಚುನಾವಣೆಯಲ್ಲಿ ಜಯಶೀಲರಾಗಲು ಪ್ರಯತ್ನಿಸದಿರಿ. ಲೋಕಲ್ ಬೋರ್ಡುಗಳಲ್ಲಿ ಕಾರ್ಯನಿರ್ವಾಹಕ್ಕೆ ಮುಖ್ಯ ಅಭ್ಯಂತರವಾಗಿರುವ "ಪಾರ್ಟಿ" ಯಾ ತಂಡ ಭೇದವನ್ನು ಮಾಜಲು ಪ್ರಯತ್ನಿಸಿರಿ. ನೀವು ಒಂದು ವೇಳೆ ಲೋಕಲ್ ಬೋರ್ಡುಗಳ ವ ಮುನಿಸಿಪಾಲಿಟಿಯ ಮೆಂಬರರಲ್ಲವಾದರೂ ಇವುಗಳಿಗೆ ತೆರಿಗೆಯನ್ನು ಕೊಡುವವರಾದ್ದರಿಂದ ಈ ಬೋರ್ಡುಗಳು ತಮ್ಮ ಆಡಳಿತೆಯಲ್ಲಿ ಮಾಡುವ ತಪ್ಪುಗಳನ್ನು ತೋರಿಸಿಕೊಟ್ಟು ಅವುಗಳನ್ನು ತಿದ್ದಲು ಪ್ರಯತ್ನಿಸುವುದು ನಿಮ್ಮ ಕರ್ತವ್ಯವಾಗಿದೆ. ಸುಜನರು ಈ ಬೋರ್ಡುಗಳನ್ನು ಅಲಕ್ಷ್ಯಭಾವದಿಂದ ಕಂಡರೆ ಕುಜನರಿಗೆ ಈ ಸಂಸ್ಥೆಗಳಲ್ಲಿ ಎಡೆ ದೊರಕುವುದು. ಈ ರೀತಿ ಅಯ್ಯರರವರು ಹೇಳಿ ಲೋಕಲ್ ಬೋರ್ಡು ಯಾ ಮುನ್ಸಿಪಲ್ ಮೆಂಬರರು ಪ್ರಜಾಕ್ಷೇಮವನ್ನು ಯಾವ ರೀತಿ ಸಾಧಿಸಬಹುದೆಂದು ಸೂಚಿಸಿರುತ್ತಾರೆ.

ಮುನ್ಸಿಪಲ್ ಕೌನ್ಸಿಲಿನ ಮತ್ತು ಲೋಕಲ್ ಬೋರ್ಡುಗಳ ಆಫೀಸುಗಳಲ್ಲಿ ಮೆಂಬರರೆಲ್ಲರು ಅಯ್ಯರರವರ ಈ ಮಾತುಗಳನ್ನು ಆಗಿಂದಾಗ್ಗೆ ಮನನ ಮಾಡುವಂತೆ ಅವುಗಳನ್ನು ಪಟಗಳಲ್ಲಿ ದೊಡ್ಡ ಅಕ್ಷರಗಳಿಂದ ಛಾಪಿಸಿ ಇಂಥಾ ಪಟಗಳನ್ನು ತಮ್ಮ ಕಣ್ಣಮುಂದೆ ಯಾವಾಗಲೂ ಇರುವಂತೆ ತೂಗಹಾಕುವದು ಉತ್ತಮ. ಇಲೆಕ್ಟರರು, ಅಥವಾ ವೋಟುಗಳನ್ನು ಕೊಡುವಂಥವರು ತಾನು ಆರಿಸಿದ ಮೆಂಬರರಲ್ಲಿ ಜಾತಿ, ಮತ ವೈಷಮ್ಯದಿಂದ ಕೌನ್ಸಿಲುಗಳಲ್ಲಿ ವರ್ತಿಸಿದ ಮೆಂಬರನು ಯಾರು ಎಂಬದನ್ನು ತಿಳಕೊಂಡು ಇಂಥವನಿಗೆ ತನ್ನ ಯೋಗ್ಯತೆಯು ಪ್ರಜಾ ದೃಷ್ಟಿಯಲ್ಲಿ ಹೇಗಿದೆಂಬುದನ್ನು ಚೆನ್ನಾಗಿ ತಿಳಿಸುವಂತೆ ಆತನನ್ನು ತಿರಿಗೊಮ್ಮೆ ಮೆಂಬರುತನಕ್ಕೆ ಆರಿಸದಿರುವುದೇ ತಕ್ಕ ಶಿಕ್ಷೆಯಾಗಿದೆ. ಸರಕಾರದವರು ಸಹ ಬೋರ್ಡುಗಳಿಗೆ ಯಾ ಕೌನ್ಸಿಲುಗಳಿಗೆ ಮೆಂಬರರನ್ನು ನೇಮಿಸುವಾಗ ಅಯ್ಯರರವರು ಹೇಳಿದ ಈ ಬುದ್ಧಿವಾದವು ಫಲಗೊಳ್ಳುವಂತೆ ಯೋಗ್ಯರಾದವರನ್ನೇ ನೇಮಿಸಿ ಕೌನ್ಸಿಲು ಯಾ ಬೋರ್ಡುಗಳ ಮೆಂಬರುತನದ ಗೌರವವನ್ನು ಕಾಪಾಡುವುದು ಅಗತ್ಯವಾಗಿರುವುದು.

ಸ್ವರ್ಗಸ್ಥರಾದ ಲೋರ್ಡ್ ರೋಬರ್ಟ್ಸರವರು.

ಭಾರತೀಯ ಸೇನಿಕರನ್ನು ಯುದ್ಧರಂಗದಲ್ಲಿ ನೋಡಿಬರಲು [illegible] ಹೋಗಿ ಅಲ್ಲಿಯೇ ಈ ತಿಂಗಳ ತಾ. 14ರಲ್ಲಿ ರೋಬರ್ಟ್ಸ ಪ್ರಭುಗಳವರು ಸ್ವರ್ಗಸ್ಥರಾದುದರಿಂದ ಉಂಟಾಗಿರುವ ವಿಷಾದವು ಪ್ರಕೃತ ಎಲ್ಲಾ ಕಡೆಗಳಲ್ಲಿಯೂ [illegible]ವಾಗುತ್ತಿರುವದು. ಪ್ರಭುಗಳವರು ಭಾರತೀಯರ [illegible] ಆಗಿದ್ದರು. ಹಿಂದೂಸ್ಥಾನದ [illegible]ರದಲ್ಲಿ ಜನ್ಮವೆತ್ತಿದ ಈ [illegible] ಸೇನಾ ಸೇವೆಯಲ್ಲಿ ೪೦ ವರುಷಗಳ [illegible]ದಲ್ಲಿ ಸರ್ವಜನ ಪ್ರಿಯರಾಗಿ [illegible] [illegible]

ಸೈನಿಕರನ್ನು ನೋಡಿ ಬರಬೇಕೆಂದು ತಾ ೧೧ನೇ ಬುಧವಾರ ರೋಬರ್ಟ್ಸ್ ಪ್ರಭುಗಳವರು ಇಂಗ್ಲೆಂಡಿನಿಂದ ಫ್ರಾನ್ಸಿಗೆ ಹೋಗಿದ್ದರು. ಗುರುವಾರ, ಶುಕ್ರವಾರ ಫ್ರಾನ್ಸಿನಲ್ಲಿ ಭಾರತೀಯ ಸೇನೆಗಳಿರುವ ಠಾಣ್ಯಗಳನ್ನು ನೋಡಿಕೊಂಡು ಯುದ್ಧಭೂಮಿಯನ್ನು ನೋಡುವದಕ್ಕೆ ಒಂದು ಗುಡ್ಡದ ಮೇಲಕ್ಕೆ ಹತ್ತಿ ನಿಂತಿದ್ದರು. ಅಲ್ಲಿ ಅವರಿಗೆ ಶೀತ ಹಿಡಿಯಿತು. ನಂತರ ಅವರಿಗೆ ನ್ಯೂಮೋನಿಯಾ ಜ್ವರವು ಈ ಶೀತದಿಂದ ಪ್ರಾಪ್ತವಾದ್ದರಿಂದ ಶನಿವಾರ ಜ್ವರಬಾಧೆಯಿಂದ ಕಾಲವಾದರು.

ಮೃತರು ಕಾಲವಾದಾಗ ಇವರಿಗೆ ಪ್ರಾಯವು ೮೨ ವರುಷಗಳಾಗಿತ್ತು. ಬೋಅರರ ಯುದ್ಧ ಕಾಲದಲ್ಲಿ ಇವರ ಒಬ್ಬನೇ ಒಬ್ಬ ಮಗನು ತೀರಿಹೋಗಿರುವನು. ಲೇಡಿ ರೋಬರ್ಟ್ಸರೊಡನೆ ಪ್ರಭುಗಳ ವಿಯೋಗವನ್ನು ದುಃಖಿಸುವರೆ ಪ್ರಭುಗಳಿಗೆ ಪುತ್ರಿಗಳಿಬ್ಬರಿರುವರು. ಭೂಲೋಕದ ಎಲ್ಲಾ ಭಾಗಗಳಿಂದಲೂ ರೋಬರ್ಟ್ಸ್ ಪ್ರಭುಗಳವರ ಮರಣದಿಂದುಂಟಾದ ಸಹಸಂತಾಪವನ್ನು ಸೂಚಿಸಿ ಅಸಂಖ್ಯಾತ ಪತ್ರಗಳು ಪ್ರಭುಪತ್ನಿಯರಿಗೆ ಬರುತ್ತಲಿವೆ.

ಹಿಂದೂಸ್ಥಾನದಲ್ಲಿ ಜನಿಸಿದ ರೋಬರ್ಟ್ಸ್ ಪ್ರಭುಗಳವರು ಇಂಗ್ಲಾಂಡಿಗೆ ಹೋಗಿ ತನ್ನ ವಿದ್ಯಾಭ್ಯಾಸವನ್ನು ಪೂರೈಸಿದ ಮೇಲೆ ಪುನಹ ಹಿಂದೂಸ್ಥಾನಕ್ಕೆ ಬಂದರು. ಇವರಿಗೆ ಹತ್ತೊಂಭತ್ತು ವರುಷ ಪ್ರಾಯವಾದಾಗ ಬಂಗಾಳದ ಆರ್ಟಿಲರಿ ಸೈನ್ಯದಲ್ಲಿ ಇವರಿಗೆ ಕೆಲಸ ನೇಮಕವಾಯಿತು. ಒಳಿಕ ಪೇಶಾವರದಲ್ಲಿ ಸೈನ್ಯದ ಮುಖ್ಯ ಅಧಿಕಾರಿಗಳಾಗಿದ್ದ ಇವರ ತಂದೆಯವರ ಪಡಿಕೊಂಗರಾಗಿ ನೇಮಿಸಲ್ಪಟ್ಟರು. ಹೀಗೆ ಪಂಕ್ತಿನಲ್ಲಿ ೨೨ ವರುಷ ಕೆಲಸ ಮಾಡಿದ ನಂತರ ಇವರಿಗೆ ಕ್ವಾರ್ಟರ್ ಮಾಸ್ಟರ್ ಜನರಲರ ಹುದ್ದೆಯು ದೊರಕಿತು. ೧೮೫೭ರಲ್ಲಿ ಹಿಂದೂಸ್ಥಾನದಲ್ಲಿ ಆದ ದಂಗೆಯ ಕಾಲದಲ್ಲಿ ಪಂಜಾಬಿನ ಸೈನ್ಯದೊಂದಿಗೆ ಇವರಿದ್ದರು. ಬಹಳ ತೃಪ್ತಿಕರವಾದ ರೀತಿಯಲ್ಲಿ ಇವರು ಕೆಲಸ ಮಾಡಿದ್ದರಿಂದ ವಿಕ್ಟೋರಿಯಾ ಕ್ರೊಸ್ಸಿನ ಬಹುಮಾನವು ಇವರಿಗೆ ದೊರಕಿತು. ೧೮೬೦ರಲ್ಲಿ ಇವರಿಗೆ ಕೆಪ್ಟನ್ ಪದವಿಯು ಪ್ರಾಪ್ತವಾಯಿತು. ಅಫಘಾನಿಸ್ಥಾನದಲ್ಲಿ ನಡೆದ ಕಾಳಗಗಳಲ್ಲಿ ಹೋರಾಡಿ ಅಫಘಾನಿಸ್ಥಾನವನ್ನು ಸುವ್ಯವಸ್ಥೆಗೊಳಿಸಿದರು. ಈ ಕಾರ್ಯವನ್ನು ನೆರವೇರಿಸಿದುದಕ್ಕೆ ಕೆ ಸಿ ಬಿ ಮತ್ತು ಜಿ ಸಿ ಬಿ ಎಂಬ ಬಿರುದು ಇವರಿಗೆ ದೊರಕಿತು. ನಂತರ 'ಸರ್' ಎಂಬ ಬೆರೊನೆಟ್ ಪದವಿಯು ಇವರಿಗೆ ಕೊಡಲ್ಪಟ್ಟಿತು. ಮದ್ರಾಸಿನ ಸರ್ವ ಸೇನಾಧಿಪತಿಯಾಗಿ ಇವರು ನೇಮಿಸಲ್ಪಟ್ಟರು. ೧೮೮೧ರಲ್ಲಿ ಆಫ್ರಿಕದಲ್ಲಿ ಇವರನ್ನು ನೇಟಾಳದ ಗವರ್ನರರಾಗಿಯೂ, ದಕ್ಷಿಣ ಆಫ್ರಿಕದ ಸೇನಾಧಿಪತಿಗಳಾಗಿಯೂ ನೇಮಿಸುವ ಅವಶ್ಯಕತೆಯುಂಟಾಗಿ ಈ ಉಭಯ ಪದವಿಗಳನ್ನು ಪಡೆದು ರೋಬರ್ಟ್ಸ್ ಪ್ರಭುಗಳು ಆಫ್ರಿಕಕ್ಕೆ ಹೋದರು. ಇದೇ ವರುಷದಲ್ಲಿ ಜರ್ಮನ್ ಚಕ್ರವರ್ತಿಗಳ ಅತಿಥಿಗಳಾಗಿ ಇವರು ಆಮಂತ್ರಿಸಲ್ಪಟ್ಟರು. ಆಫ್ರಿಕದಿಂದ ಹಿಂದೂಸ್ಥಾನಕ್ಕೆ ಬಂದ ತುಸ ಕಾಲದಲ್ಲಿ ಇವರು ಹಿಂದೂಸ್ಥಾನದ ಸರ್ವ ಸೇನಾಧಿಪತಿಗಳ ನೇಮಕವನ್ನು ಪಡೆದರು. ಬರ್ಮಾ ದೇಶದಲ್ಲಿ ಉಂಟಾದ ದಂಗೆ ಮೊದಲಾದ್ದನ್ನು ಶಾಂತಗೊಳಿಸಿದ ನಂತರ ೧೮೯೩ರಲ್ಲಿ ಇವರು ಹಿಂದೂಸ್ಥಾನವನ್ನು ಬಿಟ್ಟು ತೆರಳಿದರು.

ದಕ್ಷಿಣ ಆಫ್ರಿಕದಲ್ಲಿ ನಡೆದ ಬೋಅರರ ಯುದ್ಧದಲ್ಲಿ ಬೋಅರರನ್ನು ಸೋಲಿಸಿ ದಕ್ಷಿಣ ಆಫ್ರಿಕದ ಪ್ರಾಂತ್ಯವನ್ನು ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿಸಿದ ವೀರ ನಾಯಕರು ಇವರಾಗಿರುತ್ತಾರೆ. ಬೋಅರರ ಯುದ್ಧವನ್ನು ತೀರಿಸಿಕೊಂಡು ಇದನಂತರ ಅಂಗ್ಲಾಂಡದಲ್ಲಿ ಸಾಮ್ರಾಜ್ಯದ ಸೈನ್ಯದ ಸೇನಾಪತಿತ್ವವು ಇವರಿಗೆ ಕೊಡಲ್ಪಟ್ಟಿತು. ವಿಕ್ಟೋರಿಯಾ ಮಹಾರಾಣಿಯವರು ಇವರಿಗೆ ಸ್ವತಹ ಅರ್ಲ ಎಂಬ ಪ್ರಭುಪದವಿಯನ್ನು ಇವರಿಗೆ ದಯಪಾಲಿಸಿದರು. ದಕ್ಷಿಣ ಆಫ್ರಿಕದಲ್ಲಿ ಇವರು ನಡೆಸಿದ ಕೆಲಸಕ್ಕಾಗಿ ಒಂದು ಲಕ್ಷ ಪವನುಗಳು ಇವರಿಗೆ ಉಚಿತವಾಗಿ ಕೊಡಲ್ಪಟ್ಟಿವೆ. ೧೯೦೪ರಲ್ಲಿ ಇವರು ವೃದ್ಧಾಪ್ಯದ ದೆಸೆಯಿಂದ ಕೆಲಸದಿಂದ ನಿವೃತ್ತರಾದರು.

ತಮ್ಮ ವೃದ್ಧಾಪ್ಯದಲ್ಲಿ ಸಹ ಸಾಮ್ರಾಜ್ಯದ ಸೇನಾಸಿದ್ಧತೆಗೆ ಆಗಿಂದಾಗ್ಯೆ ಬೇಕಾದ ಆಲೋಚನೆಗಳನ್ನೂ ಎಚ್ಚರವನ್ನೂ ಹೇಳುತ್ತಿದ್ದರು. ಪ್ರಕೃತ ಯುರೋಪದಲ್ಲಿ ನಡೆಯುವ ಯುದ್ಧದಲ್ಲಿ ಬೇಕಾದ ಆಲೋಚನೆಗಳನ್ನು ಸೂಚಿಸುತ್ತಿದ್ದರಲ್ಲದೆ ಹೊಸ ಸೇನಿಕರನ್ನು ತರಬೇತು ಮಾಡುವುದರಲ್ಲಿ ವಿಶೇಷ ಪರಿಶ್ರಮ ತಕ್ಕೊಳ್ಳುತ್ತಿದ್ದರು. ಇಂಥಾ ಕಾಲದಲ್ಲಿ ಈ ವೀರಪುರುಷರು ದೈವಾಧೀನರಾಗಿ ಹೋದ್ದರಿಂದ ಬ್ರಿಟಿಷ ಪ್ರಜಾವರ್ಗವೆಲ್ಲಕ್ಕೂ ವಿಶೇಷ ದುಃಖಕ್ಕೆ ಕಾರಣವಾಗಿದೆ.

ಬೇಸಾಯ.

ದಯಾಳು ಸರಕಾರದವರು "ವ್ಯವಸಾಯ ಇಲಾಖೆ" ಎಂದೊಂದು ಇಲಾಖೆಯನ್ನು ಸ್ಥಾಪಿಸಿ ಈ ಇಲಾಖೆಯ ಉದ್ಯೋಗಸ್ಥರ ಮೂಲಕ ಮಣ್ಣು ಮತ್ತು ಸಸ್ಯಾಹಾರ ಪದಾರ್ಥಗಳ [illegible] ನಿರ್ಧರಿಸುವ ಪರಿಶೋಧನಾಲಯಗಳನ್ನೂ, ನವೀನ ವ್ಯವಸಾಯೋಪಕರಣಗಳನ್ನು ತಯಾರಿಸಿ [illegible] ಅವುಗಳ ಪ್ರಯೋಜನಗಳನ್ನು ಪ್ರತ್ಯಕ್ಷವಾಗಿ [illegible] ವಿವಿಧ ತರುಗುಲ್ಮಲತಾದಿಗಳನ್ನು ನೆಟ್ಟು ಅವುಗಳ ಸ್ವಭಾವಗಳನ್ನು [illegible] ತಿಳಿಯಲನುಕೂಲವಾದ ಉದ್ಯಾನಗಳನ್ನೂ, ಈ ಊರು ಪರವೂರುಗಳ [illegible] ಗಳನ್ನೂ ಧಾನ್ಯಾದಿಗಳನ್ನೂ ಬಿತ್ತಿ ಬೆಳೆಯಿಸಿ, ನಾನಾ ನಮೂನೆಯ ಹೊಸ ಸಸ್ಯಾಹಾರಗಳನ್ನುಪಯೋಗಿಸಿ ಅವವುಗಳಿಗೆ ಯೋಗ್ಯವಾದವುಗಳ್ಯಾವವೆಂಬದನ್ನೂ, ಅವನ್ನು ನೆಟ್ಟು ಬೆಳೆಯಿಸಬೇಕಾದ ಯೋಗ್ಯ ರೀತಿ ಯಾವದೆಂಬದನ್ನೂ, ಆಜುಬಾಜಿನ ಜನರಿಗೆ ಮತ್ತು ವ್ಯವಸಾಯ ಪ್ರೌಢ ವಿದ್ಯಾ ಶಾಲೆಯ ವಿದ್ಯಾರ್ಥಿಗಳಿಗೆ ತೋರಿ ಕಲಿಸುವ ಮಾದರಿ ಹೊಲಗಳನ್ನೂ ಏರ್ಪಡಿಸಿರುತ್ತಾರೆ. ಈ ಬಗ್ಗಾಗಿ ಲಕ್ಷೋಪಲಕ್ಷ ರೂಪಾಯಿಗಳು ವೆಚ್ಚವಾಗಿದರೂ ಸರಕಾರದವರು ಬಯಸಿದಂಥಾ ಪರಿಣಾಮವು ಉಂಟಾದ ಹಾಗೆ ತೋರುವದಿಲ್ಲ.

ವಿದ್ಯಾ ಶಾಲೆಗಳಿಗೂ ವೃತ್ತಿ ಕೈಗಾರಿಕೆ ಮೊದಲಾದವುಗಳನ್ನು ಕಲಿಸುವ ಶಾಲೆಗಳಿಗೂ ಸೇರುವ ನಮ್ಮೂರ ವಿದ್ಯಾರ್ಥಿಗಳ ಮುಖ್ಯೋದ್ದೇಶವೂ ಸರಕಾರಿ ಉದ್ಯೋಗವನ್ನು ಹೊಂದಬೇಕೆಂಬುದೇ ಆಗಿದೆ. ಹೆಚ್ಚಿಗೆ ಪಗದಿ ಸಿಕ್ಕುವ ಸಂದರ್ಭದಲ್ಲಿ ಸಹ ಖಾಸಗಿ ನೌಕರಿಗೆ ಮನಸ್ಸು ಮಾಡದೆ ಕಡಿಮೆ ಪಗದಿಯಾದರೂ ಸಾಕೆಂದು ಸರಕಾರಿ ಉದ್ಯೋಗವನ್ನು ಬಯಸುವದು ಪದ್ಧತಿಯಾಗಿರುವ ನಮ್ಮೂರಲ್ಲಿ ವ್ಯವಸಾಯ ಶಾಲೆಗಳಲ್ಲಿ ಕಲಿತ ಈ ವಿದ್ಯಾರ್ಥಿಗಳಿಂದ ಕೃಷಿ ವ್ಯಾಪಾರಕ್ಕೆ ಹೆಚ್ಚಿನ ಅಭಿವೃದ್ಧಿಯುಂಟಾದ ಹಾಗೆ ತೋರುವದಿಲ್ಲ. ಕೃಷಿಕನು ಸ್ವತಹಾ ನಿರಕ್ಷರ ಕುಕ್ಷಿಯಾಗಿಯೂ ನಿರ್ಧನ ಪುರುಷನಾಗಿಯೂ ಇದ್ದು ತನ್ನ ಮಕ್ಕಳು ವ್ಯವಸಾಯ ಶಾಲೆಯ ವಿದ್ಯಾಭ್ಯಾಸವನ್ನು ಹೊಂದಲು ಯೋಗ್ಯರಾಗುವಷ್ಟು ಇಂಗ್ಲಿಷು ಭಾಷಾ ಜ್ಞಾನವನ್ನುಂಟು ಮಾಡಿಸಲು ಶಕ್ತಿಯುಳ್ಳವನಾಗಿಲ್ಲ. ದೇಶ ಭಾಷೆಯಲ್ಲಿ ಈ ನವೀನ ಕ್ರಮಗಳನ್ನು ಬೋಧಿಸುವ ಶಾಲೆಗಳೂ ಇಲ್ಲ. ಒಂದು ವೇಳೆ ಯಾರಾದರೊಬ್ಬ ಕೃಷಿಕ ಪುತ್ರನು ಈ ತರದ ವಿದ್ಯಾ ಜ್ಞಾನವನ್ನು ಹೊಂದಿ ಸ್ವಗೃಹಾಭಿಮುಖನಾದಾಗ ಈತನ ನವೀನ ಕ್ರಮಗಳನ್ನುಪಯೋಗಿಸಲಿಕ್ಕೆ ಆತನ ಸ್ವಜನರಾದರೂ ಒಪ್ಪುವ ಸಂಭವವಿಲ್ಲ. "ಅತ್ಯಾಸೆ ಗತಿಗೇಡು" ಎಂಬಂತೆ ಈ ಹೊಸ ಕ್ರಮವನ್ನನುಸರಿಸಿ "ಇದದ್ದು ಹೋಯ್ತು ಮದ್ದಿನ ಗುಣದಿಂದ" ಎಂಬಂತಾದರೆ ಬೂಮಾಲಿಕನಿಗೇನು? ತಮ್ಮ ಜೀವನಕ್ಕೇನು? ಎಂಬೀ ಭಯವೂ ಅವರಲ್ಲಿ ಇದ್ದೇ ಇರುವದು. ಒಂದು ವೇಳೆ ಅಂಥಾ ಆತಂಕಗಳು ಇಲ್ಲದಿದ್ದೆಡೆಯಲ್ಲಿ ಸಹಾ ಹಣಪಿನ ಅಡಚಣೆಯು ಇದ್ದೇ ಇರುವದು. ಈ ಕಾರಣದಿಂದ ತನ್ನ ಹೊಟ್ಟೆ ಹೊರೆವ ಬಗ್ಗಾಗಿಯೂ ತನ್ನವರ ತಾಡನ ತರ್ಜನಗಳಿಂದ ವಿಮೋಚನೆ ಹೊಂದುವ ಬಗ್ಗಾಗಿಯೂ ಪರಸೇವೆಯನ್ನು ಕೈಕೊಳ್ಳದೆ ನಿರ್ವಾಹವಿಲ್ಲವಾಗಿದೆ.

ಜಪಾನ ದೇಶವು ಬಂಗಾಳದ ಬಯಲಿನಷ್ಟು ವಿಸ್ತಾರವಾದದ್ದಲ್ಲ. ಅದರಲ್ಲೂ ಬಹುಸ್ತ ಬೆಟ್ಟಗಳಿಂದ ತುಂಬಿಹೋಗಿದೆ. ಈ ಸಣ್ಣ ದೇಶದವರು ವರ್ಷಂಪ್ರತಿ ಐದು ಕೋಟಿ ರೂಪಾಯಿ ಗಳನ್ನು ವ್ಯವಸಾಯ ಸಂಪ್ರದಾಯಾಭಿವೃದ್ಧಿಗೆ ಉಪಯೋಗಿಸುವದಲ್ಲದೆ ದೇಶೀಯ ಕೃಷೀವಲರಿಗೆ ನವೀನ ವ್ಯವಸಾಯ ಕ್ರಮಗಳನ್ನುಪದೇಶಿಸುವ ಬಗ್ಗಾಗಿ ೩೦೦ ಮಂದಿ ಪಂಡಿತರನ್ನೂ ಸಸ್ಯಾಹಾರವಾಗುಪಯೋಗಿಸಲ್ಪಡುವ ಗೊಬ್ಬರಗಳನ್ನು ಪರೀಕ್ಷಿಸಲಿಕ್ಕಾಗಿ ೧೧೭ ಮಂದಿ ಇನ್ಸ್‌ಪೆಕ್ಟರುಗಳನ್ನೂ ಅರಿಮುಂದಿ ವ್ಯವಸಾಯ ಸಂಬಂಧವಾದ ರಸಾಯನ ಶಾಸ್ತ್ರಜ್ಞರನ್ನೂ ೪೭ ಮಾದರಿ ಹೊಲಗಳನ್ನೂ ಏರ್ಪಡಿಸಿರುವರು.

"ಹಿಂದೂ ಕೃಷಿಕನು ಹೊಸ ಕ್ರಮಗಳನ್ನು ಅನುಸರಿಸಲು ಆರಂಭದಲ್ಲಿ ಸ್ವಲ್ಪ ಅನುಮಾನ ಪಡುವವನಾದರೂ ಒಮ್ಮೆ ಅದರ ಉಪಯೋಗವನ್ನು ತಿಳಿದು ಸಂತುಷ್ಟನಾದರೆ ಅವನು ಎಷ್ಟು ಮಾತ್ರಕ್ಕೂ ಹಿಂಜರಿಯುವವನಲ್ಲವೆಂಬದು" ಪೂನಾ ನಗರದ ಸಮೀಪವಾದ ಗ್ರಾಮಗಳಲ್ಲಿ ಈಗ ವಿಲಾಯತೀ ತರದ ಸುಮಾರು ೫೦೦೦ ನೇಗಿಲುಗಳು ಉಪಯೋಗಿಸಲ್ಪಡುವದರಿಂದಲೇ ವ್ಯಕ್ತವಾಗುವದು. ಶೋಲಾಪುರ ಜಿಲ್ಲೆಯ ಒಂದೇ ಗ್ರಾಮದಲ್ಲಿ ಅಂಥಾ ೧೦೦ ನೇಗಿಲುಗಳಿವೆ." ಎಂದು ಪೂನಾ ನಗರದ ಡಾಕ್ಟರ್ ಮಾನ್‌ರವರು ಅಭಿಪ್ರಾಯ ಪಡುತ್ತಾರೆ.

ಸರಕಾರಿ ಚಾಕರಿಯಲ್ಲಿರುವ ಬಡ ನೌಕರನಾದರೂ ತನ್ನ ಅಧಿಕಾರದ ದೆಸೆಯಿಂದ ಮಹಾತ್ಮನೆನ್ನಿಸಿಕೊಳ್ಳುವ ನಮ್ಮೂರಲ್ಲಿ ವ್ಯವಸಾಯ ವೃತ್ತಿಯು ತುಚ್ಛವೆಂದು ಎಣಿಸಲ್ಪಟ್ಟ ಹಾಗೆ ತೋರುತ್ತಿದೆ. ಸರಕಾರಿ ನೌಕರರು ಬೇಸಾಯಗಾರರನ್ನು ಮರ್ಯಾದೆಯಿಂದ ಕಂಡು ಅವರೊಡನೆ ಬಹುಮಾನ ಪುರಸ್ಸರವಾಗಿ ಮಾತು ಕಥೆಗಳನ್ನೂ ಕಾಗದ ಪತ್ರಗಳನ್ನೂ ನಡೆಯಿಸಬೇಕೆಂದು ದಯಾಳು ಸರಕಾರದವರು ವಿಧಿಸಿದರೆ ಎಷ್ಟೋ ಮಂದಿ ವಿದ್ಯಾವಂತರು ಈ ವೃತ್ತಿಯನ್ನವಲಂಬಿಸುವಲ್ಲಿ ಸಂದೇಹವಿಲ್ಲ.

ನಮ್ಮೂರಲ್ಲಿ ೧೦ ರೂಪಾಯಿ ಸಂಬಳದ [illegible] ರೂಪಾಯಿ ಸಂಬಳದ [illegible] ದಾರನನ್ನು [illegible] ದಿಂದ ಸಂಭೋದಿಸಿ [illegible]

ಡಿಸ್ಟ್ರಿಕ್ಟ್ ಕಲೆಕ್ಟರ್, ತಹಸೀಲ್ದಾರ್ ಮೊದಲಾದ ವಿದ್ಯಾವಂತರಾದ ಮಾನನಿಧಿಗಳು ಬಹು ವಚನದಿಂದ ಉಳ್ಳ ಕಾಗದ ಪತ್ರಗಳಲ್ಲಿ ನಮೂದಿಸುತ್ತಿರುವವರ ಹೆಸರುಗಳನ್ನು ಅಲ್ಪ ವಿದ್ಯಾವಂತರೂ ಅಹಂಕಾರಿಗಳೂ ಆದ ಕೀಳು ನೌಕರರು ಏಕವಚನದಿಂದ ಸಂಭೋಧಿಸಿ ಬರೆಯುತ್ತಿರುವುದಕ್ಕೂ ತಮ್ಮ ವೃತ್ತಿಯೇ ಕಾರಣವೆಂದೂ, ಅದು ಬಹುಶ್ಯಾ ನಿಂದ್ಯವಾಗಿರಬೇಕೆಂತಲೂ ಕೃಷಿಕರಲ್ಲಿ ಅನೇಕರು ತಿಳಿದುಕೊಂಡಿರುವ ಹಾಗೆ ತೋರುತ್ತಿದೆ.

ನಮ್ಮೂರಲ್ಲಿ ಹೊಸ ಹೊಸ ಆಸ್ತಿಪಾಸ್ತಿಗಳನ್ನು ಕೊಂಡು ಕೊಂಡು ಅವುಗಳಿಂದ ಕೂಡುವೆಷ್ಟು ಹೆಚ್ಚಿನ ಗೇಣಿಯನ್ನು ಒರಮಾಡಿ ಕೊಳ್ಳುವ [illegible] ನಾನಾ ತರ ಯತ್ನಗಳನ್ನು ಮಾಡುವ ಧನಿಕರಿಗಂತೂ ಅಭಾವವಿಲ್ಲ. ಆದರೆ ಹೊಸ [illegible] ಕೊಂಡುಕೊಳ್ಳುವ ಬದಲಾಗಿ ಇದ್ದುದನ್ನೇ ಸರಿಯಾಗಿಡಲು ಯತ್ನಿ[illegible] ವಿರಳರು.

ಉತ್ತರ ಹಿಂದುಸ್ಥಾನದ ಪೂಸಾ ಎಂಬಲ್ಲಿರುವ ಸರಕಾರೀ ಕೃಷಿ ಶೋಧನಾಲಯಕ್ಕೆ ಅಮೇರಿಕಾ ಖಂಡದ ಒಬ್ಬ ಗೃಹಸ್ಥರು ೩೦,೦೦೦ ಪವನುಗಳನ್ನು ದಾನ ಮಾಡಿದರು. ವಿದೇಶಸ್ಥರು ಕೂಡ ನಮ್ಮೂರ ವ್ಯವಸಾಯಾಭಿವೃದ್ಧಿಗಾಗಿ ಹೀಗೆ ಸಹಾಯ ಮಾಡಿರುವಲ್ಲಿ ನಮ್ಮೂರ ಕೋಟ್ಯಾಧಿಪತಿಗಳೇನು ಮಾಡಿರುವರು? ತಮ್ಮ ಒಕ್ಕಲುಗಳ ಎತ್ತು ಬೀಜಗಳನ್ನು ಸುಲಿದು ಹೊರಕ್ಕಟ್ಟಿರುವರು.

ಈ ತರದ ನಡತೆಗಳು ನಮ್ಮೂರ ಭೂಮಾಲೀಕರಲ್ಲಿರುವ ವರೆಗೆ [illegible] ಕ್ರಮಗಳ ಪ್ರಕಾರ ಮಾಡಲ್ಪಡುವ ವ್ಯವಸಾಯದಿಂದ ಹೆಚ್ಚಿನ ಲಾಭವನ್ನು ಪ್ರತ್ಯಕ್ಷವಾಗಿ ತೋರಿಸಲು ವ್ಯವಸಾಯ ಇಲಾಖೆಯುದ್ಯೋಗಸ್ಥರಿಗೆ ಸಾಧ್ಯವಾದರೂ ನಿ[illegible]ವಾಗಿ ಪ್ರಯೋಜನ ಹೊಂದತಕ್ಕವನಾದ ಕೃಷೀವಲನಿಗೆ ಸಾ[illegible] ವಸು ಪ್ರಕೃತ ದುಸ್ಸಾಧ್ಯವೆಂಬಂತೆ ತೋರುತ್ತಿದೆ

ಆರಂಬಗಾರ

ಸತ್ಪುರುಷ ಬಾಪು ಮಹಾರಾಜ ಕೆಣಿ

ವಾಡಿಸಂಸ್ಥಾನಕ್ಕೆ ಸೇರಿದ ಕುಡಾಳ ಪ್ರಸಿದ್ಧ ಪ್ರಾಂತದಲ್ಲಿ "ಆರವಲಿ" ಎಂಬ ಚಿಕ್ಕದೊಂದು ಅಗ್ರಹಾರವಿರುವುದು. ಇದರ ಬೋಕನಸ್ಥಿಯು ಪೂರ್ವದಲ್ಲಿ ಕಾಡು ಸ್ವಭಾವದ್ದಾಗಿದ್ದು, ದುರಾಚಾರದಿಂದ ವರ್ತಿಸುವ ಕೆಲವು ಪುಂಡರು[illegible] ಈ ಗ್ರಾಮವನ್ನು ತವರುಮನೆಯಾಗಿ ಮಾಡಿಕೊಂಡಿದ್ದರು. ಆದರೂ ದೇವರೆ ಈ [illegible]ತ್ತಿನ ಸೃಷ್ಟಿಕರ್ತನು, ಆತನನ್ನು ಪೂರ್ಣಪೂರ್ವಕ ಭಜಿಸಿದರೆ ಇಹದಲ್ಲಿಯೂ ಪರದಲ್ಲಿಯೂ ಸುಖವನ್ನು ಹೊಂದುವೆವೆಂಬ ತಿಳುವಳಿಕೆಯು ಹಿಂದುಸ್ಥಾನದ ಇತರ [illegible]ರಂತೆಯೇ, ಇವರಲ್ಲಿಯೂ ನೆಲೆಗೊಂಡಿದ್ದರಿಂದ ಅನಾದಿಯಿಂದಿದ್ದ ಶ್ರೀ ವೇತಾಳ [illegible]ವನ್ನು ಇವರು ಭಜಿಸುತ್ತಿದ್ದರು. ಕ್ರಿ. ಶ 1675ರ ಸುಮಾರಿಗೆ ಇಲ್ಲಿ "ಭೂಮ್ಯಾ" ಎಂಬೊಬ್ಬ ಸತ್ಪುರುಷನು ಬಂದು ಜನರ ಮನೋವೃತ್ತಿಯನ್ನು ಚನ್ನಾಗಿ ಸುಧಾರಿಸಿ ಹಾಳಾಗುತ್ತಾ ಬಂದ ಶ್ರೀ ವೇತಾಳನ ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿದನು. ಆತನ ದೇವರ ಮೇಲಿರುವ ನಿಸ್ಸೀಮ ಭಕ್ತಿಯು ಅವನು ಮಾಡಿದ ಅದ್ಭುತ ಕೃತ್ಯಗಳಿಂದ ಕಾಣಿಸಿಕೊಳ್ಳಲು ನಾಲ್ಕು ದಿಕ್ಕುಗಳಲ್ಲಿಯೂ ಆತನ ಕೀರ್ತಿಯು ಪಸರಿಸಿತು. ಕೊನೆಗೆ ಅರಸನೂ ಕೂಡ ಆತನ ಶಿಷ್ಯನಾದನು. ಮುಂದೆ ಕೆಲವು ವರ್ಷಗಳು ಗತಿಸಲು ಈ ಸಿದ್ಧ ಪುರುಷನಿಗೆ ದೇಹಾವಸಾನವಾಯಿತು.

ಅವನ ಹಿಂದೇ ಮರುವರುಷವೇ ಅಂದರೆ ಕ್ರಿ ಶ 1730ರಲ್ಲಿ ಈ ಭೂಮ್ಯಾನ ಅವತಾರವೋ ಎಂಬಂತೆ ಪ್ರಸ್ತುತ ಚರಿತ್ರನಾಯಕರಾದ ಬಾಪು ಮಹಾರಾಜ ಕೆಣಿಯವರು ತಮ್ಮ ತಂಗಿಯನ್ನೊಡಗೂಡಿ ಕರ್ನಾಟಕ ಪ್ರಾಂತದಿಂದ ಈ ಆರವಲಿ ಅಗ್ರಹಾರಕ್ಕೆ ಬಂದು ಹತ್ತಿರವಿರುವ ಶಿರವಡೆಯೆಂಬ ಊರಲ್ಲಿ ಪ್ರಸಿದ್ಧರಾದ ಹರಬಾ ಕಾಮತಿಯವರಲ್ಲಿ ಉಳಕೊಂಡರು. ಆ ಕಾಲದಲ್ಲಿ ಇವರ ವಯಸ್ಸು ಸಾಧಾರಣ 40 ಆಗಿತ್ತು ~~ಆದ್ದರಿಂದ ಇವರು ಕ್ರಿ. ಶ. 1690ರಲ್ಲಿ ಹುಟ್ಟಿದ್ದಿರಬಹುದೆಂಬ ಊಹನೆಯಾಗುತ್ತದೆ.~~ ಅವರ ಇದಕ್ಕಿಂತ ಪೂರ್ವ ವಯಸ್ಸಿನ ಇತಿಹಾಸವು ಉಪಲಬ್ಧವಿಲ್ಲ. ಬಹುಶ್ಯಾ ಇವರ ಪೂರ್ವಜರು ಗೋಮಾಂತಕ (ಗೋವೆ) ದೊಳಗಿನ ಧರ್ಮಕ್ರಾಂತಿಯ ಕಾಲದಲ್ಲಿ ಕರ್ನಾಟಕ ದೇಶಕ್ಕೆ ಓಡಿಬಂದವರಾಗಿರಬೇಕು. ಈ ಆರವಲಿಯಲ್ಲಿ ಇವರು ಭೂಮ್ಯಾನಂತೆಯೇ ಶ್ರೀ ವೇತಾಳನ ಪೂರ್ಣ ಉಪಾಸಕರಾಗಿ ಅವನು ಹ್ಯಾಗೆ ಕೌತುಕಗಳನ್ನು ಮಾಡುತ್ತಿದ್ದನೋ ಹಾಗೆಯೇ ಅದ್ಭುತ ಕಾರ್ಯಗಳನ್ನು ಮಾಡಲಾರಂಭಿಸಿದರು.

ಅರಸನು ಇವರ [illegible] ಕೆಲವು ಹೊಲಗಳನ್ನು [illegible] [illegible]

ಅತಿಥಿ ಅಭ್ಯಾಗತರಿಗೂ ಅನ್ನ ಪ್ರಸಾದ ಸಿಕ್ಕುವ ವ್ಯವಸ್ಥೆಯನ್ನು ಮಾಡಿದರು ಈಗಲೂ ಈ ಅನ್ನಶಾಂತಿಯು ನಡೆಯುತ್ತದೆ. ಕುಡಾಳ ಪ್ರಾಂತದ ಜನರು "ಅನ್ನಛತ್ರ" "ಅನ್ನ ಶಾಂತಿ" "ಅನ್ನಜಾತ್ರೆ" ಮುಂತಾಗಿ ಕರೆಯುತ್ತಾರೆ.

ಬಾಪು ಮಹಾರಾಜ ಇವರು ವೈಷ್ಣವ ಸಾಂಪ್ರದಾಯಿಗಳಾಗಿದ್ದರೂ ಹರಿಹರ ವಿಭೇದಂ ಮಾಡುತ್ತಿದ್ದಿಲ್ಲ. ಇದೇ ದೃಷ್ಟಿಯಿಂದ ಅವರು ಶಿವಗಣವಾದ ವೇತಾಳನ ಉಪಾಸನೆಯನ್ನು ಮಾಡುತ್ತಿದ್ದರು. ಅವರು ಮಾಡಿದ ಅನೇಕ ಆಶ್ಚರ್ಯಕರವಾದ ಕೃತ್ಯಗಳಿಂದ ಇವರು ಮಹಾನ್ನುಗವದ್ಭಕ್ತರಾಗಿದ್ದರೆಂಬದು ನಿಸ್ಸಂಶಯವು. ಆದರೆ ಇವರ ಗುರುಗಳ್ಯಾರು, ಇವರು ಈ ಯೋಗ್ಯತೆಗೆ ಅಗತ್ಯವಾದ ಯಾವ ಸಾಧನೆಗಳೆಲ್ಲ ನಡಿಸಿದರು, ಮುಂತಾದ ಯಾವ ಚರಿತ್ರೆಯೂ ತಿಳಿಯವಲ್ಲದು. ಅವರಿಗೆ ಅನೇಕ ಜನರು "ಬಾಪು ಮಾಮಾ" ಅಥವಾ "ಶಿಂಕ ಮಾಮಾ" ಎಂದು ಕರೆಯುತ್ತಿದ್ದರು ಯಾಕಂದರೆ ಸೀನು ಒರುವಿಕೆಯಿಂದ ಮುಂದೆ ಆಗುವ ಸಂಗತಿಗಳನ್ನು ಹೇಳುತ್ತಿದ್ದರು.

ಮಹಾದಜಿ ಸಿಂಧ್ಯನ ಆಳಿಕೆಯಲ್ಲಿ ಜೀವಬಾ ಬಲ್ಲಾಳ ಕೇರಕರ ಎಂಬ "ಗೋಮಾಂತಕ" ಸಾರಸ್ವತ ಬ್ರಾಹ್ಮಣನು ಆತನ ಸರ್ವ ಸೇನಾಧಿಪತಿಯಾಗಿದ್ದನು. ಈ ಮಹಾ ಪ್ರತಾಪಿ ವೀರ ಪುರುಷನು ತನ್ನ 18ನೇ ವರುಷ ಪ್ರಾಯದಲ್ಲಿ ಗೋಮಾಂತಕದಿಂದ ಉದ್ಯೋಗವನ್ನು ದೊರಕಿಸಿಕೊಳ್ಳುವದಕ್ಕೆ ಹೊರ ಊರುಗಳಿಗೆ ಹೋಗಲಿಕ್ಕೆ ನಿಶ್ಚಯಿಸಿದನು. ಮನೆಯಿಂದ ಹೊರಗೆ ಒಂದು ಕೆಲವು ಹೆಜ್ಜೆಗಳು ಮುಂದಿಡುತ್ತಲೆ, ಕೇರಕರವರಿಗೆ ಒಂದು ಸೀನು ಬಂತು. ಕೂಡಲೇ ಅವರು ಕಾಲು ಹಿಂದೆಗೆದರು. ಆಗ ಅಲ್ಲಿ ನಮ್ಮ ಮಹಾರಾಜರಿದ್ದರು. ಆ ಪ್ರಕಾರವನ್ನು ನೋಡಿ "ಮಗುವೇ, ನೀನು ಕಾಲು ಹಿಂದಕ್ಕೆ ತೆಗದ್ದರಿಂದ ಪ್ರಧಾನನಾಗುವಿ, ಇಲ್ಲದಿದ್ದರೆ ಅರಸನೇಯಾಗುತ್ತಿದ್ದಿ. ಆದರೂ ಚಿಂತೆಯಿಲ್ಲ, ಹೀಗೆಯೇ ಮುಂದಕ್ಕೆ ನಡಿ" ಎಂದು ಹೇಳಿದರು. ಮುಂದೆ ಕ್ರಿ ಶ 1761ರ ಪಾಣಿಪತದ ಘನಘೋರ ಸಂಗ್ರಾಮದಲ್ಲಿ ನಷ್ಟವಾದ ಮರಾಠಾ ರಾಜ್ಯದ ವೈಭವವೂ ಗೌರವವೂ ಈತನ ಪರಾಕ್ರಮದಿಂದ ಪುನಹಾ ಸ್ಥಾಪಿಸಲ್ಪಟ್ಟು ಮಹಾರಾಷ್ಟ್ರರಾಜ್ಯವು ಪೂರ್ವಕ್ಕಿಂತ ಅಧಿಕಾಧಿಕ ಬೆಳೆಯಿತು. ಖರಡ್ಯಾ ಯುದ್ಧದಲ್ಲಿ (Battle of Kurdla) ನಿಜಾಮನನ್ನು ಸೋಲಿಸಿದವನು ಈತನೇ. ತನ್ನ ಜೀವಮಾನ ಕಾಲದಲ್ಲಿ ಸರಾಸರಿ 300 ಚಿಕ್ಕ ದೊಡ್ಡ ಕಾಳಗಗಳನ್ನು ಮಾಡಿ ಜಯ ಹೊಂದಿದನು. ಇವನ ವಂಶಸ್ಥರು ಈಗಲೂ ಗ್ವಾಲಿಯರದಲ್ಲಿಯೂ ಗೋವೆಯ ಕೇರಿ ಎಂಬಲ್ಲಿಯೂ ಇರುತ್ತಾರೆ. ಸುಮಾರು 600 ಪುಟಗಳಿಗೆ ಮೀರುವ ಒಂದು ದೊಡ್ಡ ಪುಸ್ತಕದಲ್ಲಿ ಛಾಪಿಸಿ, ಇವನ ಚರಿತ್ರವನ್ನು ನರಹರಿ ವೆಂಕಾಜಿ ರಾಜಾಧ್ಯಕ್ಷ ಎಂಬೊಬ್ಬ ಸಾರಸ್ವತ ಬ್ರಾಹ್ಮಣರು ಮರಾಠಿ ಭಾಷೆಯಲ್ಲಿ ಹೊಸತಾಗಿ ಪ್ರಕಟಗೊಳಿಸಿದ್ದಾರೆ. ಈ ಪತ್ರಿಕೆಯಲ್ಲಿ ಸ್ಥಳದೊರೆತರೆ ಸಂಕ್ಷಿಪ್ತವಾಗಿ ಕೊಡಲಿಚ್ಛೆಯಿಸುತ್ತೇನೆ.

ಬಾಪು ಮಹಾರಾಜರು ವರ್ಷಂಪ್ರತಿಗೂ ಕಾರ್ತಿಕದ ಯಾತ್ರೆಗೆ ಪಂಡರಾಪುರಕ್ಕೆ ಹೋಗುತ್ತಿದ್ದರು. ಆ ಕಾಲದಲ್ಲಿ ಸಮುದಾಯದಿಂದ ಹೋಗುವ ಪ್ರಚಾರವು ಬಹಳವಿತ್ತು. ಅದರಂತೆಯೇ ಕೆಲವು ಜನರೊಂದಿಗೆ ಅವರು ಕಾಲು ದಾರಿಯಿಂದ ಹೊರಟ ಹಾದಿಯಲ್ಲಿ ಅಜಯರ್ಾ ಎಂಬ ಊರಿನಲ್ಲಿ ರಾತ್ರೆ ಉಳಕೊಂಡರು. ಆ ಊರಿನ ಒಬ್ಬ ಧನಿಕ ಸಾವಕಾರನ ಮಗನು ಬಹಳ ಅಸ್ವಸ್ಥದಲ್ಲಿ ಬಿದ್ದು ಸಾಯುವಂತಿದ್ದನು. ಅನೇಕ ಔಷಧೋಪಚಾರಗಳು ಮಾಡಿದ್ದಾಗ್ಯೂ ಗುಣ ಬಂದಿಲ್ಲ. ಆಗ ವೈದ್ಯರು ನಿರಾಶರಾಗಿ ಏನಾದರೂ ದೈವಿಕ ಉಪಾಯವನ್ನು ಮಾಡಿ ನೋಡಬಹುದೆಂದು ಸೂಚಿಸಿದರು. ಅದರಂತೆ ಸಾವಕಾರನು ಪ್ರಯತ್ನ ನಡಿಸುತ್ತಿದ್ದನು. ತನ್ನೂರಿಗೆ ಬಂದ ಬಾಪು ಮಹಾರಾಜರ ಕೀರ್ತಿಯನ್ನು ಕೇಳಿ ಮನೆಯ ಸಕಲ ಜನರೊಂದಿಗೆ ದೇವಾಲಯದಲ್ಲಿ ಒಂದು ಅತ್ಯಂತ ವಿಲಾಪ ಮಾಡಲಾರಂಭಿಸಿದನು. ಕೆಣಿಯವರು ಈತನ ದುಃಖದ ಕಾರಣವನ್ನು ಕೇಳಿ ಹೇಳಿದ್ದೇನಂದರೆ ನಿಮ್ಮ ಮಗನು ಈ ಹೊತ್ತಿನಿಂದ ಐದು ದಿವಸಗಳಲ್ಲಿ ಸಾಯುವನು. ಅದಕ್ಕಿಂತ ಪೂರ್ವದಲ್ಲಿಯೇ ಏನಾದರೂ ಯುಕ್ತಿಗಳನ್ನು ಮಾಡಿದರೆ ಆತನು ಬದುಕುವನು. ಆದರೆ ನೀವು ಆ ಉಪಾಯಗಳನ್ನು ನಡೆಸುವಂತೆ ತೋರುವದಿಲ್ಲ. ಇದನ್ನು ಕೇಳಿ ಆ ವರ್ತಕನು ಬಹಳ ದೀನನಾಗಿ ಮಹಾರಾಜರ ಕಾಲಡಿಗಳಲ್ಲಿ ಲೋಟಾಂಗಣ ಹಾಕುತ್ತಾ, ದೇವರೇ ನನಗೆ ಒಬ್ಬನೇ ಮಗನಾದ್ದರಿಂದ ಅವನಗೋಸುಗ ಸರ್ವಸ್ವ ಹರಣವಾದರೂ ಚಿಂತೆಯಿಲ್ಲ. ಆದ್ದರಿಂದ ದಯವಿಟ್ಟು ಯಾವ ಉಪಾಯವೆಂದು ಹೇಳಬೇಕು ಎಂದು ಬೇಡಿಕೊಂಡನು. ಹೀಗೆ ಆತನ ದೀನ ಸ್ಥಿತಿ ನೋಡಿ ಕರುಣಾಸಾಗರರಿಂದ ಕೆಣಿಯವರು [illegible] ಎರಡು ವರುಷಗಳ ಹಿಂದೆ ನೀವು ಚಂದ್ರಕಾಂತ ಶಿಲೆಯಿಂದ ಭವ್ಯವಾದ [illegible] ಅಸ್ತಿವಾರವು ಮುಗಿದು [illegible] ಕಟ್ಟಿಸುವವರು ಎಂದನಂತೆ [illegible]

[illegible]

ಸಾಯುವದು. ಮತ್ತು ಅದೇ ದಿವಸ ಅದೇ ಹೊತ್ತಿಗೆ ನಿಮ್ಮ ಮಗನೂ ಸಾಯುವನು. ಸರ್ಪವು ಬದುಕಿದರೆ ಮಾತ್ರ ಹುಡುಗನು ಬದುಕುವನು" ಎಂದು ಹೇಳಿದರು. ವರ್ತಕನು ಕೂಡಲೆ ಇಡೀ ಮನೆಯನ್ನು ಕೆಡವಿಹಾಕಲಿಕ್ಕೆ ಸಿದ್ಧನಾದನು. ಆದರೆ ಸಾಧುಗಳಿಂದದ್ದು "ಇಡೀ ಮನೆಯನ್ನು ಕೆಡವಿಹಾಕುವುದು ಅವಶ್ಯವಿಲ್ಲ. ಸರ್ಪವು ಮನೆಯ ಇಂಥಾದ್ದೇ ದಿಕ್ಕಿನ ಗೋಡೆಯಲ್ಲಿ ನೆಲದಿಂದ ಇಂತಿಷ್ಟೇ ಮೊಳ ಎತ್ತರಕ್ಕೆ ಇರುವದು. ಅಷ್ಟೇ ಭಾಗವು ಜಾಗ್ರತೆಯಿಂದ ಅಗಿದರೆ ಸಿಕ್ಕುವದು. ಸರ್ಪವು ಅತಿಶಯ ಕೃಶನಾಗಿದೆ, ಆದರೂ ಹೊರಗೆ ಬಂದು ಗಾಳಿಯ ಸ್ಪರ್ಶ ಮಾಡುತ್ತಲೇ ಅದು ತುಸ ಚೇತರಿಸಿಕೊಂಡು ಇಂದಿನಿಂದ ೧೫ ದಿವಸಗಳಲ್ಲಿ ಪೂರ್ಣ ಸೌಖ್ಯ ಹೊಂದುವದು. ತರುವಾಯ ಅದಕ್ಕೆ ಹಾಲುಕೊಟ್ಟು ದೂರ ಅರಣ್ಯದಲ್ಲಿ ಬಿಡಬೇಕು. ಹೀಗೆ ಮಾಡಿದ್ದೇ ಆದರೆ ನಿಮ್ಮ ಮಗನು ಸಂಪೂರ್ಣ ಆರೋಗ್ಯ ಹೊಂದುವನು. ಅವನಿಗೆ ಔಷಧ ಮುಂತಾದ ಉಪಚಾರಗಳು ಅವಶ್ಯವಿಲ್ಲ" ಹೀಗೆ ಹೇಳುತ್ತಲೆ ಎಲ್ಲಾ ಜನರಿಗೂ ಆಶ್ಚರ್ಯವಾಯಿತು. ಮರುದಿವಸ ಕಿಣಿಯವರಿಗೆ ನಿಲ್ಲಲಿಕ್ಕೆ ಸಾವಕಾರನು ಬಹಳ ಆಗ್ರಹ ಮಾಡಿದನು, ಆದರೆ ಅವರು ಒಪ್ಪಲಿಲ್ಲ. ಕಿಂಚಿತ್ ದ್ರವ್ಯವನ್ನು ಸ್ವೀಕರಿಸಲಿಕ್ಕೆ ಬೇಡಿಕೊಂಡನು. ಸಕಲ ಆಶೆಗಳ ಅಂಕುರಗಳನ್ನು ಸುಟ್ಟು ಬೂದಿ ಮಾಡಿ, ಹುಟ್ಟುದರಿದ್ರಿಯನ್ನು ಕೂಡ ಕುಬೇರನಂತೆ ಶ್ರೀಮಂತನಾಗಿ ಮಾಡುವ ತಪೋಶಕ್ತಿ ಸಂಪಾದಿಸಿದ ಈ ಮಹಾತ್ಮರಿಗೆ ಈತನ ದ್ರವ್ಯ ಬೇಕೆ? ಅವರಿಗೆ ಗುಡುಗುಡಿ ಸೇದುವ ಅಭ್ಯಾಸವಿತ್ತು. ಕೊನೆಗೆ ಗುಡುಗುಡಿ ಮಾತ್ರ ಸಾವಕಾರನಿಂದ ತರಿಸಿ ಅದನ್ನು ಸೇದಿ ಮರುದಿವಸ ಪ್ರಾತಃಕಾಲಕ್ಕೆ ಹೊರಟು ಹೋದರು. ಸಾವಕಾರನು ಆ ಗೋಡೆಯನ್ನು ಅಗಿಸಿ ಸಾಧುಗಳು ಹೇಳಿದ ಮೇರೆಗೆ ಮೃತಪ್ರಾಯವಾದ ಸರ್ಪವೊಂದನ್ನು ಹೊರಗೆ ತೆಗೆಸಿದನು. ಅದು ಕೇವಲ ಕಾಷ್ಠವತಿತ್ತು. ಹೊರಗಿನ ತಂಗಾಳಿಯು ತಾಗುತ್ತಲೆ ಚೇತರಿಸಿಕೊಂಡಿತು. ಮುಂದೆ ೧೫ನೇ ದಿವಸದಲ್ಲಿ ಅದಕ್ಕೆ ಪೂರ್ಣ ನಡಿಯುವ ಶಕ್ತಿ ಬಂತು. ಸಾವಕಾರನು ಅದಕ್ಕೆ ಹಾಲು ಕುಡಿಸಿ ದೂರ ಅರಣ್ಯದಲ್ಲಿ ಬಿಟ್ಟನು. ನಂತರ ಸಾವಕಾರನ ಮಗನ ಬೇನೆಯು ಗುಣವಾಯಿತು. ಸಾವಕಾರನ ಆನಂದಕ್ಕೆ ಮಿತಿಯಿಲ್ಲದಂತಾಯಿತು. ಸಾಧುಗಳು ಪಂಡರಾಪುರದ ಯಾತ್ರೆ ಮಾಡಿ ಅದೇ ಹಾದಿಯಿಂದ ಹಿಂದಿರುಗಿದರು. ಆಗ ಸಾವಕಾರನು ನಡೆದ ವೃತ್ತಾಂತವನ್ನೆಲ್ಲಾ ನಿವೇದಿಸಿ ಮಗನನ್ನು ಸಾಧುಗಳ ಚರಣಗಳ ಮೇಲೆ ಹಾಕಿದನು. ಈಗಲೂ ಈ ಸಾವಕಾರನ ಕುಟುಂಬದಲ್ಲಿ ಬಾಪು ಮಹಾರಾಜರ ಪುಣ್ಯತಿಥಿಯು ಪ್ರತಿ ವರುಷವೂ ಮಾಡುತ್ತಾರೆ.

ಮ. ಪಾಪ ವಡ.

ಪತ್ರವ್ಯವಹಾರ

ಅಯ್ಯಾ,

ಈ ವರುಷದಲ್ಲಿ ನಮ್ಮ ತಾಲೂಕು ಬೋರ್ಡಿನವರು ೧೫ ಬಾವಿಗಳನ್ನು ತೋಡುವುದಕ್ಕೆ ಹುಕುಂ ಮಾಡಿರುವರಾಗಿ ಕೇಳುತ್ತೇವೆ. ಆ ಪೈಕಿ ಒಂದು ಬಾವಿಯು ಪುತ್ತೂರು ಮಶೀದಿಯ ಬಳಿ ತೋಡಿಸೋಣಾಗುವುದೆಂತ ತಿಳಿದುಬರುತ್ತದೆ. ಮಶೀದಿಯ ಬಳಿ ಜನರು ಉಳಕೊಳ್ಳುವ ನಿವಾಸ ಸ್ಥಳಗಳು ವಿಶೇಷವಾಗಿಲ್ಲ. ಒಂದೆರಡು ಮಹಮ್ಮದೀಯರ ಮನೆಗಳು ಮಾತ್ರ ಇರುತ್ತವೆ. ಅತ್ತಿತ್ತ ಹೋಗುವ ಗಾಡಿಗಳು ಸಹ ಬಂದು ಇಲ್ಲಿ ನಿಲ್ಲವು, ಅದಲ್ಲದೆ ಕುಡಿಯುವ ನೀರಿಗೆ ಈ ಪ್ರಾಂತ್ಯಗಳಲ್ಲಿ ಕೊರತೆ ಇರದು. ಮಹಮ್ಮದೀಯರ ಮನೆಗಳಿಗೆ ಧಾರಾಳ ನೀರು ಸಿಕ್ಕುವ ಬಾವಿಯು ಮಾರ್ಗದ ಬಡಗು ದಿಕ್ಕಿನಲ್ಲಿರುವುದಲ್ಲದೆ ಮಶೀದಿಯ ಹತ್ತಿರಲ್ಲಿ ಒಳ್ಳೇ ನೀರು ಸಿಕ್ಕುವ ಬಾವಿ ಇರುತ್ತದೆ. ಹೀಗಿರುತ್ತಾ ಮಸೀದಿಯ ಸಮೀಪ ಬಾವಿಯನ್ನು ತೋಡಿಸುವುದರಿಂದ ಫಲವೇನು? ಇದಕ್ಕೆ ಬದಲಾಗಿ ಮನೆಗಳು ಬಹಳವಾಗಿದ್ದು ಗಾಡಿಗಳು ಸಹ ತಂಗುವ ಸ್ಥಳವಿರುವ ಬೊಳ್ವಾರ ಎಂಬಲ್ಲಿ ಈಗ ಪ್ರಕೃತವಿರುವ ಬಾವಿಯ ತಳದಲ್ಲಿ ಪಾದೆ ಇರುವುದರಿಂದ ಈ ಪಾದೆಯನ್ನು ತೆಗಿಸಿದರೆ ಉಪಕಾರವಾಗುತ್ತಿತ್ತು. ಬಾವಿಯಲ್ಲಿ ಪಾದೆಯು ಇರುವುದರಿಂದ ನೀರು ಬೇಗನೆ ಆರಿ ಹೋಗಿ ಜನರು ಈ ಪ್ರಾಂತ್ಯಗಳಲ್ಲಿ ಕುಡಿಯಲು ನೀರಿಲ್ಲದೆ ಬಹಳ ಬಳಲುವರು. ಆದ್ದರಿಂದ ಮಶೀದಿ ಬಳಿ ಹೊಸ ಬಾವಿಯನ್ನು ತೋಡಿಸುವ ಖರ್ಚಿನಿಂದ ಬೊಳ್ವಾರದಲ್ಲಿರುವ ಬಾವಿಯಿಂದ ಪಾದೆ ತೆಗಿಸಿ ಅದನ್ನು ಸಜ್ಜುಗೊಳಿಸುವುದು ಉತ್ತಮ

ದರ್ಬೆ ಟೋಲ್‌ಗೇಟಿನ ಬಳಿ ಇರುವ ಹಳೆ ಬಾವಿಯನ್ನು ದುರುಸ್ತಿ ಮಾಡಲು ನಿಶ್ಚಯಿಸಿರುವರೆಂತ ಸಹ ತಿಳಿದು ಬರುತ್ತದೆ. ಈ ಬಾವಿಯು ದರ್ಬೆ ಸುಬ್ರಮಣ್ಯ ರಸ್ತೆಯಲ್ಲಿದೆ. ಈ ರಸ್ತೆಯಲ್ಲಿ ಪ್ರಯಾಣಿಕರ ಸಂಖ್ಯೆಯಾಗಲಿ ಗಾಡಿಗಳ ಆಮದು ರಫ್ತಾಗಲಿ ಕಡಮೆಯಾಗಿರುವುದು. ಇದಕ್ಕಿಂತ ಮಡಕೇರಿ ರಸ್ತೆಯಲ್ಲಿ ಹೆಚ್ಚು ಪ್ರಯಾಣಿಕರೂ ಗಾಡಿಗಳೂ ಆಮದು ರಫ್ತಾಗುವುದರಿಂದ ಮಡಕೇರಿಗೆ ಹೋಗುವ ಮಾರ್ಗದಲ್ಲಿರುವ ಟೋಲಗೇಟಿನ ಸಮೀಪ ಬಾವಿಯನ್ನು ತೋಡಿಸಿದರೆ ಹೆಚ್ಚಿನ ಉಪಕಾರವಾಗುವುದು. ಅದಲ್ಲದೆ ಈ ಟೋಲಗೇಟಿನ ಸಮೀಪ ಅನೇಕ ಮನೆಗಳ ನಿವಾಸಿಕರಿಗೆ ಕುಡಿಯುವ ನೀರಿನ ಅಡಚಣೆ ಇರುವುದರಿಂದ ಪ್ರಥಮದಲ್ಲಿ ಮಡಕೇರಿ ರಸ್ತೆಯ ಟೋಲಗೇಟಿನ ಸಮೀಪ ಬಾವಿ ಅಗಿಸುವುದು ಅಗತ್ಯವಾಗಿರುತ್ತದೆ. ಇದರ ನಂತರ ದರ್ಬೆ ಸುಬ್ರಮಣ್ಯದ ಟೋಲ್‌ಗೇಟಿನ ಸಮೀಪವಿರುವ ಬಾವಿಯನ್ನು ದುರುಸ್ತಿ ಮಾಡಿಸಿದರೆ ಸಾಕೆಂತ ತೋರುತ್ತದೆ

ಲೋಕಲ್‌ಬೋರ್ಡಿನವರು ಈ ಸೂಚನೆಗಳಿಗೆ ತಕ್ಕ ನಿಗಾ ಕೊಡುವರಾಗಿ ನಂಬಿರುವ

ಪುತ್ತೂರು ತಾ. 25—11 14. **ನಿವಾಸಿಕ.**

ಅಯ್ಯಾ ಪತ್ರಕರ್ತರೇ,

ತಮ್ಮ ಪತ್ರದಲ್ಲಿ ಈ ಕೆಳಗಿನ ಸಮಾಚಾರಗಳಿಗೆ ತುಸ ಎಡೆಕೊಡಬೇಕಾಗಿ ಪ್ರಾರ್ಥಿಸುತ್ತೇನೆ

ಮಂಗಳೂರು ಮೊಗೇಯರರ ಶ್ರೀ ಜ್ಞಾನೋದಯ ಸಮಾಜದವರು ರವಾನಿಸಿದ ಇವರ ನಾಲ್ಕನೇ ವಾರ್ಷಿಕ ವರದಿಯನ್ನು ಓದಿನೋಡಿ ತುಂಬಾ ಸಂತೋಷಪಟ್ಟೆನು. ಇದರಲ್ಲಿ ಇವರು ಸ್ವಜಾತಿಯ ಉಚ್ಛ್ರಾಯ ಸ್ಥಿತಿಯ ಕುರಿತು ಬರೆಯುವಾಗ್ಗೆ ಅದಕ್ಕೆಲ್ಲಾ ಇವರೇ ಕಾರಣರೆಂದು ಯಾರುತಾನೆ ಹೇಳಲಾರರು?

ಆದರೆ ಇವರು ತಮ್ಮ ವರದಿಯಲ್ಲಿ ಸೂಚಿಸಿರುವ ಮೇರೆಗೆ ಬೊಕ್ಕಪಟ್ಣಕ್ಕೆ ಹೋಗಿ ಮದ್ಯಪಾನ ನಿಷೇಧಕ ಸಭೆಯನ್ನು ಜರುಗಿಸುವ ಕ್ರಮವನ್ನು ಸಾಧ್ಯವಿದ್ದಷ್ಟು ಕೈಕೊಂಡೆವೆಂಬುದು ನಂಬತಕ್ಕದ್ದಾಗಿದ್ದರೂ ಬೊಕ್ಕಪಟ್ಣದಲ್ಲಿ ತಮ್ಮದಕ್ಕಿಂತಲೂ ಮೊದಲೆ ಮದ್ಯಪಾನ ನಿಷೇಧಕ ಸಂಘದಿಂದ ಮದ್ಯಪಾನ ನಿಷೇಧಕ ಚಲನೆಯು ತೊಡಗಿಯದೆ ಎಂದೂ, ಪ್ರಕೃತ ಅಲ್ಲಿಯ ನಿಷೇಧಕರ ಸಂಖ್ಯೆಯು ತಮ್ಮ ಊರಲ್ಲಿರುವುದಕ್ಕಿಂತಲೂ ಮಿಗಿಲಾಗಿರುತ್ತದೆ. ಅಂದರೆ ಬಾಲ್ಯರಿಂದ ತರುಣರ ವರೆಗೆ ಮತ್ತು ಹಲವು ವೃದ್ಧರು ಕೂಡಾ ಸಿಶಾರಾಕ್ಷಸನನ್ನು ತಮ್ಮ ನೆರೆಮನೆಯ ವೈರಿಯಂತೆ ಭಾವಿಸುತ್ತಾರೆಂಬುದನ್ನೂ ಅರಿತು, ಅಂತಹ ಬೊಕ್ಕಪಟ್ಣಕ್ಕೆ ಹೋಗುವುದಕ್ಕಿಂತ ನಿಷೇಧಕ ಚಲನೆ ಇಲ್ಲದ ಇತರ ಸ್ಥಳಗಳಿಗೆ ಹೋಗಿ ಅಲ್ಲಿ ತಮ್ಮ ಕಾರ್ಯಸಾಧನೆಗಳನ್ನು ತೋರ್ಪಡಿಸಿ ಆ ಬಗ್ಗೆ ತಮ್ಮ ವರದಿಯಲ್ಲಿ ಬರೆದು ಅದರ ಪಟಗಳನ್ನು ಇನ್ನೂ ಹೆಚ್ಚಿಸಬಹುದಿತ್ತು. ಅಥವಾ ಹ್ಯೊಗೆ ಬಜಾರದಲ್ಲಿಯೂ ಸಿಶಾರಾಕ್ಷಸನ ಪಾಲಾಗುವ ಹೆಜ್ಜಾದವರನ್ನು ತಮ್ಮ ಕಡೆಗೆ ತಿರುಗಿಸಲು ತಮ್ಮಿಂದಾದಷ್ಟು ಮಟ್ಟಿಗೆ ಪ್ರಯತ್ನಿಸುತ್ತಿದ್ದರೆ ಎಷ್ಟು ಸ್ತುತ್ಯವಾಗುತ್ತಿತ್ತು? ಹಾಗೆ ಮಾಡದೆ "ತನ್ನಲ್ಲಿರುವ ಕುಂಬಳವ ಕಾಣದವನು ನೆರೆಮನೆಯ ಸಾಸುವೆ ಕಂಡಿದ್ದನಂತೆ" ಎಂಬ ಹಾಗೆ ಬೊಕ್ಕಪಟ್ಣಕ್ಕೇನೇ ಹೋಗಬೇಕೆಂದಿರುವ ಇರಾದೆ ಏನೋ?

ವರದಿಯ [illegible]ನೇ ಪುಟದ [illegible]ನೇ ಪಂಕ್ತಿಯಲ್ಲಿ ತೋರುವ ಪ್ರಕಾರ ಅವರೊಡನೆ ಮದ್ಯಪಾನ ನಿಷೇಧಕ ವ್ರತವನ್ನು ಕೈಕೊಳ್ಳುವರೆ ಬೊಕ್ಕಪಟ್ಣದಿಂದ ಮೂವರೇ ಬಂದಿದ್ದರೆಂಬ ಮಾತ್ರದಿಂದ ವಾಚಕರು ಅಲ್ಲಿ ನಡೆಯುವ ಮದ್ಯಪಾನ ನಿಷೇಧಕ ಪರಿಣಾಮವನ್ನು ಊಹಿಸಬಾರದು

ವರದಿಯ ೧೦ನೇ ಪುಟದಲ್ಲಿ ಕಾಣುವ ಶ್ರೀ ಜ್ಞಾನೋದಯ ಸಮಾಜದವರು ಕೈಕೊಂಡ ಸಾಮಾಜಿಕ ರೂಢಿಗಳ ಸುಧಾರಣೆಯ ಕಡೆಗೆ ತುಸ ಗಮನ ಕೊಡಬೇಕಾಗಿ ಬೇಡುತ್ತೇನೆ. ಬಹು ಪೂರ್ವ ಕಾಲದಿಂದಲೂ ನಮ್ಮ ಸ್ತ್ರೀ ಪುರುಷರ ವಿವಾಹ ಕಾಲದಲ್ಲಿ ವಸ್ತ್ರ ಶಿವಾಯಿ ಬೇರೆ ಯಾವ ತರದ ವರದಕ್ಷಿಣೆಯೂ ಇದ್ದಿಲ್ಲವಂತೆ. ಇದು ಆಗಿರಬಹುದು. "ಆದರೆ ಈಗಲೀಗ ಅಲ್ಲಲ್ಲಿ ಕೆಲವರು ವಿವಾಹ ಸಮಯ ಮದುಮಗನಿಗೆ ಪವನುಗಳೂ ಆಭರಣಗಳೂ ಉಚಿತವಾಗಿ ಕೊಡುವ ದುಷ್ಟ ಪದ್ಧತಿಯನ್ನು ಕೈಕೊಳ್ಳುವುದನ್ನು ಕಂಡು ನಾವು ಬಹಳ ದುಃಖ ಪಡುತ್ತೇವೆ, ಎಂತ ಇವರ ವರದಿಯಲ್ಲಿ ಕಾಣಿಸಿದುದನ್ನು ನೋಡಿದರೆ ಮತ್ಸರವೆಂಬುದು ಲೋಕದಲ್ಲಿ ಬೇರೆಯಿಲ್ಲ ಎಂತ ತಿಳಿಯಬೇಕಾಗುತ್ತದೆ. ಇವರ ದುಃಖ ಭಾವನೆಯನ್ನು ಇದರಲ್ಲಿಯೂ ಬರೆದರೆ ಯಾರಿಗೂ ದುಃಖ ಬಂದೀತು, ನನಗೂ ಹಾಗೆ ಆಯಿತು ಎಂಬುದಕ್ಕೆ ಸಂಶಯವಿಲ್ಲ. ಉಚಿತವೇ ಬರಿ ಎಂತ ಆದರೆ "ಓದುವುದು ಶಾಸ್ತ್ರ ಇಕ್ಕುವುದು ಗಾಳ, ಎಂಬ ಗಾದೆಗೆ ಸರಿಯಾಗಿ ಸದರಿ ಸಮಾಜದ ಕಾರ್ಯನಿರ್ವಾಹಕ ಸಭೆಯ ಮುಂದಾಳುಗಳೂ, ಸದಸ್ಯರೂ ವಿವಾಹ ಕಾಲದಲ್ಲಿ ವಸ್ತ್ರ ಶಿವಾಯಿ ಪವನುಗಳನ್ನೂ, ಆಭರಣಗಳನ್ನೂ, ದ್ರವ್ಯವನ್ನೂ ಕೊಟ್ಟು ಬದಿಯೆಂಬ ರಾಕ್ಷಸನಿಂದ ಸೆರೆಹಿಡಿಯಲ್ಪಟ್ಟು ಆತನಿಗೆ ಗುಲಾಮರಾದದ್ದು ಕೊಂಚಕಾಲದ ಮೊದಲೇ. ಆದ್ದರಿಂದ ಅದು ಥಟ್ಟನೆ ನನ್ನ ಸ್ಮರಣೆಗೆ ಬಂದು ಸಮಾಧಾನದಿಂದ ಆ ಬಗ್ಗೆಯ ನನ್ನ ದುಃಖವನ್ನು ಶಮನ ಮಾಡಿಕೊಂಡೆನು. ಇದು ನನ್ನ [illegible] ಸರಿ.

ಯುದ್ಧ ಸಮಾಚಾರವು.

ತಾ. 20ನೇ ನವಂಬರ.

ಬುಧವಾರ ಪ್ರಾತಃಕಾಲ ಮೆನಿನ್—ಎಪ್ರೆ ದಾರಿಯಲ್ಲಿ ಶತ್ರುಗಳು ಬ್ರಿಟಿಷರ ಕಂದಕಗಳ ಮೇಲೆ ಗುಂಡು ಹಾರಿಸಿದರು. ಇಷ್ಟು ಕಠಿಣವಾಗಿ ಹಿಂದೆ ಶತ್ರುಗಳು ಗುಂಡು ಹಾರಿಸಿದ್ದು ಬ್ರಿಟಿಷರ ಅನುಭವಕ್ಕೆ ಬಂದದ್ದಿಲ್ಲ. ಕೆಲವು ತಾಸಿನ ನಂತರ ಪ್ರುಶ್ಯನರ ಕಾವಲು ಸೇನೆಯು ಮುಂದರಿದು ಎಪ್ರೆಯನ್ನು ಸ್ವಾಧೀನ ಮಾಡಿಕೊಳ್ಳಲು ಭಗೀರಥ ಪ್ರಯತ್ನ ಮಾಡಿದರು. ಶತ್ರುಗಳು ಬ್ರಿಟಿಷರ ಸೇನಾ ನೆಲೆಗಳನ್ನು ದಾಟಲು ಕ್ರಮ ಪ್ರಕಾರ ಮುಂದರಿದರು. ಬ್ರಿಟಿಷರು ತೋಫುಗಳಿಂದಲೂ ಕ್ವಿಕ್‌ಫಯರ್ ಮತ್ತು ರೈಫಲ್ ಕೋವಿಗಳಿಂದಲೂ ಗುಂಡು ಹಾರಿಸಿದರು. ಪ್ರುಶ್ಯನರಲ್ಲಿ ವಿಶೇಷ ಪ್ರಾಣಾಪಾಯ ಉಂಟಾಯಿತು. ಆದರೂ ಅವರು ಮೂರು ಕಡೆಗಳಲ್ಲಿ ಬ್ರಿಟಿಷರ ಕಂದಕಗಳ ಹಿಂದೆ ಇರುವ ಕಾಡಿಗೆ ನುಗ್ಗಿದರು. ಬ್ರಿಟಿಷರು ಪುನಃ ಅವರ ಮೇಲೆ ಬಿದ್ದು ಅವರನ್ನು ಹಿಂದಕ್ಕೆ ಅಟ್ಟಿದರು. ಅಡವಿಯಲ್ಲಿ ಕಠಿಣ ಕದನವಾಯಿತು. ಶತ್ರುಗಳಿಗೆ ಮುಂದರಿಯಲಿಕ್ಕೆ ಯಾ ಹಿಂದೆ ಸರಿಯಲಿಕ್ಕೆ ಮಾರ್ಗ ತೋರದೆ ಹೆಚ್ಚು ಕಡಿಮೆ ಎಲ್ಲರೂ ಹತರಾದರು. ಕೆಲವರು ಸೆರೆ ಹಿಡಿಯಲ್ಪಟ್ಟರು ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುವರು.

ಫ್ರೆಂಚ ಸೈನಿಕರು ವೈಸರ್ ನದಿಯನ್ನು ದಾಟಿ ಶತ್ರುಗಳೊಡನೆ ಸಣ್ಣ ಕಾಳಗ ಮಾಡಿ ಶತ್ರುಗಳ ಒಂದು ಸೇನೆಯು ಹುಟ್ಟಳಿಸಿಬಿಟ್ಟರು.

ಪ್ರಿನ್ಸ್ ಆಫ್ ವೇಲ್ಸರವರು ಫ್ರಾನ್ಸಿಗೆ ಹೋಗಿ ಬುಲೋನಿನಲ್ಲಿ ಇಳಿದು ಅಲ್ಲಿದ್ದ ಘಾಯ ಒಡೆದ ಸೈನಿಕರೊಡನೆ ಸಂಭಾಷಣೆ ನಡಿಸಿದರು.

ಪೂರ್ವ ರಣರಂಗ:—ಕ್ರಾಕೊ ಪಟ್ಟಣದ ಒಂದು ಭಾಗವು ಸುಡುತ್ತಿದೆ. ಪಟ್ಟಣವು ಬೇಗನೇ ರುಶ್ಯನರಿಗೆ ವಶವಾದೀತು. ನಿವಾಸಿಕರು ಪಟ್ಟಣ ಬಿಟ್ಟು ಓಡುತ್ತಿದ್ದಾರೆ.

ಪೂರ್ವಪ್ರುಶ್ಯದಲ್ಲಿ ಸ್ಟಾಲ್‌ಪೋನೆನ್, ಪೋಸ್ಸೆಸ್ಸರ್ನ್ ಎಂಬಲ್ಲಿ ಜರ್ಮನರು ಕದನಕ್ಕೆ ನಿಂತು ಹಿಮ್ಮೆಟ್ಟಿದರು. ಸೈಡನ್‌ಬರ್ಗ ಮತ್ತು ಸೊಲ್ಡೊವಿನಲ್ಲಿ ಕದನ ನಡೆಯುತ್ತಿದೆ. ಲೈಸ್ಕೊವಿನಲ್ಲಿ ೧೦೦೦ ಜರ್ಮನರು ಸೆರೆಸಿಕ್ಕಿರುವರು. ಗಂಬಿನೆನ್-ಎಂಗರ್‌ಬರ್ಗಿನಲ್ಲಿ ಜರ್ಮನರು ಹಿಂದೆ ಬಿದ್ದಿರುವರು. ವಿಸ್ತುಲ-ವಾರ್ಟ ನದಿ ಪ್ರಾಂತ್ಯದಲ್ಲಿ ಕಠಿಣ ಕಾಳಗ ನಡೆಯುವ ಸಂಭವವಿದೆ.

ಮೆಸ್ಸೂರಿಯನ್ ಸರೋವರ ಪ್ರಾಂತ್ಯದಲ್ಲಿ ಕದನ ನಡೆಯುತ್ತಿದೆ. ಸರೋವರದಲ್ಲಿ ಈಗ ನೀರು ಗಡ್ಡೆಕಟ್ಟಿರಲು ಸಾಕು.

ತುರ್ಕಿ:—ಅರ್ಮೀನಿಯದಲ್ಲಿ ತುರ್ಕರು ಎರ್ಜರೆಮ್, ಎಜುವೆರನ್, ಖಾಮೂರು ಎಂಬ ಮೂರು ಸ್ಥಳಗಳಲ್ಲಿ ಸೋತು ಹೋಗಿರುವರು.

~~ಜಪಾನ್—ಜಪಾನರು ಸಿಂಗ್‌ಟಾವನ್ನು~~ ಬಹು ವಿಜೃಂಭಣೆಯಿಂದ ಪ್ರವೇಶಿಸಿ ಯುದ್ಧದಲ್ಲಿ ಮೃತರಾದವರ ಜ್ಞಾಪಕಾರ್ಥವಾಗಿ ದೇವಾರಾಧನೆ ನಡಿಸಿದರು.

ತಾ. 21ನೇ ನವಂಬರ.

ಜರ್ಮನರು ಎಪ್ರೆಯ ಪೂರ್ವ ಮತ್ತು ದಕ್ಷಿಣದಲ್ಲಿ ಕದನಕ್ಕೆ ಪ್ರಾರಂಭಿಸಿರುವರು. ಆದರೆ ಸೇನಾನೆಲೆಯು ಬದಲಾವಣೆಯಾಗಲಿಲ್ಲ. ಕಳೆದ ೩ ದಿವಸಗಳಲ್ಲಿ ಸಂಯುಕ್ತ ಸೇನೆಗಳಿಗೆ ಜಯವಾಗುತ್ತಿದೆ.

ಅನೇಕಟ್ಟುಗಳನ್ನು ಕಠಿಣ ಪ್ರಯತ್ನ [illegible] ಜರ್ಮನರು ಡಿಕ್ಸ್‌ಮ್ಯೂಡ [illegible]

ರುವರು. ತ್ರಿಕೋಣಾಕಾರದಲ್ಲಿ ಡಿಕ್ಸ್‌ಮ್ಯೂಡು-ಒಸ್ಟ್‌ಕೆರ್ಕೆ-ಕಸ್‌ಕೆರ್ಕೆ ಎಂಬ ಸ್ಥಳಗಳು ನೀರಿನಿಂದ ತುಂಬಿರುವವು. ಶತ್ರುಗಳು ಮುಂದರಿದರೆ ವಿಶೇಷ ನಷ್ಟ ಪಡುವದರಲ್ಲಿ ಸಂದೇಹವಿಲ್ಲ. ಅನೇಕಟ್ಟನ್ನು ಕಡಿದಾಕ್ಷಣ ನೀರು ತುಂಬಿದ ಸ್ಥಳಗಳಲ್ಲಿದ್ದ ಶತ್ರುಗಳಿಗೆ ಹಿಂದೆ ಬರಲು ಆಗದ್ದರಿಂದ ನೂರಾರು ಮಂದಿ ನೀರಾಹಾರವಿಲ್ಲದೆ ಸತ್ತುಹೋಗಿರುವರು.

ಪ್ರಿನ್ಸ್ ಆಫ್ ವೇಲ್ಸರು ರಣರಂಗದಲ್ಲಿ ಸರ್ ಜೋನ್ ಫ್ರೆಂಚರ ಮೈಗಾವಲಿನ ಭಟರಾಗಿ ಅಡಿಕೆಂಗ್ ನೇಮಿಸಲ್ಪಟ್ಟಿರುವರು.

ಹಿಂದೂಸ್ಥಾನದಿಂದ ಪುನಃ ರಣರಂಗಕ್ಕೆ ಹೋದ ಭಾರತೀಯ ಸೇನೆಯ ಹಾ ೭ನಲ್ಲಿ ಮಾರ್ಸೆಲಿಸಿಗೆ ಸುರಕ್ಷಿತವಾಗಿ ತಲುಪಿತು.

ಬಾಟಿಲ್ ವ ಂಡೆಬ್ ಜಲಸಂಧಿಯನ್ನು ಮುಚ್ಚಿಬಿಡುವ ಬಗ್ಗೆ ತುರ್ಕರು ಶೇಖ್‌ಸೆಯ್ಯದಲ್ಲಿ ಕೋಟೆಗಳನ್ನು ಬಲಕಾಯಿಸ ನೋಡಿದ್ದರಿಂದಲೂ ಪೆರಿಮಿನ ತೀರವನ್ನು ಕಸದುಬಿಡಲು ಪ್ರಯತ್ನಿಸಿದ್ದರಿಂದಲೂ ಬ್ರಿಟಿಷರು ಶೇಖ್‌ಸೆಯ್ಯಗೆ ತಾ ೧೦ರಲ್ಲಿ ತಲಪಿ ತುರ್ಕರ ಮೇಲ್ಬಾಯಿದ ಅವರನ್ನು ಸೋಲಿಸಿದರ ಶತ್ರುಗಳ ಓಡಿ ಹೋದರು ೬ ಮಂದಿ ಸತ್ತರು ಅನೇಕರು ಘಾಯವೊಡೆದರು. ಮತ್ತು ಸೆರೆ ಬಿದ್ದರು ಬ್ರಿಟಿಷ್ ಸೇನೆಯು ಕೋಟೆಗಳನ್ನು ಹಿಡಿಯಿತು, ತುರ್ಕರ ಹಲವು ತೋಫುಗಳು ಬ್ರಿಟಿಷರಿಗೆ ದೊರಕಿದವು.

ಅರಬಿಯರ ಗ್ರಾಮಗಳಿಗೆ ಬ್ರಿಟಿಷರ ಏನೂ ಹಾನಿಮಾಡಲಿಲ್ಲ. ಇಲ್ಲಿ ನಡೆದ ಕದನದಲ್ಲಿ ಬ್ರಿಟಿಷರಲ್ಲಿ ೪ ಹಿಂದೀ ಸೈನಿಕರೂ ಒಬ್ಬ ಬ್ರಿಟಿಷ ಆಫೀಸರನೂ ಮೃತರಾದರು. ೧೫ ಭಾರತೀಯ ಸೈನಿಕರು ಘಾಯವೊಡೆದರು.

ಹಾಂಬರ್ಗ್ ಎಂಬಲ್ಲಿ ಸಿಕ್ಕಿಬಿದ್ದ ಜರ್ಮನರ "ಪ್ರೆಸೆನ್" ಎಂಬ ಯುದ್ಧ ಹಡಗದಲ್ಲಿ ಗುಪ್ತವಾದ ತಂತೀ ಇಲ್ಲದ ಟೆಲಿಗ್ರಾಮುಯಂತ್ರವು ದೊರಕಿರುವದು. ಹಡಗದ ಸೇನಾಧಿಪತಿ ಮತ್ತು ಈ ಯಂತ್ರದ ಆಫೀಸರನನ್ನು ಕೈದು ಮಾಡಿರುವರು.

ಎವೆನ್ಸ್ ನಾವೆಯ ಹತರೀಶರಲ್ಲಿ ೧೫೦ ಮಂದಿ ಸಿ ಗಾಪುರಕ್ಕೆ ತರಲ್ಪಟ್ಟಿರುವರು.

ಜೋರ್ಜ ಸಾರ್ವಭೌಮರವರು ಚಕ್ರವರ್ತಿನಿಯವರ ಸಹಿತ ನ್ಯೂಫೋರೆಸ್ಟ್ ಆಸ್ಪತ್ರಿಯಲ್ಲಿ ಶೈಕೋಪಚಾರ ಹೊಂದುತ್ತಿರುವ ಭಾರತೀಯ ಸೈನಿಕರನ್ನು ನೋಡಲು ಹೋಗಿ, ಪ್ರತಿ ಸೈನಿಕನ ಕೂಡ ಹಿಂದೂಸ್ಥಾನಿಯಲ್ಲಿ ಮಾತಾಡಿದರು. ಚಕ್ರವರ್ತಿನಿಯವರು "ನಿಮಗೇನಾದರೂ ಬೇಕಾದರೆ ಹೇಳಿರಿ, ನಾನು ಕಳುಹಿಸಿ ಕೊಡುವೆನು" ಎಂದು ಹೇಳಿದ್ದರಿಂದ ಕೆಲವರು ಕಂಬಳಿ ವಸ್ತ್ರಗಳನ್ನು ಕೇಳಿಕೊಂಡರು. ಚಕ್ರವರ್ತಿನಿಯವರು ಅರಮನೆಯಿಂದ ಕಂಬಳಿ ವಸ್ತ್ರಗಳನ್ನು ಕಳುಹಿಸಿಕೊಟ್ಟಿರುವರು. ಆಸ್ಪತ್ರಿಯಿಂದ ಹೊರಟು ಹೋಗುವ ಮೊದಲು ಪೇಟೆಯ ಹೊರಗಿದ್ದ ಸ್ವಲ್ಪ ಸ್ವಲ್ಪ ಘಾಯವೊಡೆದ ನೂರಾರು ಮಂದಿ ಭಾರತೀಯ ಸೈನಿಕರನ್ನು ನೋಡಿದರು. ಅವರು "ಚಕ್ರವರ್ತಿಯರಿಗೆ ಜಯವಾಗಲಿ" ಎಂದು ಆರ್ಭಟಿಸಿದರು.

ಫ್ರಾನ್ಸಿನಲ್ಲಿ ಮರಣ ಹೊಂದಿದ ರೋಬರ್ಟ ಪ್ರಭುಗಳವರ ಶವವನ್ನು ಬ್ರಿಟಿಷ, ಫ್ರೆಂಚ ಮತ್ತು ಭಾರತೀಯ ಸೈನಿಕರು ಬಹು ವಿಜೃಂಭಣೆಯಿಂದ ಲಂಡನಿಗೆ ಕಳುಹಿಸಿಕೊಟ್ಟರು. ಮಹಾರಾಜ ಸರ್ ಪ್ರತಾಪ ಸಿಂಘ್, ಕಿಸ್ಸನಗರದ ಮಹಾರಾಜರು ಮತ್ತು ಇತರ ಭಾರತೀಯ ಆಫೀಸರರು ಶವದ ಸಂಗಾತ ಇಂಗ್ಲಾಂಡಿಗೆ ಹೋಗಿರುವರು.

ತಾ 22ನೇ ನವಂಬರ.

ಎಪ್ರೆಯ ದಕ್ಷಿಣದಲ್ಲಿ ಜರ್ಮನರು ಪುನಃ ಸೋಲಿಸಲ್ಪಟ್ಟು ಹಿಮ್ಮೆಟ್ಟಿರುವರು. ಬ್ರಿಟಿಷರು ತಮ್ಮ ನೆಲೆಯನ್ನು ಕಾಪಾಡಿಕೊಂಡಿರುವರು. ಹ್ಯಾಮ್ಸಿಗೆ ಜರ್ಮನರು ಪುನಃ ಗುಂಡು ಹಾರಿಸಿದರು. ಉತ್ತರ ಕಡಲಿನಿಂದ ಲೈಸ್ ನದಿಯ ವರೆಗೆ, ಸ್ವಾಫೋರ್ಟಿನ ಪೂರ್ವ ಮತ್ತು ಎಪ್ರೆಯ ದಕ್ಷಿಣದಲ್ಲಿ ತೋಫುಗಳ ಕದನವು ನಡೆಯುತ್ತಿದೆ. ಬಿಕ್ಸ್‌ಕೂಟೆ ಸಮೀಪದ ಅರಣ್ಯದಲ್ಲಿ ೩ ದಿವಸ ಸಣ್ಣ ಕಾಳಗ ನಡೆದು ಶತ್ರುಗಳು ಸೋತುಹೋದರು. ಎಪ್ರೆಯ ದಕ್ಷಿಣದಲ್ಲಿ ಕದನಕ್ಕೆ ನಿಂತ ಜರ್ಮನರು ಹಿಮ್ಮೆಟ್ಟಿದರು. ಎರಾಸ್ ಮತ್ತು [illegible]ಯಲ್ಲಿ ವಿಶೇಷ ಕದನ ನಡೆಯಲಿಲ್ಲ. [illegible] ಅರ್ಗೋನ್ನೆಯ ವರೆಗೆ ಬದಲಾವಣೆಯಾಗಲಿಲ್ಲ ಎಂತ ಫ್ರೆಂಚ [illegible]ರದವರು ಪ್ರಕಟಿಸಿರುವರು.

ರಣರಂಗದಲ್ಲಿ ಭಾರತೀಯ ಸೈನಿಕರು ಮಾಡುವ ಕೆಲಸಗಳ ಫಲಿತಾಂಶವನ್ನು ಆರತು ವೈಸರಾಯ ಪ್ರಭುಗಳವರಿಗೆ ತಿಳಿಸುವ ಬಗ್ಗೆ ರಣರಂಗಕ್ಕೆ ೩ ಆಫೀಸರರು ಕಳುಹಿಸಲ್ಪಟ್ಟಿರುವರು. ಸರಕಾರದವರು ಬಂದ ಈ ವಾರ್ತೆಗಳನ್ನು ಪ್ರಚುರ ಪಡಿಸುವರೆ ಆದಷ್ಟು ಪ್ರಯತ್ನಪಡುವರು ಎಂತ ಕ್ರೂಪ್ರಭುಗಳವರು ಹೇಳಿರುವರು.

ಮಾರ್ಸೆಲಿಸಿಗೆ ತಲಪಿದ ಭಾರತೀಯ ಸೈನಿಕರು ಮುಂಬಾಯಿಂದ ಒಕ್ಟೋಬರ ತಿಂಗಳಿಗೆ ಹೊರಟಂಥವರಾಗಿರುವರು. ಹೆಚ್ಚಿನ ಭಾರತೀಯ ಸೇನೆಯು ಪುನಃ ಬೇಗನೇ ಫ್ರಾನ್ಸಿಗೆ ತಲಪಲಿಕ್ಕಿರುವದು.

ತಾ ೧೯ರಲ್ಲಿ ರೋಬರ್ಟ ಪ್ರಭುಗಳವರ ಶವಸಂಸ್ಕಾರವು ಬಹು ವಿಜೃಂಭಣೆಯಿಂದ ಜರಗಿತು. ಜೋರ್ಜ ಚಕ್ರವರ್ತಿಯವರೂ ಭಾರತೀಯ ರಾಜರುಗಳೂ ಶವಸಂಸ್ಕಾರಕ್ಕೆ ಹಾಜರಿದ್ದರು. ಸಾವಿರಾರು ಮಂದಿ ಶವಸಂಸ್ಕಾರಕ್ಕೆ ಹೋಗಿದ್ದರು.

ಪೂರ್ವ ಪ್ರುಶ್ಯದಲ್ಲಿ ರುಶ್ಯನರು ಮುಂದರಿಯುತ್ತಲಿದ್ದಾರೆ. ಗುಂಬಿನೆನ್ ಎಂಜರ್‌ಬರ್ಗಿನ ಪ್ರಾಂತ್ಯದಲ್ಲಿ ಕಾಳಗ ನಡೆಯುತ್ತಿದೆ. ಮೆಸ್ಸೂರಿಯನ್ ಸರೋವರದ ರಣರಂಗದಲ್ಲಿರುವ ರಶ್ಯನ ಸೇನೆಯ ಎದುರಿಗೆ ಶತ್ರುಗಳು ಸಿಕ್ಕಿಬಿದ್ದಂತೆ ಇರುವರು.

ಗೆಲಿಸಿಯದಲ್ಲಿ ರುಶ್ಯನರು ಸೆಜೆಂಟ್ಸೋವ—ಕ್ರಾಕೋದ ರಣರಂಗದಲ್ಲಿ ಶತ್ರುಗಳ ದೊಡ್ಡ ಸೇನೆಯನ್ನು ಹತಬಡಿದಿರುವರು. ರಶ್ಯನರ ಕರ್ಪೆಥೇನಿಯದ ದಾರಿಗಳನ್ನು ಸ್ವಾಧೀನಮಾಡಿಕೊಂಡಿರುವರು.

ಪಶ್ಚಿಮ ಪೋಲೆಂಡಿನಲ್ಲಿ ಕದನ ನಡೆಯುತ್ತಿದೆ. ಜರ್ಮನರ ಥೋರ್ನಿನ ಸಮೀಪ ತಮ್ಮ ಸೇನೆಯನ್ನು ಒಟ್ಟು ಹಾಕಿ ಆಸ್ಟ್ರಿಯನರನ್ನು ಕ್ರಾಕೋದ ಸಮೀಪ ರುಶ್ಯನರನ್ನು ಎದುರಿಸುವರೆ ಬಿಟ್ಟಿರುವರು. ಪಶ್ಚಿಮ ಪೋಲೆಂಡಿನಲ್ಲಿ ನಡೆಯುವ ಯುದ್ಧದಲ್ಲಿ ರುಶ್ಯನರಿಗೆ ಜಯವಾಗುವದೆಂದೂ ಇಡೀ ಯುದ್ಧದ ಜಯಾಪಜಯಗಳು ಇಲ್ಲಿ ಗೊತ್ತಾಗುವದೆಂದೂ ರುಶ್ಯನರು ನಂಬಿರುವರು.

ತುರ್ಕಿ:—ಕನ್‌ಸ್ಟಂಟಿನೋಪಲಿನಲ್ಲಿ ಜಪಾನ್ ರಾಯಭಾರಿಯು ಪಾಸ್‌ಪೋರ್ಟು ಕೇಳಿರುವರು.

ರುಶ್ಯನರು ತುರ್ಕರಿಗೆ ಸೇರಿದ ಟ್ರೆಬಿಜೊಂಡಿಗೆ ಗುಂಡು ಹಾರಿಸಿ ಅಲ್ಲಿಯ ಕೋಟೆಯನ್ನು ಕೆಡಿಸಿರುವರು.

ರುಶ್ಯನರ 'ಬ್ಲೆಕ್‌ಸಿ' ಯುದ್ಧನಾವೆಗಳು ತುರ್ಕರ 'ಬ್ರೆಸ್‌ಲೋ' ಮತ್ತು 'ಗೊಯಿಬೆನ್' ಯುದ್ಧನಾವೆಗಳೊಡನೆ ಕದನಮಾಡಿ "ಗೊಯಿಬೆನ್"ಗೆ ಗುಂಡುಹಾರಿಸಿರುವವು. "ಗೊಯಿಬೆನ್" ನಾವೆಗೆ ಗುಂಡು ತಗಲಿ, ಕೆಲವು ಸಿಡಿತಗಳಾಗಿರುವವು. ರುಶ್ಯನರಲ್ಲಿ ೩೦ ಮಂದಿ ಹತರಾಗಿರುವರು. ಮಂಜು ಬಿದ್ದುದರಿಂದ "ಗೊಯಿಬೆನ್" ಮತ್ತು "ಬ್ರೆಸ್‌ಲೋ" ನಾವೆಗಳು ಮಂಜಿನಲ್ಲಿ ತಪ್ಪಿಕೊಂಡವು.

ಯುನೈಟೆಡ್ ಸ್ಟೇಟ್ ಸರಕಾರಕ್ಕೆ ಸೇರಿದ "ಟೆನ್ನೆಸಿ" ಎಂಬ ನಾವೆಯು ಸ್ಮಿರ್ನದಲ್ಲಿರುವ ವಿದೇಶಿಯರನ್ನು ರಕ್ಷಿಸುವ ಬಗ್ಗೆ ಹೋಗುತ್ತಿರುವಾಗ ತುರ್ಕರು ಅದಕ್ಕೆ ಗುಂಡು ಹಾರಿಸಿರುವರು. ಈ ವಿಷಯ ಅಮೇರಿಕದವರು ತುರ್ಕಿ ಸರಕಾರದವರ ಕೂಡೆ ಉದಾಹರಣೆ ಕೇಳಿಕೊಂಡಿರುವರು.

ವಿಸ್ತುಲ ಮತ್ತು ವಾರ್ಟದಲ್ಲಿ ಜರ್ಮನರು ರುಶ್ಯನರ ಸೇನಾ ನೆಲೆಗಳನ್ನು ಮುರಿದು ಬಿಡಲು ಪ್ರಯತ್ನಿಸಿದರು. ಆದರೆ ಇಲ್ಲಿ ರುಶ್ಯನರಿಗೆನೇ ಜಯವಾಯಿತು. ರುಶ್ಯನರು [illegible] ಉತ್ತರ ಪಶ್ಚಿಮ ಪಾರ್ಶ್ವವನ್ನು ಸ್ವಾಧೀನ ಮಾಡಿಕೊಂಡು ಜರ್ಮನರ [illegible] ನೂರು ಮಂದಿ ಸೈನಿಕರನ್ನೂ ಯುದ್ಧ ಸಾಮಾಗ್ರಿಗಳನ್ನೂ ಸೆರೆಹಿಡಿದರು.

[illegible]

೪೪೦,೦೦೦ ಮಂದಿ ಹತರಾದರೆಂತ "ಟ್ಯಾಮ್ಸ್" ಕೊಪೆನ್‌ಹೇಗೆನ್ ಬಾತ್ಮಿದಾರರು ಹೇಳುವರು.

ಬಾಲ್ಕಾನ್:— ಸರ್ವಿಯರು ಬೆಲ್ಗ್ರೇಡ್ ಪಟ್ಟಣವನ್ನು ಬಿಟ್ಟು ಹೋಗಿರುವರೆಂತ ಸರ್ವಿಯ ಸರಕಾರದವರು ಪ್ರಕಟಿಸಿರುವರು.

ತುರ್ಕಿ:— ಬ್ರಿಟಿಷರು ಫಾವೊದಲ್ಲಿ ತುರ್ಕರ ಕೋಟೆಯನ್ನು ಹಿಡಿದ ನಂತರ ಸೆಟ್-ಎಲ್-ಅರಬ್ ನದಿಯ ಬಲ ದಡದಲ್ಲಿ ಸೇನೆಯನ್ನು ಇಳಿಸಿದರು. ತಾ. ೧೧ರಲ್ಲಿ ತುರ್ಕರು ಬ್ರಿಟಿಷ ಸೇನೆಯ ಮೇಲೆ ಬಿದ್ದು ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿದರು. ಈ ಕದನದಲ್ಲಿ ಬ್ರಿಟಿಷರಲ್ಲಿ ಒಬ್ಬ ಬ್ರಿಟಿಷ ಆಫೀಸರನು ಹತನಾದನು. ಒಬ್ಬ ಬ್ರಿಟಿಷ ಆಫೀಸರನೂ ಒಬ್ಬ ಹಿಂದೀ ಆಫೀಸರನೂ ೬ ಹಿಂದೀ ಸೈನಿಕರೂ ಘಾಯ ಒಡೆದರು. ತಾ. ೧೫ರಲ್ಲಿ ಬ್ರಿಟಿಷರು ಮುಂದರಿಯಲು ತೊಡಗಿದರು. ತುರ್ಕರು ಸಾಹಿಬಾನ್ ಎಂಬಲ್ಲಿದ್ದರು. ಇಲ್ಲಿ ಬ್ರಿಟಿಷರ ಯುದ್ಧ ಹಡಗದ ಸಹಾಯದಿಂದ ಕಠಿಣ ಕಾಳಗ ನಡೆದು, ತುರ್ಕರು ಬಹಳ ನಷ್ಟಹೊಂದಿ ಹಿಮ್ಮೆಟ್ಟಿದರು. ಅನೇಕ ತುರ್ಕ ಸೈನಿಕರು ಸೆರೆಬಿದ್ದರು, ೨ ಮೆಶಿನ್‌ಗನ್ ಫಿರಂಗಿಗಳು ಬ್ರಿಟಿಷರಿಗೆ ದೊರಕಿದವು. ತಾ. ೧೭ರಲ್ಲಿ ಬ್ರಿಟಿಷರು ಪುನಃ ಮುಂದರಿದರು. ಈಗ ತುರ್ಕರ ೪,೫೦೦ ಸೈನಿಕರೂ ೧೨ ಫಿರಂಗಿಗಳೂ ಬುಹಮ್ಮಾರ್ಇಯದ ಎದುರು ಕಡೆಯಲ್ಲಿರುವ ಜೈಸ್ ಎಂಬಲ್ಲಿರುವವು. ಬ್ರಿಟಿಷರು ಸಮತಟ್ಟಾದ ವಿಸ್ತಾರವಾದ ಮೈದಾನಿನಲ್ಲಿ ಮುಂದರಿದು, ಹಟದಿಂದ ಎದುರಾಗುವ ಶತ್ರುಗಳೊಡನೆ ಕಾದಾಡಬೇಕಾಗಿದ್ದರೂ ಶತ್ರುಗಳ ಕಂದಕಗಳನ್ನು ಹಿಡಿದು, ತುರ್ಕರನ್ನು ಹಿಂದಟ್ಟಿ ೨ ಫಿರಂಗಿಗಳನ್ನೂ, ಕೆಲವು ಸೈನಿಕರನ್ನೂ ಬಹಳ ಗುಂಡುಮದ್ದುಗಳನ್ನೂ ಕುದುರೆ ಇತ್ಯಾದಿಗಳನ್ನೂ ಹಿಡಿದಿರುವರು. ಬ್ರಿಟಿಷರಲ್ಲಿ ೩ ಆಫೀಸರರು ಹತರಾದರು, ೧೫ ಮಂದಿ ಘಾಯ ಒಡೆದರು, ಸೈನಿಕರಲ್ಲಿ ೩೫ ಮಂದಿ ಹತರಾದರು, ೩೦೦ ಮಂದಿ ಘಾಯ ಒಡೆದರು.

~~~~~

ತಾ. 24ನೇ ನವಂಬರ.

ಬೆಲ್ಜಿಯನ್ ಸರಹದ್ದಿನಿಂದ ಬ್ಯಾಸಿನ ವರೆಗಿನ ಯುದ್ಧಸ್ಥಿತಿಯು ಇದ್ದಕ್ಕಿದ್ದ ಹಾಗೆ ಇದೆ. ಐನೆಯಲ್ಲಿ ಸಂಯುಕ್ತ ಬಲದ ತೋಪು ಸೇನೆಯು ಶತ್ರುಗಳ ಕಂದಕಗಳನ್ನು ತೋಡದ ಹಾನಿ ತಡೆ ಕಟ್ಟಿರುವರು. ಆರ್ಗೋನ್ನೆಯಲ್ಲಿ ಸಂಯುಕ್ತ ಸೇನೆಗಳು ಶತ್ರುಗಳ ಕೆಲವು ಕಂದಕಗಳನ್ನು ಹಾರಿಸಿಬಿಟ್ಟಿರುವರು. ವೆರ್ಡನ್ ಮತ್ತು ಒಸ್ಟೆನಿನಲ್ಲಿ ಸಂಯುಕ್ತ ಸೇನೆಗಳು ಮುಂದರಿದು ಕೆಲವು ಸಾರಿ ಶತ್ರುಗಳ ಸೇಲಿನಳಿಗೆ ೩೦ ಮಿಟರ್ ದೂರದಲ್ಲಿ ಕಂದಕಗಳನ್ನು ಮಾಡಿಕೊಂಡಿರುವವು ಎಂತ ಪಾರಿಸಿನಿಂದ ವಾರ್ತೆ ಬಂದದೆ.

ಜರ್ಮನ್ ಪೂರ್ವ ಆಫ್ರೀಕವು ದೊಡ್ಡ ಸಂಸ್ಥಾನವಾಗಿದ್ದು ಅಲ್ಲಿರುವ ಜರ್ಮನರ ಸಂಖ್ಯೆಯೇ ೫೦೦೦—೬೦೦೦ ಆಗಿದೆ. ಅಲ್ಲಿರುವ ಜರ್ಮನರಿಗೆ ಲೋಕದ ಇತರ ಕಡೆಯಲ್ಲಿದ್ದ ಸೇನೆಯನ್ನು ಸೇರಲು ಬರಮಾಡಲ್ಪಟ್ಟ ಇತರ ಜರ್ಮನರೂ ಕೆಲವು ನಾವಾ ಸೇನೆಯೂ ಆಯುಧ ಸಾಹಿತ್ಯಗಳ ಸಹಿತ ಬಂದು ಕೂಡಿರುವದು. ಬ್ರಿಟಿಷ ಪೂರ್ವ ಆಫ್ರೀಕದಲ್ಲಿ ಅಷ್ಟು ದೊಡ್ಡ ಜನಸಂಖ್ಯೆಯಾಗಲೀ ಅಷ್ಟು ರಾಶಿ ಸೈನಿಕರಾಗಲೀ ಇರುವದಿಲ್ಲ. ಜರ್ಮನ್ ಪೂರ್ವ ಆಫ್ರೀಕದಲ್ಲಿ ದೇಶೀಯ ಕಾಲಾಳು ಸೇನೆಯು ಮತ್ತು ಪೋಲಿಸಿನವರ ಸಂಖ್ಯೆಯು ೨೦೦೦ ಆಗಿರುವದು. ಬ್ರಿಟಿಷ ಪೂರ್ವ ಆಫ್ರೀಕದಲ್ಲಿ ದೇಶಿಯ ಪೋಲಿಸರೂ ಸಮರ್ಥರಾದ ಪೂರ್ವ ಆಫ್ರೀಕ ರೈಫಲ್ ಸೇನೆಯೂ ಸೇರಿರುವ ಸೇನೆಯು ಇದ್ದರೂ ಯುದ್ಧ ಪ್ರಾರಂಭದಲ್ಲಿ ಬ್ರಿಟಿಷರ ಸ್ಥಿತಿಯು ಅಲ್ಲಿ ಅಷ್ಟೊಂದು ಭದ್ರವಾಗಿ ತೋರದ್ದರಿಂದ ಹಿಂದೂಸ್ಥಾನದಿಂದ ಬೆಂಬಲ ಸೇನೆಯನ್ನು ಕಳುಹಿಸುವದು ಅವಶ್ಯವಾಯಿತು. ಬ್ರಿಟಿಷ ಪ್ರದೇಶದೊಳಗೆ ೨ ಕದನಗಳು ನಡೆದವು. ಪ್ರಾಮುಖ್ಯವಾದ ಸ್ಥಳಗಳ ಮೇಲೆ ಶತ್ರುಗಳು ಮೇಲ್ಬಿದ್ದರೂ ಅವರು ಜಯ ಹೊಂದದೆ ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿದರು. ಬ್ರಿಟಿಷ ಸೇನೆಯು ೨ ಹಿಂಗ [illegible]

ಪ್ರಭುಗಳವರು ಬ್ರಿಟಿಷ ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿರುವರು.

ಮಿತ್ರ ರಾಷ್ಟ್ರಗಳಿಗೂ ಸ್ಪೈನ್, ಮತ್ತು ಪೋರ್ಚುಗಲ್ ಪ್ರದೇಶಗಳಿಗೂ ಹೊರತು, ಇತರ ದೇಶಗಳಿಗೆ ಟೀ ಕಳುಹಿಸಿಕೊಡಕೂಡದೆಂಬದಾಗಿ ಬ್ರಿಟಿಷ ಸರಕಾರದವರು ಆಜ್ಞಾಪಿಸಿರುವರು.

ರುಶ್ಯನರ ಲಿಬೋ ಬಂದರದ ಮೇಲೆ ಜರ್ಮನರು ಹಾರಿಸಿದ ಗುಂಡಿನಿಂದ ರೈಲ್ವೆ ಸ್ಟೇಶನ್ ಕೆಟ್ಟುಹೋಗಿರುವದೆಂತಲೂ ಶೀಮೆಎಣ್ಣೆಯ ಹೊಂಡಕ್ಕೆ ಬೆಂಕಿ ತಗಲಿರುವದೆಂತಲೂ "ಡೈಲಿ ಮೈಲ್" ಬಾತ್ಮಿದಾರರು ಹೇಳುವರು.

ಜರ್ಮನರು ಬಂದರದ ಬಾಗಲಲ್ಲಿ ಕೆಲವು ಸಣ್ಣ ವ್ಯಾಪಾರ ಹಡಗುಗಳನ್ನು ಮುಳುಗಿಸಿದರು. ಜರ್ಮನರ ಒಂದು ಯುದ್ಧ ನಾವೆಯು ಸಿಡಿಮದ್ದಿನ ಗಣಿಗೆ ತಾಗಿ ಮುಣುಗಿತು ಎಂಬ ವಾರ್ತೆ ಇದೆ.

ಪೂರ್ವ ರಣರಂಗ:—ವಾರ್ಸೋಗೆ ಮುಂದರಿಸುವ ಬಗ್ಗೆ ಜರ್ಮನರು ಲೊವಿಜ್ ಮತ್ತು ಸ್ಕರ್ನಿವಿಸಿನ ರುಶ್ಯನರ ಸಾಲಿಗಳನ್ನು ಮುರಿಯಲು ಪ್ರಯತ್ನಿಸುತ್ತಿದ್ದಾರೆ. ಈ ಕಡೆಗೆ ಶತ್ರುಗಳು ದೊಡ್ಡ ಸೇನೆಯನ್ನು ಕಳುಹಿಸುತ್ತಿದ್ದಾರೆ ಎಂತ "ಅರ್ಬ ಮೆಸೆಂಜರ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಪೋಲೆಂಡಿನ ಸ್ಥಿತಿಯು ಇನ್ನೂ ಬಹಳ ಕಠಿಣವಾಗಿದ್ದರೂ ರುಶ್ಯನರ ಸೇನಾ ಸಾಲಿಗಳನ್ನು ಮುರಿಯಲೆತ್ನಿಸಿದ ಜರ್ಮನ ಸೇನೆಯನ್ನು ರುಶ್ಯನರು ತಡೆದಿರುವರು. ಇದರಿಂದ ಶತ್ರುಗಳಿಗೆ ಹೆಚ್ಚಿನ ತೊಡಕುಂಟಾಗಿರುವದು.

"ಬ್ಲ್ಯಾಕ್‌ಸೀ" ಕಡಲಲ್ಲಿರುವ ತುರ್ಕರ ಖೋಪ ಎಂಬ ಬಂದರಕ್ಕೆ ರುಶ್ಯನರ ಯುದ್ಧನಾವೆಗಳು ಗುಂಡು ಹಾರಿಸಿದವು. ಬಂದರ, ಕಸ್ಟಮ್ ಹೌಸ್, ಶಸ್ತ್ರಶಾಲೆಯೂ, ಆಯುಧಗಳೂ ನಾಶವಾಗಿರುವವು. ಎರ್ಜರಮಿನಲ್ಲಿ ತುರ್ಕರ ಸೇನೆಯು ಸೋತು ಹೋಗಿರುವದು ಎಂದು ರುಶ್ಯ ಸರಕಾರದವರು ಪ್ರಕಟಿಸಿದಾರೆ.

ಬೆಂಗಳೂರು:—ಕೊಡಗು ಸಂಸ್ಥಾನದ ಅಮ್ಮತಿಯಲ್ಲಿರುವ ಬಾಸೆಲ್ ಜರ್ಮನ್ ಎವಾಂಜಲಿಕಲ್ ಮಿಶ್ಯನಿನ ಅನಾಥ ಶಾಲೆಯನ್ನು ನೋಡುತ್ತಿದ್ದ ರೆವರೆಂಡ್ ಬಾಕ್ ಮತ್ತು ರೆವರೆಂಡ್ ಜಿ. ಸ್ಮಿತ್ಸ್ ಎಂಬ ಇಬ್ಬರು ವಿದ್ದೇಶಿಗಳು ಈ ಅನಾಥ ಶಾಲಾ ಮಕ್ಕಳಿಗೆ ಇಂಗ್ಲಿಷರು ಈಗ ನಮ್ಮ ಶತ್ರುಗಳು ಎಂದು ಬೋಧಿಸಿದ್ದರಿಂದ ಅವರಿಬ್ಬರನೂ ಕೈದುಮಾಡಿ ಬೆಂಗಳೂರಿಗೆ ತಂದಿರುವರು. ಇವರನ್ನು ತಾ. ೨೩ರಲ್ಲಿ ಅಹಮ್ಮದ ನಗರಕ್ಕೆ ಕಳುಹಿಸಿದರೆಂತ ತಾ. ೨೨ರಲು ಪ್ರಕಟವಾಗಿದೆ.

~~~~~

ತಾ. ೨೫ನೇ ನವಂಬರ.

ಸ್ಟೇಟ ಸೆಕ್ರೆಟರಿಗಳಿಂದ ವ್ಯಾಸರಾಯ ಪ್ರಭುಗಳವರಿಗೆ ತಾ. ೨೧ರಲ್ಲಿ ಬಂದ ವಾರ್ತೆಯು ಈ ರೀತಿಯಾಗಿರುವುದು:—ಕೆಲೈಯುತ್ರಕಡೆ ಮುಂದರಿಯಲು ಜರ್ಮನರು ಮಾಡಿದ ಪ್ರಯತ್ನಗಳು ಬಿದ್ದು ಹೋದ ವಿಷಯ ಜರ್ಮನ ವರ್ತಮಾನ ಪತ್ರಗಳಲ್ಲಿ ಯಾವ ಪ್ರಸ್ತಾಪವಾದರೂ ಇರದು. ಕಳೆದ ಐದು ವಾರಗಳಲ್ಲಿ ಜರ್ಮನರು ರಣರಂಗದಲ್ಲಿ ನಡೆಸಿದ ಕಾದಾಟದ ಪ್ರಯತ್ನಗಳು ಕಾರ್ಯತಃ ಏನೂ ಫಲವಿಲ್ಲದೆ ಹೋಗಿವೆ. ಕಾಲಾಳುಗಳ ಮೆಲ್ಲಾಯವಿಕೆಯು ಇದ್ದಿಲ್ಲ. ತೋಪುಗಳ ಜೋರಾವರಿಯು ಕಡಮೆಯಾಗಿತ್ತು.

ಮೋಟರ್ ಬಂಡಿಯಲ್ಲಿ ಅಲ್ಲಲ್ಲಿ ದಂಡಯಾತ್ರೆಯನ್ನು ಮಾಡುತ್ತಿದ್ದ ಜರ್ಮನ ಕೈಸರರ ಮಗ ಪ್ರಿನ್ಸ್ ಅಗೊಸ್ತ ವಿಲ್‌ಹೆಲ್ಮ್ ಎಂಬವರಿಗೆ ವಿಶೇಷ ಜಕಂ ಉಂಟಾಗಿರುವುದು. ತೊಡೆಯು ಮುರಿದು ಹೋಗಿದೆ, ದವಡೆಯು ಒಡೆದು ಹೋಗಿರುವುದು.

ಬ್ರಿಟಿಷ ಸಾಮ್ರಾಜ್ಯದ ಯುವರಾಜರವರು ರಣರಂಗಕ್ಕೆ ತೆರಳಿದ್ದರಿಂದ ಸರ್ವರಲ್ಲಿಯೂ ವಿಶೇಷ ಉತ್ಸಾಹವು ಉಂಟಾಗಿರುವದು, ಯುವರಾಜರವರ ಈ ವರ್ತನೆಯು ಎಲ್ಲಾ ಕಡೆಗಳಲ್ಲಿಯೂ ಶ್ಲಾಘಿಸಲ್ಪಡುತ್ತಿರುವುದೆಂತ ವ್ಯಾಸರಾಯ ಪ್ರಭುಗಳಿಗೆ ತಂತೀ ವಾರ್ತೆಯು ಬಂದಿರುವದು.

ಆಲೀಯಲ್ಲಿ ನವೀನವಾಗಿ ಸೇರಿಸಲ್ಪಟ್ಟ [illegible] ಮಂತ್ರಿಯು ಒಂದು ವಿಶೇಷ [illegible]

ಇಟೆಲಿಯ ರಾಯಭಾರಿಗಳನ್ನು ಈ ಸಭೆಗೆ ಆಮಂತ್ರಿಸಿರುವರೆಂತ ತಾ. ೨೨ರಲ್ಲಿ ಲಂಡನಿನಲ್ಲಿ ಪ್ರಕಟವಾದ ವಾರ್ತೆಯಿಂದ ತಿಳಿದುಬರುವುದು.

ನೌಕಾವಳಿಗಳ ಸಮಾಚಾರಗಳು.

ದಕ್ಷಿಣ ಅಮೇರಿಕದ ಚಿಲಿಯನ್ ಕರಾವಳಿಗಳಲ್ಲಿ ವೈಪರೈಸೋ ಎಂಬಲ್ಲಿಗೆ ಬಂದು ತಲ್ಪಿರುವ ಸಕ್ರೆಮೆಂಟೋ ಹಡಗವು ಜರ್ಮನ ಯುದ್ಧನಾವೆಯೊಂದರಿಂದ ಹಿಡಿಯಲ್ಪಟ್ಟು ಚಿಲಿಯನ್ ರಾಷ್ಟ್ರಗಳಿಗೆ ಸೇರಿದ ಜ್ವಾನ್ ಫೆರ್ನಾಂಡೀಸ ಎಂಬಲ್ಲಿಗೆ ವಯ್ಯಲ್ಪಟ್ಟಿತು. ಅಲಿ ಸೆಕ್ರೆಮೆಂಟೊ ಹಡಗದಲ್ಲಿರುವ ಆರು ಸಾವಿರ ಟನ್ ಕಲ್ಲಿದ್ದಲನ್ನು ತನಗೆ ಕೊಡಬೇಕೆಂತ ಜರ್ಮನ್ ಯುದ್ಧನಾವೆಯು ಈ ವ್ಯಾಪಾರ ಹಡಗವನ್ನು ವಶ್ಯಾಯ ಪಡಿಸಿತು. ಯುದ್ಧಕ್ಕೆ ಸೇರದ ತಟಸ್ಥರಾಗಿರುವ ದೇಶಗಳ ಪ್ರಾಂತ್ಯಗಳಲ್ಲಿ ಜರ್ಮನಿಯ ಯುದ್ಧನಾವೆಯು ನಡೆಸಿದ ಬಲೊಬ್ಬಂದಿಯ ವಿಷಯದಲ್ಲಿ ಚಿಲಿಯನ್ ಸರಕಾರದವರು ತನಖಿ ನಡಿಸುತ್ತಿರುವರೆಂತ ಲಂಡನ್ನಿನ ವೃತ್ತ ಪತ್ರಗಳಲ್ಲಿ ಪ್ರಕಟವಾಗಿರುತ್ತದೆ.

ಚಿಲಿಯನ್ ಕರಾವಳಿಯ ಸಮೀಪ ಎರಡು ಬ್ರಿಟಿಷ ವ್ಯಾಪಾರ ಹಡಗಗಳನ್ನು ಹಿಡಿಯಲು ಪ್ರಯತ್ನಿಸುತ್ತಿದ್ದ ಜರ್ಮನ್ ಯುದ್ಧ ನಾವೆಯನ್ನು ಚಿಲಿಯನ್ ಸರಕಾರದ ಯುದ್ಧ ನಾವೆಗಳು ತಡೆದಿರುವವು.

ಪೂರ್ವ ರಣರಂಗ.

ವಿಸ್ತುಲ ಮತ್ತು ವಾರ್ಟ ನದಿಗಳ ಮಧ್ಯ ಮತ್ತು ದಕ್ಷಿಣಕ್ಕೆ ಜಸ್ಟೊಚೊವಾ ಮತ್ತು ಕ್ರೆಕೊಗಳ ನಡುವೆ ಕಾಳಗಗಳು ಬಹಳ ವಿಶೇಷವಾಗಿ ನಡಿಯುತ್ತಿವೆ. ಪೋಲೆಂಡಿನಲ್ಲಿರುವ ರುಶ್ಯಯನರ ಸೇನೆಯನ್ನು ಮುರಿದುಬಿಡಬೇಕೆಂಬ ಜರ್ಮನರ ಸಾಧನೆಯು ನೆರವೇರಲಿಲ್ಲ. ನವಂಬರ ತಾ. ೧೯ರಲ್ಲಿ ರುಶ್ಯಯನರು ಜರ್ಮನರ ದೊಡ್ಡ ಫಿರಂಗಿಗಳನ್ನೂ ಬಕ್ರೇರಿಯೊಂದನ್ನೂ ಹಿಡಿದಿರುವರು. ಕ್ರೆಕೊ ಪ್ರಾಂತ್ಯಗಳಲ್ಲಿ ೩೦೦೦ ಒಸ್ಟ್ರಿಯನರು ಸೆರೆ ಹಿಡಿಯಲ್ಪಟ್ಟಿರುವರು. ರುಶ್ಯಯನರು ಕಾರ್ಪೆಥೆನಿಯದಲ್ಲಿ ಮುಂದರಿಯುತ್ತಿರುವರು.

ರುಮೇನಿಯದ ಮಂತ್ರಿಗಳಾದ ಮಾ। ಜೊನ್‌ಸೊ ಎಂಬವರಿಂದ ಪೆಟ್ರೊಗ್ರೇಡಿನಲ್ಲಿ ತಾ. ೨೨ರಲ್ಲಿ ಬಂದಿರುವ ತಂತೀ ವರ್ತಮಾನವೇನಂದರೆ — ರುಮೇನಿಯದ ಭವಿಷ್ಯವು ಇನ್ನು ತೀರಾ ರುಶ್ಯ ಫ್ರಾನ್ಸು ಮತ್ತು ಅಂಗ್ಲಾಳಗಳ ಮೇಲೆ ಆಧರಿಸಿರುವುದರಿಂದ ರುಮೇನಿಯವು ಮಿತ್ರರನ್ನು ಸೇರಿಕೊಂಡು ಬಾಕಿ ಬಲ್ಕಾನ್ ರಾಷ್ಟ್ರಗಳು ಸಹ ತನ್ನೊಡನೆ ಒಂದಾಗಿ ಸೇರುವಂತೆ ಪ್ರಯತ್ನ ಪಡಬೇಕು. ಯಾಕಂದರೆ ಜಯವು ಜರ್ಮನರಿಗೆ ದೊರತರೆ ಬಲ್ಕಾನ್ ರಾಷ್ಟ್ರಗಳ ಆಶೆ ಕೋರಿಕೆಗಳೆಲ್ಲವು ನಾಶವಾಗಿ ಹೋಗುವವು.

ಲಾಹೋರಿನ ಸಿವಿಲ್ ಮತ್ತು ಮಿಲಿಟರಿ ಗಜೇಟು ಎಂಬ ಪತ್ರಕ್ಕೆ ಬಂದಿರುವ ತಂತೀ ವರ್ತಮಾನದಿಂದ ಇತ್ತಲಾಗೆ ಒಸ್ಟ್ರಿಯನರು ಸರ್ವಿಯನರನ್ನು ಹಲವು ಬಾರಿ ಸೋಲಿಸಿ ಬಿಟ್ಟಿರುವರೆಂಬದು ಸ್ಪಷ್ಟವಾಗುತ್ತದೆಂತಲೂ ಸರ್ವಿಯನರು ತಮ್ಮ ಸರಕಾರವನ್ನು ನೀಶ್ ಎಂಬಲ್ಲಿಂದ ಉಸ್‌ಕೆಲ್ ಎಂಬಲ್ಲಿಗೆ ವಯ್ಯುತ್ತಿರುವರೆಂಬ ವರ್ತಮಾನವು ಇರುವುದೆಂತಲೂ ತಿಳಿದು ಬರುತ್ತದೆ.

ತುರ್ಕಿಯ ಹಮಿಡಿಯಾ ಯುದ್ಧ ನಾವೆಯು ರುಶ್ಯಯನರ ಟಾಪ್ಸೆಯೊಳಗೆ ೧೨೫ ಗುಂಡುಗಳನ್ನು ಹಾರಿಸಿತು. ನಾಲ್ಕು ಜನ ರುಶ್ಯಯನರು ಕೊಲ್ಲಲ್ಪಟ್ಟದ್ದಲ್ಲದೆ ಮತ್ಯಾವ ಹಾನಿಯೂ ಉಂಟಾಗಲಿಲ್ಲ. ಈ ಗುಂಡುಗಳಿಗೆ ಪ್ರತಿಯಾಗಿ ರುಶ್ಯಯನರ ತೋಪುಗಳು ಶತ್ರುಗಳ ಮೇಲೆ ವಿಶೇಷವಾಗಿ ಹಾರಿಸಲ್ಪಟ್ಟವು.

ಬೊಖಾರದ ಅಮೀರರವರು ರುಶ್ಯದ ಸರಕಾರಕ್ಕೆ ಒಂದು ಮಿಲಿಯ ರೂಬಲ್ ಎಂಬ [illegible] ಧನಸಹಾಯವನ್ನು ಮಾಡಿರುವರು.

[illegible]

ಎಂಟಲ್ಲಿ ಸೇನೆಯನ್ನು ಇಳಿಸುವಾಗ ತಮ್ಮನ್ನು ಎದುರಾಡುವವ ನ್ಯಾರೂ ಇರಲಿಲ್ಲ. ಸಿನಿಯ್ಯ ಎಂಬಲ್ಲಿ ಸೇನೆಯನ್ನು ಇಳಿಸುವಾಗ ತುರುಕರು ಇದಿರಾಗಿ ಬಂದರು; ಆದರೆ ಇವರು ಬಹಳ ಸಮಯ ಕಾದಾಡಲಿಲ್ಲ. ಭಾರತೀಯ ಸೇನಿಕರು ಇವರೊಡನೆ ಕಾದಾಡಿ ತುರ್ಕರನ್ನು ಓಡಿಸಿ ಬಿಟ್ಟರು. ಬ್ರಿಟಿಷ ಸೇನೆಯಲ್ಲಿ ಮೂವರು ಸೇನಿಕರು ವ್ಯಾಹತಪಟ್ಟಿರುವರು; ೨೦ ಜನರು ಘಾಯಪಡೆದಿರುವರು. ತುರ್ಕರಲ್ಲಿ ಅನೇಕ ಜನರು ಸತ್ತುಹೋಗಿರುವರಲ್ಲದೆ ಹಲವು ಸೇನಿಕರು ಸೆರೆಹಿಡಿಯಲ್ಪಟ್ಟಿರುವರು. ತುರ್ಕರ ಎರಡು ದೊಡ್ಡ ಫಿರಂಗಿಗಳು ಸಹ ಹಿಡಿಯೋಣಾಗಿವೆ. ಪಾರ್ಸಿಕೊಲ್ಲಿಯ ಪ್ರಾಂತ್ಯಗಳಲ್ಲಿ ಹವಾ ಸ್ಥಿತಿಯು ಬಹಳ ಕೆಟ್ಟುಹೋಗಿರುವುದರಿಂದ ಸೇನಿಕರಲ್ಲಿ ಹಲವರು ಜ್ವರ ಇತ್ಯಾದಿ ಬಾಧೆಗಳಿಂದ ಪೀಡಿತರಾಗಿರುವರು. ಭಾರತೀಯ ಸೇನಿಕರು ಯುದ್ಧರಂಗದಲ್ಲಿ ವಿಶೇಷ ಉತ್ಸಾಹವನ್ನು ತೋರಿರುವರೆಂತ ಈ ವೃತ್ತಾಂತದಿಂದ ತಿಳಿದುಬರುತ್ತದೆ. ಹವಾ ಸ್ಥಿತಿಯಿಂದ ರೋಗಪೀಡಿತರಾದಂಥಾ ಸೇನಿಕರನ್ನು ಮುಂಬಯಿಗೆ ಚಿಕಿತ್ಸೆ ಬಗ್ಗೆ ತಂದಿರುವದರಿಂದ ಈ ವೃತ್ತಾಂತವು ಇವರಿಂದ ಸಂಗ್ರಹಿಸಲ್ಪಟ್ಟಿರುವುದು. ರೋಗಪೀಡೆಯಿಂದ ಗುಣ ಹೊಂದಿ ಯುದ್ಧರಂಗವನ್ನು ಬೇಗನೆ ಸೇರಬೇಕೆಂಬ ಉತ್ಸಾಹವು ಈ ಸೇನಿಕರಲ್ಲಿ ತೋರಿಬರುತ್ತಿರುವುದು.

ತಾ. 26ನೇ ನವಂಬರ.

ತಾ. ೨೩ನೇಯಲ್ಲಿ ಪೇರಿಸ್ ನಗರದಲ್ಲಿ ಪ್ರಕಟವಾದ ಯುದ್ಧ ಸಮಾಚಾರದಿಂದ ಜರ್ಮನರು ಪುನಃ ಯಪ್ರೆಸಿನ ಮೇಲೆ ತೋಪುಗಳಿಂದ ಗುಂಡುಗಳ ಪ್ರಚಂಡವಾದ ಮಳೆ ಗರೆದರೆಂತ ತಿಳಿದು ಬರುತ್ತದೆ. ಅಲ್ಲಿಯ ಮಾರ್ಕೆಟು ಮತ್ತು ಪಟ್ಟಣ ಸದನವು ಪೂರ್ಣ ನಾಶವಾಗಿ ಹೋಗಿರುತ್ತದೆ. ಹಲವು ಮನೆಗಳಿಗೆ ಬೆಂಕಿ ತಾಗಿ ಉರಿಯು ಹತ್ತಿವೆ.

ಆರ್ಗೋನ್ನೆಯಲ್ಲಿ ಸಹ ಶತ್ರುಗಳು ತೋಪುಗಳನ್ನು ಹಾರಿಸಿ ಮುತ್ತಲು ಬಂದಿದ್ದರೂ ಇವರು ಹಿಮ್ಮೆಟ್ಟಲ್ಪಟ್ಟರು.

ಲಂಡನಿನ ಯುದ್ಧ ಸಮಾಚಾರ ಸಂಗ್ರಹದ ಆಫೀಸರರಲ್ಲೊಬ್ಬರು ತಾ. ೧೭ ಕಳೆದ ಸೋಮವಾರ ತಾನು ಯುದ್ಧರಂಗದಲ್ಲಿ ಪ್ರತ್ಯಕ್ಷ ನೋಡಿದ ಯುದ್ಧ ವೃತ್ತಾಂತವನ್ನು ಈ ರೀತಿ ತಿಳಿಸಿರುತ್ತಾರೆ. ಶತ್ರುಗಳು ನಮ್ಮ ಸೇನೆಯನ್ನು ಮುತ್ತಬೇಕೆಂತ ನಿರ್ಣಯಿಸಿ ಮುಂದುವರಿಯುತ್ತಿದ್ದರು. ಆದರೆ ನಮ್ಮ ಕಡೆಯಿಂದ ಹಾರಿಸೋಣಾಗುವ ತೋಪುಗಳ ಎದುರು ನಿಲ್ಲಲಾರದೆ ಹಿಂತಿರುಗಿ ಹೊಸ ಸೇನೆಯು ಬಂದು ಕೂಡುವತನಕ ಸುಮ್ಮನಿರಬೇಕಾಯಿತು. ಜರ್ಮನರು ಈ ಪ್ರಯತ್ನಗಳಲ್ಲಿ ಬಹಳ ನಷ್ಟಹೊಂದಿರುವರು. ಮಂಗಳವಾರ ನಮ್ಮ ಸೇನಾ ನೆಲೆಗಳಿಗೆ ಹಲವು ಗುಂಡುಗಳನ್ನು ಹೊಡೆದಾದ ಬಳಿಕ ಶತ್ರುಗಳ ಕಾಲಾಳುಗಳು ಮುಂದುವರಿದು ನಮ್ಮ ಸೇನೆಯ ಮೇಲೆ ಬೀಳಲು ಬಂದರು. ಪ್ರಥಮಸರ್ತಿಗೆ ಬಂದ ಕಾಲಾಳುಗಳು ನಮ್ಮ ಸೇನಿಕರ ಸನೀನುಗಳ ಪೆಟ್ಟುಗಳನ್ನು ತಡೆಯಲಾರದೆ ಹಿಂಜರಿದರು. ಎರಡನೇ ಸರ್ತಿ ನಮ್ಮ ಸೇನೆಯು ೫ ಗಜಗಳಷ್ಟು ದೂರದಲ್ಲಿ ಶತ್ರುಗಳ ಕಾಲಾಳುಗಳು ಬಂದಿದ್ದರು. ಆದರೆ ನಮ್ಮ ಸೇನೆಯನ್ನು ಅತಿಕ್ರಮಿಸಿ ಬರಲಾರದೆ ಓಡಿಹೋದರು. ಎರಡನೇ ಸರ್ತಿ ಬಂದವರಲ್ಲಿ ೬೦೦ ಶತ್ರುಗಳ ಸೇನಿಕರು ನಮ್ಮ ಸೇನೆಯ ಇದಿರಿಗೆ ಸತ್ತು ಬಿದ್ದಿರುತ್ತಾರೆ. ಮೂರನೇ ಸಲ ಬಂದವರನ್ನು ನಮ್ಮ ಸೇನಿಕರು ತೋಪುಗಳನ್ನು ಹಾರಿಸಿ ಓಡಿಸಿ ಬಿಟ್ಟರು. ದಿಕ್ಸಮುಡೆಯ ದಕ್ಷಿಣ ಪೂರ್ವದಲ್ಲಿ ನೀರಿನ ಪ್ರವಾಹದ ನೆರೆಯು ಭರ್ತಿ ಸಮಯವಾದ್ದರಿಂದ ಹೆಚ್ಚುತ್ತಲಿದೆ. ರಸ್ತೆಗಳು ಹಿಮ ಬಿದ್ದು ಬಹಳ ಕೆಟ್ಟ ಸ್ಥಿತಿಯಲ್ಲಿರುವವು. ಸುರಂಗಗಳ ಸ್ಥಿತಿಯು ಮತ್ತಷ್ಟು ಕೆಟ್ಟು ಹೋಗಿರುವುದು. ಆದರೂ ನಮ್ಮ ಸೇನಿಕರೆಲ್ಲರೂ ಆರೋಗ್ಯದಲ್ಲಿರುವರು. [illegible] ದ ಆಹಾರ ಸಂಗ್ರಹವು [illegible] ವಾಗಿರುವುದು. [illegible] ಹಿಮ ಬಿದ್ದು [illegible]

ನೆಲಕ್ಕೆ ತಾಗಿ ಅವುಗಳ ಶಕ್ತಿಯು ನೆಲದಿಂದ ಕೆಸರನ್ನು ಹಾರಿಸುವುದರಲ್ಲಿ ಕುಂದಿ ಹೋಗುವುದು. ಈ ತನಕ ನಡೆದ ಕದನಗಳು ಸೇನಿಕರಲ್ಲಿ ಬಹಳ ಬಳಲಿಕೆಯನ್ನುಂಟು ಮಾಡುವಂಥವುಗಳಾದರೂ ನಮ್ಮ ಸೇನಿಕರು ವಿರೋಧಿಗಳನ್ನು ಮುಂದರಿಯಲು ಬಿಡದೆ ವಿಶೇಷ ಸಾಹಸದಿಂದಲೂ ಉತ್ಸಾಹದಿಂದಲೂ ಕಾದಾಡುತ್ತಿದ್ದಾರೆ. ಯಪ್ರೆಸಿನ ವಿಷಯ ಹಬ್ಬಿದ್ದ ಹಲವು ತಪ್ಪು ವರ್ತಮಾನಗಳನ್ನು ಈ ಪ್ರೇಕ್ಷಕರು ತಿದ್ದಿ ಯತಾರ್ಥ ಸಂಗತಿಗಳನ್ನು ತಿಳಿಯಹೇಳಿರುವರು. ಯಪ್ರೆಸನ್ನು ಈ ತನಕ ಶತ್ರುಗಳ ಪೈಕಿ ಒಬ್ಬನಾದರೂ ಪ್ರವೇಶಿಸಿದ್ದಿಲ್ಲ. ಮಿತ್ರರ ಸೇನಾ ಬಲವೂ ಸೇನಾ ನೆಲೆಗಳ ಸ್ಥಿತಿಯೂ ಬಹಳ ಭದ್ರವಾಗಿರುವುದು. ಈ ರೀತಿ ಲಂಡನಿನ ಯುದ್ಧ ಸಮಾಚಾರ ಸಂಗ್ರಹದ ಆಫೀಸಿನ ಪ್ರೇಕ್ಷಕರು ತಮ್ಮ ವೃತ್ತಾಂತವನ್ನು ಪೂರ್ಣಗೊಳಿಸಿರುವರು.

ಪಾಯೋನಿಯರ್ ಪತ್ರದ ಲಂಡನಿನ ಬಾತ್ಮೀದಾರರು ಯುದ್ಧರಂಗದಲ್ಲಿ ಗುರ್ಕಾ ಸೇನಿಕರ ಸಾಹಸವನ್ನು ಈ ರೀತಿ ತಂತೀ ಮೂಲಕ ತಿಳಿಸಿರುವರು. ಯಪ್ರೆಸ್ ಲಾಬಸ್ಸೆ ಪ್ರಾಂತ್ಯಗಳಲ್ಲಿ ಶತ್ರುಗಳ ತೋಪುಗಳ ಎದುರು ನಿಂತು ಕಾದಾಡುತ್ತಿದ್ದ ಗುರ್ಕಾ ಸೇನಿಕರು ಮನನೊಂದು ಒಂದು ದಿನ ರಾತ್ರೆ ಕಾಲದಲ್ಲಿ ತಮ್ಮ ಸುರಂಗಗಳಿಗಿಳಿದು ಜರ್ಮನರು ತೋಪುಗಳನ್ನು ಹಾರಿಸುತ್ತಿದ್ದ ಸ್ಥಳಕ್ಕೆ ಮೆಲ್ಲನೆ ಹೋಗಿ ತೋಪುಗಳನ್ನು ಹಾರಿಸುತ್ತಿದ್ದ ೧೫ ಜನ ಸೇನಿಕರನ್ನು ಕೊಂದುಬಿಟ್ಟರು. ಇತರ ಸೇನಿಕರು ಭೀತಿಯಿಂದ ತೋಪುಗಳನ್ನು ಬಿಟ್ಟು ಓಡಿಹೋದರು.

ಉತ್ತರ ಹಿಂದೂಸ್ಥಾನ.

ಬಂಗಾಳದ ಹತ್ತಿಯ ಎಂಬಲ್ಲಿ ಕಳೆದ ಆದಿತ್ಯವಾರ ಒಂದ ದೋಣಿಯು ಕವಚಿ ವಿಶೇಷ ಪ್ರಾಣ ಹಾನಿಯಾಗಿರುವದು. ದೋಣಿಯಲ್ಲಿ ೩೦೦ ಪ್ರಯಾಣಿಕರಿದ್ದರು. ಈ ಪೈಕಿ ೧೭ ಶವಗಳು ದೊರಕಿರುವವು. ಉಳಿದ ಸಂಖ್ಯೆ ಗೊತ್ತಾಗಲಿಲ್ಲ.

ಪಂಜಾಬಿನ ಜೋರ್ಜ ಬೇಂಕ್, ಲಿಮಿಟೆಡ್ ಇದು ಲೇವಾದೇವಿಯನ್ನು ನಿಲ್ಲಿಸಿರುವದು. ಇದನ್ನು ಕಳಚಿ ಬಿಡುವದೆ ಜಸ್ಟಿಸರು ಹುಕುಂ ಮಾಡಿರುವರು. ಈ ಬೇಂಕಿನ ಹೆಡ್ ಆಫೀಸು ಲಾಹೋರಿನಲ್ಲಿದೆ.

ಲೇಡಿ ಹಾರ್ಡಿಂಜ್ ಯುದ್ಧ ಆಸ್ಪತ್ರಿಗೆ ಮುಂಬಾಯಿ ಮುನ್ಸಿಪಾಲಿಟಿಯವರು ೩೦,೦೦೦ ರೂಪಾಯಿ ದಾನ ಮಾಡಬೇಕೆಂಬದಾಗಿ ನಿರ್ಣಯಿಸಿರುವರು.

ನವಂಬರ ತಾ ೨೦ನೇ ಮುಂಬಾಯಿಯಲ್ಲಿ ಹಿಂದೀ ಸೈನಿಕರು ಹಡಗ ಹತ್ತುತ್ತಿರುವಾಗ ಬಲೂಚಿ ಸೇನೆಯ ಮೆಜರ್ ಎಚ್. ಆರ್. ಆಂಡರ್ಸನರು ಸೇನೆಯನ್ನು ಮೇಲ್ವಿಚಾರಿಸಿ ನಡಿಸುತ್ತಿರುವಾಗ ಒಬ್ಬ ಮಶೂದ್ ವಜಾಯಿರಿ ಸಿಪಾಯಿಯು ಆಂಡರ್ಸನರನ್ನು ಸನೀನಿನಿಂದ ತಿವಿದನು. ಘಾತುಕನನ್ನು ಕೂಡಲೇ ಹಿಡಿದರು, ಮಶೂದ ಸಿಪಾಯರಲ್ಲಿ ಒಬ್ಬನು ಮಾಡಿದ ಈ ಕೃತ್ಯದಿಂದ ಮಶೂದರಲ್ಲದ ಸಿಪಾಯರು ಬಹು ಸಿಟ್ಟುಗೊಂಡದ್ದರಿಂದ ಇತರ ಮಶೂದ ಸಿಪಾಯರನ್ನು ಅಲ್ಲಿಂದ ಸುರಕ್ಷಿತವಾದ ಸ್ಥಳಕ್ಕೆ ವೈಯ್ಯಬೇಕಾಯಿತು ಎಂತ ಮುಂಬಾಯಿ ಸರಕಾರದವರು ಪ್ರಕಟಿಸಿರುವರು.

ಫರಿಡ್‌ಪುರ ಡಿಸ್ಟ್ರಿಕ್ಟಿನ ಮಾದರಿಪುರದಲ್ಲಿರುವ ವಕೀಲ ಮ॥ ರಾ॥ ವಿನೋದಲಾಲ್ ಘೋಷರವರ ಮನೆಗೆ ಯಾರೋ ಬಂದು ಬೊಂಬು ಬಿಸಾಡಿರುವರು. ಬೊಂಬು ಸಿಡಿದರೂ ಅನಾಹುತವಾಗಲಿಲ್ಲ. ಇಬ್ಬರು ಯುವಕರನ್ನು ಅನುಮಾನದ ಮೇಲೆ ಹಿಡಿಯಲು ಪ್ರಯತ್ನ ನಡಿಸಲು ಅವರು ಸಿಪಾಯಿಯ ಎಂಬವನಿಗೆ ರಿವಾಲ್ವರ್ ಹಾರಿಸಿದರು. ಆದರೆ ದೈವವಶಾತ್ ಗುಂಡು ಅವನಿಗೆ ತಗಲಲಿಲ್ಲ.

[illegible] ಡಿಸ್ಟ್ರಿಕ್ಟಿನ ಅಂಬಾಲದ [illegible]

ಕಳು ಹತ್ತಾದರು. [illegible] ಮರ್ಥಿ ಘಾಯ ಪಡೆದರು. [illegible] ಕ್ರೈಸ್ತನಲ್ಲಿ ಒಬ್ಬ ಕಳ್ಳನಿಗೆ ಹೊರತು ಯಾರಿಗೂ ಅಪಾಯವಾಗಲಿಲ್ಲ.

ಇನ್‌ಕಮ್ ಟೇಕ್ಸ್ ಎಂಬ ಆದಾಯ ತೆರಿಗೆಯ ಸಂಬಂಧ ಸರಕಾರದ ಮೇಲೆ ವ್ಯಾಜ್ಯ ದಾಖಲು ಮಾಡಲ್ಪಡುವದಿಲ್ಲವೆಂಬದಾಗಿ ಸರ್ವ ಸಾಧಾರಣವಾದ ಮತವಿದೆ. ಆದರೆ ಕರಾಚಿಯ ಮೆಸ್ಸರ್ಸ್ ಮಥುರದಾಸ ಹಿರಾನಂದ ಎಂಬವರು ಕೊರ್ಡ್ನೆರೋ ಎಂಬುವರ ಪರವಾಗಿ ಅವರ ಮೇಲೆ ಹೊರಿಸಿದ ಆದಾಯ ತೆರಿಗೆಯು ನ್ಯಾಯವಲ್ಲ ಎಂಬ ಸಬಬಿನ ಮೇಲೆ ದಾವಾ ತಂದರು. ಸರಕಾರದವರು ಈ ದಾವೆಯಲ್ಲಿ ಪ್ರತಿವಾದ ಮಾಡದೆ ಕೊರ್ಡ್ನೆರೋರವರಿಂದ ತಕ್ಕೊಂಡ ಆದಾಯ ತೆರಿಗೆಯನ್ನು ಕೋರ್ಟು ಮೂಲಕ ವಾಪಸು ಮಾಡಿದರು. ಕೊರ್ಡ್ನೆರೋ ಎಂಬವರು ೧೮೯೫ರಲ್ಲಿ ಕರಾಚಿಯ ಒಂದು ಮನೆಯನ್ನು ಕ್ರಯಕ್ಕೆ ಪಡೆದು ೧೯೧೧ರಲ್ಲಿ ೩೦೦೦೦, ರೂಪಾಯಿಗೆ ಮಾರಿದರು. ಆದಾಯ ತೆರಿಗೆಯನ್ನು ವಸೂಲು ಮಾಡುವ ಅಧಿಕಾರಿಗಳು ಇದು ೧೯೧೧ನೇ ಇಸವಿಯಲ್ಲಿ ಕೊರ್ಡ್ನೆರೋರವರಿಗೆ ದೊರಕಿದ ಲಾಭವೆಂದೆಣಿಸಿ ಆದಾಯ ತೆರಿಗೆಯನ್ನು ಹೊರಿಸಿದರು. ಆದರೆ ವಕೀಲರು ಇದು ಲಾಭವಲ್ಲ; ಬರೇ ಆಸ್ತಿಯ ಪರಸ್ವಾಧೀನತೆ ಎಂಬದಾಗಿ ವಾದಿಸಿದರು. ಸರಕಾರದವರೂ ಇದಕ್ಕೆ ಒಪ್ಪಿ ತಕ್ಕೊಂಡ ಆದಾಯ ತೆರಿಗೆಯನ್ನು ಹಿಂದಕ್ಕೆ ಕೊಡಿಸಿದರು.

ಮುಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿಯ ಕರಾಚಿ ಬ್ರೇಂಚಿನ ಮೆನೇಜರರಾಗಿದ್ದ ಮಿ॥ ಡಬ್ಲ್ಯು. ಡಿ. ಹೊಡ್ಜರ್ಸ್‌ರವರು ಬಟ್ಟಲು ಕೋಣೆಯಲ್ಲಿ ಗುಂಡು ಹೊಡೆದು ಸ್ವಗಾತ ಮಾಡಿಕೊಂಡರು.

"ಟರ್ಕಿ ಬಾಲ್ಕನ್ ಲಡಾಯಿ ಭಾಗ ಪಹೆಲ್ಲೋ" ಅಂದರೆ ತುರ್ಕಿ ಬಾಲ್ಕನ್ ಯುದ್ಧ, ಒಂದನೇ ಭಾಗ, ಮುನ್ಸಿ ಮಹಮ್ಮದ ಸೈಯದರವರಿಂದ ರಚಿತವಾದ ಪುಸ್ತಕಕ್ಕೂ 'ಜಂಗೆ ಬಾಲ್ಕನ್' ಎಂಬ ಪುಸ್ತಕಕ್ಕೂ ಮುಟ್ಟುಗೋಲು ಹಾಕಿರುವರು.

ದಕ್ಷಿಣ ಹಿಂದೂಸ್ಥಾನ.

ಬೆಂಗಳೂರಲ್ಲಿ ಪ್ರಕಟವಾಗುವ ಒಕ್ಕಲಿಗರ ಪತ್ರಿಕೆಯ ಮೇಲೆ ಮೈಸೂರಿನ ಕುರುಬರ ಜಾತಿಯ ಪರವಾಗಿ ಒಂದು ವರ್ಷದ ಹಿಂದೆ ಮ॥ ರಾ॥ ಭೋಜಪ್ಪನವರು ಒಂದು ಮಾನನಷ್ಟ ಫಿರ್ಯಾದಿಯನ್ನು ತಂದಿದ್ದರು. ಮೈಸೂರಿನ ಕುರುಬರ ಜಾತಿಯವರು ಇತರರಿಗಿಂತ ಕನಿಷ್ಠರೆಂದು ಈ ಪತ್ರಿಕೆಯಲ್ಲಿ ವಿಮರ್ಶಿಸಿ ಬರೆದ ಲೇಖನದ ಮೇಲೆ ಈ ಮಾನನಷ್ಟ ದಾವೆಯು ದಾಖಲು ಮಾಡಲ್ಪಟ್ಟಿತ್ತು. ಈ ಮೊಕದಮೆಯು ಒಂದು ವರ್ಷದಿಂದ ತನಕ ನಡೆದು ಬೆಂಗಳೂರಿನ ಸಿಟಿ ಮೇಜಿಸ್ಟ್ರೇಟರು ತಾ. ೨೦ರಲ್ಲು ಆ ಲೇಖನವನ್ನು ಬರೆದ ರಾ ಬೋರಿಸ್, ಪ್ರಿಂಟರ್ ಮತ್ತು ಪಬ್ಲಿಶರಾದ ರಾ. ಮಾರಪ್ಪ ಮತ್ತು ಸಂಪಾದಕರಾದ ರಾ. ವೆಂಕಟ್ರಮಣಯ್ಯನವರಿಗೆ ರೂ. ೧೦೦ರಂತೆ ಜುಲುಮಾನೆ ವಿಧಿಸಿ ಅಪಾದಿಸಲ್ಪಟ್ಟ ಇತರರನ್ನು ಖುಲಾಸುಪಡಿಸಿದರು.

ಇದೇ ತಾ. ೨೦ರಲ್ಲು ಮದ್ರಾಸ್ ನ್ಯಾಯ ನಿರ್ಮಾಣ ಸಭೆಯು ಮದ್ರಾಸಿನ ಫೋರ್ಟುಸೆಂಟ್‌ಜೋರ್ಜ ಸರಕಾರ ಮಂದಿರದಲ್ಲಿ ಕೂಡಿ ಬಂತು. ಈ ಸಭೆಯಲ್ಲಿ ಹೆಚ್ಚುಕಡಿಮೆ ಎಲ್ಲಾ ಮೆಂಬರರೂ ಹಾಜರಿದ್ದರು. ಸರ್ ಹರೋಲ್ಡ ಸ್ಟುವಾರ್ಟರವರು ರೋಬರ್ಟ್ ಪ್ರಭುಗಳವರ ಮರಣದಿಂದುಟಾದ ವಿಷಾದವನ್ನು ತೋರ್ಪಡಿಸಿ, ಲೇಡಿ ರೋಬರ್ಟ್ಸರವರಿಗೆ ಸಹತಾಪ ಸೂಚಕ ತಂತೀಯನ್ನು [illegible] ಹಿಸಬೇಕೆಂಬ ನಿರ್ಣಯವಾಯಿತು. ಅನಂತರ ಬಹುಮಾನ್ಯ ಕೇಶವಪಿಳ್ಳೆಯವರು ಈ ಸಾಮ್ರಾಜ್ಯಕ್ಕೆ ಬಂದಿರುವ ಈ [illegible] ಕಾಲದಲ್ಲಿ ಕೌನ್ಸಿಲಿನ ಮೆಂಬರರೂ, ಸಂಸ್ಥಾನದ [illegible] ರಾಜಭಕ್ತಿಯುಳ್ಳವರಾಗಿದ್ದು ತಮ್ಮ ಸರ್ವಸ್ವವನ್ನು [illegible] ಪರವಾಗಿ ಒಪ್ಪಿಸಲು ಸಿದ್ಧವಿರುವರೆಂಬ [illegible] ಮುಂದಿಟ್ಟರು. ಈ ನಿರ್ಣಯವನ್ನು [illegible] ಕುಂಞರಾಮನ್ ನಾಯರವರು [illegible]

ತೋರ್ಪಡಿಸಿ, ಕೌನ್ಸಿಲು ಸಭೆಯನ್ನು ಮರುದಿನಕ್ಕೆ ಮುಂದರಿಸಿಟ್ಟರು. ಗವರ್ನರ ಪ್ರಭುಗಳವರೂ, ಇತರ ಮೆಂಬರರೂ ನಾಯರವರು ಮಲಗಿದ್ದ ಕೋಣೆಗೆ ಹೋಗಿ ಶವವನ್ನು ಕಂಡು ಮೃತರ ಮಗನಿಗೆ ತಮ್ಮ ಸಹಾನುಭಾವವನ್ನು ತೋರ್ಪಡಿಸಿದರು. ಅಲ್ಲಿಂದ ಇವರ ಶವವನ್ನು ನಾಯರವರ ಕಾಲಿಪಾಕಿನಲ್ಲಿರುವ ಬಂಗ್ಲೆಗೆ ಕೊಂಡು ಹೋದರು. ಬಹುಮಾನಪಟ್ಟ ಕೆ. ಪಿ ರಾಮನ್‌ಮೆನನರೂ ಇತರ ಕೆಲವು ಸ್ನೇಹಿತರೂ ಅಲ್ಲಿ ವರೆಗೆ ಹೋದರು. ಶವವನ್ನು ಉತ್ತರ ಮಲಬಾರಿನಲ್ಲಿರುವ ಇವರ ಮನೆಗೆ ಟ್ರೈನಿನಲ್ಲಿ ಸಾಗಿಸುವರೆಂಬ ವಾರ್ತೆ ಇದೆ.

ಬಹುಮಾನಪಟ್ಟ ನಾಯರವರು ಉತ್ತರ ಮಲಬಾರಿನ ಮಾನ್ಯ ಕುಟುಂಬದವರಾಗಿದ್ದು, ಬಹು ವಿದ್ವಾಂಸರೂ, ಗುಣವಂತರೆಂದೂ ಹೆಸರು ಪಡೆದಿದ್ದರಲ್ಲದೆ, ನ್ಯಾಯ ವಿಧಾಯಕ ಸಭೆಯಲ್ಲಿ ಇವರು ಜನಸಾಮಾನ್ಯರಿಗೂ ರಾಜ್ಯಕ್ಕೂ ಬಹು ಪ್ರಯೋಜನಕರವಾದ ಕೆಲಸಗಳನ್ನು ಮಾಡುತ್ತಿದ್ದರು ಎಂಬ ಕೀರ್ತಿಯನ್ನು ಪಡೆದಿದ್ದರು ಇವರು ನ್ಯಾಯ ವಿಧಾಯಕ ಸಭೆಗೆ ತಾ ೨೦ನೇ ಶುಕ್ರವಾರ ೧೧ ಗಂಟೆಗೆ ಸೌಖ್ಯದೇಹಿಯಾಗಿ ಹೋಗಿದ್ದರು ಅನಂತರ ಮಾನ್ಯ ಕೇಶವ ಪಿಳ್ಳೆಯವರ ರಾಜಭಕ್ತಿ ಪರವಾದ ನಿರ್ಣಯವನ್ನು ಅನುಮೋದಿಸುವ ಭಾಷಣಕೊಟ್ಟು ಅಂತ್ಯವಾಗುತ್ತಲೇ ಮೂರ್ಛಿತರಾಗಿ ಮೃತರಾದರು

ದಕ್ಷಿಣ ಕನ್ನಡ

ಬೈಂದೂರು—ಸ್ಥಳೀಕ ಮಹನೀಯರೂ ಸರಕಾರ ಉದ್ಯೋಗಸ್ಥರೂ ಸೇರಿ ಇಲ್ಲಿ ಒಂದು ವಾಚಕಾಲಯವನ್ನು ಏರ್ಪಡಿಸಬೇಕೆಂತ ಆಲೋಚಿಸಿದಂತೆ ಇದೇ ನವಂಬರ ತಿಂಗಳ ೧ನೇ ತಾರೀಕು ಆದಿತ್ಯವಾರ ಬೈಂದೂರು ಶಯನೇಶ್ವರ ದೇವಸ್ಥಾನದ ಉಪ್ಪರಿಗೆಯಲ್ಲಿ ವಾಚಕಾಲಯವು ತೆರೆಯಲ್ಪಟ್ಟಿರುತ್ತದೆ ಈ ವಿಷಯದಲ್ಲಿ ಹೆಚ್ಚು ಆಸಕ್ತಿ ಇಟ್ಟವರ ಪೈಕಿ, ಮ| ರಾ| ರಾ| ೧ನೇ ವೆಂಕಟರಮಣ ಹೊಳ್ಳರು ೨ನೇ ಯತ್ರತೆ ಸೂರ್ಯಣ ಶೆಟ್ಟಿ ೩ನೇ ಇಸೂಟ್ಟಿ ವೈದ್ಯದಿನ ಸಾಹೇಬರು ೪ನೇ ವಿ ಸುಂದರರಾಯರು ಮುಖ್ಯಸ್ಥರಾಗಿರುತ್ತಾರೆ ಇಲ್ಲಿಯ ಸಬ್ ರಿಜಿಸ್ಟ್ರಾರರಾದ ಕೆ ಗೋವಿಂದರಾಯರು ವಾಚಕಾಲಯದ ಸೆಕ್ರಿಟರಿಗಳಾಗಿ ನೇಮಿಸಲ್ಪಟ್ಟಿದ್ದಾರೆ ವಾಚಕಾಲಯದಲ್ಲಿ ಪ್ರತಿ ಆದಿತ್ಯವಾರವೂ ಊರ ಜನರನ್ನು ಸಭೆ ಸೇರಿಸಿ ಉಪನ್ಯಾಸಗಳನ್ನು ಓದುವ ಪದ್ಧತಿಯು ನಡೆದು ಬರುತ್ತದೆ ವಾಚಕಾಲಯಗಳ ಪ್ರಯೋಜನ ಪರೋಪಕಾರ, ಧರ್ಮ ಈ ವಿಷಯಗಳ ಕುರಿತು ಕಳೆದ ಮೂರು ಆದಿತ್ಯವಾರಗಳಲ್ಲಿ ಉಪನ್ಯಾಸಗಳಿದ್ದವು ಇಂಥಾ ಸತ್ಕಾರ್ಯಕ್ಕೆ ಎಲ್ಲವರೂ ತಮ್ಮ ಮನಸ್ಸಿನಿಂದ ಉತ್ತೇಜನ ಕೊಟ್ಟು ಈ ವಾಚಕಾಲಯವನ್ನು ಈ ಊರಿಗೊಂದು ಭೂಷಣವನ್ನಾಗಿ ಮಾಡಬೇಕೆಂತ ಕೋರುತ್ತೇನೆ

ಬಂಟವಾಳ—[illegible] ಗಾಡಿಗಳ ಸಾಲುಗಳು ಓಡುತ್ತಿರುವ ರಾಜಮಾರ್ಗದಲ್ಲಿ ಕಲ್ಲುತುಂಡನ್ನು ರಾಶಿರಾಶಿಯಾಗಿರಿಸಿ ಇಕ್ಕಟ್ಟಾದ ಮಾರ್ಗವನ್ನು ಮತ್ತೂ ಇಕ್ಕಟ್ಟಾಗಿರಿಸುವ ಕಾಮಗಿರಿಯು [illegible] ಉಪಕಾರಕ್ಕೆ? ಮತ್ತು ಈ ಬಾಧೆಯಿಂದ ಗಾಡೀ ಜೀನಸುಗಳ ವ್ಯಾಪಾರವೇ ಮುಖ್ಯವಾಗುಳ್ಳ ವರ್ತಕರಿಗೆ ವಿಮೋಚನೆಯು ಉಂಟಾಗುವುದು ಹೇಗೆಂಬುವದನ್ನು ಇಲ್ಲಿಯ ವ್ಯಾಪಾರಿಗಳು ಆಲೋಚಿಸಬೇಕಾಗಿದೆ

ಪೇಟೇ ಮಧ್ಯೆ ಮಧ್ಯಾಹ್ನದಿಂದ ಸಾಯಂಕಾಲದ ವರೆಗೂ ಜನಸಂದಣಿಯು ಪ್ರಬಲವಾಗಿ ಅತ್ತಿತ್ತ ಚಲಿಸುವುದೂ ಕೂಡ ಅಪಾಯಕ್ಕೆ ಕಾರಣವಾಗಿರುವಾಗ ಈ ವಿಷಯ ನಮ್ಮ ಮಾರ್ಗಗಳ ಮೇಲೆ ವಹಿವಾಟವು ಸರಾಗವಾಗುವ ಹಾಗೆ ನಾವು ಯಾರಿಗೆ ದೂರು ಹೇಳಿಕೊಳ್ಳಬೇಕೆಂಬುದು ನಮಗೆ ಸ್ಪಷ್ಟವಾಗಿಲ್ಲ.

ವಿಶಾನುಕೇರಿಯಲ್ಲಿಯ ಗಡಂಗಿನ ಒಳಿ ಪ್ರತಿ ರಾತ್ರೆಯೂ ಜರುಗುತ್ತಿರುವ ಲಡಾಯಿ ಪೆಟ್ಟುಗಳ ಕುರಿತು ಪೋಲೀಸಿನವರಿಗೆ ನಾವಾಗಿ ಗುಣಗುಟ್ಟಬೇಕೋ ಅಥವಾ ಬೀಟಿಗೆಂದು ಬರುವ ಅವರೇ ಇದರ ಕುರಿತು ತಮ್ಮ ಡೈರಿಯಲ್ಲಿ ಬರೆದು ಉಪಕಾರ ಮಾಡುವರೋ ಎಂದು ಇನ್ನೂ ತಿಳಿಯಲಿಲ್ಲ.

ಕಂಚಿಕಾರ ಗುಂಡಿಯ ಬಳಿ ಇರುವ ನದೀ ದಡದ ಮೇಲೆ ಈಗಲಿದ್ದು ಈಗ ಮಾಯವಾಗುವ ಕೆಲವು ರಕ್ಕು ಅಂಗಡಿಗಳು ಉಂಟಾಗಿವೆಯಾದುದರಿಂದ ಸರಕನ್ನು ಏರಿಸುವವರು ತಾವು ಕಳಿಸುವ ಸರಕಿನೊಡನೆ ಶೇಕಡಾ ಹತ್ತರಂತೆಯಾದರೂ ಹೆಚ್ಚಿನ ಸರಕನ್ನು ಲೆಕ್ಕ ಪ್ರಕಾರ ಕಳುಹಿಸಿಕೊಡದೆ ಹೋದರೆ ಈ ಕಳ್ಳ ಅಂಗಡಿಗಳಿಗೆ ಇನ್ನಿರಲು ಬೇರೆ ಉಪಾಯವಿರದೆಂಬದನ್ನು ವ್ಯಾಪಾರಿಗಳು ಅನುನಿತ್ಯವೂ ಅನುಭವಿಸಿರುತ್ತಾರೆ.

ನಮ್ಮ ಡಾಕ್ಟರರಿಗೆ ರಜೆ ಬೇಕಾಯಿತು. ಮಾತ್ರವಲ್ಲ ಸಿಕ್ಕಿತು, ಆದರೆ ಅವರಿಗೆ ಬದಲಾಗಿ ಇಲ್ಲಿ ಯಾರೂ ಬರಲಿಲ್ಲ. ಅವರ ಬದಲಿಗೆ ಜನ ಕಳುಹಿಸದೆ ಅವರನ್ನು ಮಾತ್ರ ಹೋಗಬಿಡುವುದು ಯಾರ ಹಿತಕ್ಕೆ ಒಳ್ಳೆಯದು.

ಪುತ್ತೂರು—ಇದೇ ನವಂಬರ ತಾ ೨೧ರ ವರೇಗೆ ೧೬೧ ಇಂಚ್ ೫೧ ಸೆಂಟ್ಸ್ ಮಳೆ ಬಿದ್ದಿರುವದು

ಖಜಾನಾ ಚಾರ್ಜ ಡಿಪ್ಯುಟಿ ಕಲೆಕ್ಟರರಾದ ಮ| ರಾ| ರಾ| ಪಾಂಡುರಂಗ ಕಿಣಿಯವರು ಇದೇ ತಾ. ೧೪ರಲ್ಲು ಇಲ್ಲಿಗೆ ತಲ್ಪಿ ಇಲ್ಲಿಯ ತಾಲೂಕು ಖಜಾನೆ ತನಿಕೆ ನಡಿಸಿ ತಾ ೧೯ರಲ್ಲಿ ವಾಪಾಸು ಹೋಗಿರುವರು.

ಜಂಗ್ಲಿ ಇಲಾಖೆಯ ಡಿಸ್ಟ್ರಿಕ್ಟ್ ಫೊರೆಸ್ಟ ಆಫೀಸರ್ ದೊರೆಗಳವರಾದ ಮೆ| ಆರ್ ಡಿ ರಿಚಮೊಂಡ ದೊರೆಗಳವರು ತಾ ೧೯ರಲ್ಲು ಇಲ್ಲಿಗೆ ತಲ್ಪಿ ಇಲ್ಲಿಯ ರೇಂಜ್ ಆಫೀಸಿನ ತನಿಕೆ ನಡಿಸಿ ತಾ. ೨೦ರಲ್ಲಿ ಸುಳ್ಯ ಅತ್ತಕಡೆ ಸರ್ಕಿಟು ಬೆಳೆಸಿರುವರು

ಅಮರಸುಳ್ಯ ಮಾಗಣೆಗಳ ಕಾನಾಬಾಣೆಗಳನ್ನು ಕಲ್ಲುಗುಪ್ಪೆ ಹಾಕಿ ವಿಂಗಡಿಸುವ ಬಗ್ಗೆ ಆಸಿಸ್ಟಾಂಟ ಕಲೆಕ್ಟರರಾದ ಮೆ ಪ್ರಿಸ್ಟಲಿ ದೊರೆಗಳವರ ಇದೇ ತಾ ೨೪ರಲ್ಲಿ ಇಲ್ಲಿಗೆ ತಲ್ಪಿ ತಾ ೨೫ಕ್ಕೆ ಸುಳ್ಯಕ್ಕೆ ಹೋಗಿರುವರು

ಇಲ್ಲಿಯ ಆಸಿಸ್ಟಾಂಟ ಸರ್ಜನರಾದ ಮ| ರಾ| ರಾ| ಸಿ ರಾಮಕಾಮತ್ತರವರಿಗೆ ಕಾಸರಗೋಡಿಗೆ ವರ್ಗವಾದುದರಿಂದ ಅವರ ಬದಲಿಗೆ ಆಸಿಸ್ಟಾಂಟ ಸರ್ಜನರಾದ ಮ| ರಾ| ರಾ| ಎ. ಆರ್. ಹೆಬ್ಬಾರರವರು ಬಂದು ತಾ ೨೫ರಲ್ಲು ಚಾರ್ಜನ್ನು ವಹಿಸಿಕೊಂಡಿರುವರು.

ಮಂಗಳೂರು.

ಇಂಪೀರಿಯಲ್ ಮಿಷನ್ ಸ್ಕಾಲರ್‌ಷಿಪ್ ಕಲ್ ಇಲ್ಲಿಯ [illegible] ಲ್ ಮಿಶ್ಯನ್ ಹ್ಯಾಸ್ಕೂಲಿನಿಂದ ರೂ [illegible] ಮತ್ತು ಮಂಗಳೂರಿನ ಬಾಸೆಲ್ ಮಿಶ್ಯನ್ ಕೈಸ್ತರಿಂದ ರೂ. [illegible] ಜಮ್ಮಾ ರೂ [illegible] ಕಳುಹಿಸಿಕೊಡಲಾಗಿರುವದು

ಹಿಂದೂಸ್ಥಾನದಿಂದ ಕಳೆದ ವಾರ ಹೊರಟುಹೋದ ರಸ್ಸೆಲ್ ಇನ್‌ಫೆಂಟ್ರಿ ಕೈಸ್ತರೊಂದಿಗೆ ಬಾಸೆಲ್ ಮಿಶ್ಯನ್ ರೆವೆರೆಂಡ್ ಸೆಸ್ಸಿ ರೊಂಬರ್ಟ್ನರ [illegible] ಲೆಟರ್ ಸ್ಟ್ ಆಸಿಸ್ಟಾಂಟ ಸರ್ಜನರಾದ ಮೆ ಜೊಸೆಫ್ ರೊಂಬರ್ಟ್ನರವರು ಸಹ ಹೋಗಿರುವರೆಂತ ಒಬ್ಬ ಬಾತ್ಮಿದಾರರು ತಿಳಿಸುವರು

ಕಳೆದ ಸಪ್ಟಂಬರ ತಿಂಗಳ ೪ನೇ ತಾರೀಕಿನ ಪತ್ರದಲ್ಲಿ ಕೊರೊನೇಶನ್ ಕಂಪೆನಿಯವರು ಹಿಂದೂ ಟ್ರೆಸ್ಟಿಂಗ್ ಕಂಪೆನಿಯವರು ಕ್ರಯಕ್ಕೆ ಪಡಕೊಂಡ ಆ ರೂಪಾಯಿ ಚಾರ್ಜು ಇದ್ದದಕ್ಕೆ [illegible] ಆಗ ಜಾಸ್ತಿಯಾಗಿಯದೆ ಎಂತಲೂ ಅದನ್ನು ಕಮ್ಮಿ ಮಾಡಿದ ಸಂಗತಿಯಲ್ಲಿ ಟ್ರೆಸ್ಟಿಂಗ್ ಕಂಪೆನಿಯ ಪ್ರೊಪ್ರಾಯ್ಟರ್ ದೊಡ್ಡ ಹೆಸರುವಾಸಿ [illegible] ತಲೂ ಪ್ರಕಟವಾಗಿತ್ತು ಆ ಸಮ್ಮಂದ [illegible] ಈ ಜಿಲ್ಲೆಯಲ್ಲಿ ನಡಿಯುವ ಹಿಂದೂ ಟ್ರೆಸ್ಟಿಂಗ್ ಕಂಪೆನಿಗಳ ಗಾಡಿಗಳಿಗೆ ಅಪೇಕ್ಷೆಗಿಂತಲೂ ಕಮ್ಮಿ ದರಗಳನ್ನು ಇಟ್ಟಿರುತ್ತದೆಂತ ಹಿಂದೂ ಟ್ರೆಸ್ಟಿಂಗ್ ಕಂಪೆನಿಯ ಪ್ರೊಪ್ರಾಯ್ಟರರ ಕಡೆಯಿಂದ ತಿಳಿಸೋಣಾಗಿರುತ್ತದೆ

ಇಲ್ಲಿ ಪ್ರಥಮತಃ ಬ್ರಹ್ಮಧರ್ಮವು ಸ್ಥಾಪನೆಯಾಗಲಿಕ್ಕೆ ಕಾರಣಭೂತರಾದ ದಿವಂಗತರಾದ ಅರಸಪ್ಪನವರ ೩ಲನೇ ಮರಣ ವರ್ಧಂತಿಯನ್ನು ಇದೇ ತಿಂಗಳ ತಾ ೧೮ನೇ ಬುಧವಾರ ಸಾಯಂಕಾಲ ೬ ಗಂಟೆಕ್ಕೆ ಮಂಗಳೂರ ಬ್ರಹ್ಮ ಮಂದಿರದಲ್ಲಿ ಸಮಾಜದ ಸದಸ್ಯರೂ ಹಿತಚಿಂತಕರೂ ಕೂಡಿ ಬಹಳ ವಿಜೃಂಭಣೆಯಿಂದ ಆಚರಿಸಿದರು. ರಾ| ಶ್ರೀಯುತ ಉಳ್ಳಾಲ ರಘುನಾಥಯ್ಯನವರು ಅಗ್ರಾಸನವನ್ನು ಅಲಂಕರಿಸಿದ್ದರು ದೇವತಾ ಸ್ತೋತ್ರವಾದ ಬಳಿಕ ಅಧ್ಯಕ್ಷರು ಸಭೆಯ ಉದ್ದೇಶವನ್ನು ತಿಳಿಸಿ ಮ| ರಾ| ಕು ರಂಗರಾಯರನ್ನೂ ರಾ| ಯಂ ಬಾಬು ಬಿ ಎ ಯಲ್ ಟಿಯವರನ್ನೂ ಅರಸಪ್ಪನವರ ಜನ್ಮಚರಿತ್ರೆಯಲ್ಲಿ ಪ್ರಾಮುಖ್ಯವಾದ ಕೆಲವು ಮಾತುಗಳನ್ನು ಸಭೆಗೆ ತಿಳಿಸಲು ಅಪೇಕ್ಷಿಸಿದ ಮೇರೆಗೆ ರಾ| ರಂಗರಾಯರು ವರ್ಧಂತಿಯನ್ನು ಆಚರಿಸುವದರಿಂದುಂಟಾಗುವ ಮುಖ್ಯ ಪ್ರಯೋಜನವು ಅಂಥಾ ಮಹಾ ಪುರುಷನು ತನ್ನ ಜೀವನವನ್ನು ಪರರಿಗೆ ಹ್ಯಾಗೆ ಆದರ್ಶವಾಗಿ ಮಾಡಿರುವನೋ ತದ್ರೀತಿ ಈ ಉತ್ಸವವನ್ನು ಆಚರಿಸಲು ಇಲ್ಲಿ ಕೂಡಿ ಬಂದವರೂ ನಡಕೊಳ್ಳಬೇಕಲ್ಲದೆ ನಾವು ಸದಾ ಅಂಥಾ ಉತ್ತಮ ಹೃದಯದಿಂದ ಪ್ರೇರಿಸಲ್ಪಟ್ಟವರು ಎಂಬದನ್ನು ನಮ್ಮ ನಮ್ರಭಾವ, ಪರೋಪಕಾರ ಬುದ್ಧಿ, ವಿಶ್ವಾಸ ಇವೇ ಮೊದಲಾದ ಸದ್ಗುಣಗಳಿಂದ ಪರರಿಗೆ ತೋರಿಸಬೇಕೆಂದು ಸಭಿಕರೆಲ್ಲರಿಗೆ ಮುಖ್ಯವಾಗಿ ಮೆಂಬರರಿಗೆ ಮುಂದಕ್ಕಾಗುವಂತೆ ಆಲೋಚನಾ ಮಾತುಗಳಿಂದ ವಿವರಿಸಿದರು. ಮತ್ತು ಹೀಗೆ ನಮ್ಮ [illegible] ನಡಕೊಂಡರೆ ನಾವು [illegible] ಅಂಥಾ [illegible] ಎಂದು ಹೇಳಬಹುದಲ್ಲದೆ [illegible] ನಮ್ಮ [illegible] ಉಪಕಾರದಿಂದ [illegible] ಇಲ್ಲವೆಂದೂ ತಿಳಿಸಿದರು, ರಾ| [illegible] ತಮ್ಮ ಸ್ವಭಾವಿಕವಾದ ಮತ್ತು ಅರ್ಥಗರ್ಭಿತವಾದ [illegible] ದಿಂದ ಕೀರ್ತಿಶೇಷ ಅರಸಪ್ಪನವರ [illegible] ವನ್ನೂ, ದೇವಭಕ್ತಿಯನ್ನೂ, ತ್ಯಾಗಬುದ್ಧಿಯನ್ನೂ, ತನ್ನ ಬಂಧು ಬಾಂಧವರ ದುರ್ಗತಿ ಸ್ಥಿತಿಯನ್ನು ಮೇಲ್ಮೆಗೆ ತರಲು ಮಾಡಿದ ಶತಃಪ್ರಯತ್ನವನ್ನೂ ಸಮಂಜಸವಾಗಿ ಹೇಳಿ ಭೂತಾರಾಧನೆ ಮೂರ್ತಿ ಪೂಜೆಯ ಬಲೆಯಿಂದ ತನ್ನವರನ್ನು ಬಿಡಿಸಿ ಶಾಶ್ವತ ಕೀರ್ತಿಗೆ ಪಾತ್ರರಾಗಿ ಆ ಮೂಲಕ ನಮ್ಮ ಜ್ಞಾಪಕದಲ್ಲಿ ಇವರು ಸದಾ ಇರುವ ಹಾಗೆ ಮಾಡಿರುವರಲ್ಲದೆ ತನ್ನ ಈ ಕರ್ತವ್ಯವನ್ನು ನೆರವೇರಿಸುವಲ್ಲಿ ಯಾವ ವಿಘ್ನ ಆತಂಕಗಳು ಬಂದರೂ ತಾನು ಎದೆಗುಂದದೆ ತನ್ನ ಸರ್ವ ತನುಮನಧನವನ್ನು ಅರ್ಪಿಸಿ ಮರಣಾಂತಿಕ ಸಮಯದಲ್ಲಿ "ನಾನು ನಟ್ಟ ಈ ಧರ್ಮ ಸಸಿಯು ಮೊಳಕೆಯಾಗಿ ಕಾಲ ಕ್ರಮೇಣ ದೊಡ್ಡ ಮರವಾಗಿ ಇದರ ಆಶ್ರಯದಲ್ಲಿ ಸಂಸಾರ ಯಾತ್ರೆಯಲ್ಲಿ ಬಳಲಿ ಬೆಂಡಾಗಿ ಬಂದಂಥಾ ಜನರಿಗೆ ನಿತ್ಯ ಜೀವನ ಆತ್ಮಶಾಂತಿ ಸಮಾಧಾನಗಳು ಸಿಕ್ಕುವದರಲ್ಲಿ ಏನೂ ಅನುಮಾನವಿಲ್ಲ" ಎಂಬ ಈ ಆಶೆಯು ಅವರಲ್ಲಿ ಉಂಟಾಗಿತ್ತೆಂದೂ, ಅವರ ಈ ಉತ್ತಮ ಆಶೆಯು ಕಾರ್ಯರೂಪಕ್ಕೆ ಬರುವ ಸಮಯ ನಿಶ್ಚಯವಾಗಿ ಬರುವದು ಎಂದು ತನಗೆ ದೃಢವಾಗಿ ನಂಬಿಕೆ ಇರುವದೆಂದೂ ತಿಳಿಸಿ ಕೂತೊಡನೆಯೇ ಅಧ್ಯಕ್ಷರು ಕಾಲೋಚಿತ ಕೆಲವು ಮಾತುಗಳನ್ನಾಡಿ ಮೃತರ ಆತ್ಮಕ್ಕೆ ನಿತ್ಯಶಾಂತಿ ಸಿಕ್ಕಲೆಂದು ದೇವರನ್ನು ಪ್ರಾರ್ಥಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ರಾವ್ ಸಾಹೇಬ್ ಡಾಕ್ಟರ್ ಪಿ. ವರ್ಗೀಸರವರು ಮಂಗಳೂರು ಮುನ್ಸಿಪಾಲಿಟಿಯ ಕೌನ್ಸಿಲು ಮೆಂಬರರಾಗಿ ನೇಮಿಸಲ್ಪಟ್ಟಿರುತ್ತಾರೆ

ಕೊಡಿಯಾಲ ಬೈಲ ವಾರ್ಡಿನ ಮುನಿಸಿಪಲ್ ಕೌನ್ಸಿಲಿನ ಮೆಂಬರು ತನಕ್ಕೆ ಮೆ| ಡಾಕ್ಟರ್ ಎಲ್. ಪಿ. ಫೆರ್ನಾಂಡಿಸರೂ ಮ| ರಾ| ರಾ| ಅತ್ತಾವರ ರಾಮರಾಯರೂ ಉಮೇದ್ವಾರರಾಗಿ ನಿಂತಿರುವರು. ಚುನಾವಣೆಯು ಬರುವ ದಶಂಬರ ತಾ. ೧೨ರಲ್ಲು ನಡೆಯುವದು.

ದಕ್ಷಿಣ ಕನ್ನಡಾ ಜಿಲ್ಲೆಯ ಡೆಪ್ಯುಟಿ ಪೋಲಿಸ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟ ಮ| ರಾ| ಎಮ್. ಗೋವಿಂದನ್ ನಾಯರರು ತಲಚೇರಿಯ ಡೆಪ್ಯುಟಿ ಪೋಲಿಸ್ ಸುಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿದ್ದಾರೆ

ಕಳೆದ ವಾರ ಇಲ್ಲಿಯ ಬ್ರಹ್ಮ ಮಂದಿರದಲ್ಲಿ ಸಮಾಜದ ಲೆಕ್ಕದಲ್ಲಿ ೧೬ ಮುಡಿ ಅಕ್ಕಿ ಮತ್ತು ೭೬ ಸೀರೆಗಳನ್ನು ದಾನ ಮಾಡಿರುವರು

ಡೆಪ್ಯುಟಿ ಪೋಲಿಸ್ ಇನ್ಸ್‌ಪೆಕ್ಟರ್ ಜನರಲರಾದ ಮೆ| ಸಿ. ಡಿ. ಜೆ ಕಾರ್ಮಿಖಿಯೇಲ್ ದೊರೆಗಳು ಇಲ್ಲಿಯ ಟೌನ್ ಪೋಲಿಸ್ ಸ್ಟೇಶನನ್ನು ಸಂದರ್ಶಿಸಿ ಕೊಯಮುತ್ತೂರಿಗೆ ಹೋಗಿರುವರು

ಇಲ್ಲಿಯ ಮುನ್ಸಿಪಾಲ್ ಚೆಯರ್ಮನರಾದ ದಿವಾನ್‌ಬಹದ್ದೂರ್ ಎಮ್. ಬಂಗೇರರ ಮಗ ಡಾಕ್ಟರ್ ಎಮ್. ಎಲ್. ಬಂಗೇರರಿಗೆ ಲಂಡನಿನಲ್ಲಿ ಕೆಲಸ ದೊರಕಿದ್ದರಿಂದ ಇದೇ ತಾ. ೨೪ರಲ್ಲು ಇಲ್ಲಿಂದ ಹೊರಟಿರುವರು ತಾ| ೨೮ರಲ್ಲು ಇವರು ಮುಂಬಾಯಿಯಲ್ಲಿ ಹಡಗ ಹತ್ತಿ ಸೀಮೆಗೆ ಪಯಣ ಬೆಳಸುವರು.

ಇದೇ ತಾ ೨೯ನೇ ಆದಿತ್ಯವಾರ ಮಂಗಳೂರು ಮಹಿಳಾ ಸಭೆಯಲ್ಲಿ ಡಿಸ್ಟ್ರಿಕ್ಟ್ ಮುನ್ಸಿಫರಾದ ಮ| ರಾ| ಎಸ್. ವೆಂಕಟಸುಬ್ಬರಾವ್ ಬಿ. ಎ. ಬಿ. ಎಲ್‌ರವರು "ಹೆಂಗಸರ ಹಂಗು" ಎಂಬದರ ಮೇಲೆ ಒಂದು ಭಾಷಣ ಕೊಡುವರು.

ಇಲ್ಲಿಯ ಮದ್ರಾಸ್ ಬೇಂಕ್ ಏಜಂಟರಾದ ಮ| ಗ್ರೆಹಾಮ್ ದೊರೆಗಳಿಗೆ ಮದ್ರಾಸಿಗೆ ವರ್ಗವಾಗಿರುವದರಿಂದ ಅವರ ಬದಲಿಗೆ ಮೆ ಸಿ ಡೇವಿಸ್ ದೊರೆಗಳು ಬಂದಿರುತ್ತಾರೆ.

ಇಲ್ಲಿಯ ಪೋಲಿಸ್ ಸ್ಟೇಶನ್ ದಾಕ್ತರರಾಗಿದ್ದು ಹಂಗರಕಟ್ಟೆಗೆ ವರ್ಗಾಯಿಸಲ್ಪಟ್ಟ ಡಾಕ್ಟರ್ ನರಸಪ್ಪಯ್ಯನವರಿಗೆ ಪುನಃ ಇಲ್ಲಿಯ ಪೋರ್ಟ ಆಫೀಸಿಗೆ ಸ್ಟೀಮರ್ ಡ್ಯೂಟಿಯ ಮೇಲೆ ವರ್ಗವಾಗಿರುವದು.

ಇಲ್ಲಿ ಕಳೆದ ವಾರ ನಡೆದ ಜಿಮ್ಖಾನದಲ್ಲಿ ಕ್ರಿಕೆಟ್ ಸೀನಿಯರ್ ಕಪ್ ಮತ್ತು ಕೊರನೇಶನ್ ಕಪ್ ಗವರ್ನಮೆಂಟ್ ಕಾಲೇಜಿನವರೂ, ಕ್ರಿಕೆಟ್ ಜೂನಿಯರ್ ಕಪ್ಪನ್ನು ಸೆಂಟ್ ಅಲೋಸಿಯಸ್ ಕಾಲೇಜಿನವರೂ ಪಡಕೊಂಡರು. ಆಟಗಳಲ್ಲಿ ಸೀನಿಯರ್ ಮತ್ತು ಜೂನಿಯರ್ ಕಪ್ಪನ್ನು ಸೆಂಟ್ ಅಲೋಸಿಯಸ್ ಕಾಲೇಜಿನವರೇ ಪಡಕೊಂಡಿರುವರು.

ಕುಂದಾಪುರ [illegible] ಕಲೆಕ್ಟರರವರ ದಶಂಬರ [illegible] ಕ್ರಮದ [illegible] ಯಾಗಿರುತ್ತದೆ. ದಶಂಬರ ತಾ. [illegible] ಕುಂದಾಪುರ, ತಾ. [illegible] ಉಡುಪಿ, ತಾ. [illegible] ಕುಂದಾಪುರ, [illegible] ಶಂಕರನಾರಾಯಣ, [illegible]

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು.

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತವೆ ಬಾಟ್ಲಿ ಒಂದರ ಕಿಮ್ಮತು ಆಣೆ 8 ಡಜನ್ 1ಕ್ಕೆ ರೂ 5 0 0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು **ಹಲವು ಛಾಪೆಗಳುಳ್ಳ** ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ **ಹೋಗುವದು ಇದರಿಂದ ಉರಿಯು** ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು **ಮಿಲಿಯ ಡಬ್ಬಿಗಳು ಮಾರಲ್ಪಟ್ಟವು** ರಾಜಾರಾಣಿ ಟ್ರೇಡ್‌ಮಾರ್ಕ 0—6—0 **3 ಡಬ್ಬಿಗಳಿಗೆ 0—15—0.** ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ **ತಿಕ್ಕುವದರಿಂದ** ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ **ಹಲವು** ನಮುನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ **1ಕ್ಕೆ 0—2—6.** ಡಜನ್ 1ಕ್ಕೆ 1—2—0 ವಿ. ಪಿ. ಪ್ರತ್ಯೇಕ

ಸುಂದರಿ ಮುಲಾಮು.

ಮುಖ ಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು ಡಬ್ಬಿ **1ಕ್ಕೆ ರೂ. 0—8—0.**

ಮೋಹಿನಿ ತೈಲ.

ಈಗ ಹಲವು ನಮೂನೆಯ **ತೈಲಗಳು ಉಪಯೋಗಿಸಿದವರು ಈ ನಮ್ಮ** ಸುಗಂಧಮಯವಾದ **ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ.** ಇದರಲ್ಲಿ **ಹ್ವೈಟ್** ಒಯಿಲ್ ಇಲ್ಲಾ. ಇದು **ಗಿಡಮೂಲಿಕೆಗಳಿಂದಲೂ, ಬದಾಮಿನ** ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ **ಕೂದಲುಗಳು ಉದ್ದವಾಗಿಯೂ,** ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ದರ ರೂ 1—0—0

ಕೆ ನಟರಾಜನ್ ಎಡಿಟ್, ಇಂಡಿಯನ್ ಸೋಷಿಯಲ್ ರಿಫ್ಹೊರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸವೆಲ್, ವೈನಾಡ:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತವೆ

ಆರ್. ಆರ್ ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ

ಡಾಕ್ಟರ್ ದಾಂಡೆಕರ್, ಎಲ್. ಎಮ್. ಎಂಡ್ ಎಸ್:— ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ **ಡಿಪೋ ಮುಂಬಯಿ** ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, **ಬೇಕಾದವರು** ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ — ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಶಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೋ,

9 ಜಹಂಗೀರ್ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು.

109 ಫ್ರೇಯರ್ ರೋಡ, ಮುಂಬಯಿ

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿಸ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ 1—12—0

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ

ಉತ್ಕೃಷ್ಟವಾದ ಮೂರು ಔಷಧಗಳು.

ಗ್ರಾಂಟ್ ಮೆಡಿಕಲ್ ಕಾಲೇಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಸಿಲೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳು.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1.

(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನ್ನು ಹೋಗಲಾಡಿಸುವುದಕ್ಕೆ ಏಕರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವುವು ಅನೇಕ ಕಾಲದವರೆಗೆ ಪುಷ್ಪವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು ಈ ತರದ ವ್ಯಾಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ರೋಗಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು ಒಂದು ಶೀಸೆಯ ಕ್ರಯ ರೂ. 1 ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2

(ಬಿಳೀ ಸ್ರಾವದ ಬಗ್ಗೆ)

ಈ ಬಾಧೆಯಿಂದ ಸ್ತ್ರೀಯರು ವಿರಹಿತರಾದ ಬಹಳ ವಿರಳ ಈ ಸ್ರಾವದಿಂದ ಹೆಚ್ಚಿನ ನಿರ್ಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ. ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾಗದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು — ಒಂದು ಪೊಟ್ಟಣವನ್ನು ಪರೀಕ್ಷೆಗಾಗಿ ತರಿಸಿದರೆ ಆಶ್ಚರ್ಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಶೀಸೆಯ ಕ್ರಯ 1 ರೂಪಾ. ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3.

(ಕೆಂಪು ಸ್ರಾವದ ಬಗ್ಗೆ.)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು. ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದುವುಗಳು ಉಂಟಾಗಿ, ಗರ್ಭಕೋಶದ ಶಕ್ತಿ, ನಿರ್ಬಲತೆ ಕಳೆದೋಗುವುವು. ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತವೇ ಸರಿ. ಈ ಗುಳಿಗೆಗಳನ್ನು ಕೂಡಲೆ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ, ಈ ಪೀಡೆಯು ಅಧಿಕವಾಗಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಶೀಸೆಯ ಕ್ರಯ 1 ರೂಪಾ. ಅಂಚೆ ಹಾಸಲು 4 ಆಣೆ.

Dr. Nava Ratna & Sons,
253 Kalbadevi Road,
BOMBAY. 2.

ಏಜೆಂಟರು:— ದಿ ಯೂನಿಯನ್ ಫಾರ್ಮಸಿ, ಚಿಂತಾಮಣಿ... ಮಂಗಳೂರು... [illegible]

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿ ಯ್ಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಸಿದ್ಧ ಮಕರಧ್ವಜ: — ಇದು ಹಿಂದು ವೈದ್ಯಶಾಸ್ತ್ರದಲ್ಲೆಲ್ಲಾ ಅತಿ ಬಲವತ್ತರವಾದದ್ದು. ನಮ್ಮ ಸಿದ್ಧಮಕರಧ್ವಜವು ಎಲ್ಲಾ ವಿಧದ ಜ್ವರಗಳನ್ನು, ಅಗ್ನಿಮಾಂದ್ಯದಿಂದುಂಟಾಗತಕ್ಕ ಅಜೀರ್ಣ ಮುಂತಾದ ರೋಗಗಳನ್ನು, ನರಗಳ ದುರ್ಬಲತೆಗೆ ಸಂಬಂಧಪಟ್ಟ ಪರಿಣಾಮಗಳನ್ನು ಗುಣಪಡಿಸುತ್ತದೆ. ಇದಲ್ಲದೆ ಶ್ವಾಸಕೋಶಗಳಲ್ಲುಂಟಾಗತಕ್ಕ ಬಾಧೆಗಳನ್ನು ನಿವರ್ತಿಮಾಡಿ, ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ವಿಶೇಷ ಹೇಳಿ ಪ್ರಯೋಜನವೇನು? ಮೊತ್ತಕ್ಕೆ ನಮ್ಮ ಮಕರಧ್ವಜವೆಂಬ ವಜ್ರಾಯುಧಕ್ಕೆ ಬಗ್ಗದ ವ್ಯಾಧಿಯು ಪ್ರಪಂಚದಲ್ಲಿಯೇ ಇಲ್ಲ. ನೋಡಿರಿ, ಎಣೆಯಿಲ್ಲದ ಈ ಸಿದ್ಧಮಕರಧ್ವಜವನ್ನು ಉಪಯೋಗಿಸಿದ್ದೇ ಆದರೆ ನಿಮ್ಮ ಶತಮಾನಪೂರ್ತಿ ಶಾಂತಿ ಸೇಚನ ಮಹೋತ್ಸವದಲ್ಲಿ (ನೂರು ವರ್ಷಕ್ಕೆ ಮಾಡಿಕೊಳ್ಳುವ ಶಾಂತಿಯಲ್ಲಿ) ಕೂಡ ನಿಮ್ಮ ಪುರುಷಶಕ್ತಿಯೂ, ಪ್ರಾಯದ ಉನ್ಮತ್ತವೂ ಕೆಡುವುದಿಲ್ಲ. ಇದರ ಬೆಲೆ ತೊಲೆ 1ಕ್ಕೆ 20 ರೂಪಾಯಿ. ಒಂದು ವಾರಕ್ಕೆ ಬೇಕಾಗುವ ಔಷಧಕ್ಕೆ 3 ರೂಪಾಯಿ. ವಿ ಪಿ ಚಾರ್ಜು ಪ್ರತ್ಯೇಕವು

ವಾಯುಸಂಹಾರಿ: ಈ ಔಷಧದಿಂದ ದೇಹದಲ್ಲಿ ಉಂಟಾಗತಕ್ಕ ಕಾಲು ಕೈ ಕೀಲು ಹಿಡಿತ, ಪಕ್ಷವಾತ, ಸೂಲಿ, ತಿಮಿರವಾತ, ತಲೆನೋವು ಪಾರ್ಶ್ವವಾತವು ಸಕಲ ವಿಧ ವಾತಗಳು ಮಲಬಕಟ್ಟಿರುವಿಕೆ ಗುಣವಾಗುವದು. ಡಬ್ಬಿ 1ಕ್ಕೆ 1 ರೂಪಾಯಿ. 1ರಿಂದ 6 ಡಬ್ಬಿಗಳ ವರೆಗೆ ವಿ. ಪಿ. ಚಾರ್ಜು ೫ ಆಣೆ.

ಕಲರಾವಿಧ್ವಂಸಿನಿ: ಈ ಭಯಂಕರವಾದ ಕಲರಾ ರೋಗವನ್ನು ಖಂಡಿತವಾಗಿಯೂ ಸಂಪೂರ್ಣ ಗುಣ ಪಡಿಸುವ ಖಾತ್ರಿಯಾದ ಮದ್ದು ಡಬ್ಬಿ 1ಕ್ಕೆ 1 ರೂಪಾಯಿ. ವಿ. ಪಿ. ಚಾರ್ಜ 1ರಿಂದ 6 ಡಬ್ಬಿಗಳ ವರೆಗೂ ೫ ಆಣೆ.

ಮಲಬಂಧ ಭಂಜನಿ: — ಆಗಿಂದಾಗ್ಗೆ ಉಂಟಾಗತಕ್ಕ ಮತ್ತು ಬಹಳ ದಿವಸಗಳಿಂದ ವಾಡಿಕೆಯಲ್ಲಿರುವ ಮಲಬದ್ಧತೆಯನ್ನು ಸಂಪೂರ್ಣ ಗುಣಪಡಿಸುವುದರಲ್ಲಿ ಇದು ಸರ್ವೋತ್ಕೃಷ್ಟವಾದ ಔಷಧವು. ಅಚೇತನವಾದ ಕಾಳಜಿವನ್ನು (ಲಿವರ್) ಬಲಪಡಿಸಿ ಸ್ವಭಾವವಾಗಿ ಎಷ್ಟಾಗ ಬೇಕೋ ಅಷ್ಟು ಸ್ವಚ್ಛ ಪಿತ್ತ ನೀರನ್ನು ವಿಸರ್ಜನೆ ಮಾಡಿಸಿ ಹೊಟ್ಟೆಯ ಭಾರವನ್ನು ನೀಗಿ ಹಗುರ ಮಾಡುತ್ತದೆ. ಮತ್ತು ಅಗ್ನಿ ಮಾಂದ್ಯದಿಂದುಂಟಾಗತಕ್ಕ ಎಲ್ಲಾ ರೋಗಗಳನ್ನು ನಾಶಮಾಡಿ ಕರುಳುಗಳನ್ನು ಸಹಜ ಸ್ಥಿತಿಗೆ ತಂದು ದೇಹವು ಬಹು ಆರೋಗ್ಯ ಸ್ಥಿತಿಯಲ್ಲಿರುವಂತೆ ಮಾಡುತ್ತದೆ. ಕ್ರಯ ಡಬ್ಬಿ 1ಕ್ಕೆ 10 ಆಣೆ ವಿ. ಪಿ. ಚಾರ್ಜು 1ರಿಂದ 3 ಡಬ್ಬಿಗಳ ವರೆಗೂ ೫ ಆಣೆ.

ಚಂದ್ರಾಮೃತ ರಸ: — ಎಷ್ಟೇ ಕಠಿಣ ತರವಾದ ನೆಗಡಿ ಕೆಮ್ಮು ಶ್ಲೇಷ್ಮ ಕ್ಷಯವಾದರೂ ಸರಿ ಈ ನಮ್ಮ ಚಂದ್ರಾಮೃತ ರಸವು ಬಹು ತೀವ್ರದಲ್ಲಿ ಗುಣ ಪಡಿಸುತ್ತದೆ ಸಾಧಾರಣವಾದ ಕೆಮ್ಮು ನೆಗಡಿ ಒಂದೇ ಹೊತ್ತಿಗೆ ಗುಣ ಕಂಡು ಬರುವುದು. ಇದು ಜೀರ್ಣ ಶಕ್ತಿಯನ್ನು ಹೆಚ್ಚಿಸುವುದು ಶಕ್ತಿವರ್ಧಕವಾದ ಸೊಗಸಾದ ಟಾನಿಕ್ ಆಗಿರುತ್ತದೆ. ಕ್ರಯ ಡಬ್ಬಿ 1ಕ್ಕೆ 1 ರೂಪಾಯಿ. ವಿ. ಪಿ. ಚಾರ್ಜು 1ರಿಂದ 3 ಡಬ್ಬಿಗಳ ವರೆಗೂ ೫ ಆಣೆ.

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪುಟವಾಗಿ ತಿಳಿಯುವ ವರೆಗೆ ಬರೆಯಬೇಕು

MY ADDRESS.	ನಮ್ಮ ವಿಳಾಸ:—
P. SUBBAROY,	ಪಿ. ಸುಬ್ಬರಾಯ,
Ayurvedic Pharmacy,	ಆಯುರ್ವೇದ ಔಷಧಶಾಲಾ,
Sri Parumalkoil,	[illegible]
SAMMATHY, TANJORE.	[illegible]

Canarese Novels Etc.

ಕನ್ನಡ ಪುಸ್ತಕಗಳು.

ಮ| ರಾ| ರಾ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.		ರೂ. ಆ.
ಬಂಗವಿಜೇತ ಹೊಸ ನಾವಿಲ್	1—4	ಕಮಲಾ ಕಾಂತ ದ್ವಿ. ಮು	0—2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4	ಲೀಲೆ [ಸಮಾಜ ಚಿತ್ರ]	0—4
ರಾಜಸಿಂಹ ಡಿಟೊ 2ನೇ ಭಾಗ	1—8	ಮಾಲತಿ [ಅತಿ ಮನೋಹರ] ದ್ವಿ. ಮು.	0—[illegible]
ರಾಜಪುತ್ರ (ಇತಿಹಾಸ)	1—8	ರಾಧಾರಾಣಿ [ಕಾದಂಬರಿ] ತೃ. ಮು	0—3
ವಿಷವೃಕ್ಷ ದ್ವಿ. ಮು.	1—4	ಯುಗಳಾಂಗುಳೀಯ ,,	0—3
ದೇವೀ ಚೌಧುರಾಣಿ-ಡಿಟೊ	1—4	ಭ್ರಾಂತಿವಿಲಾಸ ,	1—[illegible]
ರಾಜಸಿಂಹ-(ಇತಿಹಾಸ)	1—5	ಸೌಂದರ್ಯ [ಸ್ತ್ರೀನೀತಿ]	0—2
ಕಪಾಲಕುಂಡಲ	0 13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0—[illegible]
ಮೃಣಾಲಿನಿ ಡಿಟೊ 2ನೇ ಭಾಗ	1—1	ವೈಜ್ಞಾನಿಕ ಪ್ರಹಸನ [ನಕಲಿ]	0—4
ಕೃಷ್ಣಕಾಂತನ ಉಯಿಲು	1—0	ಚಿಂತ್ಯನಾಟಕರತ್ನ ಡಿಟೊ	0—7
ಮನೋಹರಮ [ಪತ್ತೇದಾರಿ ಕಥೆ]	1—0	ಚಿತ್ರವಿಚಿತ್ರಾವಳಿ [Tit Bits]	0—[illegible]
ಅರಿಮಳ ಡಿಟೊ-ದ್ವಿ. ಮು	0.10	ನೀರದೆ [ಹೊಸ ಕಾದಂಬರಿ]	0—8
ಸಾಧನೆ. ಡಿಟೊ	0—8	ಭಾನುಮತಿ [ಸ್ತ್ರೀನೀತಿ]	0—[illegible]
ಚಿತೋಡಿನೂರು [ಇತಿಹಾಸ]	0 12	ಅಮೃತಪುಳಿನ [ನಾವಿಲ್]	0 11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0—3	ಇತ್ಯಾದಿ	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ ತಾರ್[illegible] ಚಿತ್ರಿಸಲ್ಪಟ್ಟು ಚಿತ್ರಯುಕ್ತವಾ ಅಚ್ಚಾಗಿರುತ್ತೆ ಮೂರ್ತಿ ಬಹು ಸುಂದರ ಮನೋರಂಜಕ ಬಣ್ಣ'' ಪೂಜಾರ್ಹವಾಗಿದೆ'' ಬೆಲೆ 1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ ಬೆಲೆ ಕಡ್ಮೆ ಮಾಡಿದೆ

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು

	ರೂ ಆ		ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ ಮು	0—5	ಸಿಭಾಗ್ಯ [illegible] [ಹೊಸ ಕಾದಂಬರಿ]	[illegible]
ಕ. ಕವಿಚರಿತೆ [ಪೂರ್ವಭಾಗ]	3—2	ಅನಂಗಸಂದರಿ ಡಿಟೊ	0—8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0 10	[illegible] ಡಿಟೊ	0—8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6	ರಾಧಾ ಮಾಧವಿ ಡಿಟೊ	0—8
ಕಲಾನಾಥ ಡಿಟೊ	0—8	ಸ್ತ್ರೀಧರ್ಮನೀತಿ [ಚಿತ್ರಸಹಿತ]	0—8
ಶೋಭನೆ [ಬಂಗಾಳಿ ನಾವಿಲ್]	0.12	ಪರುಷೈಶ್ವರ್ಯ ಡಿಟೊ ದ್ವಿ ಮು	0 [illegible]
ಯಾಮಿನಿ [ಬಂಗಾಳೀ ನಾವಿಲ್]	0—3	ಧರ್ಮಸಮೇತ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0—8	[illegible]	4 [illegible]
ದೇವಧಾರಿಣಿಯಾದ ಸನ್ಯಾಸಿನಿ ಡಿಟೊ	0—8	[illegible] ಡಿಟೊ	1 [illegible]
ಸನ್ಯಾಸಿ [ಹೊಸ ಕಾದಂಬರಿ]	0—6	[illegible]	0 [illegible]
ಮೃಚ್ಛಕಟ ಪರೀಕ್ಷೆ ಡಿಟೊ	0—2	ಸರ್ವೇಶ್ವರ [illegible]	0—[illegible]
ಬೃಂದಾವನ ಡಿಟೊ	0—2	ನ್ಯಾಯ [illegible] [ಲಾ]	1—[illegible]
ಕುಮುದಿನೀರಮ ಡಿಟೊ	0—2	[illegible] [ಲಾ]	3—0
ಮಾಲಿನಿ ಡಿಟೊ	0—2	ಶಾಕುಂತಲ ನಾಟಕ ದ್ವಿ ಮು	0—9
ಪ್ರೇಮಪಿಪಾಸೆ ಡಿಟೊ	0—2	[illegible] ನಾಟಕ ಡಿಟೊ	1—
ವಿಂಕ್ತಳಾದ ಸೌದಾಮಿನಿ ಡಿಟೊ	0—5	ಚಂದ್ರಹಾಸ ನಾಟಕ ಡಿಟೊ	0 12
ಚಿತ್ರಕಳಾವತಿ ಡಿಟೊ	0—2	ರಾಮವರ್ಮ ಲೀಲಾವತೀ ನಾಟಕ	0—[illegible]
ಚಾತುರ್ಯವತಿ ಡಿಟೊ	0—2	[illegible] ನಾಟಕ	0 10
ವಸುಮತಿ ಡಿಟೊ	0—2	ಚಂಡೀಮದನ ದರ್ಪ ನಾಟಕ	0—5
ವಿಲಕ್ಷಣಶಿಕ್ಷಾ ಡಿಟೊ	0—2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0—2	ಛತ್ರಪತಿ ನಿರ್ವಾಣ ನಾಟಕ	0—3
ಭಾನುಮತಿ ಡಿಟೊ	0—2	[illegible] [ನಾಟಕ]	0 1[illegible]
ಸತೀರೋಹಿಣಿ ಡಿಟೊ	0—2	ಧ್ರುವವಿಜಯ [ನಾಟಕ]	0—4
ಸಂತಾಪಶ	0—4	ಸೀತಾಪರಿಣಯ ನಾಟಕ	0—4
ಚಂದ್ರಮತಿ [ಸ್ತ್ರೀನೀತಿ]	0—6	ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—

ಎಸ್. ಟಿ. ಎ. ಬೆಂಗಳೂರು ಸಿಟಿ.

"ಶ್ರೀ ಬಸವರಾಜೇಂದ್ರವಿಜಯ."

ಪ್ರಸಿದ್ಧವಾದ ಬಸವಪುರಾಣದ ಸಾರಭೂತವಾದ ವಚನಗ್ರಂಥ. ಸುಂದರವಾದ ಮಾತುಗಳು, ಸುಲಭವಾದ ಸರಣಿ, ಭಕ್ತಿರಸ ಪ್ರಧಾನವಾದ ಕಥೆಗಳು, ಶಿವಶರಣರ ಲೀಲೆಗಳು, ವೀರಶೈವಮತದ ತತ್ವಗಳೂ ಸಹ ಅಡಕವಾಗಿರುವುವು. ಮಕ್ಕಳಿಗೂ ಅರ್ಥವಾಗುವಂತಹ ಮೃದುವಾದ ಮಾತುಗಳಿಂದ ಒಡೆಯಲ್ಪಟ್ಟಿದೆ. ಲಿಂಗಾಂಗಿಗಳಾದವರೆಲ್ಲರೂ ಇದನ್ನು ಓದದೆ ಅರಿಸಿ ತಮ್ಮ ಮತಧರ್ಮವನ್ನರಿತು ಧನ್ಯರಾಗುವರೆಂದು ನಂಬಿರುತ್ತೇವೆ ಬೆಲೆ ಸುಲಭ. 0—12—0. ದಪ್ಪ ಕಾಗದ. ಸ್ಫುಟವಾದ ಮುದ್ರಣ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ.

ದಾರಣೆ ಸುಲಭ! **ಅಲಿಗರ್ ಬೀಗಗಳು.** ದಾರಣೆ ಸುಲಭ!

ಭದ್ರವಾಗಿಯೂ, ಬಲವಾಗಿಯೂ ಇರುವುದು ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ ನೋಡುವುದಕ್ಕೆ ಅಂದವಾಗಿಯೂ ಇರುವುದು ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ	1	2	3	4	5
	0—12—0	0—15—0	1—4—0	1—10—0	....

ಆರು ಚಕ್ರಗಳಿರುವ ಬೀಗಗಳು

1—2—0 1—8—0 2—4—0 3—0—0 3—8—0

ಪಿತ್ತಳೆ ಬೀಗಗಳು

0—4—0 0—5—0 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಬಿಗ್ಗಿರುವ ಬೀಗ ಒಕ್ಕೆ 0—13—0

[illegible] ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ ಹಾಸಲು ಪ್ರತ್ಯೇಕ.

[illegible] ಪೆಟ್ಟಿಗೆಗಳಿಗೂ ಮೇಜಗಳಿಗೂ, ಬೀರುಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ಒಕ್ಕೆ 1—8—0, 1—12—0

ವಿಳಾಸ — ಎಚ್ ಎಸ್ ರಾವ್ ಅಂಡ್ ಬ್ರದರ್ಸ್

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಲ್ಪ ಬೆಲೆಗೆ ಉತ್ತಮ ಪುಸ್ತಕಗಳು.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಕಡಿಮೆ ಕ್ರಯಕ್ಕೆ ದೊರೆಯುತ್ತವೆ.

ಅಪ್ರೂವ್ಡ್ ಪುಸ್ತಕಗಳು

ಎಲ್ಲರಿಗೂ ಇದೇ ಬೇಕಾದ್ದು. ಜಮಾ ಖರ್ಚಿನ ಪದ್ಧತಿ 12 ಆಣೆ. ಮಂಡಿ, ಜೆಲರ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿಸುತ್ತದೆ.

ಇಂಗ್ಲಿಷ್ ಭಾಷಾ ಪ್ರಕಾಶಿಕಾ ಐದು ಭಾಗವು ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ರೂ 1—8—0 ಇದನ್ನು ಗುರುವಿನಂತೆ ಭಾವಿಸಿ

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಪರಿಷ್ಕರಿಸಲ್ಪಟ್ಟಿರುತ್ತೆ ರೂ 3

ಅರ್ಜುನಕೀರ್ತಿ .	0—10—0	ಶುಕಸಪ್ತತಿ	2—0—0
ಹಸನ ದ್ವಿಲಾಸ ...	0—8—0	ಕುಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ ...	1—0—0
ಶಾಕುಂತಲ ನಾಟಕ ...	0—8—0		
ಸ್ತ್ರೀ ಧರ್ಮನೀತಿ ...	0—8—0	ಸುಮತಿ ಮದನ ಕುಮಾರರ ಚರಿತ್ರೆ I ...	0—8—0
ಶೋಭನೆ	0—8—0	II ...	0—7—0
ಚಂದ್ರಕಳಾ	0—4—0		
ಕಲಾನಾಥ	0—6—0	ಶಿವಗೀತೆ	0—6—0
ಶಿವಾನಂದಲಹರಿ ...	0—6—0	ಶಾಕಶಾಸ್ತ್ರ	0—8—0
ಪ್ರಶ್ನೋತ್ತರ ಲೆಖ್ಖಬೋಧಿನಿ	1—4—0	ಸನಾತನಧರ್ಮ ದೀಪಿಕೆ ...	1—0—0
ವಿಷವೃಕ್ಷ	1—4—0	ಬಾಲರಾಮಾಯಣ ...	0—4—0
ದುರ್ಗೇಶ ನಂದಿನಿ ...	1—4—0	ಕಥಾಮಂಜರಿ	0—6—0
ಮುದ್ರಾಮಂಜೂಷ ...	1—8—0		

ದುಷ್ಟ ಚತುಷ್ಟಯ, ನಡಬಲಿ, [illegible] ಯ ಅತ್ಯಾಚಾರ. ಪ್ರತಿಯೊಂದು ಪ್ರತಿಯೂ [illegible]

ವಿಳಾಸ:— ವಿದ್ಯಾಸಾಗರ ಬುಕ್ ಡಿಪೋ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ ಆಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯೂ ಇದನ್ನು ಸೇವಿಸಬಹುದು ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ [illegible] ಬೇಕಾಗುವುದೋ ಆಗ್ಗೆ ಫೋಟರ್ ಬಿರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ ಈ [illegible] ಸುಲಭವಾಗಿರುತ್ತದೆ ಇದು ಎಲ್ಲಾ ಕಡೆಗಳಲಿ ದೊರಕುತ್ತದೆ ಮತ್ತು ಕನ್ನಡ ಬಲ್ಲವರು ಈ ಕೆಳಗೆ ಕಾಣಿಸುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು ಬಾಟ್ಲಿ 1ಕ್ಕೆ 3—4—0 ಅರ್ಧ ಬಾಟ್ಲಿಗೆ 1—1—0

ದಿ ಊಲನ್ ಮಾರ್ಟ್ ಮಂಗಳೂರು,

ದಕ್ಷಿಣ ಕನ್ನಡಾ

ಮರೆಯ ಬ್ಯಾಡಿರಿ. ಮರೆಯ ಬ್ಯಾಡಿರಿ.

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರಿಯುವದು.

ಅಪಾಯ ರೋಮಸಂಹಾರಿ ಈ ಸಾಬೂನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ನಾಶವಾಗುವದ.

[illegible]

[illegible] ಕ್ರಯ ಆಣೆ 14

[illegible]

ವಿಳಾಸ — ವಿ ಎ ಎಸ್. ಪಾಣಿ ಕಂಪೆನಿ.

ನಂ 8 ಇರುಳಪ್ಪನ್ ಬೀದಿ, ಮದರಾಸು

V A S PANI,

No 8 Erulappen Street, Madras

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ

1 [illegible] ಔಷಧ [illegible] ಪೆಟ್ಟಿಗೆ 1ಕ್ಕೆ [illegible]—0—0

2 [illegible] 1ಕ್ಕೆ [illegible]—0—0

3 [illegible] ಬಾಟ್ಲಿ 1ಕ್ಕೆ 0—12—0

4 [illegible] ಬುದ್ಧಿ [illegible] ಬಾಟ 1ಕ್ಕೆ 1—0—0

5 [illegible] 7 [illegible] ದಿವಸಗಳಲಿ [illegible] 4—0—0

6 [illegible] ಅನುಭವಸಿದ್ಧ [illegible]—0—0

7 [illegible] ದಿವಸಗಳಲ್ಲಿ ಪೂರ್ಣ [illegible] ಪೂರ್ಣ ಔಷಧಕ್ಕೆ [illegible]—0—0

ನಮ್ಮ ಡಿಸ್ಪೆನ್ಸರಿಯಲ್ಲಿ [illegible] ಮಾತ್ರೆಗಳು [illegible] ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ [illegible]

ಎಮ್ ವಿ. ಶಂಕರ್, ಉಗ್ರಾಣಕಾರ್, ಮೆನೇಜರ್

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಶ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲ ಚಾರ್ಜ 0—4—0.

Dr Navaratna & Sons,

Kalbadevi Road BOMBAY

ಏಜಂಟರು —ದಿ ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಕೆಲವು ದಿವಸಗಳಲ್ಲಿಯೇ ಪ್ರಕಾಶಿತವಾಗುವುದು ತ್ವರೆಮಾಡಿ ''

ಸಂಗೀತ ಶ್ರೀ ವತ್ಸಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂ. ತಿದ್ದಿ ಬರೆದ ಮತ್ತು ಪರಿವರ್ಧಿತ ಮರಾಠಿ ನಾಟಕವು ಇನ್ನು ಕೆಲವು ದಿವಸಗಳಲ್ಲಿಯೇ ತಯಾರಾಗುವುದು ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು, ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕಜನರು ಈ ಸಂದರ್ಭವನ್ನು ಬಿಡಲಾಗದು ಮುದ್ರಣವು ಅಂದವಾಗಿದೆ! ಬೆಲೆಯು ಬಹಳೇ ಕಡಿಮೆ! ಮಂಗಳೂರಲ್ಲಿಯೇ ಹೆಚ್ಚಿನ ಪ್ರತಿಗಳು ಖರ್ಚಾಗುವ ಸಂಭವವು ಇರುವುದರಿಂದ ಹೊರ ಊರಿನವರು ತ್ವರೆಮಾಡಿರಿ!! ಬೆಲೆ 10 ಆಣೆ. ಟ. ಹಾ 1 ಆಣೆ ಪುಸ್ತಕವು ವಿ ಪಿ ಯಾಗಿ ಕಳುಹಿಸಲಾಗದು.

ಕಲ್ಯಾಣಪುರ ಮಂಗೇಶರಾವ್,

ಡೊಂಗರಕೇರಿ ರಸ್ತೆ, ಮಂಗಳೂರು.

ಬೆಲೆಗೆ [illegible]ಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂವ್ ಸೇಲಂ, ನಾರಾಯಣ [illegible], ಮನ್ನಾರಪೇಟೆ, ಆರ್ನಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊನ್ನಾಡ, ಮಧುರೆ, ಕೊಯಂಬುತ್ತೂರು, ದಿಂಡಿಗಲ್, ವೆಂಕಟಗಿರಿ, ಕೃಷ್ಣಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಷ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಬಂಧಪಟ್ಟ ವಸ್ತುಗಳೆಲ್ಲವು ನಮ್ಮಲ್ಲಿ ಯಾವಾಗಲು ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವರಿಗೆ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು,

ಠಿಕಾಣಿ, ವಿಳಾಸ:—ನರಸಿಂಹ ಲಕ್ಷ್ಮಣಪಾಲ

ರಥಬೀದಿ ಮಂಗಳೂರು ದ. ಕ.

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧ ವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಒಂಮಿಗಳು, ಬಸವನಗರಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ ದ್ವಾರಾ ರವಾನಿಸುವುದು

ಸೀಸೆಯೊಂದರ ಕ್ರಯ ರೂ. 1-0-0, ಅ ವೆ 0 4 0 ಬೇರೆ, 3 ಸೀಸೆಗಳ ಕ್ರಯ ರೂ. 2-10-0, ಅ ವೆ. 0-7-0 ಬೇರೆ.

ಸೂಚನೆ — ಅನೇಕ ದುರ್ನೀತಿಕರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಹೆಸರಿನಿಂದ ತಮಗೆ ಅತ್ಯಲ್ಪ ಸಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುತುವರ್ಜಿ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀವ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲು ಸ್ವರ್ಗೀಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆದುಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಪ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ



ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತು ದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಲಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವ್ಯಸನದಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಸ್ಥಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಆವಶ್ಯಕವಾಗಿರುತ್ತವೆ

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ

ರೋಗಜನ್ಯವಾದ ಸ್ರಾವವನ್ನು ಗರ್ಭಪಾತ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯುತ್ತವೆ ರೋಗದಿಂದ ಮುರಿದು ಹೋದ ಅಥವಾ ಸವೆದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೇಲಾಗಿ ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ, ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ, ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ, ಗತಿಯು ದೃಢವಾಗುತ್ತದೆ ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ, ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4 0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದುತರೀ, ತಾ. ಪಾರಸಾವನೀ, ಪೋ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ, ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—"ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು" ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಟೇಲ್, ಪನವೇಲ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ ಅವನ್ನು ಪುನಃ ರವಾನಿಸಿರಿ"

4 ವಿ ಆರ್, ಜಾಕೆಮ್ಸ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಾಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೆ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು" ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮೂನಜೀ ನರಸಿಂಗರಾವ್, ಸಂಸ್ಥಾನ ಕಲುಟಿನ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು [illegible] ಗುಣವನ್ನು ಹೊಂದಿರುವದರಿಂದ, ಅವುಗಳ [illegible] ಸೀಸೆಗಳನ್ನು [illegible]

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: ದಿ ಊಲನ್ ಮಾರ್ಟ, ಮಂಗಳೂರು ದ. ಕನಡಾ.

ESTABLISHED JULY 1906.

THE CANARA BANK, LIMITED, MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು "	225,000—0—0
Subscribed Capital	217,400—0—0	ಪ್ರತಿಜ್ಞಾತ ಮೂಲ ಧನವು "	217,400—0—0
Paid up Capital	192,400—0—0	ಆಗತ ಮೂಲ ಧನವು "	192,400—0—0
Deposits	485,596—1—3	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	485,596—1—3
Reserve Fund	27,590—12—0	ರಕ್ಷಿತ ಧನವು	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/- and above in multiples of Rs. 5/- received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge.

Canara Bank Ltd.,
Mangalore, 1st November 1914.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿಯುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಪ್ರಾಮಿಸರಿ ಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುದಾರರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದಂಡಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಆ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯು ಮತ್ತು ವಸ್ತು ಇವಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯತಕ್ಕದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾಂದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ, ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ಸಂತಾನ ಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯ ಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ, ನಿಮಿರಾಯನ ಶರೀರತ್ಯಾಗ, ಜನಕವಂಶ, ಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ರಂತಿದೇವ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸಾನವು, ರುಕ್ಮಿಣೀಸತ್ಯಭಾಮಾ ವಿವಾಹ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳಿಸಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪಾಲು ಹಾಸಲು ೦—೩—೦.

ಸ್ಥಳ ವಿಳಾಸ:— ಎ೦. ದೇಶಾಯಿ ಕಂಪೆನಿ,
ಕಾರ್ಟರ್ ಬುಕ್ ಡಿಪೊ, ಬಳ್ಳಾರಿ

ಕನ್ನಡ ಲಿಪಿಯ ಪುಸ್ತಕಗಳು.

ಉಡುಪಿ ಶ್ರೀಕೃಷ್ಣ ಚರಿತ್ರೆ

ದಂಡಾಕಾರ, ಮೂರು ಸಂಧಿಗಳಿಂದ ಕೂಡಿರುವದು. ಪ್ರಥಮ ಸಂಧಿಯಲ್ಲಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠೆಮಾಡಿದ ವಿಷಯವೂ, ಎಂಟು ಜನ ಯತಿಗಳ ವಿಷಯವೂ, ಪ್ರತಿನಿತ್ಯ ನಡಿಯತಕ್ಕ ವಿಧಾನಗಳೂ, ಎರಡನೆಯ ಸಂಧಿಯಲ್ಲಿ ಮಕರಸಂಕ್ರಾಂತಿ ಉತ್ಸವ ವರ್ಣನೆಯೂ, ಮೂರನೇ ಸಂಧಿಯಲ್ಲಿ ವರುಷದ ಇತರ ದಿವಸಗಳಲ್ಲಿ ನಡಿಯತಕ್ಕ ಉತ್ಸವಾದಿಗಳೂ ವರ್ಣಿತವಾಗಿವೆ. ಬೆಲೆ 3 ಆಣೆ.

ಋ. ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ. ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಆಶ್ವಲಾಯನ ಸಂಧ್ಯಾವಂದನ (ಮಂತ್ರಯದವರಿಗೆ) 3ಆಣೆ; ಯಜುರ್ವೇದ ಸಂಧ್ಯಾವಂದನ (ಮಂತ್ರಯದವರಿಗೆ) 2 ಆಣೆ; ಋ. ಬ್ರಹ್ಮಯಜ್ಞ ವೈಶ್ವದೇವ ಉಪಾಸನ 3 ಆಣೆ; ಪ್ರಾತರಾಹ್ನಿಕ ಪದ್ಧತಿ 3 ಆಣೆ; ದೇವಪೂಜಾ ಪದ್ಧತಿ 3 ಆಣೆ; ವಾಯುಸ್ತುತಿ 2 ಆಣೆ; ದ್ವಾದಶಸ್ತೋತ್ರ 2 ಆಣೆ; ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ; ವಿ. ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6; ಅಭಿಷೇಕ ಸೂಕ್ತಗಳು 0-2-0; ಶ್ರೀಸೂಕ್ತ ಪುರುಷಸೂಕ್ತ 0-1-0; ಸುಂದರ ಕಾಂಡ ಕಥಾಸಾರಸಂಗ್ರಹ ವಗೈರೆ 0-2-0; ಗಜೇಂದ್ರ ಮೋಕ್ಷ 0-1-6; ಗೋಪಿಕಾಗೀತೆ ವಗೈರೆ 0-1-0; ಪಾಂಡವಗೀತೆ ವಗೈರೆ 0-1-6; ಅಣುಭಾಷ್ಯ ವಗೈರೆ 0-0-9; ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0-2-0; ಪುರಂದರದಾಸರ ಕೀರ್ತನೆಗಳು 0-6-0; ಉದಯರಾಗ 0-4-0; ಹರಿಭಕ್ತಿಸಾರ 0-1-0; ಸ್ವಪ್ನಪದ ಮಧ್ವನಾಮ 0-1-6; ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ.

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ, ದ. ಕ.

ಅತ್ಯುತ್ತಮವಾದ ಕಸ್ತೂರಿ ತೊಲೆ ಗಕ್ಕೆ ರೂ. 30. ನಂಬ್ರ 2 ತೊಲೆಗಕ್ಕೆ ರೂ. 25. ಸನ್ ಬ್ರೆಂಡ್ ಕೇಸರಿ ತೊಲೆಗಕ್ಕೆ ರೂ. 1—6—0. ಕಾಶ್ಮೀರ ಕೇಸರಿ ತೊಲೆಗಕ್ಕೆ ರೂ. 1—4—0. ಅತ್ಯುತ್ತಮವಾದ ಸಿಂಗಾಪುರದ ಪಚ್ಚೆ ಕರ್ಪೂರ ತೊಲೆ ಗಕ್ಕೆ ರೂ. 2. ಸಿಂಹರವರ ಸುಗಂಧ ಕಾಮಿಗಳು ಟಿನ್ ಒಂದಕ್ಕೆ ಆಣೆ 8.



ಪಿ. ಎನ್. ಸಿಂಹಂ ಮತ್ತು ಕಂಪೆನಿ,
ಆದಿಯಪ್ಪನಾಯಕ ರಸ್ತೆ,
ಮದರಾಸು.

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು.

ತಮ್ಮ ವಿಳಾಸ:— ಯಸ್.ಯು.ಯನ್ ಮತ್ತು ಕಂಪೆನಿ, ಕಾಶಿ.

1915ನೇ ವರ್ಷದ

ಪ್ರೊಕೆಟ್ ಡೈರಿಗಳು.

ವಕೀಲರಿಗೂ, ಗುಮಾಸ್ತರಿಗೂ, ವ್ಯಾಪಾರಸ್ಥರಿಗೂ, ಇತರರಿಗೂ ಬಹಳ ಉಪಯೋಗಕರವಾದದ್ದು.

ನೋಟು ಬೂಕು ಸೈಜು	ಸಣ್ಣ ಸೈಜು
ರೂ. 0-8-0.	ರೂ. 0-4-0.

ರಖಮಾಗಿ ಪಡಕೊಳ್ಳುವ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ದೊರೆಯುವುದು. ಬೇಕಾದವರು ಬೇಗನೇ ಬರಕೊಳ್ಳಿರಿ.

ಮೆನೇಜರ್,
ಶಾರದಾ ಪ್ರೆಸ್,
ರಥಬೀದಿ, ಮಂಗಳೂರು.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕಕ್ಷ್ಯಹಿತಾರ್ಥ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫೂರ್ತಿ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ಶಕ್ತಿ ಇಕ್ಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸೈಜಿನ ಈ ಪತ್ರಿಕೆಗೆ ವಾರ್ಷಿಕ ವರ್ಗಣಿ ಮೊಬಲಗು ಟಪಾಲು ಹಾಸಲು ಸಹ [illegible] ಆಗಿರುತ್ತದೆ. ವರ್ಗಣಿದಾರರಾಗಿ ಸೇರಬಯಸುವವರು [illegible] ಬರೆಯುವದು.

ಮ್ಯಾನೇಜರ್, [illegible] ವೃತ್ತ ಮತ್ತು ಧನಂಜಯ,
[illegible] ಧಾರವಾಡ.

ಚಿನ್ನ ಮತ್ತು ಬೆಳ್ಳಿಯ ಮೆಡಲುಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ ಎಂಡ್ ಸನ್ನರ

ಬಿಸ್ಕುಟುಗಳನ್ನು

ಒಮ್ಮೆ ಕರಿಸಿ ನೋಡಿರಿ!

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕೆ ದೊರೆಯುತ್ತವೆ.

ವಿಳಾಸ:— ಸ್ಟೀವನ್ ಎಂಡ್ ಸನ್ಸ್, ಮಂಗಳೂರು.

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ವಾಸಿಯಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಡಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯು ವಿಷಯ ಮಿರಾಜ್ ಡಾಕ್ಟರರು ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಕೆಲವು ಮಂದಿ ಕ್ಷಯರೋಗಗಳಿಗೆ ಪ್ರಯೋಗಿಸಿದ್ದು ಅದು ರೋಗಕ್ಕೆ ಬಹಳ ಉಪಕಾರಿಯಾಗಿ ಕಂಡುಬಂದಿತ್ತಲ್ಲದೆ ಅವರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂದು ನನ್ನ ಬಯಕೆ. ಎಲ್ಲಿ ನಾನು ಕ್ಷಯ ರೋಗಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd*) ಸಿ ಡಿ. ಅಂಡ್ರೂಸ್ ಎಮ್ ಎಮ್ ಎಸ್ ಸರ್ಜನ್, ಮಿಷನ್ ಆಸ್ಪತ್ರೆ

ವಿಳಾಸ — ಯು ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd 1888 ಸ್ಥಾಪನೆ 1888

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು

ಎಷ್ಟೋ ಹಳೆಯ ಕಡಿತ ತದ್ದು ಹುಟ್ಟಿದರೂ ಗಜಕರ್ಣವು ಈ ಮಲಮಿನಿಂದ ಎರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦ ೨೫ ವರ್ಷಗಳ ಹಳೆಯ ಮೈಮನೆ ಮಾಡಿಕೊಂಡಿದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವವು. ಕ್ರಯವೇ ಬೆಲೆ ಬಾಟ್ಲಿ ಗಳ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತವೆ. ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಹಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತೆ ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮಿ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಳ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಕು ದಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೩. ಪ್ರಮೇಹರಿಪು ದಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೪. ಪಂಚಜೀರಕ ಪಾಕ. ಎಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮ, ಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತವಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ವೀಗು, ವಾತ ಬಾಧೆಗಳನ್ನು ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಡಬ್ಬಿಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿಯ ಕೇಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:— ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*

Vepery Post, MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಯಾಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಹೆಬ್ಬ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original
BABA
BUDAN-GHIRY
COFFEE POWDER
PROPRIETORS
J.A. D'SOUZA & Co.
MANGALORE

ಸ್ವತಃ ಬಂದು ಪರೀಕ್ಷಿಸಿರಿ!

ವಿಳಾಸ:—

ಕ್ರಯ ಕಮ್ಮಿ—[illegible]

ಜೆ. ಎ. [illegible] ಕಂಪೆನಿ,

[illegible], [illegible]

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬಿನ್ಸನ್, ರೊಯಲ್, ಮಿನೋರ್ವಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅವಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಫೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*

THE CANARA CYCLE MART,

Udipi, S. Canara.

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರಿ ಮುರಬ್ಬಾ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹಾದ್ದೋ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವದು.

ಪಂಜಾ ಸಾಲಾಮಿಸ್ರಿ ಮುರಬ್ಬಾವು— ಸೋರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೋಧಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೋಧಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.

ಎರಡು ದಪ್ಪ ಮುರಬ್ಬವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ ಗುಣಕೊಡುತ್ತೆ. 2—3 ದಬ್ಬಿ ಮುರಬ್ಬವನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಯವರೆಗೆ ಆಣೆ 6.

ಏಜಂಟರು— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ. ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮುನ್ನಾಲಾಲ್, ಡಿಲ್ಲೀ ವೈದ್ಯರು,
5 ನವಾಬಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ಕೃಷ್ಣವಿಲಾಸ ಟ್ರೇಡಿಂಗ್ ಕಂಪನಿ,

ಮಾನ್ಯ ಗೃಹಸ್ಥರೇ, ಗಿರಗಾಂ, ಮುಂಬಯಿ.

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳ ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿ ಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚೆನ್ನಾಗಿರುವುದರ ಬದಲಿಗೆ ಬಹಳ ಹಲಕೇ ಸಾಮಾನುಗಳನ್ನು ಅವುಗಳಿಗೆ ಕೊಟ್ಟ ಹಣ ನಿಷ್ಫಲವು ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ. ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಜಾಗ್ರತೆಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ. ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತಿಗೆ ತಕ್ಕೊಂಡು ವಿ. ಪಿ. ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ವಾಚುಗಳು ನಮ್ಮಲ್ಲಿ ವೆಸ್ಟೆಂಡ್, ಪೇವರ್ ಲೂಬಾ, ಬರ್ನ್ ಮೊದಲಾದ ಕಂಪನಿಯ ವಾಚು ಮತ್ತು ಗಡಿಯಾರಗಳು ಆಯಾಯ ಕಂಪನಿಯಲ್ಲಿ ಮಾರಾಟ ಮಾಡುವದಕ್ಕಿಂತ ಕಡಿಮೆ ಬೆಲೆಗೆ ದೊರೆಯುತ್ತವೆ.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರೆಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು ಜುಮಲಾ ಹಣದಿಂದ ಕಳೆಯುವೆವು.

Krishnavilasa Trading Company,
Girgaum. Bombay.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾ ರಾಘವ

ಪಾಕೆಟ್ ಡೈರಿಗಳು

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.
" ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.
" ೩. ದೊಡ್ಡ ಸೈಜು ಸಾದಾ 0—6—0.
" ೪. ಪೆನ್ಸಿಲ್ ಮುಚ್ಚಳವುಳ್ಳದ್ದು 0—8—0.

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ.
ಹೆಚ್ಚಾಗಿ ತರಿಸುವವರಿಗೆ ರೂ. ೧ಕ್ಕೆ ೩ ಆಣೆ ಕಮಿಷನ್ ದೊರೆಯುವದು
[illegible]
[illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0

ಪುಸ್ತಕ VIII | ಮಂಗಳೂರು ತಾ 4ನೇ ಡಿಸೆಂಬರ ಶುಕ್ರವಾರ 1914 | ಸಂಚಿಕೆ 49.

ನೋಟೀಸು.

ದಿ. ಯುನಿವರ್ಸಲ್ ಎಸ್ಸೂರೆನ್ಸ ಕಂಪೆನಿ ಲಿಮಿಟೆಡ್ ಕಲ್ಕತ್ತಾ.

ವಿವಾಹ ಶಾಖೆ ಮತ್ತು ಜೀವ ವಿಮೇ ಶಾಖೆ [illegible] ವಿಧವಾದ ಪ್ರಾವಿಡೆಂಟ ಯಾನೆ ಸಹಾಯಕ ಸಂಘವಾಗಿ ಈ ವರೆಗೆ [illegible] ಕೆಲಸ ಮಾಡುತ್ತಾ ಬಂದ ಈ ಕಂಪೆನಿಯು ವಿವಾಹ ಶಾಖೆಯಲ್ಲಿ [illegible] ಗಳ ದುಬಾರಿಗೆ ಕಡಮೆಯಾಗದಷ್ಟು ಮತ್ತು [illegible] ಕೊಡುವದಾಗಿ ವಾಗ್ದಾನ ಮಾಡಿ ವಾಗ್ದಾನದಂತೆ ಈ ವರೆಗೆ ಕಾರ್ಯ ನಿರ್ವಾಹವನ್ನು ಮಾಡುತ್ತಾ ಬಂದರೂ, ಈ ಮಾದರಿಯಾಗಿ ಕೆಲಸ ಮಾಡುತ್ತಾ ಬರುವದರಲ್ಲಿ ಅಂತ್ಯದ ಫಲವು ಏನಾದೀತೆಂಬ ಶಂಕೆಯಿಂದ ಈ ಕುರಿತು ಸರಕಾರದ ಕಾರ್ಯಪರೀಕ್ಷಕರ (Government actuary) ಅಭಿಪ್ರಾಯವನ್ನು ತಿಳಿಯಬೇಕೆಂದು ಅಪೇಕ್ಷಿಸಿದ್ದಲ್ಲಿ ಸದರಿಯವರು ಈ ಬಗೆಯಲ್ಲಿ ಕೆಲಸ ಮಾಡುವ ಸಹಾಯಕ ಸಂಘದ ಅವಸ್ಥೆ ಕೇವಲ ಅಭದ್ರಕರವೆಂದು ಅಭಿಪ್ರಾಯ ಕೊಟ್ಟ ಕಾರಣವಾಗಿ ಈ ಕಂಪೆನಿಯು ಈ ವರೆಗೆ ಕೆಲಸ ಮಾಡುತ್ತಾ ಬಂದ ಕ್ರಮಗಳ ಬದಲಾವಣೆಯಿಂದ ಭದ್ರಕರವಾಗಿಯೂ ಶಾಸ್ತ್ರರೀತ್ಯಾ ಯೋಗ್ಯವಾದ ಸುಲಭ ವಿಮೆಯೆಂಬ ಇನ್ನೊಂದು ವ್ಯವಸ್ಥೆಯನ್ನು ಇದೇ ನವಂಬರ ತಿಂಗಳ ತಾ ೧ರ ಆರಭ್ಯಾತು ಜಾರಿಗೆ ತರಬೇಕಾಗಿ ನಿಶ್ಚಯಿಸಿಯದೆ.

ಈ ಹೊಸ ವ್ಯವಸ್ಥೆಯ ಪ್ರಕಾರ ಪ್ರತಿ ಒಬ್ಬ ವಿಮೇದಾರನು ತೆರಬೇಕಾದ ವಿಮೇ ಮುಂಗಡಗಳು ಅವುಗಳನ್ನು ತೆರಬೇಕಾದ ವರುಷಗಳು ಮತ್ತು ಅವನಿಗೆ ಯಾ ಅವರ ವಾರಿಸುದಾರರಿಗೆ ಸಿಕ್ಕುವ ಮೊಬಲಗುಗಳು ಶಾಸ್ತ್ರರೀತ್ಯಾ ಗಣಿಸಲ್ಪಟ್ಟು ಮೊದಲೇ ನಿಶ್ಚೈಸಲ್ಪಟ್ಟಿರುವದರಿಂದ ಇದರಿಂದ ವಿಮೇದಾರರಿಗಾಗಲೀ ಕಂಪೆನಿಗಾಗಲೀ ಯಾವ ಕಾಲದಲ್ಲಿಯೂ ಕಷ್ಟ ವ ತೊಂದರೆ ಸಂಭವಿಸುವ ಸಂದರ್ಭವಿರುವದಿಲ್ಲ.

ಈ ವ್ಯವಸ್ಥೆಯು ಜಾರಿಗೆ ಬರುವ ಮೊದಲು ಸೇರಿದ ವಿವಾಹ ಮತ್ತು ಜೀವವಿಮೇ ಈ ಉಭಯ ಶಾಖೆಯ ಮೆಂಬರರುಗಳನ್ನು ಈ ಹೊಸ ವ್ಯವಸ್ಥೆಗೆ ಸೇರಿಸಿಕೊಳ್ಳುವ ಏಲೆವಾರಿಯು ಆದಷ್ಟು ಬೇಗನೆ ಮಾಡುವದಲ್ಲದೆ ಹಾಗೆ ಅವರನ್ನು ಸೇರಿಸಿ ಕೊಳ್ಳಲಿಕ್ಕೆ ತಗಲುವ ಸಮಯದ ವರೆಗೆ ಅವರನ್ನು ಮೊದಲಿನ ನಿಯಮಗಳಿಗನುಸರಿಸಿ ನಡಿಸಲಾಗುವದರಿಂದಲೂ, ಈ ಕಂಪೆನಿಯ ವಿಮೇದಾರರು ಏಜಂಟರು ಯಾ ಸಬ್ ಏಜಂಟರು ಯಾವ ವಿಧದಿಂದಲೂ ಗಾಭರಿ ಪಡುವ ಆವಶ್ಯವಿರುವದಿಲ್ಲ.

(Sd) J. Sarkar,
Secretary.

ವಿಶೇಷ ಮಾಹಿತಿ ಬಗ್ಗೆ ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರಕೊಳ್ಳುವದು.

M. Laxman Rao Bros,
Chief agents,

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ಸಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಬೇಕೆನ್ನುವವರು ವರ್ಷ ೧ರ ಚಂದಾ ಹಣ ರೂ 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ ಪಿ ಮಾಡಿ ಕಳುಹಿಸಲಾಗುವದು. ವಿ ಪಿ ಯು ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಪತ್ರಗಳನ್ನು ಬರಿಯುವಾಗ ತಮ್ಮ ಹೆಸರು, ವಿಳಾಸ ಮತ್ತು ಪೋಸ್ಟಾಫೀಸನ್ನು ಸ್ಪಷ್ಟಾಕ್ಷರದಲ್ಲಿ ಬರಿಯತಕ್ಕದ್ದು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ ಕ.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಒ. ಪಿ. ನಂಬ್ರ $\frac{137}{1914}$

1 ಕಮಲಮ್ಮ
2. ನಾರಾಯಣ } ಮ್ಯಾನರರು. } ಅರ್ಜಿದಾರರು.
3 ಶಂಕರನಾರಾಯಣ

ತಾ 29—2—1912ರಲ್ಲು ಮೃತಪಟ್ಟ ಮೊಗ್ರಾಲ ಮಾಗಣೆ ಕಣ್ಣೂರು ಗ್ರಾಮದ ಮಾಹಾಲಿ ಈಶ್ವರಯ್ಯನು ಮಂಗಳೂರಲ್ಲಿರುವ ಮದರಾಸು ಬೇಂಕಿನಲ್ಲಿ ಈಡು ಇಟ್ಟ ವಂದರೆ ನಗವನ್ನು ತಮಗೆ ಕೊಡಿಸುವಂತೆ ತಮ್ಮ (1ನೇಯವಳ) ಹೆಸರಿನಲ್ಲಿ ಸರ್ಟಿಪಿಕೇಟು ಕೊಡಬೇಕಾಗಿ ಅರ್ಜಿದಾರರು ಅರ್ಜಿ ಕೊಟ್ಟಿರುತ್ತಾರೆ. ಆಕ್ಷೇಪ ಇದ್ದವರು ತಾ 17—12—1914ನೇ ದಿವಸ 11 ಗಂಟೆಗೆ ಈ ಕೋರ್ಟಿಗೆ ಹ್ಯಾಜೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, }
ತಾ 1—12—1914 }

M. Madhava Rau,
Vakil for Petitioners.

Notice.

In the Court of the District Munsif of Kundapur.

O. P $\frac{89}{1914}$.

1. Abbakka Shedthi
2. Chandamma Shedthi
3. Puttaya Shetti — residing in Chittor Village of Coondapoor Taluk.

} **PETITIONERS.**

Whereas the above named petitioners have applied to this Court for a succession certificate to be issued in the name of the first petitioner in respect of [illegible] from Tuppadakorai Kuppu [illegible] (deceased). Notice is hereby [illegible] the grant of the same may [illegible] which date the petition [illegible]

Kundapur

ಕೂಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತೆಗೆಯಲ್ಪಟ್ಟದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲಿಯ ಎಣ್ಣೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆದ್ದು ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿಸ್ಸು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬಿರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರಲುರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್, ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ಶತಮೂಲಿಕಾ ಅಮರಸಂಜೀವನಿ—ಈ ಟಾನಿಕ್ ದ್ರಾವಕವು ನಿಶ್ಶಾಣಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ —0—0

೩ ಬಾಲಸಂಜೀವನಿ—ಮಧುರ ಟಾನಿಕ್ ಅಶಕ್ತ ಬಾಲಕರಿಗೆ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲಿ 1ಕ್ಕೆ 0—12—0

೪ ವಸಂತ ಕುಸುಮಾಕರ—ಈ ಸುವಾಸಿತ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫ ಸುದರ್ಶನಮಾತ್ರೆ—ಈ ಸಿದ್ಧೌಷಧವು ನೇತ್ರವ್ಯಣ ಇತ್ಯಾದಿ ಎಲ್ಲಾ ದುಸ್ಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣ ಪಡಿಸುವದು. ಕ್ರಯ 4—0—0

೬ ಗರುಡಧ್ವಜ—ಇದು ಸರ್ಪ ವೃಶ್ಚಿಕ, ಜೇಡ ಇಲಿ ಇತ್ಯಾದಿ ಸರ್ವ ಕ್ರಿಮಿ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0 0

೭ ಆನಂದವನವಿಲಾಸಿ—ಇದ ಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ಕೈರಾಗಿ ಪ್ರಯೋಗಗಳ ವಿ ತಯಾರಿಸಿದ ಔಷಧ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಕೆಲವು ದಿವಸಗಳಲ್ಲಿಯೇ ಪ್ರಕಾಶಿತವಾಗುವುದು. ತ್ವರೆಮಾಡಿರಿ"

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ತಿದ್ದಿ ಬರೆದ ಮತ್ತು ಪರಿವರ್ಧಿತ ಮರಾಠಿ ನಾಟಕವು ಇನ್ನು ಕೆಲವು ದಿವಸಗಳಲ್ಲಿಯೇ ತಯಾರಾಗುವುದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕಜನರು ಈ ಸಂದರ್ಭವನ್ನು ಬಿಡಲಾಗದು. ಮುದ್ರಣವು ಅಂದವಾಗಿದೆ! ಬೆಲೆಯು ಬಹಳೇ ಕಡಿಮೆ! ಮಂಗಳೂರಲ್ಲಿಯೇ ಹೆಚ್ಚಿನ ಪ್ರತಿಗಳು ಖರ್ಚಾಗುವ ಸಂಭವವು ಇರುವುದರಿಂದ, ಹೊರ ಊರಿನವರು ತ್ವರೆಮಾಡಿರಿ!! ಬೆಲೆ ೧೦ ಆಣೆ. ಟ. ಹಾ. ೧ ಆಣೆ ಪುಸ್ತಕವು ವಿ. ಪಿ. ಯಾಗಿ ಕಳುಹಿಸಲಾಗದು.

ಕಲ್ಯಾಣಪುರ ಮಂಗೇಶರಾವ್,
[illegible] ಮಂಗಳೂರು.

ಮರೆಯ ಬ್ಯಾಡಿರಿ. [illegible]

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರೆಯುವದು.

ಅಪಾಯ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ, ಸೆಕೆ ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು. ಮರೆಯ ಬ್ಯಾಡಿರಿ.

೩ ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ಆಣೆ 14

೨ ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10 0 ಅಂಚೆ ಹಾಸಲು ಆ 4

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ — ವಿ ಎ ಎಸ್. ಪಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

V A S. PANI,
No 3, Erulappen Street, Madras.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, [illegible], [illegible], ನಾರಾಯಣವನಮ್, ವನ್ನಾರಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, [illegible], ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು [illegible] ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ [illegible] ಸೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು [illegible] ದೊರಕುವವಲ್ಲದೆ [illegible] ಮತ್ತು [illegible] ತಯಾರಾಗುವ [illegible] ವ್ಯಾಪಾರಕ್ಕೆ ಸಮ್ಮಂಧಪಟ್ಟ [illegible] ಕ್ರಯಕ್ಕೆ [illegible]

[illegible]

Canarese Novels Etc.

ಕನ್ನಡ ಪುಸ್ತಕಗಳು.

ಮ। ರಾ। ರಾ। ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಅ.		ರೂ. ಅ.
ಬಂಗವಿಜೇತ ಹೊಸ ನಾವಿಲ್	1—4	ಕಮಲಾ ಕಾಂತ ದ್ವಿ. ಮು.	0—2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4	ಲೀಲೆ [ಸಮಾಜ ಚಿತ್ರ]	0—4
ಕಪಾಲನಂದಿನಿ ಡಿಟೊ 2ನೇ ಭಾಗ	1—8	ಮಾಲತಿ [ಅತಿ ಮನೋಹರ] ದ್ವಿ. ಮು.	0—3
ಸೀತಾರಾಮ (ಇತಿಹಾಸ)	1—8	ರಾಧಾರಾಣಿ [ಕಾದಂಬರಿ] ತೃ. ಮು.	0—3
ವಿಷವೃಕ್ಷ ದ್ವಿ. ಮು.	1—4	ಯುಗುಳಾಂಗುರೀಯ ,,	0—3
ದೇವೀ ಚೌಧುರಾಣಿ-ಡಿಟೊ	1—4	ಭ್ರಾಂತಿವಿಲಾಸ ,,	0—8
ರಾಜಸಿಂಹ-(ಇತಿಹಾಸ)	1—5	ಸೋದಮಣಿ [ಸ್ತ್ರೀನೀತಿ]	0—2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ಮೃಣ್ಮಯಿ-ಡಿಟೊ 2ನೇ ಭಾಗ	1—1	ವೈಜ್ಞಾನಿಕ ಪ್ರಹಸನ [ನಕಲಿ]	0—4
ಕೃಷ್ಣಕಾಂತನ ಉಯಿಲು	1—0	ಚಿರತ್ನನಾಟಕರತ್ನ ಡಿಟೊ	0—7
ಮನೋರಮ [ವಸ್ತ್ರೀದಾರಿ ಕಥೆ]	1—0	ಚಿತ್ರವಿಚಿತ್ರಾವಳಿ [Tit-Bits]	0—8
ಶರಿಮತಿ-ಡಿಟೊ-ದ್ವಿ. ಮು.	0.10	ನೀರದೆ [ಹೊಸ ಕಾದಂಬರಿ]	0—8
ಸಾಧನೆ. ಡಿಟೊ	0—8	ಭಾರತಮಹಿಳಾ [ಸ್ತ್ರೀನೀತಿ]	0—8
ಕೆಂಪಿನೂರು [ಇತಿಹಾಸ]	0.12	ಅಮೃತಪುಳಿನ [ನಾವಿಲ್]	0.11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0—3	ಇತ್ಯಾದಿ.	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ 1ಕ್ಕೆ 3 ಆಣೆ 12ಕ್ಕೆ 1 ರೂಪಾಯಿ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಅ.		ರೂ. ಅ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0—8	ಸಿಭಾಗ್ಯಚಂದ್ರ [ಹೊಸಕಾದಂಬರಿ]	0—6
ಶ್ರೀ. ಕವಿಚರಿತೆ [ಪೂರ್ವಭಾಗ]	3—2	ಅನಂಗಸುಂದರಿ ಡಿಟೊ	0—8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0—8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6	ರಾಧಾಮಾಧವಿ ಡಿಟೊ	0—8
ಕಲಾನಾಥ ಡಿಟೊ	0—8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0—9
ಶೋಭನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು.	0—9
ಯಾಮಿನಿ [ಬಂಗಾಳೀ ನಾವಿಲ್]	0—3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0—8	ಜೈಮಿನಿಭಾರತ [ಸಟೀಕಾಟಿಪ್ಪಣಿಯ]	4—0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0—8	ಹರಿಕಥಾಮೃತಸಾರ ಡಿಟೊ	1—6
ಸನ್ಯಾಸಿ [ಹೊಸ ಕಾದಂಬರಿ]	0—6	ಚಮುಂಗಬೋಧಿನಿ	0—3
ಮೃತ್ಯು ಪರೀಕ್ಷೆ ಡಿಟೊ	0—2	ಸರ್ವೇವಾನ್ಯುಯಲ್	0—5
ಬೃಂದಾವನ ಡಿಟೊ	0—2	ನ್ಯಾಯದರ್ಪಣ [ಲಾ]	1—0
ಸುಮನೋರಮ ಡಿಟೊ	0—2	ವ್ಯವಹಾರ ದೀಪಿಕೆ [ಲಾ]	3—0
ಮೋಹಿನಿ ಡಿಟೊ	0—2	ಶಾಕುಂತಲ ನಾಟಕ ದ್ವಿ. ಮು.	0—9
ಪ್ರೇಮಪಿಪಾಸೆ ಡಿಟೊ	0—2	ಶೂರಸೇನಚರಿತ್ರೆ ನಾಟಕ ಡಿಟೊ	1—[illegible]
ವಿರಕ್ತಳಾದ ಸೌದಾಮಿನಿ ಡಿಟೊ	0—5	ಚಂಡಕೌಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	0—2	ರಾಮವರ್ಮ ಲೀಲಾವತೀ ನಾಟಕ	0—8
ಚಾತುರ್ಯವತಿ ಡಿಟೊ	0—2	ಪಾಂಚಾಲೀ ಪರಿಣಯ ನಾಟಕ	0.10
ಮಧುಮತಿ ಡಿಟೊ	0—2	ಚಂಡೀಮದಮರ್ದನ ನಾಟಕ	0—5
ವಿಲಕ್ಷಣಶಿಕ್ಷಣ ಡಿಟೊ	0—2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0—2	ಭರ್ತೃಹರಿ ನಿರ್ವೇದ ನಾಟಕ	0—3
ಭಾನುಮತಿ ಡಿಟೊ	0—2	ಸಿರುಪಮಾ [ನಾಟಕ]	0.12
ಸತೀರೋಹಿಣಿ ಡಿಟೊ	0—2	ಧ್ರುವವಿಜಯ [ನಾಟಕ]	0—4
ಸಂಪಾವಕ ಡಿಟೊ	0—4	ಸೀತಾಪರಿಣಯ [ನಾಟಕ]	0—4
ಚಂದ್ರಮುಖಿ [ಸ್ತ್ರೀನೀತಿ]	0—6	ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ [illegible] ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. [illegible]

[illegible]

[illegible] ಬೆಂಗಳೂರು ಸಿಟಿ.

"ಶ್ರೀ ಬಸವರಾಜೇಂದ್ರ ವಿಜಯ."

ಪ್ರಸಿದ್ಧವಾದ ಬಸವಪುರಾಣದ ಸಾರಭೂತವಾದ ವಚನಗ್ರಂಥ — ಸುಂದರವಾದ ಮಾತುಗಳು, ಸುಲಭವಾದ ಸರಣಿ, ಭಕ್ತಿರಸ ಪ್ರಧಾನವಾದ ಕಥೆಗಳು, ಶಿವಶರಣರ ಲೀಲೆಗಳು, ವೀರಶೈವಮತದ ತತ್ವಗಳೂ ಸಹ ಅಡಕವಾಗಿರುವುವು. ಮಕ್ಕಳಿಗೂ ಅರ್ಥವಾಗುವಂತಹ ಮೃದುವಾದ ಮಾತುಗಳಿಂದ ಬರೆಯಲ್ಪಟ್ಟಿದೆ. ಲಿಂಗಾಂಗಿಗಳಾದವರೆಲ್ಲರೂ ಇದನ್ನು ಬಿಡದೆ ಆಚರಿಸಿ ತಮ್ಮ ಮತಧರ್ಮವನ್ನರಿತು ಧನ್ಯರಾಗುವರೆಂದು ನಂಬಿರುತ್ತೇವೆ. ಬೆಲೆ ಸುಲಭ, 0—12—0. ದಪ್ಪ ಕಾಗದ. ಸುಂದರವಾದ ಮುದ್ರಣ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ.

ದಾರಣೆ ಸುಲಭ! ಅಲಿಗರ್ ಬೀಗಗಳು, ದಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದು ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರ	1	2	3	4	5
	0—12—0	0—15—0	1—4—0	1—10—0	.....

ಆರು ಚಕ್ರಗಳಿರುವ ಬೀಗಗಳು.

1—2—0 1—8—0 2—4—0 3—0—0 3—8—0

ಪಿ. ಲ್ಯಾಡ್ ಬೀಗಗಳು.

0—4—0 0—5—0 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ಒಂದಕ್ಕೆ 0—13—0

೩, ೪, ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ಒಂದಕ್ಕೆ 1—8—0, 1—12—0.

ವಿಳಾಸ:— ಎಚ್. ಎಸ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಲ್ಪ ಬೆಲೆಗೆ ಉತ್ತಮ ಪುಸ್ತಕಗಳು.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಷನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಅಪೂರ್ವ ಪುಸ್ತಕಗಳು.

ಎಲ್ಲರಲ್ಲಿಯೂ ಇರಬೇಕಾದ್ದು. ಜಮಾ ಖರ್ಚಿನ ಪದ್ಧತಿ 12 ಆಣೆ. ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿಸುತ್ತದೆ.

ಆಂಗ್ಲಭಾಷಾ ಪ್ರಕಾಶಿಕಾ. ಐದು ಭಾಗವು ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ರೂ. 1—8—0. ಇದನ್ನು ಗುರುವಿನಂತೆ ಭಾವಿಸಿ.

ವೈದ್ಯಸಾರ ಸಂಗ್ರಹ. ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3.

ಆರ್ಯಕೀರ್ತಿ	0—10—0	ಶುಕಸಪ್ತತಿ	2—0—0
ಹನುಮದ್ವಿಲಾಸ ...	0—8—0	ಕುಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ ...	1—0—0
ಶಾಕುಂತಲ ನಾಟಕ ...	0—8—0	ಸುಮತಿ ಮದನ ಕುಮಾರರ ಚರಿತ್ರೆ I ...	0—8—0
ಸ್ತ್ರೀ ಧರ್ಮನೀತಿ ...	0—8—0	,, II ...	0—7—0
ಶೋಭನೆ	0—8—0	ಶಿವಗೀತೆ	0—[illegible]—0
ಚಂದ್ರಕಳಾ	0—4—0	ಶಾಕಶಾಸ್ತ್ರ	0—[illegible]—0
ಕಲಾನಾಥ	0—6—0	ಸನಾತನಧರ್ಮ [illegible] ...	1—0—0
ಶಿವಾನಂದಲಹರಿ ...	0—6—0	[illegible] ...	0—4—0
ಪ್ರಶ್ನೋತ್ತರ ಲೆಖ್ಖಬೋಧಿನಿ	1—4—0	[illegible] ...	0—[illegible]—0
ವಿಷವೃಕ್ಷ	1—4—0		
ದುರ್ಗೇಶ ನಂದಿನಿ ...	1—4—0		
ಮುದ್ರಾಮಂಜೂಷ ...	1—8—0		

ದುಷ್ಟ ಚತುಷ್ಟಯ, ನರಬಲಿ, [illegible] ಯ ಅತ್ಯಾಚಾರ. ಪ್ರತಿಯೊಂದು ಪ್ರತಿಯು [illegible]

ವಿಳಾಸ:— [illegible]

1915ನೇ ವರುಷ ಸಮೀಪಿಸಿತು.

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಆಗಾಗಲೇ ಬರೆಯಲು ಅಗತ್ಯವುಳ್ಳ

1915ನೇ ವರುಷದ ಪೊಕೆಟ್ ಡೈರಿಗಳನ್ನು

ತಕ್ಕೊಳ್ಳಲು ಮರೆಯಬೇಡಿರಿ.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸಲ್ಪಡುವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡಲ್ಪಡುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಷ್ಟ್ರಿಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ಹುಲ್ಲಾಮು, ಭಾಡಿಗೆ ಚೀಟು, ರಿಜಿಸ್ಟ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು ರಕಗಳ ಮೇರಾಬಲ ಪಟ್ಟಿ, ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು— ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ.

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ತಕದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೇಟು ಬೂಕು- ಪೆನ್ಸಿಲ್ ಸಹಿತ ಇದಕ್ಕೆ ಪ್ರತಿಯೊಂದಕ್ಕೆ ೦ ೫

ಸಣ್ಣ ಸೈಜಿನ ಡೈರಿಗಳೂ ಸಹ ವಿಕರಿಗೆ ಸಿದ್ಧವಾಗಿವೆ.

ಕ್ರಯ ಪ್ರತಿ ಒಂದಕ್ಕೆ ಆಣೆ 4 ಮಾತ್ರ

ನಮ್ಮಲ್ಲಿ ತಯ್ಯಾರಾಗುವ ಡೈರಿಗಳ ಕಾಗದ ಅಕ್ಷರಗಳನ್ನು ಹಾಗೂ ಬೈಂಡು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ವ್ಯಾಪಾರಸ್ಥರಿಗೆ ರಖಂ ತಕ್ಕೊಳ್ಳುವವರಿಗೂ ವಿನಾಯಿತಿಯ ಪ್ರತ್ಯೇಕ ದರಗಳಿವೆ

ಡೈರಿಗಳು ಸಿಕ್ಕುವ ವಿಳಾಸ:—

ಮ್ಯಾನೇಜರ್

ನಮ್ಮ ಡೈರಿಗಳು ಈ ಕೆಳಗಿನ ಸ್ಥಳಗಳಲ್ಲಿಯೂ ದೊರಕುವವು

ಶಾರದಾ ಛಾಪಖಾನೆ,

ರಥಬೀದ್ಧಿ, ಮಂಗಳೂರು.

ಮೆಸ್ಸರ್ಸ್ ಕೊಟ್ಟಾರಿ ಬ್ರದರ್ಸ್, ಉಡುಪಿ
ಪ್ರಭಾಕರ ಪ್ರೆಸ್,
ಸದಾನಂದ ಪ್ರೆಸ್,
ಬೆಳ್ಳಾರೆ ನರಸಿಂಹ ಮಲ್ಯರು, ಪುತ್ತೂರು

ಕೆ. ಎ. ರಾಮಕೃಷ್ಣ ಶ್ಯಾನಭಾಗರು, ಕಾಸರಗೋಡು.
ಗುರ್ಪುರ ವಿಟ್ಲಪ್ರಭು ಬ್ರದರ್ಸ್, ಬಂಟ್ವಾಳ
ಅಮೃತರಾವ್ ಜವಳಿ ಸಾವಕಾರ, ಕಾರ್ಕಳ

ಅಚ್ಚಿನಲ್ಲಿರುವುದು!   ಅಚ್ಚಿನಲ್ಲಿರುವುದು!

ವೆಂಕಟಗಿರಿ ಮಹಾತ್ಮ್ಯೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು ಕಾವ್ಯರಚನೆಯು ಬಹು ಮೃದುರವೂ ಸುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯದ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನರಂಜಕವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಗಳಿಂದ ಕೂಡಿರುವುದು.

ಕವಿ ಎಂಡ್ ಸನ್ಸ್,

ಮಂಗಳೂರು.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ವಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ. ಚಂದಾದಾರರಾಗಿ ಸೇರಬಯಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

[illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 4ನೇ ದಿಸಂಬರ 1914

ಮದ್ರಾಸಿನಲ್ಲಿ ನ್ಯಾಯವಿಧಾಯಕ ಸಭೆಯು ಕಳೆದ ಸರ್ತಿ ಕೂಡಿದ ಕೂಟದಲ್ಲಿ ನಡೆದ ಕೆಲವು ವಿಶೇಷ ಪ್ರಸ್ತಾಪಗಳು.

ಕಳೆದ ಸರ್ತಿ ಕೂಡಿದ ನ್ಯಾಯವಿಧಾಯಕ ಸಭೆಯಲ್ಲಿ ನಾನಾ ಬಗೆಯ ಪ್ರಸ್ತಾಪಗಳಿದ್ದವು. ಹಿಂದೂ ಸಮಾಜಕ್ಕೆ ಸಂಬಂಧಪಟ್ಟ ಮುಖ್ಯವಾದ ಎರಡು ವಿಷಯಗಳು ಸಭೆಯಲ್ಲಿ ವಾದಿಸಲ್ಪಟ್ಟವು. ಇದರಲ್ಲಿ ತಿರುಪತಿ ದೇವಸ್ಥಾನದ ಶಾಲೆಗಳನ್ನು ದೇವರ ಭಂಡಾರದಿಂದಲೇ/ನಡಿಸಿ ಬರಲು ಬೇಕಾದ ಕಾನೂನು ಮಸೂದೆಯು ಒಂದಾಗಿತ್ತು. ಈ ಕಾನೂನು ಮಸೂದೆಯು ಮಂಜೂರಾದ ವಿಷಯವನ್ನು ಕಳೆದ ಸಂಚಿಕೆಯಲ್ಲಿ ತಿಳಿಸಿರುತ್ತೇವೆ. ಸಭೆಯಲ್ಲಿ ವಾದಿಸಲ್ಪಟ್ಟ ಹಿಂದೂ ಸಮಾಜಕ್ಕೆ ಸಂಬಂಧಪಟ್ಟ ಎರಡನೇ ವಿಷಯವು ಬಾಲಿಕೆಯರ ಪ್ರೌಢ ವಿವಾಹ ವಿಧಿಯ ಕುರಿತಾಗಿತ್ತು. ಈ ಉದ್ದೇಶದ ಬಗ್ಗೆ ತಯ್ಯಾರಿಸಲ್ಪಟ್ಟ ಕಾನೂನು ಮಸೂದೆಯು ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿಗಳವರೇ ಸಭೆಯ ಮುಂದೆ ತಂದಿದ್ದರು. ಹುಡುಗಿಯರು ಋತುಮತಿಗಳಾದ ಬಳಿಕ ವಿವಾಹವಾಗುವ ರೂಢಿಯು ಪ್ರಾಚೀನ ಕಾಲದಲ್ಲಿ ಹಿಂದೂಗಳಲ್ಲಿ ಚಿಕ್ಕಿಯಾಗಿತ್ತು. ಆದರೆ ಇತ್ತಲಾಗಿನ ರೂಢಿಯ ಪ್ರಕಾರ ಋತುಮತಿಗಳಾಗುವ ಮೊದಲೇ ವಿವಾಹವಾಗಬೇಕೆಂಬ ವಾಡಿಕೆಯು ಕಡ್ಡಾಯವಾಗಿ ಜನರಿಂದ ಅವಲಂಬಿಸಲ್ಪಡಬೇಕಾಗಿ ಬಂದುದರಿಂದ ಜನರು ವಿಶೇಷ ಸಂಕಷ್ಟಗಳಿಗೆ ಗುರಿಯಾಗಿರುವರು. ಇಂಥಾ ಅನುಸರಣೆಯಿಂದ ದೇಶದಲ್ಲಿ ನಿರಾಶ್ರಿತರಾದ ವಿಧವೆಯರ ಸಂಖ್ಯೆಯು ಹೆಚ್ಚಿ ಹೋಗಿದೆ. ಈ ಬಾಲವಿವಾಹ ಪದ್ಧತಿಯು ಸ್ತ್ರೀಯರಲ್ಲಿ ವಿದ್ಯಾಭ್ಯಾಸವನ್ನು ಅಸಾಧ್ಯವಾಗ ಮಾಡಿರುವುದು. ಪ್ರಜಾಜನರಲ್ಲಿ ಬಲಹೀನ ನಿಸ್ತೇಜಿಗಳ ಸಂಖ್ಯೆಯು ಹೆಚ್ಚಿರುವುದು. ಸ್ತ್ರೀಯರ ಹೀನದೆಸೆಯಿಂದ ದೇಶಕ್ಕೂ ಹೀನದೆಸೆಯು ಪ್ರಾಪ್ತವಾಗಿರುವುದು. ಪ್ರಜಾಶಿಕ್ಷಿತ ಮುಂದಾಳುಗಳಲ್ಲಿ ಹಲವರಿಗೆ ಇಂಥಾ ರೂಢಿಯನ್ನು ಮುರಿದು ಬಿಟ್ಟು ಧರ್ಮಶಾಸ್ತ್ರದ ಪ್ರಾಚೀನ ಪ್ರೌಢ ವಿವಾಹ ಪದ್ಧತಿಯನ್ನೇ ಅವಲಂಬಿಸಿ ನಡಿಯುವುದು ಹಿಂದೂ ಸಮಾಜದ ಏಳಿಗೆಗೆ ಅಗತ್ಯವೆಂತ ತೋರಿ ಬಂದಿರುವುದು. ಆದರೆ ಹಿರಿಯ ರೂಢಿಯನ್ನೂ ಈ ರೂಢಿಗೆ ಆಧಾರವಾಗಿರುವ ಕೆಲವು ಕಲ್ಪಿತ ಶಾಸ್ತ್ರ ನಿಯಮಗಳನ್ನೂ ಆಲೋಚಿಸಿಕೊಂಡು ಸರಕಾರದವರ ನ್ಯಾಯಸ್ಥಾನಗಳಲ್ಲಿ ಪ್ರೌಢ ವಿವಾಹ ವಿಧಿಯು ಶಾಸ್ತ್ರ ಸಮ್ಮತವಲ್ಲವೆಂಬ ಅಭಿಪ್ರಾಯವು ತಲೆದೋರಬಹುದೆಂಬ ಸಂಶಯದಿಂದ ಅಂಥಾ ಸಂಶಯ ನಿವಾರಣಾರ್ಥವಾಗಿ ಶ್ರೀನಿವಾಸ ಶಾಸ್ತ್ರಿಗಳು ಈ ಕಾನೂನು ಮಸೂದೆಯನ್ನು ಸಭೆಯ ಮುಂದೆ ತಂದಿರುವರು. ಈ ಕಾನೂನು ಮಸೂದೆಯು ಮಂಜೂರಾಗಿ ಹೋಗಿದ್ದೇ ಆದರೆ ಹಿಂದೂ ಬಾಲಿಕೆಯರಲ್ಲಿ ಪ್ರೌಢ ವಿವಾಹ ವಿಧಿಯು ಬಲತ್ಕಾರದಿಂದ ಜಾರಿಗೆ ಬರುವದೆಂಬ ಅಂಜಿಕೆಗೆ ಎಂದೂ ಆಸ್ಪದವಿರದು. ಈಗಿನ ವಿವಾಹ ಪದ್ಧತಿಯನ್ನಾಚರಿಸಲು ಸಂತೋಷ ಇಲ್ಲದವರಿಗೆ ಮಾತ್ರ ಇದರಿಂದ ಆಶ್ರಯವು ದೊರಕುವುದು. ಆದ್ದರಿಂದ ಈ ವಿಧಿಯು ಮಂಜೂರಾಗಿ ಹೋಗುವುದರಿಂದ ಸಮಾಜದಲ್ಲಿ ಯಾವ ಪದ್ಧತಿಗಳನ್ನಾದರೂ ಬಲತ್ಕಾರದಿಂದ ಜಾರಿಗೆ ತಂದಂತೆ ಆಗದು. ಮದರಾಸು ಹ್ಯಾಕೋರ್ಟಿನ ಹಿಂದೂ ಜಡ್ಜರೂ ಹ್ಯಾಕೋರ್ಟಿನ ಹಲವು ಪ್ರಾಮುಖ ವಕೀಲರೂ ಇನ್ನೂ ವಿದ್ಯಾವಂತರನೇಕರೂ ಈ ಕಾನೂನು ಮಸೂದೆಯನ್ನು ಆದರಿಸಿರುವುದರಿಂದ ನ್ಯಾಯ ವಿಧಾಯಕ ಸಭೆಯವರೂ ಇದನ್ನು ಆದರಿಸಬೇಕೆಂತ ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿಗಳವರು ಸಭೆಯಲ್ಲಿ ವಿಜ್ಞಾಪಿಸಿಕೊಂಡರು. ಪ್ರಜಾ ಪ್ರತಿನಿಧಿಗಳಲ್ಲಿ ಬಹುಮಾನಪಟ್ಟ ನರಸಿಂಹ ಅಯ್ಯರು ಮಾತ್ರ ಈ ಕಾನೂನು ಮಸೂದೆಯು ಬೇಕಾಗಿರದೆಂದು ಹೇಳಿದ್ದಲ್ಲದೆ [illegible] ಈ ಕಾನೂನು ಮಸೂದೆಯು [illegible] ಪರ್ಯಾಲೋಚನೆಗೆ [illegible] ಮಂಜೂರಾತಿ ಬಗ್ಗೆ ಈ ಕಾನೂನು ಮಸೂದೆಯು ಸಭೆಯಲ್ಲಿ ವಾದಿಸಲ್ಪಡಬೇಕಾದರೆ ವ್ಯಾಸರಾಯ ಪ್ರಭುಗಳವರ ಅಪ್ಪಣೆಯು ಪ್ರಥಮ ಬೇಕಾಗಿರುವುದರಿಂದ ಪ್ರಕೃತ ಈ ಮಸೂದೆಯ ಅಭಿಪ್ರಾಯವನ್ನಾದರೂ ವ್ಯಕ್ತಗೊಳಿಸರು. ಆದರೆ ಇಂಥಾ ಕಾನೂನು ಮಸೂದೆಯನ್ನು ಸಭೆಯಲ್ಲಿ ತರಲು ತಮ್ಮ ಆಕ್ಷೇಪವೇನೂ ಇರದೆಂದು ಸರಕಾರದವರ ಕಡೆಯಿಂದ ಬಹುಮಾನಪಟ್ಟ ಸರ್ ಹೆರೊಲ್ಡ್ ಸ್ಟುವರ್ಟರು ಹೇಳಿದರು. ನಂತರ ಈ ಕಾನೂನು ಮಸೂದೆಯು ಬಹುಮಾನಪಟ್ಟ ಶ್ರೀನಿವಾಸ ಶಾಸ್ತ್ರಿಗಳವರಿಂದ ಸಭೆಯ ಮುಂದೆ ತರಲ್ಪಡಬಹುದೆಂಬ ನಿರ್ಣಯವು ಸಭೆಯಲ್ಲಿ ಮಂಜೂರಾಯಿತು. ಆದ್ದರಿಂದ ಈ ಕಾನೂನು ಮಸೂದೆಯು ಇನ್ನು ಸರಕಾರದವರಿಂದ ಪ್ರಕಟಿಸಲ್ಪಡುವುದು. ಪ್ರಜಾಜನರು ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಸರಿಯಾಗಿ ವ್ಯಕ್ತಗೊಳಿಸುವುದು ಈಗ ಅಗತ್ಯವಾಗಿರುತ್ತದೆ.

ಈ ಸಭೆಯ ಮುಂದೆ ತರಲ್ಪಟ್ಟ ಮತ್ತೊಂದು ನಿರ್ಣಯವು ಈ ಸಂಸ್ಥಾನದ ಕೈಗಾರಿಕೆಗಳ ಅಭಿವೃದ್ಧಿ ಸಾಧನೆಯನ್ನುದ್ದೇಶಿಸಿತ್ತು. ಯುರೋಪ ಖಂಡದಲ್ಲಿ ಪ್ರಕೃತ ಪ್ರಾಪ್ತವಾಗಿರುವ ಯುದ್ಧದಿಂದ ಕೈಗಾರಿಕೆಗಳ ವಿಷಯಗಳಲ್ಲಿ ನಾವು ಇನ್ನೂ ಎಷ್ಟು ಹಿಂದುಳಿದಿರುವೆವೆಂಬುದು ಈಗ ಸರ್ವರಿಗೂ ವ್ಯಕ್ತವಾಗಿರುವುದು. ಈ ದೇಶದಲ್ಲಿ ಬೆಳೆಯುವ ಜೀನಸುಗಳು ವಿದೇಶಗಳ ಕೈಗಾರಿಕೆ ಕಾರ್ಖಾನೆಗಳಿಗೆ ಉಪಯೋಗವಾಗದಿದ್ದರೆ ಇಂಥಾ ಜೀನಸುಗಳೆಲ್ಲವು ಹಾಳಾಗಿ ಹೋಗಿ ಇಲ್ಲಿಯ ರೈತರೂ ವರ್ತಕರೂ ಹೇರಳ ದ್ರವ್ಯ ನಷ್ಟವನ್ನು ಪಡೆಯುವ ಸಂಕಷ್ಟವನ್ನು ನಾವು ಕಣ್ಣಾರೆ ಕಂಡೆವು. ನೆಲಕಡಲೆ, ಗೇರುಬೀಜ, ತೆಂಗಿನಕಾಯಿ, ಕೊಬ್ಬರಿ, ಮೊದಲಾದವುಗಳಿಗೆ ದರವಿಳಿದು ಬಹಳ ಅನರ್ಥಗಳು ಪ್ರಾಪ್ತವಾಗಿರುವವು. ನಿತ್ಯ ಉಪಯೋಗಕ್ಕೆ ಬೇಕಾಗಿರುವ ಕಾಗದವು ವಿದೇಶಗಳಿಂದ ಬರಲು ಕಠಿಣವಾಗಿ ಹೋಗುವ ಸಂದರ್ಭಗಳನ್ನು ನೋಡಿಕೊಂಡು ಬಂಗಾರ ಕಡು ಲೋಭಿಯಂತೆ ವಿಶೇಷ ಕೃಪಣತೆಯಿಂದ ಕಾಗದವನ್ನುಪಯೋಗಿಸುತ್ತಿದ್ದೇವೆ. ದಿನ ನಿತ್ಯ ನಮ್ಮ ಉಪಯೋಗಕ್ಕೆ ಬೇಕಾಗಿರುವ ಸಾಮಾಗ್ರಿಗಳ ಅಡಚಣೆಯು ಈ ಕಾಲದಲ್ಲಿ ಸರ್ವರಿಗೂ ಈ ರೀತಿ ವ್ಯಕ್ತವಾಗಿ ಕೈಗಾರಿಕೆಗಳಲ್ಲಿ ನಮ್ಮ ಯಥಾರ್ಥ ಸ್ಥಿತಿಯೇನೆಂಬುದು ನಾವೆಲ್ಲರೂ ತಿಳಿದಿರುವೆವು. ಇಂಗ್ಲಾಂಡದಲ್ಲಿಯೂ ಸಹ ಬಣ್ಣ ಸಾಮಾಗ್ರಿಗಳು ಮೊದಲಾದ ವೈರಿಗಳ ದೇಶಗಳಿಂದ ಬರುವ ಕೆಲವು ಬಡವಿಗೆ ತಕ್ಕೆಯುಂಟಾದ್ದರಿಂದ ಅಲ್ಲಿಯೇ ಇಂಥಾ ವಸ್ತುಗಳನ್ನು ತಯ್ಯಾರಿಸುವ ಉತ್ಸಾಹವು ಪ್ರಜೆಗಳಲ್ಲಿಯೂ ಸರಕಾರದವರಲ್ಲಿಯೂ ತಲೆದೋರಿದ್ದನ್ನು ಕೇಳಿ ಇಲ್ಲಿ ಪ್ರಜಾ ಪ್ರತಿನಿಧಿಗಳು ಇಂಥಾ ಸಂದರ್ಭದಲ್ಲಿ ನಮ್ಮ ಕೈಗಾರಿಕೆಗಳನ್ನು ಸರಕಾರದವರ ಸಹಕಾರದಿಂದ ಉದ್ಧರಿಸುವ ಎಂಬ ಆಲೋಚನೆಯಿಂದ ಒಂದು ನಿರ್ಣಯವನ್ನು ಕಳೆದ ಸರ್ತಿಯ ನ್ಯಾಯವಿಧಾಯಕ ಸಭೆಯ ಮುಂದೆ ತಂದರು. ಮದ್ರಾಸು ಸರಕಾರದವರ ಸಹಾನುಭೂತಿಯು ಹಿಂದೆ ಇದ್ದಂತೆಯೇ ಈವಾಗ ಸಹ ಪ್ರಜಾ ಪರವಾಗಿ ಸಂಪೂರ್ಣವಾಗಿದೆ. ಹಿಂದೆ ಸರ್ ಆರ್ಥರ್ ಲೋಲಿಯವರ ಕಾಲದಲ್ಲಿ ಉದಕ ಮಂಡಲದಲ್ಲಿ ನಡೆದ ಔದ್ಯೋಗಿಕ ಪರಿಷತ್ತಿನ ವೃತ್ತಾಂತವು ವಾಚಕರ ನೆನಪಿನಲ್ಲಿರಬಹುದು. ನಮ್ಮ ಸರಕಾರದವರು ಹಲವು ಸರ್ತಿ ಸ್ಟೇಟ್ ಸೆಕ್ರೆಟರಿಗಳಿಗೆ ಈ ಪರಿಷತ್ತಿನ ನಿರ್ಣಯಗಳನ್ನು ಮಂಜೂರುಮಾಡಬೇಕೆಂತ ಬರೆದರೂ ಪ್ರಯೋಜನವಿಲ್ಲದೆ ಹೋದ ವಿಷಯವು ವಾಚಕರಿಗೆ ಗೊತ್ತಿರಬಹುದು. ಕೈಗಾರಿಕೆ ಕಾರ್ಖಾನೆಗಳನ್ನು ಪರೀಕ್ಷಾರ್ಥವಾಗಿ ಸರಕಾರದವರು ಮೊದಲಾಗಿ ಸ್ಥಾಪಿಸಿ ಈ ವಿಷಯದಲ್ಲಿ ಪ್ರಜೆಗಳಿಗೆ ಬೇಕಾದ ಮಾಹಿತಿಯನ್ನು ಕಾರ್ಯತಃ ಕೊಡಲು ಪ್ರಯತ್ನಿಸಲಾಗುವಂತೆ ಸ್ಟೇಟ ಸೆಕ್ರೆಟರಿಗಳಿಗೆ ಬರಕೊಳ್ಳಬೇಕು, ಸಾಬೂನು, ಮೇಣದಬತ್ತಿ ಮೊದಲಾದುವುಗಳನ್ನು ತಯ್ಯಾರಿಸಲು ಸಹಾಯಕವಾದ ಎಣ್ಣೆಗಳನ್ನು ಸಿದ್ಧಮಾಡುವ ಕಾರ್ಖಾನೆಯನ್ನು ಪ್ರಥಮ ಸ್ಥಾಪಿಸಬೇಕೆಂಬುವ ನಿರ್ಣಯವು ಸ್ಟೇಟ ಸೆಕ್ರೆಟರಿಗಳ ನಿರ್ಬಂಧವು ಈ ವಿಷಯದಲ್ಲಿ ಮೊದಲೇ ಇದ್ದದ್ದರಿಂದ ಸರಕಾರದವರಿಂದ ಮಂಜೂರು ಮಾಡಲಾಗಲಿಲ್ಲ. ಆದರೆ ಇಂಗ್ಲಾಂಡದಲ್ಲಿ ಸರಕಾರದವರ ವರ್ತನೆಯು ಮಾರ್ಪಟ್ಟಿರುವುದನ್ನು ತಿಳಕೊಂಡು ಈ ಸಂದರ್ಭದ ಪ್ರಯೋಜನವು ಪ್ರಜಾಜನರಿಗೆ ಸಾಧ್ಯವಾದಷ್ಟು ಮಟ್ಟಿಗೆ ಸಿಕ್ಕುವಂತೆ ಮಾಡುವೆವೆಂಬುದಾಗಿ ಅಭಯ ದೊರಕಿದೆ. ಇದಲ್ಲದೆ ಹಿಂದೂಸ್ಥಾನದಿಂದ ಸಾಮಗ್ರಿಗಳು ಪರದೇಶಕ್ಕೆ ವೈಯ್ಯಲ್ಪಟ್ಟು ಅಲ್ಲಿಯ ಕೈಗಾರಿಕೆ ಕಾರ್ಖಾನೆಗಳಲ್ಲಿ ರೂಪಾಂತರವನ್ನು ಹೊಂದಿ ಬರುವ ವಸ್ತುಗಳನ್ನು ತರಿಸಿ ಇವುಗಳ ರೂಪಾಂತರವು ಇಲ್ಲಿಯೇ ನಡೆಯುವಂತೆ ಬೇಕಾದ ಮಾಹಿತಿಯನ್ನು ಪ್ರಕಟಿಸಲಿಕ್ಕೂ ಈ ವಿಷಯದಲ್ಲಿ ಬೇಕಾದ ಇತರ ಎಲ್ಲಾ ವಿವರವನ್ನು ಹೇಳಲಿಕ್ಕೂ ಒಂದು ಏರ್ಪಾಡು [illegible] ಮಾಡಬೇಕಾಗಿಯೆಂಬ ನಿರ್ಣಯವನ್ನು ಸರಕಾರದವರು [illegible]

ಈ ವಿಷಯದ ಮುಂದಿನ [illegible] ಇನ್ನೂ ಕೆಲವು ಪ್ರಸ್ತಾಪಗಳನ್ನು [illegible]

ಮಹಾಭಾರತವೂ ಅದರ ಭಾಷಾಂತರವೂ.

ಕುರುಕ್ಷೇತ್ರದಲ್ಲಿ ಕೌರವ ಪಾಂಡವರ ಯುದ್ಧವು ಕ್ರಿ. ಶ. ಪೂರ್ವದಲ್ಲಿ ಎಷ್ಟೋ ನೂರು ವರ್ಷಗಳ ಮೊದಲೇ ನಡೆದದ್ದಾದರೂ ಅದರ ದೇಖಾವೆಗಳು ಭಾರತೀಯರಿಗೆ ಇದ್ಯಾಪಿ ಕಣ್ಣೆದುರಿನಲ್ಲಿಯೇ ನಡೆದಂತೆ ಕಾಣುತ್ತವೆ. ಏಕೆಂದರೆ ಈ ಯುದ್ಧದ ವರ್ಣನೆಯನ್ನು ಕೊಡುವಂಥಾ, ಶ್ರೀ ವ್ಯಾಸ ಮಹರ್ಷಿಗಳ ಪ್ರಸಾದವಾದ ಮಹಾಭಾರತ ಗ್ರಂಥವು ಇವ್ವರ ವರೆಗೆ ಅಭಿಜ್ಞರಿಂದ ಆಸ್ವಾದಿಸಲ್ಪಡುತ್ತ ಬಂದಿದೆ. ಈ ಮಹಾಭಾರತವು ಇಸೋಪ್ ನೀತಿಯಂತೆ ಕಟ್ಟು ಕಥೆಯಲ್ಲ, ವಿಕಾರ್ ಅಫ್ ವೇಕ್‌ಫೀಲ್ಡದಂತೆ ಮನೋರಂಜಕವಾದ ಕಾದಂಬರಿಯಲ್ಲ; ಹೆಮ್ಲೆಟ್‌ದಂತೆ ಕಲ್ಪಿತ ನಾಟಕವೂ ಅಲ್ಲ. ಆದರೆ ಒಂದು ಸಮಯದಲ್ಲಿ ದಾಯಾದ್ಯಮತ್ಸರದಿಂದ ಪ್ರೇರಿತವಾಗಿ ನ್ಯಾಯ ನೀತಿಯ ಮಾರ್ಗವನ್ನು ತೊರೆದು, ದುರ್ಮಂತ್ರ ನಡಿಸುತ್ತಿರುವ ರಾಜಕುಲದೊಳಗೆ ನಡೆದ ಘೋರ ಸಂಗ್ರಾಮದ ಇದೊಂದು ಐತಿಹಾಸಿಕ ಚರಿತ್ರೆಯಾಗಿರುತ್ತದೆ. ಈ ಘೋರ ಸಂಗ್ರಾಮವನ್ನು ವರ್ಣಿಸುವಾಗ ಆಯಾ ಪ್ರಸಂಗಕ್ಕೆ ಅನುಗುಣವಾದ ಉಪಕಥೆಗಳನ್ನೂ, ತತ್ವಜ್ಞಾನವನ್ನೂ, ವಿವಿದ ವರ್ಣನೆಗಳನ್ನೂ, ವ್ಯಾಸ ಮಹರ್ಷಿಗಳು ತಮ್ಮ ಪ್ರತಿಭಾಸಂಪನ್ನ ಮತ್ತು ಓಜಸ್ವಿಯಾದ ವಾಣಿಯಿಂದ ಗ್ರಥಿಸಿರುವ ಕಾರಣ ಈ ಮಹಾಗ್ರಂಥವು ಒಂದೇ ಸಮಯದಲ್ಲಿ ಜ್ಞಾನ ಮತ್ತು ಮನೋರಂಜನ ಇವುಗಳ ಭಾಂಡಾರವಾಗಿದೆ. ಮನುಷ್ಯನಿಗೆ ತನ್ನ ಜೀವಕಾಲದಲ್ಲಿ ಯಾವುದೇ ಕಷ್ಟ ಪ್ರಸಂಗವಾಗಲಿ ವಿಪತ್ತಾಗಲಿ ಬಂದರೆ ಅದಕ್ಕೆ ತಕ್ಕದಾದ ಸಮಾಧಾನವು ಈ ಭಾರತದಲ್ಲಿ ಸಿಗುವಂತೆ ಇನ್ನು ಎಲ್ಲಿಯೂ ಸಿಗಲಾರದು. ಇದಕ್ಕಾಗಿಯೇ "ವ್ಯಾಸೋಚ್ಛಿಷ್ಟಂ ಜಗತ್ಸರ್ವಂ" ಎಂಬ ಮಾತು ಸರ್ವಸಾಧಾರಣವಾಗಿ ಪ್ರಚಾರದಲ್ಲಿ ಬಂದಿದೆ. ಈ ಅಮೂಲ್ಯವಾದ ಭಾಂಡಾರವು ಕೈಗೆ ಸಿಕ್ಕಿದ್ದಲ್ಲಿ ಯಾರಿಗೆ ತಾನೆ ಉತ್ಸಾಹವು ಬರಲಾರದು? ಮಹಾಕವಿಯಾದ ಕಾಲಿದಾಸನ ಶಾಕುಂತಲವು ಇದೇ ಭಾಂಡಾರದೊಳಗಿನ ರತ್ನವು! ಶಿಶುಪಾಲವಧ, ಕಿರಾತಾರ್ಜುನೀಯ ಮುಂತಾದ ಕಾವ್ಯರತ್ನಗಳಾದರೂ ಈ ಭಾಂಡಾರದಿಂದಲೇ ಲಭಿಸಲ್ಪಟ್ಟಿರುತ್ತವೆ. ಇದಂತೂ ಇರಲಿ, ಹಿಂದುಸ್ಥಾನದೊಳಗೆ ಪ್ರಚಲಿತವಿರುವ ಆಯಾ ಪ್ರಾಂತ್ಯದ ಪ್ರಾಕೃತ ಭಾಷೆಯ ಕವಿಗಳು ತಮ್ಮ ತಮ್ಮ ಅಭಿರುಚಿಗೆ ಅನುಸಾರವಾಗಿ ಈ ಮಹಾಭಾರತದಿಂದಲೇ ಎಷ್ಟೋ ಮಹಾ ಕಾವ್ಯಗಳನ್ನೂ, ನಾಟಕಗಳನ್ನೂ, ಭಾಣಗಳನ್ನೂ, ರಚಿಸಿರುತ್ತಾರೆ.

ಇಂತಹ ಅತ್ಯುತ್ತಮವಾದ ಗ್ರಂಥವು ಇತ್ತಲಾಗಿನ ಕನ್ನಡಿಗರಿಗೆ ಅಪರಿಚಿತವಲ್ಲದಿದ್ದರೂ ಅಪೂರ್ವವಾಗುತ ಬಂದಿದೆ. ಇದು ಶೋಚನೀಯವಾದ ಮಾತು! ಇದರ ಮುಖ್ಯಕಾರಣವೇನಂದರೆ—ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಈಗಿನ ಜನರಿಗೆ ಹೊಟ್ಟೆ ಹೊರಕೊಳ್ಳುವ ಪ್ರಸಂಗವು ಬಂದಿರುವ ಕಾರಣ ಅದರಲ್ಲಿಯೇ ಅವರ ಕಾಲವು ಕಳೆಯುತ್ತದೆ. ಬಾಲ್ಯ ಮತ್ತು ತಾರುಣ್ಯ—ಇವು ವಿದ್ಯಾಭ್ಯಾಸಕ್ಕೂ, ಉದ್ಯೋಗಪ್ರಾಪ್ತಿಗೂ ಕ್ರಮಶಃ ಕಾರಣವಿರುವುದರಿಂದ ಆ ಎರಡೂ ಅವಸ್ಥೆಗಳು ಪರಕೀಯ ವಿದ್ಯೆಗೆ ಮಾರಿಹೋಗಿರುತ್ತವೆ. ಹೀಗಿರುವಲ್ಲಿ ವೇದ, ಉಪನಿಷತ್ತು, ಸ್ಮೃತಿ, ಸೂತ್ರ, ಷಟ್‌ಶಾಸ್ತ್ರ, ರಾಮಾಯಣ, ಮಹಾಭಾರತ ಮುಂತಾದ ಭಾರತೀಯ ವಾಙ್ಮಯದ ವಾರ್ತೆ ಕೂಡಾ ಅವರಿಗೆ ತಿಳಿಯದಿದ್ದರೆ ಏನು ಆಶ್ಚರ್ಯವಲ್ಲ. ಕೋಲೇಜಿನಿಂದ ಎಫ್. ಎ. ಬಿ. ಎ. ಮುಂತಾದ ಈ ಬಿರುದುಗಳನ್ನು ಪಡೆದು ಹೊರಗೆ ಬಂದ ಮಾತ್ರಕ್ಕೆ ತಾವು ಸರ್ವಜ್ಞರೆಂದೆಣಿಸುವವರು ಅನೇಕರಿರುತ್ತಾರೆ. ಆದರೆ ಪಾಪ! ಇವರ ಆ ಸರ್ವಜ್ಞತ್ವವು ಕೋಲೇಜು ಗೇಟಿನ ಹೊರಗೆ ಅಷ್ಟೇನೂ ಕೆಲಸ ಮಾಡದು! ಬರೇ ಪಂಗುವಾಗಿರುವುದು! ಈ ಸಂಗತಿ ಮಾತ್ರ ಅವರಿಗೆ ಗೊತ್ತಿರುವುದಿಲ್ಲ. ಅಸ್ತು. ಹೇಳುವ ತಾತ್ಪರ್ಯವೇನೆಂದರೆ—ಆಧುನಿಕ ಶಿಕ್ಷಣವನ್ನು ಹೊಂದಿದವರು ಹೆಚ್ಚಾಗಿ ತಮ್ಮ ಪ್ರಾಚೀನ ವಾಙ್ಮಯಕ್ಕೆ ಪರಕೀಯರಾಗಿರುತ್ತಾರೆ. ಈ ಶಿಕ್ಷಣದ ಪ್ರಸಾರವಾಗುವುದಕ್ಕಿಂತ ಪೂರ್ವದಲ್ಲಿ ಪ್ರಾಯಶಃ ಎಲ್ಲಾ ಹಳ್ಳಿಗಳಲ್ಲಿ ರಾಮಾಯಣ ಮಹಾಭಾರತಗಳ ವಾಚಕವು ನಡೆಯುತ್ತಿತ್ತು. ದಶಾವತಾರದ ಮೇಳಗಳ ಮುಖಾಂತರ ಎಷ್ಟೋ ಪ್ರಸಂಗಗಳು ಆಡಲ್ಪಡುತ್ತಿದ್ದುವು. ಈ ಪ್ರಕಾರ ಕೆಲಕೆಲವು ಅಂಶದಿಂದಾದರೂ ಆ ಐತಿಹಾಸಿಕ ಪ್ರಸಂಗಗಳ ನೆನಪು ತಕ್ಕ ಮಟ್ಟಿಗೆ ಸಜೀವವಾಗಿತ್ತು. ಆದರೆ ಪ್ರಕೃತ ಸಮಯದಲ್ಲಿ ಮೇಲೆ ಹೇಳಿದಂತೆ ಸಾಧಾರಣವಾಗಿ ಎಲ್ಲರ ಒಲವು ನವೀನ ವಿದ್ಯೆ, ನವೀನ ಸಂಸ್ಕೃತಿ, ಇವುಗಳ ಕಡೆಗೆ ಇದ್ದ ಕಾರಣ ಮಹಾಭಾರತಾದಿ ಗ್ರಂಥಗಳಿಗೆ ಶೋಚನೀಯ ಅವಸ್ಥೆಯು ಒದಗಿರುತ್ತದೆ.

ಈ ಪ್ರಕಾರ ಮಹಾಭಾರತ ಮುಂತಾದ ಗ್ರಂಥಗಳು ಈಗಿನ ವಿದ್ಯಾ ಶಾಲೆಗಳಿಂದ ಬಹಿಷ್ಕರಿಸಲ್ಪಟ್ಟವು; ಅಲ್ಲಲ್ಲಿ ಆಗತಕ್ಕ ವಾಚಕಗಳೂ ನಿಂತವು; ಭಾಗವತರ ಹರಿಕಥೆಯೂ ಕಡಿಮೆಯಾಯಿತು; ಆಟಗಳೂ ರುಚಿಸದೇ ಹೋದವು. ಹೀಗಾದ ಮೇಲೆ ಇವುಗಳಿಗೆ ಪ್ರತಿನಿಧಿಯಾಗಿ ನೋವೆಲ್‌ಗಳು ಅವತರಿಸಿದುವು. ಯುವ ಯುವತಿಯರ ಪ್ರಣಯಗರ್ಭಗೋಷ್ಠಿಗಳಿಂದಲೂ, ಅಸಂಸ್ಕೃತ ಮತ್ತು ಅಸಭ್ಯ ಕಲ್ಪನೆಗಳಿಂದಲೂ ತುಂಬಿರುವಂಥ ಕಾದಂಬರಿಗಳು ಹೆಚ್ಚುತ್ತ ಹೋಗಿ ಅವುಗಳ ಆಘಾತದಿಂದ ವಿದ್ಯಾರ್ಥಿವರ್ಗದ ಮನೋ ಬಿತ್ತಿಯು ಅದೃಢವಾಗುತ್ತ ಬಂದಿದೆ. ರಾಮ, ಯುಧಿಷ್ಠಿರ, ಹರಿಶ್ಚಂದ್ರ, ವಿಕ್ರಮಾದಿತ್ಯ ಮುಂತಾದ ಮಹಾತ್ಮರ ಚರಿತ್ರೆಗಳು ಈಗಿನ ವಿದ್ಯಾರ್ಥಿಗಳಿಗೆ ತಿಳಿಯದೆ ಇದ್ದರೂ ನೆಪೋಲಿಯನ್, ಸೀಝರ್, ವಾಸಿಂಗ್‌ಟನ್, ಎಲಿಜಾಬೇತ್ ಮುಂತಾದವರ ಚರಿತ್ರೆಗಳು ಸಾದ್ಯಂತವಾಗಿ ಅವಗತವಿರುವವು. ಸಾಕಲ್ಲವೇ! ಇನ್ನೇನು ಬೇಕು? ಆದರೆ ಇದೇ ಕ್ರಮವು ಇನ್ನು ಕೆಲವು ವರ್ಷ ಮುಂದರಿಸಿದರೆ ಶ್ರಾದ್ಧದಲ್ಲಿ ಪಿಂಡಪ್ರದಾನ ಮಾಡುವಾಗ ಪಿತೃ, ಪಿತಾಮಹ, ಪ್ರಪಿತಾಮಹ ಪಿತೃತ್ರಯಿಗಳ ಉಚ್ಚರಿಸುವಾಗ ಪಕ್ಕನೆ, ಸೀಸರ್ ಮತ್ತು ರಾಜರ್ಷಿಗಳ ಮುಖದಿಂದ ಏನಾದರೂ ನಿತ್ಯಪರಿಪಾಠದ ಹೆಸರುಗಳು ಹೊರಟಾವೋ ಏನೋ ಎಂಬದೊಂದು ಸಂಶಯ ಮಾತ್ರ ಬರುತ್ತದೆ. ಇಂಥ ಏಕಾಂಗಿಯಾದ ಶಿಕ್ಷಣದಿಂದ ದೇಶದ್ದಾಗಲೀ ಜನತೆಯದಾಗಲೀ ಅಥವಾ ಭಾಷೆಯದ್ದಾಗಲೀ ಪ್ರಗತಿಯು ಹೇಗಾದೀತು? ಯಾವ ಜನಾಂಗದಲ್ಲಿ ಪೂರ್ವ ಪರಂಪರೆಯು ಶಿಥಿಲವಾಗುತ್ತ ಬರುವುದೋ, ಆರ್ಷ ಸಂಪ್ರದಾಯವು ತಿರಸ್ಕರಿಸಲ್ಪಡುವುದೋ, ಸ್ವಂತ ವಾಙ್ಮಯವು ಪರಕೋನ್ಮುಖವಾಗುತ್ತ ಬರುವುದೋ ಆ ಜನಾಂಗದ ಪ್ರಗತಿಯು ಹೇಗಾದೀತು? ಇರಲಿ. ಈ ಪ್ರಸ್ತಾಪವು ಪ್ರಕೃತ ಪ್ರಸಂಗಕ್ಕೆ ಅನುಪಯುಕ್ತವಾದ ಕಾರಣ ನಮ್ಮ ಮುಖ್ಯ ಸಂಗತಿಯನ್ನೇ ಮುಂದರಿಸೋಣ. ಮೇಲೆ ವಿವರಿಸಿದಂತೆ ಮಹಾಭಾರತದ ಮಹತ್ವವನ್ನು ಸಮಂಜಸವಾದ ಪ್ರತಿ ಒಬ್ಬರೂ ಒಪ್ಪಿಕೊಳ್ಳತಕ್ಕದ್ದೇ. ರಾ. ಬ. ಸೀ. ವಿ. ವೈದ್ಯ ಎಮ್. ಎ. ಎಲ್. ಎಲ್. ಬಿ. ಮಾಜೀ ಚೀಫ್ ಜಸ್‌ಟಿಸ್ ಗ್ವಾಲ್ಹೇರ್ ಇವರು ತಮ್ಮ ಗ್ರಂಥದಲ್ಲಿ ಮಹಾಭಾರತವನ್ನು ಒಂದೇ ವಾಕ್ಯದಿಂದ ವರ್ಣಿಸಿರುವರು. ಅದರ ತಾತ್ಪರ್ಯವೇನೆಂದರೆ—"ಮಹಾಭಾರತವು ಇಹಪರಲೋಕಗಳ ಮಾರ್ಗವಾಗಿದ್ದು ಒಂದು ರಾಷ್ಟ್ರಕ್ಕೆ ಬೇಕಾದ ಉತ್ತಮೋತ್ತಮ ಗುಣಗಳನ್ನು ಪೋಷಿಸಿ ಸಂವರ್ಧಿಸುತ್ತದೆ." ಈ ರೀತಿಯಾಗಿ ದೇಶಕ್ಕೆ ಉಪಕಾರವಾಗುವ ಗ್ರಂಥವನ್ನು ಆಮೂಲಾಗ್ರ ಶುದ್ಧ ಕನ್ನಡದಲ್ಲಿ ಭಾಷಾಂತರಿಸಿದರೆ ಅದರಿಂದ ಕನ್ನಡಿಗರಿಗೆ ಒಂದು ಒಳ್ಳೇ ಪ್ರಯೋಜನ ಸಿಗುವುದೆಂದು ಕೆಲವು ಸನ್ಮಾನ್ಯರು ಸೂಚಿಸಿರುವರು. ಆದರೆ ಈ ಕಾರ್ಯವು ಬಹಳೇ ವ್ಯಾಪಕ ಮತ್ತು ಮಹತ್ವವುಳ್ಳದ್ದಾದುದರಿಂದ ಇದಕ್ಕೆ ಲೋಕಾಶ್ರಯವಿಲ್ಲದೆ ಕೊನೆಗಾಣುವುದು ಅಷ್ಟು ಸಾಧ್ಯವಲ್ಲ.

ಸಂಸ್ಕೃತ ಮಹಾಭಾರತವನ್ನು ಈ ಮೊದಲೇ ಎಷ್ಟೋ ಕವಿಗಳು ಕವಿತಾರೂಪವಾಗಿ ಕನ್ನಡದಲ್ಲಿ ಪರಿವರ್ತಿಸಿರುವುದರಿಂದ ಅದು ಕಾವ್ಯ ರಸಾಸ್ವಾದ ಲೋಲುಪರಿಗೆ ಮಾತ್ರ ಹೃದ್ಯ ಮತ್ತು ಪೇಯವಾದೀತಲ್ಲದೆ ಬೇರೆಯವರಿಗೆ ಕಬ್ಬಿಣ ಕಡ್ಲೆಯೇ ಸರಿ. ಈಗ ಅದನ್ನು ಹೊಸಗನ್ನಡದಲ್ಲಿ ಭಾಷಾಂತರಿಸಿದರೆ ಶಾಲೆಯೊಳಗಿನ ಪ್ರೌಢ ವಿದ್ಯಾರ್ಥಿಗಳಿಗೂ, ಉದ್ಯೋಗಸ್ಥರಿಗೂ, ಸಾಮಾನ್ಯ ವಾಚಕರಿಗೂ, ಸುಶಿಕ್ಷಿತ ಸ್ತ್ರೀಯರಿಗೂ ಅದು ಉಪಯುಕ್ತವಾದೀತೆಂಬುವುದರಲ್ಲಿ ಸಂಶಯವಿಲ್ಲ. ಈ ಗ್ರಂಥವನ್ನು ಭಾಷಾಂತರಿಸುವಾಗ ಮೂಲ ಕಥೆಯನ್ನೂ, ಕರ್ಮ, ಶ್ರದ್ಧಾ, ಭಕ್ತಿ, ಜ್ಞಾನ ಇವುಗಳಿಗೆ ಪೋಷಕವಾದ ತತ್ವಜ್ಞಾನವನ್ನೂ ಮತ್ತು ಅಲ್ಲಲ್ಲಿ ಬರುವ ಮನೋರಂಜಕವಾದ ವರ್ಣನೆಯನ್ನೂ ಲೋಪಿಸದೆ ಶುದ್ಧ ಮತ್ತು ಅತಿ ಸುಲಭವಾದ ಭಾಷೆಯಿಂದ ಆ ವ್ಯಾಸಪ್ರಸಾದವನ್ನು ಕನ್ನಡಿಗರ ಕೈಯಲ್ಲಿ ಅರ್ಪಿಸಬೇಕೆಂದು ಆಲೋಚನೆ ಇದೆ.

ಈ ಕಲ್ಪನೆಯು ಕಲ್ಪನಾ ಸ್ವರೂಪವು ಹೋಗಿ ಅದಕ್ಕೆ ಹೇಗೆ ಮೂರ್ತ ಸ್ವರೂಪವು ಬಂದೀತು ಎಂದರೆ ಈ ಕಾರ್ಯವು ಕೊನೆಗಾಣಬೇಕಾದರೆ ಯಾವ ಮಾರ್ಗವನ್ನು ಅವಲಂಬಿಸಬೇಕಾದೀತೆಂಬುದನ್ನು ಸನ್ಮಾನ್ಯರಾದ ಪತ್ರಿಕಾ ಕರ್ತರೂ, ಅನ್ಯ ಪ್ರೋತ್ಸಾಹಕರೂ ತಮ್ಮ ಯಶಸ್ವಿ ಮತ್ತು ದೃಢವಾದ ಆಲೋಚನೆಯಿಂದ ತಿಳಿಸಬೇಕಾಗಿ ಕೋರುವೆವು.

ಮಂಗಳೂರು.
ತಾ 30—11—1914.

ಆತ್ಮಾರಾಮಶಾಸ್ತ್ರೀ ಓಡ್ಲಮನೆ.

ಸತ್ಪುರುಷ ಬಾಪು ಮಹಾರಾಜ ಕೀ

(ಕಳೆದ ಸಂಚಿಕೆಯಿಂದ ಮುಂದರಿದುದು.)

ಗೋವೆಯ [illegible] ಎಂಬ ಊರಿನಲ್ಲಿ ಒಬ್ಬ [illegible] ಇನಾಮದಾರನಿದ್ದನು. ಈತನ [illegible] ಸುಮಾರು [illegible] ಜನರಿದ್ದರು.

ಕೊಂಕಣದ ವಾಯುಗುಣವು ತುಸ ಉಷ್ಣವಿದ್ದದರಿಂದ ಅಲ್ಲಿಯ ಜನರಲ್ಲಿ ಅಕ್ಕಿಯ ಗಂಜಿ ಉಣ್ಣುವ ಪ್ರಚಾರವಿದೆ. ಇದಕ್ಕನುಸಾರವಾಗಿ ಆ ಗ್ರಹಸ್ಥನಲ್ಲಿ ಒಂದು ಮುಂಜಾನೆ ೮ ಗಂಟೆಯ ಸಮಯಕ್ಕೆ ಗಂಜಿ ಉಣ್ಣುವ ತಯಾರಿ ನಡೆದಿತ್ತು. ಮಾಡಿಟ್ಟ ಆ ಗಂಜಿಯಲ್ಲಿ ಮೇಲಿಂದ ಒಂದು ಸರ್ಪವು ವಿಷವನ್ನು ಕಾರಿತು. ಒಬ್ಬ ಹೆಂಗಸು ಆ ಗಂಜಿಯನ್ನು ಸವಟಿನಿಂದ ಕರಡಿ ಎಲ್ಲರಿಗೂ ಬಡಿಸಲಿಕ್ಕೆ ಉಪಕ್ರಮಿಸಿದಳು. ಇಷ್ಟರಲ್ಲಿ ಸಾಕ್ಷಾತ್ ಪರಮೇಶ್ವರನಂತೆ ಬಾಪು ಮಹಾರಾಜರು ಅಲ್ಲಿ ಪ್ರತ್ಯಕ್ಷರಾಗಿ ಆ ಹೆಂಗಸಿಗೆ "ಅವ್ವಾ ಆ ಗಂಜಿಯಲ್ಲಿ ಸರ್ಪ ವಿಷವು ಬಿದ್ದಿದೆ, [illegible] ಬೇಡಾ ಅಂದರು" ಆ ಹೆಂಗಸಿಗೆ ಆಶ್ಚರ್ಯ ಹುಟ್ಟಿ ಈ [illegible] ಯಜಮಾನನಿಗೆ ಅರುಹಿದಳು. ಅವನು ಒಂದು ಗಂಜಿಯ ಪಾತ್ರದಲ್ಲಿ ನೋಡಲು ವಿಷವಿರುವದು ನಿಜವೆಂದು ಕಂಡು [illegible] ಹ್ಯಾಗೆ ತಿಳಿಯಿತು? ಯಾರು ಹೇಳಿದರು? ಮುಂತಾದ ವಿಚಾರ ಮಾಡುವಷ್ಟರಲ್ಲಿ ಮಹಾರಾಜರು [illegible] ನಾಲ್ಕು ದಿಕ್ಕುಗಳಲ್ಲಿಯೂ ಬಹಳ ಶೋಧ ಮಾಡಿದರು. [illegible] ಇಷ್ಟು ಜನರನ್ನು ಮೃತ್ಯು ಮುಖದಿಂದ ರಕ್ಷಿಸಿದ ಸಾಧುವು ಸಿಕ್ಕಲಿಲ್ಲ. [illegible] ಬೆಳಿಗ್ಗೆ ೭ ಗಂಟೆ ಸಮಯಕ್ಕೆ ವಾಸಿಸಿದ್ದ ಶಿರವಡೆ ಊರಲ್ಲಿ [illegible] ತನಕ ಇದ್ದಿಲ್ಲ. ಶಿರವಡೆಯಿಂದ ಪಣಜಿಗೆ ೨೦ ಮೈಲ [illegible] ಮಹಾರಾಜರಿಗೂ ಮುಂಜಾನೆ ಗಂಜಿ ಉಣ್ಣುವ ಅಭ್ಯಾಸವಿತ್ತು. [illegible] ಗೃಹಸ್ಥನ ಮನೆಯಲ್ಲಿ ಗಂಜಿಯಲ್ಲಿ ಸರ್ಪ ವಿಷ ಬಿದ್ದದರಿಂದ ಅವರನ್ನು ಆ ಗಂಜಿ ಉಣ್ಣಬೇಡಿರಿ ಎಂದು ಹೇಳಲಿಕ್ಕೆ ಹೋದ್ದರಿಂದ ನಾನು ಇಲ್ಲಿ [illegible] ಬರುವಂತೆ ಆಯಿತು, ಎಂದು ಹೇಳಿದರು. [illegible] ಹುಡುಕುತ್ತಾ ಬಂದರು. ಎಲ್ಲರಿಗೂ ಅತ್ಯಾಶ್ಚರ್ಯವಾಯಿತು [illegible] ಪ್ರಾಣರಕ್ಷಣೆ ಮಾಡಿದರು. ಇಲ್ಲದಿದ್ದರೆ ದೊಡ್ಡ ಅನರ್ಥವಾಗುತ್ತಿತ್ತು.

ಆರವಳಿಯಲ್ಲಿ ಪಾಂಡುರಂಗರಾವ್ [illegible] ಗೃಹಸ್ಥನಿದ್ದನು. ದುರ್ದೈವದಿಂದ ಪುತ್ರ ಸಂತಾನವಿಲ್ಲದ್ದರಿಂದ ಅವನ ವಂಶವು ಮುಂದೆ ನಡೆಯುವಂತಿದ್ದಿಲ್ಲ. ಇಂತಹ ಸ್ಥಿತಿಯಲ್ಲಿಯೇ ಪಾಂಡುರಂಗರಾಯನು [illegible] ನೆಂಟರಿಗೂ ನಾಡಿಗರಿಗೂ ಬಹಳ ವ್ಯಸನವಾಯಿತು. [illegible] ಮಹಾರಾಜರ ತೀವ್ರ ಉಪಾಸಕರಾಗಿದ್ದರು. ಹೀಗಿರುವಲ್ಲಿ ಈ [illegible] ನಿರ್ವಂಶವಾಗುವದು ಇಷ್ಟವಲ್ಲೆಂದು ಮಹಾರಾಜರ ಮನಸ್ಸಿನಲ್ಲಿ [illegible] ಶವವನ್ನು ಅಗ್ನಿ ಸಂಸ್ಕಾರಾರ್ಥ ಸ್ಮಶಾನಕ್ಕೆ ಒಯ್ಯುತ್ತ ಮಹಾರಾಜರು [illegible] ಬಂದು "ಎಲಾ ಈತನನ್ನು ಎಲ್ಲಿ ಒಯ್ಯುವಿರಿ? ಇವನಿಗೆ ಇನ್ನೂ ನಾಲ್ಕು ಗಂಡು ಮಕ್ಕಳಾಗಲಿಕ್ಕಿವೆ. ಹಿಂದಕ್ಕೆ ನಡೆಯಿರಿ" ಎಂದರು. ತತಕ್ಷಣ [illegible] ಪ್ರಾಣವಾಯುವು ಚಲಿಸಲಾರಂಭಿಸಿತು. ತುಸ ತೆಂಗಿನೆಣ್ಣೆಯನ್ನು ನೆತ್ತಿಗೆ ಉಜ್ಜುತ್ತಲೇ ದಳವಿಯು ಎದ್ದು ಕೂತನು. ಮುಂದೆ ಸಾಧುವಚನದಂತೆ ನಾಲ್ಕು ಮಂದಿ ಗಂಡು ಮಕ್ಕಳು ಹುಟ್ಟಿ, ಈ ನಾಲ್ಕರ ವಂಶವೂ ಆರವಳಿ, ಗ್ವಾಲಿಯರ್, ಬಾಗಣೆ, ಹಲಕರ್ಣಿ, ಎಂಬ ಊರುಗಳಲ್ಲಿ ಸುಖದಿಂದಿರುತ್ತಾರೆ. ಈ ನಾಲ್ಕು ಮನೆತನದವರು ಬಾಪು ಮಹಾರಾಜರ ಪುಣ್ಯತಿಥಿಯನ್ನು ತಪ್ಪದೆ ಮಾಡುತ್ತಾ ಬರುತ್ತಾರೆ.

ಈ ಸಾಧುಗಳ ಜೀವಮಾನಕಾಲದಲ್ಲಿ ಸಾವಂತವಾಡಿಗೆ ಕ್ರಮದಲ್ಲಿ ರಾಮಚಂದ್ರ ಸಾವಂತ, ಜೈರಾಮ ಸಾವಂತ, ಸೋಮ ಸಾವಂತ, ಭೀಮ ಸಾವಂತರೆಂಬ ಅರಸರಾದರು. ಇವರಾಳಿಕೆಯಲ್ಲಿ ಮಹತ್ವ ಕಾರ್ಯಗಳನ್ನು ಕೈಕೊಳ್ಳುವ ಮೊದಲು ಈ ಅರಸರು ಮಹಾರಾಜರ ಅಭಿಪ್ರಾಯವನ್ನು ಕೇಳಿಕೊಳ್ಳುತ್ತಿದ್ದರು. ವಾಡಿ ಸರಕಾರದವರು ರೇಡಿ ಎಂಬಲ್ಲಿ ಯಶವಂತಗಡ ಕೋಟೆಯ ಹತ್ತರ ಹಡಗು ಪಡೆಯನ್ನಿಟ್ಟು ಸಮುದ್ರ ಚೋರಿಯನ್ನು ಮಾಡುತ್ತಿದ್ದರು. ಈ ಕಳ್ಳಾಟಿಕೆಯು ಯೋಗ್ಯವಲ್ಲೆಂದು ಮಹಾರಾಜರು ನಿರಂತರ ಉಪದೇಶಿಸುತ್ತಿದ್ದರು. ಒಮ್ಮೆ ಇಂತಹ ಪ್ರಸಂಗದಲ್ಲಿ ಮಹಾರಾಜರ ಆಶೀರ್ವಾದವನ್ನು ಅರಸನು ಕೇಳಲು ಅವರು "ನಿಮಗೆ ಈ ಕಳ್ಳಾಟಿಕೆಯಲ್ಲಿ ದೊಡ್ಡದೊಂದು ಹಡಗವು ಸಿಕ್ಕುವದು, ಅದರಲ್ಲಿ ಶರತ್ಕಾಲದ ಮೇಘದಂತಿಹದೊಂದು ಬಿಳೇ ಕುದುರೆಯೂ, ಅಚ್ಚ ಕೃಷ್ಣವರ್ಣದ ಇನ್ನೊಂದು ಕುದುರೆಯೂ ಇರುವವು. ಹಡಗದಿಂದಿಳಿಸುವಲ್ಲಿ ಕಪ್ಪು ಕುದುರೆಯು ಸಾಯುವದು. ಅದು ನಿಮಗೆ ಲಭಿಸದು. ಅದು ಅತಿ ಉತ್ತಮವಾಗಿರುತ್ತದೆ. ಇಷ್ಟು ಅಲ್ಲದೆ ಅದರಲ್ಲಿ ದ್ರವ್ಯವೂ ಧಾನ್ಯವೂ ವಿಪುಲವಿರುವವು", ಅಂದರು. ಅದರಂತೆಯೇ ಕುದುರೆಗಳಿಂದಲೂ ದ್ರವ್ಯ ಧಾನ್ಯಗಳಿಂದಲೂ ತುಂಬಿದ ದೊಡ್ಡದೊಂದು ಯುರೋಪಿನ ವ್ಯಾಪಾರಸ್ಥರ ನಾವೆಯು ಹಿಡಿಯಲ್ಪಟ್ಟಿತು. ಸಾಧು ವಚನದಂತೆ ಕಪ್ಪು ಕುದುರೆಯು ಸತ್ತಿತು. ಉಳಿಕೆಯ ವಸ್ತುಗಳು ಸಿಕ್ಕಿದವು. ಹಡಗದ ಮೇಲಿರುವ ದೊರೆಸಾನಿ ಮುಂತಾದ ಜನರಿಗೆ ಸಾವಂತವಾಡಿಗೆ [illegible] ಯೋಗ್ಯ [illegible] ಮಾಡಿದರು. [illegible] ಶತ್ರುಗಳ ಕೈವಶವಾದ್ದರಿಂದ ಬಹಳ [illegible] ಅರಸನ ಉಪಚಾರ ಆತಿಥ್ಯಗಳಿಂದ ಅವರು ಬಹಳ [illegible] ದೊಡ್ಡ [illegible] ಹಡಗವು [illegible] ಆದರೆ ಹಡಗವನ್ನು ಬಂದು ವಾಡಿಯಲ್ಲಿ ಇಳಿಗೆಯ ಜನರು ಒಂದೆ ಮಗ್ಗಲಿಂದ ಧಾನ್ಯವನ್ನು ತೆಗೆದ್ದರಿಂದ ಇನ್ನೊಂದು ಭಾಗವು ಭಾರವಾಗಿ ಅರ್ಧಾಧಿಕ ಧಾನ್ಯದೊಡನೆ ಹಡಗವು ಸಮುದ್ರದಲ್ಲಿ ಮುಗಚಿ ಬಿತ್ತು. ಆ ಕಾಲದಲ್ಲಿ ವಾಡಿ ಅರಸನಾದ ಭೀಮ ಸಾವಂತನು ಅಪ್ರಾಯಸ್ಥನಾದ್ದರಿಂದ ರಾಜ್ಯಭಾರಕಾರ್ಯವು ಕಕ್ಕ ಸೋಮಸಾವಂತನು ನಡಿಸುತ್ತಿದ್ದನು. "ಈ ಸಾಧುಗಳು ದೇವರಂತೆ ಅದ್ಭುತ ಕಾರ್ಯಗಳನ್ನು ಮಾಡುತ್ತಾರೆ. ಒಂದು ವೇಳೆ ಇವರು ತಮ್ಮ ರಾಜ್ಯವನ್ನು ಕೂಡ ಹರಣ ಮಾಡ್ಯಾರು. ಅಥವಾ ಬೇರೊಬ್ಬನಿಗೆ ಸಹ ಕೊಟ್ಟಾರು" ಎಂಬ ವಿಪರೀತ ಆಲೋಚನೆಯು ಈ ಕಕ್ಕನಲ್ಲಿ ಹುಟ್ಟಿ ಈ ಸಾಧುಗಳನ್ನು ಸಾಯುವ ತನಕ ಸೆರೆಯಲ್ಲಿಡಬೇಕೆಂದು ಹಿಡಿದು ತರಲಿಕ್ಕೆ ದೂತರನ್ನಟ್ಟಿದನು. ರಾಜಾಜ್ಞೆಯ ಮೇರೆಗೆ ದೂತರು ಒಂದು ಗಡಗಡನೆ ನಡಗುತ್ತಾ "ವಾರಂಟನ್ನು" ಸಾಧುಗಳ ಮುಂದಿಟ್ಟರು. ಅದರಲ್ಲಿ ಸಾಧುಗಳ ರಟ್ಟೆಗಳನ್ನು ಕಟ್ಟಿ ತರುವಂತಿತ್ತು. ಸೇವಕರು ಹಾಗೆ ಮಾಡಲಿಕ್ಕೆ ಸಮ್ಮತಿಸಲಿಲ್ಲ. ಆದರೆ ಕಿಣಿಯವರು ರಟ್ಟೆ ಕಟ್ಟಲೇ ಬೇಕೆಂದು ಹಂಡಿ ಹಿಡಿದರು. ಕೊನೆಗೆ ಅರಸನ ಮುಂದೆ ಬರುವಾಗ ಮಾತ್ರ ರಟ್ಟೆ ಕಟ್ಟಬಹುದೆಂದು ಉಭಯ ಪಕ್ಷದವರೂ ಒಪ್ಪಿಕೊಂಡರು.

ಮುಂದರಿಯುವದು.

ಸ್ತ್ರೀವಿದ್ಯಾಭ್ಯಾಸವು ಹಿಂದೂ ದೇಶದ ಏಳಿಗೆಗೆ ಅತ್ಯಾವಶ್ಯವು.

I ಮಕ್ಕಳ ಏಳಿಗೆ

ಹಿಂದೆ ಹಿಂದೂ ದೇಶವು ತನ್ನ ಉತ್ತಮ ಸ್ಥಿತಿಯ ಕ್ಷೇತ್ರೆಂದು ಕೇಳಿರುವೆವು. ಆ ಕಾಲದಲ್ಲಿ ಪ್ರತಿಸ್ತ್ರೀಪುರುಷರೆಲ್ಲರೂ ಪೂರ್ಣ ವಿದ್ಯಾವಂತರಾಗಿದ್ದರು. ಗಂಡಸರು ಮಾತ್ರವೇ ವಿದ್ಯಾವಂತರಾಗಿರಲಿಲ್ಲ. ಹೆಂಗಸರು ಸಹಾ ಗಂಡಸರಂತೆಯೇ ವಿದ್ಯಾವತಿಯರಾಗಿದ್ದರು. ಒರಿಯ ಲೌಕಿಕ ವಿದ್ಯೆ ಮಾತ್ರವೇ ಅಲ್ಲ. ಪಾರಮಾರ್ಥಿಕ ಜ್ಞಾನದಲ್ಲಿ ಕೂಡ ನಿಸ್ಸೀಮರಾಗಿದ್ದರು. ಹೆಂಗಸರಲ್ಲಿ ಅನೇಕರು ಕವಿಗಳೂ ಧರ್ಮಶಾಸ್ತ್ರಜ್ಞರೂ ಸಂಗೀತಸಾಹಿತ್ಯ ವಿದ್ಯಾಪಾರಂಗತೆಯರೂ ತರ್ಕಮೀಮಾಂಸ ಜ್ಯೋತಿಷ್ಯಗಳನ್ನು ಅರಿತವರೂ ಆಗಿದ್ದರು. [illegible] ಹೆಂಗಸರು ಹೇಳಿರುವ ವಾಕ್ಯಗಳಿರುವವು. ಅಲ್ಲದೆ ವೇದಾಂತದಲ್ಲಿಯೂ ಕೂಡ ಹೆಂಗಸರಲ್ಲಿ ಅನೇಕರು ಗಂಡಸರಿಗೆ ಸಮಾನರಾಗಿದ್ದರು. ಕೆಲವು ವೇಳೆ ಗಂಡಸರನ್ನು ಮೀರಿಸಿಯೂ ಇದ್ದರು. ಹೀಗೆ ಗಂಡಸರು ಹೆಂಗಸರು ಉಭಯತ್ರರೂ ಸಮಾನ ವಿದ್ಯಾವಂತರಾಗಿದ್ದುಕೊಂಡು ಪರಸ್ಪರ ಸಹಾಯಕರಾಗಿದ್ದದರಿಂದಲೇ ಆ ಕಾಲದಲ್ಲಿ ದೇಶವು ಅಷ್ಟು ಉತ್ತಮ ಸ್ಥಿತಿಯಲ್ಲಿದ್ದುಕೊಂಡು ಸತ್ಯಯುಗವೆಂದು ಅನ್ನಿಸಿಕೊಂಡಿತು.

ಈಗಲೂ ಮುಂದೆ ದೇಶವು ಉನ್ನತ ಸ್ಥಿತಿಗೆ ಬರಬೇಕಾದರೆ ಹೆಂಗಸರು ತಿಳುವಳಿಕೆಯುಳ್ಳವರಾಗಿ ವಿದ್ಯಾವತಿಯರಾಗಿ ಗಂಡಸರ ಜತೆಯಲ್ಲಿ ಸಮಾನರಾಗಿ ಕಲಿತು ತಾವು ಮಾಡಬೇಕಾದ ಕೆಲಸವನ್ನು ತಾವು ಮಾಡಬೇಕು. ಹೀಗೆ ಮಾಡಿದರೆ ದೇಶವು ಉತ್ತಮ ಬರುವುದೆಂಬುದನ್ನು ಯೋಚಿಸಿ ತಿಳಿಯತಕ್ಕವರಾಗಬೇಕು. ಹಾಗೆ ಮಾಡಲು ಶಕ್ತಿಯನ್ನು ಸಂಪಾದಿಸಿ ಕಾರ್ಯತಃ ಮಾಡತಕ್ಕವರಾಗಬೇಕು. ಮುಂದೆ ಜನಾಂಗವನ್ನು ತಕ್ಕ ಬೆಳಸಿ ನಿರ್ವಹಿಸಬೇಕಾದ ಬೋಧಕರು, ಧರ್ಮಜ್ಞರು, ರಾಜಕಾರ್ಯ ನಿರ್ವಾಹಕರು, ಶಾಸ್ತ್ರಜ್ಞರು, ಕುಶಲಕಲಾ ಪ್ರೌಢರು, ವರ್ತಕರು, ಸೇವಕರು ಮೊದಲಾದ ದೇಶಬಾಂಧವರಾದ ಸ್ತ್ರೀ ಪುರುಷರೆಲ್ಲರನ್ನೂ ಹೊತ್ತು ಹೆತ್ತು ಬೆಳಸಿ ತಿದ್ದಿ ಅರ್ಹರನ್ನಾಗಿ ಮಾಡಬೇಕಾದ ಅತ್ಯಂತ ಜವಾಬ್ದಾರಿಯ ಕೆಲಸದಲ್ಲಿ ಹೆಚ್ಚು ಭಾಗವು ಹೆಂಗಸರರಿಗೆ ಸೇರಿರುವುದು. ತಮಗೆ ತಿಳಿಯದೆ ಇರುವದನ್ನು ತಾವು ಇತರರಿಗೆ ಕಲಿಸುವುದು ಹೇಗೆ?

ಈಗಿನ ನಮ್ಮ ಹೆಂಗಸರಿಗೆ ಸಾಮಾನ್ಯವಾಗಿ ಅಡಿಗೆ ಮನೆಕೆಲಸ ಮೊದಲಾದವುಗಳಲ್ಲಿಯೇ ಬಹಳ ಮಟ್ಟಿಗೆ ದಿನವೆಲ್ಲಾ ಕಳೆದುಹೋಗುವುದು. ದೊರೆಯಬಹುದಾದ ಅಲ್ಪಸ್ವಲ್ಪ ವಿರಾಮಕಾಲವೂ ಕೂಡ ಯಾವ ವಿಧದಲ್ಲಿ ವೆಚ್ಚವಾಗುತ್ತಿದೆ ಎಂಬುದೂ ಸಾಮಾನ್ಯವಾಗಿ ತಿಳಿದೇ ಇರಬಹುದು. ಹೆಂಗಸರು ಒಬ್ಬರೊಬ್ಬರು ಪರಸ್ಪರ [illegible] ನಡೆಯುವ ಸಂಭಾಷಣೆಯನ್ನು ನೋಡಿದರೆ ಅವರಿಗೆ [illegible] ಯಾವ್ಯಾವ ವಿಚಾರಗಳಲ್ಲಿ ಅವರ ಮನಸ್ಸು ಕೆಲಸ ಮಾಡುತ್ತಿದೆಯೆಂಬುದೂ ಗೊತ್ತಾಗುವುದು. ಒಬ್ಬರೊಬ್ಬರೊಬ್ಬರು [illegible] ಪ್ರಶ್ನೆಯು [illegible] ವಾಯಿತೇ? ಬಳಿಕ "ಏನೇನು ಅಡಿಗೆ [illegible] ನಮ್ಮ ಮಗಳಿಗೆ ಆಗಲೇ ೯ ವರುಷ [illegible] ಮಾನರಂತೋ ಈ ಹಾಡು [illegible] ಕೇಡೇ? ಎಂದು ನಾನಾ ಪ್ರಕಾರ [illegible] ಪ್ರಾಯಗಳನ್ನು ಇವರು [illegible]

ವಾಗಿರುವ ಜನಾಂಗದ ಏಳಿಗೆಗೆ ಅವಶ್ಯಕವಾದ ವಿಷಯಗಳನ್ನು ಮಕ್ಕಳಿಗೆ ಕಲಿಸಿ ಅದಕ್ಕೆ ಅನುಗುಣವಾದ ಮಾರ್ಗದಲ್ಲಿ ಅವರನ್ನು ತಿದ್ದಿ ಬೆಳಸುವುದು ಹೇಗೆ?

ತಾಯಿಯರಿಗೆ ಮಕ್ಕಳಿಗಿಂತಲೂ ಪ್ರೇಮಾಸ್ಪದರಾದವರು ಇಲ್ಲವು. ವಾತ್ಸಲ್ಯ ಮಕ್ಕಳ ಮೇಲಿಗಾಗಿ ತಮ್ಮ ಸರ್ವಸ್ವವನ್ನೂ ಕೊಡುವರು ಸರ್ವ ಸುಖಗಳನ್ನೂ ಹುಲ್ಲು ಕಡ್ಡಿಗಿಂತ ಕಡೆಯಾಗಿ ಕಾಣುವರು. ಕೊನೆಗೆ ತಮ್ಮ ಪ್ರಾಣಗಳನ್ನಾದರೂ ಕೊಡಲು, ಸಿದ್ಧರಾಗಿರುವರು. ಅದೂ ನಿಜವೇ. ಆದರೆ ಮಕ್ಕಳ ಸ್ವಭಾವವನ್ನೂ ಅಂತಹ ಸ್ವಭಾವವನ್ನು ಯಾವ ರೀತಿಯಲ್ಲಿ ತಿದ್ದಬೇಕೆಂಬುವನ್ನೂ ತಾವು ಯಾವ ತರದ ನಡೆನುಡಿ ಸ್ವಭಾವಗಳನ್ನು ತಾಳಿದ್ದರೆ ಮಕ್ಕಳು ಅವನ್ನು ನೋಡಿ ಕಲಿಯುವುದರಿಂದ ಆ ಮಕ್ಕಳಿಗೆ ಮುಂದೆ ಮೇಲಾಗುವುದೆಂಬುದನ್ನೂ ದೇಶವು ಈಗ ಯಾವ ಸ್ಥಿತಿಯಲ್ಲಿರುವುದು, ಯಾವ ವಿಧದಲ್ಲಿ ಬದಲಾಯಿಸುತ್ತಿರುವುದು, ವಿದ್ಯಾಭ್ಯಾಸ, ವ್ಯವಸಾಯ, ಕೈಗಾರಿಕೆ, ವ್ಯಾಪಾರ, ಕುಶಲವಿದ್ಯೆ, ಶಾಸ್ತ್ರವಿಚಾರ, ಪಾರಮಾರ್ಥಿಕ ವಿಚಾರ, ಮತವಿಚಾರಗಳೂ ಏನಾಗಿರುವವು; ಇವುಗಳನ್ನು ಉತ್ತಮ ಸ್ಥಿತಿಗೆ ತರುವುದು ಹೇಗೆ ಎಂಬ ಸಂಗತಿಗಳಲ್ಲಿ ನಮ್ಮ ಹೆಂಗಸರ ತಿಳುವಳಿಕೆಯು ಎಷ್ಟರ ಮಟ್ಟಿಗಿರುವುದು. ಇವುಗಳ ಸಂಗತಿಯೂ ಚನ್ನಾಗಿ ತಿಳಿಯದೆಹೋದರೆ ಮಕ್ಕಳನ್ನು ಇವರು ತಯಾರು ಮಾಡುವುದೇನು? ಇಂತಹವರಿಂದ ತಯಾರಾದವರು ಮುಂದೆ ದೇಶದ ಏಳಿಗೆಗೆ ಕೆಲಸ ಮಾಡಬೇಕಾದರೆ ಅವರಿಗೆ ಎಷ್ಟು ಶ್ರಮ ಸಾಧ್ಯವಾಗುವುದು? ಅಲ್ಲದೆ ಈ ಕಾರ್ಯಗಳಲ್ಲಿ ಪ್ರವರ್ತಿಸಿ ಕಾರ್ಯನಿರ್ವಾಹ ಮಾಡಬೇಕಾದ ಗಂಡಸರಿಗೆ ಇವುಗಳ ವಾಸನೆಯೇ ಇಲ್ಲದ ಹೆಂಗಸರು ಸಹಾಯ ಮಾಡುವದು ಹೇಗೆ? ಹಾಗೆ ಸಹಾಯಮಾಡಲರಿಯದ ಹೆಂಗಸಿಗೆ ಸಹಧರ್ಮಿಣಿ ಎಂಬ ಹೆಸರೂ ಅರ್ಧಾಂಗಿಯೆಂಬ ಹೆಸರೂ ಸಲ್ಲುವುದೆ?

ಮಕ್ಕಳು ಏತಕ್ಕೆ ನಮ್ಮ ಮನೆಯಲ್ಲಿ ಹುಟ್ಟುವರು? ಕೆಲವರು ಒಳ್ಳೆಯ ಮಕ್ಕಳೂ ಕೆಲವರು ದುಷ್ಟರೂ, ಕೆಲವರು ವಿವೇಕಿಗಳೂ, ಕೆಲವರು ಅವಿವೇಕಿಗಳೂ ಹೀಗೆ ನಾನಾ ವಿಧವಾಗಿ ಏಕೆ ಹುಟ್ಟುವರು? ಯೋಗ್ಯರಾದ ಮಕ್ಕಳನ್ನು ಮತ್ತೂ ಶ್ರೇಷ್ಠರನ್ನಾಗಿ ಮಾಡುವುದು ಹೇಗೆ? ಅಯೋಗ್ಯರಾದ ದುಷ್ಟ ಮಕ್ಕಳನ್ನು ದಯದಿಂದಲೂ ಪ್ರೀತಿಯಿಂದಲೂ ಯುಕ್ತಿಯಿಂದಲೂ ತಿದ್ದುವುದು ಹೇಗೆ? ಮಕ್ಕಳ ದೇಹಾರೋಗ್ಯಕ್ಕೆ ಮಾಡಬೇಕಾದ್ದೇನು? ಅವರಿಗೆ ಎಂತಹ ಆಹಾರ ಕೊಡಬೇಕು? ಅವರ ಆಟಪಾಟಗಳು ಎಂಥವಾಗಿರಬೇಕು? ಅವರು ಶುಚಿಯಾಗಿರಲು ಕಲಿಸುವುದು ಹೇಗೆ? ಅವರಲ್ಲಿರುವ ಚಟುವಟಿಕೆಯನ್ನೂ ಬುದ್ಧಿ ಕುಶಲತೆಯನ್ನೂ ಭಕ್ತಿ, ವಿವೇಕ, ಪಾರಮಾರ್ಥಿಕತೆ ಪರೋಪಕಾರ ಬುದ್ಧಿಗಳನ್ನೂ ಸರಿಯಾದ ಮಾರ್ಗಗಳಲ್ಲಿ ಬೆಳಸುವುದು ಹೇಗೆ? ಮೊದಲಾದ ಅತ್ಯವಶ್ಯವಾದ ಅನೇಕ ಸಂಗತಿಗಳನ್ನು ತಿಳಿಯದೆ ಹೋದಲ್ಲಿ ಅಂತಹ ಹೆಂಗಸರಿಂದ ದೇಶವು ವೃದ್ಧಿಯಾಗುವುದು ಹೇಗೆ? ಇದನ್ನೆಲ್ಲಾ ಚೆನ್ನಾಗಿ ಯೋಚಿಸಿ ನೋಡಿದರೆ ನಮ್ಮ ಏಳಿಗೆಗೆ ಸರಿಯಾದ ಸ್ತ್ರೀವಿದ್ಯಾಭ್ಯಾಸವು ಎಷ್ಟು ಅವಶ್ಯವೆಂಬುದು ತಿಳಿಯುವುದು.

ಇತರ ವಿಷಯಗಳಲ್ಲಿ ಸ್ತ್ರೀವಿದ್ಯಾಭ್ಯಾಸವು ಎಷ್ಟು ಅವಶ್ಯಕವೆಂಬುದನ್ನು ಮುಂದೆ ಇನ್ನೊಂದಾವರ್ತಿ ವಿಚಾರಿಸೋಣ. K. N. S.

ಬೆಲ್ಜಿಯನ್ನರ ಹಿತಸೂಚನೆ.

ಬೆಲ್ಜಿಯಮ್ ದೇಶದ ನಿರಾಶ್ರಿತಳಾದ ಯುವತಿಯೊಬ್ಬಳು ಈ ಕೆಳಗೆ ಕಂಡ ಕಾಗದವನ್ನು 'ಡೈಲಿ ಮೇಲ್' ಎಂಬ ಪತ್ರಿಕೆಗೆ ಬರೆದಿರುವಳು:—

"ನನ್ನ ಪ್ರಿಯವಾದ ಬೆಲ್ಜಿಯಮ್ ದೇಶವನ್ನು ಬಿಟ್ಟು ಇಂಗ್ಲೆಂಡಿಗೆ ಬಂದ ಲಾಗಾಯಿತಿನಿಂದ ಯಾವ ತೊಂದರೆಯೂ ಸಂಭವಿಸಿರುವುದಿಲ್ಲ. ಎಲ್ಲಿ ನೋಡಿದರೂ ದಯಾರಸ, ಔದಾರ್ಯ, ಸೌಜನ್ಯ—ಇವುಗಳೇ ಕಾಣಿಸುತ್ತಲಿವೆ. ಇಂಗ್ಲೀಷಿನವರು ಬೆಲ್ಜಿಯನ್ನರಿಗೆ ಮಾಡುತ್ತಿರುವ ಸಹಾಯವು ಅಪರಿಮಿತವಾಗಿದೆ. ಆದಕಾರಣ ನನ್ನ ಕೃತಜ್ಞತೆಯನ್ನು ತೋರಿಸುವುದಕ್ಕೋಸುಗ ಈ ಲೇಖನವನ್ನು ಬರೆದಿದ್ದೇನೆ. ನನ್ನ ಪ್ರಿಯವಾದ ಬೆಲ್ಜಿಯಂ ರಾಜ್ಯವು ಪರದೇಶದ ಶತ್ರುಗಳಾದ ಜರ್ಮನ್ನರಿಗೆ ಆಶ್ರಯಕೊಟ್ಟು ತನ್ನ ನಾಶವನ್ನು ತಾನೇ ಮಾಡಿಕೊಂಡಂತೆ ಇಂಗ್ಲೆಂಡು ದೇಶವು ಮಾಡಿಕೊಳ್ಳದಿರಲೆಂಬುದೇ ನನ್ನ ಕೋರಿಕೆಯಾಗಿದೆ. ಇಂಗ್ಲೆಂಡು ದೇಶದಲ್ಲಿ ಜರ್ಮನ್ನರು ಉತ್ತಮವಾದ ಸ್ಥಿತಿಗತಿಗಳನ್ನು ಪಡೆದು, ಎಂತಹ ಪದವಿಯಲ್ಲಿದ್ದರೂ ಅವರಲ್ಲಿ ಕೆಲವು ಜನವಾದರೂ ಗೂಢಚಾರರು ಇದ್ದೇ ಇರುವರು.

"ನಮ್ಮ ದೇಶದಲ್ಲಿ ಜರ್ಮನ್ನರು ನೆಲಸಿಕೊಂಡು ನಮ್ಮಲ್ಲಿ ಮಿತ್ರತ್ವವನ್ನು ಬೆಳಸಿ ನಮ್ಮ ಹಿತಚಿಂತಕರಾಗಿದ್ದರು. ಪ್ರಾಮುಖ್ಯವಾದ ವ್ಯಾಪಾರಗಳೆಲ್ಲವೂ ಅವರ ಕೈಯಲ್ಲೇ ಇದ್ದವು. ನಮ್ಮ ಕಾರ್ಖಾನೆಗಳಲ್ಲಿಯೂ, ಗಣಿಗಳಲ್ಲಿಯೂ, ಹೋಟೇಲುಗಳಲ್ಲಿಯೂ ಜರ್ಮನ್ನರೇ ತುಂಬಿಹೋಗಿದ್ದರು. ನಾವು ಅವರ ವಿಷಯದಲ್ಲಿ ವಿಶೇಷವಾಗಿ ದಯೆಯನ್ನು ತೋರಿಸುತ್ತಿದ್ದೆವು. ನಾವು ತೋರಿಸಿದ ದಯೆಯಿಂದಲೇ, ಅವರು ಐಶ್ವರ್ಯವಂತರಾಗಲು ಅವಕಾಶವಾಯಿತು. ಈ ರೀತಿಯಲ್ಲಿ ಎಲ್ಲೆಲ್ಲಿಯೂ ಜರ್ಮನ್ನರೇ ತುಂಬಿದ್ದುದರಿಂದ ನಮ್ಮ ಸ್ವಂತ ಜನಗಳು ಜೀವನಾರ್ಥವಾಗಿ ಪರದೇಶಗಳಿಗೆ ಹೋಗಬೇಕಾಯಿತು.

ಈಗ ಕೆಲವು ತಿಂಗಳ ಹಿಂದೆ ನಮ್ಮೊಡನೆ [illegible] ಹದಿಂದಿದ್ದ ಅದೇ ಜರ್ಮನ್ನರು ನಮ್ಮ ಜನಗಳಿಗೂ, ನಮ್ಮ ದೇಶಕ್ಕೂ ತೋರಿಸದೆ, ಬಿಟ್ಟಿರುವ ದೌರ್ಜನ್ಯ ಕಾರ್ಯಗಳು ಒಂದಾದರೂ ಇರುವುದಿಲ್ಲ. ಆದಕಾರಣ, ಎಲೆ ಇಂಗ್ಲೀಷ್ ಸ್ನೇಹಿತರೇ! ನಿಮ್ಮಗಳ ಮಧ್ಯದಲ್ಲಿರುವ ಜರ್ಮನ್ನರನ್ನು ಹೇಗೆ ನಂಬುತ್ತೀರಿ? ನಮ್ಮ ಅನುಭವವನ್ನು ಕೇಳಿದಮೇಲೆಯಾದರೂ ಎಚ್ಚರಿಕೆಯಿಂದಿರಬಾರದೆ? ನಿಮ್ಮ ಕಾರ್ಖಾನೆ ಮೊದಲಾದ ಕಾರ್ಯಾಲಯಗಳಲ್ಲಿ ಮ್ಯಾನೇಜರ್ ಮೊದಲಾದ ಕೆಲಸಗಳನ್ನು ಮಾಡುತ್ತಿರುವ ಜರ್ಮನ್ನರು ನಿಮಗೆ ನಷ್ಟವುಂಟಾದರೆ ನಗುವರು. ಆಂಟ್‌ವರ್ಪ್ ಪಟ್ಟಣವು ಜರ್ಮನರ ವಶವಾದಾಗ ನಿಮ್ಮ ಹೋಟೇಲುಗಳಲ್ಲಿ ಜರ್ಮನ್ನರು ಸಂತೋಷವನ್ನು ಪ್ರದರ್ಶಿಸಿದರು. ದ್ರೋಹಿಗಳೂ, ಗುಪ್ತಚರರೂ ಆದ ಜನಗಳು ಹೋಟೇಲುಗಳಲ್ಲಿ ತಮ್ಮ ಸಂತೋಷವನ್ನು ಪ್ರದರ್ಶಿಸುತ್ತಿರುವಾಗ ನೀವು ಸುಮ್ಮನಿರುವುದು ನ್ಯಾಯವೆ? ಬೆಲ್ಜಿಯನ್ನರ ದುಃಖಕರವಾದ ಅವಸ್ಥೆಯನ್ನು ನೋಡಿ, ವಿಷಾದಿಸುತ್ತಾ, ಅವರು ಮೋಸಹೋದಂತೆ ನೀವು ಕೃತಘ್ನರಲ್ಲಿ ನಂಬುಗೆಯನ್ನಿಟ್ಟು, ಮೋಸಹೋಗಬೇಡಿರಿ.

ಈಗ ಇಲ್ಲಿ ನೆಲಸಿಕೊಂಡಿರುವ ಜರ್ಮನ್ನರಲ್ಲಿ ಯಾರು ನಂಬುಗೆಗೆ ಅರ್ಹರಾದವರು? ಯಾರು ಅನರ್ಹರಾದವರು? ಎಂಬ ವಿಮರ್ಶೆಯನ್ನು ಮಾಡುವುದಕ್ಕೆ ಪ್ರಕೃತ ಸಂದರ್ಭದಲ್ಲಿ ಸಾಧ್ಯವಿಲ್ಲ. ನಿಮ್ಮ ದೇಶವು ದುಷ್ಟರ ದ್ರೋಹಚಿಂತನೆಗೆ ಗುರಿಯಾಗದಂತೆ ಕಾಪಾಡಿಕೊಳ್ಳುವುದಕ್ಕೆ ಇದು ಸಕಾಲವಾಗಿದೆ. ಯೋಧರಲ್ಲದ ಅಸಹಾಯರಾದ ಜನಸಾಮಾನ್ಯರೂ, ಸ್ತ್ರೀಯರೂ, ವೃದ್ಧರೂ, ಪಾದ್ರಿಗಳೂ, ಚಿಕ್ಕ ಮಕ್ಕಳೂ ಬೆಲ್ಜಿಯಂ ದೇಶದಲ್ಲಿ ಶತ್ರುಗಳಿಂದ ಕತ್ತರಿಸಲ್ಪಟ್ಟುದನ್ನು ನೋಡಿ ನೀವು ಎಚ್ಚತ್ತುಕೊಳ್ಳಿರಿ.

ಇಂಗ್ಲೀಷ್ ಸ್ನೇಹಿತರುಗಳೇ! ದಯಾರಸ ಮತ್ತು ನಂಬುಗೆಯನ್ನು ತೋರಿಸುವುದರಲ್ಲಿ ಎಚ್ಚರಿಕೆಯಿಂದಿರಿ. ನಿಮ್ಮ ಮಧ್ಯದಲ್ಲಿರುವ ಪರದೇಶದ ಶತ್ರುಗಳಲ್ಲಿ ನಂಬುಗೆಯನ್ನಿರಿಸುವುದು ಪ್ರಕೃತ ಸಮಯದಲ್ಲಿ ನ್ಯಾಯವಲ್ಲವೆಂಬುದನ್ನು ತಿಳಿಯಿರಿ. ಹೀಗೆ ತಿಳಿಯದಿದ್ದರೆ, ನಿಮ್ಮ ದೇಶಕ್ಕೆ ನೀವೇ ದ್ರೋಹವನ್ನೆಣಿಸಿದಂತಾಗುವುದು. ಆದಕಾರಣ ನನ್ನ ಈ ಹಿತಸೂಚನೆಗೆ ನೀವುಗಳು ಗಮನಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಸಪಪಾಳದ ಹಣ್ಣಿನ ವ್ಯವಸಾಯ.

ಇದು ಪೇರಳೆ ನಿಂಬೆಗಳ ಜಾತಿಗೆ ಸೇರಿದ್ದು. ಸಾಧಾರಣವಾಗಿ ಎಲ್ಲಾ ತರದ ಜಮೀನುಗಳಲ್ಲಿಯೂ ಈ ಹಣ್ಣನ್ನು ಬೆಳೆಯಬಹುದು. ನೀರು ಸಲೀಸಾಗಿ ಬಸಿದು ಹೋಗದೆ ಇರತಕ್ಕ ಜಮೀನುಗಳಲ್ಲೂ ಈ ಪೈರು ಬೆಳವಳಿಕೆಯನ್ನು ಹೊಂದುವದಿಲ್ಲ. ತೇವವು ನಿಲ್ಲದೆ ಇರತಕ್ಕ ಹಗುರವಾದ ಭೂಮಿಯೂ ಇದರ ಬೆಳತೆಗೆ ಅನುಕೂಲವಲ್ಲ. ತಳದಲ್ಲಿ ಬಂಡೆ ಇದ್ದರೆ ಬೇತೆಯು ಕೆಡುತ್ತೆ. ಒಂದು ತೋಟದಲ್ಲಿ ಬಂಡೆಯು ೧½ ಅಡಿ ಕೆಳಗೆ ಇದ್ದದ್ದರಿಂದ ಪೈರು ಬೆಳವಳಿಕೆಯನ್ನು ಹೊಂದಲಿಲ್ಲ. ಎರಡು ಅಡಿ ಕೆಳಗೆ ಬಂಡೆ ಸಿಕ್ಕಿದರೆ ಗಿಡವು ಸುಮಾರು ಎರಡು ವರ್ಷಗಳ ಕಾಲ ಹುಲುಸಾಗಿರುತ್ತೆ. ನಂತರ ಬೇರಿನಲ್ಲಿ ಬಲವು ಕಮ್ಮಿಯಾಗಿ ಗಿಡದಲ್ಲಿ ಹೂವು ಉದುರುವದಕ್ಕೆ ಶುರುವಾಗುತ್ತೆ ಮತ್ತು ಗಿಡಕ್ಕೆ ಸಸ್ಯಾಹಾರವು ಒದಗದೆ ಗಿಡವು ಕಂದಿ ಹೋಗುತ್ತೆ.

ನದಿಯ ದಡಗಳಲ್ಲಿ ಅಂದರೆ ಬಂದು ಪ್ರದೇಶಗಳಲ್ಲಿ ಈ ಗಿಡವು ಚನ್ನಾಗಿ ಬೆಳವಳಿಕೆಯನ್ನು ಹೊಂದುತ್ತೆ. ಇದರ ಹಣ್ಣು ಪಕ್ವವಾದಾಗ ಕೆಂಪು ಬಣ್ಣವನ್ನು ಹೊಂದುತ್ತೆ. ಈ ತೋಟಗಳು ಎಕರೆ ೧ಕ್ಕೆ ೭೫೦ ರೂಪಾಯಿ ವರೆಗೆ ಬೆಲೆ ಬಾಳುತ್ತವೆ.

ಬಿತ್ತನೆ ಹಾಕಿ ಪೈರನ್ನು ಬೆಳೆಯುವದು ಅನುಕೂಲವಿಲ್ಲ. ನಾಗಪೂರ್‌ನಲ್ಲಿ ಬಿತ್ತನೆ ಹಾಕಿ ಸಸಿಗಳನ್ನು ಮಾಡಿದ್ದರಲ್ಲಿ ಇವುಗಳು ಮುಳ್ಳು ಕೂಡಿದ್ದವು. ಆದರೆ ಈ ಸಸಿಗಳನ್ನು ಮರಗಳ ಮೇಲೆ ಹಬ್ಬಿಸಿದರೆ ಮುಳ್ಳುಗಳು ಕಮ್ಮಿಯಾಗುತ್ತವೆ. ಮುಳ್ಳುಗಳಿಲ್ಲದೆ ಇರುವದರಿಂದ ಅನೇಕ ವಿಧದಲ್ಲಿ ಅನುಕೂಲಗಳುಂಟು. ಅಗತೆ ಮಾಡುವದಕ್ಕೂ ಗೊಬ್ಬರ ಹಾಕುವದಕ್ಕೂ ತೊಂದರೆಗಳು ಕಡಿಮೆ. ಗೊಬ್ಬರ ಮುಂತಾದ್ದು ಸರಿಯಾಗಿ ಹಾಕಿ ವ್ಯವಸಾಯ ಮಾಡಿದ ಗಿಡಗಳು ಕೂಡ ಕೆಲವು ವೇಳೆ ಚೆನ್ನಾಗಿ ಫಲಿಸುವದಿಲ್ಲ. ಇದಕ್ಕೆ ಕಾರಣವು ಸುಲಭವಾಗಿ ತಿಳಿಯುವುದಿಲ್ಲ. ಪ್ರಾಯಶಃ ನಾಟಿದ ಸಸಿಗಳು ಸರಿಯಾಗಿಲ್ಲದೆ ಇರುವಿಕೆಯು ಇದಕ್ಕೆ ಕಾರಣವಾಗಿರಬಹುದು.

ಬಿತ್ತನೆ:—ಗಿಡದ ಮೇಲೆಯೇ ಪಕ್ವವಾದ ಹಣ್ಣುಗಳನ್ನು ಆರಿಸಿ ಹತ್ತು ದಿನಗಳವರಿವಿಗೂ ಕೊಳೆಯಿಸಬೇಕು. ನಂತರ ಅವುಗಳಲ್ಲಿರುವ ಬೀಜಗಳನ್ನು ತೆಗೆದುಕೊಳ್ಳಬೇಕು. ದಪ್ಪನಾಗಿ ಬಲತಿರುವ ಬೀಜಗಳನ್ನು ಚುನಾಯಿಸಿ ಇಟ್ಟುಕೊಳ್ಳಬೇಕು. ಬೀಜಗಳನ್ನು ನೀರಿನಲ್ಲಿ ತೊಯಿಸಲು ಹುರುವಾದವುಗಳು ಮೇಲಕ್ಕೆ ಬರುತ್ತವೆ. ಭಾರವಾದ ಬೀಜಗಳು ತಲದಲ್ಲಿ ನಿಲ್ಲುತ್ತವೆ. ಇವುಗಳು ಬಿತ್ತನೆಗೆ ಅನುಕೂಲವಾದವುಗಳು. ಬೀಜಗಳನ್ನು ಕಾಲ ವಿಳಂಬ ಮಾಡಿ ಬಿತ್ತನೆ ಹಾಕಿದರೆ ಸರಿಯಾಗಿ ಬರುವದಿಲ್ಲ. ಬೀಜಗಳನ್ನು ಪಾತೆಗಳಲ್ಲಿ ದಿನಲಿನ ಝಳಕ್ಕೆ ಸಿಕ್ಕದ ಹಾಗೆ ನಡಬೇಕು. ಸಸಿಗಳು ೫ ಅಂಗುಲ ಎತ್ತರವಾದ ಮೇಲೆ ನಾಟಹಾಕಬೇಕು. ನಾಟಹಾಕುವಾಗ ಬೇರನ್ನು ಕೊಂಚ ಮಟ್ಟಿಗೆ ಕತ್ತರಿಸಬೇಕು. [illegible] ಗಿಡವು ಬೆಳತೆಯನ್ನು [illegible] ಅಂಗುಲ ಅಂತರದಲ್ಲಿ [illegible] ೨ ಅಂಗುಲ [illegible]

ಯುದ್ಧ ಸಮಾಚಾರವು.

ತಾ. 27ನೇ ನವಂಬರ:—ಈ ದಿನದಲ್ಲಿ ಪ್ರಕಟವಾದ ಪಶ್ಚಿಮ ರಣರಂಗದ ವೃತ್ತಾಂತದ ಕೆಲವಂಶವನ್ನು ಕಳೆದ ಶುಕ್ರವಾರದ ಸಂಚಿಕೆಯಲ್ಲಿ ಪ್ರಕಟಿಸಿರುತ್ತೇವೆ. ಜರ್ಮನರ ಸೇನೆಯ ಬವೇರಿಯನ್ ಸೇನಿಕರಲ್ಲಿ ೬ ಲಕ್ಷದಲ್ಲಿ ಪ್ರತ್ಯೇಕ ಒಂದು ಲಕ್ಷವೇ ಉಳಿದಿರುವುದರಿಂದ ಈ ಸೇನಿಕರಲ್ಲಿ ಕೈಸರರ ಮೇಲೆ ಹೆಚ್ಚಿನ ಅತೃಪ್ತಿಯುಂಟಾಗಿರುವುದು. ಬ್ರಿಟಿಷ ನೌಕಾವಳಿಯ ಮುಂಗಾವಲಿನ ನಾವೆಯೊಂದು ಜರ್ಮನರ ಯುದ್ಧ ನಾವೆಯನ್ನು ಸ್ಕೋತಾಳದ ಉತ್ತರ ಪ್ರಾಂತ್ಯದಲ್ಲಿ ನಾಶಮಾಡಿತು. ಅಂಗ್ಲಾಳದ ಮಾನ್ ದ್ವೀಪದ ಡಗ್ಲಾಸ್ ಎಂಬಲ್ಲಿ ಕೈದಿನಲ್ಲಿದ್ದ ೩೦೦೦ ಮಂದಿ ಜರ್ಮನ್ ಸೇನಿಕರು ದಂಗೆ ಎದ್ದು ಕಾವಲುಗಾರರ ಮೇಲೆ ಬಿದ್ದುದರಿಂದ ಈ ದಂಗೆಯನ್ನು ತಮನಿಸುವಾಗ ಸೆರೆಯಲ್ಲಿದ್ದವರಲ್ಲಿ ಐವರು ಮಡಿದು ಹೋದರು. ದಂಗೆಯು ಶಾಂತವಾಯಿತು ಪಶ್ಚಿಮ ಪ್ರಾಂತ್ಯಗಳಲ್ಲಿ ಮತ್ತೇನೂ ವಿಶೇಷ ಸಮಾಚಾರವಿದ್ದಿಲ್ಲ

ಈ ದಿನದ ಪೂರ್ವ ರಣರಂಗದ ವರ್ತಮಾನದಿಂದ ರುಷ್ಯನರ ಜಯಗಳು ಅತಿಶಯವಾಗಿ ತೋರಿಬರುತ್ತಿವೆ ಗೆಲಿಸಿಯದಲ್ಲಿ ನ್ಯೂಸೋಡಿಸ್ ಪ್ರಾಂತ್ಯವನ್ನು ಶತ್ರುಗಳಿಂದ ಪೂರ್ಣ ಕೈವಶಮಾಡಿಕೊಂಡಿದ್ದರಿಂದ ಈ ಪ್ರಾಂತ್ಯಗಳಿಗೆ ಒಸ್ಟ್ರಿಯನರಿಗೆ ತಿರಿಗಿ ಬರಲು ಯಾವ ಉಪಾಯವೂ ಇರದು. ಪೋಲೆಂಡಿನಲ್ಲಿ ಜರ್ಮನರಿಗೆ ದೊಡ್ಡ ಫಿರಂಗಿಗಳು ಮಾರ್ಗಗಳ ಸ್ಥಿತಿಯಿಂದ ಅತ್ತಿತ್ತ ಬೇಕಾದಂತೆ ತಕ್ಕೊಂಡು ಹೋಗಿ ಕಾದಾಡುವುದು ಅಸಾಧ್ಯವಾಗಿ ಬಹುದರಿಂದ ಇಲ್ಲಿಯ ಕಾಳಗಗಳಲ್ಲಿ ಜಯ ಶಿಕ್ಕುವ ಸಂಭವವು ಜರ್ಮನರಿಗೆ ಹ್ಯಾಗೂ ಇರದು.

ಟರ್ಕಿಯೊಡನೆ ನಡಿಸಿದ ಕಾಳಗಗಳಲ್ಲಿ ಬಸರಾ ಬಂದರವು ಈಗ ಪೂರ್ಣವಾಗಿ ಬ್ರಿಟಿಷ ಸೇನೆಯ ಕೈವಶವಾಗಿರುವುದು

ತಾ 28ನೇ ನವಂಬರ:—ಪಶ್ಚಿಮ ರಣರಂಗದಲ್ಲಿ ನಡೆದ ವೃತ್ತಾಂತದಿಂದ ಜರ್ಮನರು ಬ್ರಿಟಿಷ ನೌಕಾವಳಿಗೆ ತೀಯದ ತೆ ನೌಕಾವಳಿಯ ಕೆಲವು ನಾವೆಗಳನ್ನು ನಾಶಪಡಿಸಲುದ್ದೇಶಿಸಿದರೆಂಬದಾಗಿ ತೋರಿಬರುತ್ತದೆ ಈ ಉದ್ದೇಶ ನೆರವೇರುವಿಕೆಯ ಬಗೆ ಬೆಲ್ಜಿಯನ ಒಸ್ಟೆಂಡ್ ಉತ್ತರದಲ್ಲಿರುವ ಜೆಂಬ್ರುಗ್ರೆ ಎಂಬ ಬಂದರದಲ್ಲಿ ಸಮುದ್ರದಲ್ಲಿ ಮುಣುಗಿ ಚಲಿಸುವ ಸಬ್‌ಮೆರಿನ್ ನಾವೆಗಳನ್ನು ಜರ್ಮನರು ರೈಲ್ವೆ ಮಾರ್ಗವಾಗಿ ಇಲ್ಲಿಗೆ ತಂದಿದ್ದರು ಬ್ರಿಟಿಷರು ಇದನ್ನು ತಕ್ಕ ಸಮಯದಲ್ಲಿ ನೋಡಿಕೊಂಡು ಎರಡು ಯುದ್ಧ ನಾವೆಗಳನ್ನು ಈ ಬಂದರಕ್ಕೆ ಕಳುಹಿಸಿ ಅದನ್ನು ಪೂರ್ಣ ನಾಶಪಡಿಸಿರುತ್ತಾರೆ. ಆದ್ದರಿಂದ ಜರ್ಮನರ ಈ ಗುಪ್ತ ಪ್ರಯತ್ನವು ನೆರವೇರಲಿಲ್ಲ. ಜರ್ಮನಿಯ ಕೊನ್ಸಟೆನ್ಸ್ ಸರೋವರದ ಹತ್ತಿರ ಇರುವ ವಾಯುನಾವೆಗಳ ಕೊರಡಿಯನ್ನು ಬ್ರಿಟಿಷ ಆಕಾಶವಿಮಾನಕಾರರು ನಾಶಪಡಿಸಿರುವರು. ಪಶ್ಚಿಮ ರಣರಂಗದಲ್ಲಿ ಈ ದಿನದಲ್ಲಿ ವಿಶೇಷ ಕದನಗಳಿದ್ದಿಲ್ಲ. ಜರ್ಮನಿಯಲ್ಲಿ ತಾಂಬ್ರಕ್ಕೆ ತುಟ್ಟಿಯುಂಟಾಗಿರುವುದರಿಂದ ತೋಟೆಗಳು ಮೊದಲಾದ ಯುದ್ಧ ಸಾಮಗ್ರಿಗಳನ್ನು ತಯಾರಿಸಲು ಶತ್ರುಗಳಿಗೆ ಅಡಚಣೆ ಇರುವುದು. ಈ ಅಡಚಣೆ ನಿವಾರಣೆ ಬಗ್ಗೆ ನೊರ್ವೆ ದೇಶದಿಂದ ಜರ್ಮನಿಗೆ ತಾಂಬ ಸಾಗಿಸಿ ಕೊಡುವ ಎರಡು ನಾವೆಗಳನ್ನು ಬ್ರಿಟಿಷ ಯುದ್ಧ ನಾವೆಗಳು ಹಿಡಿದಿರುತ್ತದೆ.

ಪೂರ್ವ ರಣರಂಗದಲ್ಲಿ ವಿಸ್ತುಲಾ ವಾರ್ಟಾ ನದಿಗಳ ನಡುವೆ ನಡೆಯುವ ಯುದ್ಧದಲ್ಲಿ ರುಷ್ಯಯನರು ವಿಶೇಷ ಜಯಹೊಂದಿ ಶತ್ರುಗಳಲ್ಲಿ ಹಲವು ಸೇನಿಕರನ್ನೂ ತುಪಾಕಿಗಳನ್ನೂ ಹಿಡಿದಿರುವರು. ಮತ್ತು ಶತ್ರುಗಳ ಸೇನಾ ಬಲವನ್ನು ಉಪಾಯದಿಂದ ಎರಡು ತಂಡಗಳಾಗಿ ಶೀಳಿ ಪರಸ್ಪರ ಸಮ್ಮಂಧವು ಈ ಎರಡು ತಂಡಗಳಲ್ಲಿ ಉಂಟಾಗದಂತೆ ಅದನ್ನು ರುಷ್ಯನರು ನಿರ್ಬಲ ಪಡಿಸಿರುವರು. ಸರ್ವಿಯನರು ತಮ್ಮಗಿಂತಲೂ ಸಂಖ್ಯೆಯಲ್ಲಿ ಬಹಳವಾಗಿರುವ ಒಸ್ಟ್ರಿಯನರ ಸೇನೆಯ ಮುಂದೆ ಕಳೆದ ಎರಡು ತಿಂಗಳುಗಳಿಂದ ಕಾದಾಡಿದರೂ ತಮ್ಮ ಸೇನಾ ನೆಲೆಯನ್ನು ಬಿಟ್ಟು ಮತ್ತೊಂದು ಭದ್ರವಾದ ಸೇನಾ ನೆಲೆಯನ್ನು ಸೇರಬೇಕಾಗಿ ಬಂತೆಂಬುದಾಗಿ ತಿಳಿದು ಬರುತ್ತದೆ. ತುರ್ಕರನ್ನು ರುಷ್ಯಯನರು ಎರ್ಜೆರಮ್ ಪ್ರಾಂತ್ಯಗಳಲ್ಲಿ ಸೋಲಿಸಿ [illegible]

ತಾ 29ನೇ ನವಂಬರ:—[illegible] ಪ್ರಾಂತ್ಯಗಳಲ್ಲಿ ಫ್ರೆಂಚರು [illegible] ಜರ್ಮನ ಸೇನಿಕರು [illegible]

[illegible]

ಕೇಯ ಸೇನಿಕರು,ಶತ್ರುಗಳಲ್ಲಿ ಕೆಲವರನ್ನೂ ಕೆಲವು ಫಿರಂಗಿಗಳನ್ನೂ ಹಿಡಿದಿರುವರು. ಜರ್ಮನರು ಕೆಲ್ಲಾಯಿಗೆ ಇನ್ನೊಂದಾವರ್ತಿ ಮುಂದುವರಿಯಲು ಬೇಕಾದ ಸನ್ನಾಹಗಳನ್ನು ಮಾಡುತ್ತಿರುವರೆಂಬ ವದಂತಿಯು ಈ ದಿನದಲ್ಲಿ ಪ್ರಕಟವಾದ ಸಮಾಚಾರಗಳಲ್ಲಿರುವುದು ಪಶ್ಚಿಮ ರಣರಂಗದಲ್ಲಿ ಬೇರೇನೂ ವಿಶೇಷ ಸಮಾಚಾರವಿರದು

ಲೋಡ್ಜನಲ್ಲಿ ರುಷ್ಯಯನರ ಮತ್ತು ಜರ್ಮನರ ಸಮರವು ನಡೆಯುತ್ತಲಿದೆ ಕ್ರೆಕೌ ಪ್ರಾಂತ್ಯದಲ್ಲಿ ರುಷ್ಯನರ ಸೇನೆಯನ್ನು ಸೀಳಿ ಬಿಡಬೇಕೆಂಬವ ಶತ್ರುಗಳ ಪ್ರಯತ್ನವು ನೆರವೇರಲಿಲ್ಲ ಶತ್ರುಗಳಲ್ಲಿ ೬ ಸಾವಿರ ಜನರನ್ನು ರುಷ್ಯನರು ಸೆರೆಹಿಡಿದಿರುತ್ತಾರೆ ಚಿಕ್ಕ ಆಸ್ಯದಲ್ಲಿ ತುರ್ಕಿಯ ಸೇನಾ ಜನರಲ್ಲಿ ಸೇಕಡಾ ೬೦ರಂತೆ ಸೇನಿಕರು ತಾವು ರುಷ್ಯಯನರೊಡನೆ ಕಾದಾಡಲಾರೆವೆಂದು ತುರ್ಕರ ಸೇನೆಯನ್ನು ಬಿಟ್ಟು ಬರುವರು ಬಲ್ಗೇರಿಯವು ಇತರ ಬಾಲ್ಕಾನ್ ಸಂಸ್ಥಾನಗಳು ಸಹ ತನ್ನೊಡನೆ ಯುದ್ಧವನ್ನು ಸೇರಿಕೊಂಡು ಮಿತ್ರರಿಗೆ ಸಹಾಯ ಮಾಡುವ ಸಂಭವವಿರುವುದೆಂತ ಕೇಳಿ ಬರುತ್ತದೆ. ಪರ್ಸಿಯಾ ದೇಶವು ತನ್ನ ತಟಸ್ಥಭಾವವನ್ನು ಏನೂ ಕುಂದಿಲ್ಲದೆ ಇಟ್ಟುಕೊಳ್ಳುವೆನೆಂತ ದೃಢ ಪ್ರತಿಜ್ಞೆಯನ್ನು ಮಾಡಿಕೊಂಡಿರುವುದು

ತಾ 30ನೇ ನವಂಬರ

ಶತ್ರುಗಳು ಪಶ್ಚಿಮ ರಣರಂಗದಲ್ಲಿ ಪಡೆದ ನಷ್ಟದಿಂದ ವಿಶೇಷ ನಿರ್ಬಲರಾಗಿರುವುದರಿಂದ ಕದನಗಳ ಕಡದಾಟಗಳ ಸಮಾಚಾರವು ತುಸ ಕಡಮೆಯಾಗಿದೆ ಭಾರತೀಯ ಸೈನ್ಯದ ಹವಲ್ದಾರ ಗಂಗಾಸಿಂಗ ಎಂಬವನಿಗೆ ಯುದ್ಧದಲ್ಲಿ ತೋರಿಸಿದ ಪರಾಕ್ರಮದ ಬಗ್ಗೆ ವಿಕ್ಟೋರಿಯಾ ಕ್ರೋಸ ಬಹುಮಾನವು ದೊರಕಿರುತ್ತದೆ ಪ್ರಕೃತ ಯುದ್ಧರಂಗದಲ್ಲಿ ಛಳಿಗಾಲವು ಪ್ರಾಪ್ತವಾಗಿ ವಿಶೇಷ ಹಿಮವು ರಣರಂಗದಲ್ಲಿ ಬೀಳಹತ್ತಿದೆ. ಸಮರಗಳು ಇನ್ನು ಮೊದಲಿನಷ್ಟು ಘನವಿ ದ ನಡೆಯ ವುದು ಅಸಾಧ್ಯವೆಂತ ಭಾವಿಸುತ್ತೇವೆ

ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಯುದ್ಧದ ಈಗಿನ ಸ್ಥಿತಿ ವಿಷಯ ಮಾಡಿದ ಭಾಷಣಗಳು ಈ ದಿನ ಪ್ರಕಟವಾದ ವೃತ್ತ ಪತ್ರಿಕೆಗಳಲ್ಲಿರುವವು ಹಿಂದೂಸ್ಥಾನದ ಅಂಡರ್ ಸೆಕ್ರೆಟರಿಯವರೂ ಸ್ಟೇಟ್ ಸೆಕ್ರೆಟರಿಗಳೂ ಸಾಮ್ರಾಜ್ಯದ ಸರಕಾರಕ್ಕೆ ಈ ಸಂದರ್ಭದಲ್ಲಿ ಭಾರತೀಯರು ಮಾಡಿದ ಸಹಾಯವನ್ನು ಪ್ರಶಂಸಿಸಿ ನಿರ್ಣಯಗಳನ್ನು ಪಾರ್ಲಿಮೆಂಟ ಸಭೆಯು ಪರಿ ವಿರಿಸಿ ಅವುಗಳನ್ನು ಮಂಜೂರು ಮಾಡಿಸಿರುತ್ತಾರೆ ಶತ್ರುಗಳ ಕಾದಾಟಗಳಿಂದ ಶತ್ರುಗಳಿಗೆ ರವಷ್ಟಾದರೂ ಪ್ರಯೋಜನವು ಇತ್ತಲಾಗೆ ದೊರಕಿರದೆಂದು ಕಿಚ್ಚನರ್ ಪ್ರಭುಗಳು ಹೇಳಿರುವರು ಮಿ। ಚರ್ಚಿಹಿಲ್ಲರ ಭಾಷಣದಿಂದ ಬ್ರಿಟಿಷ ನೌಕಾ ಪಡೆಯ ಅತ್ಯುತ್ತಮ ಸ್ಥಿತಿಯು ವ್ಯಕ್ತವಾಗಿರುವುದು ಆದ್ದರಿಂದ ಈ ಯುದ್ಧದಲ್ಲಿ ಯೋಚನೆಗೆ ಕಾರಣವಿರದೆಂದು ಇವರಿಂದ ತಿಳಿದು ಬರುವುದು ಬ್ರಿಟಿಷ ಸರಕಾರದ ಖಜಾನಾ ಮಂತ್ರಿಗಳು ಖಜಾನೆಯು ಸ್ತುತಿಕರವಾದ ಸ್ಥಿತಿಯನ್ನು ತಿಳಿಯ ಹೇಳಿರುತ್ತಾರೆ ಯುದ್ಧಕ್ಕೆ ಬೇಕಾಗುವ ಸಾಲಗಳನ್ನೂ ತೆರಿಗೆಗಳನ್ನೂ ಕೊಡಲಿಕ್ಕೆ ಅಂಗ್ಲಾಳದಲ್ಲಿ ಪ್ರಜಾ ಜನರು ಮುಂದೊತ್ತಿರುವರೆಂತ ತೋರುವುದು

ಅಂಗ್ಲಾಳದಲ್ಲಿ ಥೇಮ್ಸ್ ನದಿಯ ಸಮುದ್ರಕ್ಕೆ ಕೂಡುವ ಬಳಿಯಿಂದ ಸ್ವಲ್ಪ ದೂರವಿ ವ ಶೀಯರ್‌ನೆಸ್ ಎಂಬಲ್ಲಿ ಬ್ರಿಟಿಷ ಬುಲ್ವರ್ಕ ಎಂಬ ಯುದ್ಧ ನಾವೆಯು ಯುದ್ಧ ಸಾಮಗ್ರಿಗಳನ್ನು ತುಂಬಿಸುತ್ತಿರುವಾಗ ಮದ್ದು ಸಿಡಿದು ಆಕಸ್ಮಿಕವಾಗಿ ಮುಳುಗಿ ಹೋಗಿರುವುದು ಸಾಧಾರಣ ೭೦೦ ಜನರು ಈ ನಾವೆಯೊಂದಿಗೆ ನಾಶವಾದರು

ಪೂರ್ವ ರಣರಂಗದಲ್ಲಿ ರುಷ್ಯಯನರು ಹಂಗೇರಿಯನು ಒಳನುಗ್ಗಿರುತ್ತಾರೆ ಲೋಡ್ಜ ಸಮೀಪ ರುಷ್ಯಯನರಿಗೆ ವಿಶೇಷ ಜಯವು ದೊರಕಿರುವುದು ಮತ್ತು ಅಲ್ಲಿ ಸೆರೆ ಹಿಡಿದ ಶತ್ರುಗಳ ಕೈದಿಗಳನ್ನು ತರಲು ರುಷ್ಯಯನರ ೧೮ ರೈಲ್ವೇ ಗಾಡಿಗಳು ಹೋಗಿರುವವೆಂತ ಆ ಪ್ರಾಂತ್ಯಗಳಲ್ಲಿ ಪ್ರಕಟವಾಗುವ ಒಂದು ವರ್ತಮಾನ ಪತ್ರದಿಂದ ತಿಳಿದುಬರುವುದು ವಿಸ್ತುಲ ಮತ್ತು ವಾರ್ಟಗಳ ನಡುವೆ ಜರ್ಮನರ ಅಪಜಯವು ಸಂಪೂರ್ಣವಾಗಿದೆಂಬ ಕುರುಹುಗಳು ಈಗ ಎಲ್ಲಾ ಕಡೆಗಳಿಂದಲೂ ತೋರಿಬರುತ್ತವೆ ರುಷ್ಯಯನರೊಡನೆ ಕಾದಾಡಿ ಸೋಲಿಸಲ್ಪಟ್ಟು ತುರ್ಕರ ಸೇನಿಕರು ಜೀವದಾಸೆಯಿಂದ ಎರ್ಜೆರಮ್ ಪ್ರಾಂತ್ಯಗಳಲ್ಲಿರುವ ಕೋಟೆಗಳಿದ್ದಲ್ಲಿಗೆ ಓಡುತ್ತಿರುವರು.

ತಾ ೧ನೇ ಡಿಸೆಂಬರ. ಡಿಕ್ಸ್‌ಮುಡೆಯನ್ನು ಫ್ರೆಂಚರು ತಿರಿಗಿ ಶತ್ರುಗಳಿಂದ ಪಡೆದಿರುವರೆಂಬ ವರ್ತಮಾನವಿರುವುದು. ಭಾರತೀಯ ಹವಲ್ದಾರ ಗಂಗಾಸಿಂಗನ ಪರಾಕ್ರಮದ ಹೆಚ್ಚಿನ ವಿವರವು ಪ್ರಕಟವಾಗಿರುತ್ತದೆ ಈ ಹವಲ್ದಾರನ ಗಣ ಇರುವ ಮುರಂಗವನ್ನು ಜರ್ಮನರು ಬಲಿಕಾಯಿಸಿದರು. ಜರ್ಮನ ಸೇನಿಕರು [illegible] ಗಂಗಾಸಿಂಗನನ್ನು ಹೊಡೆ [illegible] ಗಂಗಾಸಿಂಗನು ತನ್ನ [illegible]

[illegible]

ರಾಜಾ ಸರ್ ಹರ್ನಾಮ್ ಸಿಂಗರವರ ಮಗ ಕುನ್ವರ್ ಇಂದ್ರಜಿತ ಸಿಂಗರೆಂಬವರು ಫ್ರಾನ್ಸಿನಲ್ಲಿ ಕಾದಾಡುತ್ತಿದ್ದ ಬ್ರಿಟಿಷ ಸೇನಾಶಾಖೆಯೊಂದರಲ್ಲಿ ಡಾಕ್ಟರರಾಗಿದ್ದರು. ಇವರು ಸಮರದಲ್ಲಿ ಕೊಲ್ಲಲ್ಪಟ್ಟರೆಂಬ ವಾರ್ತೆಯು ಬಂದಿರುತ್ತದೆ. ಫ್ರಾನ್ಸ್ ದೇಶದ ಪ್ರೆಸಿಡೆಂಟರಾದ ಪೋಯಿಂಕಾರೆರವರು ಜನರಲ್ ಜೊಫ್ರೆಯವರಿಗೆ ಅವರು ಯುದ್ಧದಲ್ಲಿ ತೋರಿಸಿದ ಪರಾಕ್ರಮದ ಬಗ್ಗೆ ಒಂದು ಬಹುಮಾನದ ಪದಕವನ್ನು ಬಹಳ ಸಂಭ್ರಮದಿಂದ ದಯಪಾಲಿಸಿರುತ್ತಾರೆ

ಜರ್ಮನಿಯಲ್ಲಿ ಅಂಗ್ಲಾಳದಕ್ಕಿಂತ ಗೋಧಿಯ ಬೆಲೆಯು ಬಹಳ ವಿಪರೀತವಾಗಿ ಏರಿರುತ್ತದೆ ವಿಸ್ತುಲ ಮತ್ತು ವಾರ್ಟಾ ನದಿಗಳ ಮಧ್ಯದಲ್ಲಿ ಜರ್ಮನರು ಬಹು ಕಡೆಗಳಲ್ಲಿ ರುಷ್ಯಯನರಿಂದ ಸೋಲಿಸಲ್ಪಟ್ಟಿರುತ್ತಾರೆ ವಿಸ್ತುಲ ನದಿಯ ಬಲದಡದಲ್ಲಿ ಶತ್ರುಗಳು ದಿಕ್ಕಾಪಾಲಾಗಿ ಓಡಿಹೋಗುತ್ತಿರುವರು. ಈ ಪ್ರಾಂತ್ಯಗಳಲ್ಲಿ ಕೆಲವು ಗ್ರಾಮಗಳನ್ನು ರುಷ್ಯಯನರು ಕೈವಶಮಾಡಿಕೊಂಡಿರುತ್ತಾರೆ ಒಸ್ಟ್ರಿಯಾನರಿಂದ ರುಷ್ಯನರು ಬೊಜ್ನಿಯವನ್ನು ಪಡೆದು ಕೈವಶಮಾಡಿಕೊಂಡಿರುವರು ಈ ಪಟ್ಟಣದಲ್ಲಿ ಸಹ ಹಲವು ಜನ ಸೈನಿಕರನ್ನು ಹಿಡಿದು ಕೈದಿಗಳಾಗಿ ಮಾಡಿರುವರು ಜರ್ಮನ್ ಸೇನೆಯ ಸೇನಾನೆಲೆಗಳು ರುಷ್ಯಯನರ ಮುಂದೆ ಬಹಳ ಅಪಾಯಕರ ಸ್ಥಿತಿಯಲ್ಲಿರುವವೆಂತ ಒಬ್ಬ ಯುರೋಪಿಯ ಪತ್ರದ ಬಾತ್ಮೀದಾರರು ಬರೆದಿರುತ್ತಾರೆ ಇಲ್ಲಿಂದ ಜರ್ಮನ್ ಸೇನಿಕರಲ್ಲಿ ಯಾರೂ ಹಿಂದಕ್ಕೆ ಹೋಗಲು ಉಳಿಯಲಿಕ್ಕಿಲ್ಲವೆಂತ ಹಲವರು ಊಹಿಸಿರುವರು

ಪೂರ್ವ ಪ್ರುಸ್ಯದಲ್ಲಿ ರುಷ್ಯಯನರು ಮುಂದರಿಸಿ ಬಾರದಂತೆ ಈ ಪ್ರಾಂತ್ಯಗಳಲ್ಲಿ ಕೋಟೆ ಇತ್ಯಾದಿಗಳನ್ನು ಜರ್ಮನರು ಭದ್ರಪಡಿಸುತ್ತಿರುವರು

ಒಲ್ಜಿಯಮ್ ಮತ್ತು ಫ್ರಾನ್ಸ್ ಪ್ರಾಂತ್ಯಗಳಿಂದ ಜರ್ಮನರು ಇಲ್ಲಿಗೆ ೪೫,೦೦೦ ಸೇನೆಯನ್ನು ಕಳುಹಿಸಿಕೊಟ್ಟಿರುತ್ತಾರೆ ಏಗುಪ್ತ ಪ್ರಾಂತ್ಯಗಳಲ್ಲಿ ಬೀಕಾನೀರಿನ ಒಂಟೆ ಸವಾರರಿಂದ ಕೊಲ್ಲಲ್ಪಟ್ಟ ತುರ್ಕ ಸೇನಿಕರಲ್ಲಿ ತುರ್ಕಿಯ ಸೇನಾಧಿಪತಿಗಳಾದ ಸಿಪ್ಪಿ ಪಾಶರವರು ಸಹ ಇದ್ದರೆಂದು ತಿಳಿದುಬರುತ್ತದೆ ಕಾದಾಡುವ ಜನರು ಇಲ್ಲದ ಪ್ರಾಂತ್ಯಗಳಲ್ಲಿ ವಾಯು ವಿಮಾನಗಳಿಂದ ಬೊಂಬುಗಳನ್ನು ಬಿಸಾಡುವುದು ಅನ್ಯಾಯವೆಂತ ಅಮೇರಿಕದ ಪ್ರೆಸಿಡೆಂಟ ವಿಲ್ಸನರವರು ತಿಳಿಯಹೇಳಿರುವರು ಯುದ್ಧದಲ್ಲಿ ಕಾದಾಡುತ್ತಿರುವ ರಾಷ್ಟ್ರಗಳು ಇವರ ಈ ಅಭಿಪ್ರಾಯವನ್ನು ಮನ್ನಿಸುವ ಸಂಭವವಿರುವುದು

ತಾ ೨ನೇ ಡಿಸೆಂಬರ —ಪಶ್ಚಿಮ ರಣರಂಗದಲ್ಲಿದ್ದ ಜರ್ಮನ ಸೇನಿಕರ ಕೆಲವಂಶವು ಪೋಲೇಂಡ ಪ್ರಾಂತ್ಯಗಳಿಗೆ ವರ್ಗ್ಯಾಗಿರುವುದು ಬೆಲ್ಜಿಯಮಿನಲ್ಲಿ ತೋರಿಬರುತ್ತದೆ ಈಗ ಮಿತ್ರರ ಸೇನೆಗಳ ಮೇಲೆ ದಾಳಿ ಇಡಲು ಜರ್ಮನರು ನಿರ್ಬಲರಾಗಿರುವರು. ಮಿತ್ರರ ಸೇನೆಗಳು ಪ್ರಕೃತ ಜರ್ಮನರ ಮೇಲ್ಬಾಯುತ್ತ ಅಲ್ಲಲ್ಲಿ ಕೆಲವು ಪ್ರಾಂತ್ಯಗಳನ್ನು ತಮ್ಮ ವಶಮಾಡುತ್ತಿರುವರು ಜೋರ್ಜ ಚಕ್ರವರ್ತಿಗಳು ಸೇನೆಗಳನ್ನು ನೋಡಿ ಬರಲು ತಾ. ೩೦ರಲ್ಲಿ ಫ್ರಾನ್ಸಿಗೆ ತೆರಳಿರುವರೆಂತ ಯುದ್ಧ ಸಮಾಚಾರ ಸಂಗ್ರಹದ ಆಫೀಸರರು ಪ್ರಕಟಿಸಿರುತ್ತಾರೆ.

ಜರ್ಮನರ ಎರಡು ಯುದ್ಧನಾವೆಗಳು ಲಿಬೊ ಸಮೀಪ ನಾಶಮಾಡಲ್ಪಟ್ಟವೆಂಬ ವರ್ತಮಾನವಿರುವುದು.

ಪೂರ್ವ ರಣರಂಗದಲ್ಲಿ ವಿಸ್ತುಲ ಮತ್ತು ವಾರ್ಟಾಗಳ ನಡುವೆ ಇರುವ ಜರ್ಮನ ಸೇನೆಯಲ್ಲಿ ಒಂದೆರಡು ಪಾಳಯಗಳ ಹೊರತಾಗಿ ಮಿಕ್ಕ ಎಲ್ಲಾ ಸೇನೆಯು ರುಷ್ಯಯನರಿಂದ ನಾಶಮಾಡಲ್ಪಡುವ ಸಂಭವವು ಬಂದೊದಗಿದೆಂಬುದಾಗಿ ಲಂಡನ್ ಟೈಮ್ಸ್ ಪತ್ರಿಕೆಗೆ ಪೆಟ್ರೋಗ್ರೇಡಿನಿಂದ ತಂತೀ ವಾರ್ತೆಯು ಬಂದಿರುತ್ತದೆ. ಕೈಸರರವರು ಹೀಗೆ ಸೋತುಹೋಗುತ್ತಿರುವ ತನ್ನ ಸೇನಿಕರಲ್ಲಿ ಉತ್ಸಾಹವನ್ನುಂಟುಮಾಡಲು ಸ್ವತಃ ಪೂರ್ವ ರಣರಂಗಕ್ಕೆ ಹೋಗಿರುವರೆಂಬುದಾಗಿ ತಿಳಿದುಬರುತ್ತದೆ. [illegible] ಲಿಯಮಿನ ಸರಬರಾಯಿಯು ಅಲ್ಲಿಯ [illegible] ರಿಂದ [illegible] ಒಸ್ಟ್ರಿಯನರು ಅವರನ್ನು [illegible] ರುವರು. [illegible]

[illegible]

ವಿದೇಶ ವೃತ್ತಾಂತ.

ಮೂರ್ತಿ ಪೂಜಕರಾದ ಜಾಪಾನೀಯರನ್ನು ಯುರೋಪಿಯನರ ಯುದ್ಧದಲ್ಲಿ ಸೇರಗೊಡಿಸಿದ್ದು ಯುರೋಪೀಯ ಧವಳತೆಗೆ ಭಯಸಿಂದ್ಯನೀಯವೆಂದು ಜರ್ಮನ್ ಧರ್ಮಾಧ್ಯಕ್ಷರು ಹೇಳುತ್ತಾರೆ ಆದರೆ ಇದಕ್ಕೆ ಸರ್. ಕ್ಲಾಡ್ ಮಾಕ್‌ಡೋನಾಲ್ಡ್ ಎಂಬವರು ಹೇಳುತ್ತಾರೇನಂದರೆ—"ರುಶ್ಯ ಜಪಾನಿ ಯುದ್ಧವು ನಡಿಯುತ್ತಿರುವಾಗಲೂ ರಾಜ ಪ್ರಸ್ತಾಪದ ವೇಳೆಯಲ್ಲಿಯೂ ತೋರಿಸಿದ ಜಪಾನೀಯರ ವರ್ತನವು ಅತ್ಯಂತ ಸಾಧುತ್ವ, ಪ್ರಮಾಣಿಕತನ ಮತ್ತು ಘನತೆಯುಳ್ಳದ್ದಾಗಿತ್ತು ತಮ್ಮ ಶತ್ರುಗಳಲ್ಲಾದರೂ ಅವರು ಎಷ್ಟೋ ಉದಾರ ಬಾವವನ್ನು ತೋರಿಸುತ್ತಿದ್ದರ ಪಾಯ ಹೊಂದಿದ ಮತ್ತು ಕೈದಿಗಳಾದ ರುಶ್ಯನರ ವಾರ್ತೆಯನ್ನು ಪತ್ರ ಮೂಲಕವೂ ತಂತಿ ಮೂಲಕವೂ ಕೂಡಲೇ ಕಳುಹಿಸುತ್ತಿದರು ಔದಾರ್ಯ, ಸಭ್ಯತ ಮತ್ತು ಪ್ರಮಾಣಿಕತನ ಮೊದಲಾದ ಕ್ರೈಸ್ತ ಗುಣದ ಪಾಠವನ್ನು ಜರ್ಮನಿಯಂಥಾ ಕ್ರೈಸ್ತ ರಾಷ್ಟ್ರವು ಜಪಾನಿಯರ ಕಾಲ ಬುಡದಲ್ಲಿ ಕೂತು ಕಲಿಯತಕ್ಕದ್ದು' ಇಷ ಯೋಗ್ಯತೆಯು ಜಪಾನರಲ್ಲಿರುವುದು " ಜರ್ಮನಿ ಮತ್ತು ಆಸ್ಟ್ರಿಯ ದಲ್ಲಿ ವಾಸವಾಗಿರುವ ಜಪಾನಿಯವರನ್ನು ಅಲ್ಲಿಯ ಸರಕಾರವೂ ಜನರೂ ಬಹಳ ನಿಷ್ಠುರತೆಯಿಂದ ನಡಿಸಿರತ್ತಾರೆ ಜಪಾನದಲ್ಲಿ ಇರುವ ಜರ್ಮನ್ ಮತ್ತು ಒಸ್ಟ್ರಿಯಾ ಪ್ರಜೆಗಳನ್ನಾದರೋ ಜಾಪಾನರು ಬಹಳ ಉದಾರತನದಿಂದಲೇ ನಡಿಸುತ್ತಾರೆ ಸ ಧಾರಣೆ ಹೊಂದಿದ ನಾಗರೀಕರೆಂದು ಹೇಳಿಕೊಳ್ಳುವ ಸರಕಾರವೂ, ಜನರೂ ಶಾಂತತೆಯಿಂದಿರುವ ನಿರಪರಾಧಿ ಪರಕೀಯರನ್ನು ನಿರ್ದಯೆಯಿಂದ ನಡಿಸಿ ಯಾಕೆ ತಮ್ಮ ಹೆಸರಿಗೆ ಕಳಂಕವನ್ನು ಉಂಟುಮಾಡಿಕೊಳ್ಳುತ್ತಾರೆ ಎಂದು ಜಪಾನದ ಪರರಾಷ್ಟ್ರೀಯ ಮಂತ್ರಿಯು ಕೇಳುತ್ತಾನೆ

ಒಬ್ಬ ಫ್ರಂಚ ಹುಡುಗನ ಸಾಹಸ.—ಜರ್ಮನ್ ಸೇನೆಯ ಆಫೀಸರನೊಬ್ಬನ ಒಬ್ಬ ಫ್ರೆಂಚ ಹುಡುಗನ [illegible] ದನು ಸಮಾಪದಲ್ಲಿಯೆ [illegible] ಒಬ್ಬ ಫ್ರೆಂಚ ಸಿಪಾಯಿಗೆ ಇವನಿಂದ ಈ ಬಂದೂಕು ತಕೊಂಡು ಆ ಆಫೀಸರನಿಗೆ ಗುಂಡು ಹೊಡೆದನು. ಈ ಫ್ರೆಂಚ ಸಿಪಾಯಿ [illegible] ಬಾಯಿಗೆ ಕಟ್ಟಿ ಕೊಲ್ಲುವದು [illegible] ಗಳ ಮರಾಪ್ರಾಯದ [illegible] ಫ್ರೆಂಚ ಬಾಲಕ [illegible] ಸಾಯ ಬಿಡ್ಡಿಕರ [illegible] ಕೊಟ್ಟನು ಇದರಿಂದ ಜರ್ಮನ್ ಸಿಪಾಯಿಗಳು [illegible] ಆ ಬಾಲಕನಿಗೆ ಚೆನ್ನಾಗಿ ಹೊಡೆದ [illegible] ಆತನನ್ನು [illegible] ಹೊಡೆದು ಕೊಲ್ಲಲು ನಿಲ್ಲಿಸಿದರು ಆಗ ಜರ್ಮನ ಆಫೀಸರನ ಮನಸ್ಸು [illegible] ಈ ಫ್ರೆಂಚ ಸಿಪಾಯಿಗೆ ನೀನು ನಿನ್ನ ಕೈಯಿಂದಲೇ [illegible] ಕೊಲ್ಲುವುದಾದರೆ ನಿನಗೆ ಜೀವದಾನ ಕೊಡುವೆನು" ಎಂದು ಹೇಳಿದನು ಫ್ರೆಂಚ ಬಾಲಕನು ಇದಕ್ಕೆ ಒಪ್ಪಿ ಫ್ರೆಂಚ ಸಿಪಾಯಿಯ ಕಡೆಗೆ ಗುರಿ ಇಟ್ಟು ಬಂದೂಕು ಹಿಡಿದನು ಆದರೆ ಅದರ ಕುದುರೆ ಎಳೆಯುವ ಸಮಯ ಬಂದೂಕನ್ನು ಜರ್ಮನ್ ಆಫೀಸರನ ಕಡೆಗೆ ತಿರುಗಿಸಿ ಆಫೀಸರನನ್ನು ಗುಂಡು ಹಾರಿಸಿ ಕೊಂದನು ತಕ್ಷಣದಲ್ಲಿಯೇ ಜರ್ಮನ್ ಸಿಪಾಯಿಗಳು ಬಾಲಕನನ್ನೂ, ಫ್ರೆಂಚ ಸಿಪಾಯಿಯನ್ನೂ ಸಹ ಸನೀನುಗಳಿಂದ ತಿವಿದು ಕೊಂದರು'

ಉತ್ತರ ಹಿಂದೂಸ್ಥಾನ.

ಮಹಮ್ಮದೀಯರ ಪುಣ್ಯಕ್ಷೇತ್ರ ಸ್ಥಳವಾದ ಜೆಡ್ಡಕ್ಕೆ ಯಾತ್ರೆ ಮಾಡುವ ಮಹಮ್ಮದೀಯರನ್ನು ಜೆಡ್ಡದಿಂದ ಅವರವರ ದೇಶಕ್ಕೆ ಕಳುಹಿಸಿ ಕೊಡುವ ಖರ್ಚಿನ ಬಗ್ಗೆ ಒಂದು ಲಕ್ಷ ರೂಪಾಯಿಯನ್ನು ಇಂಪಿರಿಯಲ್ ರೆವಿನ್ಯೂ ಹಣದಿಂದ ಕೊಡಬೇಕಾಗಿ ಮುಂಬಾಯಿ ಸರಕಾರದವರು ಮಾಡಿದ [illegible] ಸ್ಟೇಟ್‌ಸೆಕ್ರೆಟರಿಯವರು ಒಪ್ಪಿಗೆ ಕೊಟ್ಟಿರುವರು. [illegible] ಹಣವನ್ನು ಈ ಉದ್ದೇಶಕ್ಕಾಗಿ ಹಿಂದೂಸ್ಥಾನದ ಇವರ ಮಹಮ್ಮದೀಯರು ಒದಗಿಸಿಕೊಡಬೇಕಾಗುವದು.

ಇದೇ ಕಳದ ತಾ. [illegible] ಪೂನಾ ನಗರದಲ್ಲಿ ಒಂದು [illegible] ನಡೆದಿರುವದು. [illegible] ಒಬ್ಬ [illegible] ಯುವತಿಯು ಮನೆಯಿಂದ ಸುಮಾರು [illegible] ಗಜ ದೂರದಲ್ಲಿ ಪಾಯಖಾನೆಗೆ ಹೋದಳು. ಅಲ್ಲಿ ಒಬ್ಬ ಮನುಷ್ಯನು ಅವಳ ಮೇಲೆ ಬಿದ್ದು ಅವಳ [illegible]

ನೋಡಿದನು. ಅವಳು ಬೊಬ್ಬೆ ಹಾಕಿದಳು. [illegible] ಒಬ್ಬ ಹುಡುಗನು ಸಹಾಯಕ್ಕೆ ಓಡಿದಾಗ ಕಳ್ಳನು ಅವನಿಗೆ ಕಲ್ಲುಗಳನ್ನು ಬಿಸಾಡಿದನು ಕಡೆಗೆ ಅವಳ ಬೊಬ್ಬೆ ಕೇಳಿ ಕೆಲವು ಜನರು ಓಡಿ ಬಂದರು ಕಳ್ಳನು ಎಣ್ಣೆಯಿಂದ ಅದ್ದಿದ ವಸ್ತ್ರದಿಂದ ಅವಳ ಕೈ ಕಟ್ಟಿ ಕಿಚ್ಚಿಟ್ಟು ಓಡಿ ಹೋಗಿದ್ದನು ಅವಳನ್ನು ಪಾಯಖಾನೆಯಿಂದ ಹೊರ ತಂದಾಗ ಅವಳು ಪೂರ್ಣವಾಗಿ ಸುಟ್ಟು ಹೋಗಿದ್ದಳು ಡಾಕ್ತ್ರರರು ಬಂದು ಶೈತೋಪಚಾರ ನಡಿಸಿದರೂ ರಾತ್ರಿಯೇ ಆ ಹೆಂಗಸು ಮೃತಳಾದಳು ಕಳ್ಳನ ಅವಸರದಿಂದ ಕೈ ಬಳೆಗಳನ್ನು ನೆಲದ ಮೇಲೆ ಬಿಸಾಡಿ ಹೋಗಿದ್ದನು

ಹಿಂದೂಸ್ಥಾನದ ಕ್ರಿಸ್ಟ್‌ಮಸ್ ಟಪ್ಪಾಲು ಇದೇ ಕಳದ ತಾ ೨೯ರಲ್ಲಿ ಕೈಸರೇ ಹಿಂದ್ ಎಂಬ ಹಡಗದಲ್ಲಿ ಇಂಗ್ಲಾಂಡಿಗೆ ಹೊರಟಿತು ಒಟ್ಟಿಗೆ ಟಪ್ಪಾಲು ಚೀಲಗಳ ಗಣನೆ ಇದ್ದವು ಕಳೆದ ವರ್ಷ ೧೦೭೭ ಚೀಲಗಳ ಹೋಗಿದ್ದವು ಕಳೆದ ವರ್ಷ ಈ ಕಾಲ ೭೩೯೬ ಪಾರ್ಸೆಲ್ ಪೆಟ್ಟಿಗೆಗಳು ಇಂಗ್ಲಾಂಡಿಗೆ ಹೋಗಿದ್ದವು ಈ ವರ್ಷ ೫೦೫೮ ಪೆಟ್ಟಿಗೆಗಳ ಮಾತ್ರ ಕಳುಹಿಸೋಣಾದವು ಆದಾಗ್ಯೂ ಪಾರ್ಸೆಲುಗಳ ಸಂಖ್ಯೆ ಈ ವರ್ಷ ೫೩೩೮ ಆಗಿತ್ತು ಕಳೆದ ವರ್ಷ ೪,೦೨೯ ಪಾರ್ಸೆಲುಗಳು ಮಾತ್ರ ಹೋಗಿದವು

ಲಂಡನಿನಿಂದ ಬರುವ ಕ್ರಿಸ್ಟ್‌ಮಸ್ ಪಾರ್ಸೆಲು ಟಪ್ಪಾಲು ಇದೇ ತಾ ೧೮ಕ್ಕೆ ಮುಂಬಾಯಿಗೆ ತಲುಪುವದು ಇತರ ಟಪ್ಪಾಲು ಕ್ರಿಸ್ಟ್‌ಮಸ್ ದಿನವೇ ತಲುಪುವದು

ಹಿಂದೂಸ್ಥಾನದ ಮಹಾರಾಜರುಗಳು ಗಾಯಗೊಂಡವರಿಕ್ಕೆ ಕಳುಹಿಸಲು ತಯಾರಿಸಿದ 'ಲೊಯಲ್ಟಿ' ಎಂಬ ಆಸ್ಪತ್ರೆ ಹಡಗವನ್ನು ತಾ ೨೯ರಲ್ಲಿ ಸಿಂಧಿಯಾ ಮಹರಾಜರವರೂ ಮುಂಬಾಯಿ ಗವರ್ನರರೂ [illegible] ಸಂದರ್ಶಿಸಿ ಗವರ್ನರ ಪ್ರಭುಗಳು ಆ ಹಡಗಕ್ಕೆ 'ಲೊಯಲ್ಟಿ' ಎಂಬ ಹೆಸರನ್ನು ಕೊಟ್ಟು ಪ್ರತಿ[illegible] ಈ ಹಡಗವು ಆಫ್ರಿಕಾ ದ್ವೀಪಕ್ಕೆ ಹೋಗಲು ಹೊರಟಿತು

ಕಟಕಿನ ಸಬ್ ಡಿವಿಜನಿಗೆ ಸೇರಿದ ಕೇಂದ್ರಾಪಾರ ಎಂಬಲ್ಲಿಯ ಸ್ಪೆಶಲ್ ಮೇಜಸ್ಟ್ರೇಟರನ್ನು ಯಾರೋ ಅವರ ಮನೆಯಲ್ಲಿಯೇ ಕೊಂದಿರುವರು ಘಾತಕನ ಪತ್ತೆಯಾಗಲಿಲ್ಲ

[illegible] ಗಿರ್ಗಾವ್ ಬ್ಯಾಕ್ ರೋಡ್ ಎಂಬ ರಸ್ತೆಯಲ್ಲಿದ ಮೂರು ಮಾಳಿಗೆಯ ಒಂದು ಮನೆಗೆ ಪಕ್ಕನೇ ಬೆಂಕಿ ತಾಗಿ ಮನೆಯು ಸುಟ್ಟು ಹೋಯಿತು ಈ ಸ್ಥಳದಲ್ಲಿ ಮಹರಾಟಿಗಳು ವಾಸವಾಗಿದ್ದರು. ಮೊದಲನೇ ಮಾಳಿಗೆಯಲ್ಲಿ ಒಂದು ಹುಡುಗರ ಶಾಲೆಯೂ ಹಿಂದೂ ಎಸೋಸಿಯೇಶನಿನ ರಾತ್ರಿ ಶಾಲೆಯೂ ನಡೆಯುತ್ತಿತ್ತು ಬೆಂಕಿಯು ಎರಡನೇ ಅಂತಸ್ಥಿನಲ್ಲಿ ಕಾಣಿಸಿಕೊಂಡಿತು ಈ ಬೆಂಕಿಯಿಂದ ಒಟ್ಟಿಗೆ ಸುಮಾರು ೪೦೦,೦೦೦ ರೂಪಾಯಿಗಳ ನಷ್ಟವಾಗಿರುವದು

ಕರ್ನೆಲ್ ಬಸೆವ್ವಾನ ರಾಯಿಬಹುದೂರರವರು ಕಾಶ್ಮೀರ ದೇಶದ ಮಂತ್ರಿಯಾಗಿ ನೇಮಿಸಲ್ಪಟ್ಟಿರುವರು

ಜಲಂದೂರಿನಲ್ಲಿರುವ ಜಲಂದೂರ ಬೇಂಕ್ ಮತ್ತು ಅಮೃತಸಾರಿನ ವರ್ಲ್ಡ್ ಬೇಂಕು ಎಂಬ ಎರಡು ಬೇಂಕುಗಳ ಹಿಸೆದಾರರು ಬೇಂಕಿನ ಲೇವಾದೇವಿಯನ್ನು ನಿಲ್ಲಿಸುವರೆ ಆಲೋಚಿಸಿರುವರು

ಇದೇ ಕಳದ ನವಂಬರ ತಾ. ೨೫ರಲ್ಲು ಬಂಗಾಳದ ಮಳ್ದಪಾರ ಡಿಸ್ಟ್ರಿಗೆ ಸೇರಿದ ಮುಸುಲ್ಮಾನ ಪಾರಲೇನ್ ಎಂಬ ಸ್ಥಳದಲ್ಲಿ ಸಿ. ಐ ಡಿ ಇಲಾಖೆಯ ಡ್ಯುಪಿಟಿ ಸುಪರಿಂಟೆಂಡೆಂಟರಾದ ವಸಂತ ಕುಮಾರ ಚಟರ್ಜಿಯವರನ್ನು ಕೊಲ್ಲುವ ಉದ್ದೇಶದಿಂದ ಬೋಂಬು ಬಿಸಾಡಿರುವರು ವಸಂತ ಕುಮಾರರೂ ಮತ್ತು ಇತರ ಆಫೀಸರರೂ ಕುಲ್ನಾ ದರೋಡೆ ಮೊಕದ್ದಮೆಯ ಸಂಬಂಧ ಒಂದು ಮನೆಯಲ್ಲಿ ಆಲೋಚಿಸುತ್ತಿದ್ದು ಅಗಲುತ್ತಿರುವಾಗಲೇ ಒಂದು ಬೋಂಬು ಕೋಣೆಯೊಳಗೆ ಬಿತ್ತು. ಇದರಿಂದ ಅಪಾಯವಾಗಲಿಲ್ಲ [illegible] ಮತ್ತೊಂದು ಬೋಂಬು ಬಿಸಾಡಲ್ಪಟ್ಟಿತು. [illegible] ಸಿಂಘ್ ಎಂಬ ಹೊರಿನ ಕಲ್ಕತ್ತೆಯ [illegible] ಮೃತನಾದನು. ಮತ್ತೊಬ್ಬ [illegible]

ಘಾಯ ಒಡೆದಿರುವನು. [illegible] ಘಾಯಿರಷ್ಟಿಗಳು ದೈವಸಹಾಯ ಉಳಿದಿರುವನು. ವಸಂತ ಕುಮಾರರ ಎದುರಿಗೆ ನಿಂತಿದ್ದ ಒಬ್ಬ ಮುಹಮ್ಮದೀ ವಿದ್ಯಾರ್ಥಿಯೂ ವಸಂತ ಕುಮಾರ ಬಾಬುವಿನ ಸಂಬಂಧಿಕನಾದ ಹರವಿಲಾಸ ಗೋಷಾಲ್ ಎಂಬುವರೂ ಘಾಯ ಒಡೆದಿರುವರು.

ಅನುಮಾನದ ಮೇಲೆ ತ್ರೈಲೋಕ್ಯನಾಥ ಚಕ್ರವರ್ತಿ ಎಂಬವನನ್ನು ಪೋಲೀಸಿನವರು ಕೈದುಮಾಡಿರುವರು. ಬಾರಿಸಾಲ್ ರಾಜದ್ರೋಹ ಪಿತೂರಿ ಮೊಕದ್ದಮೆಯಲ್ಲಿ ಹಿಂದೆ ಇವನ ಮೇಲೆ ಅನುಮಾನವೇ ಇತ್ತು

ಎಮ್ಡೆನ್ ಹಡಗಿನ ಕೆಪ್ಟನನನ್ನೂ ಪ್ರಿನ್ಸ್ ಫ್ರಾನ್ಸ್ ಜೋಸೆಫರನ್ನೂ ಆಸ್ಟ್ರೇಲಿಯದ ಮೆಲ್‌ಬೋರ್ನ್ ಎಂಬ ಹಡಗದಲ್ಲಿ ಇಂಗ್ಲಾಂಡಿಗೆ ಕಳುಹಿಸಿಕೊಟ್ಟಿರುವರು. ಎಮ್ಡೆನ್ ನಾವೆಯ ಕೆಪ್ಟನನು ಏಡನಿನಲ್ಲಿ ಸಿಡ್ನಿ ನಾವೆಯಿಂದ ಇಂಗ್ಲಾಂಡಿಗೆ ಹೋಗುವ ಮೆಲ್‌ಬೋರ್ನ್ ಹಡಗಕ್ಕೆ ಹಾಕಿದರು ಎಂತ ಕಳದ ಶುಕ್ರವಾರ ಮುಂಬಾಯಿಗೆ ತಲಪಿದ ಪರ್ಶಿಯ ಹಡಗದ ಪ್ರಯಾಣಿಕರು ಹೇಳಿರುವರು.

ಕೊಲಂಬೋವಿನ ಒಂದು ಹೊಟೇಲಿನಲ್ಲಿ ೫ ಜನ ಪೋರ್ತುಗೀಸರೂ ೧೫ ಜನ ರುಶ್ಯನ್ ಕಲಾಶಿಗಳೂ ತಮ್ಮೊಳಗೆ ತಲೆಯೊಡಿಯುವವರೆಗೂ ಹೊಡದಾಡಿಕೊಂಡರು. ಒಬ್ಬ ರುಶ್ಯನ್ ಕಲಾಶಿಯು ಪೋರ್ತುಗೀಸರಿಗೆ "ಜರ್ಮನ್ಸ್" ಎಂದು ಪರಿಹಾಸ್ಯ ಮಾಡಿದ್ದೇ ಈ ಲಡಾಯಿಯ ಮೂಲಕಾರಣವಾಗಿತ್ತು!

ಪ್ರಿಯ ವಾಚಕರೇ, ಇದೊಂದು ಕಲ್ಪಿತ ಕಥೆಯಲ್ಲ. "ಹಾಗಾದರೆ ಮನುಷ್ಯಮಾತ್ರರಾದ ನಮಗೆ ಇಂತಹ ಕೃತ್ಯಗಳನ್ನು ಮಾಡುವ ಶಕ್ತಿ ಎಲ್ಲಿ?" ಗಾರಡಿಗಾರನ ಹಸ್ತಕೌಶಲ್ಯದ ಆಟಗಳನ್ನು ನೋಡಿ ಆಟ್ಟಕಟ್ಟು ಬೆಟ್ಟಕಟ್ಟು ಗಂಟು ಹಾಕುವ ಜನರು ಈ ಪರಿ ಕಲ್ಪಿಸುವರೇ ವಿನಹಾ, ಬಾಲಕರಿಗೂ ಅಜ್ಞರಿಗೂ ಮಂಕುಗೊಳಿಸುವ ಈ ಕರ್ಣರಸಾಯನಕರವಾದ ಕಥೆಗಳಲ್ಲಿ ಸಾರವಿಲ್ಲ' ಎಂದು ಹೇಳುವಿರಿ. ಆದರೆ "ತತ್ತ್ವಮಸಿ" "ಅಹಂಬ್ರಹ್ಮಾಸ್ಮಿ" (ನೀನೇ ಆ ವಸ್ತು, ನಾನೇ ಸಕಲಚರಾಚರ ವಸ್ತುಗಳಲ್ಲಿ ವ್ಯಾಪಿಸಿರುವ ಪರಬ್ರಹ್ಮನು) ಎಂಬೀ ವೇದ ವಚನಗಳನ್ನು ಸಿದ್ಧಿಗೆ ತಂದವರಿಗೆ ಅಂದರೆ ಪರಮಾತ್ಮರೂಪಿಯಾದವರಿಗೆ ಯಾವದು ತಾನೆ ದೊಡ್ಡದು? ಜ್ಞಾನದೇವನು ಪಕಾಲಿಯವನ ಎತ್ತಿನ ಮುಖದಿಂದ ವೇದಗಳನ್ನು ಹೇಳಿಸಲಿಲ್ಲವೇ? ಭಟ್ಟಳ ಅಪ್ಪಯ್ಯನವರು ಧರ್ಮಸ್ಥಳದ ಅಂಧ ಹೆಗ್ಗಡೆಗೆ ಕಣ್ಣುದೃಷ್ಟಿಯನ್ನು ದಯಪಾಲಿಸಲಿಲ್ಲವೇ? ಶ್ರೀ ಶಂಕರಾಚಾರ್ಯರು ಕರಗಿಸಿದ ಸೀಸವನ್ನು ಕುಡಿಯಲಿಲ್ಲವೇ? ಇವೆಲ್ಲಾ ಗಾರಡಿಗಾರನ ಆಟಗಳೇ? ಜ್ಞಾನದೇವ, ತುಕಾರಾಮ, ಶಂಕರಾಚಾರ್ಯ ಮುಂತಾದ ಸಾಧು ವರ್ಗಕ್ಕೆ ಸೇರಿದ ನಮ್ಮ ಹಿರಿಯರಿಗೆ ಮೇಲೆ ಹೇಳಿದ ಪರೋಪಕಾರದ ಕೃತ್ಯಗಳನ್ನು ಮಾಡುವದು ಅಸಾಧ್ಯವೇ? ಮಾತ್ರ ಈ ಪದವಿಯನ್ನು ಸಂಪಾದಿಸಲಿಚ್ಛಿಸುವವರು ತಾನುಣ್ಣಲಿಕ್ಕಿಟ್ಟ ರೊಟ್ಟಿಯನ್ನು ಹಸಿವೆಯಿಂದ ಪೀಡಿತವಾದ ನಾಯಿಯೊಂದು ಕಚ್ಚಿಕೊಂಡು ಓಡಿಹೋಗುತ್ತಿರಲು "ಎಲಾ, ಜಡ ಪ್ರಾಣಿಯೇ, ಬರೇ ರೊಟ್ಟಿಯನ್ನು ತಿನ್ನಬೇಡಾ, ತುಪ್ಪವನ್ನಿಕ್ಕುವೆನು" ಎಂದು ಹೇಳುತ್ತಾ ತುಪ್ಪದ ಪಾತ್ರವನ್ನು ಹಿಡಕೊಂಡು ಬೆನ್ನ ಹಿಂದೆ ಓಡಿಹೋದ ನಾಮದೇವನಂತೆ ಸಕಲ ಪ್ರಾಣಿಗಳಲ್ಲಿ ಸಮದೃಷ್ಟಿಯೂ, ನಮಾಜು ಮಾಡುವಾಗ ರೂಪವತಿಯೂ ಯುವತಿಯೂ ಆದ ತನ್ನ ಪ್ರಿಯ ಹೆಂಡತಿಯು ಹತ್ತರ ಬಂದರೂ ತಿಳಿಯದೆ ಇದ್ದ ಮಹಮ್ಮದ ಪೈಗಂಬರನಂತೆ ದೇವರಲ್ಲಿ ಸ್ಥಿರ ಭಕ್ತಿಯನ್ನು ಇಡಬೇಕು. ಸಾರಸ್ವತ ರತ್ನಮಾಲೆಯಿಂದ

ಆರೂರು ವಿಶ್ವಂಭರರಾವ, ಧಾರವಾಡ.

ಮಾರ್ಜರೀನ್ ಎಂಬ ಬೆಣ್ಣೆ.

ಯಾವ ದೇಶ ಮುಂದಕ್ಕೆ ಬರಬೇಕಾದರೂ ಆ ದೇಶದ ಜನರು ನಾಗರಿಕರಾಗಿಯೂ ವಿದ್ಯಾವಂತರಾಗಿಯೂ ಮತ್ತು ಶಾಸ್ತ್ರಜ್ಞಾನದಲ್ಲಿ ಪಂಡಿತರಾಗಿಯೂ ಇರಬೇಕು. ಯಾವ ದೇಶದಲ್ಲಿ ಜನಗಳಿಗೆ ಅಲ್ಪವಾದ ತೊಂದರೆಗಳು ಮತ್ತು ಕಷ್ಟಗಳು ಇರುತ್ತವೆಯೋ ಮತ್ತು ಅತ್ಯಧಿಕವಾದ ಸೌಕರ್ಯಗಳು ಇರುತ್ತವೆಯೋ ಆ ದೇಶವೇ ಬಹಳ ಮುಂದಾದ ದೇಶವಾಗಿರುತ್ತೆ. ಜರ್ಮನಿ, ಇಂಗ್ಲೆಂಡ್, ಫ್ರಾನ್ಸ್, ಅಮೇರಿಕಾದ ಸಂಯುಕ್ತ ಸಂಸ್ಥಾನಗಳು ಮತ್ತು ಜಪಾನ್, ಈ ದೇಶಗಳು ಉದಾಹರಣೆಗಳಾಗಿರುತ್ತವೆ,

ಶಾಸ್ತ್ರ ಪರಿಶೋಧನೆಯಿಂದ ಮೇಲ್ಕಂಡ ದೇಶಗಳಲ್ಲಿ ಅದ್ಭುತವಾದ ಅನೇಕ ಕಾರ್ಯಗಳನ್ನು ಸಾಧಿಸಿರುತ್ತಾರೆ. ಯುದ್ಧದ ಹಡಗುಗಳನ್ನು ಕಟ್ಟುವುದು, ಆಕಾಶದಲ್ಲಿ ಸಂಚರಿಸುವ ವಿಮಾನಗಳನ್ನು ಕಲ್ಪಿಸುವುದು, ಮುಂತಾದವುಗಳು ಬಹಳ ಜನರಿಗೆ ಗೊತ್ತಿರಬಹುದು. ಇವುಗಳಲ್ಲದೆ ಜನರಿಗೆ ಸಾಮಾನ್ಯವಾಗಿ ತಿಳಿಯದೇ ಇರುವ ಭಾಗಗಳಲ್ಲಿಯೂ ಸಾಹಸಪಟ್ಟು ಆಶ್ಚರ್ಯಕರವಾದ ಅನೇಕ ವಿಷಯಗಳನ್ನು ಸಾಧಿಸಿರುತ್ತಾರೆ. ಪ್ರಾಣಿ ಮತ್ತು ಸಸ್ಯಗಳಿಂದಲೇ ನಮಗೆ ದೊರಕುತ್ತಿದ್ದ ಅನೇಕ ವಸ್ತುಗಳನ್ನು ರಸಾಯನಶಾಸ್ತ್ರ ಸಹಾಯದಿಂದ ಪ್ರಾಣಿ ಸಸ್ಯಾಪೇಕ್ಷೆಯಿಲ್ಲದೇನೇ ತಯಾರು ಮಾಡುತ್ತಿದ್ದಾರೆ. "ಇಂಡಿಗೋ" ಎಂಬ ನೀಲಿಯು ಗಿಡಗಳಿಂದ ತೆಗೆಯಲ್ಪಟ್ಟು ಮಾರಾಟಕ್ಕೆ ಬರುತ್ತಿತ್ತು. ಈಗಲಾದರೋ ಜರ್ಮನೀ ದೇಶದವರು ಅದನ್ನು ಭೂಮಿಯಲ್ಲಿ ಬೆಳೆಯುವುದನ್ನು ಬಿಟ್ಟು ಕಾರ್ಖಾನೆಗಳಲ್ಲಿ ವಸ್ತುಸಂಯೋಜನ [illegible] ಆ ನೀಲಿಯನ್ನು ಬಹಳ ಸುಲಭದಿಂದ ತಯಾರು ಮಾಡುತ್ತಿದ್ದಾರೆ. ಅದರಂತೆಯೇ "ಮಾರ್ಜರೀನ್" ಎಂಬ ಬೆಣ್ಣೆಯನ್ನು ನಿರಾಯಾಸವಾಗಿ ತಯಾರು ಮಾಡುತ್ತಾರೆ. [illegible]

ಸ್ವಲ್ಪವೂ ಭೇದವಿರುವದಿಲ್ಲ. ನಮ್ಮ ದೇಶದಲ್ಲಿ ಅನೇಕರಿಗೆ ಈ ವಿಷಯ ತಿಳಿದಿರಲಾರದು.

ಪ್ರಥಮತಃ ರಸಾಯನಶಾಸ್ತ್ರಜ್ಞರು ಬೆಣ್ಣೆಯಲ್ಲಿ ಯಾವ ಯಾವ ವಸ್ತುಗಳು ಸಂಕಲಿತವಾಗಿವೆಯೋ ಅವುಗಳನ್ನು ಪರಿಶೋಧಿಸಿ ತಿಳಿದುಕೊಂಡರು. ಕೊಬ್ಬಿನ ಭಾಗ ಎಷ್ಟು? ನೀರಿನ ಭಾಗ ಎಷ್ಟು? ಸಾರಜನಕ (ನೈಟ್ರೋಜನ್ ಎಂಬ ವಸ್ತು) ಸಂಯುಕ್ತವಾದ ಭಾಗವೆಷ್ಟು? ಇದೇ ರೀತಿಯಲ್ಲಿ ಯಾವ ಯಾವ ವಸ್ತುವು ಎಷ್ಟೆಷ್ಟಿದೆಯೋ ಅವುಗಳ ಪರಿಮಾಣಗಳನ್ನು ಲೆಖ್ಖದ ರೀತಿ ಗೊತ್ತುಮಾಡಿಕೊಂಡರು. ಅನಂತರ ಆ ಪದಾರ್ಥಗಳನ್ನೆಲ್ಲಾ ಬೇರೆ ಬೇರೆಯಾಗಿ ತೆಗೆದುಕೊಂಡು ಬೆಣ್ಣೆಯಲ್ಲಿರುವಂತೆ ಸಮನಾದ ಭಾಗಗಳಲ್ಲಿ ಸೇರಿಸಿದರೆ ಬೆಣ್ಣೆಯಾಗುತ್ತದೆಯೋ ಎಂದು ನೋಡುವುದಕ್ಕೆ ಪ್ರಯತ್ನಪಟ್ಟಾಗ ಪ್ರಾರಂಭದಲ್ಲಿ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜನವಾದರೂ, ಧೈರ್ಯಗುಂದದೆ ಪುನಃ ಪುನಃ ಸಾಹಸಪಟ್ಟು ಕೊನೆಗೆ ಜಯಶೀಲರಾದರು. ಈಗಲಾದರೋ ಅಚ್ಚ ಹಸುವಿನ ಬೆಣ್ಣೆಯಂತೆ ಶುಭ್ರವಾಗಿಯೂ, ಪುಷ್ಟಿಕರವಾಗಿಯೂ, ಹಸುವಿನ ಬೆಣ್ಣೆಗೆ ಸ್ವಲ್ಪವೂ ಭೇದವಿಲ್ಲದೆಯೂ ಇರುವಂತೆ ಕಾರ್ಖಾನೆಗಳಲ್ಲಿ ಮಾರ್ಜರೀನ್ ಎಂಬ ಬೆಣ್ಣೆಯನ್ನು ತಯಾರುಮಾಡಿ ಮೇಲ್ಕಂಡ ದೇಶಗಳಲ್ಲೆಲ್ಲಾ ಜನರು ವಿಶೇಷವಾಗಿ ಉಪಯೋಗಿಸುತ್ತಲಿದ್ದಾರೆ.

ಬಹಳ ದಿನಗಳಿಂದಲೂ ಈ ವಿಧವಾಗಿ ಬೆಣ್ಣೆಯನ್ನು ತಯಾರು ಮಾಡಲು ಪ್ರಾರಂಭದಲ್ಲಿ ಪ್ರಾಣಿಗಳ ಕೊಬ್ಬನ್ನು ಉಪಯೋಗಿಸುತ್ತಿದ್ದರು. ಪ್ರಾಣಿಗಳ ಕೊಬ್ಬು ಅಂದರೆ ನಮ್ಮ ದೇಶದವರಿಗೆ ಸ್ವಲ್ಪ ಅಸಹ್ಯವುಂಟಾಗಬಹುದು. ಆದರೆ ಹಸುವಿನ ಹಾಲು ಮತ್ತು ಬೆಣ್ಣೆ ತುಪ್ಪ ಮುಂತಾದವುಗಳಲ್ಲೆಲ್ಲಾ ಪ್ರಾಣಿ ಸಂಬಂಧದ ಕೊಬ್ಬು ತಾನೇ ಇರತಕ್ಕದ್ದು. ಅದು ಹಾಗಿರಲಿ, ಪ್ರಾಣಿ ಸಂಬಂಧವಾದ ಕೊಬ್ಬುಗಳನು ಬೇರೆ ವಿಧವಾಗಿ ಉಪಯೋಗಿಸಲು ಅನುಕೂಲವಾಗಿ ಕಂಡು ಬಂದದ್ದರಿಂದ ಈಚೀಚೆಗೆ ಕೊಬ್ಬರೀ ಎಣ್ಣೆ, ಹತ್ತೀ ತುಪ್ಪ ಮುಂತಾದವುಗಳನ್ನು ಉಪಯೋಗಿಸಿ ಬೆಣ್ಣೆಯನ್ನು ತಯಾರು ಮಾಡುತ್ತಾರೆ. ಆದ್ದರಿಂದ ಕೇವಲ ಸಸ್ಯಗಳಿಂದ ಬಂದ ಪದಾರ್ಥಗಳನ್ನೇ ಉಪಯೋಗಿಸುವುದರಿಂದ ಮತಸಂಬಂಧವಾದ ಕಳಂಕವುಳ್ಳವರೂ ಕೂಡ ನಿಷ್ಕಳಂಕದಿಂದ ಶಾಸ್ತ್ರವಿರುದ್ಧವಿಲ್ಲದೆ ಈ ಬೆಣ್ಣೆಯನ್ನು ಅವರವರಿಗೆ ಅಭಿರುಚಿಯಾದಲ್ಲಿ ಉಪಯೋಗಿಸಬಹುದು.

"ಒಂದು ಇಂಗ್ಲೀಷು ಕಾರ್ಖಾನೆಯವರು ಕೊಬ್ಬರೀ ಎಣ್ಣೆಯಿಂದ ಪ್ರಾರಂಭಿಸಿ ಬೆಣ್ಣೆಯನ್ನು ತಯಾರು ಮಾಡುತ್ತಲಿದ್ದಾರೆ. ಈ ಒಂದು ಕಾರ್ಖಾನೆಯವರೇ ವರ್ಷಕ್ಕೆ ೧,೫೦,೦೦೦ ಟನ್ನು ಕೊಬ್ಬರಿಯನ್ನು ಉಪಯೋಗಿಸುವರು. ೧೯೧೩ನೇ ಇಸವಿಯಲ್ಲಿ ತೆಂಗಿನ ಗಿಡದಿಂದ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಸೇರಿ ೭,೫೦,೦೦,೦೦೦ ಪೌಂಡು ಉತ್ಪತ್ತಿಯಾಯಿತು. ಆರು ವರ್ಷಗಳ ಕೆಳಗೆ ಅದೇ ಕಾರ್ಖಾನೆಯಲ್ಲಿ ಒಂದು ರೂಪಾಯಿ ತೂಕದ ಕೊಬ್ಬರಿಯನ್ನೂ ಉಪಯೋಗಿಸುತ್ತಿರಲಿಲ್ಲ; ಈಗ ವರುಷಕ್ಕೆ ೧,೫೦,೦೦೦ ಟನ್ನು ಕೊಬ್ಬರಿಯನ್ನು ಕೊಂಡು ಬೆಣ್ಣೆ ಮುಂತಾದದ್ದು ತಯಾರು ಮಾಡುತ್ತಾರೆ. ಬೆಣ್ಣೆಯನ್ನು ತಯಾರು ಮಾಡಲು ಒಂದು ಕಾರ್ಖಾನೆಯಲ್ಲಿಯೇ ೧,೫೦,೦೦೦ ಟನ್ನು ಕೊಬ್ಬರಿಯಿಂದ ಬಂದ ಎಣ್ಣೆಯನ್ನು ಉಪಯೋಗಿಸಿದರೆ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಎಷ್ಟು ಉಪಯೋಗಿಸುತ್ತಾರೋ ವಾಚಕರೇ ಊಹಿಸಬಹುದು. ವಿಶೇಷವಾಗಿ ಮಾರ್ಜರೀನ್ ತಯಾರಾಗುವುದು ಇಂಗ್ಲೆಂಡು, ಫ್ರಾನ್ಸ್, ಜರ್ಮನಿ, ಆಸ್ಟ್ರಿಯಾ, ಅಮೇರಿಕಾದ ಸಂಯುಕ್ತ ಸಂಸ್ಥಾನಗಳು, ಈ ದೇಶಗಳಲ್ಲೇ.

ನೀರಿನಂತೆ ಇರುವ ಕೊಬ್ಬರೀ ಎಣ್ಣೆಯಿಂದ ಘನೀಭೂತವಾಗಿರುವ ಬೆಣ್ಣೆಯನ್ನು ಹ್ಯಾಗೆ ತಯಾರು ಮಾಡುತ್ತಾರೆಂದು ಶಂಕೆಯು ಹುಟ್ಟಬಹುದು. ಛಳಿಗಾಲದಲ್ಲಿಯೂ ಮತ್ತು ಛಳಿ ದೇಶಗಳಲ್ಲಿಯೂ ಕೊಬ್ಬರೀ ಎಣ್ಣೆಯೂ ಮತ್ತು ಹತ್ತೀ ಬೀಜದಿಂದ ಬಂದ ಎಣ್ಣೆಯೂ ಗಡ್ಡೆ ಕಟ್ಟಿಕೊಂಡು ಘನೀಭೂತವಾಗಿಯೇ ಇರುತ್ತವೆ. ಮೊದಲು ಈ ಎಣ್ಣೆಗಳನ್ನು ಕಶ್ಮಲರಹಿತವಾದವುಗಳನ್ನಾಗಿ ಮಾಡುವದಕ್ಕೋಸ್ಕರ ಪರಿಶೋಧಿಸುತ್ತಾರೆ. ಅನಂತರ ಎರಡು ಮೂರು ತರಹಾ ಎಣ್ಣೆಗಳನ್ನು ಸರಿಯಾದ ಪರಿಮಾಣಗಳಲ್ಲಿ ಬೆರಸಿ ಮಿಶ್ರಿತವಾದ ಎಣ್ಣೆಗಳನ್ನು ಪುನಃ ಶೋಧಿಸುತ್ತಾರೆ.

ಹಾಲಿನಿಂದ ಬೆಣ್ಣೆಯನ್ನು ತೆಗೆದುಬಿಟ್ಟು ಹಿಂದೆ ನಿಂತಿರುವ ಹಾಲನ್ನು ಶೋಧಿಸಿ ಕ್ರಿಮಿ ಮುಂತಾದವುಗಳು ಸೇರದಂತೆ ಬಹಳ ಹುಷಾರಿನಿಂದ ನೋಡಿಕೊಂಡಿದ್ದು, ಹಿಂದೆ ಹೇಳಿದ ಮಿಶ್ರಿತವಾದ ಎಣ್ಣೆಗಳನ್ನು [illegible] ಈ ಹಾಲಿನೊಡನೆ ಸೇರಿಸಿ ಕಡೆಯುತ್ತಾರೆ. [illegible]

ದ ಮೇಲೆ ಸ್ವಲ್ಪ ಹೊತ್ತು ಕಡೆಯುವುದನ್ನು ನಿಲ್ಲಿಸಿ ನೀರಿನ ಭಾಗವನ್ನೂ ಮತ್ತು ಬೆಣ್ಣೆಯ ಭಾಗವನ್ನೂ ಬೇರೆ ಬೇರೆಯಾಗಿ ಮಾಡುತ್ತಾರೆ. ಆದಾಗ್ಯೂ ಬೆಣ್ಣೆಯಲ್ಲಿ ಇನ್ನೂ ನೀರು ವಿಶೇಷವಾಗಿರುವುದರಿಂದ ಸ್ವಲ್ಪ ಉಪ್ಪನ್ನು ಸೇರಿಸಿ, ಭಾರವಾದ ಗುಂಡುಗಳ ಸಹಾಯದಿಂದ ನೀರನ್ನು ಅದುಮಿ ಹಿಂಡಿ ತೆಗೆದುಬಿಡುತ್ತಾರೆ ಹೀಗೆ ಗುಂಡುಗಳು ಬೆಣ್ಣೆಯ ಮೇಲೆ ತಿರುಗಾಡುವುದರಿಂದ ಬೆಣ್ಣೆಯ ಕಣಗಳು ಅನ್ಯೋನ್ಯಮಿಳಿತವಾಗಿ ಒಂದರಲ್ಲೊಂದು ಸೇರಿಕೊಳ್ಳುತ್ತವೆ

ಅನಂತರ ಈ ಬೆಣ್ಣೆಗೆ ಹಸುವಿನ ಬೆಣ್ಣೆಯ ರುಚಿಯನ್ನು ಕೊಡುವುದಕ್ಕೋಸ್ಕರ ಬೆಣ್ಣೆಯಲ್ಲಿ ದೊರಕುವ ಕೆಲವು ಪದಾರ್ಥಗಳನ್ನು ಸೇರಿಸುತ್ತಾರೆ ಮತ್ತು ಹಸುವಿನ ಬೆಣ್ಣೆಯಂತೆ ಕಾಣುವುದಕ್ಕೋಸ್ಕರ ಸ್ವಲ್ಪ ಹಳದೀ ಬಣ್ಣವನ್ನೂ ಕೊಡುತ್ತಾರೆ ಮತ್ತು ಬೆಣ್ಣೆಯಲ್ಲಿರುವಂತೆ ಕೆಲವು ಸಾರಜನಕ ಪದಾರ್ಥ ವಿಶೇಷವನ್ನೂ ಸೇರಿಸುತ್ತಾರೆ. ಹೀಗೆ ತಯಾರು ಮಾಡುವ ಬೆಣ್ಣೆಯನ್ನು ಹಸುವಿನ ಬೆಣ್ಣೆಯಿಂದ ತುಂಬಾ ಚತುರರೂ ಕೂಡ ಕಂಡು ಹಿಡಿಯಲಾರರು, ರಸಾಯನ ಶಾಸ್ತ್ರ ಪರೀಕ್ಷೆ ಮಾಡಿದರೂ ಕಂಡು ಹಿಡಿಯುವುದು ಕಷ್ಟ. ವಾಸನೆ, ರುಚಿ ಪುಷ್ಟಿಕರವಾದ ಗುಣಗಳ ಬೆಣ್ಣೆಯನ್ನು ಕಾಯಿಸಿದರೆ ಆಗುವ ವ್ಯತ್ಯಾಸಗಳು, ಇವೆಲ್ಲವೂ ಸ್ವಲ್ಪವೂ ವ್ಯತ್ಯಾಸವಾಗದಂತೆ ಮಾರ್ಜರೀನ್ ಬೆಣ್ಣೆಯಲ್ಲಿ ಹಸುವಿನ ಬೆಣ್ಣೆಯಲ್ಲಿರುವಂತೆಯೇ ಕಂಡು ಬರುವವು ಈ ಮಾರ್ಜರೀನ್ ಬೆಣ್ಣೆಯು ನಿರ್ದೋಷವಾದ ಪದಾರ್ಥವಾದ್ದರಿಂದ ಯಾರು ಬೇಕಾದರೂ ಉಪಯೋಗಿಸಬಹುದು

ಸಾಮಾನ್ಯ ಜನಗಳಿಗೆ ಸುಲಭ ರೀತಿಯಲ್ಲಿ ತಿಳಿಯಲೆಂದು ಕೆಲವು ಕಷ್ಟದ ಭಾಗಗಳನ್ನು ಬಿಟ್ಟು ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ಪ್ರಕಟಿಸಿದೆ ಹೆಚ್ಚು ವಿಷಯಗಳನ್ನು ತಿಳಿಯಬೇಕೆಂದು ಅಪೇಕ್ಷೆಯುಳ್ಳವರು ಭಾರೀ ಪುಸ್ತಕಗಳನ್ನು ಓದಬಹುದಾಗುತ್ತೆ ಕೊಬ್ಬರಿ ಎಣ್ಣೆಯನ್ನು ಶೋಧಿಸುವ ವಿಚಾರದಲ್ಲಿ ಪೈಸೂರು [illegible]ದಯ ಸಮಾಜದವರು ಕೆಲವು ವಿಷಯಗಳನ್ನು [illegible] ಪ್ರಕಟಿಸಿರುತ್ತಾರೆ ಕೊಬ್ಬರೀ ಎಣ್ಣೆಯನ್ನು ಮೇಲೆ ಹೇಳಿದ ರೀತಿ ಬೆಣ್ಣೆಯನ್ನು ತಯಾರು ಮಾಡುವುದಕ್ಕೂ ಮತ್ತು ಇನ್ನೂ ಅನೇಕ ಕಾರ್ಯಗಳಿಗೂ ವಿಶೇಷವಾಗಿ ಉಪಯೋಗಿಸುತ್ತಿದ್ದಾರೆ ದಿನ ಕ್ರಮೇಣ ಇನ್ನೂ ಹೆಚ್ಚಾಗಿ ಉಪಯೋಗಿಸುತ್ತಾರೆ. ಆದ್ದರಿಂದ ನಮ್ಮ ದೇಶದವರು ಕೈಲಾದ ಮಟ್ಟಿಗೂ ತೆಂಗಿನ ಬೆಳೆಯನ್ನು ಅಭಿವೃದ್ಧಿಗೆ ತಂದರೆ ಅಪಾರವಾದ ಲಾಭವುಂಟು ರ ಗ

ಡಿಲ್ಲಿ ದರ್ಬಾರ ದಿನೋತ್ಸವವು

ಶನಿವಾರ ದಶಂಬರ ತಾ 12—12—1914

ಇಡೀ ಭೂಲೋಕದ ಸುಧಾರಣೆ ಜೀವಮಾನಗಳ ಸಂರಕ್ಷಣೆಗಾಗಿ ನಮ್ಮ ಸಾರ್ವಭೌಮರ ಮತ್ತು ಅವರುಗಳನ್ನೊಡಗೂಡಿದ ಇತರ ರಾಜರುಗಳ ಸೈನಿಕರು ತಮ್ಮ ಅಮೂಲ್ಯವಾದ ಜೀವರಕ್ತವನ್ನು ರಣರಂಗದಲ್ಲಿ ವಿರಳವಾಗಿ ಚೆಲ್ಲುವಾಗ ನಮ್ಮ ಚಕ್ರವರ್ತಿಗಳವರ ಅತೀ ಪ್ರಿಯ ಪ್ರಜೆಗಳಾದ ನಾವು ಹಿಂದೂಗಳು ನಮ್ಮ ಕೆಲವು ಸಿಪಾಯರಿಗೆ ಶಿಕ್ಷಿವ ಅದೃಷ್ಟವು ನಮಗೆ ಬಂದೊದಗದ್ದರಿಂದ ಸರ್ವ ಪ್ರಜಾಹಿತಕ್ಕಾಗಿ ನಮ್ಮ ರಾಜರು ನಡಿಸುವ ಈ ಮಹಾ ಕಾಳಗದಲ್ಲಿ ನಮ್ಮ ಅರಸರಿಗೆ ತಮ್ಮಲ್ಲಿರುವ ವಾತ್ಸಲ್ಯವನ್ನೂ ಸಹತಾಪವನ್ನೂ ತೋರ್ಪಡಿಸುವರೆ ಯುದ್ಧ ಸಹಾಯಕ ಫಂಡು ಮೊದಲಾದ ಸಹಾಯಗಳ ಏರ್ಪಾಡುಗಳನ್ನು ನಡಿಸಿರುತ್ತೇವೆ. ಮೂಲಪಾಠಶಾಲೆಗಳ ಅಧ್ಯಾಪಕರಾದ ನಾವು ಬಡ ಜನರಾದರೂ ಇವರಲ್ಲಿಯೂ ಕೂಡ ರಾಜಭಕ್ತಿಯು ಇತರರಂತೆ ಇರುವದರಿಂದ ಸಭೆಕೂಡಿ ನಮ್ಮೊಳಗೆ ಒಂದು ಯುದ್ಧ ರಿಲೀಫ್ ಫಂಡ್ ಸ್ಥಾಪಿಸಿದ್ದೇವೆ

ರಾಜರಲ್ಲಿ ಪ್ರೇಮವು ಅತಿ ವೇಗವಾಗಿ ಬುಗ್ಗೇರುತ್ತಿರುವ ನಮ್ಮ ಹೃದಯಗಳು ಈ ಸಾಧಾರಣಕರವಾದ ಏರ್ಪಾಟುಗಳಲ್ಲಿ ತೃಪ್ತಿಹೊಂದದೆ ಸದರಿ ಉದ್ದೇಶಕ್ಕಾಗಿ ಬೇರೆ ಉಪಾಯಗಳನ್ನು ಹುಡುಕಿ ತೆಗೆಯುವರೆ ವತ್ತಾಯ ಪಡಿಸಿದವು. ಹೀಗಿರುತ್ತಾ ನಮ್ಮ ಉಪಾಧ್ಯಾಯರ ಸಂಘದ ಸಭೆಕೂಡಿ ಆಲೋಚಿಸಿದ್ದಾಗ ಮೂಲಪಾಠಶಾಲೆಗಳ ಮಕ್ಕಳಲ್ಲಿ ಜೀವಶಕ್ತಿಯನ್ನೂ ಚಟುವಟಿಕೆಯನ್ನೂ ಹುಟ್ಟಿಸುವ ಹಾಗೆ ಮಾಡುವದಕ್ಕೋಸ್ಕರ ಕದ್ರಿ ಸೈಂಟ್ ಕ್ಸೆವಿಯರ್ಸ್ ಹಾಯರ್ ಎಲಿಮೆಂಟರಿ ಶಾಲೆಯ ಮೆನೆಜರರು ದಾನ ಮಾಡಿದ ಬೆಳ್ಳಿಯ ಕಪ್ಪಿಗಾಗಿ ದರ್ಭಾರ್ ದಿವಸ ಪಂದ್ಯಾಟ ನಡಿಸಿ ಈ ಸರ್ವರ ನೆನಪಿನಲ್ಲಿರತಕ್ಕ ದಿವಸವನ್ನು ಬಹು ಆಡಂಭರದಿಂದ ಆಚರಿಸುವದೇ ಅತ್ಯುತ್ತಮವೆಂದು ನಿರ್ಣಯಿಸಲ್ಪಟ್ಟಾಯಿತು.

ಹೀಗಾಗಿ ಇದೇ ದಶಂಬರ [illegible] ದಿಲ್ಲಿ ದರ್ಬಾರ್ ದಿವಸ ಸಾಯುಂಕಾಲ [illegible] ಎಲಿಮೆಂಟರಿ ಶಾಲೆಗಳೊಳಗೆ ನಾನಾ ತರದ ಓಟಗಳಲ್ಲಿ [illegible] ಪಂದ್ಯಾಟವು ನಡೆಯುವದು. ಪ್ರತಿ ಶಾಲೆಯಿಂದ [illegible] ಮಾತದ ಇಬ್ಬಿಬ್ಬರು ಹುಡುಗರು ಪ್ರತಿ ಓಟಕ್ಕೆ ನಿಲ್ಲುವವರಿಂದ ನೋಟವು ಬಹಳ ಗಂಭೀರವಾಗಿಯೂ ರಮ್ಯವಾಗಿಯೂ ತೋರುವದು. ನೋಡುವವರಿಗೆ ಖುಶಾಲನ್ನುಂಟುಮಾಡುವ ಎಂಟು ತರದ ಓಟಗಳಲ್ಲಿ ಹೆಚ್ಚು [illegible]ಗಳು ಶಿಕ್ಕಿದ ಶಾಲೆಗೆ ಕಪ್ಪ ದೊರೆಯುವದು. ಪ್ರತಿ ಓಟದಲ್ಲಿ ಮೊದಲು ಬಂದ ಬಾಲಕನಿಗೆ ಇನಾಮು ದೊರೆಯುವದು.

ಈ ಮಹತ್ತಾದ ಪಂದ್ಯಾಟವನ್ನು ಡಾಕ್ಟರ್ ಪೆರೇರರವರು ನವೀನವಾಗಿ ಏರ್ಪಡಿಸಿದ "ಎಂಬುಲೆನ್ಸ್ ಕೋರ್" ಎಂಬ ಮೇಳದ ಮೆಂಬರರು ನಡಿಸುವರು. ಗೆದ್ದವರಿಗೆ "ಕಪ್ಪನ್ನು ಇನಾಮುಗಳನ್ನೂ ಮಾನ್ಯ ಮೆಲಿಮ್ ದೊರೆಸಾನಿಯವರುಗಳು ಹಂಚುವರೆ ಒಪ್ಪಿಕೊಂಡಿರುವರು. ಯಾವತ್ತು ತೊಂದರೆ ಇಲ್ಲದೆ ಗಡಿಯನ್ನೂ ಸಮಾಧಾನವನ್ನೂ ಕಾಪಾಡುವರೆ ಪೋಲಿಸು ಜನಸಹಾಯ ಕೇಳಲ್ಪಟ್ಟದೆ ಸರ್ವ ಗೃಹಸ್ಥರ ಸಹಾಯದಿಂದ ಈ ಚಲೋದಾದ ವಿಲೆವಾರಿಯು ಅಂದವಾಗಿ ಕೊನೆಗಾಣಿಸುವದು ಎಂದು ನಿರೀಕ್ಷಿಸುತ್ತೇವೆ

ಜಾತಿ ವಿಜಾತಿಗಳಿಂದ ಕೂಡಿದ ನಮ್ಮ ಪಟ್ಟಣಿಗರು ಯಾವದೊಂದು ವಿಲೆವಾರಿಗೆ ಒಂದೇ ರೀತಿಯಲ್ಲಿ ಒಪ್ಪಿಗೆಗೊಡುವದು ಅಸಾಧ್ಯ ಆದರೆ ರಾಜರಲ್ಲಿ ನಮಗಿರುವ ವಾತ್ಸಲ್ಯವನ್ನೂ ಭಕ್ತಿಯನ್ನೂ ತೋರ್ಪಡಿಸುವ ಏರ್ಪಾಡುಗಳಲ್ಲಿ ಮಾತ್ರ ಏಕತ್ವದಿಂದ ಕೂಡುವದು ಇದರಲ್ಲಿರುವ ರಾಜಭಕ್ತಿಯ ಮಹತ್ವವನ್ನು ಸ್ಪಷ್ಟಗೊಳಿಸುತ್ತದೆ. ಈ ಪಂದ್ಯಾಟದಲ್ಲಿ ನಿಂತಿದ್ದ ಎಂಟು ಇನಾಮುಗಳನ್ನು ಉಪಾಧ್ಯಾಯರು ಬ್ರಾಹ್ಮಣ, ಸಾರಸ್ವತ, ಗೌಡಸಾರಸ್ವತ, ಬಾರೆ ಬಿಂ[illegible]ಳು, ಮುಸಲ್ಮಾನ, ಪ್ರೊಟೆಸ್ಟಾಂತ, ಕ್ರೈಸ್ತ, ರೋಮನ್ ಕಥೋಲಿಕ ಕ್ರೈಸ್ತರೆಂಬ ಶಾಖೆಗಳಾಗಿ ವಿಂಗಡಿಸಿ ಕೂಡಲೇ ನಿಂತಿರುವ ಸರ್ವ ಇನಾಮುಗಳನ್ನೂ ಬದಿಗಿ ಕೊಟ್ಟದ್ದು ಸರ್ವರೂ ಗಣನೆಗೆ ತರಬೇಕಾದ ಸಂಗತಿಯಾಗಿರುತ್ತದೆ ಎಲ್ಲಾ ಜಾತಿಗಳು ಒಂದೇ ಪತಾಕೆಯ ಕೆಳಗೆ ಒಟ್ಟುಗೂಡಿಕೆಗೆ ಸಾಧ್ಯವಾಗಿ ಮಾಡಿದ ಸದಾ ನ್ಯಾಯದಲ್ಲಿ [illegible] ಕಾಣುವ "ಯ್ಯುನಿಯನ್ ಜೆಕ್" ಪತಾಕೆಯ ನಮ್ಮ ಎಲ್ಲಾ ವೈರಿಗಳ ಮೇಲೆ ಸಂಪೂರ್ಣವಾಗಿ ಜಯಹೊಂದಲಿ.

M. A. M. D'Souza,
Secretary,
Elementary Teachers Association, Mangalore

ಪತ್ರವ್ಯವಹಾರ.

ವಿಚಾರಿಯ ಅವಿಚಾರ.

ಸ್ವಾಮಿ ಪತ್ರಕರ್ತರೇ

ಮೊಗೇಪುರದ ಶ್ರೀ ಜ್ಞಾನೋದಯ ಸಮಾಜದ ೪ನೇ ವಾರ್ಷಿಕ ವರದಿಯ ಕುರಿತು ಕಳೆದ ೪೭ನೇ ಸಂಚಿಕೆಯಲ್ಲಿ "ವಿಚಾರಿ" ಎಂಬ ಲೇಖಕರೊಬ್ಬರು ಬರದ ವಿಚಾರವು ಪೂರ್ಣ ಅವಿಚಾರವೆಂದು ಆ ವರದಿಯನ್ನೋದಿದ್ದ ವಾಚಕರಿಗೆಲ್ಲಾ ಸಮಾಧಾನವಾಗದಿರದು ಆದರೆ ಈ ವಿಚಾರಿಯು ಬರದ ವಿಚಾರವು ಉತ್ತರ ಹೊಂದಲು ತೀರಾ ಅಯೋಗ್ಯವಾಗಿದ್ದರೂ ಸಮಾಜದ ವಾರ್ಷಿಕ ವರದಿಯನ್ನೋದದ ವಾಚಕ ಮಹಾಶಯರ ಸಮಾಧಾನದ ಒಗ್ಗೆ ಒಂದಿಷ್ಟು ಉತ್ತರವನ್ನು ಬರಿಯಬೇಕಾಯಿತು. ವಿಚಾರಿಯು ಕೇವಲ ಬೊಕ್ಕಪಟ್ಣವೆಂಬ ಸ್ಥಳದ ಅಂಧ ಪಕ್ಷಪಾತಿಯಾಗಿ ಬರದಿರುವದನ್ನು ಕಾಣುವಾಗ ಈ ವಿಚಾರಿಯು ಬೊಕ್ಕಪಟ್ಣ ನಿವಾಸಿ ಎಂದು ಸ್ಪಷ್ಟವಾಗುತ್ತದೆ. ಶ್ರೀ ಜ್ಞಾನೋದಯ ಸಮಾಜದವರು ಈ ಬೊಕ್ಕಪಟ್ಣಕ್ಕೆ ಒಂದು ಮದ್ಯಪಾನ ನಿಷೇಧಕ ಸಭೆಯನ್ನು ಜರಗಿಸಿದ್ದೇ ವಿಚಾರಿಯು ಸಮಾಜದ ಮೇಲೆ ಹೊರಿಸುವ ಪ್ರಥಮ ಅಪರಾಧವಾಗಿರುತ್ತದೆ. ಜ್ಞಾನೋದಯ ಸಮಾಜದವರು ತಾವು ಮಾಡಿಕೊಂಡ ನಿಯಮವನ್ನನುಸರಿಸಿ ಪ್ರತೀ ಹಪ್ತೆಯಲ್ಲಿಯೂ ಒಂದು ಸಾಧಾರಣ ಸಭೆಯನ್ನು ತಪ್ಪದೆ ಮಾಡುತ್ತಿರುವರಲ್ಲದೆ, ಸಂದರ್ಭ ಒದಗಿದಾಗ ಬೇರೆಬೇರೆ ಗ್ರಾಮಗಳಿಗೆ ಸಹಾ ಹೋಗಿ ವಿಶೇಷ ಸಭೆಯನ್ನು ಜರಗಿಸಿ, ಮದ್ಯಪಾನ ನಿಷೇಧ, ನೀತಿ, ಧರ್ಮಪರವಾದ [illegible] ನಿರೂಪಣೆಗಳನ್ನೂ, ಭಾಷಣಗಳನ್ನೂ, ಸಂಗೀತಗಳನ್ನೂ ಮಾಡುವದುಂಟು. ಹೀಗೆ ಒಂದು ವರುಷದಲ್ಲಿ ಇವರು ಇಂಥಾ ಸಭೆಗಳನ್ನು ಜರಗಿಸಿದ ಸ್ಥಳಗಳ [illegible] ವಾರ್ಷಿಕ ವರದಿಯ ೭ನೇ ಪುಟದಲ್ಲಿ ಸ್ಪಷ್ಟವಾಗಿ ಬರದಿರುತ್ತಾರೆ. [illegible] ತಿಳಿಸುವಂತೆ ಬೊಕ್ಕಪಟ್ಣದಲ್ಲಿ ಮಾತ್ರವೇ ಇಂಥಾ ಸಭೆ [illegible] ಯನ್ನು ಪೂರ್ಣವಾಗಿ ಓದಿ ನೋಡದೆ "ಬೊಕ್ಕಪಟ್ಣಕ್ಕೆ [illegible] ಇರಾದೆ ಏನು?" ಎಂದು ಕೇಳುವದರಲ್ಲಿ ವಿಚಾರಿಯ [illegible] ವಾಗುತ್ತದೆ.

ಅಂಗೈ ನೋಡಲು ಕನ್ನಡಿ ಬೇಕೋ? [illegible]

ವಾಗಿದ್ದರೂ ಕೆಲವು ವಾಚಕ ಮಹಾಶಯರಾದರೂ ಕಂಡಿರಬಹುದು. ನಿಶಾಪಾನಿಗಳಿಂದ ನಿಬಿಡವಾಗಿರುವ ಈ ಮದ್ಯದಂಗಡಿಯ ಮಗ್ಗುಲಲ್ಲಿಯೇ ಕಳೆದ ವರುಷ ಜ್ಞಾನೋದಯ ಸಮಾಜದವರು ಜರಗಿಸಿದ ಮದ್ಯಪಾನ ನಿಷೇಧಕ ಸಭೆಯಿಂದ ವಿಚಾರಿಗೆ ಬಂದ ಸಂಕಷ್ಟವೇನು? ವಿಚಾರಿಯು ಹೇಳುವಂತೆ ಬೊಕ್ಕಪಟ್ಣದಲ್ಲಿ ಒಂದು ಮದ್ಯಪಾನ ನಿಷೇಧಕ ಸಂಘವಿದ್ದದ್ದಾದರೆ, ಆ ಸಂಘವು ಜೀವದಿಂದಿದ್ದು ತನ್ನ ಕರ್ತವ್ಯವನ್ನು ಯಾಕೆ ನಡಿಸುವುದಿಲ್ಲ? ಸಮಾಜದವರು ತಮ್ಮ ಕ್ರಮ ಮತ್ತು ಕರ್ತವ್ಯವನ್ನನುಸರಿಸಿ ಬೊಕ್ಕಪಟ್ಣದ ತಮ್ಮ ಸ್ವಜಾತಿ ಬಂಧು ಮಿತ್ರರೊಡನೆ ಸಭೆಕೂಡಿ ದೇವತಾ ಕೀರ್ತನ, ಭಾಷಣ, ಸತ್ಕಥಾ ಪ್ರಸಂಗಗಳ ಮೂಲಕ ತಮ್ಮ ಅಮೂಲ್ಯ ಸಮಯವನ್ನು ಸದುಪಯೋಗಪಡಿಸಿದ್ದಕ್ಕಾಗಿ ಹೊಟ್ಟೆಕಿಚ್ಚುಪಡುವ ಈ ವಿಚಾರಿಯ ಅವಸ್ಥೆಯನ್ನು ನೋಡಿದರೆ, ಬೈಹುಲ್ಲಿನ ರಾಶಿಯ ಮೇಲೆ ಕೂತು ಸಮೀಪ ಬರುವ ಎತ್ತನ್ನು ಕಂಡು ಬೊಗಳಿದ ಶ್ವಾನರಾಯನ ಕಥೆಯು ಜ್ಞಾಪಕಕ್ಕೆ ಬರುವದು! ಬೊಕ್ಕಪಟ್ಣದವರಿಗೆ ಶ್ರೀ ಜ್ಞಾನೋದಯ ಸಮಾಜದ ಮೇಲೆ ವೈಮನಸ್ಸುಂಟಾಗುವಂತೆ ವಿಚಾರಿಯು ಈ ವರೇಗೆ ಎಷ್ಟೋ ಪ್ರಯತ್ನಗಳು ಮಾಡಿದ್ದರೂ ಬೊಕ್ಕಪಟ್ಣದ ಅನೇಕ ಪುಣ್ಯಾತ್ಮರು "ವಿಚಾರಿ"ಯಂತೆ ಆ ಊರು ಈ ಊರು ಎಂಬ ಭೇದವೆಣಿಸದೆ ಸ್ವಜಾತಿ ಹಿತವೇ ತಮ್ಮ ಹಿತವೆಂದು ಭಾವಿಸಿ, ಸಮಾಜದ ಪೋಷಕರಾಗಿಯೂ, ಮದ್ಯಪಾನ ನಿಷೇಧಕರಾಗಿಯೂ ಸಮಾಜದ ಕಾರ್ಯ ಸಾಧನೆಗೆ ತಮ್ಮಿಂದಾದಷ್ಟು ತನುಮನಧನಗಳ ಸಹಾಯವನ್ನು ಕೊಟ್ಟು ಸ್ವಜಾತಿಯವರ ಕಡೆಗಿರುವ ತಮ್ಮ ಕರ್ತವ್ಯವನ್ನು ನೆರವೇರಿಸಿರುತ್ತಾರೆ.

ಸಮಾಜದವರು ತಮ್ಮ ವರದಿಯಲ್ಲಿ ವರದಕ್ಷಿಣೆಯ ಕೇಡುಗಳನ್ನು ತೋರಿಸಿ ಬರದ ವಿಷಯವಾಗಿ ವಿಚಾರಿಯು ಸಮಾಜದವರ ಮೇಲೆ ಇನ್ನೊಂದು ದೋಷವನ್ನು ಕಲ್ಪಿಸಿ ತನ್ನ ಲೇಖನದಲ್ಲಿ ಹೇಳುವುದೇನಂದರೆ:—"ಆದರೆ ಈಗಲೀಗ ಅಲ್ಲಲ್ಲಿ ಕೆಲವರು ವಿವಾಹ ಸಮಯ ಮದುಮಗನಿಗೆ ಹಣಗಳೂ, ಆಭರಣಗಳೂ ಉಚಿತವಾಗಿ ಕೊಡುವ ದುಷ್ಟ ಪದ್ಧತಿ ಕೈಕೊಳ್ಳುವದನ್ನು ಕಂಡು ನಾವು ಬಹಳ ದುಃಖಪಡುತ್ತೇವೆ" ಎಂತ ಸಮಾಜದ ವಾರ್ಷಿಕ ವರದಿಯಲ್ಲಿ ಕಾಣಿಸಿದುದನ್ನು ನೋಡಿದರೆ "ಮತ್ಸರವೆಂಬುವುದು ಲೋಕದಲ್ಲಿ ಬೇರೆ ಇಲ್ಲ ಎಂತ ತಿಳಿಯಬೇಕಾಗುತ್ತದೆ" ಆಹಾ! ವಿಚಾರಿಯ ಅವಿಚಾರವೇ? ಯಾವ ಪದ್ಧತಿಯು ಹೆಣ್ಣು ಮಕ್ಕಳನ್ನೂ ಹೆತ್ತ ಕುಟುಂಬನನ್ನೂ ಸದಾ ವ್ಯಾಕುಲಚಿತ್ತರನ್ನಾಗಿಯೂ, ದರಿದ್ರರನ್ನಾಗಿಯೂ, ಮಾನಹೀನರನ್ನಾಗಿಯೂ ಮಾಡುವುದೋ ಅಂಥಾ "ಬಿಡಿ" ಎಂಬ ಪದ್ಧತಿಯು ಪ್ರಕೃತ ನಮ್ಮ ದೇಶದ ಕೆಲವು ಸಮುದಾಯದವರಲ್ಲಿ ದೀರ್ಘ ರೋಗವಾಗಿ ಬೆಳೆದು ಎಲ್ಲೆಲ್ಲಿಯೂ ಹಾಹಾಕಾರ ಸೃಷ್ಟಿಯನ್ನುಂಟುಮಾಡುತ್ತಿರುವುದು!! ಇಂಥಾ ಅನಿಷ್ಟ ಪದ್ಧತಿಯ ಅನುಕರಣೆಯು ತಮ್ಮ ಜಾತಿಯವರಲ್ಲಿ ಸಹಾ ಮೆಲ್ಲಮೆಲ್ಲನೆ ಪ್ರಾರಂಭವಾಗುವುದನ್ನು ಕಂಡು ಜ್ಞಾನೋದಯ ಸಮಾಜದವರು ದುಃಖವನ್ನು ಪ್ರದರ್ಶಿಸಿ, ವಾರ್ಷಿಕ ವರದಿಯಲ್ಲಿ ಬರೆದ ಮಾತು "ಲೋಕದಲ್ಲಿ ಬೇರೆ ಇಲ್ಲದ ಮತ್ಸರ" ವೆಂದು ಹೇಳುವ ವಿಚಾರಿಯ ಹೇಳಿಕೆಗೆ ಯಾವ ಬೆಲೆ ಕಟ್ಟಬಹುದೆಂದು ವಾಚಕರೇ ತೀರ್ಮಾನಿಸಲಿ.

"ಓದುವುದು ಶಾಸ್ತ್ರ, ಇಕ್ಕುವುದು ಗಾಳ" ಎಂಬ ಗಾದೆಯಂತೆ ಸಮಾಜದ ಕಾರ್ಯನಿರ್ವಾಹಕ ಸಭೆಯ ಮುಂದಾಳುಗಳೇ ಅಂಥಾ ಬಿಡಿ ಎಂಬ ರಾಕ್ಷಸಿಗೆ ಗುಲಾಮರಾದದ್ದು ಸ್ವಲ್ಪ ಸಮಯದ ಮೊದಲೇ ಎಂದೂ, ಅದು ತನ್ನ ಸ್ಮರಣೆಗೆ ಬಂದು ತನಗೆ ಸಮಾಧಾನವಾಗಿ ಈ ವಿಷಯದ ತನ್ನ ದುಃಖವನ್ನು ಶಮನ ಮಾಡಿಕೊಂಡೆನೆಂದೂ, ಇದು ತನ್ನ ಪುಣ್ಯವೆಂದೂ ಸಹಾ ವಿಚಾರಿಯು ಬರದ ನುಡಿಯನ್ನು ಓದಿದರೆ ಪರಮಾಶ್ಚರ್ಯವಾಗುತ್ತದೆ. ಸಮಾಜದವರು ವರದಕ್ಷಿಣೆಯಂಥಾ ಅನಿಷ್ಟ ಪದ್ಧತಿಯ ವಿಚಾರವನ್ನು ಸ್ವಜಾತಿ ಬಾಂಧವರ ಲಕ್ಷ್ಯಕ್ಕೆ ತಂದಿದ್ದರೇ ಹೊರತು ಆ ಕುರಿತು ಸಮಾಜದವರು ತಮ್ಮೊಳಗಾದರೂ ನಿರ್ಬಂಧ ಪೂರ್ವಕವಾದ ಯಾವ ನಿಬಂಧನೆಯನ್ನೂ ಮಾಡಲಿಲ್ಲ. ಮಾತ್ರವಲ್ಲ; ಸಮಾಜದವರು ಈ ವಿಷಯವನ್ನು ಪ್ರಕಟಿಸಿದ ತರುವಾಯ ವಿಚಾರಿಯು ಹೇಳುವಂತೆ ಕಾರ್ಯನಿರ್ವಾಹಕ ಸಭೆಯ ಮುಂದಾಳುಗಳ ಮನೆಯಲ್ಲಿ ವಿವಾಹಗಳಾದದ್ದೂ ಇಲ್ಲ. ಸಮಾಜದವರು ವರದಕ್ಷಿಣೆಯನ್ನು ನಿಷೇಧಿಸಿ ಬರದ ಮಾತಿನಲ್ಲಿ "ಹೆಣ್ಣಿನ ಮೇಲೆ ಮನಸಿಲ್ಲದವನಿಗೆ ಬೆಣ್ಣೆಯಲ್ಲಿ ಕಲ್ಲು ಸಿಕ್ಕಿತು" ಎಂಬ ಗಾದೆಯಂತೆ ವಿಚಾರಿಯು ತಪ್ಪು ಹುಡುಕಿದ್ದು ನೋಡುವಾಗ ಅವಿವಾಹಿತನಾದ ತನ್ನ ಭಾವೀ ವಿವಾಹ ಕಾಲದಲ್ಲಿ ತನಗೆ ಸಿಕ್ಕಬಹುದಾದ ಬದಿಗೆ ತೊಪ್ಪಿಯಾದೀತೆಂಬ ಹೆದರಿಕೆಯಿಂದಲೇ, "ಸಮಾಜದವರ ಮತ್ಸರ, ತನ್ನ ದುಃಖ, ಮತ್ತು ಪುಣ್ಯ" ಎಂಬ ಶಬ್ದಗಳನ್ನುಚ್ಚರಿಸಿ ವಿಚಾರಿಯು ತನ್ನ ಅಂತರ್ಯದ ಅವಸ್ಥೆಯನ್ನು ಬಹಿರಂಗಪಡಿಸಬೇಕಾಯಿತೆಂಬದು ಸ್ಪಷ್ಟವಾಗುತ್ತದೆ.

ಸಮಾಜದ ಸದಸ್ಯರಲ್ಲೊಬ್ಬ [illegible]

ಮಂಗಳೂರಿನ ಪೆಂಟ್‌ಲೆಂಡ್ [illegible]

ಅಯ್ಯಾ ಪತ್ರಕರ್ತರೇ,

ಈ ಪಟ್ಟಣದಲ್ಲಿ ನೂತನವಾಗಿ ತೆರೆಯಲ್ಪಟ್ಟ ಪೆಂಟಲೆಂಡ್ ಪೇಟೆಯ ಸಮಾಚಾರವನ್ನು ಗವರ್ನರ ದೊರೆಗಳವರ ಸಂದರ್ಶನಾ ಕಾಲದಲ್ಲಿ ಕೇಳಿದೆವು. ನಿವಾಸಿಕರಿಗೆ ೧೫ ಸೆಂಟ್ಸುಗಳ ಪ್ರಕಾರ ಈ ಪೇಟೆಯಲ್ಲಿ ವಾಸ್ತವ್ಯಗಳ ಬಗ್ಗೆ ಸ್ಥಳವು ಕೊಡೋಣಾಗುವವು—ಎಂಬೀ ವಿದ್ಯಮಾನಗಳನ್ನು ತಿಳಕೊಂಡೆವು. ನಿವಾಸಿಕರ ಮತ್ತು ಪಟ್ಟಣದ ಆರೋಗ್ಯದ ಬಗ್ಗೆ ಈ ಪಟ್ಟಣವು ಸ್ಥಾಪಿಸೋಣಾಗುತ್ತದೆ. ಪಟ್ಟಣದ ಜನ ತುಂಬಿದ ಮತ್ತು ಹೊಲಸಾದ ಕಡೆಗಳನ್ನು ಬಿಟ್ಟು ನಿವಾಸಿಕರು ಇಲ್ಲಿ ಹೋಗಿ ಮನೆ ಕಟ್ಟಿಕೊಂಡು ನಿಂತು ತಮ್ಮ ಮತ್ತು ಪಟ್ಟಣದ ಆರೋಗ್ಯವನ್ನು ಕಾಪಾಡಿಕೊಂಡಿರಬೇಕು. ಇದೆಲ್ಲಾ ಸರಿ. ಆದರೆ ಪ್ರಕೃತ ಬಂಜರಾಗಿರುವ ಉರ್ವದ ಮತ್ತು ಸುಲ್ತಾನ್ ಬತ್ತೇರಿಯ ಖಾಲಿಸ್ಥಳಗಳಲ್ಲಿ ಪೇಟೆಯು ಅನುಗೊಳ್ಳಬೇಕಾದರೆ, ಸರಕಾರದವರ ಮತ್ತು ಸ್ಥಳೀಕ ಅಧಿಕಾರಿಗಳ ಜನೋಪಕಾರದ ಉದ್ದೇಶಗಳು ನೆರವೇರಿ ಪೆಂಟಲೆಂಡ್ ಪೇಟೆಗೆ ಹೋಗಿ ನಿವಾಸಿಸುವುದರಲ್ಲಿ ಜನರಿಗೆ ಉತ್ಸಾಹವಿರಬೇಕಾದರೆ, ನಮ್ಮಲ್ಲಿಯ ವಿದ್ಯಮಾನಗಳೇನೆಂಬುವದನ್ನು ಒಂದೊಂದಾಗಿಯೇ ಪರ್ಯಾಲೋಚಿಸುವುದು ಅಗತ್ಯವೆಂತೆ ನನಗೆ ಕಂಡಿರುವುದು. ಆದ್ದರಿಂದ ತಮ್ಮ ಪತ್ರದ ಒಂದೆರಡು ಸಂಚಿಕೆಗಳಲ್ಲಿ ಈ ವಿಷಯಕ್ಕೆ ಸ್ವಲ್ಪ ಸ್ಥಳ ಕೊಡಬೇಕೆಂತ ಅಪೇಕ್ಷಿಸುತ್ತೇನೆ.

ಮಂಗಳೂರು ಮುನ್ಸಿಪಾಲಿಟಿಯ ಕೌನ್ಸಿಲಿನವರೂ, ಸ್ಥಳೀಕ ಇತರ ಅಧಿಕಾರಿಗಳೂ ಈ ಹೊಸಪಟ್ಟಣ ರಚನೆಯ ಶ್ರಮವನ್ನು ಕೈಕೊಂಡಿತ್ತಾರೆ. ಜನ ಪದವು ಹೆಚ್ಚುತ್ತ ಬರುವ ಈ ಕಾಲದಲ್ಲಿ, ಅಂಟುರೋಗಗಳು ತಲೆದೋರುತ್ತಿರುವಂಥಾ ಈಗಿನ ಸಂದರ್ಭಗಳಲ್ಲಿ, ನಿವಾಸಿಕರಲ್ಲಿ ಹೆಚ್ಚಿನವರ ಬಡ ಸ್ಥಿತಿಯನ್ನು ಆಲೋಚಿಸಿಕೊಂಡು ಪಟ್ಟಣವನ್ನು ಯಾವ ರೀತಿ ರಚಿಸಬೇಕೆಂಬುವ ಅನುಭವವನ್ನು ವಿಸ್ತಾರವಾಗಿ ನಾನು ಸಮ್ಮಂಧಪಟ್ಟ ಅಧಿಕಾರಸ್ಥರ ಲಕ್ಷ್ಯಕ್ಕೆ ತರಬೇಕೆಂತಿಲ್ಲ. ಯಾಕಂದರೆ ಸೆನಿಟರಿ ಇಲಾಖೆಯೋ, ಇಂಜಿನೀಯರಿಂಗ್ ಇಲಾಖೆಯೋ, ರೆವಿನ್ಯು ಇಲಾಖೆಯೋ, ಅಥವಾ ಇತರ ಲೋಕಸಮಿತಿಯ ಮುನ್ಸಿಪಲ್ ಕೌನ್ಸಿಲಿನವರೋ ಮೊದಲಾದವರೆಲ್ಲ ಈ ಕೆಲಸವನ್ನು ವಹಿಸಿಕೊಂಡಿರುತ್ತಾರೆ. ನೂತನ ಪಟ್ಟಣವನ್ನು ಸ್ಥಾಪಿಸುವಾಗ ಹಳೆ ಪಟ್ಟಣದ ಎಲ್ಲಾ ವಿಷಯಗಳ ಮಾಹಿತಿಯನ್ನು ಪದೇ ಪದೇ ನೆನಪಿಗೆ ತಂದುಕೊಳ್ಳುವದು ಹಿತಕರವೂ ಉಚಿತವೂ ಆಗಿರುವದು. ಯಾಕೆಂದರೆ ಹಳೆ ಪಟ್ಟಣದ ಅನುಭವದಿಂದ ಹೊಸ ಪಟ್ಟಣದಲ್ಲಿ ಉಂಟಾಗ ಬಹುದಾದ ಅಡಚಣೆಗಳಿಗೂ ಸಂಕಷ್ಟಗಳಿಗೂ ಎಡೆಕೊಡದಂತೆ ಹೊಸ ಪಟ್ಟಣವನ್ನು ರಚಿಸ ಬಹುದು. ಪಟ್ಟಣ ರಚನೆಯ ವಿಷಯ, ಜನ ಸಮುದಾಯದ ಆರೋಗ್ಯವನ್ನು ಕಾಪಾಡುವ ವಿಷಯ, ಆರೋಗ್ಯಶಾಸ್ತ್ರ ಕ್ರಮಗಳನ್ನು ನಿಧಾನಿಸಿಕೊಂಡು ಪಾಶ್ಚಾತ್ಯ ಶಾಸ್ತ್ರಜ್ಞರು ಅನೇಕ ಗ್ರಂಥಗಳನ್ನು ರಚಿಸಿರುತ್ತಾರೆ. ಮುನಿಸಿಪಾಲಿಟಿಯವರೂ ಇತರ ಅಧಿಕಾರಿಗಳೂ ಇಂಥಾ ಗ್ರಂಥಗಳಲ್ಲಿ ತೋರಿ ಬರುವ ಸಿದ್ಧಾಂತಗಳನ್ನು [illegible] ಅನುಸರಿಸಿ ವರ್ತಿಸುವರು. ಇಂಥಾ ವರ್ತನೆಯಲ್ಲಿ ಪಾಶ್ಚಾತ್ಯ ದೇಶಗಳ ಅನುಭವವನ್ನು ಇಲ್ಲಿ ಕಾರ್ಯರೂಪುಗೊಳಿಸುವಾಗ ಇಲ್ಲಿಯ ಜನರ ವಿದ್ಯಮಾನಗಳು ಅಧಿಕಾರಸ್ಥರ ಅನುಭವದಿಂದ ಆರಿ ಹೋಗುವದುಂಟು. ಇದರಿಂದ ಜನೋಪಕಾರಾರ್ಥ ಸಾಧನೆಗಳ ಗುರಿಯು ತಪ್ಪಿ ಹೋಗಿ ಜನರು ಹೆಚ್ಚಿನ ಅನಾನುಕೂಲತೆಗಳಿಗೂ ಸಂಕಷ್ಟಗಳಿಗೂ ಗುರಿಯಾಗುವುದುಂಟು. ಆದ್ದರಿಂದ ಮಂಗಳೂರಿನ ವಿಶೇಷ ವಿದ್ಯಮಾನಗಳನ್ನು ಇಲ್ಲಿ ಒಮ್ಮೆ ಪರಿಶೀಲಿಸುವುದು ಅಗತ್ಯವಾಗಿದೆ.

ಮುಂದರಿಯುವದು.

ಸೆನಿಟರಿ ಇಲಾಖೆ

ಪತ್ರಾಧಿಪರೇ,

ಸೆನಿಟರಿ ಇನ್ಸ್‌ಪೆಕ್ಟರರು ಮೊದಲಾದವರ ಕುರಿತು ತಮ್ಮ ಪತ್ರದಲ್ಲಿ ಹಲವು ಚಾಕ್ಕಿಗಳು ಆಗಿಂದಾಗ್ಗೆ ಪ್ರಕಟವಾಗುತ್ತವೆ. ಸೆನಿಟರಿ ಇಲಾಖೆಯು ಸರಕಾರದವರಿಂದ, ಮುನ್ಸಿಪಾಲಿಟಿ ಮೊದಲಾದವರಿಂದ ಯಾಕೆ ಏರ್ಪಡಿಸೋಣಾಗಿರುತ್ತದೆ? ಇಲಾಖೆಯ ಉದ್ದೇಶವೇನು? ಈ ಇಲಾಖೆಯ ಆಫೀಸರರ, ಕೆಳನೌಕರರ ಮೊದಲಾದವರ ಕರ್ತವ್ಯವೇನು? ನಿವಾಸಿಕರು ಈ ಇಲಾಖೆಯವರಿಂದ ಎಂಥೆಂಥಾ ಸಹಾಯಗಳನ್ನು, ಯಾವ ಕೆಲಸಗಳನ್ನು ನಿರೀಕ್ಷಿಸಬೇಕು? ಮೊದಲಾದ ವಿವರಗಳು ಸಾಮಾನ್ಯ ನಿವಾಸಿಕರಿಗೆ ಯಾರಿಗೂ ಸರಿಯಾಗಿ ಗೊತ್ತಿಲ್ಲ. ಆದ್ದರಿಂದ ಸಾಮಾನ್ಯರೆಲ್ಲರ ತಿಳುವಳಿಕೆ ಬಗ್ಗೆ ಈ ಇಲಾಖೆಯ ಆಫೀಸರರ, ಕೆಳನೌಕರರ ವಿಷಯ ವಿವರವಾದ ಒಂದೆರಡು ಲೇಖಗಳನ್ನು ಒಳ್ಳೇ ಅನುಭವಧಾರರು ತಮ್ಮ ಪತ್ರದಲ್ಲಿ ಪ್ರಕಟವಾಗುವಂತೆ ಬರದರೆ ಜನರೆಲ್ಲರಿಗೂ ಉಪಕಾರವಾಗುತ್ತಿತ್ತು.

ಪಟ್ಟಣ ನಿವಾಸಿಕರಲೊಬ್ಬ [illegible]

ಯುದ್ಧ ಸಮಾಚಾರವು.

ತಾ. 4ನೇ ದಶಂಬರ

ಚಳಿಗಾಲವು ಪ್ರಾಪ್ತವಾದ್ದರಿಂದ ಪಶ್ಚಿಮ ರಣರಂಗದಲ್ಲಿ ಸಮರಗಳ ಚಟುವಟಿಕೆಯು ಕಡಮೆಯಾಗಿರುತ್ತದೆ. ಜರ್ಮನರು ಯಪ್ರೆಸನ್ನು ನಾಶಮಾಡಲು ಪ್ರಯತ್ನಿಸಿದರೂ ಜರ್ಮನರ ಈ ಪ್ರಯತ್ನಗಳು ಫಲಗೊಳ್ಳಲಿಲ್ಲ. ಬೆಲ್ಜಿಯಮಿನಲ್ಲಿ ಜರ್ಮನ ಫಿರಂಗಿಗಳ ಹಾರಿಸೋಣವು ಅಲ್ಪಸ್ವಲ್ಪ ಅಲ್ಲಲ್ಲಿ ಕೇಳಿಸಿ ಬರುತ್ತಿತ್ತು. ಪಶ್ಚಿಮ ರಣರಂಗದಲ್ಲಿ ಮತ್ಯಾವ ವಿಶೇಷವಾದರೂ ಇರದು.

ಚಕ್ರವರ್ತಿಯವರು ಫ್ರಾನ್ಸಿಗೆ ಸೇನೆಯನ್ನು ನೋಡಿಬರಲು ಖುದ್ದಾಗಿ ಚಿತ್ತೈಸಿದಾಗ ಅಲ್ಲಿದ್ದ ಪ್ರಿನ್ಸ್ ಒಫ್ ವೇಲ್ಸ ಯುವರಾಜರವರು ಚಕ್ರವರ್ತಿಯವರನ್ನು ಇದಿರ್ಗೊಂಡು ಸನ್ಮಾನಿಸಿದರು. ಸೇನಿಕರು ಚಿಕಿತ್ಸೆ ಹೊಂದುವ ಆಸ್ಪತ್ರೆಗಳನ್ನು ಚಕ್ರವರ್ತಿಯವರು ಸಂದರ್ಶಿಸಿದರು. ಕಳೆದ ೧೫೦ ವರುಷಗಳಿಂದ ಇತ್ತಲಾಗೆ ಬ್ರಿಟಿಷ ಚಕ್ರವರ್ತಿಗಳಲ್ಲಿ ಯುದ್ಧಭೂಮಿಯನ್ನು ಸಂದರ್ಶಿಸಿದವರು ಇವರೇ ಮೊದಲಿನವರಾಗಿರುವರೆಂತಲೂ ಈ ಸಂದರ್ಶಣೆಯಿಂದ ಸೇನಿಕರೆಲ್ಲರೂ ವಿಶೇಷ ಪ್ರೋತ್ಸಾಹಗೊಳ್ಳುವರೆಂಬುದಾಗಿಯೂ ವರ್ತಮಾನ ಪತ್ರಗಳು ಟೀಕಿಸುತ್ತಲಿವೆ.

ಜರ್ಮನಿಯು ಫ್ರಾನ್ಸು ದೇಶದ ಮೇಲೆ ಸಮರವನ್ನು ಸಾರುವ ಮೊದಲೇ ಫ್ರಾನ್ಸನ್ನು ಒಳನುಗ್ಗಿ ಅದನ್ನು ಜಯಿಸಿಬಿಡುವ ಯೋಚನೆಯನ್ನು ಜರ್ಮನ ಕೈಸರರು ಮಾಡಿದ್ದರೆಂತಲೂ ಐಗುಪ್ತ ಮೊದಲಾದ ದೇಶಗಳಲ್ಲಿ ದಂಗೆಗಳನ್ನು ಎಬ್ಬಿಸುವ ಏರ್ಪಾಡನ್ನು ಮಾಡಿತ್ತೆಂಬುದಾಗಿಯೂ ಇತ್ತಲಾಗೆ ಪಾರಿಸಿನಲ್ಲಿ ಪ್ರಕಟವಾದ ಪತ್ರಗಳಿಂದ ತೋರಿಬರುವುದು.

ಸ್ಟೇಟ್ ಸೆಕ್ರಿಟರಿಗಳವರು ವ್ಯಾಸರಾಯಿ ಪ್ರಭುಗಳವರಿಗೆ ತಿಳಿಸಿದ ಯುದ್ಧವೃತ್ತಾಂತವೇನಂದರೆ-ಮಿತ್ರರ ಸೇನೆಗಳ ಮೇಲೆ ದಾಳಿಯಿಟ್ಟು ಬರುವ ಜರ್ಮನರ ಸೇನಾಶಕ್ತಿಯು ಬಹಳವಾಗಿ ಕುಂದಿಹೋಗಿರುವುದು. ಜರ್ಮನ ಸೇನೆಯಲ್ಲಿ ಒಳ್ಳೆ ತರಬೇತಾದ ೪ ಮಿಲಿಯ ಸೇನಿಕರಲ್ಲಿ ೩ ಮಿಲಿಯ ಸೇನೆಯು ಪಶ್ಚಿಮ ರಣರಂಗದಲ್ಲಿರುವುದು. ೧ ಮಿಲಿಯ ಇಂಥಾ ಸೇನೆಯು ಪೂರ್ವ ರಣರಂಗದಲ್ಲಿರುವುದರಿಂದ ಜರ್ಮನರ ಹೆಚ್ಚಿನ ಸೇನೆಯು ಫ್ರಾನ್ಸು ಮತ್ತು ಬೆಲ್ಜಿಯಮ ಪ್ರಾಂತ್ಯಗಳಲ್ಲಿಯೇ ಇರುವುದೆಂತ ಬ್ರಿಟಿಷ ಯುದ್ಧ ಮಾಹಿತಿಗಾರರು ಅಭಿಪ್ರಾಯಪಡುವರು. ಆದ್ದರಿಂದ ಪೂರ್ವರಣರಂಗದಲ್ಲಿ ಸೇನಿಕರು ಜರ್ಮನಿಗೆ ಬಹಳವಾಗಿ ಬೇಕಾದ ಸಮಯದಲ್ಲಿ ಪಶ್ಚಿಮ ರಣರಂಗದಿಂದ ಬೇಕಾದ ಜರ್ಮನ ಸೇನೆಯು ಕಳುಹಿಸಲ್ಪಡದಂತೆ ಮಿತ್ರಸೇನಿಕರು ಜರ್ಮನರನ್ನು ಆಗ್ನಿಂದಾಗ್ಯೆ ಪಶ್ಚಿಮ ರಣರಂಗದಲ್ಲಿ ಯುದ್ಧಕ್ಕೆ ಕೆಣಕಿಸುತ್ತಿರುವರು. ಈ ವಿದ್ಯಮಾನಗಳಲ್ಲಿ ಜರ್ಮನರ ಅಪಜಯವು ಪೂರ್ವ ಪ್ರಾಂತ್ಯಗಳಲ್ಲಿ ವಿಶೇಷವಾಗುತ್ತ ಬರುತ್ತಿರುವುದು. ಸರ್ ಜೋನ್ ಫ್ರೆಂಚರವರು ಬ್ರಿಟಿಷ ಸೇನೆಯ ಪರಾಕ್ರಮವನ್ನು ಶ್ಲಾಘಿಸಿ ಬರೆದ ಪ್ರಸ್ತಾಪಗಳು ಈ ವೃತ್ತಾಂತದಲ್ಲಿರುವವು.

ರುಶ್ಯ ಮತ್ತು ಜರ್ಮನಿಯ ಸರಹದ್ದುಗಳಲ್ಲಿ ಆದ ಯುದ್ಧದಲ್ಲಿ ಸೋತು ಓಡಿಹೋಗುತ್ತಿರುವ ಜರ್ಮನರನ್ನು ರುಶ್ಯಯನರು ಹಿಂಬಾಲಿಸಿಕೊಂಡು ಹೋಗುವುದರಿಂದ ಜರ್ಮನ್ ಸೇನೆಗೆ ತಕ್ಕ ನೆಲೆಯನ್ನು ಸೇರಲು ಅಸಾಧ್ಯವಾಗಿದೆ. ಗೆಲಿಸಿಯದಲ್ಲಿ ಒಸ್ಟ್ರಿಯನರನ್ನು ರುಶ್ಯಯನರು ಓಡಿಸುತ್ತಿರುವರು. ಕಳೆದ ನವಂಬರ್ ತಿಂಗಳ ಆದಿಭಾಗದಲ್ಲಿ ರುಶ್ಯಯನರು ಒಟ್ಟಿಗೆ ೫೦ ಸಾವಿರ ಒಸ್ಟ್ರಿಯದ ಸೇನಿಕರನ್ನು ಕೈದಿಗಳನ್ನಾಗಿ ಮಾಡಿರುವರು. ಕಳೆದ ನವಂಬರ ತಿಂಗಳ ತಾ. ೩ರಿಂದ ಬ್ಲೇಕ್ ಸಿ ಎಂಬ ಉಪಸಾಗರದಲ್ಲಿ ಟರ್ಕಿಯ ಯುದ್ಧನಾವೆಗಳ ಸುಳಿವೇ ಕಾಣಬರುವದಿಲ್ಲ. ಯುಪ್ರಟೀಸ್ [illegible] ರುಶ್ಯಯನರು ಟರ್ಕರನ್ನು ಓಡಿಸಬಿಟ್ಟಿರುತ್ತಾರೆ.

ತಾ. ೫ನೇ ದಶಂಬರ.

ಚಕ್ರವರ್ತಿಗಳು ಭಾರತೀಯ ಸೇನಿಕರು ಇರುವ ಆಸ್ಪತ್ರೆಗಳನ್ನು ಸಂದರ್ಶಿಸಿ ಚಿಕಿತ್ಸೆ ಹೊಂದುತ್ತಿರುವವರೊಂದಿಗೆ ಅವರವರ ಸಂಕಷ್ಟಗಳನ್ನು ವಿಚಾರಿಸಿ ಮಾತಾಡಿದರು. ಜಾತಿಮತಗಳ ತಾರತಮ್ಯ ಪ್ರಕಾರ ಭಾರತೀಯ ಸೇನಿಕರಿಗೆ ಆಹಾರವನ್ನು ಕೊಡಲು ಮಾಡಿರುವ ಏರ್ಪಾಡನ್ನು ಕಂಡು ಚಕ್ರವರ್ತಿಗಳು ವಿಶೇಷ ಸಂತೋಷಪಟ್ಟರು. ಫ್ರಾನ್ಸಿನಲ್ಲಿ ಫ್ರೆಂಚ ಸರಕಾರದ ಅಧ್ಯಕ್ಷ ಪೊಂಯ್ಕುರೆ ಮತ್ತು ಜೋರ್ಜ ಚಕ್ರವರ್ತಿಗಳವರು ಒಟ್ಟಿನಲ್ಲಿ ಸೇನೆಗಳನ್ನು ಸಂದರ್ಶಿಸುವುದನ್ನು ಕಂಡು ಅಲ್ಲಿಯ ನಿವಾಸಿಕರು ಬಹಳ ಸಂತೋಷಪಟ್ಟಿರುವರು.

ಪಶ್ಚಿಮ ರಣರಂಗದಲ್ಲಿ ಕದನಗಳು ವಿಶೇಷವಾಗಿ ನಡೆಯಲಿಲ್ಲ. ಬೆಲ್ಜಿಯನರ ಸೇನೆಯಲ್ಲಿ ವಿಷಮಜ್ವರ ಬಾಧೆಯು ತಲೆದೋರಿರುವುದು. ಇದರ ಶಮನಾರ್ಥವಾಗಿ ಬ್ರಿಟಿಷ ರೆಡ್ ಕ್ರೋಸ್ ಸೊಸ್ಯಾಟಿಯವರು ೧೦ ಸಾವಿರ ಪವನುಗಳನ್ನು ವೆಚ್ಚಮಾಡುವರು. ಇಂಗ್ಲಾಂಡದಲ್ಲಿ ಏರ್ಪಡಿಸಿದ ಪ್ರಿನ್ಸ್ ಒಫ್ ವೇಲ್ಸರವರ ಯುದ್ಧ ಸಂಕಷ್ಟನಿವಾರಣಾ ಫಂಡಿನ ಮೊಬಲಗು ಪ್ರಕೃತ ೪ ಮಿಲಿಯ ಪವನುಗಳಾಗಿರುತ್ತದೆ. ಇಂಗ್ಲೆಂಡು ಮತ್ತು ಫ್ರಾನ್ಸು ದೇಶಗಳಲ್ಲಿರುವ ಇಟೇಲಿಯ ರಾಯಭಾರಿಗಳು ಇಟೇಲಿಗೆ ಹೋದದ್ದು ಯಾರಿಗೂ ಸರಿಯಾಗಿ ಗೊತ್ತಾಗದ್ದರಿಂದ ಕಲ್ಕತ್ತೆಯಲ್ಲಿರುವ ಇಟೇಲಿಯ ವರ್ತಕರಿಗೆ ವ್ಯಾಪಾರ ವ್ಯವಹಾರಗಳಲ್ಲಿ ಅಡಚಣೆಗಳು ಪ್ರಾಪ್ತವಾಗಲು ಪ್ರಾರಂಭವಾಯಿತು. ಕಲ್ಕತ್ತೆಯಲ್ಲಿರುವ ಇಟೇಲಿಯ ರಾಯಭಾರಿಯು ಈ ವಿಷಯದಲ್ಲಿ ತಕ್ಕ ವಿಚಾರ ನಡಿಸಿ ರಾಯಭಾರಿಗಳು ಫ್ರಾನ್ಸು ಮತ್ತು ಇಂಗ್ಲಾಂಡದಿಂದ ಹೊರಟು ಹೋದದ್ದರಿಂದ ಇಟೇಲಿ ದೇಶದ ಸಮ್ಮಂದವು ಇಂಗ್ಲಾಂಡ ಮತ್ತು ಫ್ರಾನ್ಸು ದೇಶಗಳೊಡನೆ ಯಾವ ರೀತಿಯಲ್ಲಿಯಾದರೂ ಮಾರ್ಪಟ್ಟಿಲ್ಲವೆಂಬುದಾಗಿ ತಿಳಿಯ ಹೇಳಿರುತ್ತಾರೆ.

ಪೂರ್ವ ರಣರಂಗದಲ್ಲಿ ರುಶ್ಯಯನರೇ ಜಯಶೀಲರಾಗುತ್ತಿದ್ದಾರೆ. ರುಶ್ಯದ [illegible] ಸೇನೆಯನ್ನು ಸಂದರ್ಶನಕ್ಕೆ ರಣಭೂಮಿಗೆ [illegible] ಒಸ್ಟ್ರಿಯನರು ಸರ್ವಿಯದ ಬೆಲ್ಗ್ರೇಡ್ ಪಟ್ಟಣವನ್ನು ಒಳನುಗ್ಗಿರುವರು. ಆದರೆ ಒಂದೇ ದಿವಸದಲ್ಲಿ [illegible] ಸರ್ವಿಯನರು ಜಯಶೀಲರಾಗಿ [illegible] ಒಸ್ಟ್ರಿಯನರನ್ನು ಸೆರೆ ಹಿಡಿದಿರುತ್ತಾರೆ.

ತಾ. ೬ನೇ ದಶಂಬರ:—

ಬೆಲ್ಜಿಯಮ್ ಮತ್ತು ಫ್ರಾನ್ಸ ಪ್ರಾಂತಗಳಲ್ಲಿ ವಿಶೇಷ ಕದನಗಳ ನಡೆಯಲಿಲ್ಲವೆಂಬುದಾಗಿ ವ್ಯಾಸರಾಯಿ ಪ್ರಭುಗಳಿಗೆ ವಾರ್ತೆ ಬಂದಿರುವುದು. ಯುದ್ಧರಂಗದಲ್ಲಿ ಡಾಕ್ಟರರಾಗಿದ್ದ ರಾಜಾ ಸರ್ ಹರ್ಮನ್ ಸಿಂಗರವರ ಮಗ ಮೃತಪಟ್ಟದ್ದರಿಂದ ಚಕ್ರವರ್ತಿ ಚಕ್ರವರ್ತಿನಿಯರು ಹರ್ಮನ ಸಿಂಗರಿಗೆ ತಮ್ಮ ದುಃಖವನ್ನೂ ಸಹಾನುಭೂತಿಯನ್ನೂ ಪತ್ರಮೂಲಕ ಸೂಚಿಸಿರುತ್ತಾರೆ. ಪೋರ್ಪ್ರೆ ಎಂಬ ಪ್ರಖ್ಯಾತ ಆಕಾಶವಿಮಾನಕಾರರು ಯುದ್ಧರಂಗದಲ್ಲಿ ಮಡಿದುಹೋದರು. ದಕ್ಷಿಣ ಅಮೇರಿಕದ ಚಿಲಿಯನ್ ಪ್ರಾಂತ್ಯಗಳಲ್ಲಿ ಅಲ್ಲಿಯ ನಿವಾಸಿಕರು ದಂಗೆಎದ್ದು ಅಲ್ಲಿ ಇದ್ದ ಜರ್ಮನರ ಕಟ್ಟೋಣ ಇತ್ಯಾದಿಗಳನ್ನು ನಾಶಪಡಿಸಿದರು. ಚಿಲಿಯನ ಸರಕಾರದವರು ಸೇನೆಯ ಸಹಾಯದಿಂದ ಈ ದಂಗೆಯನ್ನು ಶಮನಿಸಬೇಕಾಯಿತು. ಆಫ್ರಿಕದ ದಂಗೆಗಾರನಾದ ಡಿವೆಟನನ್ನು ಆತನ ೫೦ ಜನರೊಡನೆ ಹಿಡಿದಿರುತ್ತಾರೆ. ಜರ್ಮನಿಯ ಪ್ರಖ್ಯಾತ ಕ್ರುಪ್ ಫೆಕ್ಟರಿ ಎಂಬ ಕೋವಿ ಇತ್ಯಾದಿ ಯುದ್ಧ ಸಾಮಾಗ್ರಿಗಳನ್ನು ತಯ್ಯಾರಿಸುವ ಕಾರ್ಖಾನೆಯ ಮೇಲೆ ಆಕಾಶವಿಮಾನಕಾರರು ಸಿಡಿಮದ್ದಿನ ಕೋಟೆಗಳನ್ನು ಬಿಸುಟು ವಿಶೇಷ ಹಾವಳಿಯನ್ನು ಮಾಡಿರುತ್ತಾರೆ. ಜರ್ಮನರು ಬೆಲ್ಜಿಯಮ್ ಕರಾವಳಿಯನ್ನು ಭದ್ರಪಡಿಸುತ್ತಿರುವರು.

ಪೂರ್ವ ರಣರಂಗದಲ್ಲಿ ಜಯವು ರುಶ್ಯಯನರ ಕೈವಶವಾಗುತ್ತಿದೆ. ಕ್ರೆಕೊವಿನ ದಕ್ಷಿಣದಲ್ಲಿ ರುಶ್ಯಯನರ ಸೇನೆಯು ಮುಂದುವರಿಯುತ್ತಿರುವುದು. ಜಪಾನೀಯರಿಗೆ ಟಿಂಗ್‌ಟೊದಲ್ಲಿ ೩೫೦೦ ಕೋವಿಗಳೂ ನೂರು ಫಿರಂಗಿಗಳೂ ೪೦ ಮೋಟರ್ ಬಂಡಿಗಳೂ [illegible] ಜನರನ್ನು ಮೂರು ತಿಂಗಳುಗಳ ವರೆಗೆ [illegible] ಯುದ್ಧ ಸೇನಾ [illegible]

[illegible] ಯುದ್ಧಗಳು ಹಂಗಾಮಿಯಾಗಿ [illegible]

ತಾ. ೭ನೇ ದಶಂಬರ:—

ಪಶ್ಚಿಮ ರಣರಂಗದಲ್ಲಿ ಜರ್ಮನರು ಸೇನಾ ಸ್ಥಿತಿಗಳನ್ನು ನೋಡಲು ಉಪಯೋಗಿಸುತ್ತಿದ್ದ ಪೂರ್ಕ್ಸ ಉನ್ನತ ಪ್ರಾಂತ್ಯಗಳನ್ನು ಫ್ರೆಂಚರು ಸ್ವಾಧೀನಮಾಡಿಕೊಂಡಿರುವರು. ಆಲ್ಸೆಸ್ ಮತ್ತು ಲೊರೇನ್ ಪ್ರಾಂತ್ಯಗಳಲ್ಲಿ ಜರ್ಮನರು ಹಿಂಜರಿಯುತ್ತಿದ್ದಾರೆ. ಅಮೇರಿಕದ ಲೇಖಕರೊಬ್ಬರು ಕಿಚ್ನರ್ ಪ್ರಭುಗಳ ಕೂಡೆ ಯುದ್ಧವು ಯಾವಾಗ ಮುಗಿಯುವುದೆಂತ ವಿಚಾರಿಸಿದ್ದಲ್ಲಿ ಮೂರು ವರುಷಗಳ ಮೊದಲು ಯುದ್ಧವು ಮುಗಿಯದು. ಜರ್ಮನರು ಪೂರ್ಣವಾಗಿ ಸೋಲಿಸಲ್ಪಡುವ ವರೆಗೆ ಅದು ಮುಂದರಿಯುವುದೆಂಬ ಅಭಿಪ್ರಾಯವನ್ನು ಕಿಚ್ನರ್ ಪ್ರಭುಗಳು ಹೇಳಿರುತ್ತಾರೆ. ಇಂಗ್ಲೀಷ ಸೇನಿಕರು ಅದರಲ್ಲಿಯೂ ಸ್ಕೋತಾಳದವರು ಬಹಳ ಕಠಿಣವಾಗಿ ಕಾದಾಡುವ ಸೇನಿಕರೆಂಬ ಅಭಿಪ್ರಾಯವು ಜರ್ಮನರಲ್ಲಿರುವುದೆಂತ ಈ ಅಮೇರಿಕದ ಲೇಖಕರಿಗೆ ಕಿಚ್ನರ್ ಪ್ರಭುಗಳು ತಿಳಿಯ ಹೇಳಿರುತ್ತಾರೆ. ಒಂದು ವೇಳೆ ಪೇರಿಸ್ ಪಟ್ಟಣವು ಜರ್ಮನರಿಂದ ಹಿಡಿಯಲ್ಪಟ್ಟರೂ ಜರ್ಮನರು ಇಂಗ್ಲಾಂಡವನ್ನು ಒಳನುಗ್ಗಿದರೂ ಜರ್ಮನರು ಸೋಲಿಸಲ್ಪಡುವ ವರೆಗೆ ಯುದ್ಧವು ನಡಿಯುವದೆಂದು ಕಿಚನರ್ ಪ್ರಭುಗಳು ಹೇಳಿರುತ್ತಾರೆ. ಆಲೆಕ್ಸಾಂಡ್ರಾ ಮಹಾರಾಣಿಯವರು ತಮ್ಮ ಪಕಡಿಗಳನ್ನು ಕಳಕೊಂಡ ಕೆಲವು ಭಾರತೀಯ ಸೇನಿಕರಿಗೆ ೪೦೦ ಗಜ ಮಸ್ಲಿನ್ನನ್ನು ಕಳುಹಿಸಿಕೊಟ್ಟಿರುತ್ತಾರೆ. ಸರ್ ಜೋನ್ ಫ್ರೆಂಚ ಜನರಲ್ ಜೊಫ್ರೆ ಕಿಚ್ನರ್ ಪ್ರಭುಗಳ ಸಹಿತ ಚಕ್ರವರ್ತಿಯವರು ಸುರಂಗಗಳಲ್ಲಿರುವ ಸೇನಿಕರನ್ನು ಕಂಡು ಮಾತಾಡಿ ಬಂದಿರುವರು.

ಪೂರ್ವ ರಣರಂಗದಲ್ಲಿ ಲೊವಿಸ್ಜ್ ಎಂಬಲ್ಲಿ ರುಶ್ಯಯನ ಮತ್ತು ಜರ್ಮನರೊಳಗೆ ಕಠಿಣ ಕಾಳಗಗಳು ನಡಿಯುತ್ತಲಿವೆ. ಕ್ರೆಕೊವನ್ನು ರುಶ್ಯಯನರು ಮುತ್ತುತ್ತಿರುವರು.

ತಾ. ೮ನೇ ದಶಂಬರ:—

ಲ್ಯಾಸಿನ ಉತ್ತರ ಪ್ರಾಂತ್ಯದಲ್ಲಿ ಮಿತ್ರರ ಸಂಯುಕ್ತ ಸೇನೆಗಳು ಜಯಶೀಲರಾಗಿರುವರು. ಶತ್ರುಗಳಿಂದ ಸಂಗರಗಳ ಎರಡು ಸಾಲುಗಳನ್ನು ಮಿತ್ರರ ಸೇನಿಕರು ಸ್ವಾಧೀನ ಪಡಿಸಿದ್ದಾರೆ. ಇಲ್ಲಿ ಕೆಲವು ಹಳ್ಳಿ ಪ್ರಾಂತ್ಯಗಳೂ ಸಹ ಸಂಯುಕ್ತ ಸೇನೆಯ ಕೈ ಸೇರಿವೆ. ಯುದ್ಧದಲ್ಲಿ ಪರಾಕ್ರಮದಿಂದ ಹೋರಾಡಿದ ಸೇನಿಕರಿಗೂ ಆಫೀಸರರಿಗೂ ಚಕ್ರವರ್ತಿಗಳವರು ಸ್ವತಹ ಬಹುಮಾನ ಪದಕ ಇತ್ಯಾದಿಗಳನ್ನು ಹಂಚುತ್ತಿರುವರು. ಫ್ರಾನ್ಸಿನಲ್ಲಿ ಬೆಲ್ಜಿಯನರ ಅರಸರನ್ನು ಚಕ್ರವರ್ತಿಗಳವರು ಬಹಳ ಸ್ನೇಹಭಾವದಿಂದ ಕಂಡರು. ಚಕ್ರವರ್ತಿಯವರು ಫ್ರಾನ್ಸಿನಿಂದ "ಇಂಗ್ಲಾಂಡಕ್ಕೆ ತಾ. ೫ರಲ್ಲಿ ಬಂದಿರುತ್ತಾರೆ. ಇಟೆಲಿಯಲ್ಲಿ ತಮ್ಮ ತಟಸ್ಥಭಾವವನ್ನು ಆಯುಧಪಾಣಿಗಳಾಗಿಯೇ ಇದ್ದುಕೊಂಡು ರಕ್ಷಿಸುತ್ತಿರಬೇಕೆಂಬ ಆ ರಾಜ್ಯದ ಮಂತ್ರಿಗಳ ನಿರ್ಣಯವು ಪ್ರಜೆಗಳ ಪ್ರತಿನಿಧಿ ಸಭೆಯಲ್ಲಿ ಮಂಜೂರಾಗಿರುತ್ತದೆ.

ಪೂರ್ವ ರಣರಂಗದಿಂದ ಕೈಸರರವರು ಬರ್ಲಿನಿಗೆ ಹಿಂದಕ್ಕೆ ಬಂದಿರುತ್ತಾರೆ. ಲೊಡ್ಜ ಎಂಬಲ್ಲಿ ನಡಿಯುವ ಕಾಳಗದಲ್ಲಿ ರುಶ್ಯಯನರ ಜಯಶೀಲರಾಗಿರುವರೆಂಬ ವರ್ತಮಾನವಿದೆ. ರುಶ್ಯದ ಕೋಟೆಗಳಲ್ಲಿ ಜರ್ಮನ ಕೈದಿಗಳು ತುಂಬಿ ಹೋಗಿರುವವು. ಯುದ್ಧ ಪ್ರಾರಂಭವಾದಂದಿನಿಂದ ೧೩೦,೦೦೦ ಸೇನಿಕರೂ ೨೫೦೦ ಆಫೀಸರರೂ ಕೈದಿಗಳಾಗಿ ಒಯ್ಯಲ್ಪಟ್ಟಿರುವರು.

ತಾ. 9ನೇ ಡಿಸೆಂಬರ:—

ಕಾಳಗಗಳು ವಿಶೇಷವಿಲ್ಲದ್ದರಿಂದ ಪಶ್ಚಿಮ ರಣರಂಗದಲ್ಲಿ ಸಂಯುಕ್ತ ಸೇನೆಯವರಿಗೆ ತಮ್ಮ ಸೇನೆಗಳನ್ನು ಬಲಪಡಿಸುವ ವಿಶೇಷ ಸಂದರ್ಭವು ದೊರಕಿರುತ್ತದೆ. ಶತ್ರುಗಳು ಸಂಯುಕ್ತ ಸೇನೆಗಳು ಪಡದ ಹೊಸ ನೆಲೆಗಳನ್ನು ಪುನಹ ತಕೊಳ್ಳಲು ಮಾಡಿದ ಪ್ರಯತ್ನಗಳು ನೆರವೇರಲಿಲ್ಲ. ಬೆಲ್ಜಿಯಮಿನ ರಾಜರವರಿಗೆ ಚಕ್ರವರ್ತಿಗಳು ಓರ್ಡರ್ ಒಫ್ ಗಾರ್ಟರ್ ಎಂಬ ಬಿರುದಾವಳಿಯನ್ನು ಸ್ವತಹ ಕೊಟ್ಟಿರುವರು. ಮೃತಪಟ್ಟ ಜರ್ಮನ ಸೇನಿಕರನ್ನು ಒಸ್ಟೆಂಡಿಗೆ ರೈಲ್ವೆ ಗಾಡಿಗಳಲ್ಲಿ ತುಂಬಿಸಿ ತಂದು ರಾಶಿರಾಶಿಯಾಗಿ ಗುಪ್ತವಾಗಿ ಹೂಣಿಡುತ್ತಾರೆ. ಎಂಟವರ್ಪ ಕೋಟೆಯಿಂದ ಒಂದು ವಾರದ ವರೆಗೆ ಒಳಗೆ ಹೋಗಲೂ ಅಥವಾ ಕೋಟೆಯ ಹೊರಗೆ ಹೋಗಲೂ ಕೂಡದೆಂಬ ಅಪ್ಪಣೆಯನ್ನು ಜರ್ಮನರು ಕೊಟ್ಟಿರುವರು. ಇಟೆಲಿಯು ಮಿತ್ರರನ್ನು ಸೇರದಂತೆ ಜರ್ಮನರು ಒಬ್ಬ ಹೊಸ ರಾಯಭಾರಿಯನ್ನು ರೋಮ ಪಟ್ಟಣದಲ್ಲಿ ನೇಮಿಸಿರುವರು. ಈ ರಾಯಭಾರಿಯ ಪತ್ನಿಯು ಇಟೆಲಿಯ ಮಾನ್ಯ ಕುಟುಂಬದವಳಾಗಿರುವಳು. ಪೂರ್ವ ರಣರಂಗ ಸ್ಥಿತಿಯಲ್ಲಿ ವಿಶೇಷ ಮಾರ್ಪಾಟುಗಳೇನೂ ಉಂಟಾಗಲಿಲ್ಲ.

ತಾ. 10ನೇ ದಶಂಬರ:—

ಇಂದಿನ ಸಮಾಚಾರದಲ್ಲಿ ಚಕ್ರವರ್ತಿಗಳವರ ಸಂದರ್ಶನೆಯ ವಿವರವು ವಿಸ್ತಾರವಾಗಿ ಪ್ರಕಟಿಸಲ್ಪಟ್ಟಿರುವುದು. ಸಂಯುಕ್ತ ಸೇನೆಗಳ ಬಲಾಧಿಕ್ಯದಲ್ಲಿ ಜರ್ಮನರು ತಮ್ಮ ಸೇನೆಗಳಿಗೆ ಬೇಕಾದ ಬೆಂಬಲವನ್ನು ಕಳುಹಿಸಿಕೊಳ್ಳುತ್ತಿರುವುದರಿಂದ ಇನ್ನು ಬೇಗನೆ ಈ ಪ್ರಾಂತ್ಯದಲ್ಲಿ [illegible] ಸಮರಗಳು ನಡಿಯುವ ಸಂಭವಗಳಿವೆ. ಪೂರ್ವ ರಣರಂಗದಲ್ಲಿ ಸರ್ವಿಯನರು ಜಯಶೀಲರಾಗಿ [illegible] ಸರ್ವಿಯದ ಸರಕಾರದವರು [illegible]

ವಿದೇಶ ವೃತ್ತಾಂತ.

ಜರ್ಮನರು ೩೦ ಸೆಂಟಿಮೀಟರ್ ಬಾಯಿಯ ಫಿರಂಗಿಗಳನ್ನು ನಿರ್ಮಿಸಿರುವರೆಂದೂ ಅದು ಈಗ ತಾನೇ ತಯಾರಾಗಿರುವದೆಂದೂ ಜರ್ಮನ್ ವಾರ್ತಾ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಈ ಫಿರಂಗಿಗಳಿಂದ ಹೆಚ್ಚು ದೂರ ಅಂದರೆ ೨೭ ಮೈಲುಗಳಿಗಿಂತಲೂ ದೂರ ಗುಂಡುಗಳು ಹೋಗುವವು. ಕಡಿಮೆಯೆಂದರೆ ೯ ಮೈಲು ದೂರ ಹೋಗುವವು. ಫಿರಂಗಿ ಗುಂಡುಗಳ ಅರ್ಧವ್ಯಾಸವು ೨೦॥ ಅಂಗುಲ ವಿರುವದು. ರೈಲ್‌ಬಂಡಿಯಲ್ಲಿ ಈ ಫಿರಂಗಿಗಳನ್ನು ವೈಯ್ಯುವದಕ್ಕೆ ಕನಿಷ್ಠ ಪಕ್ಷಕ್ಕೆ ೧೦-೧೨ ಗಾಡಿಗಳು ಬೇಕಾಗುವದೆಂದೂ ವಿದ್ಯುಚ್ಛಕ್ತಿ ಮೂಲಕ ೧ ಮೈಲು ದೂರ ನಿಂತು ಇದಕ್ಕೆ ಬೆಂಕಿ ಹಾಗಿಸಬೇಕೆಂದೂ ಜರ್ಮನ್ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಫ್ರಾನ್ಸ್‌ದ ಜೊಸ್ಸೆಯಲ್ಲಿರುವ ಫ್ರೆಂಚರ ಸೆರೆಯಾಳುಗಳು ಹೆರಾಲ್ಡ ಎಂಬ ಹೆಸರಿನ ಒಂದು ವಾರ ಪತ್ರಿಕೆಯನ್ನು ಪ್ರಕಟಿಸಿರುವರು. ಅಲ್ಲಿರುವ ಪ್ರತಿ ದೇಶದ ಬಂದಿಗಳಿಗೆ ಇದನ್ನು ಪ್ರತಿ ಒಂದಕ್ಕೆ ೧ ಆಣೆಯಂತೆ ಮಾರುತ್ತಿರುವರು.

ಭಾರತೀಯ ಕಾಲಾಳು ಸೇನೆಯಲ್ಲಿ ಸುಬೇದಾರನೆಂದರೆ ಇಂಗ್ಲಿಷ್ ಸೇನೆಯ ಕೆಪ್ಟನನಿಗೆ ಸರಿ. ಜಮೇದಾರನೆಂದರೆ ಲೆಪ್ಟನೆಂಟನಿಗೆ ಸರಿ, ಹವಲ್ದಾರನೆಂದರೆ ಸಾರ್ಜೆಂಟನಿಗೆ ಸರಿ. ನಾಯಕನೆಂದರೆ ಕೊರಪೋರಲ್ ಸಿಪಾಯಿ ಅಂದರೆ ಇಂಗ್ಲಿಷ್ ಸೇನೆಯಲ್ಲಿ ಪ್ರೈವೆಟ್ ಎಂಬವನಿಗೆ ಸರಿ. ಭಾರತೀಯ ಅಶ್ವಪದೆಯಲ್ಲಿ ಸೈನಿಕರಿಗೆ ಸವಾರರೆಂದೂ ಸರ್ಜೆಂಟರಿಗೆ ದಫೆದಾರರೆಂದೂ ಕೆಪ್ಟನನಿಗೆ ರಿಸಲ್ದಾರನೆಂದೂ ಹೆಸರು. ಇತರ ಅಧಿಕಾರಿಗಳಿಗೆ ಕಾಲಾಳು ಸೇನೆಯ ಅಧಿಕಾರಿಗಳಂತೆಯೇ ಹೆಸರಿರುವವು. ಗೂರ್ಕ ಸೇನೆಯಲ್ಲಿ ಮಾತ್ರ ಸೈನಿಕರನ್ನು ಸಿಪಾಯಿಯೆಂದು ಕರೆಯದೆ ಬದಲಿಗೆ ರೈಫಲ್ ಮೇನ್ ಎಂದು ಕರೆಯುವರು.

ಮಾಜಿ ಜಡ್ಜ ವೆಬ್ ಎಂಬವರು ವಕೀಲರಾಗಿರುವಾಗ ೨೫ ವರ್ಷದ ಪೀಟರ್ ಮುಲಿಗಾನ್ ಎಂಬವನಿಗೆ ಮದ್ಯದ ಅಂಗಡಿಗೆ ಲೈಸನ್ಸು ಕೊಡುವ ಬಗ್ಗೆ ವಾದಿಸಿದ ವೃತ್ತಾಂತವು ಯುವಕರಿಗೆ ಪ್ರೋತ್ಸಾಹವನ್ನುಂಟುಮಾಡದಿರಲಾರದು. ವೆಬ್ಬರವರು ಪೀಟರ್ ಮುಲಿಗಾನನಿಗೆ ಲೈಸನ್ಸು ಕೊಡಬೇಕಾಗಿ ಅರ್ಜಿ ದಾಖಲುಮಾಡಿದಾಗ ಕೋರ್ಟಿನ ರಿಕಾರ್ಡರನು ಇಂಥಾ ಜವಾಬದಾರಿತ್ವವುಳ್ಳ ಕೆಲಸಕ್ಕೆ ಇವನು ಕೇವಲ ಚಿಕ್ಕವನು ಎಂದು ಹೇಳಿದನು. ಕೂಡಲೇ ವೆಬ್ಬರು ಎದ್ದು ನಿಂತು "ಮಾನ್ಯರೇ, ಮಹಾ ಅಲೆಕ್ಸಾಂಡರ ಮಹಾರಾಜನು ೨೨ನೇ ವರ್ಷ ವಯಸ್ಸಿನಲ್ಲಿ ಇಲಿರಿಯನ್ನರನ್ನು ಹತಬಡಿದು ಥೀಬ್ಸ್ ಪಟ್ಟಣವನ್ನು ನೆಲಸಮಮಾಡಿದನು. ತನ್ನ ಸೇನೆ ಸಹಿತ ಹೆಲ್ಲೆಸ್‌ಪೊಂಟನ್ನು ದಾಟಿ ದರಾಯಸನನ್ನು ಸೋಲಿಸಿ ದೊಡ್ಡ ಪಾರ್ಶಿ ರಾಜ್ಯವನ್ನು ಕೆಳದೊಬ್ಬಿದನು. ರೆನೆ ಡೆಸ್ಕಾರ್ಟೆಸ್ ಎಂಬವನು ತನ್ನ ೨೪ನೇ ವಯಸ್ಸಿನಲ್ಲಿ ತತ್ವಜ್ಞಾನದ ಹೊಸ ವಿಧಾನವನ್ನು ಕಲ್ಪಿಸಿ ಲೋಕ ಪ್ರಸಿದ್ಧನಾದನು. ಪಿಟ್ಟರವರು ತನ್ನ ೨೪ನೇ ವಯಸ್ಸಿನಲ್ಲಿ ಬ್ರಿಟಿಷ ಸಾಮ್ರಾಜ್ಯದ ಪ್ರಧಾನ ಮಂತ್ರಿಯಾಗಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೂರ್ಯನು ಮುಳುಗದ ಹಾಗೆ ಮಾಡಿಬಿಟ್ಟರು. ನೆಪೋಲಿಯನನು ತನ್ನ ೨೪ನೇ ವಯಸ್ಸಿನಲ್ಲಿ ಫ್ರಾನ್ಸ್ ರಿಪಬ್ಲಿಕಿನ ಶತ್ರುಗಳನ್ನು ಹತಬಡಿದು ಮಹಾ ಹೆಸರನ್ನು ಹೊಂದಿದನು. ಹೀಗಿರುವಲ್ಲಿ ೨೫ ವರ್ಷ ವಯಸ್ಸಿನ ನನ್ನ ಕಕ್ಷಿಗಾರನು ಕೇವಲ ಅಪ್ರಾಯ ವಯಸ್ಕನೆಂದು ಹೇಳುವದು ಹೇಗೆ ಎಂದು ವಾದಿಸಿದರು. ಕೂಡಲೇ ಜಡ್ಜರು ಲೈಸನ್ಸ್ ಕೊಟ್ಟುಬಿಟ್ಟರು.

ಜರ್ಮನರ ದುಷ್ಕೃತ್ಯದ ಕುರಿತು ಮೆ॥ ಇ. ಇ. ಜೇನ್ ಎಂಬವರು ಈ ರೀತಿ ಬರೆಯುವರು. ಬ್ರಿಟಿಷ್ ಕಂದಕಗಳ ದಾರಿಯಲ್ಲಿ ಜರ್ಮನರು ಹೆಣ ಸಾಗಿಸಿಕೊಂಡು ಹೋಗುತ್ತಿದ್ದರು. ಒಬ್ಬ ಪಾದರಿಯು ಪುಸ್ತಕದಿಂದ ಪ್ರಾರ್ಥನೆಗಳನ್ನು ಓದುತ್ತಿದ್ದನು. ಶವ ಪೆಟ್ಟಿಗೆಯ ಮೇಲೆ ಗುರುಪಟ್ಟದವರ ವಿಶೇಷ ವಸ್ತ್ರವು ಇತ್ತು. ಹಿಂದಕಡೆ ಕೆಲವರು ಕಣ್ಣೀರು ಸುರಿಸುತ್ತಾ ದುಃಖದಿಂದ ನಡೆದು ಬರುತ್ತಿದ್ದರು. ಕಂದಕಗಳಲ್ಲಿದ್ದ ಬ್ರಿಟಿಷ ಆಫೀಸರರು ಇದನ್ನು ನೋಡಿ ಆ ಕಾಲ ಗುಂಡುಗಳ ಹೊಡೆತಗಳೇನೂ ಇರದ್ದರಿಂದ ಆ ಶವಪೆಟ್ಟಿಗೆಯು ದಾಟಿ ಹೋಗುತ್ತಿರುವಾಗ ಎದ್ದು ನಿಂತು ಮರ್ಯಾದೆಯ ಸಲ್ಯೂಟು ಕೊಡಬೇಕೆಂದು ತನ್ನ ಸೈನಿಕರಿಗೆ ಅಜ್ಞಾಪಿಸಿದನು. ಈ ಸೈನಿಕರು ಹಾಗೆಯೇ ಮಾಡಿದರು. ಪಾದ್ರಿಯು ಹಿಂದೆ ಪಡೆದ ಪೆಟ್ಟಿಗೆಯ ಮೇಲಿದ್ದ ವಸ್ತ್ರವನ್ನೂ ಶವಪೆಟ್ಟಿಗೆಯನ್ನೂ ಎಳೆದನು. ಅದು ಶವಪೆಟ್ಟಿಗೆಯಾಗಿರಲಿಲ್ಲ. ಮೆಷಿನ್ ಎಂಬ ಯುದ್ಧೋಪಕರಣವಾಗಿತ್ತು. ಇದರಿಂದ ಜರ್ಮನರು ಆ ಕಂದಕದಲ್ಲಿದ್ದ ಪ್ರತಿ ಒಬ್ಬ ಬ್ರಿಟಿಷ್ ಸೈನಿಕನನ್ನು ಘಾಯಪಡಿಸಿದರು ವ ಕೊಂದರು.

ಲಾರ್ಡ ಕರ್ಜನ್‌ರವರು ಹ್ಯಾರೋ ಎಂಬ ಪಟ್ಟಣದಲ್ಲಿ ಸೇರಿದ್ದ ಸಭೆಯ ಮುಂದೆ ಈ ಕೆಳಗೆ ಕಂಡ ಹನ್ನೆರಡು ನಿಷೇಧ ವಾಕ್ಯಗಳ ರೂಪದಲ್ಲಿರುವ ಹಿತೋಪದೇಶವನ್ನು ಮಾಡಿದರು:— (೧) ಈಗ ನಡೆಯುತ್ತಿರುವ ಯುದ್ಧದ ದೆಶೆಯಿಂದ ನಿನಗೊಬ್ಬನಿಗೆ ಮಾತ್ರ ಕೆಡಕಾಗುವದಿಲ್ಲವೆಂದು ಭಾವಿಸಬೇಡ. (೨) ಜಯವಾಯಿತೆಂದು ಹಿಗ್ಗಬೇಡ, ಅಪಜಯವಾಯಿತೆಂದು ಅಧೋಮುಖನಾಗಬೇಡ. (೩) ನಿನ್ನ ಸ್ವಂತದ ಅಥವಾ ಕುಟುಂಬದ ವಿಯೋಗಗಳಿಂದ ಎದೆಗುಂದಬೇಡ. (೪) ರಣರಂಗದಲ್ಲಿ ಶತ್ರುವಿನ ಸಂಖ್ಯೆಯನ್ನು ತೋರಿಸುವ ಪಟ್ಟಿಯು ದೀರ್ಘವಾಗಿರುವದೆಂದೂ, ಕ್ಲೇಶದಾಯಕವಾಗಿರುವದೆಂದೂ ಭಯಪಡಬೇಡ. (೫) ಯುದ್ಧ ವಿದ್ಯೆಯು ನಿನಗೆ ಮಾತ್ರ ಗೊತ್ತೆಂದೂ, ಸಮರಕಾರ್ಯದ ಅಧಿಕಾರಿಗಳಿಗೆ ತಿಳಿಯದೆಂದೂ ಭಾವಿಸಬೇಡ. (೬) ಸಮರವು ನಾವಕಾರದಿಂದ ನಡೆಯುತ್ತಿರುವದೆಂದು ಕಾತರಪಡಬೇಡ. ಪ್ರಕೃತ ಸ್ಥಿತಿಯಲ್ಲಿ ಅದು ಹಾಗೆಯೇ ನಡೆಯುತ್ತಿರಬೇಕು. (೭) ಬರ್ಲಿನ್ ಪಟ್ಟಣದಿಂದ ಪ್ರಚುರಪಡಿಸಲ್ಪಡುವ ಪ್ರವಾದಗಳೆಲ್ಲಾ ನಿಜವೆಂದು ನಂಬಬೇಡ. (೮) ಶತ್ರುಗಳ ಶಕ್ತಿಹೀನರೆಂದು ಭಾವಿಸಬೇಡ. (೯) ಜರ್ಮನ್ ಚಕ್ರವರ್ತಿಗೆ ಇಹದಲ್ಲಾಗಲಿ, ಪರದಲ್ಲಾಗಲಿ ಎಂಥಾ ಗತಿಯು ಪ್ರಾಪ್ತವಾಗುವದೆಂಬ ವಿಚಾರವನ್ನು ತಿಳಿಯಬೇಕೆಂಬ ಪ್ರಯತ್ನದಲ್ಲಿಯೇ ವೃಥಾ ಕಾಲಕ್ಷೇಪವನ್ನು ಮಾಡಿಕೊಳ್ಳಬೇಡ. ಸಾಧ್ಯವಾದರೆ ಈ ಲೋಕದಲ್ಲಿಯೇ ಆತನ ವಿಚಾರವನ್ನು ನಾವು ತೀರ್ಮಾನಿಸಿ ಬಿಡುವೆವು. (೧೦) ಹಸ್ತಗತವಾಗುವದಕ್ಕೆ ಮೊದಲೇ ಜರ್ಮನಿ ರಾಜ್ಯವನ್ನು ವಿಭಾಗ ಮಾಡುವುದೆಂದು ತವಕಗೊಳ್ಳಬೇಡ. (೧೧) ನಾವು ಕಯ್ಕೊಂಡಿರುವ ಯುದ್ಧದ ಸಂಪೂರ್ಣೋದ್ದೇಶವು ಸಫಲವಾಗುವದಕ್ಕೆ ಮೊದಲೇ, "ಸಾಕು ಮಾಡಿರಿ" ಎಂದು ಯಾರೆಷ್ಟು ಹೇಳಿದರೂ ಅದಕ್ಕೆ ಕಿವಿಗೊಡಬೇಡ. (೧೨) ಸಮರವು ಶಾಂತವಾದ ಮೇಲೆ, ಅದು ನಮಗೆ ಬೋಧಿಸುವ ಬುದ್ಧಿವಾದನ್ನು ಉಪೇಕ್ಷಿಸಬೇಡ.

ಅಮೇರಿಕದಲ್ಲಿ ಒಬ್ಬ ಗೃಹಸ್ಥನು ಒಂದು ತರದ ಹೊಸ ಮಾದರಿಯ ಸುಧಾರಿಸಿದ (ಸಬ್ ಮೆರಿನ್) ಜಲಾಂತರ್ಗಾಮಿಯಾದ ದೋಣಿಯನ್ನು ತಯಾರಿಸಿದ್ದಾನೆ. ಇಂಥ ದೋಣಿಗಳನ್ನು ಬ್ರಿಟಿಷರು ಮಾರಲಿಕ್ಕೆ ತೆಗೆದುಕೊಂಡು ಅದರಲ್ಲಿ ಮತ್ತೆ ವಿಶೇಷ ಸುಧಾರಣೆ ಮಾಡಿದ್ದಾರೆ. ಈ ದೋಣಿಗಳು ವಿಮಾನಕಾರರಿಗೆ ಕಟ್ಟಿಗೆ ತಗಡಿನಿಂದ ತಯಾರಿಸಲ್ಪಟ್ಟಿವೆ. ಇವುಗಳ ನಾಲ್ಕು ಬದಿಯಲ್ಲಿ ಒಳ್ಳೆಯಂತೆ ಪೊಳ್ಳು ಮಾಡಿ ಅದರಲ್ಲಿ ನೀರು ತುಂಬಿದ ಕೂಡಲೇ ದೋಣಿಯು ಅದರ ಮುಚ್ಚಳು ಮಾತ್ರ ನೀರಿನ ಮೇಲೆ ಕಾಣುವಷ್ಟು ಮೇಲೆ ಉಳಿದು ಒಳಗೆ ಮುಣುಗುತ್ತದೆ. ಮೊದಲು ಈ ದೋಣಿಗಳ ಮೇಲೆ ಸಣ್ಣ ಟೋರ್ಪಿಡೋ ದೋಣಿಗಳನ್ನು ಇಡಲಿಕ್ಕೆ ಬರುತ್ತಿತ್ತು. ಈಗ ಇದರ ಮೇಲೆ ತೋಫುಗಳನ್ನು ಕೂಡಾ ಇಡಲು ಆಗುತ್ತದೆ. ಇದರೊಳಗೆ ಮನುಷ್ಯರಿಗೆ ೬ ತಾಸುಗಳ ವರೆಗೆ ಕೆಲಸ ಮಾಡುವಂತೆ ಹವೆಯ ವ್ಯವಸ್ಥೆ ಇರುತ್ತದೆ.

ಉತ್ತರ ಹಿಂದೂಸ್ಥಾನ.

ಮಾಜಿ ಒನರೆಬಲ್ ಜಸ್ಟಿಸ್ ರನಾಡೆಯವರ ಸೋದರನಾಗಿರುವ ಡಾಕ್ಟರ್ ಎಸ್. ಜಿ. ರನಾಡೆ ಎಲ್. ಎಮ್. ಎಂಡ್ ಎಸ್. ಎಲ್. ಆರ್. ಸಿ. ಪಿ. ಮತ್ತು ಎಸ್. ಡಿ. ಪಿ. ಎಚ್ ಡಿ. ಟಿ. ಎಮ್‌ರವರು ಇಂಡಿಯನ್ ಆಸ್ಪತ್ರಿಗಳಲ್ಲಿ ಮಿಲಿಟರಿ ಡ್ಯೂಟಿಯ ಮೇಲೆ ನೇಮಿಸಲ್ಪಟ್ಟು ಕ್ವೆಟ್ಟಕ್ಕೆ ಹೋಗಲು ಹುಕುಂ ಪಡೆದಿರುವರು. ಇವರು ೧೯೦೦ನೇ ಇಸವಿಯಲ್ಲಿ ದಕ್ಷಿಣ ಆಫ್ರೀಕದ ಯುದ್ಧಕಾಲದಲ್ಲಿ ಸೇನೆಯೊಡನೆ ಇದ್ದುದರಿಂದ ಮಿಲಿಟರಿ ಡ್ಯೂಟಿಯ ಹೆಚ್ಚಿನ ಅನುಭವವುಳ್ಳವರಾಗಿರುವರು.

ಹೈದರಾಬಾದಿನ ಮಂತ್ರಿಯಾಗಿರುವ ಸಲಾರ್ ಜಂಗ್ ಬಹದ್ದೂರರವರು ಅಂಡವಾಯು ಪೀಡಿತರಾಗಿರುವದರಿಂದ ಇದರ ಚಿಕಿತ್ಸೆ ಬಗ್ಗೆ ನೈಜಾಮರವರು ಅವರಿಗೆ ೬ ತಿಂಗಳ ರಜೆಕೊಟ್ಟು ಇವರ ಬದಲಿಗೆ ಹೊಸ ಮಂತ್ರಿಯನ್ನು ನೇಮಿಸದೆ ತಾವೇ ಮಂತ್ರಿಯ ಕೆಲಸ ನೋಡುವರು.

ಕೊಮಗಾಟಮಾರು ಹಡಗದಲ್ಲಿ ಕೆನಡಾ ದೇಶಕ್ಕೆ ಭಾರತೀಯರನ್ನು ಕೊಂಡುಹೋಗುವ ಯೋಜನೆಯು ಜರ್ಮನರಿಂದಲೇ ಕಲ್ಪಿಸಲ್ಪಟ್ಟಿರುವದೆಂಬುದಕ್ಕೆ ಕೆನಡಾ ಸರಕಾರದವರಿಗೆ ತಕ್ಕ ರುಜುವಾತು ದೊರಕಿರುವದೆಂತ "ದಿ ಕ್ರೋನಿಕಲ್" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಕಳೆದ ಸೋಮವಾರ ಚಂದ್ರನಾಗೂರಿನ ಗೌರಿಪುರ ಕಾರ್ಖಾನೆಯಲ್ಲಿ ನೇಯುತ್ತಿದ್ದ ತಾಜಮಾಲ್ ಹುಕ್ಮೆನ್ ಎಂಬವನು ಥಕ್ಕನೇ ತನ್ನ ಬಲಗಡೆಯಲ್ಲಿದ್ದವನನ್ನು ಚೂರಿಯಿಂದ ತಿವಿದು, ಹೊರಗೆ ಓಡಿಹೋಗಿ ಎದುರು ಬಂದ ೧೯ ಮಂದಿಯನ್ನು ತಿವಿದನು. ಎಲ್ಲರೂ ಇವನ ಜತೆ ಕೆಲಸದವರು. ಮೊದಲಾಗಿ ಇವನು ಹುಕ್ಮೇನ್ ಬಕ್ಸ ಎಂಬವನನ್ನು ತಿವಿದನು. ಬಕ್ಸನು ಈ ಸಮಯ ತನ್ನ ಮಗ್ಗದಲ್ಲಿ ಕೆಲಸ ಮಾಡುತ್ತಿದ್ದಾಗ ತಾಜಮಾಲನು ಬೆನ್ನಿಗೆ ಚೂರಿ ಹಾಕಿದನು. ಬಕ್ಸನು ಹಿಂತಿರುಗಿ ನೋಡಲು ಎದೆಯ ಮೇಲೆ ಪುನಃ ತಿವಿದು ಕೂಡಲೇ ಎರಡು ಕಡೆಯಲ್ಲಿ ಇಟ್ಟಿದ್ದ ಮಗ್ಗಗಳ ಮಧ್ಯೆ ಬಿಟ್ಟಿದ್ದ ಇಕ್ಕಟ್ಟಾದ ದಾರಿಯಲ್ಲಿ ನಡೆದು ಎಡಬಲಕ್ಕೆ ಚೂರಿಯನ್ನು ಬೀಸಿ, ನದಿದಡಕ್ಕೆ ತಲಪುವ ವರೆಗೆ ಸಿಕ್ಕಿದವರಿಗೆಲ್ಲಾ ಹೊಡೆದನು. ದೈವವಶಾತ್ ಕಾರ್ಖಾನೆಯ ಇಬ್ಬರು ಯೂರೋಪಿಯಾನರು ಥಕ್ಕನೇ ಅಲ್ಲಿಗೆ ಬಂದು ಈ ಅವಗಡವನ್ನು ನೋಡಿ ತಾಜಮಾಲನನ್ನು ಹಿಂದಟ್ಟಿ, ಹಿಡಿದರು. ಅಷ್ಟರೊಳಗೆ ತಾಜಮಾಲನು ಚೂರಿಯನ್ನು ನದಿಗೆ ಬಿಸಾಡಿದನು. ಕಾರ್ಖಾನೆಯ ಒಬ್ಬ ಕೂಲಿಯು ನದಿಯಿಂದ ಈ ಚೂರಿಯನ್ನು ಹೆಕ್ಕಿ ತೆಗೆದನು. ಕಡೆಗೆ ನೋಡುವಾಗ ೧೯ ಮಂದಿ ಘಾಯ ಪಡೆದಿದ್ದರು. ಈ ಪೈಕಿ ೪ ಮಂದಿ ಆಗಲೇ ಸತ್ತಿದ್ದರು. ಅನಂತರ ಪುನಃ ಇಬ್ಬರು ಮೃತರಾದರು. ಈ ಕೊಲೆ ಪಾತಕಿಯು ತನಗೂ ತಾನು ಮೊದಲಾಗಿ ತಿವಿದ ಬಕ್ಸನಿಗೂ ವೈಮನಸ್ಸು ಇದ್ದುದರಿಂದ ಹೀಗೆ ಮಾಡಿದೆನೆಂದು ಹೇಳುವನು. ಆದರೆ ಬಕ್ಸನು ತಮ್ಮೊಳಗೆ ವೈಮನಸ್ಸು ಇದ್ದಿಲ್ಲವೆಂದು ಹೇಳುವನು. ಘಾತಕನು ೨೬ ವರ್ಷ ವಯಸ್ಸಿನವನೂ ಮದ್ಯಪಾನ ಮತ್ತು ಗಾಂಜಾ ಸೇದುವ ಅಭ್ಯಾಸದವನೂ ಎಂದು ತಿಳಿದು ಬಂದದೆ.

ಫ್ರಾನ್ಸ್, ಈಜಿಪ್ಟ್, ಮತ್ತು ಪೂರ್ವ ಆಫ್ರೀಕದ ರಣರಂಗದ ಭಾರತೀಯ ಸೇನೆಯ ಆಫೀಸರರಿಗೂ, ಸೇನಿಕರಿಗೂ ಕಳುಹಿಸುವ ಖಾಸಗಿ ತಂತಿಗಳು ಸ್ವೀಕರಿಸೋಣಾಗುವವೆಂದೂ ಡಿಫರ್ಡ ತಂತೀ ಕೂಡಾ ತಕ್ಕೊಳ್ಳಲಾಗುವದೆಂದೂ ಪ್ರಕಟವಾಗಿದೆ.

ಸರ್ ಜಮ್‌ಸೆಡ್ಜಿ, ಜೀಜಭೋಯಿ, ಬಾರ್ಟರವರು ಬರುವ ವರ್ಷದಿಂದ ಮುಂಬಾಯಿಯ ಶೆರೀಫರಾಗಿ ನೇಮಿಸಲ್ಪಟ್ಟಿರುವರು.

ಮುಂಬಾಯಲ್ಲಿ "ಲಿಬರ್ಟಿ" ಮತ್ತು "ಡಿವೈನ್ ಹೆರಿಟೆಜ್ ಆಫ್ ಮೇನ್" ಎಂಬ ಹೆಸರಿನ ರಾಜದ್ರೋಹಕರವಾದ ಪತ್ರಗಳನ್ನು ಹಂಚಿದನೆಂಬದಾಗಿ ಆಪಾದಿಸಲ್ಪಟ್ಟ ಟಿ. ಜೆಸಾಸ್ಸಿನ್ ಎಂಬವನಿಂದ III ಪ್ರೆಸಿಡೆನ್ಸಿ ಮೇಜಸ್ಟ್ರೇಟರು ಒಂದು ವರ್ಷದ ವರೆಗೆ ಒಳ್ಳೇ ನಡತೆಯಲ್ಲಿ ನಡೆಯುತ್ತೇನೆಂಬದಕ್ಕೆ ೨೦೦ ರೂಪಾಯಿಯ ಮುಚ್ಚಳಿಕೆ ತಕ್ಕೊಂಡಿರುವರು.

ಕೊಮಗಾಟಮಾರು ಹಡಗದ ದಂಗೆಯಲ್ಲಿ ಕೈದು ಮಾಡಲ್ಪಟ್ಟ ಸಿಕ್ಖರಲ್ಲಿ ೯೨ ಮಂದಿ ಖುಲಾಸು ಮಾಡಲ್ಪಟ್ಟರು.

ಕೊಮಗಾಟಮಾರು ಹಡಗ ಪ್ರಯಾಣಿಕರ ದಂಗೆ ನಡೆಯುವಾಗ ಪ್ರಯಾಣಿಕರಲ್ಲಿದ್ದ ೨,೯೦೦ ರೂಪಾಯಿ ಬೆಲೆ ಬಾಳುವ ಜಪಾನಿ ನೋಟನ್ನು ತಂತೀ ಇಲ್ಲದ ಟೆಲಗ್ರಾಫ್ ಆಫೀಸರನೊಬ್ಬನು ಜಾರಿಸಿದನೆಂಬದಾಗಿ ಆಪಾದಿಸಲ್ಪಟ್ಟಿರುವನು. ಇವನು ಈ ನೋಟನ್ನು ಒಂದು ಜಪಾನಿ ಹೆಂಗಸಿನೊಡನೆ ಮುರಿಸುತ್ತಿರುವಾಗ ಪೋಲಿಸಿನವರು ಕಂಡು ಅವನ ಮೇಲೆ ಮೊಕದ್ದಮೆ ತಂದರು. ಮೇಜಿಸ್ಟ್ರೇಟರು ಅವನಿಗೆ ೩ ತಿಂಗಳ ಸಜಾ ವಿಧಿಸಿದರು.

ಮುಂಬಾಯಿ ಮೆರಿನ್ ಲೈನಿನ ಅಖ್ತರ್ ಮಹಮ್ಮದ್ ಎಂಬ ಸೇನಿಕನು ತಾ. ೫ನೇ ರಾತ್ರಿ ದಂಡಿನ ಪಾಳೆಯದಲ್ಲಿ ಬಿದ್ದಿದನು. ಇವನ ತಲೆಯ ಮತ್ತು ಹೊಟ್ಟೆಯ ಮೇಲೆ ೨ ಗುಂಡಿನೇಟುಗಳು ಬಿದ್ದಿದ್ದವು. ಅವನನ್ನು ಕೂಡಲೇ ಆಸ್ಪತ್ರಿಗೆ ವೈದರೂ ೧೦ ನಿಮಿಷದೊಳಗೆ ಮೃತನಾದನು. ಈ ಸಂಬಂಧ ವಿಚಾರ ನಡೆದಲ್ಲಿ [illegible]

[illegible] ಬಿಸ್ಕಿ ಸಂಗತಿಯನ್ನು ಅರಿಕೆಮಾಡಿದೆನು. ಆದರೆ ತಾನು ಏಕೆ ಹೀಗೆ ಮಾಡಿದೆನೆಂಬ ಕಾರಣವನ್ನು ಕೋರ್ಟಿನಲ್ಲಿ ಮಾತ್ರ ಅರಿಕೆ ಮಾಡುವೆನೆಂದು ಹೇಳಿರುವನು. ಘಾತುಕ ಸಹಾಯಿಯನ್ನು ಹುಡುಕುತ್ತಿರುವರು.

ಆಲ್ ಇಂಡಿಯ ಆಯುರ್ವೇದಿಕ್ ಕನ್ಫರೆನ್ಸ್ ಸಭೆಯು ಬರುವ ಜನವರಿ ತಾ. ೨-೩-೪-೫ರಲ್ಲು ಕಲ್ಕತ್ತೆಯಲ್ಲಿ ಕೂಡುವುದು. ಈ ಕನ್ಫರೆನ್ಸ್ ಸಂಬಂಧವಾದ ಪ್ರದರ್ಶನ ಶಾಲೆಯು ಡಿಶಂಬರ ತಾ. ೧೭ಕ್ಕೆ ತೆರೆಯಲ್ಪಟ್ಟು ಜನವರಿ ತಾ. ೭ರ ವರೆಗೆ ನಡೆಯುವುದು.

ದಕ್ಷಿಣ ಹಿಂದೂಸ್ಥಾನ.

ಇಂಡಿಯನ್ ನೇಶಿನೆಲ್ ಸೋಶ್ಯಲ್ ಕನ್ಫರೆನ್ಸ್ ಸಭೆಯು ಮದ್ರಾಸಿನಲ್ಲಿ ಕೂಡುವ ರಾಷ್ಟ್ರೀಯ ಸಭೆಯ ಹಂದರದಲ್ಲಿ ದಶಂಬರ ತಾ. ೨೭-೨೮ರಲ್ಲು ಕೂಡಿ ಬರುವದು.

ತಾಂಬ್ರಪರಣಿ ನದಿಯಲ್ಲಿ ವಿಶೇಷ ನೆರೆಬಂದಿರುವದು. ಕಳೆದ ಎರಡು ದಿವಸಗಳಿಂದ ಗರೆದ ಮಳೆಯಿಂದ ನೆರೆಯು ನದಿಯಿಂದ ೨೭ ಅಡಿ ಎತ್ತರಕ್ಕೆ ಏರಿ ನದಿ ದಡಗಳಲ್ಲಿ ನೆರೆ ತುಂಬಿಹೋಯಿತು. ನದಿ ದಡಗಳಲ್ಲಿದ್ದ ಗ್ರಾಮಗಳು ನೆರೆಯ ಪಾಲಾದವು. ಒಂದೇ ಸಾರಿ ನೆರೆಯು ಏರಿದ್ದರಿಂದ ಗ್ರಾಮಸ್ಥರಲ್ಲಿ ಅನೇಕರು ನಾಶವಾದರು. ಹೆಚ್ಚಿನವರು ತಪ್ಪಿಸಿಕೊಂಡರು ಎಂಬ ವಾರ್ತೆ ಬಂದಿರುವದು.

ಕೊಚ್ಚಿಯ ರಾಜರವರು ಕೊನೆಗೆ ಸಿಂಹಾಸನ ಪರಿತ್ಯಾಗ ಮಾಡಿದರು. ಇವರಿಗೆ ಪ್ರಾಯವು ಹೆಚ್ಚಾಗಿರುವದರಿಂದ ರಾಜ್ಯಭಾರ ನಡಿಸುವದು ಕಷ್ಟವೆಂದು ಕಂಡು ಉಳಿದ ಆಯುಷ್ಯವನ್ನು ವಿಶ್ರಾಂತಿಯಲ್ಲಿ ಕಳೆಯುವ ಬಗ್ಗೆ ಸಿಂಹಾಸನ ಪರಿತ್ಯಾಗ ಮಾಡಿದರೆಂದು ಅವರು ಪ್ರಜಾ ಜನರಿಗೆ ತನ್ನ ಕಡೆಯ ಸ್ವಸ್ತಿ ವಚನವನ್ನು ಕೊಡುವಾಗ ತಿಳಿಸಿದರು.

ಶರ್ಮಾದೇವಿ ಎಂಬಲ್ಲಿ ನೆರೆ ಬಂದು ಶರ್ಮಾದೇವಿ ನದಿಯ ರೈಲ್ವೆ ಸಂಕವು ಮುರಿದು ಹೋಗಿರುವುದು. ಇದರಿಂದ ಶ್ರೀಲೋನ್ ಎಕ್ಸ್‌ಪ್ರೆಸ್ ಟ್ರೈನಿಗೆ ಬರಬಹುದಾಗಿದ್ದ ಅವಗಡವು ಸಬ್ ಇನ್ಸ್‌ಪೆಕ್ಟರ್ ಗೋವಿಂದ್ಯರ್ ಮತ್ತು ಪೋಲಿಸ್ ರಂಗಾಚಾರ್ಯರ ಪ್ರಯತ್ನದಿಂದ ನಿಂತುಹೋಯಿತು. ರೈಲ್ವೆ ಟ್ರೇನು ಈಗ ನಿಲ್ಲಿಸಲ್ಪಟ್ಟಿರುವದು.

ಮದ್ರಾಸಿನ ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರಾದ ಮಿ। ಎಫ್. ಡಿ. ಬರ್ಡರವರು ಫರ್ಲೋ ರಜೆಯ ಮೇಲೆ ಸೀಮೆಗೆ ತೆರಳಿದ್ದರಿಂದ ಪೋಲಿಸ್ ಸುಪರಿಂಟೆಂಡೆಂಟರಾದ ಮಿ। ಸಿ. ಬಿ. ಎಸ್. ಪೆಲ್ಲಿಯವರು ಚೀಫ್ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿರುವರು. ಈ ನೇಮಕವು ಸರಿಯಲ್ಲವೆಂಬದಾಗಿ ಮದ್ರಾಸಿನ "ಹಿಂದೂ" "ಮೆಯಿಲ್" "ಕ್ರಾನಿಕಲ್" ಮೊದಲಾದ ಪತ್ರಗಳು ವಾದಿಸಿರುತ್ತವೆ.

ರಂಗೂನಿನ ಕೆಪ್ಟನ್ ಒಲ್ಡ್‌ಫೀಲ್ಡ್ ಎಂಬವರ ಬಟ್ಲರಿಯಾಗಿದ್ದ ಹಶ್ಮಾರ್ ಬಹದ್ದೂರ್ ರಾಯಿ ಎಂಬವನು ಸ್ವಘಾತ ಮಾಡಿಕೊಂಡಿರುವನು. ಇವನು ಬರದಿಟ್ಟ ಕಾಗದದಲ್ಲಿ ಹೀಗೆ ಸೂಚಿಸಿರುವನು:— ತನಗೆ ಯಾರ ಕೂಡೆಯಾದರೂ ಜಗಳವಿಲ್ಲ. ಯಾ ಯಾರನ್ನು ದೂರಲೂ ಕಾರಣವಿಲ್ಲ. ತನ್ನ ಜಾತಕ ಪತ್ರದಲ್ಲಿ ತಾನು ಸ್ವಂತಕೈಯಿಂದಲೇ ಮರಣ ಪಡುವೆನೆಂದು ಸೂಚಿಸಿತ್ತು ಎಂಬದಾಗಿ ಬರದಿತ್ತು. ರಣರಂಗಕ್ಕೆ ಹೋಗಲು ಇವನಿಗೆ ಮನಸ್ಸಿತ್ತು. ಆದರೆ ಸಾಧ್ಯವಾಗಲಿಲ್ಲ.

ಮದ್ರಾಸ್ ಗವರ್ನರ ಪ್ರಭುಗಳವರು ಪರಿವಾರ ಸಹಿತ ಈಗ ಎಲ್ಲೂರು, ಮಚಲೀಪಟ್ಟಣ ಮೊದಲಾದ ಸ್ಥಳಗಳನ್ನು ಸಂದರ್ಶಿಸುತ್ತಿರುವರು.

ವ್ಯವಸಾಯ ಮತ್ತು ವ್ಯಾಪಾರ ಸಂಬಂಧವಾದ ಕನ್ಫರೆನ್ಸ್ ಇದೇ ತಿಂಗಳ ತಾ. ೧೪, [illegible] ಮದ್ರಾಸಿನಲ್ಲಿ ಕೂಡುವದು. ಮದ್ರಾಸಿನ ಮತ್ತು [illegible] ದೊಡ್ಡ [illegible] ಆಮಂತ್ರಿಸಲ್ಪಟ್ಟಿರುವರು.

ಮದ್ರಾಸಿನಲ್ಲಿ ಕೂಡುವ ಇಂಡಿಯನ್ ಇಂಡಸ್ಟ್ರಿಯಲ್ ಕನ್ಫರೆನ್ಸಿನ ಪ್ರಥಮ ದಿನ ಹಾಜರಾಗಲು ಈ ಸಭೆಯ ಸ್ವಾಗತ ಕಮಿಟಿಯವರು ಕಳುಹಿಸಿದ ಆಮಂತ್ರಣವನ್ನು ಮದ್ರಾಸ್ ಗವರ್ನರರವರು ಸ್ವೀಕರಿಸಿ ಆ ದಿನ ಸಭೆಗೆ ಚಿತ್ತೈಸುವರ ಒಪ್ಪಿಕೊಂಡಿರುವರು. ಬಹುಮಾನಪಟ್ಟ ಮಿ। ಎ. ಜಿ. ಕಾರ್ಡ್ಯೂರವರು ಕೂಡಾ ಸ್ವಾಗತ ಕಮಿಟಿಯ ಮೆಂಬರರಾಗಲು ಒಪ್ಪಿಗೆ ಕೊಟ್ಟಿರುವರೆಂದು ತಿಳಿದು ಬರುತ್ತದೆ.

ದಕ್ಷಿಣ ಕನ್ನಡ.

ಶಿರ್ವ:—ಕಾರ್ಕಳ ರೇಂಜ್ ಶಿರ್ವ ಸೆಕ್ಶನಿನ ಉಪಾಧ್ಯಾಯರ ಸಭೆಯು ನವಂಬರ ತಾ. ೩೦ರಲ್ಲಿ ಶಿರ್ವ ಬೋರ್ಡ್ ಶಾಲೆಯಲ್ಲಿ ಜರಗಿತು. ಈ ಸಭೆಗೆ ೧೩ ಮಂದಿ ಉಪಾಧ್ಯಾಯರು ಹಾಜರಿದ್ದರು. ಕಾರ್ಕಳ ರೇಂಜಿನ ಸುಪರ್‌ವೈಸರವರು ಸಭಾಧ್ಯಕ್ಷರಾಗಿ ಪೀಠವನ್ನು ಅಲಂಕರಿಸಿದರು. ಶಾಲಾ ಮೇಲಾಧಿಕಾರಿಗಳು ಎಲ್ಲಾ ಶಾಲಾ ಮಾಸ್ತರವರಿಗೆ ಕೊಟ್ಟ ಗ್ರಾಮ ಭೂಗೋಳವನ್ನು ಕಲಿಸುವ ಸೂಚನೆಗಳ ಸರ್ಕಲಾರಿನ ಅಭಿಪ್ರಾಯವನ್ನೂ, ಶಾಲೆಗಳಲ್ಲಿ ಸಾಮಾನುಗಳನ್ನು ಒದಗಿಸಿಕೊಳ್ಳಬೇಕೆಂತ ಕೊಟ್ಟ ಸರ್ಕಲಾರಿನಲ್ಲಿ ಕಾಣುವ ಸಾಮಾನುಗಳ ಉಪಯೋಗವನ್ನೂ ಅಧ್ಯಕ್ಷರು ಕುಲಂಕುಶವಾಗಿ ವಿವರಿಸಿಹೇಳಿದರು. ಸರ್ಕಲಾರಿನಲ್ಲಿ ಕಾಣುವ ಸಾಮಾನುಗಳ ಪೈಕಿ ಕ್ರಾಸ್‌ಸ್ಟಾಫಿನ (Crosstaff) ವಿವರಣೆಯನ್ನೂ ಉಪಯೋಗವನ್ನೂ ಸಭಾಧ್ಯಕ್ಷರ ಆಜ್ಞಾನುಸಾರವಾಗಿ ಕಲ್ಯಬೋರ್ಡ್ ಶಾಲಾ ಮಾಸ್ತರ್ ಎಂ. ಗೋವಿಂದರಾಯರು ವಿವರಿಸಿ ಹೇಳಿದರು. ತರುವಾಯ ಸಭಾಧ್ಯಕ್ಷರು, ಬ್ರಿಟಿಷ ಸಾಮ್ರಾಜ್ಯಕ್ಕೂ ಜರ್ಮನಿಯವರಿಗೂ ನಡಿಯುವ ಘೋರ ಯುದ್ಧದ ಸಮಾಚಾರವನ್ನು ವಿವರಿಸಿ ಹೇಳಿದರು. ಈ ಸಭೆಯಲ್ಲಿ ಹಾಜರಿದ್ದ ಉಪಾಧ್ಯಾಯರು ತಮ್ಮ ಆತ್ಮಸಂತೋಷದಿಂದ, ಪ್ರಕೃತ ನಡಿಯುವ ಯುದ್ಧದ ಫಂಡಿಗೆ ಕೈಲಾದಷ್ಟು ದ್ರವ್ಯ ಸಹಾಯ ಮಾಡಿ ರಾಜಭಕ್ತಿಯನ್ನು ತೋರಿಸಬೇಕಾಗಿ ನಿರ್ಣಯಿಸಿ, ಯುದ್ಧಫಂಡಿಗೆ ರೂಪಾಯಿ ೧೭—೭—೭ ಕೂಡಿಸಿದರು. ಸಭಾಂತ್ಯ ಸಮಯದಲ್ಲಿ ಈಗ ನಡಿಯುವ ಯುದ್ಧದಲ್ಲಿ ನಮ್ಮ ಸಾರ್ವಭೌಮರು ಶತ್ರುಗಳನ್ನು ಗೆದ್ದು ಜಯಧ್ವಜವನ್ನು ಏರಿಸುವಂತೆಯೂ ಸಾರ್ವಭೌಮರವರಿಗೆ ಆಯುರಾರೋಗ್ಯವನ್ನು ದಯಪಾಲಿಸಬೇಕಾಗಿಯೂ ಶ್ರೀ ಭಗವಂತನನ್ನು ಪ್ರಾರ್ಥಿಸಿಕೊಂಡ ಬಳಿಕ ಸಭಾಧ್ಯಕ್ಷರೂ ಉಪಾಧ್ಯಾಯರೂ ಅಗಲಿದರು.

ಅಮುಂಜೆ:—ಇದೇ ತಿಂಗಳ ತಾ. ೩—೧೩—೧೪ರಲ್ಲು ಅಮುಂಜೆ ಮತ್ತು ಕರಿಯಂಗಳ ಗ್ರಾಮದ ನಿವಾಸಿಕರು ಅಮುಂಜೆ ಶಾಲೆಯಲ್ಲಿ ಸಭೆ ಕೂಡಿದರು. ಈ ಸಭೆಗೆ ಮಿ। ರಾ। ಬಡಕಬೈಲ್ ಪರಮೇಶ್ವರಯ್ಯರು ಚೆಯರ್‌ಮೇನರಾಗಿದ್ದರು. ಅಧ್ಯಕ್ಷರು ಈ ದಿವಸ ಸಭೆಯು ಕೂಡಿದ ಕರ್ತವ್ಯವನ್ನು ವಿವರಿಸಿ ಈಗ ಪ್ರಕೃತ ಇರುವ ಶಾಲಾ ಕಟ್ಟೋಣವು ನಾದುರುಸ್ತಿಯಾಗಿಯೂ ಯೋಗ್ಯವಾದ ಸ್ಥಳವಲ್ಲದರ ಸಂಬಂಧ, ಮಕ್ಕಳ ಆರೋಗ್ಯ ಕೂಡಾ ಕೆಡುವ ಸಂಭವವಿರುವದರಿಂದಲೂ ಗ್ರಾಮಸ್ಥರ ಸಹಾಯದಿಂದ ಅಮುಂಜೆ ಗ್ರಾಮದ ಕರಿಯೂರು ದೂಮಾವತಿ ದೈವದ ಸ್ಥಳದಲ್ಲಿ ಒಂದು ಶಾಲಾ ಕಟ್ಟೋಣವನ್ನು ಹೊಸದಾಗಿ ಕಟ್ಟಿಸುವದು ಯೋಗ್ಯವೆಂತ ಸಭಿಕರನ್ನು ವಿಜ್ಞಾಪಿಸಿಕೊಂಡರು. ಸಭೆಯವರು ಅದಕ್ಕೆ ಒಪ್ಪಿದ್ದರಿಂದ ಸಭೆಯಲ್ಲಿ ಅಧ್ಯಕ್ಷರು ಒಂದು ವಂತಿಗೆ ಪಟ್ಟಿಯನ್ನು ತಯಾರಿಸಿ ಸಭೆಯ ಮುಂದೆ ಇಟ್ಟಲ್ಲಿ ಕೂಡಿದ ಮೆಂಬರರು ಅವರವರ ಇಚ್ಛಾನುಸಾರ ಹಾಕಿದ ವಂತಿಗೆ ಹಣವು ಜುಮುಲಾ ರೂ. ೩೨೧ ಆಯಿತು.

ತರುವಾಯ ಇನ್ನು ಮುಂದಿನ ವ್ಯವಸ್ಥೆ ಬಗ್ಗೆ ಇದೇ ತಿಂಗಳ ತಾ. ೧೫ರಲ್ಲು ಸಹಾ ಒಂದು ಮಿಟಿಂಗ್ ಮಾಡೋಣಾಗಿ ಸದರಿ ಸಭೆಗೆ ಎಲ್ಲರೂ ಬರಬೇಕಾಗಿ ಹೇಳಿ ಸಭೆಯು ಅಗಲಿತು.

ಸುರತ್‌ಕಲ್ಲು:—ಇಲ್ಲಿಯ ಕೃಷ್ಣಾಪುರವೆಂಬಲ್ಲಿ ಕಳೆದ ಮಾರ್ಚಿಯ ಲಾಗಾಯಿತು "ಶ್ರೀ ಕೃಷ್ಣಲೈಬ್ರೇರಿ" ಎಂಬ ಹೆಸರಿನಿಂದ ಒಂದು ಪುಸ್ತಕಾಲಯವನ್ನು ತೆರೆದಿರುತ್ತದೆ. ಕಳೆದ ೬ ಸೆಪ್ಟಂಬರ್ ತಿಂಗಳ ತಾ. ೨೮ ಲಾಗಾಯಿತು ಇಲ್ಲಿಯ ಅನು[illegible] ಪುಸ್ತಕಾಲಯದ [illegible] [illegible]

ಮಾಸಪತ್ರಿಕೆಗಳೂ, ತ್ರೈಮಾಸಿಕ ಪತ್ರಿಕೆಗಳೂ, ವಾರಪತ್ರಿಕೆಯೂ [illegible] ರಿಸುತ್ತಲಿದೆ. ಶಾಲೆಯಲ್ಲಿ [illegible] ಹುಡುಗರು [illegible] ದ್ದಾರೆ. ಇನ್ನೂ ಹೆಚ್ಚು ಹುಡುಗರು ಕೂಡುವ ಸಂಭವವಿದೆ. ಸಣ್ಣ ಮಕ್ಕಳಿಗೆ ಸಮೀಪವಾಗಿ ಇರುವ ಈ ಶಾಲೆಯು ಇಲ್ಲಿಯವರಿಗೆ ಬಹಳ ಸಂತೋಷವೇ. ಆದುದರಿಂದ ಈ ಶಾಲೆಯನ್ನು ಮೇಲಾಧಿಕಾರರು ಆದಷ್ಟು ಬೇಗನೆ ಮಂಜೂರು ಮಾಡುವರಾಗಿ ನಂಬಿರುತ್ತೇವೆ.

ಪೊಳಲಿ:—ಇಲ್ಲಿ ಇದೇ ತಾ. ೭ನೇ ರಾತ್ರಿ ಸುಮಾರು ೧೨ ಗಂಟೆಗೆ ಪ್ರಾರಂಭಿಸಿದ ಮಳೆಯು ೨ ಗಂಟೆವರೇಗೆ ಗರೆಯಿತು. ಆ ಬಗ್ಗೆ ಊರ ಜನರೆಲ್ಲಾ ಸೇರಿ ಶ್ರೀ ರಾಜರಾಜೇಶ್ವರಿ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಪೂಜೆ ಶಿಯಾಳ ಅಭಿಷೇಕ ವಗೈರೆ ನಡಿಸಬೇಕೆಂತ ನಿಶ್ಚಯಿಸಿರುತ್ತಾರೆ.

ಇದೇ ಬರುವ ತಾ. ೧೨ನೇ ಶನಿವಾರ ಡಿಲ್ಲಿ ದರ್ಬಾರಿನ ಜ್ಞಾಪಕಾರ್ಥವಾಗಿ ಕರಿಯಂಗಳ ಎಲಿಮೆಂಟರಿ ಶಾಲೆಯಲ್ಲಿ ಮನೇಜರ್ ಮಿ। ರಾ। ರಾ। ಕರಿಯಂಗಳ ಗುತ್ತು ಮುತ್ತಯ್ಯ ಶೆಟ್ರ ಉತ್ತೇಜನದಿಂದ ರಾತ್ರಿ, ತಾಳಮದ್ದಳೆ ಪ್ರಾರಂಭ ಮಾಡಿ ಪ್ರತಿ ತಿಂಗಳಿಗೆ ೨ ಸರ್ತಿಯಂತೆ ರಾಮಾಯಣವನ್ನು ಮಾಡಬೇಕೆಂತಲೂ ನಂತರ ಭಾರಥ ಇತ್ಯಾದಿ ಕಥೆಗಳನ್ನು ಮಾಡಬೇಕೆಂತಲೂ ನಿಶ್ಚಯಿಸಿಯದೆ.

ಇದೇ ತಿಂಗಳ ೬ನೇ ಆದಿತ್ಯವಾರ ದಿವಸ ದರ್ಬಾರು ಜ್ಞಾಪಕಾರ್ಥವಾಗಿ ಅಮುಣಂಜೆ ಗುತ್ತಿನ ಎಸ್ ಎ. ಶೀನಪ್ಪ ಹೆಗ್ಗಡೇರವರು ಪೊಳಲಿಯಲ್ಲಿ "ಲಿಂಕಿಮಾರು ಕಂಬಳವೆಂಬ" ಕಂಬಳವನ್ನು ಮಾಡಿಸುವರು.

ನಮ್ಮ ಬಾತ್ಮಿದಾರರಿಂದ:—ಹಿಂದೆ ಕದ್ರಿ ಮಡಿಕೇರಿಗುಡ್ಡೆ ಪ್ರಾಂತ್ಯಗಳಲ್ಲಿ ಕಳ್ಳರ ಮತ್ತು ಪುಂಡಾಟಿಗರ ಕಾಟವು ಹೆಚ್ಚಿತ್ತು. ಅನಂತರ ಪುಂಡಾಟಿಗರ ಮುಂದಾಳುಗಳಲ್ಲಿ ಕೆಲವರು ಈ ಊರು ಬಿಟ್ಟು ಹೋದ್ದರಿಂದಲೋ, ತಮ್ಮ ಪತ್ರಿಕೆಗಳಲ್ಲಿ ಆಗಾಗ್ಗೆ ಈ ವಿಷಯ ಪ್ರಕಟವಾದುದರಿಂದಲೂ ಯಾ ಪೋಲೀಸಿನವರು ಆಗಾಗ್ಗೆ ತನಕಿ ನಡಿಸಿದ್ದರಿಂದಲೋ ಪುಂಡಾಟಿಗರ ಕಾಟವು ಕಮ್ಮಿಯಾಗಿ ಈ ಪ್ರಾಂತ್ಯದಲ್ಲಿ ಪುಂಡಾಟಿಗರೇ ಇಲ್ಲವೆಂಬಂತಿತ್ತು. ಆದರೆ ಈಚೆಗೆ ಮಡಿಕೇರಿ ಗುಡ್ಡೆಯಲ್ಲಿ ನಡೆದ ಕೆಲವು ಪೋಕರಿ ಯುಕ್ತಿಗಳನ್ನು ನೋಡಿದವರು ಊರು ಬಿಟ್ಟುಹೋದರೆಂದೆಣಿಸಿದ ಪುಂಡಾಟಿಗರ ಮುಂದಾಳುಗಳು ಪುನಃ ಇತ್ತಕಡೆ ಬಂದಿರುವರೋ ಏನೆಂಬ ಸಂಶಯ ಪಡಲು ಕಾರಣವಾಗಿದೆ. ಈಚೆಗೆ ಹಿಂದಿನಂತೆ ಕೆಲವರ ಮನೆಗಳಿಗೆ ಕಲ್ಲು ಬೀಳಲು ಪ್ರಾರಂಭವಾಗಿದೆ. ಇಷ್ಟೇ ಅಲ್ಲ; ಇದೇ ಕಳೆದ ತಾ ೬ನೇ ಆದಿತ್ಯವಾರ ಬೆಳಗ್ಗೆ ೩ ಘಂಟೆಗೆ ಮಡಿಕೇರಿ ಗುಡ್ಡೆಯ ಒಬ್ಬನ ಮನೆಯ ಅಂಗಳದಲ್ಲಿ ಇಟ್ಟಿದ್ದ ಬೈಹುಲ್ಲಿನ ಮೂಟೆಗೆನೇ ಯಾರೋ ಬೆಂಕಿ ಕೊಟ್ಟು ಓಡಿಹೋಗಿರುವರು. ಸದರಿ ಮನೆಯವರಿಗೆ ದೈವವಶಾತ್ ಫಕ್ಕನೆ ಎಚ್ಚರವಾಗಿ ಕೂಗಿಕೊಂಡದ್ದರಿಂದಲೂ ಶಕ್ಯ ಜನ ಸಹಾಯ ಸಿಕ್ಕಿದ್ದರಿಂದಲೂ ಬೆಂಕಿಯನ್ನು ನೊಂದಿಸಲು ಸಾಧ್ಯವಾಯಿತು. ಕ್ಷಣಮಾತ್ರ ಹೆಚ್ಚು ಕಡಿಮೆಯಾಗುತ್ತಿದ್ದರೆ ಇಡೀ ಮನೆಯೇ ಸುಟ್ಟು ಭಸ್ಮವಾಗುತ್ತಿತ್ತು. ಈ ಪ್ರಾಂತ್ಯದಲ್ಲಿ ಹೆಂಡಾಟ ಬಂಡಾಟಗಳನ್ನು ಮಾಡಿಕೊಂಡು ಸಭ್ಯ ಜನರಂತೆ ಕಾಣಿಸಿಕೊಳ್ಳುವ ಪುಂಡಾಟಿಗರ ಪ್ರೇರಣೆಯಿಂದಲೇ ಇಂಥಾ ದುಷ್ಕೃತ್ಯಗಳು ನಡೆಯುತ್ತವಲ್ಲದೆ ಇತರರಿಂದ ಇಂಥಾ ಕೃತ್ಯಗಳು ನಡೆಯವೆಂದು ಹೇಳ ಬಹುದಾಗಿದೆ, ಇಂಥವರಿಗೆ ಪರಮಾತ್ಮನೇ ಮುನಿಯ ಬೇಕಲ್ಲದೆ ಮನುಷ್ಯರು ಮುನಿದು ಪ್ರಯೋಜನವಿಲ್ಲವಾದರೂ ಶಿಷ್ಟಜನರನ್ನು ಕಾಪಾಡಿ ದುಷ್ಟಜನರನ್ನು ದಂಡಿಸುವ ಪೋಲಿಸ ಇಲಾಖೆಯವರು ಇತ್ತಕಡೆ ಸ್ವಲ್ಪ ನಿಗಾ ಕೊಡುವದು ಅತ್ಯವಶ್ಯವಾಗಿದೆ.

ಮಂಗಳೂರು.

ಡಿಸ್ಟ್ರಿಕ್ಟ್ ಪೋಲಿಸ್ ಸುಪರಿಂಟೆಂಡೆಂಟರವರು [illegible] ಕಡೆ ಸರ್ಕೀಟು ಬೆಳಸಿರುವರು.

[illegible]

ದಕ್ಷಿಣ ರಚನೆಗಳ ಮತ್ತು ಜನಪದದ ಆರೋಗ್ಯವನ್ನು ಕಾಪಾಡುವ ವಿಷಯದಲ್ಲಿ ಕೊಡೋಣಾಗುವ ಭಾಷಣಗಳನ್ನು ಕೇಳಿ ನಮ್ಮ ಲೋಕಲ್ ಬೋರ್ಡುಗಳಿಗೆ ಬೇಕಾದ ಅನುಭವಗಳನ್ನು ಸಂಗ್ರಹಿಸುವರೆ ಮದ್ರಾಸಿಗೆ ಹೋಗುವರೆಂಬದಾಗಿ ತಿಳಿಯುತ್ತೇವೆ

ಬಲ್ಮಠದ ಡೋಬಿ ತಿಮೋಥಿ ಎಂಬವನ ಮನೆಯಲ್ಲಿ ಕಳದ ವಾರ ೩ ಪ್ಲೇಗು ಮರಣಗಳಾಯಿತೆಂದು ತಿಳಿಸಿತ್ತಷ್ಟೆ. ಕೊರಂಟ್ಟಿನಿಗೆ ಕೊಂಡುಹೋದ ೫ ಮಂದಿ ಪೈಕಿ ಪುನಃ ೪ ಮಂದಿ ಮೃತರಾಗಿರುವರು. ಹೀಗೆ ಒಂದೇ ಮನೆಯಲ್ಲಿ ಒಂದೇ ವಾರದೊಳಗೆ ೭ ಮಂದಿ ಪ್ಲೇಗುಬೇನೆಯಿಂದ ಮೃತರಾದ ಹಾಗಾಯಿತು

ದಿ ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂಪೆನಿ, ಲಿಮಿಟೆಡ್, ಕಂಪೆನಿಯವರು ತರಿಸಿದ ಮೋಟರ್ ಬಸ್ಸು ಇದೇ ತಾ. ೧೨ರಿಂದ ಬಂಟ್ವಾಳಕ್ಕೆ ಹೋಗಿಬರಲು ಪ್ರಾರಂಭವಾಗುವದು.

ಇಲ್ಲಿಯ ಗ್ರಾಮಮುನ್ಸೀಫ ಕೋರ್ಟಿನಲ್ಲಿ ಕೆಲವು ವರುಷಗಳಿಂದ ಗ್ರಾಮಮುನ್ಸೀಫರಾಗಿದ್ದ ಕಸಬಾ ಪಟೇಲರಾದ ರಾ। ಯು ಕೃಷ್ಣಯ್ಯನವರಿಂದ ಗ್ರಾಮ ಮುನ್ಸೀಫ ಚಾರ್ಜು ಬೋರ್ಡ ಪಕೀಲ ರಾ। ಬಿ ರಾಮಚಂದ್ರಯ್ಯನವರು ತೆಗೆದುಕೊಳ್ಳಬೇಕೆಂಬ ಹುಕುಂ ಬಂದುದರಿಂದ ನಿನ್ನೆಯು ದಿವಸ ರಾ। ಬಿ. ರಾಮಚಂದ್ರಯ್ಯನವರು ಗ್ರಾಮಮುನ್ಸೀಫ ಚಾರ್ಜು ವಹಿಸಿಕೊಂಡಿರುವರು.

ಕಳದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೫ ಪ್ಲೇಗು ಮರಣಗಳಿದ್ದವು

ಇಲ್ಲಿಯ ಟ್ರೆಜರಿ ಡೆಪ್ಯುಟಿ ಕಲೆಕ್ಟರರಾದ ಮ। ರಾ। ಎಮ್ ಪಾಂಡುರಂಗ ಕಿಣಿಗಳವರು ಈ ತಿಂಗಳ ತಾ. ೧೫ರಲ್ಲಿ ಕೆಲಸ ನಿವೃತ್ತರಾಗುವದರಿಂದ ಮಧುರೆಯ ಜನರಲ್ ಡ್ಯೂಟಿ ಡೆಪ್ಯುಟಿ ಕಲೆಕ್ಟರರಾಗಿರುವ ಮ। ರಾ। ಆರ್ ಶ್ರೀನಿವಾಸ ಅಯ್ಯಂಗಾರರವರು ಇಲ್ಲಿಯ ಟ್ರೆಜರಿ ಡೆಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಕಲೆಕ್ಟರ ಆಫೀಸು — ಮಂಗಳೂರು ಡಿವಿಜನ್ ಆಫೀಸಿನ ಹೆಡ್ ಕ್ಲಾರ್ಕ ರಾ। ಯ. ವೆಂಕಪ್ಪ ರೂ ೬೦ ಸಂಬಳದ ಕಲೆಕ್ಟರ ಆಫೀಸಿನ 1ನೇ ಏಕಾಡೆ ಕ್ಲಾರ್ಕರಾಗಿಯೂ ಕರಸ್ಪೋಂಡೆಂಟ್ ಶಾಖೆಯ 4ನೇ ಕ್ಲಾರ್ಕ ರಾ। ಪಿ. ಮಹಾಬಲೇಶ್ವರಯ್ಯ ಮೂ ೫೦ರ ಮಂಗಳೂರ ಡಿವಿಜನಲ್ ಆಫೀಸಿನ ಹೆಡ್‌ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು ಆದರೆ ಇವರು ಇತರ ಡ್ಯೂಟಿಯ ಮೇಲೆ ಇರಬೇಕಾಗುವದು

ಕರಸ್ಪೋಂಡೆಂಟ ಸೆಕ್ಷನಿನ ೯ನೇ ಕ್ಲಾರ್ಕ ರಾ। ಎಮ್ ಕೃಷ್ಣಪ್ಪರವರು ರೂ ೪೫ರ 4ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

ಕುಂದಾಪುರ ಡಿವಿಜನಲ್ ಆಫೀಸಿನ ಹೆಡ್‌ಕ್ಲಾರ್ಕ ರಾ ಕೆ ಶಿವರಾಯರು ಇತರ ಡ್ಯೂಟಿಯ ಮೇಲಿರುವದರಿಂದ ಮಂಗಳೂರು ಡಿವಿಜನಲ್ ಆಫೀಸಿನ ಹೆಡ್‌ಕ್ಲಾರ್ಕ ರಾ। ಪಿ ಮಹಾಬಲೇಶ್ವರಯ್ಯನವರು ಕುಂದಾಪುರ ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್‌ಕ್ಲಾರ್ಕರಾಗಿರಬೇಕಾಗುವದು

ಮ। ಎಮ್ ಸುಲ್ತಾನ್ ಮೈದಿನ್ ಸಾಹೇಬರು ಬಡ್ತಿ ಹೊಂದಿರುವದರಿಂದ ಕಲೆಕ್ಟರ ಆಫೀಸಿನ 1ನೇ ಎಕೌಂಟಾಂಟರಾದ ರಾ। ಕೆ. ಶಿವರಾವರವರು ಕುಂದಾಪುರ ಡಿವಿಜನಲ್ ಆಫೀಸಿನ ಹೆಡ್‌ಕ್ಲಾರ್ಕರಾಗಿಯೂ ಕರಸ್ಪೋಂಡೆಂಟ್ ಸೆಕ್ಷನಿನ 2ನೇ ಕ್ಲಾರ್ಕ ರಾ। ಎಮ್. ಗಣೇಶರಾವ್‌ರವರು ಕಲೆಕ್ಟರ ಆಫೀಸಿನ 1ನೇ ಅಕೌಂಟಾಂಟರಾಗಿಯೂ ಹೆಡ್ ಒಡಿಟರಾಗಿರುವ ರಾ। ಕಾವು ರಾಮರಾಯರು ಕಲೆಕ್ಟರ ಆಫೀಸಿನ 2ನೇ ಕ್ಲಾರ್ಕರಾಗಿಯೂ 1ನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರ ರಾ। ಕೆ. ಪಿ. ಕಿಣಿಯವರು ಹೆಡ್ ಒಡಿಟರಾಗಿಯೂ ನೇಮಿಸಲ್ಪಟ್ಟಿರುವರು

೧೯೧೫ನೇ ಇಸವಿ ಜನವರಿ ತಾ. ೧ರಿಂದ ಮ। ರಾ। ಕೆ. ಶೇಷಗಿರಿಯವರು ಕೆಲಸ ನಿವೃತ್ತರಾಗುವದರಿಂದ ಪುತ್ತೂರು ತಾಲೂಕ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿರುವ ಮ। ರಾ। ರಾ। ಕೆ. ಮಚ್ಚೇಕಿಣಿಯವರು ಮಂಗಳೂರು ತಾಲೂಕು ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿಯೂ ಕಲೆಕ್ಟರ ಆಫೀಸಿನ 2ನೇ ಕ್ಲಾರ್ಕ ಮ। ರಾ। ರಾ। ಕಾವು ರಾಮರಾಯರು ಪುತ್ತೂರಿನ ಆಕ್ಟಿಂಗ್ ಹೆಡ್ ಎಕೌಂಟಾಂಟ ಮತ್ತು ಟ್ರೆಜರರಾಗಿಯೂ ನೇಮಿಸಲ್ಪಟ್ಟಿರುವರು.

ಮ। ರಾ। ರಾ। ಕೆ. ಶ್ರೀನಿವಾಸರಾವ್ ಅವರ್ಗಳರವರು ಇತರ-ಡ್ಯೂಟಿಯ ಮೇಲಿರುವುದರಿಂದ ಆಕ್ಟಿಂಗ್ IV ಗ್ರೇಡ್ ತಹಸೀಲ್ದಾರರಾದ ಮ। ರಾ। ರಾ। ಡಿ. ಆನಂದರಾಯರು III ಗ್ರೇಡ್ ಆಕ್ಟಿಂಗ್ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು. ಇವರು ಉಪ್ಪಿನಂಗಡಿ ತಹಸೀಲದಾರರಾಗಿಯೇ ಕೆಲಸದಲ್ಲಿರಬೇಕಾಗುವದು

ಮ। ಬಿ ಎಸ್. ಅಲ್ಬುಕರ್ಕರು ರಜೆಯಮೇಲಿರುವುದರಿಂದ V ಗ್ರೇಡ್ ತಹಸೀಲದಾರರಾದ ಮ। ರಾ। ರಾ। ಎಮ್. ಅಚ್ಯುತಯ್ಯನವರು ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟು ಉಡುಪಿಗೆ ವರ್ಗಾಯಿಸಲ್ಪಟ್ಟಿರುವರು.

ಮಂಗಳೂರು ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾದ ಮ ರಾ। ರಾ। ಎಮ್ ಅನಂತ ನಾಯರರು ಆಕ್ಟಿಂಗ್ V ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟು ಮಂಗಳೂರಲ್ಲೇ ಕೆಲಸ ನೋಡಬೇಕಾಗುವದು.

ರಾ। ಎಚ್ ಶಂಕರರಾಯರು ಇತರ ಡ್ಯೂಟಿಯ ಮೇಲಿರುವದರಿಂದ ಕಲೆಕ್ಟರ ಆಫೀಸಿನ 2ನೇ ಕ್ಲಾರ್ಕ ಮತ್ತು ಹೊಸದುರ್ಗದ ಆಕ್ಟಿಂಗ್ ಡೆಪ್ಯುಟಿ ತಹಸೀಲದಾರರಾಗಿರುವ ಮ। ರಾ। ಎಮ್. ರಘುವೇಂದ್ರರಾಯರು ಎಚ್ ಶಂಕರರಾಯರ ಬದಲಿಗೆ ಆಕ್ಟಿಂಗ್ ಡೆಪ್ಯುಟಿ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು ಆದರೆ ಹೊಸದುರ್ಗದಲ್ಲೇ ಕೆಲಸ ನೋಡಬೇಕಾಗುವದು.

ಮ। ರಾ। ರಾ। ರಾನ ಪರ್ಮಾರಾಜ ಅವರ್ಗಳರವರು ಆಕ್ಟಿಂಗ್ ಹಜೂರು ಶಿರಸ್ತೇದಾರರಾಗಿ ನೇಮಿಸಲ್ಪಟ್ಟಿರುವದರಿಂದ ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾದ ಮ। ರಾ। ಎಮ್ ಅಚ್ಯುತಯ್ಯನವರು ಆಕ್ಟಿಂಗ್ III ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು.

ಮ। ಬಿ ಎಸ್ ಅಲ್ಬುಕರ್ಕರವರು ರಜೆಯಮೇಲಿರುವುದರಿಂದ V ಗ್ರೇಡ್ ತಹಸೀಲದಾರರಾದ ಮ। ರಾ। ರಾ। ಬಿ ಮಂಜುನಾಥ ಬಾಳಿಗರವರು ಆಕ್ಟಿಂಗ್ IV ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು ಆದರೆ ಕಾರ್ಕಳದಲ್ಲೇ ಕೆಲಸದಲ್ಲಿರಬೇಕಾಗುವದು

ಮಂಗಳೂರು ಟೌನಿನ I ಗ್ರೇಡ್ ಡೆಪ್ಯುಟಿ ತಹಸೀಲದಾರರಾದ ಮ। ರಾ। ರಾ। ಪಿ ಎಸ್. ಕೃಷ್ಣರಾಯರು ಆಕ್ಟಿಂಗ್ V ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟು ಕುಂದಾಪುರಕ್ಕೆ ವರ್ಗಾಯಿಸಲ್ಪಟ್ಟಿರುವರು

II ಗ್ರೇಡ್ ಡೆಪ್ಯುಟಿ ತಹಸೀಲದಾರ ಮ। ರಾ। ಟಿ ಭವಾನಿಶಂಕರರಾಯರು ಆಕ್ಟಿಂಗ್ I ಗ್ರೇಡ್ ಡೆಪ್ಯುಟಿ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು ಆದರೆ ಪುತ್ತೂರಲ್ಲೇ ಕೆಲಸ ನೋಡಬೇಕಾಗುವದು

ಕುಂದಾಪುರ ಆಕ್ಟಿಂಗ್ ಸಬ್ ಮೇಜಿಸ್ಟ್ರೇಟರಾದ ಮ। ರಾ। ಆರ್ ಶಿವರಾಯರು II ಗ್ರೇಡ್ ಡೆಪ್ಯುಟಿ ತಹಸೀಲದಾರರಾಗಿ ನೇಮಿಸಲ್ಪಟ್ಟು ಮಂಗಳೂರು ಟೌನಿಗೆ ವರ್ಗಾಯಿಸಲ್ಪಟ್ಟಿರುವರು.

ಕುಂದಾಪುರ ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕ ಮ। ರಾ। ಕೆ. ಶಿವರಾಯರು ಕುಂದಾಪುರದ ಆಕ್ಟಿಂಗ್ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ಪೆ ಮಾಸ್ಟರ್ ಕರ್ನಾಟಿಕ್ ಸ್ಟೈಪೆಂಡ್ಸ್ ಆಫೀಸಿನ ಮೆನೇಜರರಾಗಿರುವ ಮ। ಫ್ರಾನ್ಸಿಸ್ ಲೋಬರವರು ಮಂಗಳೂರಿನ ಆಕ್ಟಿಂಗ್ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು

ವೈಸರಾಯ ಇಂಪೀರಿಯಲ್ ಇಂಡಿಯನ್ ರಿಲೀಫ ಫಂಡು, ಮತ್ತು ಮದ್ರಾಸ್ ಯುದ್ಧ ಫಂಡಿಗೆ ವಂತಿಗೆ ಕೊಟ್ಟವರ ಹೆಸರುಗಳೂ ಮೊಬಲಗುಗಳೂ.

ಮ। ಜಿ. ಮಿನೇಜಸ್ ರೂ. ೩; ಮ। ಎಸ್. ಎಫ್. ನೊರೊನ್ಹ ರೂ. ೩; ಮ। ಟಿ. ಎಮ್. ಡಿ. ಸೋಜ ರೂ. ೩; ರಾ। ಮಂಜೇಶ್ವರ ರಘುವೇಂದ್ರರಾವ್ ರೂ. ೩; ಮ। ಎಸ್. ಎಸ್. ಎಸ್. [illegible] ರೂ. ೩; ಮ। [illegible] ರೂ. ೩; ರಾ। [illegible] ರೂ. ೩; ರಾ। [illegible]

ರಾ। ಎಮ್. ಕೃಷ್ಣರಾವ್ ರೂ. ೨; ರಾ। ತಿಮ್ಮಪ್ಪ ರೂ. ೨; ರಾ। ಕೆ. ಸೋಮಯ ಮೇಸ್ತ್ರಿ ರೂ. ೨; ರಾ। ಹಂಪನಕಟ್ಟೆ ಬಸಪ್ಪ ರೂ. ೨; ರಾ। ಕಂಟ್ರಾಕ್ಟರ್ ದೂಮಪ್ಪ ರೂ. ೨; ರಾ। ಎಮ್. ಮುತ್ತಪ್ಪ ರೂ. ೨; ರಾ। ಬಿ. ಪದ್ಮಪ್ಪ ರೂ. ೨; ರಾ। ಬಿ. ಸೋಮಪ್ಪ ರೂ. ೨; ಮ। ಜಸ್ಸು ಹಸನ ಬ್ಯಾರಿ ರೂ. ೨; ರಾ। ಬಿ. ಅಂತಪ್ಪ ರೂ. ೨; ರಾ। ಎಮ್. ರಾಮಯ್ಯ ರೂ. ೨; ಮ। ಹೊಟೆಲ್ ಮಾಮುಬ್ಯಾರಿ ರೂ. ೨; ರಾ। ಕೆ. ವೆಂಕಟರಾವ್ ರೂ. ೩; ರಾ। ಕೊಚ್ಚಿಕಾರ್ ಮಂಜುನಾಥ ಪ್ರಭು ರೂ. ೩; ರಾ। ಎಮ್. ಶ್ರೀನಿವಾಸ ಡಂಗೆ ರೂ. ೩; ಮ। ಮಹಮ್ಮದ್ ನುರುದ್ದೀನ್ ಸಾಹೇಬ್ ರೂ. ೨, ಮ। ಕುಟ್ಟಿ ಹಮ್ಮದ್ ರೂ. ೨; ಮ। ಅಬ್ದುಲ್ಲ ಅಲಿ ರಾಜ ಅಲಿ ಸೇಟ್ ಸಾಹೇಬ್ ರೂ. ೨, ಮಿಸೆಸ್ ಎಫ್. ಎಸ್. ಬ್ರಿಟೊ ರೂ. ೨, ಮ। ಜೆ. ಎಮ್. ಮಸ್ಕರೇನ್ಹಸ್ ರೂ ೨, ಮ। ಎ. ಜೆ ಪೆರಿಸ್ ರೂ. ೨, ಮೆಸ್ಸರ್ಸ್ ಪೆರ್ನಾಂಡಿಸ್ ಬ್ರದರ್ಸ್ ರೂ. ೨, ಮ। ಎ. ಎಫ್. ಕ್ವಾಡ್ರೊ ರೂ ೨, ಮ। ಎಮ್ ಎ. ಸಿಕೇರ ರೂ. ೨; ಮ। ಮಾನುವೆಲ್ ಪಿಂಟೋ ರೂ ೨, ರಾ। ಬಿಕ್ಕಯಾನೆ ಚೆರ್ಡಪ್ಪ ಶಮ್ತಿ ರೂ. ೨, ರಾ। ಎಮ್. ನಾರಾಯಣರಾವ್ ರೂ. ೨, ರಾ। ಉಳ್ಳಾಲ ರಘುನಾಥಯ್ಯ ರೂ. ೨, ರಾ। ಉಳ್ಳಾಲ ಕೃಷ್ಣರಾವ್ ರೂ. ೨, ರಾ। ಬಿ. ನರಸಿಂಹರಾವ್ ರೂ ೨ ರಾ। ಎಮ್. ರಘುವೇಂದ್ರಪೈ ರೂ. ೨ ರಾ। ಅಡಿಗೆ ಶ್ರೀನಿವಾಸರಾವ್ ರೂ. ೨, ರಾ। ಅರ್ಕಳ ಪದ್ಮನಾಭನಾಕ ರೂ ೨, ರಾ। ಗುರುಪುರ ಎಚ್ ಕಿಣಿ ಎಂಡ್ ಬ್ರದರ್ಸ್ ರೂ ೨, ರಾ। ಜ ದೇವದಾಸ್ ಪ್ರಭು ರೂ ೨, ರಾ। ಬೋಳಾರ ಗಣಪತಿ ಶೆಟ್ಟಿ ರೂ ೨, ರಾ। ಎಸ್. ಎಮ್. ಸೈಯದ್ ಅಲಿ ಬಕಿರ್ ಸಾಹೇಬ್ ರೂ ೨, ರಾ। ಎಮ್. ರಾಮತುಲ್ಲ ಸಾಹೇಬ್ ರೂ ೨ ಮ। ಮಹಮ್ಮದ್ ಅಲಿ ನಾನಾ ಭಾಯಿಸೇಟ್ ರೂ ೨, ಮ। ಜೆ ಎಲ್ ಡಿ ಕೊಸ್ಟ ರೂ ೧ ಮ। ಆರ್. ಎ. ಡಿ ಮೊಂತೇರೊ ರೂ ೧ ಮ। ವಿ ಎಮ್ ಪಿಂಟೋ ರೂ. ೧.

ಮುಂದರಿಯುವದು.

ಜೀನಸು ಧಾರಣೆ. (ರಖಂ)

ಅವ್ವಲ್ ಮಸ್ಕತಿ ಅಕ್ಕಿ	5— 8—0	5—10—0
ದುಯಂ ,, ,,	5— 4—0	5— 6—0
ಸುಗ್ಗಿ ,,	5— 2—0	5— 4—0
ಗಾಡಿ ಗುಡ್ಡ ,,	4— 7—0	4— 8—0
ಹೊಸ ಗುಡ್ಡ ,,	4—14—0	5— 0—0
ಅವ್ವಲ್ ಬೆಳ್ತಿಗೆ ,,	5— 8—0	5—10—0
ಗುಡ್ಡ ಬೆಳ್ತಿಗೆ ,,	5— 2—0	5— 4—0
ರಂಗೂನು ಬೆಳ್ತಿಗೆ ಗೋಣಿ ೧ರ	9— 0—0	9— 6—0
ಗೋಂದಿ ಗೋಣ್ಯ ೧ರ ..	...	14— 0—0
ಹುರುಳಿ ಗೋಣಿ ೧ರ ...	7—0—0	8— 4—0
ಕಡಲೆ ಗೋಣಿ ೧ರ. ...	...	11— 0—0
ತೊಗರಿ ಗೋಣಿ ೧ರ ...	...	12— 0—0
ತೊಗರಿ ಬೇಳೆ ಗೋಣಿ ೧ರ.	12— 0—0	15— 0—0
ಉದ್ದು ಗೋಣಿ ೧ರ ...	...	10— 8—0
ಊರು ಬೆಲ್ಲ ಖಂಡಿ ೧ರ ...	...	50— 0—0
ಉಪ್ಪು ಗೋಣಿ ೧ರ		3— 4—0
ಕೊಬ್ರಿ ಖಂಡಿ ೧ರ . .	75—0—0	85—0—0
ಕೊಬ್ರಿ ಹಿಂಡಿ ಖಂಡಿ ೧ರ		26— 0—0
ಎಳ್ಳಿಂಡಿ ಖಂಡಿ ೧ರ		32— 8—0
ಕೊಬ್ರಿ ಎಣ್ಣೆ ಮಣ ೧ರ		6— 2—0
ಎಳ್ಳೆಣ್ಣೆ ಮಣ ೧ರ . . .		7— 0—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ		5— 0—0
ಮೋರಿಸ್ ಸಕ್ಕರೆ ಮಣ ೧ರ . . .		4— 0—0
[illegible] ಖಂಡಿ ೧ರ. .	215—0—0	220— 0—0
[illegible] ಖಂಡಿ ೧ರ.	110—0—0	111— 0—0
[illegible] ಖಂಡಿ ೧ರ	80—0—0	85— 0—0
[illegible]	85—0—0	88— 0—0
[illegible]	10—8—0	

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯುಗ್ಜಬೀಶನ್ ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ದಸರಾ ಬಹುಮತೆ ಗಡಿಯಾರ.

15 ಸಾಮಾನು ಬಹುಮತೆ ಸಹಿತ ರೂ. 3—14—0.

ಇದರಲ್ಲಿ ನಮೂದಿಸಿರುವ 7 ರೂಪಾಯಿ ಬೆಲೆವುಳ್ಳ ಗಡಿಯಾರವನ್ನು ದಸರಾ ಒಳಗೆ ತರಿಸಿಕೊಳ್ಳುವವರಿಗೆ ರೂ. 3—14—0ಗೆ 15 ಬಹುಮಾನಗಳು ಉಚಿತವಾಗಿ ಕೊಡುತ್ತೇವೆ.

1. ಉತ್ತರ ಮುಖಿ. 2. ಪೇನಾಕತ್ತಿ, 3. ಬ್ಲೂಬೆಲ್ಲ್ ಕಾಯಿ ಪೊಟ್ಲ, 4. ಹಣದ ಚೀಲ, 5. ಗಡಿಯಾರ ಸರಪಣಿ, 6. ಎಲೆಕ್ಟ್ರಿಕ್ ಭಂಗಾರದ ಶ್ಯಾವಂತಿಗೆ ಹೂವು, 7. ಇಮಿಟೇಷನ್ ಡೈಮಂಡ್ ಶರಟು ಗುಂಡಿ, 8. ಜರ್ಮನ್ ಬೆಳ್ಳಿಯ ಕುಂಕುಮ ಭರಣಿ, 9. ಡಿಟೋ ಸಾದಿನ ಚಿಪ್ಪು, 10. ಡಿಟೋ ಕಣ್ಣುಕಪ್ಪಿನ ಭರಣಿ, 11. ಡಿಟೋ ನಶ್ಯದ ಡಬ್ಬಿ, 12. ಇಮಿಟೇಷನ್ ಡೈಮಂಡ ಮೂಗಬಟ್ಟು, 13. ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ, 14. ಎಲೆಕ್ಟ್ರೋ ಸೀಲು ಉಂಗುರ, 15. ಕತ್ರಿ.

ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯುತ್ತೆ.

ಮಧುರೆ ಚುನ್ನಡ ಸೀರೆ ಒಂದಕ್ಕೆ ರೂ. 2—3—0.



ಮಧುರೆ ಕೆಂಪು ಸೀರೆ ರೂ. 3—0—0.
ತಂಜಾವೂರು ಗೆಜ್ಜೆ ಅಡ್ಡಿಗೆ ಆಣೆ 6.
ವಿಳಾಸ:—
ಕೆ. ರಾಧಾಕೃಷ್ಣ
18 [illegible]
[illegible]
ಮದರಾಸು.

ಮಹಾರಾಣಿ ಗೃಹಶೀಲ.

ಪುತ್ತೂರ ಪ್ಲೀಡರರಾದ ರಾ। ಬಿ. ಆನಂದರಾಯರಿಂದ ಶುಲಭ ಶೈಲಿಯಲ್ಲಿ ರಚಿಸಲ್ಪಟ್ಟ ಮನೋರಂಜಕವಾದ ಕಥೆಯು.

ಮುಕ್ತಾಹಾರ.

ಮುಕ್ತಾಹಾರದ ಮೂಲಕ ನೆರವೇರಿದ ವಿವಾಹದ ಮನೋಹರವಾದ ಕಥೆಯು. ಕ್ರಯ ಆಣೆ ೧.

ಪೇಷ್ವೆ ನಾರಾಯಣರಾವ್.

ರಾ। ಎಮ್. ಟಿ. ವಲ್ಲಭಯ್ಯಂಗಾರ್ ಇವರಿಂದ ವಿರಚಿಸಲ್ಪಟ್ಟದ್ದು. ಕ್ರಯ ಆಣೆ ೨.

ಬಾಲಿಕಾ ನೀತಿಮಾಲಿಕೆ.

ಶಾ। ಕೆ. ರಾಮಸ್ವಾಮ್ಯೈಯ್ಯಂಗಾರ್ ಇವರಿಂದ ಕುಸುಮ ಷಟ್ಪದಿಯಲ್ಲಿ ವಿರಚಿಸಲ್ಪಟ್ಟದ್ದು. ಕ್ರಯ ಆಣೆ ೨.

ಕೃಷ್ಣಾಕುಮಾರಿ.

ಮ। ರಾ। ರಾ। ಬಿ. ರಾಮರಾವ್ ಬಿ. ಎ. ಎಲ್. ಎಲ್. ಬಿ. ಯವರಿಂದ ವಿರಚಿಸಲ್ಪಟ್ಟ ಅದ್ಭುತವಾದ ವಚನ ನಾಟಕವು. ಕ್ರಯ ಆಣೆ ೧೦.

ಸದಾಹಾರವಿವೇಚನೆ. ಕ್ರಯ ಆಣೆ ೨.

ಸಕ್ಕರಾಚಾ ಪೂರ್ವದೇಶಯಾತ್ರೆಗಳು. ಕ್ರಯ ಆಣೆ ೮.

ರಾ। ಕುಂಬಳೆ ನರಸಿಂಹ ಲಕ್ಷ್ಮಣ ನ್ಯಾಕರಿಂದ ವಿರಚಿಸಲ್ಪಟ್ಟ ಕೊಂಕಣಿ ಭಾಷೆಯ ಪುಸ್ತಕಗಳು.

ಮಾನಸ ಚರಿತ್ರನಾಟಕ. ಕ್ರಯ ಆಣೆ ೪.

ಸಾವಿತ್ರೀ ನಾಟಕ. ಕ್ರಯ ಆಣೆ ೪.

ಚಂದ್ರಹಾಸಾಭ್ಯುದಯ.

ಮ। ರಾ। ರಾ। ಎಂ. ಎನ್. ಕಾಮತ್‌ರಿಂದ ವಿರಚಿಸಲ್ಪಟ್ಟ ಮನೋರಂಜಕವಾದ ಗದ್ಯ ಪದ್ಯ. ಕ್ರಯ ಆಣೆ ೪.

ವಿಳಾಸ:— ಮೇನೇಜರ್,
ಶಾರದಾ ಛಾಪಖಾನೆ, ಮಂಗಳೂರು ದ. ಕ.

---

150 ಪುಟಗಳ ಪುಸ್ತಕವು

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು [illegible]ವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನು[illegible] ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುಶ್ಯವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ [illegible] ಅಂಚೆ ಹಾಸಲು ಕೂಡಾ [illegible] ವಾಗಿಯೇ ಬರಿಯಬೇಕು.

[illegible]

[illegible]:— 1. [illegible]

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ವೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು

ಪಟ್ಟಾರ್ ಬತ್ತಿ	ಸೇರು 1ಕ್ಕೆ	12-0-0	ಅರಗಜ	ತೊಲೆ 1ಕ್ಕೆ		2 0 0
ಅಂಬರ್ ಬತ್ತಿ	,,	,, 6-0-0	B ಅರಗಜ	,,	,,	1 0 0
ಕಸ್ತೂರಿ ಬತ್ತಿ	,,	,, 3 0 0	ಕಸ್ತೂರಿ ವಿಲ್ಲೆ	,	.	2 0 0
ಜವಾಜಿ ಬತ್ತಿ	,,	,, 2-0-0	ಜವಾಜಿ ವಿಲ್ಲೆ	,,	,,	1 0 0
ಪುಣಗಿನ ಬತ್ತಿ	,,	, 1-8-0	ಕೇಸರಿ ಬಿಲ್ಲೆ	,,	,,	0 8 0
ಪನ್ನೀರ್ ಬತ್ತಿ	,,	,, 0 12 0	ತಾಂಬೂಲ ರತ್ನ ಸೀಸೆ 1ಕ್ಕೆ			0 4 0
ಮಸಾಲಾ ಬತ್ತಿ	,	,, 0-6-0	ದಕ್ಷಿಣಂಗ ಡಬ್ಬಿ 1ಕ್ಕೆ			0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು.

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ

THE BOMBAY LIFE ASSURANCE CO. LTD.

Established 1908)

HEAD OFFICE BOMBAY

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA

Extract from the Actuary's Report —

"There can be no doubt that the Policy Contracts are well secured"

Chairman The Hon'able Mr Lalubhai Samaldas, Justice of the Peace, Director of the Bank of India Ltd, The Tata Hydro Electro Co. Ltd, The Tata Mills Co Ltd., Managing Agent of Messrs Marsland Price & Co Ltd, and fellow of the Bombay University

Actuary —George King Esq F F A, F I A, London)

Medical Referee Dr R Row M D D Sc London)

Managing Director —Framrose R Joshi, Justice of the Peace, The Honorary Presidency Magistrate & etc

Wanted agents on very liberal commission

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳುಗಡ್ಡೆ, ಶಾಮುಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಚಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಹೊಸದಾಗಿ ಹಾಗೆ ಹೊಸದು ಮುಚ್ಚಿ ತಯಾರು ಮಾಡಲ್ಪಡುವದು.

ಪಂಜಾ ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಪಂಚಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಪಂಚಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಪಂಚಾ ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಪಂಚಾ ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಪಂಚಾ ಸಾಲಾಮಿಸ್ರಿ ಮುರಬ್ಬಾವು— ಮಿದುಳಿಗೆ ಬಲವನ್ನು ಕೊಡುವದು
ಪಂಚಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಪಂಚಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಪಂಚಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಪಂಚಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಪಂಚಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಪಂಚಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಖಾಯಂ ತರವಾಗಿ ಗುಣಕೊಡುತ್ತೆ.

ಈ ಮುರಬ್ಬಾವು "ಪಂಚಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಯವರೆಗೆ ಆಣೆ 6.

ಏಜಂಟರು:— ಡಿ ಸಯ್ಯದ್ ಉಸ್ಮಾನ್ ಎಂಡ್ ಕೊ
ದೊಡ್ಡಪೇಟೆ, ಬೆಂಗಳೂರು ಸಿಟಿ

ತಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
೯ ಕಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ಕೃಷ್ಣವಿಲಾಸ ಟ್ರೇಡಿಂಗ್ ಕಂಪೆನಿ,

ಮಾನ್ಯಗೃಹಸ್ಥರೇ, ಗಿರಗಾಂ, ಮುಂಬಯಿ.

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವುದರ ಬದಲಿಗೆ ಬಹಳ ಹಲಕೀ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ದುರ್ವ್ಯಯ ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ. ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಚೌಕಶೀಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ. ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತಿಗೆ ತಕ್ಕೊಂಡು ವಿ. ಪಿ. ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ವಾಚುಗಳು. ನಮ್ಮಲ್ಲಿ ವೆಸ್ಟೆಂಡ್, ಪೇವರ್ ಲೂಬಾ, ಬರ್ನ ಮೊದಲಾದ ಕಂಪನಿಯ ವಾಚು ಮತ್ತು ಗಡಿಯಾರಗಳು ಆಯಾಯ ಕಂಪನಿಯಲ್ಲಿ ಮಾರಾಟ ಮಾಡುವದಕ್ಕಿಂತ ಕಡಿಮೆ ಬೆಲೆಗೆ ದೊರೆಯುತ್ತವೆ.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರೆಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು [illegible] ದಿಂದ ಕಳೆಯುವೆವು.

Krishnavilasa Trading Company.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾ ರಾಘವ



ಪಾಕೆಟು ಡೈರಿಗಳು.

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.
,, ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.
,, ೩. ದೊಡ್ಡ ಸೈಜು ಸಾದಾ 0—6—0.
,, ೪. ಪೆನ್ಸಿಲ್ ಮುಚ್ಚಳವುಳ್ಳದ್ದು 0—8—0.

ಒಂದೇ ವಿಳಾಸಕ್ಕೆ [illegible] ಕೊಂಡರೆ ೧ [illegible] ದೊರೆಯುತ್ತದೆ.
[illegible]
[illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ —ವರುಷ ೧ಕ್ಕೆ ರೂ. 1—4—0 ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ VIII ಮಂಗಳೂರು ತಾ 18ನೇ ದಸಂಬರ ಶುಕ್ರವಾರ 1914 ಸಂಚಿಕೆ 51

ನೋಟೀಸು.

ಸ್ತ್ರೀ ಉಪ್ಪಿನಂಗಡಿ ತಾಲೂಕು ನಂಬ್ರ 129ನೇ ಉಬರಡ್ಕ ಮಿತ್ತೂರು ಗ್ರಾಮದ ಕುಬ್ಬರಡ್ಕ ಶಂಕರನಾರಾಯಣ ಭಟ್ಟರ ಮಗ ತಿಮ್ಮಪ್ಪಯ್ಯ ಭಟ್ಟನಾದ ನಾನ ತಾ 27—11—14ನೇ ಸ್ವದೇಶಾಭಿಮಾನಿ VIIIನೇ ಪುಸ್ತಕದ 48ನೇ ಸಂಚಿಕೆಯ 1ನೇ ಪುರದಲ್ಲಿ ಪ್ರಕಟಿಸೋಣಾದ ದೇವರ ಸೂರ್ಯನಾರಾಯಣಯ್ಯನ ನೋಟೀಸಿಗೆ ಉತ್ತರವಾಗಿ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ —ಸದರಿ ನೋಟೀಸಿನಲ್ಲಿ ತೋರುವ ದೇವರ ಸುಬ್ರಾಯರ ಮಗ ಸೂರ್ಯನಾರಾಯಣಯ್ಯನ ನನಗೆ ರೂ. 100ಕ್ಕೆ ತಾ 10-3-1914ರಲ್ಲು ರಿಜಿಸ್ತ್ರಿ ಮಾಡದೆ ಪ್ರೊ ನೋಟು ಬರಕೊಟ್ಟದ್ದಾಗಿರುತ್ತದೆ ಸದರಿ ನೋಟಿನ ... ನನಗೆ ಅವನಿಂದ ... ದರೂ ವಸೂಲು ಬಂದದ್ದೂ ಇಲ್ಲ. ನಾನು ಆ ನೋಟು ... ವಾಪಾಸು ಕೊಟ್ಟದ್ದು ಇಲ್ಲ ಕೊಡಲಿಕ್ಕೆ ಕಾರಣವೂ ಇಲ್ಲ ಸದರಿ ಸೂರ್ಯನಾರಾಯಣಯ್ಯನಿಂದ ನನಗೆ ಬರಬೇಕಾದ ಆರವಾರು ದಸ್ತಾವೇಜಿನ ಬಾಬ್ತು ... ವ ಗೇಣಿ ... ಸಹಾ ರೂಪಾಯಿ ಎರಡು ಸಾವಿರಕ್ಕೆ ನಾನು ತಾ 10—11—14ರಲ್ಲಿ ರಿಜಿಸ್ತ್ರಿ ರಸೀದಿ ಕೊಟ್ಟು ಅದಕ್ಕೆ ಸಮ್ಮಂದಿಸಿದ ರಿಕಾರ್ಡು ಮಾತ್ರ ಆತಗೆ ನಾನು ವಾಪಾಸು ಕೊಟ್ಟಿರು ತ್ತೇನೆ ಸದರಿ ಸೂರ್ಯನಾರಾಯಣಯ್ಯನು ಮನೆತನಸ್ಥನಾಗಿ ... ಜನರ ಪ್ರೇರೇಪಣೆಯಿಂದ ದುಃಸ್ಸಾದನೆ ಮಾಡುವಗೋಸ್ಕರ ನ್ಯಾಯಕ್ಕು ನೀತಿಗೂ ವಿರೋಧವಾಗಿ ಸುಳ್ಳು ಸಂಗತಿಗಳು ಕಾಣಿಸಿಕೊಟ್ಟ ಸದರಿ ನೋಟೀಸಿನಿಂದ ಆತನಿಗೆ ಏನೂ ಪ್ರಯೋಜನ ಸಿಕ್ಕಲಾರದು ಮತ್ತು ಇನ್ನು ಮುಂದೆ ರಿಜಿಸ್ತ್ರಿ ಶಿವಾಯಿ ನಾನು ಬರಕೊಡುವ ಎಲ್ಲಾ ಬರಹ ಮೂಲಕದ ಸಾಧನಗಳು ನನ್ನ ಸ್ವಹಸ್ತ ಕೈ ಬರಹದಿಂದ ಬರಕೊಡುವದರಿಂದ ನನ್ನ ಕೈ ಬರಹದ್ದಲ್ಲದ ಯಾವತ್ತು ಸಾಧನವನ್ನು ನಾನು ಒಪ್ಪತಕ್ಕದ್ದೂ ಇಲ್ಲ ಅದು ನನಗೆ ಬಾಧಿಸತಕ್ಕದ್ದೂ ಅಲ್ಲವೆಂತ ಸಹಾ ಸರ್ವ ಜನರಿಗೆ ಇದರಿಂದ ತಿಳಿಸಿದ್ದೇನೆ.

ತಾ 5—12—1914 ತಿಮ್ಮಪ್ಪಯ್ಯ ಭಟ್ಟನ ರುಜು

ದಕ್ಷಿಣ ಕನ್ನಡಾ ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

ಕ್ರಮ ನಂಬ್ರ $\frac{84}{1914}$

ಅಣ್ಣಪ್ಪ ಶ್ಯಾನಭಾಗ ಕೂಡಾ 5 ಜನರು —ವಾದಿರು

ಮತ್ತು

ಶ್ರೀನಿವಾಸ ಶ್ಯಾನಭಾಗ ಕೂಡಾ 5 ಜನರು —ಪ್ರತಿವಾದಿರು.

ಉಡುಪಿ ತಾಲೂಕು ಪಡುಬಿದ್ರಿ ಮಾಗಣೆ ನಡಿಸಾಲ ಗ್ರಾಮದ ಗೌಡ ಸಾರಸ್ವತ ಕೊಂಕಣಸ್ತ ಬ್ರಾಹ್ಮಣರಿಗೆ ಇದರ ಮೂಲಕ ತಿಳಿಸುವದೇನಂದರೆ:—

ಸದರಿ ಗ್ರಾಮದಲ್ಲಿರುವ ನಿಮ್ಮ ಜಾತಿ ವರ್ಗದ ಶ್ರೀ ಲಕ್ಷ್ಮಿನಾರಾಯಣ ದೇವಸ್ಥಾನದ ಪೂಜೆ ವೃತ್ತಿಗೆ 4ನೇ ಲಾಗಾಯ್ತು 11ನೇ ವರೇಗಿನ ಪ್ರತಿವಾದಿರಿಗೆ ಮನೆತನದ ಹಕ್ಕು ಇಲ್ಲವೆಂತ ಸ್ಥಾಪಿಸಿಕೊಳ್ಳುವ ಬಗ್ಗೆ— ವೆಗೈರೆ— ವಾದಿರು ತಂದ ಸದರಿ ವ್ಯಾಜ್ಯವು 1915ನೇ ಇಸವಿ ಜನವರಿ ತಾರೀಕು 30ಕ್ಕೆ ಪ್ರಥಮ ತನಖಿಯ ಬಗ್ಗೆ ನಿಶ್ಚಯಿಸಿರುತ್ತದೆ. ಮತ್ತು ನಿಮ್ಮ ಎಲ್ಲವರ ಕಡೆಯಿಂದ ವಾದಿರು ಸದರಿ ದಾವೆ ನಡಿಸುವಂತೆ ಕೋರ್ಟಿನವರು ಈ ತಿಂಗಳ ತಾರೀಕು 8ರಲ್ಲು ಹುಕುಂ ಕೊಟ್ಟಿರುತ್ತಾರೆ. ಈ ಕುರಿತು ಆಕ್ಷೇಪ ಇದ್ದರೆ ಸದರಿ ತಾರೀಕಿನಲ್ಲಿ ಅರ್ಜಿ ದ್ವಾರಾ ಕೋರ್ಟಿಗೆ ಜಾಹೀರು ಮಾಡತಕ್ಕದ್ದು.

B. Krishna Rao.
Subordinate Judge.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ

ಕ್ರಮ ವ್ಯಾಜ್ಯದ ನಂಬ್ರ $\frac{487}{1914}$

Regular I A ಅರ್ಜಿ ನಂಬ್ರ $\frac{1779}{1914}$

ರಂಕಮ್ಮಾಳ್ವ ಕೂಡಾ ವಾದಿರು

ಅಪ್ಪಿ ಯಾನೆ ಪದ್ಮಕ್ಕ ಕಡಂಬೇಡಿ ಸಹಾ ಪ್ರತಿವಾದಿರು.

ಕಾರ್ಕಳ ತಾಲೂಕು ಕೊನ್ನರ ಮಾಗಣೆ ಕೋಣಾಜೆ ಗ್ರಾಮದ ಹತ್ತು ಸಮಸ್ತರು ಬೇರೆ ... ವ ಕುಕ್ಕಣಂತಾಯ ದೈವದ ಸ್ಥಾನದ ಮನೆತನದ ವ ಕ್ರಮಾಗತದ ಮೊಕ್ತೇಸರರಾಗಿ ಸದರಿ ವಾದಿರು, ಸದರಿ 1ನೆ ವಾದಿ ವ 2ನೆ ವಾದಿ ಮಾವ ಹಾಲಿ ಮೃತವಾದ ಪದ್ಮಯ್ಯ ಕಿಲ್ಲ ಇವರಿಬ್ಬರ ಹೆಸರಲ್ಲಿ ಸದರಿ ಪ್ರತಿವಾದಿರು ತಾರೀಕು 4-12 1911 ರಲ್ಲು ರೂ 920—0—0ಕ್ಕೆ ಬರಸಿ ಕೊಟ್ಟ ಡಿಮಾಂಡ ಪ್ರೋಮಿಸರಿ ನೋಟಿನ ಅಸಲು ಬಡ್ಡಿ ಬಾಕಿ ಐವೇಜ ವಸೂಲಮಾಡಿ ಕೊಳ್ಳುವರೆ ಸದರಿ ದಾವೆಯನ್ನು ತಂದಿರುತ್ತಾರೆ ವಾದಿರು ಸದರಿ ದಾವಾ ಮಾಡುವರೆ ಅಧಿಕಾರ ತಮಗೆ ಕೊಡಬೇಕಾಗಿ ಮೇಲ್ಕಂಡ ಅರ್ಜಿ ಸಹಾ ದಾಖಲು ಮಾಡಿರುತ್ತಾರೆ ಈ ಪ್ರಕಾರ ಸದರಿ ದಾವೆಯನ್ನು ಸದರಿ ವಾದಿರು ಮುಂದರಿಸುವದಕ್ಕೆ ಆಕ್ಷೇಪ ಇರುವಂಥವರು ಈ ಕೋರ್ಟಿಗೆ ಜಾಹೀರು ಮಾಡಿಕೊಳ್ಳುವಕ್ಕೋಸ್ಕರ 1915ನೇ ಇಸವಿ ಜನವರಿ ತಿಂಗಳ 30ನೇ ತಾರೀಕಿನ ದಿವಸ ಬೆಳಿಗ್ಗೆ 10 ಘಂಟೆಯ ಒಳಗೆ ಈ ಕೋರ್ಟು ಮುಂದೆ ಸ್ವತಹಾ ಆಗಲೀ ವಕೀಲ ದ್ವಾರಾ ಆಗಲೀ ಹಾಜರಾಗತಕ್ಕದ್ದು ಎಂಬದಾಗಿ ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

ಕಾರ್ಕಳ,
ತಾ 14-12-14

K Appaji Rao,
District Munsif

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟಾ ಕೋರ್ಟಿನಲ್ಲಿ.

O P. No $\frac{140}{1914}$.

ಮರಿಯಮ್ಮ—ಅರ್ಜಿದಾರಳು.

ಮತ್ತು

ಲ್ಯಸಮ್ಮ—ರೆಸ್ಪೊಂಡೆಂಟಳು,

ಎಲ್ಲಾ ಜನರಿಗೆ ತಿಳಿಯಪಡಿಸುವದೇನಂದರೆ:—ಅರ್ಜಿದಾರಳ ಗಂಡ ಮಂಜೇಶ್ವರ ಮಾಗಣೆ ಉದಿಯಾವರ ಗ್ರಾಮದಲ್ಲಿ ಮೃತಪಟ್ಟ ಕುಂಞಮ್ಮದೆ ಬ್ಯಾರಿಗೆ ಹೊರಗಿನಿಂದ ಬರತಕ್ಕ ಸಾಲ ವಸೂಲಿ ಬಗ್ಗೆ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ಕೊಟ್ಟ ಸದರಿ ಅರ್ಜಿಯು ಇದೇ ಬರುವ 1915ನೇ ಇಸವಿ ಜನವರಿ ತಿಂಗಳ ತಾ. 19ಕ್ಕೆ ಈ ಕೋರ್ಟಿನಲ್ಲಿ ತನಖಿಗೆ ... ಆಗಿಯದೆ. ಸದರಿ ಅರ್ಜಿಯ ಬಾಬಿನಲ್ಲಿ ಯಾರದಾದರೂ ಆಕ್ಷೇಪಗಳಿದ್ದರೆ ಅದೇ ದಿವಸ ... ತಾ. 21ನೆ ಹಗಲು 10 ಘಂಟೆ ಒಳಗೆ ಈ ಕೋರ್ಟು ಮುಂದೆ ಹಾಜರುಮಾಡತಕ್ಕದ್ದು.

ಮಂಗಳೂರು,
ತಾರೀಕು 14—12—1914

G. Krishna Rao,
Pleader for Petitioner

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಬಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಲಾಗ್ಯಾತಿನಿಂದ್ಲ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಬರೀದಿಯಲ್ಲಿ ದೊರಿಯುತ್ತದೆ

ಕಾಫಿ ಪುಡಿಯು ರಾತ್ತಲ ಒಂದಕ್ಕೆ 0—10—0ಯಿಂದ 0—5—0 ದರದ ವರೇಗೂ ದೊರಿಯುತ್ತದೆ

ಇತರ [illegible] ನಮ್ಮ [illegible] ಬರೆದು ತಿಳಕೊಳ್ಳಬಹುದು

Piedade Pinto,

Manager.

"ಸಕ್ಕರೆಯ ಸಾರವು.

ಬಹಳ ಅನುಕೂಲವೂ ಉಪಯೋಗಕರವೂ ಆಗಿರುವುದು.

ಸಕ್ಕರೆಯನ್ನು ಉಪಯೋಗಿಸಕೂಡದಂಥಾ ಮೂತ್ರ ರೋಗಿಗಳಿಗೆ ಅತ್ಯವಶ್ಯಕವಾದದ್ದು.

ಮೇಲಣ ರೋಗಬಾಧೆಯು ಇಲ್ಲದವರು ಸಹ ಇದನ್ನು ಉಪಯೋಗಿಸಿಕೊಳ್ಳಬಹುದು ಸಾಧಾರಣ ಎರಡು ಕುಡುತೆ ಕಾಫಿ ವ ಚಾ ಇತ್ಯಾದಿಗಳಿಗೆ ಒಂದು ಕಾಳಿನ ಪ್ರಮಾಣದಲ್ಲಿ ಈ ಸಕ್ಕರೆಯ ಸಾರವನ್ನು ಹಾಕಿದರೆ ಸರಿಯಾಗಿ ಸವಿಯನ್ನುಂಟುಮಾಡುತ್ತದೆ ಸಕ್ಕರೆಯ ಸಾರ ತುಂಬಿಸಿದ ಸುಂದರವಾದ ಗಾಜಿನ ಕರಡಿಗೆ ಒಂದಕ್ಕೆ ಕ್ರಯ 0—6—0

ಲೆಕ್ಟೋಮಿಟರ್ ಎಂಬ ಹಾಲನ್ನು ಪರೀಕ್ಷಿಸುವ ಉಪಕರಣವು.

ಗೃಹಕೃತ್ಯದ ಉಪಯೋಗದ ಬಗ್ಗೆ ಶುದ್ಧವಾದ ಹಾಲು ದೊರಕುವದೇ ಕಷ್ಟಸಾಧ್ಯ ನೀರನ್ನು ಹಾಲಿಗೆ ಕೂಡಿಸಿ ಮಾರುವ ಅಭ್ಯಾಸವು ಬಹಳವಾಗಿ ರೂಢಿಗೆ ಬಂದಿರುವುದ ನೀರಿಗೆ ಬೆಲೆಕೊಟ್ಟು ಹಾಲೆಂದು ಕುಡಿಯುವೆವು. ಲೆಕ್ಟೋಮಿಟರ್ ಎಂಬ ಉಪಕರಣದಿಂದ ಹಾಲಿಗೆ ನೀರನ್ನು ಕೂಡಿಸಿರುವುದೋ ಎಂಬದನ್ನು ಹಾಲನ್ನು ತೆಗೆದುಕೊಳ್ಳುವಾಗಲೇ [illegible] ಅಥವಲ್ಲಿ ಯಾರಿಂದಲೂ ಪರೀಕ್ಷಿಸಲಾಗುತದೆ. ಈ ಉಪಕರಣವನ್ನು ಉಪಯೋಗಿಸುವ ಕ್ರಮವು ಇದರೊಂದಿಗೆ ಸೂಚಿಸೋಣಾಗಿರುತ್ತದೆ.

ಲೆಕ್ಟೋಮಿಟರ್ ಒಂದಕ್ಕೆ ಕ್ರಯ ರೂ 1—8—0.

ಹಲವು ವರುಷಗಳಿಂದ ಬಹಳ ಗುಣಕಾರಿಯೆಂದು ಅನುಭವ ಸಿದ್ಧವಾದ

ಗಜಕರ್ಣದ ಮುಲಾಮು.

ಒಂದೆರಡು ಸಲ ಇದನ್ನು ಹಾಗಿಸುವಷ್ಟರಲ್ಲಿ ಈ ಮುಲಾಮಿನ ಯೋಗ್ಯತೆಯು ವ್ಯಕ್ತವಾಗುವುದು ಈ ಮುಲಾಮನ್ನು ಹಚ್ಚಿ ಅದನ್ನು ತೊಳೆದು ತೆಗೆಯುವಾಗ ತಣ್ಣೀರನ್ನೇ ಉಪಯೋಗಿಸತಕ್ಕದು ಡಬ್ಬಿಯೊಂದಕ್ಕೆ ಕ್ರಯ ರೂ. 0–6–0 ಮಾತ್ರ.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,

ಔಷಧಿ ವ್ಯಾಪಾರಸ್ಥರು, ರಥಬೀದಿ, ಮಂಗಳೂರು

ಪುಗಸಟ್ಟೆ! ಪುಗಸಟ್ಟೆ!!

144 ಪುಟಗಳ ವೈದ್ಯ ಪುಸ್ತಕ

[illegible] ಕೊಳ್ಳುವದೇ ನಮ್ಮ ಮೊಟ್ಟಮೊದಲ ಕರ್ತವ್ಯವು [illegible] ತ್ತದೆ, ಕೆಟ್ಟುಹೋದ ಆರೋಗ್ಯವನ್ನು [illegible] ಸಂಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ [illegible] ರಿಗೆ ಕ್ರಯವಿಲ್ಲ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡುವದು ಈ ಪುಸ್ತಕವು ಒಂಬತ್ತು ಭಾಷೆಗಳಲ್ಲಿ [illegible] ಇದವರೆಗೆ ನಾಲ್ಕು ಲಕ್ಷ ಪ್ರತಿಗಳು ಕಳುಹಿಸಲ್ಪಟ್ಟಿರುವದೇ ಇದು [illegible] ಯಾಗಿರುತ್ತದೆ.

ಕಲಿಯುಗದ ಕಾಮಧೇನು

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಿಮಾಡಿ ಹೆಚ್ಚುಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವದು. ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲನಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1—0—0.

ರಾಜವೈದ್ಯ ನಾರಾಯಣಜಿ ಕೇಶವಜಿ

20 ಚೀನಾ ಬಜಾರ್ ರೋಡ್,

ಮದರಾಸು.

ಯುಕಲಿಪ್ಟಸ್ ತೈಲ.

ಅಮುಣಂಜೆಗುತ್ತು ಮ ರಾ ಸೀನಪ್ಪ ಹೆಗ್ಗಡೆಯವರು ಈ ರೀತಿ ಬರೆಯುವರು:—ತಮ್ಮಲ್ಲಿಯ ಅತ್ಯುತ್ತಮವಾದ "ಯುಕಲಿಪ್ಟಸ್ ತೈಲ"ವೆಂಬ ಸರ್ವರೋಗನಿವಾರಕಾ ಔಷಧವನ್ನು ತರಿಸಿಕೊಂಡು ಹೆಂಗಸರು ಮುಟ್ಟಾಗುವ ಕಾಲದಲ್ಲಿ ಆಗುವ ಕಠಿಣ ವಿಧದ ಹೊಟ್ಟೆನೋವಿಗೆ ಉಪಯೋಗಿಸಿದ್ದಲ್ಲಿ ಅದು ಅನೇಕ ಹೆಂಗಸರ ಹೊಟ್ಟೆನೋವನ್ನು ನಿಮಿಷಮಾತ್ರದಲ್ಲಿ ಗುಣಪಡಿಸಿರುತ್ತದೆ. ನನ್ನ ತಂಗಿಗೆ ಕೆಲವು ವರುಷಗಳಿಂದ ಇದ್ದ ಕಿವಿನೋವು ಇದರಿಂದ 5 ದಿವಸಗಳಲ್ಲಿ ಪೂರ್ಣ ಗುಣವಾಗಿರುತ್ತದೆ. ತೀರಾ ಬಡವರು ಕೂಡಾ ಕೊಡಕೂಡುವ ಈ ಅಲ್ಪ ಬೆಲೆಯ ತೈಲವು ಸಾವಿರಾರು ರೂಪಾಯಿಯ ಬೆಲೆಬಾಳತಕ್ಕಂಥಾದ್ದಾಗಿದೆ. ಜ್ವರಗಡ್ಡೆ, ಮಲೆಜ್ವರ, ಶೀತ, ವಾತ, ಸಣ್ಣ ಮಕ್ಕಳ ಜ್ವರ, ಕೆಮ್ಮು, ದೊಡ್ಡವರ ಬಿಳುಪು, ಮೇಹ ಮೊದಲಾದ ರೋಗಗಳಿಗೆ ಸಂಜೀವಿನಿಯೋಪಾದಿ ಇರುತ್ತದೆ. ಇದನ್ನು ಉಪಯೋಗಿಸಿದ ಮಕ್ಕಳಿಗೆ ಬಾಲಾಪ್ಯ ರೋಗವು ನಿಜವಾಗಿ ತೊಲಗಿ ಹೋಗುತ್ತದೆಂಬ ಸಂಗತಿ ನನ್ನ ಅನುಭವ ಸಿದ್ಧವಾಗಿರುತ್ತದೆ ಇತ್ಯಾದಿ, ಸರ್ವ ರೋಗಗಳಿಗೆ ದಿವ್ಯೌಷಧವಾದ ಈ ತೈಲದ ಕ್ರಯ ಔನ್ಸ್ ಸೀಸೆಗೆ 5 ಆಣೆ ವಿ ಪಿ ಖರ್ಚು ಡಜನ್ ಸೀಸೆಗೆ ವಿ. ಪಿ ಸಹಿತ ರೂ. 3 12ಆಣೆ, ಅನುಪಾನಪತ್ರಿಕೆ ಸೀಸೆಯೊಂದಿಗೆ.

ಇಕ್ಲಿಪ್ಸ್ ಬಾಮ್

ವಾತ, ಸಂಧುವಾತ, ಪಕ್ಷವಾತ, ಶಿರೋಭಾರ, ಎದೆನೋವು, ಹಲ್ಲುನೋವು, ಗಾಯ, ಕಜ್ಜಿ, ನಾಯಿಕಡಿತ, ಹುಳಮೇಯುವದು, ಆನೆಕಾಲು ಮೊದಲಾದ ರೋಗಗಳಿಗೆ ಬಾಹ್ಯಲೇಪನವಾಗಿ ಉಪಯೋಗಿಸಬಹುದಾದ ಈ ಬಾಮ್ ಸ್ವಲ್ಪ ಕಾಲದಲ್ಲಿಯೇ ಖ್ಯಾತಿಯನ್ನು ಪಡೆದಿದೆ. ಕ್ರಯ ಕರಡಿಗೆ 1ಕ್ಕೆ 8 ಆಣೆ ವಿ. ಪಿ. ಖರ್ಚು. ಡಜನ್ ಕರಡಿಗೆಗೆ ರೂ. 4—12—0

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ, [illegible]

ಏಜಂಟರು:— ಸುಗಂಧವಿಲಾಸ [illegible] ರಥಬೀದಿ, ಮಂಗಳೂರು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುಪು ತೊಡುಪುಗಳನ್ನು ತರಿಸುತ್ತಿರುವರು ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಶೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ ಪಿ ಮೂಲಕ ಕಳುಹಿಸಿಕೊಡುವೆವು ಸಂದೇಹಪಡಬೇಡಿರಿ (1) ಜರಿತಾರಿನ ರೇಶ್ಮೆ, ನಾನಾ ತರದ ಅರಿವೆಗಳು, ಶೀರೆಗಳು, ರವಕೆ ಕಣಗಳು, ಲಿಂಗ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನನ್ನ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಿರಿ

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸಲಾಗುವುದು

ನಮ್ಮ ವಿಳಾಸ.— ಪಿ ಡಿ ನೀಲಕಾಂತ ಎಂಡ್ ಕೊ,
ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್ ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಪ್ ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ ಪುಸ್ತಕವಾಗಿ ಇಡಲಿಕ್ಕೂ ತಕ್ಕದಾಗಿದೆ ಕ್ರಯ 0—8—0

ವಿಳಾಸ —
ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್ ತಿಮ್ಮಪ್ಪಯ್ಯ,
ಮಂಗಳೂರ

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

II ನೇ ಸ್ಟೆಂಡಾರ್ಡ ಗಣಿತ ..	0—3—0
III ನೇ ,, ,,	0—4—0
IV ನೇ ,, ,,	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಾಣಿಕೋಟಿ, ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ ...	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು ...	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ ..	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ) ...	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ ..	0—1—0
ಬಾಲಶಿಕ್ಷೆ 1ನೇ ಭಾಗ ...	0—1—6
,, 2ನೇ ಭಾಗ. ...	0—1—6

ಒಂದನೆಯ ಪುಸ್ತಕ
ಎರಡನೆಯ ,,
ಮೂರನೆಯ ,,
ನಾಲ್ಕನೆಯ ,,
(ತಯ್ಯಾರಿಯಲ್ಲಿವೆ.)

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದರೆ ಕಳುಹಿಸಲ್ಪಡುವವು. ವ್ಯಾಪಾರಸ್ಥರಿಗೆ ಕಮಿಷನ್ ಕೊಡಲಾಗುವುದು.

ವಿ. ಲಕ್ಷ್ಮಣರಾವ್,

ಯುನಿವರ್ಸಲ್ ಎಸ್ಯುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಶೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬುದನ್ನು ನೀವು ಅರಿತಿರುವಿರೋ?

ಇನ್ಶೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

		ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	ರೂ	13,329—0—0	22,549—0—0
,, (ವಿವಾಹ)	,,	25,670—0—0	38,933—0—0
ಜುಮ್ಲಾ ಕೇಸುಗಳು	,,	38,999—0—0	61,482—0—0
ವಸೂಲಾದ ಪ್ರೀಮಿಯುಮ್	,,	1,26,685—0—0	5,34,683—0—0
ಬಾಧ್ಯತೆ ಹಕ್ಕುಗಳು	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	,,	10,000—0—0	50,000—0—0
(ಜನರಲ್) ರಕ್ಷಿತ ಧನ	,,	37,220—0—0	23,778—3—2
ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ			ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1 ಅದು 1912ನೇ ಲೈಫ್ ಎಶ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2 ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 10,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು 4 ರೂ 3,00,000ಗಿಂತಲೂ ಹೆಚ್ಚಿಗೆ ಬಾಧ್ಯತೆಗಳನ್ನು ಕೊಟ್ಟಿದೆ 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ 7 ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8 ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ 9 ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10 ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಿಗಳ ಧ್ವನಿ

"ಬಂಗಾಳಿ"—14ನೇ ಜನವರಿ 1914 ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು ಸಮಾರು 3 ಲಕ್ಷ ಭಾಧ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನರಾವುದಾದರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಯೋಗ್ಯ ಮತ್ತು ಸಮರ್ಥರಾದ ಏಜಂಟುಗಳು ಬೇಕಾಗಿವೆ ಎಲ್ಲಾ ವಿಧದ ಏಜಂಸ್ಸಿ ಶರ್ತಗಳಿಗೆ—

ವಿಳಾಸ — ಲಕ್ಷ್ಮಣರಾವ್ ಬ್ರದರ್ಸ್,
ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು ಪೋಸ್ಟು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.



ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಶೀತಜ್ವರ, ಜ್ವರ, ಹೊಟ್ಟೇ ಶೂಲಿ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲು ನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಬಾರದಂತೆ, ನಾರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಋತು ಶೂಲಿ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೈಕಟ್ಟುಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ. 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಅಂಚೆ ಖರ್ಚು 4 ಆಣೆ.

ವೈಶ್ವಾನರಾಸವ (ಕಾಲರಾ ಔಷಧ)

... (ಕಾಲರಾ), ... ಜೀರ್ಣ ... ಕಾಗಿದೆ. ... ಖಂಡಿತವಾಗಿ ಇದರಲ್ಲಿ ... ಆದರೆ ...

... ಮೈಸೂರು.

1915ನೇ ವರುಷ ಸಮೀಪಿಸಿತು

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಆಗಾಗ [illegible]

1915ನೇ ವರುಷದ ಪೋಕೆಟ್ ಡೈರಿಗಳನ್ನು

ತಕ್ಕೊಳ್ಳಲು ಮರೆಯಬೇಡಿರಿ.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸೋಣಾಗುವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ **ಕೋರ್ಟು**ಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋಣಾಗುವ ದರಗಳ ಪಟ್ಟಿ, ವಕೀಲರ ರುಸುಂ, **ಕೋರ್ಟು ಫೀಸು,** ದಸ್ತಾವೇಜುಗಳನ್ನು ರಿಜಿಸ್ಟ್ರಿಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ನಾಮೆ, ಭಾಡಿಗೆ **ಚೀಟು,** ರಿಜಿಸ್ಟ್ರಿ **ನೋಟೀಸು** ಇತ್ಯಾದಿಗಳ ಮಾದರಿ ಫೋರ್ಮು ಶಕಗಳ ಮೊಕಾಬಿಲೆ ಪಟ್ಟಿ, ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ **ಸಂಘಗಳ ಮಾಹಿತಿ,** ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು—ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ.

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ಗದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ **ಉಪಯುಕ್ತವಾಗಿರುವ** ಪೊಕೇಟು ಬೂಕು—ಪೆನ್ಸಿಲ್ ಸಹಿತ ಇವಕ್ಕೆ ಪ್ರತಿಯೊಂದಕ್ಕೆ ಆ 8.

ಸಣ್ಣ ಸ್ಯಾಜಿನ ಡೈರಿಗಳೂ ಸಹ ಬಿಕರಿಗೆ ಸಿದ್ಧವಾಗಿವೆ.

ಕ್ರಯ ಪ್ರತಿ ಒಂದಕ್ಕೆ ಆಣೆ 4 ಮಾತ್ರ.

ನಮ್ಮಲ್ಲಿ ತಯ್ಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ಬ್ಯಾಂಡು ಮಾಡಿದ ಕ್ರಮ, ಇತ್ಯಾದಿಗಳನ್ನು **ನೋಡಿಕೊಳ್ಳಿರಿ!**

ವ್ಯಾಪಾರಸ್ಥರಿಗೂ ರಖಂ ತಕ್ಕೊಳ್ಳುವವರಿಗೂ ರಿಯಾಯತಿಯ ಪ್ರತ್ಯೇಕ ದರಗಳಿವೆ.

ಡೈರಿಗಳು ಸಿಕ್ಕುವ ವಿಳಾಸ:—

ಮ್ಯಾನೇಜರ್

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು

ನಮ್ಮ ಡೈರಿಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವವು.

ಮೆಸ್ಸರ್ಸ್ ಕೊಟ್ಟಿಕಾರ ಬ್ರದರ್ಸ್, ಉಡುಪಿ.
ಪ್ರಭಾಕರ ಪ್ರೆಸ್, ,,
ಸದಾನಂದ ಪ್ರೆಸ್, ,,
ಬೆಳ್ಳಾರೆ ನರಸಿಂಹ ಮಲ್ಯರು. ಪುತ್ತೂರು.

ಕೊಳೂರ ಅಣ್ಣಪ್ಪ ನ್ಯಾಕ, **ವಿಟ್ಲ.**
ಪಿ. ಪಾಂಡುರಂಗ ನ್ಯಾಕ, ಕುಂಬಳೆ.
ಕೆ ಪಿ. ರಾಮಕೃಷ್ಣ ಶ್ಯಾನಭಾಗರು, **ಕಾಸರಗೋಡು.**
ಗುರ್ಪುರ ವಿಟ್ಲಪ್ರಭು ಬ್ರದರ್ಸ್, **ಬಂಟ್ವಾಳ**
ಎ. ಅಮೃತರಾವ್ ಜವಳಿ ಸಾವಕಾರ. **ಕಾರ್ಕ್ಕಳ**

ಅಚ್ಚಿನಲ್ಲಿರುವುದು! **ಅಚ್ಚಿನಲ್ಲಿರುವುದು!**

ವೆಂಕಟಗಿರಿ ಮಹಾತ್ಮೆ.

ಪದ್ಮಾವತೀ ಕಲ್ಯಾಣದಿಂದ ಪೂರ್ಣವಾಗಿರುವುದು.

(ಸಂಸ್ಕೃತ ಭವಿಷ್ಯತ್ಪುರಾಣದಿಂದ)

ಮಂಗಳೂರಲ್ಲಿ ಸ್ವರ್ಗಸ್ಥರಾಗಿ ಹೋದ ಮುಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿ ಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿರುವುದು.

959 ಪದ್ಯಗಳಿರುವ 15 ಅಧ್ಯಾಯಗಳಿಂದ ಕೂಡಿರುವುದು. ಕಾವ್ಯರಚನೆಯು ಬಹು ಮೃದುರವೂ ಶುಲಭವೂ ಆಗಿರುವುದರಿಂದ ಸರ್ವರಿಗೂ ಅನುನಿತ್ಯಧ ಪಠಣಪುಸ್ತಕವಾಗಿರಲು ಉಚಿತವಾಗಿರುವುದು. ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ವೃತ್ತಾಂತಗಳು ವಾಚಕರ ಮನಃಖಚಿತವಾಗುವಂತೆ ಈ ಗ್ರಂಥವು ಯಥೋಚಿತ ಚಿತ್ರಪಠಗಳಿಂದ **ಕೂಡಿರುವುದು.**

ಕವಿ ಎಂಡ್ ಸನ್ಸ್,
ಮಂಗಳೂರು.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳಿಂದ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೋಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. 3—[illegible]—0 ಆಗಿರುತ್ತದೆ. ಚಂದಾದಾರರಾಗಿ ಸೇರಬೇಕೆನ್ನುವವರು ಈ [illegible] ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, [illegible]

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 18ನೇ ದಶಂಬರ 1914

ಭೂವ್ಯವಸಾಯ ಮತ್ತು ವ್ಯಾಪಾರ ಸಂಬಂಧವಾದ ಸಭೆಯು.

ಈ ತಿಂಗಳ ತಾ. ೧೪ರಲ್ಲು ಈ ಸಂಸ್ಥಾನದ ಸರಕಾರದವರು ಮದ್ರಾಸಿನಲ್ಲಿ ವ್ಯವಸಾಯ ಮತ್ತು ವ್ಯಾಪಾರ ಸಂಬಂಧವಾದ ಸಭೆಯನ್ನು ಜರುಗಿಸಿರುವರು. ಮದ್ರಾಸು ಸಂಸ್ಥಾನದ ಪ್ರಮುಖ ವ್ಯಾಪಾರ ಕಂಪೆನಿಗಳ ಪ್ರತಿನಿಧಿಗಳೂ ವರ್ಗದಾರರ ಮತ್ತು ಜಮೀನುದಾರರ ಪ್ರತಿನಿಧಿಗಳೂ ಒಟ್ಟಿಗೆ ಶುಮಾರು ೬೦ ಜನ ಸಭಾಸದರನ್ನು ಈ ಸಭೆಗೆ ಆಮಂತ್ರಿಸಿದ್ದರು. ಈ ಯುದ್ಧಕಾಲದಲ್ಲಿ ಜರ್ಮನಿಯ ಕೈಗಾರಿಕೆಗಳನ್ನು ಮುರಿದು ಬಿಡಬೇಕೆಂಬುವ ಸಾಹಸವನ್ನು ಅಂಗ್ಲಾಳದಲ್ಲಿ ಪ್ರಜೆಗಳೂ ಸರಕಾರದವರೂ ಕೈಕೊಂಡಿರುವಾಗ ಅದೇ ಪ್ರಯತ್ನಗಳನ್ನು ಇಲ್ಲಿಯು ಸರಕಾರದವರೂ ಪ್ರಜೆಗಳೂ ನಡಿಸುವ ಬಗ್ಯೆ ಈ ಸಭೆಯು ಸರಕಾರದವರಿಂದ ಏರ್ಪಡಿಸೋಣಾಗಿರುವುದೆಂಬ ತಪ್ಪು ಭಾವನೆಯು ಕೆಲವರಲ್ಲಿರುವುದು. ಗವರ್ನರ ದೊರೆಗಳವರಾದ ಮಾನ್ಯ ಪೆಂಟ್‌ಲೆಂಡ್ ಪ್ರಭುಗಳವರು ಸಭೆಯ ಪ್ರಾರಂಭ ಕಾಲದಲ್ಲಿ ಮಾಡಿದ ಭಾಷಣದಿಂದ ಸಭೆಯು ಯಾವ ಬಗ್ಯೆ ಕೂಡೋಣಾಗಿರುವುದೆಂಬುದು ಸರಿಯಾಗಿ ವ್ಯಕ್ತವಾಗುತ್ತದೆ. ಈ ಯುದ್ಧವು ಪ್ರಾಪ್ತವಾಗುವ ಮೊದಲೇ ಸಭೆಯನ್ನು ಜರುಗಿಸಬೇಕೆಂತ ಸರಕಾರದವರು ಉದ್ದೇಶಿಸಿದ್ದರು. ಪ್ರಜಾಜನರ ಸಂಪದಭಿವೃದ್ಧಿಗಾಗಿ ಸರಕಾರದವರು ವಿಶೇಷ ಖರ್ಚುಮಾಡಿ ಸ್ಥಾಪಿಸಿರುವ ವ್ಯವಸಾಯ ಇಲಾಖೆಯವರು ತಮ್ಮ ಪ್ರಯತ್ನಗಳನ್ನು ಯಾವ ರೀತಿ ನಡಿಸಿದರೆ ಅವು ಜನರಿಗೆ ವಿಶೇಷ ಫಲಕಾರಿಯಾಗುವವೆಂಬುದನ್ನು ಸರಿಯಾಗಿ ಗೊತ್ತುಮಾಡಿಕೊಳ್ಳುವುದು ಈ ಸಭೆಯ ಉದ್ದೇಶಗಳಲ್ಲಿ ಒಂದಾಗಿದೆ. ಆದ್ದರಿಂದ ಈ ದೇಶದ ಭೂ ಉತ್ಪತ್ತಿಗಳನ್ನು ಕ್ರಯಕ್ಕೆ ಪಡದು ಅವುಗಳನ್ನು ವಿದೇಶಗಳಿಗೆ ಕಳುಹಿಸಿಕೊಡುವ ಯುರೋಪಿಯ ಕಂಪೆನಿಗಳ ಪ್ರತಿನಿಧಿಗಳು ಈ ಸಭೆಯಲ್ಲಿದ್ದರು. ಮದ್ರಾಸು ಸಂಸ್ಥಾನದಲ್ಲಿ ಇಂಥಾ ವ್ಯಾಪಾರ ಕಂಪೆನಿಗಳಿಗೆ ಬೇಕಾದ ಭೂ ಉತ್ಪತ್ತಿಗಳು ಯಾವವು, ಎಂಥಾ ರೀತಿಗಳಲ್ಲಿ ಅವುಗಳನ್ನು ಬೆಳಸಿದರೆ ವಿದೇಶಗಳಲ್ಲಿ ಇವುಗಳಿಗೆ ಗಿರಾಕಿಯು ವಿಶೇಷವಾಗಿ ದೊರಕುವುದು ಎಂಬೀ ವಿವರವು ಕೃಷಿ ಇಲಾಖೆಯವರಿಗೆ ತಿಳಿದರೆ ಅಂಥವುಗಳ ವ್ಯವಸಾಯವು ಸರಿಯಾದ ರೀತಿ ನಡೆಯುವಂತೆ ಪ್ರಯತ್ನಿಸಲು ಕೃಷಿ ಇಲಾಖೆಯವರಿಗೆ ಆಸ್ಪದ ದೊರಕುತ್ತದೆ. ಲಾಭಕರವಾದ ಪೈರುಗಳು ಯಾವವು, ಅವಕ್ಕೆ ಗಿರಾಕಿ ಯಾವ ರೀತಿ ಇರುವುದು, ಅವನ್ನು ಯಾವ ವಿಧದಲ್ಲಿ ಬೆಳಸಬೇಕೆಂಬುವ ಅನುಭವವು ವ್ಯವಸಾಯ ಇಲಾಖೆಯವರ ಮೂಲಕ ರೈತರಿಗೆ ದೊರಕುವುದರಿಂದ ರೈತರು ವ್ಯವಸಾಯ ಇಲಾಖೆಯವರಲ್ಲ ಹೆಚ್ಚಿನ ವಿಶ್ವಾಸವಿಟ್ಟು ನಡೆಯುವರು. ಈ ಇಲಾಖೆಯವರ ಬೋಧೆಯನ್ನು ಅನುಸರಿಸಿ ನಡೆದರೆ ತಮಗೆ ಹಣ ಕಾಸು ದೊರಿಯಲು ಮಾರ್ಗವಾಗುವದೆಂಬ ಅನುಭವವು ರೈತರಿಗೆ ಈ ಮೂಲಕ ಪ್ರಾಪ್ತವಾಗಿ ರೈತರು ಈ ಇಲಾಖೆಯವರಿಂದ ಪ್ರಯೋಜನವನ್ನು ಈಗಿನಕ್ಕಿಂತಲೂ ಹೆಚ್ಚಾಗಿ ಪಡಿಯುವರು. ವ್ಯವಸಾಯದ ನೂತನ ಉಪಕರಣಗಳನ್ನು ವಿದೇಶಗಳಿಂದ ತರಿಸಿಕೊಡುವ ಕಾರಖಾನೆಗಳ ಪ್ರತಿನಿಧಿಗಳೂ ವರ್ಗದಾರರ ಮತ್ತು ಜಮೀನುದಾರರ ಪ್ರತಿನಿಧಿಗಳೂ ಈ ಸಭೆಯಲ್ಲಿರುವುದರಿಂದ ಈ ಭಾಗದಲ್ಲಿ ಕಂಪೆನಿಗಳ ಪ್ರತಿನಿಧಿಗಳಿಗೆ ವ್ಯವಸಾಯಗಾರರಿಗೆ ಬೇಕಾದದ್ದನ್ನು ಹೇಳಲಿಕ್ಕೂ ಈ ಉಪಕರಣಗಳ ವಿಷಯ ಕೃಷಿಕರಿಗೆ ಬೇಕಾದ ಮಾಹಿತಿಯನ್ನು ಪಡಿಯಲಿಕ್ಕೂ ಸಾಧ್ಯವಾಗುತ್ತದೆ. ಇಷ್ಟಲ್ಲದೆ ವ್ಯವಸಾಯಗಾರರೂ ಇವರಿಂದ ಪೈದಾಸ್ತು ಮಾಡೋಣಾಗುವ ಜೀನಸುಗಳನ್ನು ಪಡಕೊಳ್ಳುವ ವರ್ತಕರೂ ಒಟ್ಟುಕೂಡುವ ಅಪರೂಪ ಸಂದರ್ಭವು ಈ ಸಭೆಯ ಮೂಲಕ ಪ್ರಾಪ್ತವಾಗುವದರಿಂದ ರೈತರಿಗೆ ಈ ಸಭೆಯು ವಿಶೇಷ ಫಲದಾಯಕವಾಗಿ ಪರಿಣಮಿಸಬಹುದು.

ಸಭೆ ಕೂಡಿದ ಪ್ರಥಮ ದಿವಸ [illegible], ಮತ್ತು [illegible]— ಈ ಮೂರು ವಿಷಯಗಳ ಈ ಬಗ್ಗೆ [illegible] ವಾದಿಸಲ್ಪಟ್ಟವು. [illegible] ರಿಗೆ ಬೇಕಾದ ಉಪಕರಣಗಳು, ಹೊಗೆಸೊಪ್ಪು, ಸಣಬು, ದಾವಿಗಳ ನೀರಾವರಿ, ಗೊಬ್ಬರ ಮತ್ತು ತೆಂಗಿನಕಾಯಿ— ಈ ವಿಷಯಗಳು ಸಹ ವಾದಿಸಲ್ಪಟ್ಟವು.

ವ್ಯವಸಾಯ ಇಲಾಖೆಯ ಮೂಲಕ ಈ ಸಂಸ್ಥಾನದ ಸಂಪದಭಿವೃದ್ಧಿಯನ್ನು ಸಾಧಿಸಲುದ್ದೇಶಿಸಿರುವ ಸರಕಾರದವರ ಶ್ರಮಕ್ಕೋಸ್ಕರ ಸರ್ವರೂ ಕೃತಜ್ಞರಾಗಿರುವರು. ಆದರೆ ಇಲ್ಲಿಯ ಭೂ ಉತ್ಪತ್ತಿಯನ್ನು ರೂಪಾಂತರಗೊಳಿಸಿ ಇಲ್ಲಿಗೇನೇ ಮಾರಾಟಕ್ಕೆ ಕಳುಹಿಸಿಕೊಡುವ ಕೈಗಾರಿಕೆ ಕಾರ್ಖಾನೆಗಳು ಈ ಸಂಸ್ಥಾನದಲ್ಲಿ ವಿರಳವಾಗಿರುವುದರಿಂದ ಈ ಕೊರತೆಯಿಂದ ನಮ್ಮ ಸಂಸ್ಥಾನಕ್ಕೆ ನಷ್ಟವು ಉಂಟಾಗದಂತೆ ಮಾಡುವುದು ಸಹ ಸರಕಾರದವರ ಹಂಗಾಗಿರುತ್ತದೆ. ಇಂಥಾ ಹಂಗನ್ನು ಬ್ರಿಟಿಷ ಸರಕಾರದವರು ಅಂಗ್ಲಾಳದಲ್ಲಿ [illegible]ಕೊಂಡು ಪ್ರಜಾಜನಗಳಿಗೆ ಬೇಕಾದ ಸಹಾಯವನ್ನು ವಿಶೇಷ ಉತ್ಸಾಹದಿಂದ ಮಾಡುತ್ತಿರುವರು. ಜರ್ಮನಿಯಲ್ಲಿ ಈ ತನಕ ತಯ್ಯಾರಾಗುತ್ತಿದ್ದು ಜಗತ್ತಿಗೆಲ್ಲಾ ಜರ್ಮನಿಯಿಂದಲೇ ಕಳುಹಿಸಿಕೊಡೋಣಾಗುವ ಬಣ್ಣಗಳನ್ನು ತಯ್ಯಾರಿಸಲು ಬ್ರಿಟಿಷರು ನಿಶ್ಚಯಿಸಿರುವರು. ಈ ಬಗ್ಯೆ ಹಲವು ಮಿಲಿಯ ಪವನುಗಳ ಭಂಡವಾಳವುಳ್ಳ ಕಂಪೆನಿಯು ಇತ್ತಲಾಗೆ ಸ್ಥಾಪಿಸೋಣಾಗಿದೆ. ಬ್ರಿಟಿಷ ಸರಕಾರದವರು ಕೆಲವು ಮಿಲಿಯ ಪವನುಗಳ ಮೌಲ್ಯದ ಪಾಲುಗಳನ್ನು ಈ ಕಂಪೆನಿಯಲ್ಲಿ ಪಡದು ಪ್ರಜಾಜನರಿಗೆ ಅಗತ್ಯವಾದ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ. ಸಾಮ್ರಾಜ್ಯ ಸರಕಾರದವರ ಈ ವರ್ತನೆಯನ್ನು ನೋಡಿಕೊಂಡು ಅವರಿಂದಲೇ ನಿರ್ಮಿತವಾದ ನಮ್ಮ ಸರಕಾರದವರು ಪ್ರಜಾಜನರ ಒಳ್ಳಿತಕ್ಕಾಗಿ ಅಂಥಾ ವರ್ತನೆಯನ್ನು ಇಲ್ಲಿ ಅನುಸರಿಸುವುದು ಕರ್ತವ್ಯವಾಗಿರುವುದು. ಎಂಥೆಂಥಾ ಜಿನಸುಗಳನ್ನು ಸರಕಾರದವರ ಸಹಾಯವಿದ್ದರೆ ಇಲ್ಲಿ ನಾವು ಅಲ್ಪ ಶ್ರಮದಿಂದ ತಯ್ಯಾರಿಸಬಹುದೆಂಬುದು ಈ ಕಾಲದಲ್ಲಿ ವ್ಯಕ್ತವಾದಂತೆ ಇತರ ಯಾವ ಕಾಲದಲ್ಲಿಯಾದರೂ ವ್ಯಕ್ತವಾಗಲಾರದು. ದೇಶದಲ್ಲಿಯೇ ತಯ್ಯಾರಾಗುವ ವಸ್ತುಗಳಿಗೆ ಗಿರಾಕಿಯು ಈಗ ಸಿಕ್ಕಲು ಸಂದರ್ಭ ದೊರಕಿದಂತೆ ಮತ್ತ್ಯಾವಾಗಲೂ ದೊರಕದು. ಆದ್ದರಿಂದ ವ್ಯವಸಾಯ ಇಲಾಖೆಯಲ್ಲಿ ತೋರ್ಪಡಿಸಿದ ಉತ್ಸಾಹವನ್ನು ಸರಕಾರದವರು ಕೈಗಾರಿಕೆಗಳನ್ನು ಸ್ಥಾಪಿಸುವುದರಲ್ಲಿ ಸಹ ತೋರಿಸಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇವೆ.

ಮದ್ರಾಸಿನಲ್ಲಿ ಕೂಡುವ ರಾಷ್ಟ್ರೀಯ ಸಭೆಯು.

ಇನ್ನು ಕೆಲವು ದಿನಗಳಲ್ಲಿಯೇ ಮದ್ರಾಸಿನಲ್ಲಿ "ನೆಶನಲ್ ಕೊಂಗ್ರೆಸ್" ಎಂಬ ರಾಷ್ಟ್ರೀಯ ಸಭೆಯು ಜರಗುವುದು. ದೇಶದ ರಾಜಕೀಯ ಪ್ರಗತಿಯು ಈ ಸಭೆಯಲ್ಲಿ ನಿಧಾನಿಸಲ್ಪಡುವದಲ್ಲದೆ ರಾಜ್ಯದಾಡಳಿತೆಯ ವಿಚಾರಗಳಲ್ಲಿ ಪ್ರಜಾಜನರ ಮತ್ತು ಸರಕಾರದವರ ಸಂಬಂಧವು ಈ ಸಭೆಯಲ್ಲಿ ಪರಿಶೀಲಿಸಲ್ಪಡುವುದು. ಈಗಲೀಗ ಸರಕಾರದವರ ವಿಶ್ವಾಸಕ್ಕೆ ಪ್ರಜೆಗಳು ಹೆಚ್ಚೆಚ್ಚಾಗಿ ಅರ್ಹರಾಗುತ್ತ ಬರುವುದನ್ನು ನೋಡಿ ಆಡಳಿತೆಯ ಕಾರ್ಯನಿರ್ವಾಹಗಳಲ್ಲಿ ಪ್ರಜಾಜನರಿಗೆ ಅಧಿಕವಾದ ಹಕ್ಕು ಸ್ವಾತಂತ್ರಗಳು ಪ್ರಾಪ್ತವಾಗುತ್ತಿರುವವು. ಈಗ ಸಂಭವಿಸಿರುವ ಯುದ್ಧಕಾಲದಲ್ಲಿ ಭಾರತೀಯರೆಲ್ಲರೂ ಹೃತ್ಪೂರ್ವಕವಾಗಿ ತೋರಿಸಿರುವ ರಾಜಪ್ರೇಮ, ಭಕ್ತಿವಿಶ್ವಾಸಗಳಿಂದ ನಮ್ಮ ಮೇಲೆ ನಮ್ಮ ಆಣ್ಮರಿಗೆ ಅಧಿಕವಾದ ವಿಶ್ವಾಸವೂ ಮೆಚ್ಚಿಗೆಯೂ ಉಂಟಾಗಿರುವುದು. ಯುದ್ಧ ಮುಗಿದೊಡನೆ ನಮ್ಮ ಮೇಲಿರುವ ವಿಶ್ವಾಸವನ್ನು ಯಥೋಚಿತ ರೀತಿಯಲ್ಲಿ ತೋರ್ಪಡಿಸಿ ರಾಜ್ಯದಾಡಳಿತೆಯಲ್ಲಿ ಇನ್ನು ಹೆಚ್ಚಿನ ರಿಯಾಯತಿಗಳು ನಮಗೆ [illegible] ಣಾಗುವ ಸಂಭವಗಳಿವೆ. ಆದ್ದರಿಂದ ಈ ರಿಯಾಯತಿಗಳಿಗೆ ನಾವು ಮತ್ತಷ್ಟು [illegible] ರಾಗುವಂತೆ ನಮ್ಮ ಸಂಸ್ಥಾನದಲ್ಲಿ ನಮಗೆ ಅನು[illegible] ಸಭೆಗೆ ಈ ಜಿಲ್ಲೆಯಿಂದ ಪ್ರಜಾಪ್ರತಿನಿಧಿಗಳು [illegible] ಮಾಹಿತಿಯನ್ನು ಜನರ ಉದ್ಧರಣೆ ಬಗ್ಗೆ [illegible] ಇಲ್ಲಿಯ [illegible]

ಸ್ತ್ರೀವಿದ್ಯಾಭ್ಯಾಸವು ಹಿಂದು ದೇಶದ ಏಳಿಗೆಗೆ ಅತ್ಯಾವಶ್ಯಕವು.

II

ಮತವಿಚಾರ.

ನಮ್ಮ ದೇಶವು ವೃದ್ಧಿಸ್ಥಿತಿಗೆ ಬರಲು ಕೆಲವು ಮುಖ್ಯಾಂಶಗಳಿರುವವು. ಅವುಗಳಲ್ಲಿ ಚಿಕ್ಕದಾದ ಮಕ್ಕಳ ಏಳಿಗೆಗೆ ಹೆಂಗಸರ ವಿದ್ಯಾಭ್ಯಾಸವು ಎಷ್ಟು ಅವಶ್ಯಕವೆಂಬ ಸಂಗತಿಯನ್ನು ಹಿಂದೆ ಕೊಂಚಮಟ್ಟಿಗೆ ಸೂಚಿಸಿತು. ಸರಿಯಾದ ತಿಳುವಳಿಕೆ ಮತ್ತು ಅಭ್ಯಾಸಗಳಿಂದ ಕೂಡಿದ ಮತಶ್ರದ್ಧೆಯು ಇನ್ನೊಂದು ಮುಖ್ಯಾಂಶವು. ಇದಕ್ಕೂ ಸಹ ಸ್ತ್ರೀವಿದ್ಯಾಭ್ಯಾಸವು ಹೇಗೆ ಅವಶ್ಯಕವೆಂಬುದನ್ನು ಈಗ ಕೊಂಚ ನೋಡೋಣ.

ಈ ವಿಚಿತ್ರವಾದ ಪ್ರಪಂಚವನ್ನು ಸೃಷ್ಟಿಸಿದವನು ಯಾರು, ಆತನು ಎಲ್ಲಿರುವನು, ಹೇಗಿರುವನು, ಏನು ಮಾಡುತ್ತಿರುವನು, ಈ ಪ್ರಪಂಚವು ಎಂಥಾದ್ದು, ನಾವು ಇಲ್ಲಿ ಹುಟ್ಟಿರುವುದು ಏಕೆ, ನಾವ್ಯಾರು, ಎಲ್ಲಿಂದ ಬಂದಿರುವೆವು, ನಮಗೆ ಆಗಬೇಕಾದದ್ದೇನು, ಅದನ್ನು ಹೊಂದಲು ಇಲ್ಲಿ ನಾವು ಏನು ಮಾಡಬೇಕು, ಹೇಗೆ ಮಾಡಬೇಕು, ಇಷ್ಟು ವಿಧವಾದ ಜನರು ಈ ಕಾಲದಲ್ಲಿ ಇಲ್ಲಿ ಹುಟ್ಟಲು ಕಾರಣವೇನು, ನಾವು ಇಲ್ಲಿ ಯಾವ ವಿಧದಲ್ಲಿ ನಡೆದುಕೊಂಡರೆ ನಮ್ಮ ಪರಮೋದ್ದೇಶ ಸಾಧನೆಗೆ ಅನುಕೂಲವಾಗುವುದು, ಎಂಬ ಇವೇ ಮೊದಲಾದ ಸಂಗತಿಗಳನ್ನು ತಿಳಿದುಕೊಳ್ಳಲು ಏರ್ಪಟ್ಟ ದಾರಿಗಳೇ ಮತಗಳಷ್ಟೆ. ಅಂತಹ ದಾರಿಗಳೇ ಇಲ್ಲದೆ ಹೋದರೆ ದಿಕ್ಕಿಲ್ಲದ ಪ್ರಪಂಚದಲ್ಲಿ ಹುಚ್ಚುಹುಚ್ಚಾಗಿ ಕೆಲಸಮಾಡಿ, ಬಾಯಿಗೆ ಬಂದಹಾಗೆ ಮಾತನಾಡಿ, ಸ್ವೇಚ್ಛೆಯಾಗಿ ಮನಸ್ಸಿಗೆ ತೋರಿದ್ದನ್ನೆಲ್ಲಾ ಯೋಚಿಸಿ, ಕಂಡದ್ದನ್ನೆಲ್ಲಾ ಹಿತಾಹಿತಗಳನ್ನು ತಿಳಿಯದೆ ಆಶಿಸಿ, ಗೊತ್ತೂ ಗುರಿಯೂ ಇಲ್ಲದ ಫಲವನ್ನು ಅನುಭವಿಸುವುದಾದರೆ ಅನಾಯಕವಾದ ಇಂಥಾ ಪ್ರಪಂಚದಲ್ಲಿ ಜೀವಿಸುವುದು ಹೇಗೆ? ಹಾಗಿಲ್ಲದೆ, ಎಲ್ಲವನ್ನೂ ಸೃಷ್ಟಿಸಿದ ಸರ್ವ ಚೈತನ್ಯನಾದ ಭಗವಂತನೊಬ್ಬನು ಸರ್ವಾಂತರ್ಯಾಮಿಯಾಗಿ ಎಲ್ಲಾ ಕಡೆಯಲ್ಲೂ ಇರುವನು. ಎಲ್ಲವನ್ನೂ ನೋಡುತ್ತಿರುವನು. ದಯಾಸಮುದ್ರನು. ನ್ಯಾಯಸ್ವರೂಪನು. ಆತನ ಅಂಶಗಳಾದ ಶಾಶ್ವತರಾದ ಜನರು ನಾವು. ಆತನಂತೆಯೇ ನಾವೂ ಸಹಾ ಈ ಲೋಕದಲ್ಲಿ ಶಕ್ತಿಜ್ಞಾನಾನಂದಗಳಲ್ಲಿ ವೃದ್ಧಿಯಾಗುತ್ತಾ, ಆತನಂತೆಯೇ ಭೂತಸೇವೆಯನ್ನು ಮಾಡಲು ನಮ್ಮನ್ನು ಇಲ್ಲಿಗೆ ತಂದಿರುವನು. ಆತನು ನಮ್ಮನ್ನು ಪೋಷಿಸಿ ಬೆಳೆಸುತ್ತಿರುವನು. ಪರಲೋಕದಲ್ಲಿರುವ ಆತನ ಶಕ್ತಿಜ್ಞಾನಾನಂದಗಳನ್ನು ಈ ಲೋಕಗಳಲ್ಲಿ ನಾವು ನಮ್ಮ ಪ್ರಯತ್ನಾನುಸಾರ ಸಂಪಾದಿಸುವುದಕ್ಕೆ ಅನುಕೂಲವಾಗಿರುವಂತೆ ದೇಹಗಳನ್ನು ಕೊಡುತ್ತಿರುವನು. ಅವುಗಳನ್ನು ಸಂಪಾದಿಸುವ ಮಾರ್ಗವನ್ನು ತಿಳಿದು ಅದರಂತೆ ಆಚರಿಸುತ್ತ ಬರಬೇಕು. ಇವುಗಳನ್ನು ಅಭ್ಯಾಸಿಸಿ ನಮಗಿಂತಲೂ ಹೆಚ್ಚಾಗಿ ಅನುಭವ ಹೊಂದಿದವರು ಇರುವರು. ಅವರು ನಮಗೆ ಮಾರ್ಗವನ್ನು ತೋರಿಸಿ ನಮ್ಮನ್ನು ನಡೆಸಲು ಸಿದ್ಧರಾಗಿರುವರು. ನಾವು ಅದನ್ನು ತಿಳಿದು ಅಭ್ಯಾಸಿಸುತ್ತಾ, ಇತರರೂ ಸಹ ಅಂತಹ ಶಕ್ತಿಜ್ಞಾನಾನಂದಗಳನ್ನು ಹೊಂದಲು ಸಹಾಯ ಮಾಡುತ್ತಾ ಬರಬೇಕು.

ಮಾಡಬೇಕಾದದ್ದು ಯಾವುದು, ಬಿಡಬೇಕಾದದ್ದು ಯಾವುದು, ಧರ್ಮಾಧರ್ಮಗಳೆಂದರೇನು, ಪುಣ್ಯಪಾಪಗಳೆಂದರೇನು, ಸ್ವರ್ಗನರಕಗಳೆಂದರೇನು, ಅವು ಎಲ್ಲಿ ಹೋಗಿರುವವು, ಇಲ್ಲಿ ನಾವು ಮಾಡುವ ಕೆಲಸ, ಆಡುವ ಮಾತು, ಕೋರುವ ಕೋರಿಕೆ, ಚಿಂತಿಸುವ ಯೋಚನೆ, ಇವುಗಳಿಗೂ ಸ್ವರ್ಗನರಕಗಳಿಗೂ ಏನು ಸಂಬಂಧ ಎಂಬ ಸಂಗತಿಗಳನ್ನು ಸ್ತ್ರೀಪುರುಷರಿಬ್ಬರೂ ತಿಳಿಯಬೇಕಾದುದಲ್ಲವೆ?

ಮನಸ್ಸು ಎಂತಹ ಬಲವತ್ತರವಾದದ್ದು, ಅದು ನಮ್ಮನ್ನು ಹೇಗೆ ಸಿಕ್ಕಿದ ಕಡೆ ಎಳೆದುಕೊಂಡು ಹೋಗುತ್ತಿರುವುದು, ಅದು ಏಕೆ ಹಾಗೆ ಮಾಡುವುದು, ಅದರ ಸ್ವಭಾವವೇನು, ಮನಸ್ಸು ಕೆಟ್ಟದ್ದರಲ್ಲಿ ಏಕೆ ಪ್ರವೇಶಿಸುವುದು, ಆ ಮಾರ್ಗವನ್ನು ತಪ್ಪಿಸಿ ಒಳ್ಳೇ ಮಾರ್ಗದಲ್ಲಿ ನಡೆಸುವುದು ಹೇಗೆ ಮೊದಲಾದ ಸಂಗತಿಗಳನ್ನು ತಿಳಿಯಬೇಕಾದದ್ದು ಗಂಡಸರಿಗೆ ಎಷ್ಟು ಅವಶ್ಯಕವೋ ಹೆಂಗಸರಿಗೆ ಅದಕ್ಕಿಂತಲೂ ಹೆಚ್ಚು ಅವಶ್ಯಕವಲ್ಲವೇ?

ಭಗವಂತನ ಸಂಕಲ್ಪವೊಂದಿರುವುದು. ಅದನ್ನರಿತು, ಹೇಗೆ ಮಾಡಿದರೆ ಅದಕ್ಕೆ ಸಹಾಯವಾಗುವುದೋ ಅದನ್ನು ತಿಳಿದು, ಹಾಗೆ ಮಾಡುವುದು ಒಳ್ಳೇದು; ಅದನ್ನರಿಯದೆ ಅದಕ್ಕೆ ವಿರೋಧವಾಗಿ ಕೆಲಸ ಮಾಡುವುದು ಕೆಟ್ಟದ್ದು. ಭಗವಂತನ ಸಂಕಲ್ಪಕ್ಕೆ ಅನುಕೂಲವಾದದ್ದು ಇಂಥಾದ್ದು, ಅದಕ್ಕೆ ಪ್ರತಿಕೂಲವಾದದ್ದು ಇಂಥಾದ್ದು. ಒಳ್ಳೇದನ್ನು ಸಾಧಿಸುವುದು ಹೇಗೆ, ಕೆಟ್ಟದ್ದನ್ನು ಬಿಡುವುದು ಹೇಗೆ ಎಂಬ ಇವೇ ಮೊದಲಾದ ಸಂಗತಿಗಳ ಸಾರವನ್ನು ಬೋಧಿಸಿ, ಆಚರಣೆಗೆ ತರುವ ಮಾರ್ಗವನ್ನು ತೋರಿಸತಕ್ಕದ್ದೇ ಮತವು. ಮನುಷ್ಯರೆಲ್ಲರೂ ಭಗವಂತನ ಅಂಶರೆಂದೂ ಸಹೋದರರೆಂದೂ ಅನುಭವದಿಂದ ತಿಳಿಯಬೇಕು, ಒಬ್ಬರಿಗೊಬ್ಬರು ಪ್ರೀತಿಯಿಂದ ಕಲೆತು, ಪರಸ್ಪರ ಸಹಾಯದಿಂದ ಜ್ಞಾನವೃದ್ಧಿಹೊಂದಿ, ಪರಮ ಸುಖವನ್ನು ಎಲ್ಲರೂ ಹೊಂದಬೇಕು ಎಂಬುದೇ ಭಗವತ್ಸಂಕಲ್ಪವು. ಅದಕ್ಕಾಗಿಯೇ ದೇವರು ಇಷ್ಟು ವಿಧವಾದ ಸ್ವಭಾವ, ತಿಳುವಳಿಕೆ, ಭಾಷೆ, ಆಚಾರ, ನಡೆನುಡಿಗಳುಳ್ಳವರನ್ನು ಈ ಲೋಕದಲ್ಲಿ ಸೃಷ್ಟಿಸಿರುವನು. ಈ ಇಷ್ಟು ಭೇದಗಳ ಮಧ್ಯದಲ್ಲಿ ನಾವು ಪ್ರೀತಿಭಾವದಿಂದ ಒಂದಾಗಿ ಕೆಲಸ ಮಾಡುವುದನ್ನು ಕಲಿಸಬೇಕಾದ್ದೇ ಮತವು. ಮತವು ಒಳ್ಳೇದು ಕೆಟ್ಟದ್ದರ ವಿವೇಚನೆಗೆ ಆಸ್ತಿವಾರವು; ಸ್ವಾರ್ಥತೆಯನ್ನು ಕೊಂಚಕೊಂಚವಾಗಿ ಹೋಗಲಾಡಿಸುವುದಕ್ಕೂ, ಕಷ್ಟ ನಷ್ಟ ದುಃಖಗಳನ್ನಾದರೂ ಸಹಿಸಿ ಸಂತೋಷವಾಗಿ ಇತರರ ಮೇಲಿಗಾಗಿ ಕೆಲಸ ಮಾಡಬೇಕೆಂಬ ಪರಾರ್ಥವನ್ನು ಹೆಚ್ಚಿಸುವುದಕ್ಕೂ ಮತವೇ ಆಧಾರವು. ಪರಾರ್ಥಕ್ಕಾಗಿ ಕೆಲಸ ಮಾಡುವವರಿಲ್ಲದ ದೇಶವು ಎಂದಿಗೂ ತಲೆ ಎತ್ತದು. ನಮ್ಮ ದೇಶೀಯರಲ್ಲಿ ಪರಸ್ಪರ ವಿರೋಧಗಳಿಗೆ ಕಾರಣವಾಗಿರುವ ಮತವೇ ಪರಸ್ಪರ ಪ್ರೀತಿ, ಮತ್ತು ಪರಾರ್ಥಕ್ಕೂ ದೇಶದ ಏಳಿಗೆಗೂ ಆಧಾರ ಭೂತವಾಗಿರುವುದು. ಒಂದೊಂದು ಮತವೂ ಅಂತಹ ಪ್ರೀತಿ ಪರಾರ್ಥಯುಕ್ತವಾದ ದೇಶ ಸೇವೆಗೆ ಒಂದೊಂದು ಮಾರ್ಗವು.

ಮತಗಳ ಹೊರವೇಷ ಆಚಾರ ನಡೆನುಡಿಗಳು ಎಷ್ಟೇ ವ್ಯತ್ಯಾಸಗಳಾಗಿ ಕಾಣುತ್ತಿದ್ದರೂ ಒಳಸಾರವನ್ನರಿತು ಶ್ರದ್ಧೆಯಿಂದ ಕೆಲಸ ಮಾಡಿದಲ್ಲಿ ಪ್ರಜೆಗಳಲ್ಲಿ ಪರಸ್ಪರ ಅನ್ಯೋನ್ಯಭಾವವೂ, ಪ್ರಜೆಗಳಿಗೂ ಪ್ರಭುಗಳಿಗೂ ಪ್ರೇಮಾಧಿಕ್ಯತೆಯಿಂದ ಸಮಬುದ್ಧಿಯೂ ಉಂಟಾಗಿ ಭಾರತ ಮಾತೆಯು ಉತ್ತಮೋತ್ತಮ ಪದವಿಯನ್ನು ಹೊಂದುವಳು.

ಹೆಂಗಸರಲ್ಲಿ ಗಂಡಸರಿಗಿಂತಲೂ ಮತದಲ್ಲಿ ಶ್ರದ್ಧೆಯು ಹೆಚ್ಚಾಗಿರುವುದು ನಿಜ. ಆದ್ದರಿಂದಲೇ ಅವರಿಗೆ ಮತವಿಚಾರದಲ್ಲಿ ಹೆಚ್ಚು ತಿಳುವಳಿಕೆಯು ಅವಶ್ಯಕವೆಂಬುವುದು. ಇಲ್ಲದಿದ್ದರೆ ಹೆಚ್ಚು ವಿರೋಧಕ್ಕೂ ಅನರ್ಥಕ್ಕೂ ಕಾರಣವಾಗುವುದು. ಭಕ್ತಿ ಇಲ್ಲದ ಜ್ಞಾನವು ಹೆಣಕ್ಕೆ ಮಾಡಿದ ಶೃಂಗಾರದಂತೆಯೂ, ಜ್ಞಾನವಿಲ್ಲದ ಭಕ್ತಿಯು ಕುರುಡನ ಕೈ ಹಿಡಿದು ನಡೆಯುವ ಕುರುಡನಂತೆಯೂ ಆಗುವುವು. ಭಕ್ತಿಜ್ಞಾನಗಳೆರಡೂ ಆಚರಣೆಗೆ ಬಾರದಿದ್ದರೆ ಕನ್ನಡಿಯೊಳಗಿನ ಗಂಟಿನಂತೆ ಪ್ರಯೋಜನವಿಲ್ಲದೆ ಹೋಗುವುದು. ಆದ್ದರಿಂದ ಮತವು ಭಕ್ತಿಜ್ಞಾನ ಆಚರಣೆ ಈ ಮೂರರಿಂದಲೂ ಕೂಡಿದ್ದಾಗಿಯೂ ಹೊರಜಾತಿ ಕುಲಗೋತ್ರ ದೇಶ ಭಾಷೆಗಳು ಎಷ್ಟೇ ಬೇರೆಬೇರೆಯಾಗಿದ್ದರೂ ಸಾರವನ್ನು ತೋರಿಸಿ, ಒಬ್ಬೊಬ್ಬರಿಗೆ ಪ್ರೀತಿಯನ್ನು ಹೆಚ್ಚಿಸತಕ್ಕದ್ದಾಗಿಯೂ ಸ್ವಾರ್ಥತೆಯನ್ನು ಬಿಡಿಸಿ, ಪ್ರೀತಿ ವಿವೇಕಗಳಿಂದ ಪರಾರ್ಥಕ್ಕೆ ಕೆಲಸ ಮಾಡಿಸತಕ್ಕದ್ದಾಗಿಯೂ ಪರಾರ್ಥಸಾಧಕವಾದದ್ದಾಗಿಯೂ ಇರಬೇಕು. ಹೆಂಗಸರು ಇದೆಲ್ಲವನ್ನೂ ಅರಿತು ಪ್ರೀತಿಯಿಂದ ಗಂಡಸರೊಡನೆ ಕಲೆತು ದೇಶದ ಮೇಲ್ಗಾಗಿ ಕೆಲಸ ಮಾಡದಿದ್ದರೆ ಭಾರತ ಮಾತೆಯು ಉತ್ತಮ ಸ್ಥಿತಿಗೆ ಬರುವುದು ಹೇಗೆ? ಇದೊಂದು ಕಾರಣವನ್ನು ನೋಡಿದರೂ ದೇಶದ ಏಳಿಗೆಗೆ ಸ್ತ್ರೀವಿದ್ಯಾಭ್ಯಾಸವು ಎಷ್ಟು ಅವಶ್ಯಕವೆಂಬುದು ಗೊತ್ತಾಗುವುದು. ಮುಂದೆ ಇನ್ನೊಂದು ಕಾರಣವನ್ನು ವಿಚಾರಿಸೋಣ.

ಕೆ. ನರಹರಿಶಾಸ್ತ್ರಿ.

ಪತ್ರವ್ಯವಹಾರ.

ಸ್ವದೇಶಾಭಿಮಾನಿ ಕರ್ತರೇ,

ನಮ್ಮ ಹಿಂದೂಸ್ಥಾನ ಯಾನೆ ಭರತ ಖಂಡದಲ್ಲಿ ಪೂರ್ವಕಾಲದಲ್ಲಿ ಪಾಂಡವರಿಗೂ, ಕೌರವರಿಗೂ ನಡೆದ ಯುದ್ಧವು ಪುರಾಣೋಕ್ತಿಯಾಗಿಯದೆ. ಈಗ ಯುರೋಪ ಖಂಡದಲ್ಲಿ ನಡೆಯುವ ಘೋರ ಯುದ್ಧವು ಅದೇ ರೀತಿಯಲ್ಲಿ, ಇನ್ನು ಕೆಲವು ಶತಮಾನಗಳ ನಂತರ ತೋರಿಬರುವುದು. ಆ ಕುರುಕ್ಷೇತ್ರದ ಯುದ್ಧದಲ್ಲಿ ಜನಸ್ತೋಮಗಳು ಲಯವಾಗಿ ಮೂರು ನಾಲ್ಕು ಶತಮಾನಗಳ ವರೆಗೆ ಈ ಭರತ ಖಂಡದಲ್ಲಿ ಹೆಚ್ಚಿನ ವ್ಯವಸ್ಥೆಗಳು ನಡಿಯಲಿಕ್ಕೆ ಉಪಾಯವೇ ಇರಲಿಲ್ಲವಂತೆ. ಈಗ ನಡೆಯುವ ಭಯಂಕರವಾದ ಯುದ್ಧದಿಂದ ಈ ಭರತ ಖಂಡದ ಜನಸಂಖ್ಯೆಯಲ್ಲಿ ಹೆಚ್ಚು ನಷ್ಟ ತೋರಿಬಾರದೆ ಇದ್ದರೂ ಈ ದೇಶದ ಜನರ ಜೀವನೋಪಾಯವು ಬಹು ಅವಸ್ಥೆಗೆ ಬರಲಿಕ್ಕೆ ಏನೂ ಸಂದೇಹವಿಲ್ಲ.

ನಮಗೆ ಬೇಕಾದ ಹಾರೆ ಗುದ್ದಲಿಗಳಾಗಾಯಿತು ನಾವು ತಿನ್ನುವ ಸಕ್ಕರೆ ಮತ್ತು ಉಟ್ಟುಕೊಳ್ಳುವ ಬಟ್ಟೆ ವಸ್ತ್ರ ಎಲ್ಲಾ ಜಿನಸುಗಳು ವಿಲಾಯತಿಯಿಂದಲೇ ಬರುವಂತಾದ್ದಾದ ಕಾರಣ ಈ ಎಲ್ಲಾ ಜಿನಸುಗಳ ಕ್ರಯವು ಏರುವುದಲ್ಲದೆ ನಮ್ಮ ಈ ದೇಶದಲ್ಲಿ ಸ್ವದೇಶಿ ಆಗುವ [illegible] ಜಿನಸುಗಳು ವಿಲಾಯತಿಗೆ ...

ಗಳು ಇಲ್ಲದೆ [illegible] ಕಾರಣವಾಗಿ ನಾವು ಬಹು ಕಷ್ಟದಿಂದ ಜೀವನ ಮಾಡಬೇಕಾಗುವದು.

ಇದೆಲ್ಲಾ ಆಲೋಚಿಸುವಾಗ ಬಡ ಬೇಸಾಯಗಾರರ ಸ್ಥಿತಿಯು ಯಾವ ರೀತಿಯಲ್ಲಿ ಪರಿಣಮಿಸುತ್ತದು ಎಂಬುದು ಈ ಪತ್ರದ ವಾಚಕರೇ ತಮ್ಮಷ್ಟಕ್ಕೆ ಗ್ರಹಿಸಿಕೊಳ್ಳುತ್ತೆ.

ನಮ್ಮ ಜಿಲ್ಲೆಯ ಕಾಫಿ ವ್ಯಾಪಾರವು ಯಾವ ಸ್ಥಿತಿಯಲ್ಲಿ ನಿಲ್ಲುವದೋ ಇನ್ನು ನೋಡಲಿಕ್ಕೆ ಉಂಟು. ನಮ್ಮ ಜಿಲ್ಲೆಗೆ ಬರುವ ಸಕ್ಕರೆಯು ಹೆಚ್ಚಾಗಿ ಯುರೋಪ ಖಂಡದಲ್ಲಿ ತಯಾರಾಗುವಂಥಾದ್ದು, ಇಲ್ಲವೆ ಹಿಂದೂಸ್ಥಾನದ ಹೊರಗಿನ ಪ್ರಾಂತ್ಯಗಳಲ್ಲಿ ಪೈದಾಸ್ತು ಆಗುವ ಕಬ್ಬಿನಿಂದ ತಯಾರಾಗುವಂಥಾದ್ದು ಆಗಿರುತ್ತದೆ. ಇದಕ್ಕೆ ಕ್ರಯ ಜಾಸ್ತಿ ಆದರೆ ನಮ್ಮ ಊರಿನ ಬೆಲ್ಲಕ್ಕೆ ಕೂಡಾ ಕ್ರಯ ಏರದೆ ನಿಲ್ಲಲಿಕ್ಕಿಲ್ಲ. ಇಂಥಾ ಕಾಲವು ಒದಗಿದಾಗ ನಮ್ಮ ಜಿಲ್ಲೆಯ ಆಧಿಪತ್ಯ ನಡಿಸುವ ಮಾನ್ಯ ಕಲೆಕ್ಟರ ದೊರೆಗಳವರು ಈ ಕುರಿತು ನಿಗಾಕೊಟ್ಟು ತಾವು ಗಳಿಸಿಕೊಂಡ ವ್ಯವಸಾಯ ಮಾಹಿತಿಯನ್ನು ಈಗ ನಮ್ಮ ಜಿಲ್ಲೆಯ ಬಡ ಬೇಸಾಯಗಾರರ ಪ್ರಯೋಜನಕ್ಕೆ ಉಪಯೋಗಿಸಿ ಕಬ್ಬಿನ ಸಾಗುವಳಿಯನ್ನು ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ವೃದ್ಧಿಸಲಿಕ್ಕೆ ಪ್ರಯತ್ನಪಟ್ಟ ಸರ್ ಥೋಮಸ್ ಮನ್ರೊ, ಮಿ. ಥೋಮಸ್ ವೆಬಿಷ್ಟರ ಮುಂತಾದ ಕಲೆಕ್ಟರುಗಳ ಹಾಗೆಯೇ ಹೆಸರುವಾಸಿಗೆಳಾಗ ಬಹುದು. ಈಗಿನಷ್ಟು ಒಳ್ಳೆ ಸಮಯವು ಇನ್ನು ಎಂದೂ ದೊರಕಲಿಕ್ಕಿಲ್ಲ.

ಕಬ್ಬಿನ ವ್ಯವಸಾಯಕ್ಕೆ ನಮ್ಮ ಕನ್ನಡಾ ಜಿಲ್ಲೆಯಲ್ಲಿ ಹೆಚ್ಚು ಅನುಕೂಲಗಳು ಅವೆ. ಸಾಧಾರಣವಾಗಿ ಹೊಳೆ ಬದಿಯ ಪ್ರಾಂತ್ಯಗಳಲ್ಲಿರುವ ಪ್ರತಿ ಬೇಸಾಯಗಾರನು ತನ್ನ ಬಾಬತು ಒಳ್ಳೆ ಗದ್ದೆಗಳಲ್ಲಿ ಕಬ್ಬನ್ನು ಸಾಗುವಳಿಮಾಡಬಹುದು. ಮತ್ತು ಆ ನದಿಯ ಕರೆಯಲ್ಲಿರುವ ಪ್ರಾಂತ್ಯಗಳ ಪೈಕಿ ಒಂದು ಮಧ್ಯ ಸ್ಥಳದಲ್ಲಿ ಈಗಿನ ಹೊಸ ನಮೂನೆಯ ಕಬ್ಬಿನ ರಸವನ್ನು ತೆಗೆಯುವ ಯಂತ್ರಗಳನ್ನು ಇಟ್ಟು ರಸ ಹಿಂಡಿ ಆದರಿಂದ ಸಕ್ಕರೆಯನ್ನು ಮಾಡುವ ಇಲ್ಲವೇ ಬೆಲ್ಲ ತಯಾರಿಸುವ ತಜವೀಜು ನಡಿಸಬಹುದು. ಆಗ ಕಬ್ಬಿಗೂ ಹೆಚ್ಚು ಕ್ರಯ ಸಿಗುವುದು ಮತ್ತೆ ಕಬ್ಬನ್ನು ಕಡಿದ ಕೂಡಲೇ ಒಯ್ದು ಗಾಣಕ್ಕೆ ಹಾಕಿದ ಸಂಬಂಧ ಸಿಗುವ ರಸದಿಂದಲೂ ಒಳ್ಳೇ ಬೆಲ್ಲವೂ ತಯಾರಾಗುವುದು ಮಾತ್ರವಲ್ಲ ಹೆಚ್ಚು ರಸ ಕೂಡಾ ಅಂಥಾ ಕಬ್ಬಿನಿಂದ ಹೊರಡುವುದು. ಇದನ್ನು ಬಿಟ್ಟು ಪ್ರತಿ ಒಬ್ಬನು ಬೆಲ್ಲ ಮಾಡಬೇಕೆಂಬ ಆಲೋಚನೆ ಮಾಡಿದರೆ ಅವನಿಗೆ ನಷ್ಟವೇ ಹೊರತು ಆದಾಯವಿಲ್ಲ. ಈ ರೀತಿಯಲ್ಲಿ ಈವರೆಗೆ ನಡೆದುಬಂದುದರಿಂದ ನಮ್ಮ ಜಿಲ್ಲೆಯಲ್ಲಿ ಕಬ್ಬಿನವ್ಯವಸಾಯವು ಹೆಚ್ಚದೇ ಇರಲಿಕ್ಕೆ ಕಾರಣ. ಬೆಲ್ಲ ತಯಾರಿಸಲಿಕ್ಕೆ ಹೆಚ್ಚು ಮಾಹಿತಿಯೂ ಅಗತ್ಯ ಮತ್ತು ಪ್ರಯಾಸವೂ ಜಾಸ್ತಿ. ನಮ್ಮ ಜಿಲ್ಲೆಯಲ್ಲಿ ಒಬ್ಬನು ಕಷ್ಟಪಟ್ಟು ಹಣ ಘಳಿಸುತ್ತಾನೆ ಎಂತ ಇನ್ನೊಬ್ಬನಿಗೆ ತಿಳಿದು ಬಂದ ಕೂಡಲೇ ಅವನು ಅದೇ ವೃತ್ತಿಯನ್ನು ನಡಿಸಿ ತಾನೂ ಕೂಡಾ ಅವನ ಹಾಗೆಯೇ ಆಗಬೇಕೆಂತ ಪ್ರಯತ್ನಪಡುತ್ತಾನೆ. ಇದು ಒಳ್ಳೆದೇ ಸರಿ. ಪರಂತು, ಅವನಿಗೆ ಸಹಾಯಮಾಡಿ ತಾನೂ ಒಳ್ಳೆದಾಗುವದರ ಬದಲಿಗೆ ಮೊದಲನೇಯವನನ್ನು ಹಾಳುಮಾಡಿ ತಾನು ಒಳ್ಳೇ ಸ್ಥಿತಿಗೆ ಬರಬೇಕೆಂತ ಪ್ರಯತ್ನಿಸುವದು ಬಹು ಕೆಟ್ಟದ್ದು. ನಮ್ಮ ಜಿಲ್ಲೆಯ ಹಂಚಿನ ವ್ಯಾಪಾರ, ಬೆಲ್ಲ ಪೈದಾಸ್ತಿನ ಕೆಲಸ, ಕಾಫಿ ಬೆಳಿಸುವ ಕೆಲಸ ಮುಂತಾದ್ದು ಇದಕ್ಕೆ ದೃಷ್ಟಾಂತ. ಈಗಲಾದರೂ ನಾವು ಅಸೂಯೆಯನ್ನು ಬಿಟ್ಟು ಐಕ್ಯಮತ್ಯದಿಂದ ಮಾನ್ಯ ಕಲೆಕ್ಟರವರಿಂದ ಕೊಡಲ್ಪಡಬಹುದಾದ ಉತ್ತೇಜನದಿಂದ ಕಬ್ಬಿನ ವ್ಯವಸಾಯವನ್ನು ವೃದ್ಧಿಗೊಳಿಸಿಕೊಳ್ಳದಿದ್ದರೆ ಇಂಥಾ ಒಳ್ಳೆ ಸಮಯವು ನಮಗೆ ಇನ್ನು ಎಂದೂ ದೊರಕಲಿಕ್ಕಿಲ್ಲ.

ಇರಳಿ ವ್ಯವಸಾಯ ಹಿತೇಚ್ಛು.

ಸ್ವದೇಶಾಭಿಮಾನಿ ಪತ್ರಾಧಿಪ ಮಹಾಶಯರೇ,

ಕಳೆದ ೪ಲನೇ ಸಂಚಿಕೆಯಲ್ಲಿ ಶ್ರೀ ಜ್ಞಾನೋದಯ ಸಮಾಜದ ವಿಷಯ ವಿಚಾರಿಯು ಬರೆದ ಲೇಖನವನ್ನೂ, [illegible] ಸಂಚಿಕೆಯಲ್ಲಿ ಸಮಾಜದ ಸದಸ್ಯರಲ್ಲೊಬ್ಬರು ಬರೆದ ಉತ್ತರವನ್ನೂ [illegible] ನೋಡಿದೆನು. ಈ ಪತ್ರ್ಯವಹಾರವನ್ನು [illegible] ಸಮಾಜದ ವಿಷಯ [illegible] [illegible] ದಿಂದ ಅವ [illegible]

ಪೂರ್ವ ಕಾಲದವರು ಸುರಾಪಾನವನ್ನು ಮಾಡುತ್ತಿದ್ದರೆಂಬದು ಪುರಾಣಗಳಿಂದ ನಮಗೆ ವ್ಯಕ್ತವಾಗುವದು. ಆದರೆ ಅವರು ಸೇವಿಸುತ್ತಿದ್ದ ಆ ಸೋಮರಸವನ್ನು ಯಾವ ಸಂದರ್ಭದಲ್ಲಿ, ಯಾವ ಪರಿಮಾಣದಲ್ಲಿ ಮತ್ತು ಹ್ಯಾಗೆ ಉಪಯೋಗಿಸುತ್ತಿದ್ದರೆಂಬದು ವಿಚಾರ ಮೂಲಕ ಸ್ಪಷ್ಟವಾಗುವದು. ಕಾಲಕ್ರಮೇಣ ಸುರಾಪಾನವು ಹದಮೀರಿ ಸೇವಿಸಲ್ಪಟ್ಟು ಜನರಲ್ಲಿ ಉಂಟಾದ ಅನರ್ಥವನ್ನು ನೋಡಿ ಪ್ರಪಂಚದ ಕಡೆಗೆ ದಯಾದೃಷ್ಟಿಯುಳ್ಳ ಪೂರ್ವಕಾಲದ ಮಹನೀಯರು ಸುರಾಪಾನವನ್ನು ನಿಷಿದ್ಧ ಪಡಿಸಿದರು. ಸುರಾಪಾನದಿಂದುಂಟಾಗುವ ಅನರ್ಥಗಳನ್ನು ವಿವರಿಸಿ ಬರೆಯುವದಾದರೆ ಒಂದು ಮಹಾ ಗ್ರಂಥವಾದೀತು. ಯಾದವರ ವಂಶದ ನಿರ್ಮೂಲಕ್ಕೆ ಸುರಾಪಾನವೇ ಮೂಲಕಾರಣವು. ಒಂದೇ ಮಾತಿನಲ್ಲಿ ಹೇಳುವದಾದರೆ ಸುರಾಪಾನವು ಧನ ಮಾನ ಪ್ರಾಣಗಳಿಗೆ ಕಂಟಕಪ್ರಾಯವು. ಜ್ಞಾನೋದಯ ಸಮಾಜದವರು ಸ್ಥಾಪಿಸಿದ ಮಧುಪಾನ ವಿಸರ್ಜನಾ ಸಾಧನೆಯ ಕಾರ್ಯವು ಸ್ತುತ್ಯಾರ್ಹವಾದದ್ದೇ ಸರಿ. ಈ ಸಮಾಜವು ಚಿರಂಜೀವಿಯಾಗಿ ಬಾಳಲಿ.

ನಶ್ವರವಾದೀ ಸದೇಹವು ಚಂದನಾದಿ ಸುಗಂಧಲೇಪನಗಳಿಂದಲೂ, ಕಂಕಣ ಕುಂಡಲಾದಿ ಆಭರಣಗಳಿಂದಲೂ ಅಲಂಕರಿಸಿಕೊಳ್ಳುವದಕ್ಕಲ್ಲ. ನದಿಯು ಹರಿಯುವದೂ, ವೃಕ್ಷಗಳು ಫಲ ತುಂಬಿಕೊಂಡಿರುವದೂ, ಗೋವುಗಳು ಹಾಲನ್ನೀಯುವದೂ ಪರಹಿತಾರ್ಥವಾಗಿಯೇ ಇರುವಾಗ್ಯೆ ಬುದ್ಧಿಯಿಂದ ಜೀವಿಸುವ ಮನುಷ್ಯನು ಉತ್ತಮ ಕಾರ್ಯಗಳಿಗೆ ಸಹಾಯಕನಾಗಿ ಸಮಾಜ ಹಿತವನ್ನೂ ದೇಶೋನ್ನತಿಯನ್ನೂ ಬಯಸಿ ಜನ್ಮಸಾಫಲ್ಯವನ್ನು ಪಡೆಯದೆ ಹೋದರೆ ಆ ಬಾಳು ನಿರರ್ಥಕವೇ ಸರಿ. ಕುಂತೀ ನಂದನರ ಗುಣ ಪರಾಕ್ರಮಗಳಲ್ಲಿ ಅಸೂಯೆಪಟ್ಟು ಅವರಿಗೆ ಸದಾ ಕೇಡನ್ನೇ ಬಯಸಿ, ಅವರನ್ನು ನಿರ್ಮೂಲಗೊಳಿಸಬೇಕೆಂದು ಕೌರವಾದಿಗಳು ಮಾಡಿದ ಪ್ರಯತ್ನಗಳೆಲ್ಲಾ ನಿಷ್ಫಲವಾಗಿ ಕೌರವಾದಿಗಳ ಗತಿಯು ಹ್ಯಾಗಾಯಿತೆಂಬದನ್ನು ಎಲ್ಲರೂ ಬಲ್ಲರಷ್ಟೇ; ಮನುಷ್ಯರಾದ ನಾವು ಹಿತಕಾರ್ಯಗಳನ್ನು ಮಾಡಬೇಕು; ಅಥವಾ ಹಿತಕಾರ್ಯಗಳನ್ನು ಮಾಡುವರಿಗೆ ಕೈಲಾದ ಸಹಾಯವನ್ನು ಮಾಡಬೇಕು. ಇದೂ ತೀರದಿದ್ದರೆ ಶುಭಚಿಂತನೆಯಿಂದ ಸುಮ್ಮನಿರಬೇಕಲ್ಲದೆ ವೃಥಾಕಾರ್ಯಸಾಧನೆಯಿಂದ ಫಲವಿರದು.

ವರದಕ್ಷಿಣೆಯ ಕುರಿತು ಸ್ವಲ್ಪ ಬರೆಯುವೆನು. ವರದಕ್ಷಿಣೆಯ ಪದ್ಧತಿಯು ಈಗಲೀಗ ಪ್ರಪಂಚ ವ್ಯಾಪಕವಾಗುವದನ್ನು ನೋಡಿ ಹೆಣ್ಣು ಮಕ್ಕಳನ್ನು ಪಡೆದ ಹೆತ್ತವರು ಪಡುವ ಮರುಕವು ದೇವರಿಗೆ ಗೊತ್ತು. ಕುಟುಂಬ ರಕ್ಷಣೆಯ ಭಾರವೊಂದು, ಪ್ರಾಪ್ತ ವಯಸ್ಕಳಾದ ಮಗಳಿಗೆ ವರನನ್ನು ಹುಡುಕುವ ಕಷ್ಟವೊಂದು, ವರದಕ್ಷಿಣೆಯ ಚಿಂತೆಯೊಂದು. ಇಷ್ಟೆಲ್ಲಾ ಸಂಕಷ್ಟ ಒದಗಿರುವ ಕನ್ಯಾಪಿತನ ಅವಸ್ಥೆಯೇ ಈ ಅನರ್ಥದ ಕಡೆಗೆ ದುಃಖಗೊಂಡು ಬಂಗಾಳದಲ್ಲಿ ಸ್ನೇಹಲತಾ ದೇವಿ ಮುಂತಾದ ವೀರನಾರಿಯರು ತಮ್ಮ ಅಮೂಲ್ಯ ಪ್ರಾಣವನ್ನು ಬಲಿಯಾಗಿ ಅರ್ಪಿಸಿ, ತಮ್ಮ ಹೆತ್ತವರನ್ನೂ, ಮಾತೃಭೂಮಿಯನ್ನೂ ಉದ್ಧರಿಸಲೋಸುಗ ತೋರಿದ ಉದಾಹರಣೆಗಳು ವಾಚಕರ ನೆನಪಿನಲ್ಲಿರಬಹುದು.

ಅನುಕೂಲವಂತರಾದವರು ಕೊಡುವ ವರದಕ್ಷಿಣೆಯ ದುಷ್ಟ ಸಂಪ್ರದಾಯವನ್ನು ನಮ್ಮಂಥಾ ದೀನ ಜೀವಿಗಳು ಕೂಡಾ ಕೀರ್ತಿಯನ್ನು ಪಡೆಯಬೇಕೆಂಬ ದುರಭಿಮಾನದಿಂದ ಅನುಸರಿಸಿ ವರದಕ್ಷಿಣೆಯನ್ನು ಕೊಟ್ಟು ಸಾಲ ಸೋಲಕ್ಕೆ ಒಳಗಾಗಿ ನಿರಂತರವೂ ಚಿಂತೆಯಿಂದ ಬಳಲುತ್ತಿರುವದು ಜನಸಾಮಾನ್ಯವಾಗಿರುತ್ತದೆ. ಅಳಿಯ ಸಂತಾನದ ಕಟ್ಟಳೆಯನ್ನನುಸರಿಸಿ ಬರುವ ಶೂದ್ರವರ್ಗಕ್ಕಂತೂ ಈ ಸಂಪ್ರದಾಯವು ಯಾವ ಪ್ರತಿಫಲವನ್ನೂ ಕೊಡಲಾರದು. ಶ್ರೀ ಜ್ಞಾನೋದಯ ಸಮಾಜದವರ ೪ನೇ ವಾರ್ಷಿಕ ವರದಿಯ ಸಾಮಾಜಿಕ ರೂಢಿಗಳ ಸುಧಾರಣೆಯ ಶಿರನಾಮೆಯಲ್ಲಿ ವರದಕ್ಷಿಣೆಯ ಕುರಿತು ಉಂಟಾಗಬಹುದಾದ ಅನರ್ಥವನ್ನು ಸೂಚಿಸಿಯಾಗಿದ್ದರೂ ವರದಕ್ಷಿಣೆಯ ಮೇಲೆ ಮಮತೆಯುಳ್ಳವರಿಗೆ ಯಾವ ನಿರ್ಬಂಧವನ್ನೂ ತಂದೊಡ್ಡಲಿಲ್ಲ.

ಅಳಿಯ ಸಂತಾನದ ಕಟ್ಟಳೆಯನ್ನಾಚರಿಸುವವರಿಗೆ ಸಹಧರ್ಮಿಣಿಯ ಮೇಲೆ ಸ್ವತಂತ್ರವಿಲ್ಲವಷ್ಟೇ! ಈಗಿನ ಕಾಲದವರ ದಕ್ಷಿಣೆಯಿಂದ [illegible] ಸ್ವತಂತ್ರವನು ಕಳಕೊಂಡು ವಧುವಿನ ಹಂಗಿಗನಾಗಿರಬೇಕಲ್ಲವೇ! [illegible] ವಿರಲಿ!!

॥ [illegible] ॥

[illegible]

ಮಂಗಳೂರಿನ ಪೆಂಟ್‌ಲೆಂಡ್ ಪೇಟೆ.

ಪತ್ರಕರ್ತರೇ,

ಹಿಂದೆ ಜನರ ಸ್ಥಿರ ಚರ ಸೊತ್ತುಗಳ ಮತ್ತು ಪ್ರಾಣ ರಕ್ಷಣೆಯನ್ನು ಸರಿಯಾಗಿ ಮಾಡಲಿಕ್ಕಾಗದ ಕಾಲವೊಂದಿತ್ತು. ಆ ಕಾಲದಲ್ಲಿ ಜನರು ತಮ್ಮ ಇಷ್ಟಮಿತ್ರರಿಂದ ಕೂಡಿಕೊಂಡು ಒಂದೇ ಕಡೆಯಲ್ಲಿ ಗುಂಪಾಗಿ ವಾಸಿಸುತ್ತಿದ್ದರು. ಇಂಥಾ ವಾಸ್ತವ್ಯಗಳಿದ್ದಲ್ಲಿಯೇ ದೇವಸ್ಥಾನ, ವ್ಯಾಪಾರ ವೃತ್ತಿಗಳ ಭಂಡಸಾಲೆ, ಮನೆ ಇತ್ಯಾದಿಗಳು ಒಂದಕ್ಕೊಂದು ಪೋಣಿಸಿದಂತಿದ್ದವು. ಪ್ರಾಣಾಪಾಯದ ಭಯದಿಂದ ಆರೋಗ್ಯರಕ್ಷಣೆಗೆ ಈಗಿನಂತೆ ಆ ಕಾಲದಲ್ಲಿ ತಕ್ಕ ನಿಗಾ ಕೊಡಲು ಅವಕಾಶವಿದ್ದಿಲ್ಲ. ಆದ್ದರಿಂದ ಸರಿಯಾದ ಪ್ರಕಾಶವೂ ವಾಯು ಸಂಚಾರವೂ ಇಲ್ಲದ ಮನೆಗಳು ಅಲ್ಲಲ್ಲಿ ನೋಡಸಿಕ್ಕುವವು. ಒಂದು ಗಜ ಸ್ಥಳದ್ದಾದರೂ ಅಂತರವಿಲ್ಲದ ರೀತಿಯಲ್ಲಿ ಒಂದು ಮನೆಯ ಮಾಡು ಗೋಡೆಗಳು ಸಹ ಇನ್ನೊಂದರಲ್ಲಿ ಹೋಗಿ ಕೂಡುವಂತೆ ಕಟ್ಟಿಸಲ್ಪಟ್ಟ ಎರಡು ಬದಿಗಳಲ್ಲಿಯೂ ಮನೆಗಳುಳ್ಳ ಕೇರಿಗಳು ಸರ್ವ ಕಡೆಗಳಲ್ಲಿಯೂ ಇವೆ. ಇದರಿಂದ ಮಾರಿ ರೋಗಗಳ ಬೆಳವಣಿಕೆಯು ಹೆಚ್ಚುತ್ತ ಬರುತ್ತದೆ.

ನಿರ್ಮಲತ್ವ—ಇದಕ್ಕೆ ನಾವು ಹೆಸರುವಾಸಿಗಳಾಗಿರುವಂಥವರು. ಆದರೆ ಮೇಲೆ ವಿವರಿಸಿದ ಸ್ಥಳಗಳಂಥವುಗಳಲ್ಲಿ ನಾವು ಹುಟ್ಟಿ ಬೆಳೆದುದ್ದರಿಂದ ಮನೆಯೊಳಗೆ ಮಾತ್ರ ನಾವು ಶುಚಿಯಾಗಿದ್ದರೆ ಸಾಕೆಂತ ಭಾವಿಸುತ್ತೇವೆ. ಮಲವಾಗಲಿ, ಇತರ ಯಾವ ಹೊಲಸು ಪದಾರ್ಥವಾಗಲಿ ಅದು ಮನೆಯೊಳಗಿರದಿದ್ದರೆ ಸರಿ. ಅಷ್ಟರಲ್ಲಿ ನಾವು ತೃಪ್ತಿ ಹೊಂದುವೆವು. ಮನೆಯ ವಠಾರ, ನೆರೆಮನೆಯವರ ವಠಾರ, ಎದುರುಕಡೆ ಹಿಂದುಕಡೆಗಳಲ್ಲಿರುವ ಬೀದಿಗಳು, ಇತ್ಯಾದಿಗಳನ್ನು ಸಹ ನಿರ್ಮಲವಾಗಿಡುವಂಥಾದ್ದು ನಮ್ಮ ಧರ್ಮವೆಂತ ತಿಳಿಯಲಾರೆವು. ಆದ್ದರಿಂದ ನಾವು ಈಗ ಯಾವ ಗಲ್ಲಿಗೆ ಹೋದರೂ ಯಾವ ಬೀದಿಯಲ್ಲಿ ತಿರುಗಾಡಿದರೂ ಹೊಲಸಿನ ವಾಸನೆಗಳಿದ್ದ ಠಾವುಗಳು ಮಂಗಳೂರಲ್ಲಿ ನಮಗೆ ಹೆಚ್ಚಾಗಿ ನೋಡಸಿಕ್ಕುತ್ತವೆ. ಮನೆ ವಠಾರವು ಎಷ್ಟು ಸಣ್ಣದಾದರೂ ಅದರಲ್ಲಿ ಸೆಗಣಿಯನ್ನು ತುಂಬಿಸಿ ಇಡಲು ಮೂರು ನಾಲ್ಕು ಹೊಂಡಗಳನ್ನಾದರೂ ತೆಗಿಸಿ ಇಡುತ್ತೇವೆ. ಈ ಹೊಂಡಗಳಿಗೆ ತಾಗಿ ಬಚ್ಚಲು ಕೊಟ್ಟಿಗೆಗಳೂ ಪಾಯಿಖಾನೆಗಳೂ ಇದ್ದು ಮನೆ ಸುತ್ತಲೂ ರೌರವ ನರಕವನ್ನೇ ನಿರ್ಮಿಸುತ್ತಿದ್ದೇವೆ. ಬಡತನ, ಸ್ಥಳದ ಅಡಚಣೆ, ಇನ್ನು ಕೆಲವು ವಿದ್ಯಮಾನಗಳಿಂದ ಈ ಸ್ಥಿತಿಯು ಪ್ರಾಪ್ತವಾಗಿದೆ. ಇಂಥಾ ವಠಾರಗಳಲ್ಲಿ ಜೀವಿಸಿಕೊಂಡು ನಮ್ಮಲ್ಲಿ ಹಲವು ಅಭ್ಯಾಸಗಳೂ ನೆಲೆಗೊಂಡಿವೆ.

ದೊಡ್ಡ ಪಟ್ಣಗಳಲ್ಲಿ ದನಕರುಗಳನ್ನು ಸಾಕುವವರು ಪ್ರತ್ಯೇಕವಿದ್ದು ಪಟ್ಟಣಗಳಲ್ಲಿ ಹಲವು ಅಡಚಣಿಗಳಿಂದ ಜೀವಿಸುವಂಥವರಿಗೆ ಹಾಲನ್ನು ತಂದು ವಿಕ್ರಯಿಸುವವರಿದ್ದಾರೆ. ಈ ಪಟ್ಟಣದಲ್ಲಿ ಇಂಥಾ ಏರ್ಪಾಡೇನೂ ಸಾಕಷ್ಟು ವಿಸ್ತಾರವಾದ ರೀತಿಯಲ್ಲಿಲ್ಲ. ಪ್ರತಿ ಮನೆಯಲ್ಲಿ ಎಂಬಂತೆ ದನಕರುಗಳನ್ನು ಸಾಕಲೇಬೇಕು, ಪ್ರತಿ ಮನೆಯವರಿಗೆ ಇದಕ್ಕೆ ಬೇಕಾದ ಸ್ಥಳವೂ ಬೇಕು. ಅಲ್ಲದೆ ತಾವು ಇರುವ ವಠಾರವು ಸಣ್ಣದಾದರೂ ದನಕರುಗಳನ್ನು ಸಾಕಿ ಹಾಲುಮಾರಿ ಜೀವಿಸುವಂಥವರು ಹಲವರಿರುತ್ತಾರೆ. ಇಂಥವರಿಗೆ ಸಹ ಸ್ಥಳವು ಬೇಕಾಗಿದೆ. ಮನೆ ವಠಾರಗಳಿಂದ ಜನರು ಉಪಯೋಗಿಸಿ ಬಿಡುವ ಹೊಲಸು ನೀರನ್ನು ಯಾವ ಕಡೆಗೆ ವಯ್ಯಲಿಕ್ಕೂ ಪ್ರಕೃತ ಈ ಪಟ್ಟಣದಲ್ಲಿ ಆಸ್ಪದವಿಲ್ಲ. ರಸ್ತೆಯ ಚರಂಡಿಗಳಲ್ಲಿ ಮೊದಲೇ ಬಿದ್ದಿರುವ ಪದಾರ್ಥಗಳು ಚೆನ್ನಾಗಿ ದೇಗನೆ ಕೊಳೆತುಹೋಗುವಂತೆ ಈ ಹೊಲಸು ನೀರನ್ನು ಚರಂಡಿಗಳಿಗೆ ಬಿಡುವುದು ಅಥವಾ ಮನೆಯ ವಠಾರದಲ್ಲಿಯೇ ಅದನ್ನು ಇರಗೊಡಿಸಿ ಜನರಲ್ಲಿ ಅನಾರೋಗ್ಯವು ಉಂಟಾಗುವಂತೆ ಮಾಡುವುದು. ಹೊಲಸು ನೀರಿನ ವಯ್ಯೋಣಕ್ಕೆ ಈಗ ಈ ಎರಡು ಪ್ರಯತ್ನಗಳ ಹೊರತು ಬೇರೆ ಯಾವ ಪ್ರಯತ್ನವೂ ಸಾಧ್ಯವಿಲ್ಲ. ಕುಡಿಯುವ ನೀರಿನ ಬಾವಿಯು ಈ ಊರಲ್ಲಿ ಹಲವು ಕಡೆಗಳಲ್ಲಿ ಪಾಯಿಖಾನೆಗಳ ಹತ್ತರವಿರುವದು. ಪಟ್ಟಣದಲ್ಲಿ ಸಾಮಾನ್ಯವಾಗಿರುವ ಈ ಅಡಚಣೆಗಳನ್ನು ಪರ್ಯಾಲೋಚಿಸಿಕೊಂಡು ಇಂಥಾ ಅಡಚಣಿಗಳು ಪೆಂಟ್‌ಲೆಂಡ್ ಪೇಟೆಯಲ್ಲಿ ಸಾಧ್ಯವಾದ ಮಟ್ಟಿಗೆ ಪ್ರಾಪ್ತವಾಗದಂತೆ ಈಗಲೇ ತಕ್ಕ ಎಚ್ಚರವುಳ್ಳವರಾಗಿರಬೇಕಾಗಿದೆ.

ವಾಸ್ತವ್ಯಗಳ ಅಡಚಣಿಗಳನ್ನು ಪರ್ಯಾಲೋಚಿಸಿದ ನಂತರ ಎಂಥಾ ತರಗತಿಯ ನಿವಾಸಿಕರು ಪಟ್ಟಣದಿಂದ ಪೆಂಟ್‌ಲೆಂಡ್ ಪೇಟೆಗೆ ಹೋಗಿ ವಾಸ್ತವ್ಯಮಾಡಿಕೊಂಡಿರಲು ಸಿದ್ಧವಿರುವರು? ಎಂಥಾ ತರಗತಿಯ ನಿವಾಸಿಕರ ಬಗ್ಗೆ ಈ ಹೊಸ ಪೇಟೆಯು ಏರ್ಪಾಡು ಮಾಡೋಣಾಗಿದೆಂಬುದನ್ನು ಪರಿಶೀಲಿಸುವುದು ಅಗತ್ಯ. ಈ ವಿಷಯ ಇನ್ನೊಂದು ಸಂಚಿಕೆಯಲ್ಲಿ ಬರಕೊಳ್ಳಲು ಅಪ್ಪಣೆಯಾಗಬೇಕಾಗಿ ಅಪೇಕ್ಷಿಸುತ್ತೇನೆ.

ಪ್ರೊಫೆಸ್ಸರ ಗೆಡ್ಡಿಸ್ ಎಂಬವರ ಅನುಭವವು ನಮ್ಮ ಮುನಿಸಿಪಾಲಿಟಿಗೆ ಅಗತ್ಯವೋ?

ಸ್ವಾಮಿ,

ನಿಮ್ಮ ಪತ್ರದ ಕಳೆದ ಸಂಚಿಕೆಯಲ್ಲಿ ರಾ| ಕುದ್ಮೂಲ ರಂಗರಾಯರು ಡಿಸ್ಟ್ರಿಕ್ಟ್ ಬೋರ್ಡುಗಳ ಪರವಾಗಿ ವಿಲಾಯತಿಯಿಂದ ಬಂದ ಪ್ರೊಫೆಸ್ಸರ ಗೆಡ್ಡಿಸ್‌ರವರ ಭಾಷಣವನ್ನು ಕೇಳಲು ಹೋಗುವರೆಂಬದನ್ನು ತಿಳಿದು ಸಂತೋಷಪಡುತ್ತೇನೆ. ಪ್ರಜಾ ಜನರ ಆರೋಗ್ಯವನ್ನು ಕಾಪಾಡುವ ಬಗ್ಗೆ ಪಟ್ಟಣ ಹಳ್ಳಿಗಳಲ್ಲಿ ಯಾವ್ಯಾವ ಏರ್ಪಾಡುಗಳನ್ನು ಹ್ಯಾಗೆ ಮಾಡಬೇಕು ಮೊದಲಾದವುಗಳ ಕುರಿತು ಈ ಪ್ರೊಫೆಸ್ಸರರು ಮದ್ರಾಸಿನಲ್ಲಿ ಭಾಷಣ ಕೊಡುವರು. ಸರಕಾರದವರು ಈ ಪಂಡಿತರನ್ನು ಜನರ ಪ್ರಯೋಜನಾರ್ಥವಾಗಿ ವಿಶೇಷ ಖರ್ಚು ನಡಿಸಿ ತರಿಸಿರುತ್ತಾರೆ. ಮತ್ತು ಇವರ ಅನುಭವಗಳ ಪ್ರಯೋಜನವು ಈ ಸಂಸ್ಥಾನದ ಎಲ್ಲಾ ಜನರಿಗೂ ಸರಿಯಾಗಿ ಸಿಕ್ಕುವಂತೆ ಆಯಾ ಜಿಲ್ಲೆಗಳ ಬೋರ್ಡು ಮೆಂಬರರ ಮತ್ತು ಮುನಿಸಿಪಾಲಿಟಿಯ ಕೌನ್ಸಿಲರರ ಪ್ರತಿನಿಧಿಗಳು ಮದ್ರಾಸಿಗೆ ಬರಬೇಕೆಂದು ಸೂಚಿಸಿರುತ್ತಾರೆ. ಸಾವಿರ ಕಟ್ಟಳೆಯ ಹಣ ಖರ್ಚು ಮಾಡಿ ಮಂಗಳೂರಲ್ಲಿ ಈಗ ಪೆಂಟಲೆಂಡ್ ಪೇಟೆಯೆಂಬ ಉಪಪಟ್ಟಣವನ್ನು ಸೃಷ್ಟಿಸಲು ನಮ್ಮ ಮುನಿಸಿಪಾಲಿಟಿಯವರು ಪ್ರಾರಂಭಿಸಿರುವರು. ಪ್ಲೇಗು ಇಲ್ಲಿ ಶಾಶ್ವತವಾಗಿ ನೆಲೆ ಮಾಡಿರುವದು. ವಿಷಮಜ್ವರ ಮೊದಲಾದ ಬಾಧೆಗಳು ಇಲ್ಲಿ ತಪ್ಪದೆ ಇರುವವು. ಇಂಥಾ ಅನಾರೋಗ್ಯಕರವಾದ ವಿದ್ಯಮಾನಗಳುಳ್ಳ ಈ ಪಟ್ಟಣದಿಂದ ಪ್ರತಿನಿಧಿಗಳು ಮದ್ರಾಸಿಗೆ ಹೋಗಿ ಪ್ರೊಫೆಸರ್ ಗೆಡ್ಡಿಸ್‌ರವರ ಭಾಷಣಗಳನ್ನು ಕೇಳಿ ಅವುಗಳ ಪ್ರಯೋಜನವನ್ನು ನಾವೆಲ್ಲರೂ ಪಡೆಯುವಂತೆ ನಮ್ಮ ಮುನಿಸಿಪಾಲಿಟಿಯ ಕೌನ್ಸಿಲಿನವರು ಮಾಡಿರಬಹುದೆಂತ ನೆನಸುತ್ತೇನೆ. ಮಾಡದೆ ಇದ್ದರೆ ಈ ವಿಷಯವನ್ನು ಮನಸ್ಸಿಗೆ ತಂದುಕೊಂಡು ಬೇಕಾದ ಏರ್ಪಾಡನ್ನು ಕೂಡಲೇ ಮಾಡುವರಾಗಿ ಕೋರುತ್ತೇನೆ.

ಕ್ಷೇಮಚಿಂತಕ.

ಸೆನಿಟರಿ ಇಲಾಖೆ.

ಅಯ್ಯಾ ಪತ್ರಕರ್ತರೇ,

ತಮ್ಮ ಕಳೆದ ಸಂಚಿಕೆಯಲ್ಲಿ "ಪಟ್ಟಣ ನಿವಾಸಿಕರಲ್ಲೊಬ್ಬ"ರು ಈ ಇಲಾಖೆಯ ಸಂಬಂಧವಾಗಿ ಹಾಕಿದ್ದ ಕೆಲವು ಪ್ರಶ್ನೆಗಳನ್ನು ನೋಡಿ "ಪಟ್ಟಣ ನಿವಾಸಿಕರಲ್ಲೊಬ್ಬ"ರಿಗೆ ತುಂಬಾ ಕೃತಜ್ಞನಾಗಿದ್ದೇನೆ. ಇವರು ಹಾಕಿದ ಪ್ರಶ್ನೆಗಳಲ್ಲಿ ಯಾವದೊಂದಕ್ಕಾದರೂ ಉತ್ತರ ಕೊಡಲು ನಾನು ಕೇವಲ ಅಸಮರ್ಥನಾಗಿರುವದರಿಂದ ಆ ಪ್ರಶ್ನೆಗಳನ್ನು ವಿಮರ್ಶಿಸುವ ಕೆಲಸವನ್ನು ಅನುಭವದಾರರಿಗೆನೇ ಬಿಟ್ಟು ಈ ಇಲಾಖೆಯ ಸಂಬಂಧವಾಗಿ ನಾನು ಕೇಳಿರುವ ಕೆಲವು ವಿಷಯಗಳನ್ನು ಮಾತ್ರ ತಿಳಿದ ಮಟ್ಟಿಗೆ ಬರಕೊಂಡಿರುವೆನು.

ಮದ್ರಾಸು ಸರಕಾರದವರು ಪಟ್ಟಣಗಳನ್ನು ಹಸನುಪಡಿಸುವ ಬಗ್ಗೆ ೧೮೬೫ನೇ ಇಸವಿಯಲ್ಲಿ III ಆಕ್ಟು ಏರ್ಪಡಿಸಿ ಈ ಜಿಲ್ಲೆಯಲ್ಲಿ ಮುನ್ಸಿಪಾಲಿಟಿಯನ್ನು ಏರ್ಪಡಿಸಿದರು. ಪ್ರಥಮತಾ ಈ ಮುನ್ಸಿಪಾಲಿಟಿಯಲ್ಲಿ ಮೂರು ಮಂದಿ ಸೆನಿಟರಿ ಆಫೀಸರರು ಮಾತ್ರ ಕೆಲಸ ನಡಿಸಿದರು. ೧೮೮೮ನೇ ಇಸವಿಯಲ್ಲಿ ೮ ಮಂದಿ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟು ಈ ಪೈಕಿ ಒಬ್ಬರು ಇನ್ಸ್‌ಪೆಕ್ಟರರೆಂದೂ ಉಳಿದ ೭ ಮಂದಿ ಹತ್ತತ್ತು ರೂಪಾಯಿ ತಲಬಿನ ಸಬ್ ಇನ್ಸ್‌ಪೆಕ್ಟರರೆಂದೂ ಸಂಬೋಧಿಸಲ್ಪಟ್ಟರು. ಈ ಸಬ್ ಇನ್ಸ್‌ಪೆಕ್ಟರರು ಬೀಲ್ ಕಲೆಕ್ಟಿಂಗ್ ಕೆಲಸ, ಅರ್ಜಿ ತನಿಕಿ ಮಾಡುವದು, ಎಂಡೋರ್ಸಮೆಂಟ ಮೊದಲಾದವುಗಳನ್ನು ಜಾರಿ ನಡಿಸುವದು, ತೋಟಿ, ಸ್ವೀಪರರ ಕೆಲಸಗಳನ್ನು ಮೇಲ್ವಿಚಾರಣೆ ನಡಿಸಿಕೊಂಡು ಬರುವದು ಮೊದಲಾದ ಕೆಲಸಗಳನ್ನು ಮಾಡುತ್ತಿದ್ದರು.

ಈಗಲಾದರೋ ಈ ಮುನಿಸಿಪಾಲಿಟಿಯಲ್ಲಿ ತಿಂಗಳು ಒಂದಕ್ಕೆ ೭೦ ರೂಪಾಯಿ ಸಂಬಳದ ಒಬ್ಬ ಚೀಫ್ ಸೆನಿಟರಿ ಇನ್ಸ್‌ಪೆಕ್ಟರರೂ ೨೫ ರೂಪಾಯಿ ಸಂಬಳ ಹೊಂದುವ ೫ ಮಂದಿ ಸಬ್ ಇನ್ಸ್‌ಪೆಕ್ಟರರೂ ಒಬ್ಬೊಬ್ಬ ಇನ್ಸ್‌ಪೆಕ್ಟರರಿಗೆ ಏಳೇಳು ರೂಪಾಯಿ ಸಂಬಳದ ಒಬ್ಬೊಬ್ಬ ಪ್ಯಾದೆಯರೂ ಇರುವರಲ್ಲದೆ ಹತ್ತು ರೂಪಾಯಿ ಸಂಬಳದ ೪ ಮಂದಿ ಸೆನಿಟರಿ ಮೇಸ್ತ್ರಿಗಳು ಇರುವರು. ಈ ಆಫೀಸ್ ಸಿಬ್ಬಂದಿಗೆ ಕಮ್ಮಿ ಎಂದರೆ ವರ್ಷ ಒಂದಕ್ಕೆ ೬-೪ ಸಾವಿರ ರೂಪಾಯಿ ವೆಚ್ಚವಾಗುತ್ತದೆ. ಇಷ್ಟು ಸಾವಿರ ರೂಪಾಯಿ ವೆಚ್ಚವಾಗುವ ಈ ಇಲಾಖೆಯಿಂದ ಪಟ್ಟಣ ನಿವಾಸಿಕರಿಗೆ ಉಂಟಾಗ ಬಹುದಾದ ಪ್ರಯೋಜನಗಳು ಯಾವ್ಯಾವವೆಂಬದನ್ನು ತಿಳಕೊಳ್ಳುವದು ಪಟ್ಟಣ ನಿವಾಸಿಕರಿಗೆ ಅತ್ಯವಶ್ಯಕವಾದ ವಿಷಯವಾಗಿರುವದೆಂಬದಕ್ಕೆ ಅನುಮಾನವಿಲ್ಲ. ಆದುದರಿಂದ ಯಾರಾದರೂ ಜನಸಾಮಾನ್ಯರಿಗೆ ಈ [illegible]

[illegible]

ಯುದ್ಧ ಸಮಾಚಾರವು.

ತಾ. 11ನೇ ದಶಂಬರ.

ಪಶ್ಚಿಮ ರಣರಂಗದಲ್ಲಿ ಜರ್ಮನರು ಇನ್ನು ಮುಂದೊತ್ತಿ ಬರುವುದು ಅಸಾಧ್ಯವೆಂತ ತಿಳಿದುಬರುತ್ತದೆ. ಬೆಲ್ಜಿಯಮಿನಲ್ಲಿ ಜರ್ಮನರು ಊಸ್ಟ್‌ಡೆಂಕರ್ಕ್ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕಿರುವರು. ಸಂಯುಕ್ತ ಸೇನೆಯ ಬಲಪಾರ್ಶ್ವದಲ್ಲಿ ಫ್ರೆಂಚರು ವರ್ಮೆಲ್ಲೆಸ್ ಹಳ್ಳಿಯನ್ನು ಪೂರ್ಣವಾಗಿ ಕೈವಶ ಮಾಡಿಕೊಂಡಿರುವುದರಿಂದ ರೈಲ್ವೆ ಮಾರ್ಗವು ಈ ಪ್ರಾಂತ್ಯದಲ್ಲಿ ಫ್ರೆಂಚರ ಕೈವಶವಾಗಿರುತ್ತದೆ. ಜರ್ಮನರು ಪಶ್ಚಿಮ ರಣರಂಗದಲ್ಲಿ ತಮ್ಮ ಕಾದಾಟಗಳನ್ನು ಕಡಮೆ ಮಾಡಿಕೊಂಡು ಪೋಲೆಂಡಿನಲ್ಲಿ ರುಶ್ಯರೊಡನೆ ಕಾದಾಡಲು ಸೈನ್ಯವನ್ನು ಪಶ್ಚಿಮ ರಣರಂಗದಿಂದ ಕೊಂಡುಹೋಗುತ್ತಿರುವರು.

ಚೀನಾದೇಶದ ಹೊಸ ಮಂತ್ರಿಗಳು ಅಂಗ್ಲಾಳಕ್ಕೆ ಬಂದು ತಲಪಿರುತ್ತಾರೆ. ಶೀಮೆ ಎಣ್ಣೆ ತುಂಬಿದ್ದ ವರ್ಡಾ ಎಂಬ ಬ್ರಿಟಿಷ ಹಡಗವು ಫ್ಲೀಟ್‌ವೂಡ್ ಸಮೀಪ ನೆಲಕ್ಕೆ ತಾಗಿ ಹಾಳಾಗಿ ಹೋಯಿತು. ಎಣ್ಣೆಗೆ ಬೆಂಕಿ ಬಿದ್ದು ೩೪ ಜನ ಹಡಗಿನ ಕಲಾಸಿಗಳು ಸತ್ತುಹೋದರು.

ಒಕ್ಸ್‌ಫರ್ಡ್‌ನಲ್ಲಿ ಎನ್ನಿಸ್ಲೆ ಪ್ರಭುಗಳವರೆಂಬ ಬ್ರಿಟಿಷ ಆಕಾಶ ವಿಮಾನಕಾರರ ವಿಮಾನಕ್ಕೆ ಜರ್ಮನರು ಗುಂಡು ಹೊಡದು ಕೆಡವಿ ಬಿಟ್ಟಿರುವರೆಂಬ ವಾರ್ತೆಯು ಬಂದಿರುತ್ತದೆ. ಕೈಸರರಿಗೆ ಶೀತದಿಂದ ಕೆಮ್ಮು ಮತ್ತು ಜ್ವರವು ಪ್ರಾಪ್ತವಾದ್ದರಿಂದ ಇನ್ನು ಕೆಲವು ದಿವಸ ಇವರು ಬರ್ಲಿನ್ ಪಟ್ಟಣದಲ್ಲಿಯೇ ಇರುವರು.

ಪೂರ್ವ ರಣರಂಗದಲ್ಲಿ ರುಶ್ಯಯನರು ತಮ್ಮ ಯುದ್ಧ ತಂತ್ರಗಳನ್ನು ಮಾರ್ಪಡಿಸುತ್ತಿರುವರು. ರುಶ್ಯಯನರು ಲೋಡ್ಜನ್ನು ಬಿಟ್ಟು ತಮ್ಮ ಸೇನಾ ಸಾಲುಗಳನ್ನು ಬದಲಾಯಿಸುತ್ತಿರುವರು. ಲೋಡ್ಜನಲ್ಲಿ ಯುದ್ಧಕ್ಕೆ ಇಳಿದಿದ್ದ ಜರ್ಮನರ ೧೨ ಸೇನಾ ಪಾಳಯಗಳಲ್ಲಿ ಒಂದು ಲಕ್ಷ ಜನರು ನಾಶವಾಗಿ ಹೋಗಿರುವರೆಂಬದಾಗಿ ತಿಳಿದುಬರುತ್ತದೆ. ಲೋಡ್ಜನಲ್ಲಿ ಪ್ರಾಪ್ತವಾದ ಯುದ್ಧದಿಂದ ಜರ್ಮನರು ಪಶ್ಚಿಮರಣರಂಗದಿಂದ ಕೆಲವು ಸೇನೆಯನ್ನು ಪೂರ್ವ ರಣರಂಗಕ್ಕೆ ತರಬೇಕಾಯಿತು. ವಿಸ್ತುಲಾ ವಾರ್ಟಾಗಳ ನಡುವೆ ನಡದ ಯುದ್ಧದಲ್ಲಿ ಜರ್ಮನರು ವಿಶೇಷ ನಷ್ಟ ಹೊಂದಿರುವರೆಂತ ಪೆಟ್ರೋಗ್ರೇಡಿನಲ್ಲಿಯ ಒಬ್ಬ ಬಾತ್ಮೀದಾರರು ಬರೆದಿರುವರು. ಇಲ್ಲಿ ಜರ್ಮನರು ತಮ್ಮ ಸೇನೆಯ ಮೂರಂಶಗಳಲ್ಲಿ ಎರಡಂಶಗಳನ್ನು ಕಳಕೊಂಡಿರುವರು. ಈ ರಣರಂಗದಲ್ಲಿದ್ದ ಕೈಸರರ ಮಗಂದಿರಿಬ್ಬರು ವಾಯು ವಿಮಾನಗಳ ಮೂಲಕ ಇಲ್ಲಿಂದ ತಪ್ಪಿಸಿಕೊಂಡು ಓಡಿಹೋಗಿರುವರು. ರುಶ್ಯಯನರು ಟರ್ಕಿಯ ಅರ್ಮೇನಿಯವನ್ನು ಒಳನುಗ್ಗಿ ಆ ಪ್ರಾಂತ್ಯಗಳ ಫಲವತ್ತಾದ ಪ್ರಾಂತ್ಯಗಳನ್ನು ಕೈವಶ ಮಾಡಿಕೊಂಡಿರುತ್ತಾರೆ.

ತಾ. 12ನೇ ದಶಂಬರ.

ಆರ್ಗೋನ್ನೆಯಲ್ಲಿ ಫ್ರೆಂಚರ ಸೇನೆಯು ಮುಂದರಿದು ಹೋಗಿ ಹಲವು ಸೇನಾ ನೆಲೆಗಳನ್ನು ಹಿಡಿದಿರುತ್ತದೆ. ಶತ್ರುಗಳು ಮೇಲ್ಮಾಯಿದು ಬರುವಂಥಾದ್ದನ್ನು [illegible] ಸಿರುತ್ತಾರೆ. [illegible]

ಬ್ರಿಟಿಷ ಸಾಮ್ರಾಜ್ಯಕ್ಕೆ ಬ್ರಿಟಿಷ ವಸಾಹತುಗಳಿಂದ ಈ ಯುದ್ಧ ಕಾಲದಲ್ಲಿ ಕೊಡೋಣಾದ ಸಹಾಯದ ವಿವರವು ಪ್ರಕಟವಾಗಿರುವುದು. 'ಗೋಲ್ಡ್‌ಕೋಸ್ಟ್' ವಸಾಹತಿಯವರು ಟೋಗೋಲೆಂಡನ್ನು ಹಿಡಿಯಲು ತಗಲಿರುವ ಖರ್ಚನ್ನು ವಹಿಸಿಕೊಳ್ಳಲು ಸಿದ್ಧರಾಯಿರುವರಲ್ಲದೆ ೬೦,೦೦೦ ಪವನುಗಳನ್ನೂ ೧೯೧೫ರಲ್ಲಿ ಯುದ್ಧದ ಖರ್ಚಿಗಾಗಿ ೮೦,೦೦೦ ಸಾವಿರ ಪವನುಗಳನ್ನೂ ಸಾಮ್ರಾಜ್ಯ ಸರಕಾರದವರಿಗೆ ಕೊಡಲು ನಿಶ್ಚೈಸಿರುತ್ತಾರೆ. ಬ್ರಿಟಿಷ ಗಿಯನ್ನಾ ಒಂದು ಸಾವಿರ ಟನ್ನು ಸಕ್ಕರೆಯನ್ನೂ ಅರ್ಧ ಮಿಲಿಯ ರಾತಲುಗಳಷ್ಟು ಅಕ್ಕಿಯನ್ನೂ ಕೊಡುವುದು.

ಪೂರ್ವ ರಣರಂಗದಲ್ಲಿ ವಾರ್ಸೊ ಹತ್ತಿರ ನಡಿಯುತ್ತಿರುವ ಸಮರವು ಇನ್ನೂ ಪೂರ್ಣವಾಗಲಿಲ್ಲ. ಕ್ರೆಕೌ ಸಮೀಪ ನಡಿಯುತ್ತಿರುವ ಕಾಳಗದಲ್ಲಿ ರುಶ್ಯನರು ಜಯಶೀಲರಾಗುತ್ತಿದ್ದಾರೆ. ಸರ್ವಿಯನರು ಯುದ್ಧರಂಗದಲ್ಲಿ ಒಸ್ಟ್ರಿಯನರನ್ನು ಸೋಲಿಸಿದ್ದರಿಂದ ಒಸ್ಟ್ರಿಯನರು ಹಿಂದಕ್ಕೆ ಓಡುತ್ತಿರುವರು. ಎರಡು ಸಾವಿರ ಒಸ್ಟ್ರಿಯ ಸೇನಿಕರನ್ನೂ, ಹಲವು ಫಿರಂಗಿಗಳನ್ನೂ, ಇತರ ಯುದ್ಧ ಸಾಮಾಗ್ರಿಗಳನ್ನೂ ಸರ್ವಿಯನರು ಹಿಡಿದಿರುತ್ತಾರೆ.

ತಾ. 13ನೇ ದಶಂಬರ.

ಸಂಯುಕ್ತ ಸೇನೆಗಳು ಶತ್ರುಗಳ ಸುರಂಗಗಳನ್ನೂ ಸೇನಾ ನೆಲೆಗಳನ್ನೂ ಕೈವಶ ಮಾಡಿಕೊಳ್ಳುತ್ತ ಅವುಗಳನ್ನು ಭದ್ರಪಡಿಸಿಕೊಳ್ಳುತ್ತಿರುವರು. ಎಂಟವರ್ಪ ಪಟ್ಟಣವನ್ನು ಮಿತ್ರರು ಕೈವಶ ಮಾಡಿಕೊಳ್ಳಲು ಪ್ರಯತ್ನ ನಡಿಸುವರೆಂಬದನ್ನು ಜರ್ಮನರು ಕೇಳಿಕೊಂಡು ಎಂಟವರ್ಪ್ ಪಟ್ಟಣಕ್ಕೆ ೫೭,೦೦೦ ಸೇನೆಯನ್ನು ಕಳುಹಿಸಿಕೊಟ್ಟಿರುವರೆಂತ ಡಚ್ಚ್ ವರ್ತಮಾನ ಪತ್ರಗಳು ಪ್ರಸ್ತಾಪಿಸುತ್ತಲಿವೆ. ಬರ್ಲಿನಿನಲ್ಲಿ ಜರ್ಮನ್ ಕೈಸರರು ತಮ್ಮ ಶೀತ ಬಾಧೆಯಿಂದ ಇನ್ನೂ ಗುಣಹೊಂದಲಿಲ್ಲ. ಎಂಟವರ್ಪ್ ಪಟ್ಟಣದ ಮೇಲೆ ಮಿತ್ರರ ಆಕಾಶ ವಿಮಾನಕಾರರು ತಿರುಗಾಡುತ್ತ ಸಿಡಿಮದ್ದಿನ ತೋಪೆಗಳನ್ನು ಅಲ್ಲಲ್ಲಿ ಬಿಸಾಡಿದರಲ್ಲದೆ ದಶಂಬರ ತಾ. ೧೫ಕ್ಕೆ ಮಿತ್ರರ ಸೇನೆಯು ಎಂಟವರ್ಪ್ ಪಟ್ಟಣವನ್ನು ಒಳನುಗ್ಗುವುದೆಂಬ ವರ್ತಮಾನವನ್ನು ಜನರು ತಿಳಿಯುವಂತೆ ಕಾಗದಗಳನ್ನು ಸಹ ಆಕಾಶ ವಿಮಾನಗಳಿಂದ ಕೆಳಗೆ ಹಾಕಿದರೆಂಬ ವರ್ತಮಾನವು ಲಂಡನಿನಿಂದ ಕೇಳಿಬರುವುದು.

ಶಾಂತ ಸಾಗರದಲ್ಲಿರುವ ಜರ್ಮನರ ನೌಕಾಪಡೆಯನ್ನು ಬ್ರಿಟಿಷ ನೌಕಾಪಡೆಯು ನಾಶಮಾಡಿರುವುದು. ಜರ್ಮನರ ೫ ಯುದ್ಧನಾವೆಗಳಲ್ಲಿ ಮೂರನ್ನು ಮುಳುಗಿಸಿಬಿಟ್ಟಿರುವರು. ಎರಡು ನಾವೆಗಳು ತಪ್ಪಿಸಿಕೊಂಡು ಓಡಿಹೋಗಿವೆ. ಶಾಂತಸಾಗರದಲ್ಲಿ ಜರ್ಮನರ ಹಾವಳಿಯು ಇನ್ನು ಇದರಿಂದ ತಲೆದೋರದು. ಬ್ರಿಟಿಷ ನೌಕಾಪಡೆಯ ಈ ಪರಾಕ್ರಮವನ್ನು ಶ್ಲಾಘಿಸಿ ಎಲ್ಲಾ ಕಡೆಗಳಿಂದಲೂ ಪತ್ರಗಳು ಅದರ ಸೇನಾ ನಾಯಕರಿಗೆ ಬರುತ್ತಿವೆ.

ತಿಗ್ರಿಸ್ ಮತ್ತು ಯುಫ್ರೆಟೀಸ್ ನದಿಗಳು ಕೂಡುವಲ್ಲಿ ಕರ್ನಾ ಎಂಬಲ್ಲಿರುವ ಟರ್ಕಿಯ ಸೇನೆಯು ಬ್ರಿಟಿಷರ ಸೇನೆಯ ಮರೆಹೊಕ್ಕಿರುವುದು.

ಸರ್ವಿಯಾನರು ವಾಲ್ಜೆವೊ ಮತ್ತು ಉಜಿಚ್ಚ ಪಟ್ಟಣಗಳನ್ನು ಶತ್ರುಗಳಿಂದ ಹಿಂದಕ್ಕೆ ಪಡದಿರುವರು. ಒಸ್ಟ್ರಿಯಾನರ ೨೦,೦೦೦ ಸೇನಿಕರನ್ನು ಸರ್ವಿಯಾನರು ಸೆರೆಹಿಡಿದಿರುವರು. ಲೋಡ್ಜ ಪಟ್ಟಣವನ್ನು ರುಶ್ಯಯನ್ನು ಬಿಟ್ಟು ಹೋದದ್ದು ಜರ್ಮನರ ಸೇನಾ ಬಲದಿಂದಲ್ಲವೆಂತ ಪೆಟ್ರೋಗ್ರೇಡಿನಲ್ಲಿ ಪ್ರಕಟವಾದ ವರ್ತಮಾನದಲ್ಲಿದೆ.

ತಾ. 14ನೇ ದಶಂಬರ.

[illegible] ರಂಗದಲ್ಲಿ ಮುಂದುವರಿ [illegible]

ಈಗಿನ ವಿಶೇಷ ಯುದ್ಧ ಸಮಾಚಾರಗಳು ಪಶ್ಚಿಮ ರಣರಂಗದಲ್ಲಿರುವ ಫ್ಲಾಂಡರ್ಸ ಪಶ್ಚಿಮ ಪ್ರಾಂತ್ಯಗಳಲ್ಲಿ ತಮಗೆ ಪ್ರಾಪ್ತವಾಗಿರುವ ಸ್ಥಿತಿಯನ್ನು ನೋಡಿಕೊಂಡು ಜರ್ಮನರು ಬೆಲ್ಜಿಯಮಿನಿಂದ ಈ ಪ್ರಾಂತ್ಯಗಳಿಗೆ ಸೇನೆಗಳನ್ನು ಕಳುಹಿಸುತ್ತಿದ್ದಾರೆ. ಫ್ರಾನ್ಸಿನ ಉತ್ತರ ಪ್ರಾಂತ್ಯದಿಂದ ಸಹ ಜರ್ಮನರ ೬೦೦೦ ಸೇನೆಯು ಈ ಪ್ರಾಂತ್ಯಗಳಿಗೆ ಹೋಗಿರುವದೆಂತ ಡಚ್ಚ್ ಪತ್ರಗಳಲ್ಲಿ ಪ್ರಕಟವಾಗಿರುವುದು. ಯುದ್ಧಕ್ಕೆ ಸೇರುವ ಸಂಭವವು ಹೊಲ್ಲೆಂಡ್ ದೇಶಕ್ಕೆ ಪ್ರಾಪ್ತವಾದೆಂದು ಹೊಲ್ಲೆಂಡಿನ ಖಜಾನಾ ಮಂತ್ರಿಗಳು ತಿಳಿಯ ಹೇಳಿರುವರು.

ಶಾಂತಸಾಗರದಲ್ಲಿ ಬ್ರಿಟಿಷರು ಜರ್ಮನರ ಇನ್ನೊಂದು ಯುದ್ಧನಾವೆಯನ್ನು ನಾಶಪಡಿಸಿರುವರು.

ರುಶ್ಯಯನರು ತಮ್ಮ ಸೇನಾನೆಲೆಗಳನ್ನು ಬದಲಾಯಿಸಿಕೊಂಡು ಯುದ್ಧರಂಗವನ್ನು ಎಲ್ಲಿ ಸ್ಥಾಪಿಸಿರುವರೆಂಬುದು ಇನ್ನೂ ಗೊತ್ತಾಗಲಿಲ್ಲ. ಒಸ್ಟ್ರಿಯನರಿಗೆ ಸರ್ವಿಯನರಿಂದ ಪ್ರಾಪ್ತವಾದ ಅಪಜಯವನ್ನು ಒಸ್ಟ್ರಿಯನರು ತಮ್ಮ ಯುದ್ಧ ಸಮಾಚಾರಗಳಲ್ಲಿ ಸೂಚಿಸಿರುತ್ತಾರೆ.

ತಾ. 15ನೇ ದಶಂಬರ.

ಲಾಬಾಸ್ಸೆಯನ್ನು ಫ್ರೆಂಚರು ಕೈವಶ ಮಾಡಿಕೊಂಡಿರುವರು. ಈ ಪ್ರಾಂತ್ಯಗಳಲ್ಲಿ ಜರ್ಮನರ ಸೇನಾಬಲವು ಬಹು ನಿಕೃಷ್ಟ ಸ್ಥಿತಿದ್ದಾಗಿರುತ್ತದೆ. ವೈಸರ್ ಕಾಲುವೆಯ ಪಶ್ಚಿಮ ದಡವನ್ನು ಶತ್ರುಗಳು ಬಿಟ್ಟು ಹೋಗಬೇಕಾಯಿತು. ಸಂಯುಕ್ತ ಸೇನೆಗಳು ಈ ದಡವನ್ನು ತಮ್ಮ ಸ್ವಾಧೀನಮಾಡಿಕೊಂಡಿರುತ್ತಾರೆ. ಯಾಪ್ರೆಸ್ ಪ್ರಾಂತ್ಯಗಳಲ್ಲಿ ಒಂದೆರಡು ಸಲ ಸಂಯುಕ್ತ ಸೇನೆಗಳ ಮೇಲೆ ದಾಳಿ ಇಟ್ಟರೂ ಜರ್ಮನರು ಈ ಪ್ರಯತ್ನದಲ್ಲಿ ಜಯಶೀಲರಾಗಲಿಲ್ಲ. ಶತ್ರುಗಳ ಸೇನಾ ನೆಲೆಯ ಕಡೆಗೆ ಸಂಯುಕ್ತ ಸೇನೆಗಳು ಮುಂದುವರಿಯುತ್ತಲಿವೆ. ಕೈಸರರ ಮತ್ತು ಜರ್ಮನ ಸೇನಾನಾಯಕರಲ್ಲಿ ಭೇದಬುದ್ಧಿಯು ಪ್ರಾಪ್ತವಾದ್ದರಿಂದ ಜನರಲ್ ವೋನ್ ಮಾಲ್ಟಕೆಯವರ ಸೇನಾನಾಯಕತ್ವವನ್ನು ಬೇರೊಬ್ಬರಿಗೆ ಕೈಸರರು ಕೊಟ್ಟಿರುತ್ತಾರೆ. ಮಿತ್ರರು ರೋಮಪಟ್ಟಣದಲ್ಲಿ ಪೋಪ ಜಗದ್ಗುರುಗಳ ಸಂದರ್ಶನವನ್ನು ಮಾಡಲು ಸರ್. ಎಚ್. ಹೊವಾರ್ಡ ಎಂಬವರನ್ನು ನೇಮಿಸಿರುವರು. ಬಾಲ್ಟಿಕ್ ಉಪಸಾಗರದಲ್ಲಿ ಜರ್ಮನರ ಇನ್ನೊಂದು ನಾವೆಯು ನಾಶವಾಗಿ ಹೋಗಿರುವುದು. ಕ್ರೆಕೌನಿನ ದಕ್ಷಿಣದಲ್ಲಿ ರುಶ್ಯಯನರು ಒಸ್ಟ್ರಿಯನರನ್ನು ಸೋಲಿಸಿಬಿಟ್ಟಿರುತ್ತಾರೆ. ಮ್ಲಾವಾ ಪ್ರಾಂತ್ಯದಲ್ಲಿ ರುಶ್ಯಯನರು ಜರ್ಮನರನ್ನು ಸೋಲಿಸಿ ಓಡಿಸಿರುವರು. ಸರ್ವಿಯನರ ಸೇನೆಗೆ ಬೆಂಬಲವಾಗಿ ರುಶ್ಯಯನರ ೫ ಸೇನಾ ಪಾಳಯಗಳು ಬಂದು ಸೇರಿವೆ. ಟರ್ಕಿಗೆ ಜರ್ಮನಿಯ ಸಾಲವನ್ನು ಕೊಡುವ ವಾಗ್ದಾನದ ಮೇಲೆ ಟರ್ಕಿಯು ಯುದ್ಧವನ್ನು ಸೇರಿತೆಂಬ ಪ್ರಸ್ತಾಪವು ಪೆಟ್ರೋಗ್ರೇಡಿನ ವರ್ತಮಾನ ಪತ್ರಗಳಲ್ಲಿ ಪ್ರಕಟವಾಗಿರುತ್ತದೆ. ಕ್ರಿಸ್ಮಸ್ ಕಾಲದಲ್ಲಿ ಸ್ವಲ್ಪ ದಿವಸಗಳ ಮಟ್ಟಿಗಾದರೂ ಯುದ್ಧವನ್ನು ನಿಲ್ಲಿಸಬೇಕೆಂತ ಪೋಪ ಸಾಹೇಬರು ಮಾಡಿದ ಪ್ರಯತ್ನಗಳು ನೆರವೇರಲಿಲ್ಲ.

ತಾ. 16ನೇ ದಶಂಬರ.

ಪಶ್ಚಿಮರಣರಂಗದ ಯುದ್ಧಸಮಾಚಾರದಲ್ಲಿ [illegible] ಏನೂ ಇರವು. ಜರ್ಮನಿಯಲ್ಲಿ [illegible] ದಿನಲ್ಲಿರುವ ನಿವಾಸಿಗಳ [illegible] ದಿಗಳನ್ನು ಜರ್ಮನರು [illegible] ದಿಂದ ಗುಣ ಹೊಂದುತ್ತಿರುವರು. [illegible]

ವಿದೇಶ ವೃತ್ತಾಂತ

ಈಚೆಗೆ ನಡೆದ ಕದನದಲ್ಲಿ ಒಬ್ಬ ಜರ್ಮನನು ಕಂದಕದಿಂದ ಮೇಲೆ ಬಂದು ತನ್ನ ಜೊತೆಗಾರನೊಬ್ಬನನ್ನು ರಕ್ಷಿಸುವದಕ್ಕೆ ಪ್ರಯತ್ನಿಸಿದನು. ಆದರೆ ಇವನ ಉದ್ದೇಶವು ತಿಳಿದುಬರುವ ಮೊದಲೇ ಬ್ರಿಟಿಷರ ಶಿರರಗಿಗಳ ಗುಂಡಿನಿಂದ ಹತನಾದನು. ಅನಂತರ ಬ್ರಿಟಿಷರು ಗುಂಡು ಹಾರಿಸುವದನ್ನು ನಿಲ್ಲಿಸಿ ಒಬ್ಬ ಬ್ರಿಟಿಷ ಆಫೀಸರನು ಜರ್ಮನನ ಸಹಾಯಕ್ಕೆ ಹೋದನು. ಈ ಬ್ರಿಟಿಷ ಆಫೀಸರನಿಗೆ ಜರ್ಮನರು ಹೊಡೆದ ಗುಂಡು ಬಿತ್ತು. ಆದರೂ ಆ ಜರ್ಮನನನ್ನು ರಕ್ಷಿಸಿ, ಬ್ರಿಟಿಷ ನೆಲೆಗೆ ತಂದನು. ಇದನ್ನು ನೋಡಿದ ಜರ್ಮನರು ಈ ಬ್ರಿಟಿಷ ಆಫೀಸರನಿಗೆ ಅಯರ್ನ್‌ಕ್ರಾಸ್ ಎಂಬ ಬಿರುದು ಕೊಟ್ಟರು. ಬ್ರಿಟಿಷರು ಈ ಆಫೀಸರನಿಗೆ ವಿಕ್ಟೋರಿಯ ಕ್ರಾಸ್ ಎಂಬ ಬಿರುದು ಕೊಡಲು ಸಿಫಾರಸು ಮಾಡಿದರು. ಆದರೆ ಈ ಬ್ರಿಟಿಷ ಆಫೀಸರನು ಪಡೆದ ಗಾಯಗಳಿಂದ ಮೃತನಾದನು.

〰〰〰

ಹೊಲ್ಲೆಂಡ್, ಡೆನ್‌ಮಾರ್ಕ ಮತ್ತು ಸ್ವೀಡನ್ ದೇಶಗಳಿಗೆ ಟಿನ್ ಪ್ಲೇಟುಗಳನ್ನು ಕಳುಹಿಸಬಾರದೆಂದು ಸ್ಪಾನ್ಸೀಯವರು ಆಜ್ಞಾಪಿಸಿದ್ದರಿಂದ ಇಂಥಾ ೩೫ ಕಾರ್ಖಾನೆಗಳು ಮುಚ್ಚಲ್ಪಟ್ಟು ೩೦೦೦ ಮಂದಿ ಕೆಲಸವಿಲ್ಲದೆ ಇರುವರು. ಜರ್ಮನರ ಸೈನಿಕರಿಗೆ ಆಹಾರಗಳನ್ನು ಕಳುಹಿಸಿಕೊಡುವರೆ ಈಗ ಇಂಥಾ ೮೦,೦೦೦,೦೦೦ [illegible]ಗಳು ಬೇಕಾಗಿರುವವು.

ಸ್ಮರ್ನಾದಲ್ಲಿರುವ ತುರ್ಕರ ಜನರಾಲ್ ಪಾಶರು ಕಾನಸ್ಟಂಟಿನೋಪಲಿನಲ್ಲಿರುವ ಯುನೈಟೆಡ್ ಸ್ಟೇಟ್ ರಾಯಭಾರಿಗೆ ಈ ರೀತಿ ಬರೆದಿರುವರು. "ಬ್ರಿಟಿಷ ಯಾ ಫ್ರೆಂಚ ಯುದ್ಧ ನಾವೆಗಳು ಸಿರಿಯದಲ್ಲಿರುವ ಕೋಟೆ ಕೊತ್ತಲುಗಳಿಲ್ಲದ ಸ್ಥಳಗಳಿಗೆ ಗುಂಡು ಹಾರಿಸಿದರೆ ನಾನು ಕೊಲ್ಲಲ್ಪಟ್ಟ ಪ್ರತಿ ಒಬ್ಬ ತುರ್ಕನ ಬದಲಿಗೆ ೩ ಫ್ರೆಂಚ ಯಾ ಬ್ರಿಟಿಷ ಪ್ರಜೆಗಳಿಗೆ ಗುಂಡು ಹೊಡೆದು ಕೊಲ್ಲುವೆನು."

〰〰〰

ಪಲೆಸ್ತೀನ ದೇಶದಲ್ಲಿರುವ ಫ್ರೆಂಚ ಮತ್ತು ರುಶ್ಯನರ ಎಲ್ಲಾ ದೇವಾಲಯಗಳನ್ನು ತುರ್ಕರು ಹಿಡಿದಿರುವರು.

〰〰〰

ಬ್ರಿಟಿಷರ ಆಯುಧ ಸಹಿತವಾಗಿ ಅತ್ತಿತ್ತ ಚಲಿಸುವ ಟ್ರೇನು ಬಂಡಿಗಳ ಕಮೇಂಡರರನ್ನು ಹಿಡಿದು ತರುವವರಿಗೆ ೧೦೦೦ ಪವನು ಗಳನ್ನು ಕೊಡುವೆನೆಂದು ಕೈಸರರು ಹೇಳಿರುವರೆಂತ ಸೆರೆಹಿಡಿಯಲ್ಪಟ್ಟ ಜರ್ಮನ ಬಂದಿಗಳು ಹೇಳುವರು.

〰〰〰

ಬೆಲ್ಜಿಯಮನ್ನು ಬಿಟ್ಟು ಹೋದ ೨೫೦,೦೦೦ ಬೆಲ್ಜಿಯನರು ಡಚ್ಚ ಪ್ರಾಂತ್ಯದಲ್ಲಿರುವರು ಎಂದು ಅಂದಾಜಾಗಿಯದೆ.

〰〰〰

ಬೆಲ್ಜಿಯಮಿನಲ್ಲಿರುವ ಜರ್ಮನ್ ಸೇನೆಯ ಮೇಲೆ ಬೊಂಬುಗಳನ್ನು ಬಿಸಾಡಿ ನಷ್ಟಪಡಿಸಿದ ಸಂಸೋನನೆಂಬ ವಿಮಾನಗಾರನನ್ನು ಹಿಡಿಯುವವನಿಗೆ ಯಾ ಹತಬಡೆಯುವವನಿಗೆ ೫೦ ಪವನುಗಳು ಬಹುಮಾನ ಕೊಡಲ್ಪಡುವದೆಂದು ಜರ್ಮನರು ಪ್ರಕಟಿಸಿರುವರೆಂತ ಅಮ್‌ಸ್ಟರ್‌ಡಮಿನಲ್ಲಿ ಪ್ರಕಟವಾಗಿದೆ.

〰〰〰

ನ್ಯೂಯಾರ್ಕಿನ ನ್ಯೂಜೆರ್ಸಿಯಲ್ಲಿರುವ ಎಡಿಸನರ ಕಾರ್ಖಾನೆಗೆ ಬೆಂಕಿ ಬಿದ್ದು ೫ ಮಿಲಿಯ ಡೊಲ್ಲರುಗಳ ನಷ್ಟವಾಗಿರುವದು.

〰〰〰

ಘಾಯ ಒಡೆದ ಒಬ್ಬ ಜರ್ಮನ ಸೈನಿಕರು ಫ್ರೆಂಚ ಆಸ್ಪತ್ರಿಗೆ ತರಲ್ಪಟ್ಟನು. ಅವನ ಅಂಗಿಯ ಮೇಲೆ ಒಂದು ಚೀಟು ಚುಚ್ಚಿತ್ತು. ಅದರಲ್ಲಿ ಈ ಜರ್ಮನ ಯುವಕನು ೯ ಫ್ರೆಂಚ ಸೇನಿಕರ ಜೀವವನ್ನು ಉಳಿಸಿದ್ದರಿಂದ ಬಹು ಜಾಗ್ರತೆಯಿಂದ ಇವನ ಪರಾಂಬರಿಕೆ ಮಾಡಬೇಕೆಂದು ಬರೆದಿತ್ತು. ಈ ೯ ಮಂದಿ ಫ್ರೆಂಚರನ್ನು ಜರ್ಮನರು ಒಂದು ಕಡೆಯಲ್ಲಿ ನಿಲ್ಲಿಸಿ ಗುಂಡು ಹೊಡೆದು ಕೊಲ್ಲಲಿಕ್ಕಿರುವಾಗ ೧೮ ವರ್ಷದ ಈ ಜರ್ಮನ ಯುವಕನು ಈ ಕೃತ್ಯವನ್ನು ವಿರೋಧಿಸಿ ಇದು ಕೊಲೆಪಾತಕವೆಂದನು. ಆಗಲೇ ರಣರಂಗದಲ್ಲಿ ಬದಲಾವಣೆಯಾಗಿ ಈ ಯುವಕನು ಘಾಯ ಹೊಂದಿ ಫ್ರೆಂಚರ ಬಂದಿಯಾದನು. ರಣರಂಗದ ಡಾಕ್ಟರರು ಇವನ ಘಾಯಗಳನ್ನು ಕಟ್ಟಿ ಆ ಚೀಟನ್ನು ಅಂಗಿಗೆ ಚುಚ್ಚಿ ಆಸ್ಪತ್ರಿಗೆ ಕಳುಹಿಸಿ ಕೊಟ್ಟರು.

ಫ್ರಾನ್ಸಿನಲ್ಲಿರುವ ಜರ್ಮನ ಗೂಢಾಚಾರರ ವಿಷಯವಾದ ವರದಿಯು "ದಿ ಟೈಮ್ಸ್ ಲಂಡರ್" ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿರುವದು.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road BOMBAY.

ಏಜಂಟರು:—ಡಿ. ಊಲನ್ [illegible],
ಮಾಧವ [illegible], [illegible], ಮಂಗಳೂರು.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೋಯಲ್ ಸ್ಸಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. [illegible] ಆಗಿರುತ್ತದೆ; ಚಂದಾದಾರರಾಗಿ ಸೇರಬೇಕೆನ್ನುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
[illegible] ಪೇಟೆ, ಧಾರವಾಡ

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 25ನೇ ದಶಂಬರ 1914

೧೯೧೩—೧೪ನೇ ವರುಷದ ಮಂಗಳೂರು ಮುನ್ಸಿಪಾಲಿಟಿಯ ಆಡಳಿತೆಯ ವೃತ್ತಾಂತವು.

ಗತವರುಷದ ಮಂಗಳೂರು ಮುನಿಸಿಪಾಲಿಟಿಯ ಆಡಳಿತೆಯು ಎಲ್ಲಾ ಭಾಗಗಳಲ್ಲಿಯೂ ಬಹಳ ಚೆನ್ನಾಗಿತ್ತು, ಮುನ್ಸಿಪಲ್ ಕೌನ್ಸಿಲಿನಲ್ಲಿದ್ದ ಅಂತಃಕಲಹಗಳು ಮುನ್ಸಿಪಲ್ ಚೇಯರ್ಮೆನ್‌ರಾದ ದಿವಾನ್ ಬಹದ್ದೂರ್ ಮುಂಡಪ್ಪ ಬಂಗೇರರವರ ಆಡಳಿತೆಯಲ್ಲಿ ಮಾಜಿಹೋಗಿರುವವು, ಚೇಯರ್ಮೆನರ ಶ್ರಮವನ್ನು ಕೌನ್ಸಿಲಿನವರ ಕೊಂಡಾಡಿದ್ದನ್ನು ಕಂಡು ತಾನು ಬಹಳ ಸಂತೋಷಪಟ್ಟೆನೆಂಬುದಾಗಿ ಜಿಲ್ಲಾ ಕಲೆಕ್ಟರ್ ದೊರೆಗಳವರು ಈ ಆಡಳಿತೆಯ ವೃತ್ತಾಂತವನ್ನು ಪರಿಶೀಲಿಸಿ ಬರೆದಿರುತ್ತಾರೆ. ಸರಕಾರದವರು ತಮ್ಮ ಪರಿಶೀಲನೆಯಲ್ಲಿ ಸಹ ಕಲೆಕ್ಟರ್ ದೊರೆಗಳವರ ಅಭಿಪ್ರಾಯವನ್ನು ಆದರಿಸಿ ಕೌನ್ಸಿಲಿನವರ ಮತ್ತು ಚೇಯರ್ಮೆನರವರ ಶ್ರಮವನ್ನು ಕೊಂಡಾಡಿರುವರು. ಮಂಗಳೂರು ಮುನ್ಸಿಪಲ್ ಕೌನ್ಸಿಲಿನವರು ತಮ್ಮೊಳಗಿನ ಅಂತಃಕಲಹಗಳಿಂದ ಚೇಯರ್ಮೆನರನ್ನು ಆರಿಸುವ ಸ್ವತಂತ್ರವನ್ನು ಸರಿಯಾಗಿ ವಿನಿಯೋಗಿಸದಿದ್ದ ಕಾಲದಲ್ಲಿ ಕಲೆಕ್ಟರರ ಮೂಲಕ ಸರಕಾರದವರಿಂದ ಏರ್ಪಡಿಸಲ್ಪಟ್ಟ ಚೇಯರ್ಮೆನರ ಸೇವೆ ಕವ್ರುಪುರಜನರಿಗೂ ಕೌನ್ಸಿಲಿನವರಿಗೂ ತೃಪ್ತಿಕರವಾಗಿ ಪರಿಣಮಿಸಿತೆಂಬುದಾಗಿ ತಿಳಿಯಲು ಸಂತೋಷಪಡುತ್ತೇವೆ. ಸರಕಾರದವರ ಹುದ್ದೆಯಲ್ಲಿದ್ದಾಗ ಅವರ ಪ್ರೀತಿ ವಿಶ್ವಾಸಕ್ಕೆ ಅರ್ಹರಾಗಿದ್ದ ರಾ| ಬಂಗೇರರವರು ಈ ಹುದ್ದೆಯಿಂದ ನಿವೃತ್ತರಾದ ಮೇಲೆ ಪ್ರಜಾಸೇವೆಯನ್ನು ಕೈಕೊಂಡು ಈ ಭಾಗದಲ್ಲಿಯೂ ತಮ್ಮ ಅರ್ಹತೆಯನ್ನು ತೋರಿಸಿದ್ದನ್ನು ನೋಡಿ ಆನಂದಪಟ್ಟಿರುವೆವು.

ಕಲೆಕ್ಟರರು ಮತ್ತು ಸರಕಾರದವರು ಸ್ತುತಿಸಿರುವ ಆಡಳಿತೆಯ ವಿಶೇಷತ್ವವು ಏನೆಂಬುದಾಗಿ ತಿಳಿಯುವುದು ಈ ಸಂದರ್ಭದಲ್ಲಿ ಅಗತ್ಯ. ಮುನ್ಸಿಪಾಲಿಟಿಯ ಒಟ್ಟಿನ ಆದಾಯದಲ್ಲಿ ೧೯೧೨—೧೩ನೇ ವರುಷಕ್ಕಿಂತ ಗತ ವರುಷದಲ್ಲಿ ರೂ ೬,೦೧೭—೧—೩ ಹೆಚ್ಚು ದೊರಕಿರುವುದು. ಮುನ್ಸಿಪಾಲಿಟಿಗೆ ಬರಬೇಕಾದ ತೆರಿಗೆಗಳೆಲ್ಲವೂ ವರುಷಾಂತ್ಯದೊಳಗೇನೇ ವಸೂಲು ಮಾಡಲ್ಪಟ್ಟಾಗಿವೆ. ತೆರಿಗೆಗಳನ್ನು ವಿಶೇಷ ಚಟುವಟಿಕೆಯಿಂದ ವಸೂಲು ಮಾಡಿದ್ದರಿಂದಲೂ ಕಟ್ಟೋಣಗಳ ಮೇಲಣ ತೆರಿಗೆ, ನೆಲತೆರಿಗೆ, ಸಾಲುಮರಗಳಿಂದ ದೊರಕಿದ ಆದಾಯ, ಮಾರ್ಕೆಟುಗಳಿಂದ ದೊರೆಯುವ ಆಯ, ಮೊದಲಾದವುಗಳು ಹೆಚ್ಚಿದ್ದರಿಂದಲೂ ಮುನ್ಸಿಪಾಲಿಟಿಯ ಒಟ್ಟಿನ ಆಯವು ಅಧಿಕವಾಗಲು ಕಾರಣವಾಯಿತು. ಮುನ್ಸಿಪಾಲಿಟಿಯವರು ಗತವರುಷದಲ್ಲಿ ಒಟ್ಟಿಗೆ ರೂ. ೧,೩೫,೩೭೮—೮—೩ನ್ನು ಖರ್ಚು ಮಾಡಿರುವರು. ಈ ಮೊಬಲಗಿನಲ್ಲಿ ಸರಕಾರದವರು ಆಗಿಂದಾಗ್ಯೆ ಕೊಟ್ಟ ದ್ರವ್ಯಸಹಾಯವು ಸೇರಿರುವುದರಿಂದ ಇದು ಮುನ್ಸಿಪಾಲಿಟಿಯ ಆದಾಯಕ್ಕಿಂತಲೂ ಹೆಚ್ಚಾಗಿ ತೋರುವುದು. ಮಾರ್ಗಗಳ ದುರುಸ್ತಿ ಮೊದಲಾದ ಕೆಲಸಗಳಲ್ಲಿ ಗತವರುಷದಲ್ಲಿ ರೂ. ೭೧,೦೫೯—೧೨—೭ ಖರ್ಚು ಮಾಡಿರುವರು. ಅಂದರೆ ೧೯೧೨—೧೩ನೇ ವರುಷದಲ್ಲಿ ಈ ಬಗ್ಯೆ ಖರ್ಚು ಮಾಡಿದ ಮೊಬಲಗಿಕ್ಕಿಂತ ರೂ. ೨೯,೭೭೪—೭—೧೦ನ್ನು ಹೆಚ್ಚಾಗಿ ಖರ್ಚು ಮಾಡಿರುತ್ತಾರೆ. ಈ ರೀತಿ ಈ ಖರ್ಚನ್ನು ಕೌನ್ಸಿಲಿನವರು ಉದಾರಹಸ್ತದಿಂದ ಮಾಡಿದರೂ ಮಾರ್ಗಗಳ ಸ್ಥಿತಿಯನ್ನು ಒಳ್ಳಿತಾಗಿ ಮಾಡಲು ಇನ್ನೂ ಅವಕಾಶವಿರುವುದೆಂಬ ಕಲೆಕ್ಟರ ದೊರೆಗಳ ಸೂಚನೆಯು ಪಟ್ಟಣಿಗರ ಅನುಭವದಿಂದ ಯಥಾರ್ಥವಾಗಿದೆಂತ ಕಂಡುಬಾರದೆ ಇರದು. ಮಾರ್ಗ ದುರುಸ್ತಿ ಹೊಲಸು ಇತ್ಯಾದಿಗಳನ್ನು ಮನೆಗಳ ವಠಾರಗಳಿಂದ ವಯ್ಯುವ ಏರ್ಪಾಡಿನ ಜಾರಿ, ಇನ್ನೂ ಕ್ಷೇಮಪಾಲನೆಯ ಇತರ ಕಾರ್ಯನಿರ್ವಾಹಗಳು, ಪಟ್ಟಣದ ಎಲ್ಲಾ ಕಡೆಗಳಲ್ಲಿಯೂ ಒಂದೇ ಸಮನಾಗಿ ನಡೆಯುವಂತೆ ಆಯಾ ವಾರ್ಡು ಕೌನ್ಸಿಲರುಗಳು ಈಗಿನಕ್ಕಿಂತ ಹೆಚ್ಚಿನ ಮೇಲ್ವಿಚಾರವನ್ನಿಡುತ್ತ ಬಂದರೆ ಎಲ್ಲಾ ಕಡೆಗಳಲ್ಲಿಯೂ ಮುನ್ಸಿಪಾಲಿಟಿಯ ಆಡಳಿತೆಯ ಕಾರ್ಯನಿರ್ವಾಹವು ಸರಿಯಾಗಿ ನಡದು ಆಗಿಂದಾಗ್ಯೆ ಈ ವಿಷಯದಲ್ಲಿ ಕೇಳಬರುತ್ತಿರುವ ಪಟ್ಟಣಿಗರ ದೂರುಗಳಿಗೆ ಆಸ್ಪದ ದೊರೆಯದು. ಈ ಬಗ್ಯೆ ಪೂರ್ಣ ಕೌನ್ಸಿಲಿನ ಮೊತ್ತವಾಗಿ ದೊರಕಬೇಕಾದ ಸಹಕಾರವು ಕೌನ್ಸಿಲಿನ ಪ್ರತಿಯೊಬ್ಬ ಮೆಂಬರರಿಗೆ ಅಗತ್ಯ. ಅಂತಃಕಲಹಗಳು ಮಾಜಿಹೋದ ಈ ಕಾಲದಲ್ಲಿ ಕೌನ್ಸಿಲಿನ ಮೆಂಬರರುಗಳಿಗೆ ಇಂಥಾ ಸಹಕಾರವು ದೊರೆಯಲು ಪ್ರಕೃತ ಅಭ್ಯಂತರವಿರದೆಂಬುದಾಗಿ ಗ್ರಹಿಸುತ್ತೇವೆ. ಗತವರುಷದ ಆಡಳಿತೆಯಲ್ಲಿ ನೆರವೇರಿದ ಕಾಮಗಾರಿಗಳ ವೃತ್ತಾಂತವು ಸ್ತುತ್ಯವಾಗಿದೆ. ೧೧ ಹೊಸ ರಸ್ತೆಗಳು ಹಾಕಲ್ಪಟ್ಟಾಗಿರುವವು. ಕಬ್ಬಿಣದ ತಗಡಿನ ೨ ಪಾಯಿಖಾನೆಗಳು ಜನರ ಉಪಯೋಗಾರ್ಥವಾಗಿ ಕಟ್ಟಲ್ಪಟ್ಟಾಗಿವೆ. ಆಯಾ ರಸ್ತೆಗಳಲ್ಲಿ ಕಸ ತುಂಬಿಸಲು ೨೩ ಕಬ್ಬಿಣದ ತೊಟ್ಟಿಗಳು ಹೊಸತಾಗಿ ಹಾಕಲ್ಪಟ್ಟಾಗಿವೆ. ಹಲವು ರಸ್ತೆಗಳು ಕೂಡುವಲ್ಲಿ ಜನಸಂಚಾರವು ಅಧಿಕವಾಗಿರುವ ಐದು ಕಡೆಗಳಲ್ಲಿ ಪಟ್ಟಣ ನಿವಾಸಿಕರಲ್ಲಿ ಕೆಲವರು ಉಚಿತವಾಗಿ ಕೊಟ್ಟು ಬಹಳ ಪ್ರಜ್ವಲವಾದ ಬೆಳಕುಳ್ಳ ಅಲ್ಲಾಡೀನ್ ದೀಪಗಳನ್ನು ಉರಿಸುತ್ತಿರುವರು. ದೀಪಸ್ತಂಭಗಳು ಇಲ್ಲದ ೧೧ ಕಡೆಗಳಲ್ಲಿ ಹೊಸ ದೀಪಸ್ತಂಭಗಳನ್ನು ನಟ್ಟಿರುವರು. ಪಟ್ಟಣದಲ್ಲಿಯ ಅನಾರೋಗ್ಯದ ನಿವಾರಣಾರ್ಥವಾಗಿ ವಾಯುಸಂಚಾರವು ಮನೆವಠಾರಗಳಲ್ಲಿ ಸರಿಯಾಗಿ ಆಗುವಂತೆ ಹೊಸ ಮಾರ್ಗಗಳನ್ನು ಪಟ್ಟಣದ ಕೆಲವು ಪ್ರಾಂತ್ಯಗಳಲ್ಲಿ ಹಾಕಿಸಿದರೂ ಪಟ್ಟಣದ ಆರೋಗ್ಯದ ಸ್ಥಿತಿಯು ಇನ್ನೂ ಅತೃಪ್ತಿಕರವಾಗಿರುವುದು. ಇಂಥಾ ಮಾರ್ಗಗಳನ್ನು ಹಾಕಿಸಲು ಕೊಟ್ಟಿರುವ ಮೊಬಲಗಿನಲ್ಲಿ ರೂ ೨೦,೦೦೦ ಸಿಲುಕಿನಲ್ಲಿ ಉಳಿದಿರುವುದರಿಂದ ಈ ಮೊಬಲಗನ್ನು ಮಾರ್ಗಗಳನ್ನು ಹಾಕಿಸುವ ಬಗ್ಗೆ ಬೇಗನೆ ವಿನಿಯೋಗಿಸಬೇಕೆಂತ ಸರಕಾರದವರು ಸೂಚಿಸಿರುತ್ತಾರೆ. ಇಂಥಾ ಮಾರ್ಗಗಳ ಅಗತ್ಯವು ಪ್ರಕೃತ ಸೆಂಟ್ರಲ್ ಮತ್ತು ಕೊಡಿಯಾಲ್‌ಬೈಲ ವಾರ್ಡುಗಳಲ್ಲಿ ಬಹಳವಾಗಿರುವುದು. ಪೆಂಟ್‌ಲೆಂಡ್ ಪೇಟೆಯು ಸ್ಥಾಪನೆಯಿಂದ ಪಟ್ಟಣದ ಆರೋಗ್ಯದ ಅತೃಪ್ತಿಕರ ಸ್ಥಿತಿಯು ಇನ್ನುಮುಂದಕ್ಕೆ ನೆಟ್ಟಗಾಗಲು ಆಸ್ಪದ ದೊರಕಿರುವುದು. ಆದರೆ ಆರೋಗ್ಯ ರಕ್ಷಣೆಗೆ ಮುಖ್ಯ ಸಾಧನವಾಗಿರುವ ನೀರುಸರಬರಾಜು ಮತ್ತು ಡ್ರೈನೇಜ ಏರ್ಪಾಡುಗಳು ಬೇಗನೇ ನೆರವೇರುವ ಸಂಭವವು ಕಾಣದು. ಇಂಥಾ ಸಂದರ್ಭದಲ್ಲಿ ಮುನ್ಸಿಪಾಲಿಟಿಯ ಸೆನಿಟರಿ ಇಲಾಖೆಯವರು ಬಾವಿಗಳ ನೀರಿನಲ್ಲಿ ದೋಷಕರ ಪದಾರ್ಥಗಳು ಬಂದು ಸೇರದಂತೆಯೂ ಹೊಲಸಿನಿಂದ ಜನರಿಗೆ ಪ್ರಾಪ್ತವಾಗುವ ಅಪಾಯಗಳನ್ನು ಸಾಧ್ಯವಾದ ಮಟ್ಟಿಗೆ ಕಡಮೆ ಮಾಡುವಂತೆಯೂ ಪ್ರಯತ್ನಿಸಿದರೆ, ಈಗಿನಕ್ಕಿಂತಲೂ ಹೆಚ್ಚಿನ ಉತ್ಸಾಹದಿಂದ ಇವರು ತಮ್ಮ ಕರ್ತವ್ಯನಿರತರಾದರೆ, ಪಟ್ಟಣದ ಆರೋಗ್ಯದ ಸ್ಥಿತಿಯನ್ನು ಒಳ್ಳಿತಾಗಿ ಮಾಡಬಹುದು. ಈ ವಿಷಯವನ್ನು ಕೌನ್ಸಿಲಿನವರು ಯೋಚಿಸಿಕೊಂಡು ತಮ್ಮ ಸೆನಿಟರಿ ಇಲಾಖೆಯಲ್ಲಿ ಬೇಕಾದ ಉತ್ಸಾಹವನ್ನುಂಟುಮಾಡುವ ಬಗೆ ಹೇಗೆಂತ ಪರ್ಯಾಲೋಚಿಸುವುದು ಅಗತ್ಯ.

ನಮ್ಮ ಪಟ್ಟಣದ ವಿದ್ಯಾ ಸ್ಥಿತಿಯನ್ನು ಈ ಸಂಸ್ಥಾನದ ಇತರ ಪಟ್ಟಣಗಳ ಸ್ಥಿತಿಗಳೊಂದಿಗೆ ಸರಿಹೋಲಿಸಿ ನೋಡಿದ್ದಲ್ಲಿ ಈ ಪಟ್ಟಣದ ಸ್ಥಿತಿಯು ಮೇಲಾಗಿದೆಂದು ತಿಳಿಯುತ್ತೇವೆ. ಈ ಪಟ್ಟಣದಲ್ಲಿ ೪೭ ವಿದ್ಯಾ ಸಂಸ್ಥೆಗಳಲ್ಲಿ ೭,೬೫೯ ವಿದ್ಯಾರ್ಥಿಗಳು ಕಲಿಯುತ್ತಿರುವರು. ವಿದ್ಯಾಭಿವೃದ್ಧಿಗಾಗಿ ಗತವರುಷದಲ್ಲಿ ಕೌನ್ಸಿಲಿನವರು ಖರ್ಚು ಮಾಡಿದ ಹಣವು ೧೯೧೨—೧೩ನೇ ವರುಷದಕ್ಕಿಂತ ಕಡಮೆಯಾಗಿರುವುದು. ಖಾಸಗಿ ಎಲಿಮೆಂಟರಿ ಶಾಲೆಗಳಿಗೆ 'ಟೀಚಿಂಗ್ ಗ್ರೆಂಟು' ಕೊಡಲಿಕ್ಕೆ ಕೌನ್ಸಿಲಿನಲ್ಲಿ ಹಣವು ಒದಗದೆ ಇದ್ದದ್ದರಿಂದ ಈ ವಿಷಯದಲ್ಲಿ ಹೀಗೆ ಖರ್ಚು ತಗ್ಗಲು ಕಾರಣವಾಯಿತು. ಮುನ್ಸಿಪಾಲಿಟಿಯ ಆಡಳಿತೆಯಲ್ಲಿರುವ ವೆನ್‌ಲೊಕ್, ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಗಳಿಂದ ಪುರಜನರು ಎಂದಿನಂತೆ ಪ್ರಯೋಜನವನ್ನು ಪಡೆಯುತ್ತಿರುವರು. ಆದರೆ ಈ ಎರಡು ಆಸ್ಪತ್ರೆಗಳ ಕಟ್ಟಡಗಳು ಬಹಳ ಆಕ್ಷೇಪಕರವಾದ ಸ್ಥಿತಿಯಲ್ಲಿರುವುದರಿಂದ ಮುನ್ಸಿಪಾಲಿಟಿಯವರು ಇವುಗಳ ಬಗ್ಯೆ ಹೊಸ ಕಟ್ಟೋಣಗಳನ್ನು ಕಟ್ಟಿಸುವ ಬಗ್ಯೆ ಸರಕಾರದವರ ಸಹಾಯವನ್ನು ಕೇಳಿರುವರು. ಗವರ್ನರ ದೊರೆಗಳವರು ಇಲ್ಲಿ ದಯಮಾಡಿಸಿದಾಗ ಇಲ್ಲಿಯ ಆಸ್ಪತ್ರೆಗಳ ದುಸ್ಥಿತಿಯನ್ನು ಸ್ವತಹ ನೋಡಿ ಹೋಗಿರುವುದರಿಂದ ಘನವಂತರವರ ಸಂದರ್ಶನೆಯ ಫಲವಾಗಿ ಮುನ್ಸಿಪಾಲಿಟಿಗೆ ಈ ಬಗ್ಯೆ ಬೇಕಾದ ದ್ರವ್ಯಸಹಾಯವು ಕೊಡಲ್ಪಡಬಹುದೆಂಬ ಕೋರಿಕೆಯಿದೆ.

ಕಟ್ಟೋಣ ಮತ್ತು ನೆಲತೆರಿಗೆಗಳ ಪರಿಷ್ಕರಣೆಯು ಮ| ರಾ| ತಮ್ಮಣ್ಣ ಅನಂತನ್ ನಾಯರರವರಿಂದ ಬೇಗನೇ ತೃಪ್ತಿಕರವಾದ ರೀತಿಯಲ್ಲಿ ಮಾಡಲ್ಪಟ್ಟಾಗಿದೆ. ಇದರಿಂದ ಮುನ್ಸಿಪಾಲಿಟಿಗೆ ಪ್ರತಿ ವರುಷದಲ್ಲಿ ರೂ. ೫೦೦೦ದ ಆದಾಯವು ಹೆಚ್ಚಾಗಿ ದೊರಕುವುದೆಂತ ನಿರೀಕ್ಷಿಸಲ್ಪಟ್ಟಿರುವುದು. ಒಟ್ಟಿನ ಮೇಲೆ ೧೯೧೩—೧೪ನೇ ವರುಷದ ಮುನ್ಸಿಪಾಲಿಟಿಯ ಆಡಳಿತೆಯು ಸರಕಾರದವರ ಅಭಿಪ್ರಾಯದ ಮೇರೆಗೆ ತೃಪ್ತಿಕರವಾಗಿರುವುದು.

ಕ್ಷಯಿಸುತ್ತಿರುವ ಹಿಂದೂ ಜನಾಂಗವು.

ಪಂಡಿತ ಬಾಲಕೃಷ್ಣ ಎಂಬವರು ಈ ವಿಷಯವಾಗಿ ಒಂದು ಲೇಖವನ್ನು ಕಾರ್ತಿಕ ತಿಂಗಳಿನ "ವೇದಿಕ್ ಮೆಗಜಿನ್ ಮತ್ತು ಗುರುಕುಲ ಸಮಾಚಾರ" ಎಂಬ ಮಾಸಿಕ ಪತ್ರಕ್ಕೆ ಬರೆದಿರುತ್ತಾರೆ. ಹಿಂದುಗಳ ಸಂಖ್ಯೆಯು ಪ್ರಕೃತ ಕಡಮೆಯಾಗುತ್ತಿರುವ ಸರಾಸರಿಯಲ್ಲಿಯೇ ಪ್ರತಿ ದಶವರುಷಗಳ ಕಾಲದಲ್ಲಿಯೂ ಕ್ಷಯಿಸುತ್ತ ಹೋದರೆ ಹಿಂದೂಸ್ಥಾನದ ಆಯಾಯ ಸಂಸ್ಥಾನಗಳಲ್ಲಿ ಹಿಂದೂ ಜನಾಂಗವು ಇಂತಿಷ್ಟೇ ವರುಷಗಳಲ್ಲಿ ಪೂರ್ಣವಾಗಿ ಅದೃಶ್ಯವಾಗುವುದೆಂಬುದನ್ನು ಈ ಪಂಡಿತರು ಪರಿಗಣಿಸಿ ಹೇಳಿರುವರು. ಖಾನೆಶುಮಾರಿಯ ರಿಪೋರ್ಟುಗಳಿಂದ ತೋರಿಬರುವ ಆಯಾ ವರುಷಗಳ ಸರಿಯಾದ ಮತ್ತು ಯಥಾರ್ಥವಾದ ಜನಸಂಖ್ಯೆಯ ವೃತ್ತಾಂತಗಳನ್ನು ಇವರು ಆದರಿಸಿ ಬರೆದಿರುವುದರಿಂದ ಪಂಡಿತರ ಈ ಪರಿಗಣನೆಯನ್ನು ಯಾವ ರೀತಿಯಲ್ಲಿಯಾದರೂ ತಪ್ಪೆಂತ ಹೇಳಲು ಆಸ್ಪದವಿರದು. ಹಿಂದೂಸ್ಥಾನದ ವಾಯುವ್ಯ ಸರಹದ್ದುಗಳ ಸಂಸ್ಥಾನಗಳಲ್ಲಿರುವ ಹಿಂದೂಗಳು ೧೦೧ ವರುಷಗಳಲ್ಲಿಯೂ, ಪಂಜಾಬಿನಲ್ಲಿರುವವರು ೯೯೯ ವರುಷಗಳಲ್ಲಿಯೂ, ಅಸ್ಸಾಮಿನಲ್ಲಿರುವವರು ೧೯೦ ವರುಷಗಳಲ್ಲಿಯೂ, ಕೊಡಗು ಜಿಲ್ಲೆಯ ಹಿಂದೂಗಳು ೨೦೧ ವರುಷಗಳ ಕಾಲದಲ್ಲಿಯೂ ಬಂಗಾಳದವರು ೩೩೨ ವರುಷಗಳಲ್ಲಿಯೂ, ಬಿಜವಿಹಾರ ಮಾರ್ವಾಡದಲ್ಲಿಯವರು ಸುಮಾರು ಐದು ಶತಮಾನಗಳಲ್ಲಿಯೂ, ಮದ್ರಾಸು ಸಂಸ್ಥಾನದಲ್ಲಿನ ಹಿಂದುಗಳು ೧೦ ಶತಮಾನಗಳಲ್ಲಿಯೂ ನಿರ್ನಾಮರಾಗಬಹುದೆಂದು ಈ ಪಂಡಿತರ ಲೆಕ್ಕದಿಂದ ತೋರಿಬರುತ್ತದೆ. ಹಿಂದುಗಳು ಈ ರೀತಿ ಕ್ಷಯಿಸುತ್ತಿರುವ ಕಾರಣಗಳನ್ನು ಶೋಧಿಸಿಕೊಂಡು ಹಿಂದೂ ಜನಾಂಗದ ಕ್ಷಯವನ್ನು ಶೀಘ್ರದಲ್ಲಿ ತಡೆಯದಿದ್ದರೆ ಹಿಂದೂಸ್ಥಾನದ ಹಿಂದೂಗಳೆಲ್ಲಾ ಸುಮಾರು ೬ ಶತಮಾನಗಳ ಕಾಲದಲ್ಲಿ ಪೂರ್ಣವಾಗಿ ಅದೃಶ್ಯರಾಗಬಹುದೆಂದು ವಾದಿಸಿರುವರು.

೧೮೯೧ರಿಂದ ೧೯೦೧ನೆ ವರೆಗಿನ ೧೦ ವರುಷಗಳ ಕಾಲದಲ್ಲಿ ಮುಸಲ್ಮಾನ್ ಮತಸ್ಥರ ಸಂಖ್ಯೆಯು ಸೇಕಡಾ ೯ರಂತೆಯೂ, ಕ್ರೈಸ್ತರ ಸಂಖ್ಯೆಯು ಸೇಕಡಾ ೩೮ರಂತೆಯೂ ಹೆಚ್ಚಿರುವಾಗ ಹಿಂದೂ ಮತಸ್ಥರ ಸಂಖ್ಯೆಯು ಏನೂ ಏರಿರದು. ಅದೇ ರೀತಿ ೧೯೦೧—೧೯೧೧ ವರೆಗಿನ ೧೦ ವರುಷಗಳಲ್ಲಿ ಮುಸಲ್ಮಾನರ ಜನಸಂಖ್ಯೆಯು ಸೇಕಡಾ ೬ರಂತೆಯೂ ಕ್ರೈಸ್ತರದು ಸೇಕಡಾ ೩೨ರಂತೆಯೂ ಅಧಿಕವಾಗಿರುವಾಗ ಹಿಂದೂಗಳ ಜನಸಂಖ್ಯೆಯು ಸೇಕಡಾ ೫ರಂತೆ ಏರಿರುವುದು. ಇದೇ ರೀತಿ ಇನ್ನೂ ಕೆಲವು ಜನಸಂಖ್ಯೆಯ ಸರಾಸರಿಯನ್ನು ನಾಲ್ಕೈದು ವಿಧಾನಗಳಲ್ಲಿ ತೆಗೆದು ಪಂಡಿತ ಬಾಲಕೃಷ್ಣರವರು ತಮ್ಮ ಹೇಳಿಕೆಯನ್ನು ದೃಢಪಡಿಸಿರುವರು.

ಪಂಡಿತ ಬಾಲಕೃಷ್ಣರವರ ಈ ಲೇಖವನ್ನು ಓದಿದ ಕೆಲವು ಭಾರತೀಯ ಪ್ರಸಿದ್ಧ ವಿದ್ಯಾವಂತ ಪ್ರಜಾ ಮುಂದಾಳುಗಳ ಅಭಿಪ್ರಾಯವನ್ನು ವಾಚಕರ ಲಕ್ಷ್ಯಕ್ಕೆ ಈ ಸಂದರ್ಭದಲ್ಲಿ ತರುವುದು ಅಗತ್ಯವಾಗಿರುವುದು. ಹಿಂದೂಗಳಲ್ಲಿ ತಕ್ಕ ಆಶ್ರಯವಿಲ್ಲದೆ ಕೀಳು ಜಾತಿಯವರೆಂತ ತೊಳಲುತ್ತಿರುವ ನಿರಾಶ್ರಿತರನ್ನು ಹಿಂದುಗಳು ಗತಿಹೀನರಾಗಿ ಇರಗೊಡಿಸಿ ಪೂರ್ಣ ಅಭಾವದಿಂದ ಇಂದವರನ್ನು ಕಾಣುವುದರಿಂದ ಮುಸಲ್ಮಾನರ ಮತ್ತು ಕ್ರೈಸ್ತರ ಜನಸಂಖ್ಯೆಯು ಹೆಚ್ಚಲು ಕಾರಣವಾಗುತ್ತದೆ. ಇದಲ್ಲದೆ ಬಾಲವಿವಾಹ ಪದ್ಧತಿ, ವಿತಂತುಗಳ ಪುನರ್ವಿವಾಹಕ್ಕಿರುವ ಸಮಾಜ ನಿರ್ಬಂಧ, ಮತ್ತು ಇನ್ನೂ ಕೆಲವು ವಿಪತ್ಕಾರಕ ದುಷ್ಟ ಪದ್ಧತಿಗಳಿಂದ ಹಿಂದೂಗಳಲ್ಲಿ ಜನಸಂಖ್ಯೆಯು ಬೆಳವಣಿಕೆಗೆ ಆಸ್ಪದವಿರದು. ಕಾಲರಾ, ಜ್ವರ, ಮತ್ತು ಪ್ಲೇಗು ಮೊದಲಾದ ಬೇನೆಗಳಿಂದ ಅನೇಕ ಸಾವಿರ ಹಿಂದುಗಳು ಮಡಿದು ಹೋಗುವುದರಿಂದ ಸಹ ಹಿಂದೂ ಜನಪದದ ಸಂಖ್ಯೆಯು ತಗ್ಗುತ್ತ ಹೋಗಿದೆ. ಪ್ರತಿನಿತ್ಯದಲ್ಲಿಯೂ ಈ ಆಪತ್ತನ್ನು ಅನುಭವಿಸುತ್ತಿರುವೆವಾದರೂ, ನಾವು ಬುದ್ಧಿವಂತರು, ಶತಸಾವಿರ ವರುಷಗಳ ಕಾಲದ ಮೊದಲು ಉಚಿತವೆಂತ ಕಂಡು ಬಂದ ಆಚಾರಗಳನ್ನು ಇದ್ದಂತೆಯೇ ಈ ಕಾಲದಲ್ಲಿ ಸಹ ಆಚಾರಿಸುತ್ತಿರಬೇಕು, ನಾವು ಸಂಪೂರ್ಣರು ಎಂತ ಹಿಗ್ಗುತ್ತಿದ್ದು ನಮ್ಮ ಕಣ್ಣು ಮುಂದೆ ಮಡಿದು ಹೋಗುತ್ತಿರುವ ಜನರಾಶಿಯ ಅಪಮೃತ್ಯುವಿನ ಕಾರಣಗಳನ್ನು ತುಸುಕಾಲವಾದರೂ ಪರ್ಯಾಲೋಚಿಸದೆ ಸುಮ್ಮನಿದ್ದು ಕಾಲಕಾಲವೆಂಬ ದೀರ್ಘಶ್ವಾಸದಿಂದ ಕಣ್ಣು ಮುಚ್ಚಿ ತಟಸ್ಥರಾಗಿದ್ದೇವೆ. ನಾಗರಿಕತೆಯಲ್ಲಿ ನಮ್ಮ ಸಮಾನ ವಯಸ್ಕರಾದ ಚೀನಿಯರು, ಮತ್ತು ಜಪಾನೀಯರಾದ ಪೌರ್ವಾತ್ಯ ಜನಾಂಗದವರು ಪ್ರಕೃತ ಕಾಲಸೂಚನೆಗಳನ್ನು ಸರಿಯಾಗಿ ಅರಿತು ತಂತಮ್ಮ ಪೂರ್ವಾಚಾರ ಪದ್ಧತಿಗಳನ್ನು ಜನಾಂಗದ ಅಭಿಮಾನ ಪೂರ್ವಕವಾಗಿ ತಿದ್ದಿ ನಡೆಯುತ್ತಿರುವುದರಿಂದ ಈ ಜನಾಂಗಗಳ ವರ್ಚಸ್ಸು ಈಗ ತಿಂಗೊಮ್ಮೆ ಲೋಕಕ್ಕೆಲ್ಲಾ ವ್ಯಕ್ತವಾಗುತ್ತಿರುವುದು. ಇವರ ವರ್ತನೆಯನ್ನನುಸರಿಸದೆ ನಮ್ಮ ಭವಿಷ್ಯವು ತನ್ನಷ್ಟಕ್ಕೇನೆ ಕಾಲಪ್ರವಾಹದಲ್ಲಿ ಸರಿಯಾಗಬೇಕೆಂದು ಕೈ ಕಟ್ಟಿ ಬಿದ್ದುಕೊಂಡರೆ ನಮಗೆ ಶುಭವು ಕಾಲಪ್ರಗತಿಯಲ್ಲಿ ಪ್ರಾಪ್ತವಾಗುವಾಗ ಈ ಶುಭ ಪ್ರಾಪ್ತಿಯನ್ನನುಭವಿಸಲು ಹಿಂದೂಗಳಲ್ಲೊಬ್ಬನಾದರೂ ಉಳಿಯುವುದು ದುರ್ಲಭವೆಂತ ವಿದ್ಯಾವಂತರ ಅನುಭವವಾಗಿರುವುದು.

ಧರೆಯೆಂಬುದು ಪೆರ್ಗನ್ನಡಿ.

॥ ಕಂದ ॥ ಧರೆಯೆಂಬುದು ಪೆರ್ಗನ್ನಡಿ ।
ನರನದರೊಳ್ತನ್ನ ಬಿಂಬಮನೆ ತಾಂ ನೋಳ್ಪಂ ॥
ಪೆರರನ್ನೆಣಿಪಂ ತನ್ನಯ ।
ಪರಿಯಿಂ ತಾನಿದುವೆ ಲೋಕಗಣನೆಯ ಮರ್ಮಂ ॥ ೧ ॥

ಕ್ಷಿತಿಯೆಲ್ಲಂ ಪುಡುಕಿದೊಡಂ ।
ದೃತರಾಷ್ಟ್ರತನುಜನಂದು ಕಂಡನೆ ಗುಣಿಯಂ? ॥
ಕತಮೇಂ?—ಕೌರವನತಿ ದು ।
ರ್ಮತಿಯಿಂದರ್ಗಂ ಕಾಂಬನೆಂತು ಸುಗುಣಿಯ ನಿಳೆಯೊಳ್ ॥ ೨ ॥

ಧರ್ಮಜನೆನಿತರಸಿದೊಡಂ ।
ದುರ್ಮತಿಯಂ ಕಾಣನೆಂದನವನೀತಳದೊಳ್ ॥
ನಿರ್ಮಲಚಿತ್ತರ್ಗೆಂತದು ।
ದುರ್ಮಾರ್ಗಿಗಳಿರ್ಪರೆಂದು ಕಾಣ್ಬುದು ಪೇಳಾ ॥ ೩ ॥

ನಗೆಮೊಗದಿಂದೀಕ್ಷಿಸಲಾ ।
ಜಗೆಯನೆ ನೀನೋಳ್ಪೆ ಕೋಪಭಾವಮನಾನಲ್ ॥
ಮಿಗೆ ಕೋಪವನವಲೋಕಿಪೆ ।
ಜಗವುದು ನೀನಿರ್ಪ ಮಾಳ್ಕೆತೆರನಂತಿರ್ಕುಂ ॥ ೪ ॥

ಉ. ಮು. ರಾ:

ಪರಸ್ಪರ ಸಹಾಯದಿಂದ ವ್ಯವಸಾಯ ಕ್ರಮಗಳಲ್ಲಿ ಉಂಟಾಗಬಹುದಾದ ಅನುಕೂಲತೆಗಳು.

ವ್ಯವಸಾಯ ಸಂಘಗಳು ಮೊದಲು ಜರ್ಮನಿಯಲ್ಲಿ ೧೮೬೦ರಲ್ಲಿ ಸ್ಥಾಪಿಸಲ್ಪಟ್ಟವು. ಇಂತಹ ಸಂಘಗಳ ಬೆಳವಣಿಗೆಯು ಈಗಲೂ ಎಲ್ಲಾ ದೇಶಗಳಲ್ಲಿಯೂ ನಡೆಯುತ್ತಲೇ ಇದೆ. ಆದುದರಿಂದ ವ್ಯವಸಾಯಕ್ಕೆ ಇವುಗಳಿಂದ ತುಂಬಾ ಪ್ರಯೋಜನ ಉಂಟೆಂಬುವದು ಸ್ಪಷ್ಟವಾಗುವದು. ೧೮ನೆಯ ಶತಮಾನದಲ್ಲಿ ಕೈಗಾರಿಕೆಯ ಬದಲಾವಣೆಗಳು ನಡೆದುವು. ೧೯ನೆಯ ಶತಮಾನವು ವ್ಯವಸಾಯದ ಬದಲಾವಣೆಗಳನ್ನು ತಂದಿರುತ್ತೆ. ಇಂಥಾ ಬದಲಾವಣೆಗಳಿಂದ ವ್ಯವಸಾಯ ಕ್ರಮಗಳು ಕೈಗಾರಿಕೆಯ ಕ್ರಮಗಳನ್ನು ಅನುಸರಿಸಿವೆ. ಈ ಬದಲಾವಣೆಗೆ ಕಾರಣಭೂತವಾದದ್ದೂ ಪರಸ್ಪರ ಸಹಾಯವೇ! ಈ ವಿಷಯಗಳನ್ನು ಮೂರು ಬಾಬುಗಳನ್ನಾಗಿ ತೆಗೆದುಕೊಂಡು ಚರ್ಚಿಸಿ ವಿವರಿಸುವೆವು (೧) ಭೂಮಿಯನ್ನು ಹದಗೊಳಿಸುವುದು. (೨) ಬೆಳೆಗೆ ಬೇರೆ ರೂಪವನ್ನು ಕೊಡುವುದು (೩) ರೈತನಿಗೂ, ಫಸಲನ್ನು ಮಾಡುವ ತನ್ನ ಗಿರಾಕಿಗಳಿಗೂ ಇರುವ ಪರಸ್ಪರ ಸಂಬಂಧಗಳು. ಪೂರ್ವದ ಅರ್ಥಶಾಸ್ತ್ರಜ್ಞರು ವ್ಯವಸಾಯವು ಉತ್ಪತ್ತಿಯು ಕ್ರಮೇಣ ಕಮ್ಮಿಯಾಗುವ ವಿಧಿಯನ್ನು ಅನುಸರಿಸುತ್ತದೆಂದು, ಕೈಗಾರಿಕೆಯು ಕ್ರಮೇಣ ಹೆಚ್ಚು ಲಾಭವನ್ನು ಕೊಡುತ್ತದೆಂದೂ, ವ್ಯವಸಾಯವು ಕೂಲಿಕಾರರಿಂದಲೂ, ಕೈಗಾರಿಕೆಯು ಯಂತ್ರಗಳಿಂದಲೂ ವೃದ್ಧಿಗೆ ಬರತಕ್ಕದೆಂದೂ, ವ್ಯವಸಾಯಕ್ಕೆ ಶಾಸ್ತ್ರಜ್ಞಾನ ಬೇಕಿಲ್ಲವೆಂದೂ, ಕೈಗಾರಿಕೆ ಕಸಬುದಾರರು ಬೇಕೆಂದೂ ಹೇಳುತ್ತಿದ್ದರು. ಆದರೆ ಇವುಗಳೆಲ್ಲವೂ ಈಗ ವ್ಯತ್ಯಾಸವಾಗಿರುವುದು.

ಭೂಮಿಯಲ್ಲಿ ಸ್ವಭಾವಸಿದ್ಧವಾಗಿ ಯತ್ಕಿಂಚು (ಫಲವತ್ತು) ಹುಲಸಿರುತ್ತದೆ. ಅದನ್ನು ಬಹುದೂರ ವೃದ್ಧಿಪಡಿಸುವುದು ಅಸಾಧ್ಯ. ಆದುದರಿಂದ ಈ ಹುಲಸು (ಫಲವತ್ತು) ಮುಗಿದ ಹಾಗೆಲ್ಲಾ ಮನುಷ್ಯನ ಪ್ರಯತ್ನವು ವಿಶೇಷ ಕಾರ್ಯಕಾರಿಯಾಗುವುದಿಲ್ಲವೆಂದು ತಿಳಿದಿದ್ದರು. ಈಚೆಗೆ ರಸಾಯನ ಶಾಸ್ತ್ರಜ್ಞರು ಮಣ್ಣನ್ನೂ, ಧಾನ್ಯಗಳನ್ನೂ, ಗೊಬ್ಬರಗಳನ್ನೂ ಶೋಧಿಸಿ ಅವುಗಳ ರಚನೆಯನ್ನು ಅಂದರೆ ಯಾವಯಾವ ಧಾತು (ವಸ್ತು)ಗಳ ಯೋಗದಿಂದ ಆಗಿರುವುದೆಂದು ಗೊತ್ತುಮಾಡಿರುವರು.

ಈ ಶೋಧನೆಯಿಂದ ಮಣ್ಣಿನಲ್ಲಿರುವ ಸಾರವನ್ನು ಹೆಚ್ಚಿಸುವುದಕ್ಕೆ ಬೇಕಾದ ಕಾರಣಗಳನ್ನು ಒದಗಿಸಿಕೊಡುವುದು ಸುಲಭ ಸಾಧ್ಯವಾಗಿರುವುದು. ಆದುದರಿಂದ ಜಮೀನಿನ ಸಾರವು ತಗ್ಗಿ ಹೋಗುವದೆಂಬ ಶಂಕೆಯಿಂದ ಫಸಲು ಮಾಡದೆ ಬಿಡುವುದಕ್ಕೆ ಬದಲು ವರ್ಷವರ್ಷವೂ ಪೈರು ಹಾಕಿ ಹೆಚ್ಚು ಫಸಲನ್ನು ತೆಗೆದುಕೊಂಡು ಜಮೀನಿನ ಸ್ವಾರಸ್ಯ ಕಮ್ಮಿಯಾಗದಂತೆ ಇಟ್ಟುಕೊಂಡಿರುವುದು ಈಗ ಸಾಧ್ಯವಾಗಿರುತ್ತದೆ. ಜಮೀನು ನಿಸ್ಸಾರವಾಗಿದ್ದರೂ ಅದರಲ್ಲಿ ಸಸ್ಯಾಹಾರವನ್ನು ತುಂಬಿ ಪೈರಿಗೆ ಅನುಕೂಲ ಮಾಡಿ ಒಳ್ಳೆ ಬೆಳೆಯನ್ನು ತೆಗೆಯಬಹುದು. ಆದುದರಿಂದ ರೈತನು ಜಮೀನಿನ ವ್ಯವಸಾಯಕ್ಕೋಸ್ಕರ ವೆಚ್ಚ ಮಾಡಿದ ಹಾಗೆಲ್ಲಾ ಅವನ ಆದಾಯವು ಹೆಚ್ಚುತ್ತದೆ. ಪೂರ್ವದಲ್ಲಿ ರೈತರು ದೇವರ ಮೇಲೆ ಭಾರ ಹಾಕಿ ಮನುಷ್ಯ ಪ್ರಯತ್ನದಲ್ಲಿ ಏನು ಇದೆ, ದೇವರು ಕಣ್ಣುಬಿಟ್ಟು ನೋಡಿದರುಂಟು. ಇಲ್ಲದಿದ್ದರೆ ನಮ್ಮ ಪ್ರಯತ್ನವು ನಿರರ್ಥಕವಾದುದೆಂದು ಹೇಳಿಕೊಳ್ಳುತ್ತಿದ್ದರು. ಈಗ ಇಂತಿಂಥ ಗೊಬ್ಬರಗಳನ್ನು ಇಷ್ಟಿಷ್ಟೇ ಹಾಕಬೇಕು. ಈ ರೀತಿಯಲ್ಲಿಯೇ ವ್ಯವಸಾಯ ಮಾಡಬೇಕು. ಹೀಗೆ ಮಾಡಿದರೆ ಪೈರು ಇಷ್ಟೇ ಬೆಳೆಯುವುದೆಂದು ನಿಷ್ಕರ್ಷೆಯಾಗಿ ಹೇಳಬಹುದು. ಒಂದು ಅಡಿ ಆಳ ಮಣ್ಣನ್ನು ತಿರುವಿ ಹಾಕುವುದಕ್ಕೆ ಬದಲಾಗಿ ೫ ಅಡಿಗಳವರೆಗೂ ಅವಶ್ಯಕ ಬಿದ್ದ ಹಾಗೆ ತಿರುವಿ ಹಾಕಿ ಇಂಥಾ ಕಾಯಿಮಣ್ಣನ್ನು ರಸಾಯನ ಶಾಸ್ತ್ರದ ಸಹಾಯದಿಂದ ಉಪಯೋಗವಾದ ಅಂದರೆ ಸಸಿಗಳ ಆಹಾರವು ತುಂಬಿರುವ ಸಾರವತ್ತಾದ (ಯೋಗ್ಯವಾದ) ಮಣ್ಣನ್ನಾಗಿ ಬದಲಾಯಿಸಬಹುದು. (ಲೋಕದಲ್ಲಿ ಸ್ಥಾವರಜಂಗಮಾತ್ಮಕವಾದ ಪ್ರಾಣಿಗಳು ತಮ್ಮ ಆತ್ಮ ಸಂರಕ್ಷಣೆಗೆ ತಕ್ಕಂತೆ ಬದಲಾವಣೆಯನ್ನು ಪಡೆಯುತ್ತವೆ. ಅಂದರೆ ಸ್ವಲ್ಪ ಮಳೆ ಬೀಳತಕ್ಕ ಟ್ರಾನ್ಸ್‌ವಾಲ್ ಮುಂತಾದ ಪ್ರಾಂತ್ಯಗಳಲ್ಲಿ ವರ್ಷಕ್ಕೆ ನಾಲ್ಕೇ ಅಂಗುಲ ಮಳೆ ಬಿದ್ದಾಗ್ಯೂ ಮೇಲುಗಡೆಯ ಮಣ್ಣನ್ನು ಕೆದಕುತ್ತಿರುವುದರಿಂದಲೇ ಭೂಮಿಯ ತೇವವನ್ನು ಕಾಪಾಡಿಕೊಂಡು ಅನೇಕ ವರ್ಷಗಳು ಮಳೆಯಿಲ್ಲದಿದ್ದರೂ ಉತ್ತಮವಾದ ಬೆಳೆಯನ್ನು ಬೆಳೆಯುತ್ತಲಿದ್ದಾರೆ).

ಪೂರ್ವಕಾಲದಲ್ಲಿ ರೈತರು ತಮ್ಮಲ್ಲಿರುವ ಗೊಬ್ಬರವನ್ನು ನೋಡಿಕೊಂಡು ಅದಕ್ಕೆ ತಕ್ಕಷ್ಟು ಜಮೀನನ್ನು ವ್ಯವಸಾಯಕ್ಕೆ ಉಪಯೋಗಿಸುತ್ತಲಿದ್ದರು. ಜಮೀನಿನಿಂದ ತೆಗೆಯಲ್ಪಡುವ ಧಾತುಗಳು ದನಗಳ ಗೊಬ್ಬರದ ಮೂಲಕವಾಗಿ ಮತ್ತೆ ಭೂಮಿಗೆ ಸೇರಿಸಲ್ಪಡುತ್ತಿದ್ದವು. ಈಚೆಗೆ ರಸಾಯನ ಶಾಸ್ತ್ರಜ್ಞರು ಶ್ರೀ ಎಕರೆ ಜಮೀನಿನಲ್ಲಿ ಪೈರು ಬೆಳೆದರೆ ೨೦-೩೦ ರಾಸುಗಳನ್ನು ಇಟ್ಟು ಅದರಿಂದಾದ ಗೊಬ್ಬರವನ್ನು ಹಾಕಿದ ಹೊರತು ಭೂಮಿಯು ಮತ್ತೆ ವ್ಯವಸಾಯಕ್ಕೆ ಯೋಗ್ಯವಾಗುವುದಿಲ್ಲವೆಂದು ಗೊತ್ತು ಮಾಡಿರುತ್ತಾರೆ. ದ್ವಿದಳ ಧಾನ್ಯಗಳಿಂದ ಭೂಮಿಯಲ್ಲಿರ ತಕ್ಕ ಸಾರಜನಕವು ವಿಶೇಷವಾಗಿ ಉಪಯೋಗಿಸಲ್ಪಡುವುದು. ಹೀಗೆ ಉಪಯೋಗಿಸಿದ ಸಾರಜನಕವನ್ನೂ ಚಿಲಿ ದೇಶದಲ್ಲಿ ಹೆಚ್ಚಾಗಿ ದೊರೆಯುವ ಕಡ್ಡುಪ್ಪನ್ನೂ ಉಪಯೋಗಿಸುವುದರಿಂದ ಜಮೀನು ಪುನಃ ವ್ಯವಸಾಯಕ್ಕೆ ಯೋಗ್ಯವಾಗುವುದು. ಬರೇ ಕಡ್ಡುಪ್ಪನ್ನೇ ಉಪಯೋಗಿಸುವುದರಿಂದ ಸಾರಜನಕವು ಹೆಚ್ಚಾಗಿ ರಂಜಕವು ಕಮ್ಮಿಯಾಗಿ ಪೈರು ಮಾಗುವುದಕ್ಕೆ ಹೆಚ್ಚು ಕಾಲ ಬೇಕಾಗುತ್ತಿತ್ತು. ಚಿಲಿ ದೇಶದ ಕಡ್ಡುಪ್ಪನ್ನೂ, ಮೂಳೆಯ ಪುಡಿಯನ್ನೂ ತಕ್ಕಂತೆ ಬೆರಸಿ ಉಪಯೋಗಿಸಿದಲ್ಲಿ ಈ ನ್ಯೂನತೆಯು ತಿದ್ದುಪಾಟಾಗುವುದು.

ಈ ವಿಷಯಗಳನ್ನು ಪರ್ಯಾಲೋಚಿಸಿದರೆ ವ್ಯವಸಾಯಕ್ಕೂ ಕೈಗಾರಿಕೆಗೂ ಇರುವ ಸಂಬಂಧವು ಸ್ಪಷ್ಟವಾಗುವುದು. ಪೂರ್ವದಲ್ಲಿ ರೈತರು ಜಮೀನನ್ನು ಹಾಳು ಬಿಡುವುದರಿಂದ ಪೈರು ಹಾಕುವುದಕ್ಕೆ ಅನುಕೂಲವಾಗುವಂತೆ ಮಾಡುತ್ತಿದ್ದರು. ಈಗ ಜಮೀನಿಗೆ ಬೇಕಾದ ಧಾತುಗಳನ್ನು ಗೊಬ್ಬರದ ಮೂಲಕವಾಗಿ ಸೇರಿಸುವುದರಿಂದಲೂ, ಪೈರನ್ನು ಬದಲಾಯಿಸುವುದರಿಂದಲೂ ಯಾವಾಗಲೂ ಬೆಳೆ ಮಾಡುತ್ತಿರಬಹುದು.

ಮಸಾಲೆಸೊಪ್ಪು, ಅವರೆ, ತೊಗರಿ ಮುಂತಾದ ಜಾತಿಗೆ ಸೇರಿದ ಗಿಡಗಳು ಭೂಮಿಯಲ್ಲಿ ಸಾರಜನಕವನ್ನು ಹೆಚ್ಚಿಸುವುದರಿಂದ ಭೂಮಿಯನ್ನು ಬೀಳುಬಿಡುವುದಕ್ಕೆ ಬದಲಾಗಿ ಈ ಪೈರುಗಳನ್ನು ಬೆಳೆಯಬಹುದು. ಆದುದರಿಂದ ಭೂಮಿಯನ್ನು ಶೋಧಿಸಿ ಅದರಲ್ಲಿರುವ ಧಾತುಗಳನ್ನು ಗೊತ್ತುಮಾಡಿಕೊಳ್ಳುವುದರಿಂದ ಭೂಮಿಯು ರೈತನಿಗೆ ಅಡಿಯಾಳಾಗಿರುವುದು

— ಗ.

ಮಂಗಳೂರಿನ ಪೆಂಟಲೆಂಡ್ ಪೇಟೆ.

[illegible]

... ಮನೆಗಳಿವೆ. ಇನ್ನು ಕೆಲವರಿಗೆ ವೃತ್ತಿಯ ಬಗ್ಗೆ ಜನಸಮುದಾಯವು ಹೆಚ್ಚಾಗಿ ಕೂಡುವ ಅನಾರೋಗ್ಯಕರವಾದ ಪ್ರಾಂತ್ಯಗಳಲ್ಲಿಯೂ ಅರೋಗ್ಯಕರವಾದ ಸ್ಥಳಗಳಲ್ಲಿಯೂ ಮನೆಗಳಿರುವವು. ತಮ್ಮ ವಾಸ್ತವ್ಯಗಳನ್ನು ಬಿಟ್ಟು ಪಟ್ಟಣದ ದೂರದಲ್ಲಿರುವ ಪ್ರಾಂತ್ಯಗಳಿಗೆ ಹೋದರೆ ವಿಶೇಷ ನಷ್ಟವು ಉಂಟಾಗುವುದರಿಂದ ಅನಾರೋಗ್ಯಕರವಾದ ಪ್ರಾಂತ್ಯಗಳಲ್ಲಿ ತಮ್ಮ ಮನೆಗಳಿದ್ದರೂ ಅಲ್ಲಿಯೇ ಇದ್ದು ಜೀವಿಸಬೇಕಾದವರ ಮಧ್ಯಮ ತರಗತಿಯೊಂದಿರುವುದು. ಪ್ರಕೃತ ಪಟ್ಟಣದ ಅನಾರೋಗ್ಯಕರ ಸ್ಥಿತಿಯಿಂದ ಈ ತರಗತಿಯವರು ವಿಶೇಷ ಸಂಕಟಪಡುವರು. ಆದರೆ ಇವರು ಮಧ್ಯಮ ತರಗತಿಯವರಾದ್ದರಿಂದ ಇವರ ಸಂಕಷ್ಟಗಳು ವ್ಯಕ್ತವಾಗುವದಿಲ್ಲ. ಈ ಮಧ್ಯಮ ತರಗತಿಯವರನ್ನು ವಿಶೇಷವಾಗಿ ಮತ್ತು ಸಂಪನ್ನ ತರಗತಿಯವರನ್ನು ಸಾಧಾರಣವಾಗಿ ಅವಲಂಬಿಸಿರುವ ಕನಿಷ್ಟ ತರಗತಿಯು ಮತ್ತೊಂದಿದೆ. ಮಧ್ಯಮ ತರಗತಿಯವರ ವೃತ್ತಿಗಳಿಂದ ಇಂಥಾ ಜನರಿಗೆ ಕಾಲಕ್ಷೇಪ ಮಾಡಲು ಅವಕಾಶ ದೊರಕುತ್ತದೆ ಇವರ ಸಂಕಷ್ಟಗಳೆಲ್ಲವು ಸರ್ವರಿಗೂ ವ್ಯಕ್ತವಾಗುವವುಗಳಂಥವುಗಳು. ಮಧ್ಯಮ ತರಗತಿಯವರ ಸಂಗಾತ ಇವರಲ್ಲಿ ಹೆಚ್ಚಿನವರು ಪಟ್ಟಣದ ಹೊಲಸು ಪ್ರಾಂತ್ಯಗಳಲ್ಲಿಯೇ ಜೀವಿಸುತ್ತಿರುವರು. ಆದ್ದರಿಂದ ಪಟ್ಟಣದ ಹೊಲಸು ಪ್ರಾಂತ್ಯಗಳಲ್ಲಿರುವ ನಿಕೃಷ್ಟ ಮನೆ ಗುಡಿಸಲುಗಳನ್ನು ಬಿಚ್ಚಿ ವಠಾರಗಳನ್ನು ಸಜ್ಜುಗೊಳಿಸುವಾಗ ಮಧ್ಯಮ ತರಗತಿಯವರಿಗೂ ಕನಿಷ್ಟ ತರಗತಿಯವರಿಗೂ ನಿವಾಸ ಸ್ಥಳಗಳು ಬೇಕಾಗುವವು. ಪೆಂಟ್‌ಲೇಂಡ್ ಪೇಟೆಯಲ್ಲಿ ಆದ್ದರಿಂದ, ಮಧ್ಯಮ ತರಗತಿಯವರಿಗೂ ಕನಿಷ್ಟ ತರಗತಿಯವರಿಗೂ ನಿವಾಸಸ್ಥಳಗಳು ಬೇಕಾಗಿವೆ. ಬಡವರಿಗೆ ಹೊರತು ಇತರರಿಗೆ ಇಲ್ಲಿ ಸ್ಥಳವು ದೊರಕದೆಂದರೆ ಆಗದು. ಬಡವರ ಆದರಣೆ ಬಗ್ಗೆ ಇಲ್ಲಿ ಮಧ್ಯಮ ತರಗತಿಯವರೂ ಇರುವುದು ಅಗತ್ಯ.

ಮಧ್ಯಮ ತರಗತಿಯವರಿಗೂ ಕನಿಷ್ಟ ತರಗತಿಯವರಿಗೂ ಪೆಂಟಲೆಂಡ್ ಪೇಟೆಯಲ್ಲಿ ಬಂದು ನಿವಾಸಿಸಲು ಯಾವ ಅನಾನುಕೂಲತೆಗಳಿರುವವು. ಈ ಎರಡು ತರಗತಿಯವರಿಗೆ ಜೀವನಕ್ಕೆ ಆಸ್ಪದಗೊಡುವ ಶಹರನ್ನು ಬಿಟ್ಟು ಪೆಂಟಲೆಂಡ್ ಪೇಟೆಯು ದೂರವಿರುವುದು. ಈ ಪೇಟೆಯಲ್ಲಿ ಮನೆ ಕಟ್ಟಿಸಿ ಅಲ್ಲಿಯೇ ಇದ್ದುಕೊಂಡು ಜೀವಿಸಲು ಪ್ರಕೃತ ಸಾಧ್ಯವಾಗದು. ವ್ಯಾಪಾರ ವೃತ್ತಿಗಳನ್ನು ಮಾಡಿಕೊಂಡಿರುವವರಿಗೆ ಸಾಧ್ಯವಾದಷ್ಟು ತಮ್ಮ ವೃತ್ತಿಯು ನಡಿಯುವ ಕಡೆಯಲ್ಲಿಯೇ ಇರುವುದು ಅನುಕೂಲವಾಗಿದೆ. ಆದ್ದರಿಂದ ಶಹರಿಗೂ ಪಟ್ಟಣಕ್ಕೂ ಇರುವ ದೂರದ ಅಡಚಣೆಯನ್ನು ನಿವಾರಿಸಲು ಬೇಕಾದ ಉಪಾಯಗಳನ್ನು ಕಲ್ಪಿಸುವುದು ಅಗತ್ಯ. ಇಷ್ಟೇ ಅಲ್ಲ, ಮನೆ ಕಟ್ಟಲು ಪೆಂಟಲೆಂಡ್ ಪೇಟೆಯಲ್ಲಿ ಬರೇ ೧೫ ಸೆಂಟ್ಸ್ ಸ್ಥಳವು ಕೊಡೋಣಾಗುವುದರಿಂದ ಮನೆಗಳಿಗೆ ತಕ್ಕ ವಠಾರಗಳಿಲ್ಲವೆ ಮತ್ತೆ ಕೆಲವು ವಿಧಾನಗಳಲ್ಲಿ ಅಡಚಣೆಗಳು ಉಂಟಾಗದೆ ಇರವು. ನಳಗಳ ಮೂಲಕ ನೀರು ಸರಬರಾಯಿ, ದನಕರುಗಳನ್ನು ಸಾಕುವ ಅಗತ್ಯವಿಲ್ಲದ ರೀತಿಯ ಹಾಲು ಸರಬರಾಯಿ ಮೊದಲಾದ ಏರ್ಪಾಡುಗಳುಳ್ಳ ಪಟ್ಟಣದಲ್ಲಿ ವಾಸ್ತವ್ಯಕ್ಕೆ ಬೇಕಾದ ಸ್ಥಳವು ೧೫ ಸೆಂಟ್ಸುಗಳಿಗೆ ಮೀರಿರದಿದ್ದರೂ ಒಂದು ವೇಳೆ ಆಗಬಹುದೆಂತ ಹೇಳಬಹುದು. ಆದರೆ ಈ ಸರಬರಾಯಿಗಳ ಏರ್ಪಾಡು ಪ್ರಕೃತ ಪೆಂಟಲೆಂಡ್ ಪೇಟೆಯಲ್ಲಿ ಮಾಡುವುದು ಅಸಾಧ್ಯವಾದ್ದರಿಂದ ವಾಸ್ತವ್ಯಗಳ ಸ್ಥಳವು ೧೫ ಸೆಂಟ್ಸುಗಳಿಗೆ ಮೀರಕೂಡದೆಂಬ ಸಿದ್ಧಾಂತವನ್ನು ಹಟವಿಡುವುದು ಜಾರಿಗೆ ತಂದರೆ ಹೆಚ್ಚಿನ ತೊಂದರೆಯು ಪ್ರಾಪ್ತವಾಗಲು ಸಾಕು. ಈ ಸಂದರ್ಭದಲ್ಲಿ ಪರ್ಯಾಲೋಚಿಸಬೇಕಾದ ಇನ್ನೂ ಕೆಲವು ಅಡಚಣೆಗಳಿವೆ. ವಾಸ್ತವ್ಯಗಳ ಚಿಕ್ಕ ವಠಾರಗಳನ್ನು ಶುಚಿಯಾಗಿಡುವುದು ನಿವಾಸಿಕರಿಗೆ ಅನುಕೂಲ. ಆದರೆ ಇಂಥಾ ವಠಾರಗಳಿಂದ ಹೊಲಸನ್ನು ತಕೊಂಡು ಹೋಗುವ ಏರ್ಪಾಡನ್ನು ಮುನ್ಸಿಪಾಲಿಟಿಯವರು ಸೆನಿಟರಿ ಇಲಾಖೆ ಮೂಲಕ ಮಾಡಬೇಕು. ಪ್ರತಿನಿತ್ಯದಲ್ಲಿಯೂ ಈ ಏರ್ಪಾಡಿನ ಜಾರಿಯು ನಡೆಯದಿದ್ದ ಪಕ್ಷದಲ್ಲಿ ಅಂಥಾ ಚಿಕ್ಕ ವಠಾರಗಳಲ್ಲಿ ಮುಖದ ಮೇಲೆ ಮೂಗನ್ನಿಟ್ಟುಕೊಂಡು ವಾಸಿಸುವುದು ಅಸಾಧ್ಯವಾಗುವುದು. ಇಲ್ಲಿಯ ಸೆನಿಟರಿ ಇಲಾಖೆಯವರ ಕಾರಬಾರನ್ನು ತಮ್ಮ ಪತ್ರ ಮೂಲಕ ಆಗಿಂದಾಗ್ಯೆ ಕೇಳಿಕೊಂಡು ಹಲವು ಚಿಕ್ಕ ವಠಾರಗಳಿರುವ ಪೆಂಟ್‌ಲೆಂಡ್ ಪೇಟೆಯ ಸೆನಿಟರಿ ಕೆಲಸಗಳು ಹ್ಯಾಗೆ ನಿರ್ವಹಿಸಲ್ಪಡುವವೋ ಎಂಬುವ ವಿಷಯದಲ್ಲಿ ಅನುಮಾನಪಡಬೇಕಾಗಿದೆ.

ವಾಸ್ತವ್ಯದ ಸ್ಥಳಗಳು ಏಲಮಿನಲ್ಲಿ ಅತ್ಯಧಿಕ ಮೌಲ್ಯವನ್ನು ಕೊಡುವವರಿಗೆ ದೊರಕುವುದರಿಂದ ಪೆಂಟಲೆಂಡ್ ಪೇಟೆಯಿಂದ [illegible] ಮತ್ತು ಕನಿಷ್ಟ ತರಗತಿಯವರಿಗೆ ಸಿಕ್ಕುವದು ದುರ್ಲಭ. [illegible]

ವದರಿಂದ. ಇಂಥಾ ವಟಾರಗಳನ್ನು ಪಡದು ವರುಷದ ಅಧಿಕಭಾಗವಲ್ಲಿ ಮುಚ್ಚಿಡುವಂಥಾ ಮನೆಗಳನ್ನು ಇಲ್ಲಿ ಕಟ್ಟಿಸುವ ಸಂಭವಗಳಿವೆ. ಇಂಥಾ ಸಂಭವಗಳು ನೆರವೇರಿದರೆ ಪೆಂಟಿಲೆಂಡ್ ಪೇಟೆಯು ಎಂದೂ ಪೇಟೆಯಾಗಲು ಅವಕಾಶ ದೊರಕದು.

ಮನೆಯ ವಟಾರಗಳನ್ನು ಏಲಮಿನಲ್ಲಿ ಪಡೆಯಲೂ ಇಂಥಾ ವಟಾರಗಳಲ್ಲಿ ಮುನ್ಸಿಪಾಲಿಟಿಯವರು ಸೂಚಿಸುವ ಮಾದರಿಯ ಮನೆಗಳನ್ನು ಕಟ್ಟಿಸಲೂ ಹಣವು ಬೇಕಾಗಿರುವದು. ಹೀಗೆ ಬೇಕಾಗಿರುವ ಮೊಬಲಗನ್ನು ಒಮ್ಮೆಯೇ ಸಂಗ್ರಹಿಸಿಕೊಳ್ಳಲು ಮಧ್ಯಮ ತರಗತಿಯವರಿಗೆ ಅನಾನುಕೂಲ, ಕನಿಷ್ಟ ತರಗತಿಯವರಿಗೆ ಅಸಾಧ್ಯವಾಗಲೂ ಬಹುದು. ಹಣದ ಅಡಚಣೆಯು ಇಲ್ಲದಂತೆ ಜನರು ಹ್ಯಾಗೆ ಕಟ್ಟೋಣಗಳನ್ನು ಇಲ್ಲಿ ಕಟ್ಟಿಸಬಹುದೆಂಬದನ್ನು ಮುನ್ಸಿಪಲ್ ಕೌನ್ಸಿಲಿನವರೂ ಪಟ್ಟಣದ ಇತರ ಮುಂದಾಳುಗಳೂ ಅಗತ್ಯವಾಗಿ ಯೋಚಿಸಿ ಪೆಂಟ್‌ಲೇಂಡ್ ಪೇಟೆಯ ರಚನೆಯ ಬಗ್ಯೆ ಪ್ರಕೃತ ವಿನಿಯೋಗಿಸಲ್ಪಡುತ್ತಿರುವ ಹಣವೂ ಶ್ರಮವೂ ಸಾರ್ಥಕವಾಗುವಂತೆ ಪ್ರಯತ್ನಿಸಬೇಕಾಗಿ ಅಪೇಕ್ಷಿಸುತ್ತೇನೆ.

ನನಗೆ ಕಂಡು ಬಂದ ಕೆಲವು ಅಡಚಣೆಗಳನ್ನು ಮೇಲೆ ವಿವರಿಸಿರುವೆನು. ಇಂಥಾ ಅಡಚಣೆಗಳನ್ನು ಹ್ಯಾಗೆ ನಿವಾರಿಸಬಹುದೆಂಬುದರ ವಿಷಯ ಮುಂದಿನ ಸಂಚಿಕೆಯಲ್ಲಿ ತಿಳಿಸುವೆನು.

(ಮುದುವರಿಯುವದು.)

ಪತ್ರವ್ಯವಹಾರ.

ಅಯ್ಯಾ,

ಕಳೆದ 1895ನೆ ಇಸವಿಯಿಂದ ಈ ವರೆಗೆ ಒಂದೆರಡಲ್ಲದೆ ಹಲವು ಸರ್ತಿ ಬಂಟವಾಳದಿಂದ ಪೊಳಲಿಗಾಗಿ ಗುರುಪುರಕ್ಕೆ ರಾಜರಸ್ತೆಯನ್ನು ಮಾಡಿಸಿ ಕೊಡಿಸಬೇಕಾಗಿಯೂ ಪೊಳಲಿ, ಮಳಲಿ, ಕಳ್ಳಿಗೆ, ಬೆಳ್ಳೂರು, ಮಲ್ಲೂರು, ಮೂಳೂರು, ಕೊಳವೂರು, ಅಡ್ಡೂರು, ಮುತ್ತೂರು, ಬಂಟ್ವಾಳ, ಕುರಿಯಾಳ್, ಉಳಿಪಾಡಿ, ಅಮಟಾಡಿ, ಅಮುಂಜೆ, ಕರಿಯಂಗಳ ವಗೈರೆ ಗ್ರಾಮಗಳ ನಿವಾಸಿಕರು ಗುರ್ಪುರ ಹೊಳೆ ಎಂಬ ಫಲ್ಗುಣಿ ನದಿಯಲ್ಲಿ ಪ್ರತಿ ವರ್ಷದಲ್ಲಿಯೂ ಜನವರಿಯ ಅಂತ್ಯ ವ ಫೆಬ್ರುವರಿಯ ಮಧ್ಯದೊಳಗೆ ನೀರು ಬತ್ತಿಹೋಗಿ ದೋಣಿ ನಡಿಯಲಾರದಿರುವುದೇ ಮೊದಲಾದ ಕಷ್ಟಗಳ ದೆಸೆಯಿಂದ ಮುಂಚೆ ಇದ್ದ ರೆವಿನ್ಯೂ ತೀರ್ವೆಯನ್ನೇ ತೆತ್ತು ಜೀವಿಸುವ ಪ್ರಯಾಸ ಪರಿಶ್ರಮಗಳನ್ನು ಕಾಣಿಸಿಯೂ ಬರಕೊಂಡ ಅರ್ಜಿಗಳಿಗೆ ಬೋರ್ಡಿನವರು ಈ ವರೆಗೆ ನಿಗಾ ಕೊಡದಿರಲು ಕಾರಣವೇನೋ ತಿಳಿಯದು.

ರೈತ.

ಸದಸ್ಯನ ದಸ್ಯುತನ.

ಅಯ್ಯಾ ಪತ್ರಾಧಿಪರೇ,

ತಮ್ಮ ಕಳೆದ ೫೦ನೆ ಸಂಚಿಕೆಯಲ್ಲಿ ಹ್ಯೊಗೆ ಬಜಾರಿನ ಶ್ರೀ ಜ್ಞಾನೋದಯ ಸಮಾಜದ ಸದಸ್ಯನು ವಿಚಾರಿಯ ಅವಿಚಾರವೆಂಬ ಶಿರೋಲೇಖನದಿಂದ ಕೆಲವು ಬರವಣಿಗೆಗಳನ್ನು ಬರೆದಿರುವನು! ನಿಜವಾಗಿ ಆ ಲೇಖನವು ಆಪಾತರಮಣೀಯವಾಗಿದ್ದರೂ ವಿಚಾರಶೀಲರಿಗೆ ಅರುಚಿಯನ್ನು ಹುಟ್ಟಿಸದೆ ಇರದೆಂಬುದನ್ನು ಈ ಕೆಳಗೆ ನಾಲ್ಕು ಮಾತುಗಳಿಂದ ವಿವರಿಸಲು ತಮ್ಮ ಪತ್ರದಲ್ಲಿ ಅವಕಾಶ ಕೊಡಬೇಕಾಗಿ ಬೇಡುತ್ತೇನೆ.

ಸಮಾಜ ಸ್ಥಾಪಕರು, ಸ್ವಾರ್ಥ ತ್ಯಾಗಿಗಳೂ ಗುಣಲುಬ್ಧರೂ ಸ್ವಾಭಿಮಾನವಿಲ್ಲದವರೂ ಯಥಾರ್ಥವಾದಿಗಳೂ ವಿನೀತರೂ ವಿಚಾರಿಗಳೂ ಆಗಿರಬೇಕಾಗಿರುವುದು! ಅಲ್ಲದೆ ಇದಕ್ಕೆ ವಿರೋಧವಾದ ಗುಣಗಳುಳ್ಳವರು ಎಂದೂ ಸಮಾಜ ಚಾಲಕರಾಗಲು ಅರ್ಹರಾಗರು.

ಮುಂಚಿತವಾಗಿ ನೆಲೆಗೊಂಡಿದ್ದ ಬೊಕ್ಕಪಟ್ಣದ ಮದ್ಯಪಾನ ನಿಷೇಧಕ ಸಂಘಕ್ಕೆ ಹೃತ್ಪೂರ್ವಕವಾದ ಧನ್ಯವಾದವನ್ನೆತ್ತಿ ಬರೆಯುವುದರ ಬದಲಾಗಿ ಜ್ಞಾನೋದಯ ಸಮಾಜವು ಸ್ಥಾಪಿತವಾದ ಮೇಲೆ ಸದರಿ ಸಂಘವು ತಲೆದೋರಿತೆಂದು ಸಮಾಜದ ಪ್ರಥಮ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದ್ದುದು ಸದಸ್ಯನ ಅಯಥಾರ್ಥವಾದತ್ವದ ದಸ್ಯುತನವಲ್ಲವೇ?

ನಿಜವಾಗಿಯೂ ಮುಂಚಿತವಾಗಿ ಉಂಟಾದ ಬೊಕ್ಕಪಟ್ಣದ ಸಂಘಕ್ಕೆ ಅನಂತರದ [ಸ]ಮಾಜವು ಶಾಖಾರೂಪವಾಗಿರುವುದು ನ್ಯಾಯವಾಗಿದ್ದರೂ [illegible] ಸಮಾಜದ ಶಾಖೆಯೆಂದು ಪ್ರಕಟಿಸಿದ್ದುದು ಸ್ವಾಭಿಮಾನದ ಎರಡನೆಯ ದಸ್ಯುತನವಾಗುವುದಿಲ್ಲವೇ? ಕೀರ್ತಿಯು ತನಗೆ ಸಿಗಬೇಕೆಂದೂ ಇತರರಿಗೆ ದೊರೆಯಬಾರದೆಂದೂ, ಇದ್ದುದನ್ನು ಮರೆಮಾಚುವುದೂ ನಿಜವಾದ ಸ್ವಾರ್ಥತ್ಯಾಗವಾಗುವುದೇ? ಅಥವಾ ಗುಣ ಪಕ್ಷಪಾತವೆನಿಸುವುದೇ?

ಉಚಿತವು "ಬದಿ" ಎಂದೆನಿಸಿಕೊಳ್ಳದು. ಆತ್ಮಸಂತೋಷದಿಂದ ಕೊಡಬಹುದಾದ ಉಚಿತಕ್ಕೂ ವರಪಕ್ಷಿಯರ ನಿರ್ಬಂಧಕ್ಕೊಪ್ಪಿ ಕೊಡತಕ್ಕ "ಬದಿ"ಗೂ ಬಹಳ ತಾರತಮ್ಯವಿದೆ. ಕಾರಣ ಉಚಿತವನ್ನು "ಬದಿ"ಯಾಗಿ ಎಣಿಸುವದು ತೀರಾ ತಪ್ಪು ಅಥವಾ ಈ ಉಚಿತವೇ ಬದಿಯಾಗಿ ಪರಿಣಮಿಸಬಹುದೆಂಬ ಅಪನಂಬಿಕೆಯು ಶ್ರೀ ಜ್ಞಾನೋದಯ ಸಮಾಜಕ್ಕೆ ಉಂಟಾಗಿದ್ದರೆ ಬಹಿರಂಗವಾಗಿ ಅದರ ನಿಷೇಧವನ್ನು ಈ ಸಮಾಜವು ತಮ್ಮ ಕರ್ತವ್ಯವೆಂದು ಮಾಡಬೇಕಿತ್ತು. ಹೀಗೆ ಮಾಡದೆ "ವರದಕ್ಷಿಣೆ" ಯಂಥಾ ಅನಿಷ್ಟ ಪದ್ಧತಿಯ ವಿಚಾರವನ್ನು ಸ್ವಜಾತಿಬಾಂಧವರ ಲಕ್ಷ್ಯಕ್ಕೆತಂದದ್ದೇ ಹೊರತು ಆ ಕುರಿತು ಸಮಾಜದವರು ತಮ್ಮೊಳಗಾದರೂ ಯಾವ ನಿಬಂಧನೆಯನ್ನು ಮಾಡಲಿಲ್ಲವೆಂದು ಸದಸ್ಯನು ಬರೆಯುವುದು ಕರ್ತವ್ಯಪರಾಙ್ಮುಖತೆಯ ದಸ್ಯುತನವಲ್ಲವೆ? ಸಮಾಜವು ತನ್ಮೊಳಗಾದರೂ ಅಂತಹ ನಿಬಂಧನೆಯನ್ನು ಮಾಡದೆ ಇರಲು ಕಾರಣವೇನು? ಅಥವಾ ವಿವಾಹಾಂತರದ ಸಂದರ್ಭವು ಒದಗಿದರೆ ತನಗೂ ತಪ್ಪಿಹೋಗಬಾರದೆಂಬ ದುರಾಲೋಚನೆಯಿಂದ ಸದಸ್ಯನು ನಿಬಂಧನೆಯನ್ನು ಮಾಡದೇ ಇರಲು ಪ್ರವರ್ತಕನಾಗಿರಬಹುದು. ಈಗ "ಓದುವುದು ಶಾಸ್ತ್ರ ಇಕ್ಕುವುದು ಗಾಳ"ವೆಂಬ ಗಾದೆಯು ಯಾರನ್ನು ಸೇರುವುದೋ ವಾಚಕರೇ ಊಹಿಸಿ ತಿಳಿದುಕೊಳ್ಳಲಿ. ಮತ್ತು "ಸಮಾಜದವರು ಈ ವಿಷಯವನ್ನು ಪ್ರಕಟಿಸಿದ ತರುವಾಯ ವಿಚಾರಿಯು ಹೇಳುವಂತೆ ಕಾರ್ಯನಿರ್ವಾಹಕ ಸಭೆಯ ಮುಂದಾಳುಗಳ ಮನೆಯಲ್ಲಿ ವಿವಾಹಗಳಾದದ್ದೂ ಇಲ್ಲ" ಎಂದು ಸದಸ್ಯನು ಬರೆದಿರುವನು. ಆದರೆ ವಿಚಾರಿಯು ನಾಲ್ಕನೆ ವಾರ್ಷಿಕ ವರದಿಯ ಕುರಿತು ಬರೆದಿರುವ ಕಾರಣ ಸಮಾಜದ ನಾಲ್ಕನೆಯ ವರುಷದಲ್ಲಿ ನಡೆದಿರುವ ಸಂಗತಿಗಳನ್ನೇ ಸೂಚಿಸುತ್ತಾನಲ್ಲದೆ ವರದಿಯು ಪ್ರಕಟವಾದ ನಂತರದ ಸಂಗತಿಗಳ ವಿಷಯ ಪ್ರಸ್ತಾಪಿಸಿರುವುದಿಲ್ಲ.

ನಿಷೇಧಕ ಚಳವಳವು ನಡೆಯುತ್ತಿರುವ ಬೊಕ್ಕಪಟ್ಣದಂತಹ ಸ್ಥಳಗಳಲ್ಲಿ ವಿನಿಯೋಗಿಸುವ ಸಮಯವನ್ನು ಅಂತಹ ಚಳವಳವು ಇಲ್ಲದಿರುವ ಬೇರೆ ಕಡೆಗಳಲ್ಲಿ ವಿನಿಯೋಗಿಸುವುದು ಒಳ್ಳೆಯದೆಂದು ನ್ಯಾಯವಾಗಿ ಸೂಚಿಸಿದ ವಿಚಾರಿಯ ಸೂಚನೆಗೆ ತಕ್ಕುದಾದ ಪ್ರತ್ಯುತ್ತರವು ತೋರದೇ ಇದ್ದುದರಿಂದಲೋ ಅಥವಾ ಸ್ವಭಾವಾನುಗುಣವಾಗಿ ಕೋಪತಾಪಕ್ಕೆ ಈಡಾದ ಮನಸ್ಸಿನಲ್ಲಿ ಸದ್ಭಾವನೆಗೆ ಈಡು ದೊರೆಯದೇ ಹೋದುದರಿಂದಲೋ? ಥಕ್ಕನೆ "ಬೊಕ್ಕಪಟ್ಣದ ಮದ್ಯದಂಗಡಿಯಲ್ಲಿ ಸ್ತ್ರೀಪುರುಷರ ಕೋಲಾಹಲವು ವಿಚಾರಿಗೆ ತಿಳಿಯದಿದ್ದರೂ ವಾಚಕರಿಗೆ ತಿಳಿಯಬಹುದೆಂದು" ಬರೆದ ಸದಸ್ಯನ ಬರವಣಿಗೆಯು ಮನಸ್ಸಿನ ಪರವಶತೆಯನ್ನು ಪ್ರಕಾಶಪಡಿಸುತ್ತದೆ. ಏಕೆಂದರೆ ಕೋಲಾಹಲವು ಮದ್ಯದಂಗಡಿಯ ಲಕ್ಷಣ. ಮದ್ಯಪಾಯಿಗಳು ಪಾನಕ್ಕಾಗಿ ಎಷ್ಟು ದೂರ ಪ್ರಯಾಣ ಮಾಡುವರೆಂಬ ಸಂಗತಿ ಅನುಭವಸ್ಥರಿಗೆ ಅಪೂರ್ವವಾದುದಲ್ಲ. ಹೀಗೆ ಬೊಕ್ಕಪಟ್ಣದ ಅಂಗಡಿಯಲ್ಲಿರುವವರು ಬೊಕ್ಕಪಟ್ಣದ ನಿವಾಸಿಕರೆಂದೇ ಹೇಳುವುದು ಅಸಾಧ್ಯ. ಯಾರ ಕೋಲಾಹಲವನ್ನೋ ಕೇಳಿ ಸದಸ್ಯನು ಭ್ರಾಂತನಾಗಿರಬೇಕೆಂದು ತೋರುತ್ತದೆ. ಇದು ಒಂದು ಆಶ್ಚರ್ಯವಾದ ಸಂಗತಿ.

ತನ್ನ ಕುಂದುಕೊರತೆಗಳನ್ನು ತಿದ್ದಿಕೊಳ್ಳುವುದರ ಮೂಲಕ ಸಮಾಜವು ಚಿರಸ್ಥಾಯಿಯಾಗಿ ಉದಾರ ಮನಸ್ಸಿನಿಂದಿರಬೇಕೆಂದು ವಿಚಾರಿಯು ಭಾವಿಸುತ್ತಿರುವನೇ ಹೊರತು, ಅಲ್ಲಸಲ್ಲದ ಜಾತಿಯ ಗುಟ್ಟನ್ನು ಸದಸ್ಯನಂತೆ ಹೊರಪಡಿಸಲು ಪ್ರವೃತ್ತನಾಗಲಿಲ್ಲ. ಆದರೂ "ಹಾವಿಗೆರದಿರುವ ಹಾಲಿ"ನಂತೆ ಸದಸ್ಯನಿಗೆ ಅದು ರುಚಿಸದಿದ್ದರೆ ಅದರಲ್ಲಿ ವಿಚಾರಿಯ ಅವಿಚಾರವೇನಿರುವುದು? ಇನ್ನಾದರೂ ಸಮಾಜವು ಸ್ವಾರ್ಥ ಮತ್ತು ಸ್ವಾಭಿಮಾನವನ್ನು ತ್ಯಾಗ ಮಾಡಿ ಉದಾರ ಮನಸ್ಸಿನಿಂದ ತನ್ನ ಕರ್ತವ್ಯವನ್ನು ಮರೆಯದೆ ಮಾಡಿದಲ್ಲಿ ಉದ್ದೇಶವು ಸಾರ್ಥಕವಾಗುವುದು.

ಕಳೆದ ೫೧ನೆ ಸಂಚಿಕೆಯಲ್ಲಿ ನಿಷ್ಪಕ್ಷಪಾತಿಯು ಕುರುಪಾಂಡವ ನ್ಯಾಯವನ್ನು ಉದಹರಿಸಿ ವಿಚಾರಿಯು ಸ್ವವ್ಯಾಘಾತಕಲಹಕಾರಿಯೆಂದು ಭಾವಗರ್ಭವಾದ ಆಶಯವನ್ನು ಹೊರಪಡಿಸಿದ್ದು ವಿಷಾದಕರವಾಗಿದೆ. ಸಮಾಜದ ಏಳಿಗೆಯನ್ನು ಬಯಸುತ್ತಿರುವ ವಿಚಾರಿಗೆ ಕುರುಪಾಂಡವ ನ್ಯಾಯವು ಸಲ್ಲದ ಮಾತಾಗಿದ್ದರೂ ಅದನ್ನು ತಂದೊದ್ದಿದ್ದು ಅಸಂಗತವೆಂದೂ ನಿಷ್ಪ್ರಯೋಜನಕರವಾದುದೆಂದೂ ನಿಷ್ಪಕ್ಷಪಾತಿಯು ಅರಿತು ಕೊಳ್ಳುವನು [illegible]

[illegible]

ವಿಚಾರಿ.

ಯುದ್ಧ ಸಮಾಚಾರವು.

ತಾ. ೧೭ನೇ ದಶಂಬರ.

ಪೂರ್ವ ರಣರಂಗದಲ್ಲಿ ರುಶ್ಯಯನರಿಂದ ಅಪಾಯವು ಖಂಡಿತವಾಗಿ ಪ್ರಾಪ್ತವಾಗುವದನ್ನು ನೋಡಿ ಜರ್ಮನರು ಪಶ್ಚಿಮ ರಣರಂಗದಿಂದ ತಮ್ಮ ಸೈನ್ಯದ ಕೆಲವು ಪಾಳೆಯಗಳನ್ನು ಪೂರ್ವ ರಣರಂಗಕ್ಕೆ ತಕ್ಕೊಂಡುಹೋಗಿರುವರು ಆದ್ದರಿಂದ ಪಶ್ಚಿಮ ರಣರಂಗದಲ್ಲಿ ವಿಶೇಷ ಕಾದಾಟಗಳೇನೂ ಇರವು ಮಿತ್ರರ ಸಂಯುಕ್ತ ಸೈನ್ಯದವರು ಮುಂದುವರಿದು ಬರುತ್ತಾ ತಮ್ಮ ಕೈವಶವಾಗುತ್ತಿರುವ ಸೇನಾ ನೆಲೆಗಳನ್ನು ಬಲಪಡಿಸುತ್ತಿರುವರು ಇಂಥಾ ಪ್ರಯತ್ನಗಳನ್ನು ಸಂಯುಕ್ತ ಸೇನೆಯವರು ಮಾಡುತ್ತಿರುವಾಗ ಶತ್ರುಗಳ ಸೇನಿಕರು ಬಂದು ಅಲ್ಲಲ್ಲಿ ಎದುರಾಡುತ್ತಿರುವುದರಿಂದ ಚಿಕ್ಕ ಚಿಕ್ಕ ಕದನಗಳ ಪ್ರಸ್ತಾಪಗಳು ಕೇಳಬರುತ್ತಿರುವವು. ಜರ್ಮನರು ಫ್ರಾನ್ಸಿನಲ್ಲಿ ಆಕ್ರಮಿಸಿರುವ ಪ್ರಾಂತ್ಯಗಳು ಒಟ್ಟು ಫ್ರಾನ್ಸಿನ ೧೦೦ ಅಂಗಗಳಲ್ಲಿ ಮೂರು ಅಂಗಗಳು ಮಾತ್ರವಾಗಿರುತ್ತವೆ

ಫ್ರಾನ್ಸಿನಲ್ಲಿ ಪ್ರಕಟವಾಗಿರುವ ಪೂರ್ವ ರಣರಂಗದ ಸಮಾಚಾರದಿಂದ ಸರ್ವಿಯನರು ೨೮,೦೦೦ ಒಸ್ಟ್ರಿಯಾನರನ್ನು ೭೦ ತೋಪೆಗಳೊಂದಿಗೆ ಸೆರೆಹಿಡಿದಿರುವರೆಂತ ತಿಳಿದು ಬರುತ್ತದೆ ಸರ್ವಿಯನರು ಬೆಲ್‌ಗ್ರೇಡನ್ನು ಪುನಹ ಹಿಂದಕ್ಕೆ ಪಡೆದಿರುವರು. ಪೋಲೆಂಡಿನಲ್ಲಿ ರುಶ್ಯಯನರಿಗೂ ಜರ್ಮನರಿಗೂ ನಡಿಯುವ ಸಂಗ್ರಾಮದಲ್ಲಿ ಮ್ಲಾವಾ ಪ್ರಾಂತ್ಯಗಳಲ್ಲಿ ರುಶ್ಯಯನರು ಜರ್ಮನರನ್ನು ಹಿಂದಕ್ಕೆ ಓಡಿಸುತ್ತಿದ್ದಾರೆ ಅರ್ಮೇನಿಯದಲ್ಲಿ ತುರ್ಕಿಯವರು ತಿರಿಗೊಮ್ಮೆ ಸೋಲಿಸಲ್ಪಟ್ಟಿರುವರು ಕೌಕಸಸ್ ಪ್ರಾಂತ್ಯಗಳಲ್ಲಿರುವ ತುರ್ಕರ ಸೇನೆಯ ನಾಯಕತ್ವವನ್ನು ವಹಿಸಿಕೊಳ್ಳಲಿಕ್ಕೆ ಎನ್ವರ್ ಪಾಶಾರವರು ಹೋಗಿರುತ್ತಾರೆ ತುರ್ಕರ ಸೈನ್ಯದಲ್ಲಿರುವ ಸಿರಿಯದ ಸೇನಿಕರು ಸೇನೆಯ್ಯನ್ನು ಬಿಟ್ಟುಹೋಗುತ್ತಿರುವರು ಡಾರ್ಡನೆಲ್ಸ್ ಸಮೀಪ ಬ್ರಿಟಿಷರ ಜಲಂತರ್ಗಾಮಿ ನಾವೆಯೊಂದು ತುರ್ಕಿಯ ಮೆಸ್ಸಿಡಿಯಾ ಯುದ್ಧನಾವೆಯನ್ನು ಹಾಳುಮಾಡಿರುತ್ತದೆ

ತಾ ೧೮ನೇ ದಶಂಬರ.

ಯಾರ್ಪ್ರೆಸ್ಸಿನ ಸುತ್ತಲು ಫ್ರೆಂಚ ಮತ್ತು ಬೆಲ್ಜಿಯನರ ಸೇನೆಗಳು ಇನ್ನೂ ಕೆಲವು ಸೇನಾನೆಲೆಗಳನ್ನು ಪಡೆದಿರುತ್ತಾರೆ ಬೆಲ್ಜಿಯಮಿನ ನಿವಾಸಿಗಳಿಂದ ಜರ್ಮನರು ಯುದ್ಧನಷ್ಟ ಪರಿಹಾರಾರ್ಥವಾಗಿ ೧೮ ಮಿಲಿಯ ಪವನುಗಳನ್ನು ಪಡೆಯುವ ಏರ್ಪಾಡು ಮಾಡಿರುವರೆಂಬದಾಗಿ ತಿಳಿದುಬರುತ್ತದೆ ಮಿತ್ರರ ಆಕಾಶನಾವೆಗಳು ಜರ್ಮನರ ಫ್ರೈಬರ್ಗ ಎಂಬ ಪಟ್ಟಣದ ಮೇಲೆ ಸಿಡಿಮದ್ದಿನ ತೋಪೆಗಳನ್ನು ಎಸೆದಿರುವವು ಜರ್ಮನ್ ಖಜಾನಾ ಮಂತ್ರಿಯ ಪುತ್ರನನ್ನು ರುಶ್ಯಯನರು ಸೆರೆಹಿಡಿದಿರುವರು

ಪೂರ್ವರಣರಂಗದಲ್ಲಿ ಒಸ್ಟ್ರಿಯಾನರು ಸರ್ವಿಯನರಿಂದ ಸೋಲಿಸಲ್ಪಟ್ಟ ವೃತ್ತಾಂತವನ್ನು ಒಸ್ಟ್ರಿಯನರು ಒಪ್ಪಿಕೊಂಡಿರುವರು ಕೆಲವು ದಿನಗಳ ಹಿಂದೆ ಸರ್ವಿಯನರು ಒಸ್ಟ್ರಿಯನರಿಂದ ಸೋಲಿಸಲ್ಪಟ್ಟಾಗ ಒಸ್ಟ್ರಿಯನರ ಏಳು ಸೇನಾ ಪಾಳೆಯಗಳು ಸರ್ವಿಯದಲ್ಲಿದ್ದವು ರುಶ್ಯಯನರು ಹಂಗೇರಿಯನ್ನು ಒಳನುಗ್ಗಿದೊಡನೆ ಸರ್ವಿಯದಲ್ಲಿರುವ ಕೆಲವು ಒಸ್ಟ್ರಿಯಾನರ ಸೇನಾಪಾಳೆಯಗಳನ್ನು ಹಂಗೇರಿಗೆ ತರಬೇಕಾಯಿತು ಇದನ್ನು ನೋಡಿ ಸರ್ವಿಯನರು ಒಸ್ಟ್ರಿಯನರ ಸೇನೆಯ ಮೇಲೆ ಬಿದ್ದು ಅದನ್ನು ಸೋಲಿಸಿ ಓಡಿಸಿಬಿಟ್ಟರು ಸರ್ವಿಯನರಿಂದ ಪ್ರಾಪ್ತವಾಗುವ ಅಪಜಯಗಳಲ್ಲಿ ತಮಗುಂಟಾಗುವ ನಷ್ಟಕ್ಕಿಂತಲೂ ಹೆಚ್ಚಾಗಿ ಅಪಮಾನವು ಉಂಟಾಗುವುದೆಂತ ಒಸ್ಟ್ರಿಯನರು ಮರುಗುತ್ತಿರುವರು ಒಸ್ಟ್ರಿಯನರ ಎರಡು ಡಿಸ್ಟ್ರೋಯರ್ ನಾವೆಗಳು ಭೂಮಧ್ಯ ಸಾಗರದಲ್ಲಿ ಮುಳುಗಿಹೋದ ವಾರ್ತೆಯು ಬಂದಿದೆ. ಜರ್ಮನಿಯಲ್ಲಿ ಶಾಂಬ್ರಡ [illegible] ದಲ್ಲಿರುವ ಕ್ರಯಕ್ಕಿಂತ ಇಮ್ಮಡಿಯಾಗಿರುವುದು [illegible] ಯುವು ಜರ್ಮನಿಯನ್ನು [illegible] ಧಾನ ಮಾಡಿಕೊಳ್ಳುವ ಸಂ[illegible]

ಇದೆ. ಜರ್ಮನ್ ಸೇನಾನಾಯಕರೊಬ್ಬರ ಹೇಳಿಕೆ ಮೇರೆಗೆ ಜರ್ಮನಿಯು ಒಂದು ವರುಷ ಕಾಲದವರೆಗೆ ಮಾತ್ರ ಯುದ್ಧವನ್ನು ನಡೆಸುವ ಸಂಗ್ರಹವನ್ನು ಮಾಡಿರುವುದೆಂತ ತಿಳಿದುಬರುವುದು.

ತಾ. ೧೯ನೇ ದಶಂಬರ

ಜರ್ಮನರ ನಾಲ್ಕು ಯುದ್ಧನಾವೆಗಳು ಬಂದು ಅಂಗ್ಲಾಳದ ನೊರ್ತಸಿ ಉಪಸಾಗರದ ಪೂರ್ವ ಕರಾವಳಿಯಲ್ಲಿರುವ ಸ್ಕೇರ್‌ಬರೊ ಮತ್ತು ಹಾರ್ಟಪುಲ್ ಪಟ್ಟಣಗಳ ಮೇಲೆ ಪಿರಂಗಿಗಳನ್ನು ಹಾರಿಸಿದವು ಇಬ್ಬನಿ ತುಂಬಿದ್ದ ಬೆಳಗ್ಗಿನ ಸಮಯದಲ್ಲಿ ಜರ್ಮನ್ ನಾವೆಗಳಿಂದ ಕೋವಿಗಳು ಹಾರಿಸಲ್ಪಟ್ಟದ್ದರಿಂದ ನಾವೆಗಳು ಕಣ್ಣಿಗೆ ಗೋಚರವಾಗದೆ ಆಪ್ರಾಂತ್ಯಗಳ ಬ್ರಿಟಿಷ್ ಜನರಲ್ಲಿ ವಿಶೇಷ ಗಲಿಬಿಲಿ ಉಂಟಾಯಿತು ಜರ್ಮನ ಯುದ್ಧನಾವೆಗಳ ಒಡೋಣವು ಆ ಪ್ರಾಂತ್ಯಗಳ ಕಾವಲಿನ ಬ್ರಿಟಿಷ ನೌಕಾಪಡೆಗೆ ತಿಳಿದೊಡನೆ ಜರ್ಮನರ ನಾವೆಗಳು ತಲೆತಪ್ಪಿಸಿಕೊಂಡು ಓಡಿಹೋದವು ಮಂಜು ವಿಶೇಷವಾಗಿದ್ದುದರಿಂದ ಜರ್ಮನ್ ಯುದ್ಧನಾವೆಗಳನ್ನು ಹಿಡಿಯಲು ಆಗಲಿಲ್ಲ

ತುರ್ಕಿಯ ಮೆಸಿಡಿಯಾ ನಾವೆಯು ಮುಳುಗಿಹೋಯಿತು

ಜರ್ಮನರು ಸ್ವಾಧೀನಮಾಡಿಕೊಂಡಿರುವ ಬೆಲ್ಜಿಯಮಿನ ಕರಾವಳಿ ಪಟ್ಟಣವಾದ ವೆಸ್ಟ್ ಎಂಡ್ ಎಂಬುದಕ್ಕೆ ಬ್ರಿಟಿಷ ನೌಕಾಪಡೆ ನಾವೆಗಳಿಂದ ಬಹಳ ವಿಶೇಷವಾಗಿ ಗುಂಡುಗಳು ಹಾರಿಸೋಣಾದವು ಬೆಲ್ಜಿಯಮಿನ ಪ್ಲೆಂಡರ್ಸ್ ಪ್ರಾಂತ್ಯಗಳಲ್ಲಿ ಬೆಲ್ಜಿಯನರು ಸೈಂಟ್ ಜೋರ್ಜ ವಾರ್ಮ ಎಂಬಲ್ಲಿ ಜರ್ಮನರನ್ನು ಹಿಂದಕ್ಕೆ ಓಡಿಸಿಬಿಟ್ಟು ವೈಸರ್ ನದಿಯ ಎಡದಡದಲ್ಲಿರುವ ಗದ್ದೆಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ ಯುದ್ಧರಂಗದಲ್ಲಿ ಮಾರ್ಗಗಳ ಸ್ಥಿತಿಯು ಬಹಳ ಕೆಟ್ಟುಹೋಗಿರುವುದರಿಂದ ಸಂಯುಕ್ತ ಸೇನೆಗಳು ಬೇಕಾದಂತೆ ಮುಂದರಿದು ಹೋಗಲು ವಿಶೇಷ ಅಡಚಣೆಯುಂಟಾಗುತ್ತದೆಂತ ಟ್ಯಾಮ್ಸ್ ಪತ್ರದ ಬಾತ್ಮೀದಾರರು ತಿಳಿಸುತ್ತಿರುವರು

ಪೋಲೇಂಡಿನಲ್ಲಿ ವಿಸ್ತುಲ ನದಿಯ ಎಡದಡದಲ್ಲಿ ರುಶ್ಯಯನರಿಗೂ ಜರ್ಮನರಿಗೂ ಕಾಳಗವು ನಡಿಯುತ್ತಲಿದೆ ಮ್ಲಾವಾ ಪ್ರಾಂತ್ಯದಲ್ಲಿ ರಶ್ಯಯನರು ಶತ್ರುಗಳನ್ನು ಹಿಂದಕ್ಕಟ್ಟುತ್ತಿರುವರು ಕ್ರೆಕೌ ಕಡೆಯಲ್ಲಿ ಜರ್ಮನರ ಬಲವು ಕುಂದಿಹೋಗಿರುವುದು ಸರ್ವಿಯದಲ್ಲಿ ಒಸ್ಟ್ರಿಯದ ಸೇನಿಕರಲ್ಲಿ ೭೦,೦೦೦ ಜನರು ಸೆರೆಯಲ್ಲಿರುವರು

ತಾ ೨೦ನೇ ದಶಂಬರ.

ಜರ್ಮನ್ ಯುದ್ಧ ನಾವೆಗಳು ಅಂಗ್ಲಾಳ ಕರಾವಳಿಯ ಹಾರ್ಟಪುಲ್ ಪಟ್ಟಕ್ಕೆ ಗುಂಡು ಹಾರಿಸಿದ್ದರಿಂದ ನಿವಾಸಿಕರಲ್ಲಿ ೫೫ ಜನರು ಮಡಿದಿರುವರೆಂತಲೂ ೧೧೫ ಜನರು ಘಾಯ ಪಡದಿರುವರೆಂತಲೂ ಯುದ್ಧ ವರ್ತಮಾನ ಸಂಗ್ರಹದ ಆಪೀಸಿನವರು ಪ್ರಕಟಿಸಿರುವರು ಜರ್ಮನರ ಈ ಯುದ್ಧನಾವೆಗಳಲ್ಲಿ ಒಂದೆರಡು ನಾಶ ಮಾಡೋಣಾದವೆಂಬ ವರ್ತಮಾನವು ಸಹ ಇರುವುದು ಈ ಯುದ್ಧನಾವೆಗಳಿಂದ ಉಂಟಾದ ಅನಾಹುತವನ್ನು ಪರ್ಯಾಲೋಚಿಸುವ ಒಗ್ಗೆ ಬ್ರಿಟಿಷ ಮಂತ್ರಿಗಳ ಸಭೆಯು ಜರುಗಿತು ಪಶ್ಚಿಮ ರಣರಂಗದಲ್ಲಿ ಸಂಯುಕ್ತ ಸೈನ್ಯದವರು ಸಮೀನುಗಳಿಂದ ಶತ್ರುಗಳೊಡನೆ ಕಾದಾಡಿಕೊಂಡು ಶತ್ರುಗಳು ತಮ್ಮ ನೆಲೆಗಳನ್ನು ಬಿಟ್ಟು ಹಿಂದಕ್ಕೆ ಹೋಗುವಂತೆ ಮಾಡಿದರು

ಅಮೇರಿಕದ ಗ್ವಾಮ್ಲಾಡ್ರೊನ್ಸ್ ಎಂಬಲ್ಲಿ ಜರ್ಮನರ ಕೊರ್ಮೊರೆಂಟ್ ಎಂಬ ಯುದ್ಧನಾವೆಯು ಬಂದಿತ್ತು. ಯುದ್ಧವನ್ನು ಪ್ರವೇಶಿಸದೆ ಇರುವವರ ಪ್ರಾಂತ್ಯಗಳಿಗೆ ಹೀಗೆ ಯುದ್ಧನಾವೆಯು ಬರುವುದು ಆಕ್ಷೇಪಕರವಾದ್ದರಿಂದ ಆ ಪ್ರಾಂತ್ಯದ ಸರಕಾರದವರು ಈ ಯುದ್ಧನಾವೆಯಲ್ಲಿರುವ ಆಯುಧಗಳನ್ನು ತೆಗಿಸಿ ಅದನ್ನು ಬಂಧನೆಯಲ್ಲಿಟ್ಟಿರುತ್ತಾರೆ.

ಪೂರ್ವ ರಣರಂಗದಲ್ಲಿ ರುಶ್ಯಯನರು ಕಾರ್ಪೆಥಿಯ [illegible]

ಪ್ರಾಂತ್ಯಗಳನ್ನು ಆಕ್ರಮಿಸಿಕೊಂಡಿರುತ್ತಾರೆ ಒಸ್ಟ್ರಿಯನರು ಕಾರ್ಪೆಥಿಯನ್ ಕಣಿವೆಗಳ ಸರಹದ್ದುಗಳಲ್ಲಿರುವರೆತಲೂ ಈ ಪ್ರಾಂತ್ಯಗಳಲ್ಲಿರುವ ನ್ಯೂಸೆಂಡಿಸ್‌ನ್ನು ಒಸ್ಟ್ರಿಯನರು ಹಿಂದಕ್ಕೆ ಪಡಕೊಂಡಿರುವರೆಂತಲೂ ಸಿವಿಲ್ ಮತ್ತು ಮಿಲಿಟರಿ ಗಜೇಟಿಗೆ ವಾರ್ತೆ ಬಂದಿರುವುದು ಆದರೆ ಕಾರ್ಪೆಥಿಯನ್ ಕಣಿವೆಗಳಲ್ಲಿ ಮುಂದರಿಸಿ ಬರುತ್ತಿರುವ ಒಸ್ಟ್ರಿಯನರನ್ನು ರುಶ್ಯಯನರು ತಡೆದಿರುತ್ತಾರೆ. ಮ್ಲಾವಾದಲ್ಲಿ ರುಶ್ಯಯನರು ಶತ್ರುಗಳನ್ನು ಹಿಂದಕ್ಕಟ್ಟಿದರೂ ವಿಸ್ತುಲಾ ನದಿಯ ಎಡ ದಡದಲ್ಲಿ ರುಶ್ಯಯನರು ಜರ್ಮನರ ಮುಂದೆ ಸ್ವಲ್ಪ ಹಿಂದಕ್ಕೆ ಸೇರಬೇಕಾಯಿತು ಬ್ರಿಟಿಷ ಯುದ್ಧ ನಾವೆಗಳು ಡಾರ್ಡನೆಲ್ಸ್ ಮತ್ತು ಸಾರೊಸ್ ಕೊಲ್ಲಿಯಲ್ಲಿ ತೋಪುಗಳನ್ನು ಹಾರಿಸಿ ತುರ್ಕರಲ್ಲಿ ಹಾವಳಿಯನ್ನುಂಟು ಮಾಡಿದ ವೃತ್ತಾಂತವು ಪ್ರಕಟವಾಗಿರುವುದು ತುರ್ಕರ ಅರಬೀಯ ಸೇನಿಕರು ಇಂಗ್ಲೀಷರ ಇದಿರಾಗಿ ಕಾದಾಡಲು ನಿರಾಕರಿಸುತ್ತಿರುವರು ಟರ್ಕಿಯಲ್ಲಿ ಮುಸಲ್ಮಾನ ಪ್ರಜಾ ವರ್ಗಗಳು ಜರ್ಮನರನ್ನು ಭ್ರಾತೃ ಭಾವದಿಂದ ಕಾಣುವಂತೆ ತಾವೆಲ್ಲ ಮಹಮ್ಮದೀಯ ಮತವನ್ನವಲಂಬಿಸಿರುವೆವೆಂತ ಜರ್ಮನರು ಬಹಳ ಅಪಮಾನಕರವಾದ ರೀತಿಯಲ್ಲಿ ನಟಿಸುತ್ತಿರುವರು

ತಾ ೨೧ನೇ ದಶಂಬರ.

ಯುದ್ಧರಂಗದಲ್ಲಿ ತಾವು ನಡಿಸಲಿಕ್ಕಿರುವ ಸಾಧನೆಗಳ ತಯ್ಯಾರಿಯು ಮಿತ್ರರಿಂದ ತಿಳಿಯಲಾಗದಂತೆ ಜರ್ಮನ ಸೇನಿಕರು ಸಂಯುಕ್ತ ಸೇನೆಗಳೊಡನೆ ಚಿಕ್ಕ ಪುಟ್ಟ ಕದನಗಳನ್ನು ಮಾಡುತ್ತಿದ್ದಾರೆಂತ ಲಂಡನಿನ ಪಾಯುನಿಯರ್ ಪತ್ರದ ಬಾತ್ಮೀದಾರರು ಬರೆದಿರುತ್ತಾರೆ. ಪೂರ್ವ ರಣರಂಗದಲ್ಲಿ ವೊರ್ಸೊವನ್ನು ಎಂಥಾ ಸಾಧನೆಯಿಂದಾದರೂ ತಕ್ಕೊಳ್ಳಬೇಕೆಂಬ ಆಜ್ಞೆಯು ಜರ್ಮನ ಸೇನಿಕರಿಗಿರುತ್ತದೆ ಪೂರ್ವ ರಣರಂಗದಲ್ಲಿ ಪೋಲೆಂಡಿನಲ್ಲಿ ರುಶ್ಯಯನರೊಡನೆ ಕಾಳಗಗಳನ್ನು ತೀರಿಸಿದ ನಂತರ ಪಶ್ಚಿಮ ರಣರಂಗದ ಕಾರ್ಯಸಾಧನೆಗಳನ್ನು ನೋಡಿಕೊಳ್ಳಬಹುದೆಂತ ಪೋಲೇಂಡಿನಲ್ಲಿ ಜರ್ಮನರು ತಮ್ಮ ಸೇನಾ ಸಂಖೆಯನ್ನು ಹೆಚ್ಚಿಸುತ್ತಿರುವರು ಮ್ಲಾವಾ ಪ್ರಾಂತ್ಯದಲ್ಲಿ ಸೋಲಿಸಲ್ಪಟ್ಟ ಜರ್ಮನರನ್ನು ರುಶ್ಯಯನರು ಹಿಂಬಾಲಿಸಿಕೊಂಡು ಓಡಿಸುತ್ತಿರುವರು ವಿಸ್ತುಲಾ ಮತ್ತು ಗೆಲಿಸಿಯಾ ಪ್ರಾಂತ್ಯಗಳಲ್ಲಿ ವಿಶೇಷವಾದ ಕದನಗಳಿರಲಿಲ್ಲ ರುಶ್ಯದಲ್ಲಿ ನೀವಾ ನದಿಯ ನೀರು ಹೆಪ್ಪುಕಟ್ಟಿಹೋದ್ದರಿಂದ ನೀರಿನ ಪ್ರವಾಹವು ತಡೆಯಲ್ಪಟ್ಟು ಪೆಟ್ರೊಗ್ರೆಡಿನಲ್ಲಿ ನೀರಿನ ಕ್ಷಾಮವು ಉಂಟಾಗಿರುತ್ತದೆ ಕೈಸರರು ತಮ್ಮ ಅಸ್ವಸ್ಥದಿಂದ ಪೂರ್ಣ ಗುಣಹೊಂದಿಕೊಂಡು ಯುದ್ಧರಂಗಕ್ಕೆ ತೆರಳಿರುವರು ಐಗುಪ್ತ ದೇಶವನ್ನೆಲ್ಲಾ ಬ್ರಿಟಿಷರ ಆಶ್ರಿತ ಸಂಸ್ಥಾನವಾಗಿ ಮಾಡೋಣಾಗಿರುವುದು ಫ್ರೆಂಚರು ಈ ಪ್ರಾಂತ್ಯಗಳಲ್ಲಿ ಬ್ರಿಟಿಷರ ಪರಮಾಧಿಕಾರವನ್ನು ಮನ್ನಿಸಿರುತ್ತಾರೆ ಕೊನ್ಸ್‌ಟೆಂಟಿನೋಪಲಿನಲ್ಲಿರುವ ಇಟಲಿಯ ಪ್ರಜಾ ಜನರು ಅಲ್ಲಿಂದ ತೆರಳುತ್ತಿರುವರೆಂಬ ವರ್ತಮಾನವಿದೆ

ತಾ ೨೨ನೇ ದಶಂಬರ.

ವ್ಯಾಸರಾಯ ಪ್ರಭುಗಳ ಪುತ್ರ ಲೆಫ್ಟಿನೆಂಟ್ ಹಾರ್ಡಿಂಜರವರು ಯುದ್ಧದಲ್ಲಿ ಪಡೆದ ಘಾಯಗಳಿಂದ ಮೃತಪಟ್ಟ ವರ್ತಮಾನವು ಡಿಲ್ಲಿಗೆ ಬಂದಿರುವುದು ಅಮೇರಿಕದಿಂದ ಅರಳೆ ಮತ್ತು ಗೋಧಿಯನ್ನು ಪರದೇಶಗಳಿಗೆ ಒಯ್ಯಲಿಕ್ಕೆ ಹಡಗುಗಳಿಲ್ಲದೆ ವಿಶೇಷ ಅಡಚಣೆಯುಂಟಾಗಿರುತ್ತದೆ. ಗೆಲಿಸಿಯದಲ್ಲಿ ಕಠಿಣವಾದ ಸಂಗ್ರಾಮವು ಇನ್ನು ಸದ್ಯದಲ್ಲಿ ನಡಿಯುವ ಸಂಭವವಿರುವುದು. ವಿಸ್ತುಲ ನದಿಯ ಎಡಭಾಗದಲ್ಲಿ ಕಾಳಗಗಳು ನಡಿಯುವದಿಲ್ಲವೆಂತಲೂ ಒಸ್ಟ್ರಿಯನರ ಸೇನೆಗೆ ಬೆಂಬಲವು ಬಂದು ಸೇರುತ್ತಿರುವುದರಿಂದ ಯುದ್ಧರಂಗದಲ್ಲಿ ಇದಕ್ಕೆ ತಕ್ಕಂತೆ ತಮ್ಮ ಸೇನೆಯನ್ನು ಮಾರ್ಪಡಿಸಿ [illegible] ಗೆಲಿಸಿಯದಲ್ಲಿ ೩೦೦೦ ಜನ ಜರ್ಮನರನ್ನು ಸೆರೆಹಿಡಿದಿರುತ್ತಾರೆಂತಲೂ ರುಶ್ಯಯನರ ಯುದ್ಧ ಸಮಾಚಾರದ ಆಫೀಸಿನವರು ಪ್ರಕ[illegible]

ವಿದೇಶ ವೃತ್ತಾಂತ.

ಕೆಲವು ಜರ್ಮನ್ ವಿದ್ವಾಂಸರು ತಮಗೆ ಹಿಂದೆ ಇಂಗ್ಲಿಷ್ ಯುನಿವರ್ಸಿಟಿಗಳಿಂದ ದೊರಕಿದ್ದ ಬಿರುದುಗಳನ್ನೂ ಪದಕಗಳನ್ನೂ ಈ ಯುದ್ಧಕಾಲದಲ್ಲಿ ತ್ಯಜಿಸಿ ಬಿಟ್ಟಿರುವರು. ಎಕ್ಸ್ ರೇಸ್ ಎಂಬದನ್ನು ಕಂಡುಕೊಂಡ ಜರ್ಮನ್ ವಿದ್ವಾಂಸ ರೊಂಟಜೆನ್ ಎಂಬವರು ಇಂಗ್ಲಾಂಡಿನ ರೊಯಲ್ ಸೊಸೈಟಿಯಿಂದ ದೊರಕಿದ ಭಂಗಾರದ ಪದಕವನ್ನು ರೆಡ್‌ಕ್ರೊಸ್ ಸೊಸೈಟಿಗೆ ಕೊಟ್ಟುಬಿಟ್ಟಿರುವರು. ಈ ಪದಕವು ಸುಮಾರು ೮೦೦ ರೂಪಾಯಿ ಕ್ರಯ ಬಾಳುವಂಥಾದ್ದಾಗಿತ್ತು. ಜರ್ಮನ್ ವಿದ್ವಾಂಸರು ಮಾಡಿದ ಈ ಕಾರ್ಯವು ನಾಚಿಕೆಗೇಡುತನವೆಂದು ಹಲವು ಇಂಗ್ಲಿಷ್ ಪತ್ರಿಕೆಗಳು ಬರೆಯುವವು. ಇಂಗ್ಲಿಷ್ ವಿದ್ವಾಂಸರು ಈ ನಾಚಿಕೆಗೇಡುತನದ ಕೆಲಸವನ್ನು ಇನ್ನೂ ಕೈಕೊಳ್ಳಲಿಲ್ಲ.

ಉತ್ತರ ಹಿಂದೂಸ್ಥಾನ.

ಬನಾರಸಿನಲ್ಲಿ ಸುಮಾರು ೩೦,೦೦೦ ನೇಯಿಗೆಯವರು ಈ ಯುದ್ಧದ ದೆಸೆಯಿಂದ ಕೆಲಸವಿಲ್ಲದವರಾಗಿದ್ದಾರೆ. ಇವರು ನೇಯಿದ ಜಮಖಾನುಗಳನ್ನು ಈಗ ಇಂಗ್ಲಾಂಡಿಗೆ ವ ಯೂರೋಪ ಖಂಡಕ್ಕೆ ಕಳುಹಿಸಲು ಸಾಧ್ಯವಿಲ್ಲದೆ ಇರುವದೇ ಇದಕ್ಕೆ ಕಾರಣವಾಗಿರುವದು. ಮಾರದೆ ಬಾಕಿ ಇರುವ ಜಮಖಾನುಗಳ ಮೌಲ್ಯವು ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗೆ ಮಿಕ್ಕಬಹುದು. ಇವು ಬೇಗನೇ ಮಾರಿಹೋಗದಿದ್ದ ಪಕ್ಷಕ್ಕೆ ಈ ನೇಯಿಗೆಯವರು ಊಟಕ್ಕಿಲ್ಲದೆ ಸಾಯ ಬೇಕಾಗುವದು!

ಬೆಲ್ಜಿಯಮಿನಲ್ಲಿರುವ ಸೈನಿಕರ ಕಾಲುಗಳು ಅತಿ ಶೀತದಿಂದ ಒಡೆದು ಹೋಗಿರುವವೆಂಬ ವಾರ್ತೆಯನ್ನು ಗ್ವಾಲಿಯರ ಮಹಾರಾಜರು ಕೇಳಿ ಈ ಬಗ್ಗೆ ತಮ್ಮ ಲಿಕ್ಕದಲ್ಲಿ ಸೈನಿಕರಿಗೆ ೧೦೦,೦೦೦ ಟಿನ್ ವೆಸಲಿನ್ ಕಳುಹಿಸಿಕೊಡಬೇಕಾಗಿ ಲಂಡನಿನಲ್ಲಿರುವ ತಮ್ಮ ಏಜಂಟರಿಗೆ ತಿಳಿಸಿರುವರು.

ಸಪ್ಟಂಬರ ತಾ. ೨೬ರಲ್ಲು ಕಲ್ಕತ್ತೆಯ "ಕಮ್ರೇಡ್" ಎಂಬ ಪತ್ರಿಕೆಯಲ್ಲಿ "ತುರ್ಕರ ಆಯ್ಕೆ" ಎಂಬ ಒಂದು ಲೇಖನವನ್ನು ಪ್ರಕಟಿಸಿದ್ದರಿಂದ ಇಂಡಿಯಾ ಸರಕಾರದವರು ಈ ಪತ್ರಿಕೆಗೆ ಮುಟ್ಟುಗೋಲು ಹಾಕಿದ್ದರು. ಸರಕಾರದ ಈ ಹುಕುಮನ್ನು ರದ್ದು ಪಡಿಸಬೇಕಾಗಿಯೂ ಈ ವಿಷಯ ವಿಚಾರಿಸುವದಕ್ಕೆ ಸ್ಪೆಷಲ್ ಬೆಂಚನ್ನು ನೇಮಿಸಬೇಕಾಗಿಯೂ ಮೊಹಮ್ಮದಲಿಯವರು ಈ ಪತ್ರದ ಪರವಾಗಿ ಚೀಫ್ ಜಸ್ಟಿಸರಿಗೆ ಮನವಿಮಾಡಿಕೊಂಡಿದ್ದರು. ಈ ಮನವಿ ತನಿಖೆಯು ಜನವರಿ ತಾ. ೧೧ಕ್ಕೆ ಮುಂದೂಡಲಾಗಿರುವದು.

ಕಳೆದ ತಾ. ೪ರಲ್ಲು ಮುಂಬಾಯಿಯ ರಹಿಮ್ ಅಲಿ ಎಂಬ ಸಿಪಾಯಿಯು ಅದೇ ರೆಜಿಮೆಂಟಿನ ಆಫೀಸರ್ ಮಹಮ್ಮದನನ್ನು ಕೊಂದು ಹಾಕಿದನೆಂದು ತಿಳಿಸಿತ್ತಷ್ಟೆ. ಈ ಘಾತುಕನಿಗೆ ಇದೇ ತಾರೀಕು ೧೫ರಲ್ಲು ಫಾಸಿ ಶಿಕ್ಷೆ ವಿಧಿಸಲಾಯಿತು.

ಲಾಹೋರಿನ "ಲೊಯೆಲ್ ಗಜೆಟ್" ಎಂಬ ಛಾಪಖಾನೆಯಲ್ಲಿ ಒಕ್ಟೋಬರ ತಾ. ೭ರಲ್ಲು ಶೇರ್-ಇ-ಪಂಜಾಬು ಎಂಬ ಪತ್ರಿಕೆಯು ಪ್ರಕಟವಾದುದರಿಂದ ಈ ಛಾಪಖಾನೆ ಬಗ್ಗೆ ಜಾಮೀನಾಗಿ ಇಟ್ಟಿದ್ದ ಹಣವನ್ನು ಸರಕಾರದವರು ತಮಗೆ ಸೇರಿಸಿಕೊಂಡಿರುವದರಿಂದ ಸದರಿ ಛಾಪಖಾನೆಯ ಪ್ರೊಪ್ರೈಟರರು ಚೀಫ್ ಕೋರ್ಟಿಗೆ ಅಪೀಲು ಮಾಡಿಕೊಂಡಿರುವರು.

ಕರೆನ್ಸಿ ನೋಟುಗಳನ್ನು ತುಂಡುಮಾಡಕೂಡದೆಂಬದಾಗಿ ಬಂಗಾಳ ಸರಕಾರದ ಫಿನ್ಸೇನ್ಸ್ ಇಲಾಖೆಯ ಪತ್ರವನ್ನು ಬಂಗಾಳ ವಾಣಿಜ್ಯ ಸಂಘದವರು ವಿರೋಧಿಸಿ, ಕರೆನ್ಸಿ ನೋಟುಗಳು ಕಳವಾಗ ಹೋಗದ ಹಾಗೆ ಮಾಡುವ ಈ ಉಪಾಯವನ್ನು ನಿಲ್ಲಿಸುವದು ಹಿತವಲ್ಲವೆಂಬದಾಗಿ ತಿಳಿಸಿರುವರು.

ಸೀಮೆಯಿಂದ ಟಪ್ಪಾಲುಕೊಂಡುಬರುತ್ತಿದ್ದ "ಇಂಡಿಯಾ" ಎಂಬ ಹಡಗು ಕ್ರಿಸ್ಮಸ್ ದಿವಸ ಮುಂಬಾಯಿಗೆ ತಲುಪುವದೆಂದು ಪ್ರಕಟವಾಗಿತ್ತು. ಆದರೆ ಈ ಹಡಗವು ಸೂವೆಜ್ ಕಾಲುವೆಯನ್ನು [illegible] ತಡಿಯಾಗಿರುವದರಿಂದ ಅದು ಎರಡು ದಿವಸ ತಡವಾಗಿ ಮುಂಬಾಯಿಗೆ ತಲುಪುವದು [illegible]

ಮುಂಬಾಯಿಯ ಗುಲಾಮ್ ಹೈದರ್ ಎಂಬ ಒಬ್ಬ ಹಕೀಮನು ತನ್ನನ್ನು ತಾನೇ ನೇತ್ರ ವೈದ್ಯನೆಂದು ಕರೆಯಿಸಿಕೊಂಡು ಒಬ್ಬ ಮಹಮ್ಮದೀ ಹೆಂಗಸಿನ ಕಣ್ಣಿನಲ್ಲಿ ಬಂದಿದ್ದ ಪರೆಯನ್ನು ಶಸ್ತ್ರೋಪಯೋಗದಿಂದ ೩ ತಾಸಿನೊಳಗೆ ಸರಿ ಮಾಡುತ್ತೇನೆಂದು ಹೇಳಿ, ರೂ. ೩೦೦ರ ಕಂಟ್ರಾಕ್ಟು ಮಾಡಿ, ಸಾಧಾರಣ ಕತ್ತರಿಯಿಂದ ಶಸ್ತ್ರಪ್ರಯೋಗ ಮಾಡಿ ಸಾಧಾರಣ ಸೂಜಿಯಿಂದ ಹೊಲಿದು ಬಿಟ್ಟನು. ಇದರಿಂದ ಅವಳ ಕಣ್ಣು ಗುಣವಾಗುವದರ ಬದಲಿಗೆ ಪೂರಾ ಕಾಣದೆ ಹೋಯಿತು. ಅವಳ ಕಣ್ಣನ್ನು ಅನಂತರ ಚಿಕಿತ್ಸೆ ನಡಿಸಿದ ಡಾಕ್ಟರ್ ಬನಾಜಿಯವರು ಈ ಹಕೀಮನು ಅವಳ ಕಣ್ಣಿಗೆ ಟಿನ್ ಕಡಿಯುವ ಯಾ ದೀಪದ ಬತ್ತಿ ಕತ್ತರಿಸುವ ಮೈಲಿಗೆ ತುಂಬಿದ ಕತ್ತರಿಯನ್ನು ಪ್ರಯೋಗಿಸಿದ್ದಾನೆಂದು ಹೇಳಿದ್ದರಿಂದ ಹಕೀಮನ ಮೇಲೆ ಮೊಕದ್ದಮೆ ನಡೆದು ಮೆಜಿಸ್ಟ್ರೇಟರು ಆ ಹಕೀಮನಿಗೆ ೩ ತಿಂಗಳ ಕಠಿಣ ಸಜೆಯನ್ನೂ, ೧೫೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿದರು.

ಘಾಯ ಒಡೆದ ಭಾರತೀಯ ಸೈನಿಕರ ಇನ್ನೊಂದು ಪಂಗಡವು ಬಸ್ರಾದಿಂದ ತಾ. ೧೮ರಲ್ಲು ಲಾಹೋರಿಗೆ ಬಂದು ತಲುಪಿರುವದು. ಇವರನ್ನು ಮೋಟರ್ ಗಾಡಿಗಳಲ್ಲಿಯೂ ಪಲ್ಲಂಕಿಗಳಲ್ಲಿಯೂ ಚಿಕಿತ್ಸೆ ಬಗ್ಗೆ ಮೇಯೋ ಆಸ್ಪತ್ರೆಗೆ ಕೊಂಡುಹೋಗಿರುವರು.

ಭಾರತೀಯ ಭೀಮ ಪರಾಕ್ರಮಿ ಶಾಲಿಯೆಂದು ಪ್ರಸಿದ್ಧ ಪಟ್ಟ ಪ್ರೊಫೆಸರ್ ರಾಮಮೂರ್ತಿಯವರು ಈಗ ಕಾಪ್ರೂರಿನಲ್ಲಿರುವರು.

ಆಲ್ ಇಂಡಿಯ ಮಹಮ್ಮದನ್ ಎಡ್ಯುಕೇಶನಲ್ ಕನರೆನ್ಸ್ ಎಂಬ ಮಹಮದೀಯರ ವಿದ್ಯಾ ಸಭೆಯು ಇದೇ ತಾ. ೨೭-೩೦ರಲ್ಲು ರಾವಲ್ಪಿಂಡಿಯಲ್ಲಿ ಜರಗುವದು.

ಹಿಂದೂಸ್ಥಾನದ ವೈಸರಾಯ ಪ್ರಭುಗಳವರ ಮಗ ಲೆಫ್ಟನೆಂಟ ಇ. ಸಿ. ಹಾರ್ಡಿಂಜರವರು ರಣರಂಗದಲ್ಲಿ ಘಾಯ ಒಡೆದಿದ್ದರು ಎಂದು ತಿಳಿಸಿತ್ತಷ್ಟೆ. ಈ ಘಾಯವು ವಾಸಿಯಾಗದೆ ಇವರು ಮೃತರಾದರೆಂಬ ವಾರ್ತೆ ಈಗತಾನೇ ಬಂದಿರುವದರಿಂದ ವಿಷಾದಪಡುತ್ತೇವೆ. ವೈಸರಾಯ ಹಾರ್ಡಿಂಜ ಪ್ರಭುಗಳು ಹಿಂದೂಸ್ಥಾನದ ಕಡೆಗೆ ದಯಾಭಾವವುಳ್ಳವರೂ, ಸಹಾನುಭೂತಿಯವರೂ ಆಗಿದ್ದು ಪ್ರಜಾ ಜನರ ಮನಸ್ಸನ್ನು ಒಲಿಸಿಕೊಂಡಿರುವವರಾಗಿರುವದರಿಂದ ಇವರ ಮಗನ ಮರಣದಿಂದ ಹಿಂದೂಸ್ಥಾನದ ಜನರೆಲ್ಲರೂ ದುಃಖಸಾಗರದಲ್ಲಿ ಮುಳುಗದೆ ಇರಲಾರರು.

ಅಮೃತಸರದ ಕಲ್ಸಾ ಕಾಲೇಜಿಯ ಪ್ರಿನ್ಸಿಪಾಲರನ್ನು ಕೊಲ್ಲ ಲೆತ್ನಿಸಿ ಪ್ರಿನ್ಸಿಪಾಲರ ಬದಲಿಗೆ ಸದರಿ ಕೊಲೇಜಿಯ ಒಬ್ಬ ಪ್ರೊಫೆಸರನ್ನು ಕೊಂದ ಧಾರಸಿಂಗ್ ಎಂಬವನಿಗೆ ಅಮೃತಸರ್ ಸೆಶನ್ಸ್ ಜಡ್ಜರು ಜೀವಾಂತ ಬಂದೀಖಾನೆ ಶಿಕ್ಷೆಯನ್ನು ವಿಧಿಸಿದರು.

ಮಕ್ಕ ಮತ್ತು ಜೆಡ್ಡದ ನಿವಾಸಿಕರು ಆಹಾರವಿಲ್ಲದೆ ವಿಶೇಷ ಕಷ್ಟಕ್ಕೆ ಗುರಿಯಾಗಿರುವರು ಎಂಬ ವಾರ್ತೆ ಬಂದಿರುವದು. ಇತರ ಕಡೆಗಳಿಂದ ಅಲ್ಲಿಗೆ ಆಹಾರ ಜೀನಸುಗಳು ಹೋಗದಿರುವದೇ ಇದಕ್ಕೆ ಕಾರಣವಾಗಿರುವದು. ಜೆಡ್ಡ ಬಂದರವು ಶತ್ರುಗಳ ಬಂದರವಾಗಿದ್ದರೂ ಅಲ್ಲಿಯ ನಿವಾಸಿಕರ ಮತ್ತು ಅಲ್ಲಿಗೆ ಹೋಗಿರುವ ಹಿಂದೂಸ್ಥಾನದ ಮುಸಲ್ಮಾನ ಯಾತ್ರಿಕರ ಚಿಂತನೆಯಿಂದ ಅಲ್ಲಿಯ ಜನರಿಗೆ ಬೇಕಾಗುವಷ್ಟು ಆಹಾರ ಜೀನಸುಗಳನ್ನು ಹಡಗಗಳಿಂದ ಕೊಂಡುಹೋಗಬಹುದೆಂಬದಾಗಿ ವೈಸರಾಯ ಪ್ರಭುಗಳು ಒಪ್ಪಿಗೆ ಕೊಟ್ಟಿರುವರು.

ಈ ಕೆಳಗಿನ ಮೊಕದಮೆಯ ವಾರ್ತೆಯಿಂದ ಹಿಂದೂಸ್ಥಾನದ ಹಳ್ಳಿ ಪಳ್ಳಿಗಳ ಜನರಲ್ಲಿ ಇನ್ನೂ ಮೂಢಭಕ್ತಿಯು ಇದೆ ಎಂಬದು ತಿಳಿದು ಬರುವದು. ಈ ಮೊಕದಮೆಯಲ್ಲಿ ಒಂದು ತಿಂಗಳ ಮಗುವಿನ ಅಜ್ಜನು ಮಗವನ್ನು ರಾಕ್ಷಸನೆಂಬ ಅಭಿಪ್ರಾಯದಿಂದ ಜೀವಂತವಾಗಿರುವಾಗಲೇ ಹೂಣಿಟ್ಟನು ಎಂಬದಾಗಿ ಆಪಾದಿಸಲ್ಪಟ್ಟಿದ್ದನು. ಈ ಮೊಕದಮೆಯನ್ನು ಪ್ರಥಮತಃ ಅಜಾಮ್ಗಡದ ಸೆಶನ್ಸ್ ಜಡ್ಜರು ತನಿಕೆ ನಡಿಸಿ ಆಪಾದಿತರಿಗೆ ಒಂದೊಂದು ವರ್ಷದ [illegible] ವಿಧಿಸಿದರು. ಈ ಶಿಕ್ಷೆಯು ಹೈಕೋರ್ಟಿನಿಂದ [illegible] [illegible] ಬನಾರಸಿನ [illegible]

ಒಬ್ಬ ಪೋಲಿಸ್ ಸಬ್ ಇನ್ಸ್‌ಪೆಕ್ಟರನ್ನು ಕಂಡು ಅನುಮಾನಪಟ್ಟು ಆಪಾದಿತರು ಏನು ಮಾಡುತ್ತಿದ್ದಾರೆಂದು ನೋಡಲು ಕೆಲವು ಜನರನ್ನು ಕಳುಹಿಸಿದ್ದನು. ಈ ಮನುಷ್ಯರು ನೆಲದ ಅಡಿಯಿಂದ ಮಗುವು ಕೂಗುವದನ್ನು ಕೇಳಿ, ಕೂಡಲೇ ಸಬ್‌ಇನ್ಸ್‌ಪೆಕ್ಟರನನ್ನು ಕರೆದು, ನೆಲದ ಅಡಿಯಿಂದ ಮಗುವನ್ನು ತೆಗೆದು ನಂತರ ಮಗುವನ್ನು ಹತ್ತಿರದ ಗ್ರಾಮಕ್ಕೆ ಕೊಂಡು ಹೋಗಲು ಅಜ್ಞಾಪಿಸಿ, ಅಲ್ಲಿ ಅದಕ್ಕೆ ಸ್ವಲ್ಪ ದನದ ಹಾಲನ್ನು ಕುಡಿಸಿದರು. ಕಡೆಗೆ ಮಗುವಿನ ತಾಯನ್ನು ಕರೆಯಿಸಿ ಮೊಲೆ ಕೊಡಿಸಿದರು. ಆದರೆ ಅದಕ್ಕೆ ಮೊಲೆ ತಿನ್ನಲು ಶಕ್ತಿ ಸಾಲದೆ ಅದು ಬೇಗನೇ ಸತ್ತು ಹೋಯಿತು. ಮಗುವಿನ ತಾಯಿಯು ತಾನು ಬರುವಾಗ ಮಗುವು ಜೀವದಿಂದಿತ್ತೆಂದೂ ಮಗುವನ್ನು ಮನೆಯಲ್ಲಿ ಬಿಟ್ಟು ಪೈರುಕಟಾವಿಗೆ ಹೋಗಿ ಹಿಂದೆ ಬರುವಾಗ ಒಬ್ಬ ಮುದೀ ಹೆಂಗಸು ತನ್ನ ಮಗು ಸತ್ತು ಹೋಯಿತೆಂದು ಹೇಳಿದಳೆಂದೂ ವಾಗ್ಮೂಲ ಕೊಟ್ಟಳು. ಆ ಮಗುವು ರಾಕ್ಷಸನೆಂಬ ಭಾವನೆಯಿಂದ ಆಪಾದಿತರು ಅದನ್ನು ಜೀವದಲ್ಲೇ ಹೂಣಿಟ್ಟರೆಂಬದೇ ಪೋಲಿಸಿನವರ ವಾದವಾಗಿತ್ತು. ತಾನು ಮಗುವು ಸತ್ತಿತೆಂದು ತಿಳಿದು ಅದನ್ನು ಹೂಣಿಟ್ಟೆನೆಂದೂ ಹೂಣಿಟ್ಟ ನಂತರ ಕೂಗು ಕೇಳಿಸಿದ್ದರಿಂದ ದೈವವೆಂದು ಭಾವಿಸಿದೆನೆಂದೂ ಆಪಾದಿತನ ವಾದವಾಗಿತ್ತು. ಅಲ್ಲಹಾಬಾದ್ ಹೈಕೋರ್ಟಿನಲ್ಲಿ ಈ ಮೊಕದಮೆಯ ಅಪೀಲು ನಡೆದು ಜಸ್ಟಿಸರು ಆಪಾದಿತರನ್ನು ಖುಲಾಸು ಪಡಿಸಿದರು. ಈ ಮೊಕದಮೆಯಲ್ಲಿ ಪೋಲಿಸರು ಮಗುವಿನ ತಾಯನ್ನು ತಂದೆ ತಾಯಿ, ಗಂಡನಿಂದ ಮೊಕದಮೆಯ ವಿಚಾರಣೆಯು ತೀರುವ ವರೆಗೆ ದೂರ ಗ್ರಾಮದಲ್ಲಿ ಇಟ್ಟದ್ದೂ ಮಗುವಿನ ತಂದೆಯನ್ನು ಈ ಮೊಕದಮೆಯಲ್ಲಿ ಸೇರಿಸದೆ ಇದ್ದದ್ದೂ ಚೋದ್ಯವಾಗಿದೆಂದು ಹೈಕೋರ್ಟ ಜಸ್ಟಿಸರು ಅಭಿಪ್ರಾಯ ಪಟ್ಟಿರುವರು.

ದಕ್ಷಿಣ ಹಿಂದೂಸ್ಥಾನ.

ಮೈಸೂರು ಸರಕಾರದಿಂದ ಸ್ಥಾಪಿಸಲ್ಪಟ್ಟಿರುವ ಸಂಪದಭ್ಯುದಯ ಸಂಘದವರು ಕೃಷಿಕರ್ಮ ಮತ್ತು ವ್ಯಾಪಾರಗಳನ್ನು ಕುರಿತು ಉಪಯುಕ್ತ ಜ್ಞಾನವನ್ನು ಜನರಿಗೆ ಮಾಡಿಕೊಡುವದಕ್ಕಾಗಿ ಜನವರಿ ತಾ. ೧ರಿಂದ ಒಂದು ಮಾಸ ಪತ್ರಿಕೆಯನ್ನು ಪ್ರಸಿದ್ಧ ಮಾಡುವರೆಂದು ತಿಳಿದು ಬಂದದೆ. ಹಾಗೂ ಈ ಸಂಘದವರು ಮೈಸೂರು ವಿದ್ಯಾಖಾತೆಯ ಡೈರೆಕ್ಟರ ಮ. ರಾ. ಎಮ್. ಶ್ಯಾಮರಾಯರ ಉತ್ತೇಜನದಿಂದ ಬೇಗನೇ ಮೈಸೂರಲ್ಲಿ ಕನ್ನಡ ಗ್ರಂಥಕರ್ತರ ಸಮ್ಮೇಳನವನ್ನು ನೆರೆಯಿಸತಕ್ಕವರಿದ್ದಾರೆಂದು ಗೊತ್ತಾಗುತ್ತದೆ.

ಧಾರವಾಡ ಹೈಸ್ಕೂಲಿನ ರಿಟಯರ್ಡ್ ಹೆಡ್ ಮಾಸ್ತರರಾದ ರಾ। ಬ. ಭಾಸ್ಕರರಾವ ಜರಾರ ಮತ್ತು ಮುಂಬಯಿ ಎಲ್ಫಿನ್‌ಸ್ಟನ್ ಹ್ಯಾಸ್ಕೂಲಿನ ರಿಟಯರ್ಡ್ ಹೆಡ್ ಮಾಸ್ತರ ಖಾ. ಬ. ಕಾಂಟ್ರಾಕ್ಟರ ಈ ಉಭಯತರು ಹಿಂದೀ ಜನಾಂಗದ ಹೆಡ್ ಮಾಸ್ತರರಲ್ಲಿ ಉತ್ತಮ ಮಾದರಿಯವರು ಎಂಬದಾಗಿ ಮುಂಬಾಯಿ ಸರಕಾರದವರು ಅಭಿಪ್ರಾಯಪಟ್ಟು ಗಜೆಟಿನಲ್ಲಿ ಪ್ರಸಿದ್ಧಪಡಿಸಿರುವರು.

ಕೊಚ್ಚಿ ರಾಜರಾದ ರಾಜಾರಾಮವರ್ಮರು ತಾ. ೮ರಲ್ಲು ಸಿಂಹಾಸನವನ್ನು ಪರಿತ್ಯಾಗ ಮಾಡಿದ್ದರೆಂದು ತಿಳಿಸಿತ್ತಷ್ಟೆ. ಇವರ ವಯಸ್ಸು ೬೩ ಇರುತ್ತಿದ್ದು ೧೯ ವರ್ಷ ರಾಜ್ಯವನ್ನಾಳಿದರು. ಇವರು ಪ್ರಜೆಗಳ ಪರಿಪಾಲನವನ್ನು ಚನ್ನಾಗಿ ಮಾಡಿದ ಕಾರಣ ಇವರ ಅಧಿಕಾರ ಪರಿತ್ಯಾಗದಿಂದ ಅಲ್ಲಿಯ ಜನರು ಬಹಳ ಹಳಹಳಿಸುತ್ತಾರೆ. ಇವರು ರಾಜ್ಯಾರೋಹನ ಮಾಡಿದಾಗ್ಗೆ ಇವರ ರಾಜ್ಯದ ವಾರ್ಷಿಕ ಉತ್ಪತ್ತಿಯು ೩೦ ಲಕ್ಷ ರೂಪಾಯಿ ಇದ್ದದ್ದು ಈಗ ೪೫ ಲಕ್ಷವಾಗಿರುತ್ತದೆ. ಇವರ ಮನಸ್ಸಿನಲ್ಲಿ ತಮ್ಮ ರಾಜ್ಯದ ಕಾರಭಾರವನ್ನು ಅಡ್ವೈಜರಿ ಕೌನ್ಸಿಲಿನ ಕಡೆಗೆ ಒಪ್ಪಿಸಿ ಪ್ರಜೆಗಳಿಗೆ ತಮ್ಮ ರಾಜ್ಯವನ್ನು ದಾನಕೊಡಬೇಕೆಂದು ಇತ್ತು. ಆದರೆ ಮದ್ರಾಸ ಸರಕಾರದವರಿಗೂ ಇವರಿಗೂ ಈ ವಿಷಯ ಚರ್ಚೆ ನಡೆದು ಪ್ರಜೆಗಳಿಗೆ ಈಗಲೇ ಸ್ವರಾಜ್ಯವನ್ನು ಕೊಡುವದು ಯೋಗ್ಯವಲ್ಲವೆಂದು ಉಭಯತರ ಅನುಮತಿಯಿಂದ ನಿರ್ಣಯವಾದುದರಿಂದ ಅವರು ಪ್ರಸ್ತಾಪವನ್ನು ಬಿಟ್ಟು ಬಿಟ್ಟರೆಂದು ಗೊತ್ತಾಗುತ್ತದೆ.

[illegible] ನಡೆಯುವ [illegible] ಮದ್ರಾಸಿನಿಂದ [illegible]

ರವನ್ನು ಲೀಟಿಯನ್ನು ತೆಗೆದುಕೊಂಡು ಮದ್ರಾಸಿಗೆ ಹಿಂತಿರಿಗಿ ಬಂದಿರುವರು.

~~~~~

ಮದ್ರಾಸಿನಲ್ಲಿ ಈ ತಿಂಗಳಲ್ಲಿ ನೆರೆಯುವ ಔದ್ಯೋಗಿಕ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಮುಂಬಾಯಿಯ ಪ್ರಸಿದ್ಧ ವ್ಯಾಪಾರಸ್ಥರಾದ ಬಹುಮಾನಪಟ್ಟ ವಿ. ಮನಮೋಹನ ದಾಸರವರು ಸ್ವೀಕರಿಸಿದ್ದಾರೆ. ಈ ಪರಿಷತ್ತನ್ನು ಮದ್ರಾಸಿನ ಗವರ್ನರ ಪ್ರಭುಗಳು ತೆರೆಯುವದಕ್ಕೆ ಒಡಂಬಟ್ಟಿರುತ್ತಾರೆ.

~~~~~

ಮದ್ರಾಸಿನಲ್ಲಿ ಈ ತಿಂಗಳಲ್ಲಿ ನೆರೆಯುವ ಸಾಮಾಜಿಕ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಮೈಸೂರಿನ ಯುವರಾಜರು ಸ್ವೀಕರಿಸತಕ್ಕವರಿದ್ದಾರೆ.

~~~~~

ಮದ್ರಾಸಿನ ಆಫೀಸಿಯೇಟಿಂಗ್ ಪೋಸ್ಟುಮಾಸ್ತರ್ ಜನರಲರವರಾದ ಮ। ರಾ। ಪಿ. ಎ. ಕೃಷ್ಣಮ್ಮಚಾರ್ಯರವರು ಹಿಂದೂಸ್ಥಾನದ ಪೋಸ್ಟು ಮತ್ತು ಟೆಲಿಗ್ರಾಫ್ ಇಲಾಖೆಯ ಆಕ್ಟಿಂಗ್ ಅಸಿಸ್ಟಾಂಟ ಜನರಲರಾಗಿ ನೇಮಿಸಲ್ಪಟ್ಟಿರುವರೆಂದೂ ಬರುವ ವರ್ಷ ಪ್ರಾರಂಭದಲ್ಲಿ ಕಲ್ಕತ್ತೆಗೆ ಹೋಗುವರೆಂದೂ ತಿಳಿದು ಬಂದದೆ.

~~~~~

ಬಸ್ರಕ್ಕೆ ಖಾಸಗಿ ತಂತೀಗಳು ಸ್ವೀಕರಿಸೋಣಾಗುವವೆಂದೂ ದರವು ಹಿಂದಿನಂತೆಯೇ ಇರುವದೆಂದೂ ಮದ್ರಾಸ್ ಸೆಂಟ್ರಲ್ ಟೆಲಗ್ರಾಫ್ ಆಫೀಸಿನ ಸುಪರಿಂಟೆಂಡೆಂಟರು ಪ್ರಕಟಿಸಿರುವರು.

~~~~~

ಹಿಂದೂಸ್ಥಾನದ ಏಕೇಶ್ವರ ವಾದಿಗಳ ಸಭೆಯು ಇದೇ ತಾ. ೨೭ರಲ್ಲಿ ಮದ್ರಾಸಿನಲ್ಲಿ ಕೂಡಿಬರುವದು. ಈ ಸಭೆಗೆ ಕಲ್ಕತ್ತೆಯ ಸಿಟಿ ಕಾಲೇಜಿಯ ಮುಖ್ಯೋಪಾಧ್ಯಾಯರಾಗಿರುವ ಮಿ। ಹರಂಬಚಂದ್ರ ಮಿತ್ರ ಎಮ್. ಎ. ರವರು ಅಧ್ಯಕ್ಷರಾಗಿರುವರು.

~~~~~

ಮೇಜರ್ ಮಿಲ್ಲರ್ ಐ ಎಮ್. ಎಸ್. ರವರು ಮದ್ರಾಸ್ ಮೆಡಿಕಲ್ ಕಾಲೇಜಿಯ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟು ಚಾರ್ಜ ತಕ್ಕೊಂಡಿರುವರು.

~~~~~

ಮದ್ರಾಸಿನ ಸೆನಿಟರಿ ಕಮಿಷನರಾಗಿರುವ ಮೇಜರ್ ಡಬ್ಲ್ಯು. ಎ. ಜಸ್ಟಿಸ್ ಐ. ಎಮ್. ಎಸ್. ರವರು ಅಕ್ಷೇಮ ಸಂಬಂಧ ಸೀಮೆಗೆ ತೆರಳಿದ್ದರಿಂದ ಬಹುಮಾನಪಟ್ಟ ಸರ್ಜನ್ ಜನರಲ್ ಡಬ್ಲ್ಯು. ಬಿ. ಬೆನ್ನರ್‌ಮೇನರವರು ತನ್ನ ಕೆಲಸದೊಟ್ಟಿಗೆ ಸೆನಿಟರಿ ಕಮಿಷನರ ಕೆಲಸವನ್ನು ನೋಡುವರು.

~~~~~

ಪಟ್ಟಣಗಳ ಆರೋಗ್ಯ ಸಂಬಂಧವಾಗಿ ಪ್ರೊಫೆಸರ್ ಗೆಡ್ಡಿಸರವರು ಜನವರಿ ತಿಂಗಳಂತ್ಯದಲ್ಲಿ ಮದ್ರಾಸಿನಲ್ಲಿ ಭಾಷಣ ಕೊಡಲು ಪ್ರಾರಂಭಿಸುವರು. ಎಮ್ಡನ್ ಕ್ರೂಜರ್ ನಾವೆಯು ಮುಣುಗಿಸಿದ ಒಂದು ಹಡಗದಲ್ಲಿದ್ದ ಇವರ ಸಾಹಿತ್ಯಗಳು ಮುಣುಗಿ ಹೋದದ್ದರಿಂದ ಇವರು ತನ್ನ ಕಾರ್ಯವನ್ನು ತೊಡಗಲು ವಿಳಂಬವಾಯಿತು. ಪ್ರೊಫೆಸರ್ ಗೆಡ್ಡಿಸರವರು ಹಿಂದೂಸ್ಥಾನವನ್ನು ಬಿಟ್ಟು ಸೀಮೆಗೆ ತೆರಳುವ ಮೊದಲು ಆದಷ್ಟು ಮುನ್ಸಿಪಾಲಿಟಿಗಳನ್ನು ಸಂದರ್ಶಿಸಬೇಕೆಂದು ನಿರ್ಣಯಿಸಿರುವರು.

~~~~~

ಹಿಂದೂಸ್ಥಾನದ ಮಧುಪಾನ ನಿವಾರಣಾ ಕನ್ಫರೆನ್ಸ್ ಇದೇ ತಿಂಗಳ ತಾ. ೨೮ರಲ್ಲಿ ಮದ್ರಾಸಿನ ವಿಕ್ಟೋರಿಯ ಪಬ್ಲಿಕ್ ಹೋಲಿನಲ್ಲಿ ಕೂಡಿ ಬರುವದು. ಈ ಸಭೆಗೆ ಕಲ್ಕತ್ತೆಯ ರೆವರೆಂಡ್ ಹೆರ್ಬರ್ಟ್ ಅಂಡರ್ಸನರು ಅಧ್ಯಕ್ಷರಾಗಿರುವರು. ಸಂಸ್ಥಾನದ ಮಧುಪಾನ ನಿವಾರಣಾ ಸಂಘಗಳು ತಮ್ಮ ತಮ್ಮ ಪ್ರತಿನಿಧಿಗಳನ್ನು ಈ ಸಭೆಗೆ ಕಳುಹಿಸಬೇಕೆಂದು ವಿಜ್ಞಾಪಿಸಲ್ಪಟ್ಟಿರುವದು.

~~~~~

ಮದ್ರಾಸಿನ ಎಂಡರ್ಸನ್ ಹೋಲಿನಲ್ಲಿ ಇದೇ ತಾ. ೩೦-೩೧ರಲ್ಲು ನಿರಾಶ್ರಿತ ಜನರ ಮಿಶ್ಶನ್ ಸೊಸೈಟಿಯ ಸಭೆಯು ಕೂಡುವದು. ಈ ಸಭೆಯಲ್ಲಿ ಮಿಸೆಸ್ ಸರೋಜಿನಿ ನಾಯುಡು, ಮೈಸೂರಿನ ಶ್ರೀಮತಿ ಎಸ್. ರಂಗಮ್ಮ, ಸರ್. ಜಿ. ಚಂದಾವರ್ಕರ್, ಮತ್ತು ಬಹುಮಾನಪಟ್ಟ ಪಿ. ಕೇಶವ ಪಿಳ್ಳೆ ಮೊದಲಾದವರೇ ಈ ಮಿಶ್ಶನ್ ಕಾರ್ಯವು ಹಿಂದೂಸ್ಥಾನದ ಇತರ ಕಡೆಗಳಲ್ಲಿ ಹೇಗೆ ಸಾಗುವದೆಂಬದರ ಕುರಿತು ಭಾಷಣಗಳನ್ನು ಕೊಡುವರು. ಈ ಸೊಸೈಟಿಯ ಪ್ರೆಸಿಡೆಂಟರಾಗಿರುವ ಬಹುಮಾನಪಟ್ಟ ಸರ್. [illegible] ರನ್‌ನಾಯರರು ಈ ಸಭೆಯಲ್ಲಿ ಹೆಚ್ಚಿನ ಮಹನತ್ತು [illegible]ವರು.

~~~~~

ಮದ್ರಾಸ್ ಯುದ್ಧ ಫಂಡಿಗೆ ಇದೇ [illegible] ವರಿಗೆ ಬಂದ್ದ ರೂಪಾಯಿ ೨೧,೬೨,೪೫೪—೧೫—೪ ಆಗಿರುವದು.

~~~~~

ಕೊಚ್ಚಿಯ ರಾಜರವರು ಸಿಂಹಾಸನವನ್ನು ತ್ಯಾಗ ಮಾಡಿದ್ದರಿಂದ ಇವರ ಬದಲಿಗೆ ಇವರ ಸೋದರಳಿಯ ಎಲ್ಯ ರಾಜರವರು ಬರುವ ತಿಂಗಳಂತ್ಯದಲ್ಲಿ ಯಾ ಫೆಬ್ರವರಿ ತಿಂಗಳಾರಂಭದಲ್ಲಿ ಗದ್ದಿಗೆಯನ್ನು ಏರುವರು. ಈ ಹೊಸ ರಾಜರಿಗೆ ಈಗ ೫೫ ವರ್ಷ ವಯಸ್ಸು. ಇವರ ವಿಷಯವಾಗಿ ಇತರ ಪ್ರದೇಶದ ಜನರು ಹೆಚ್ಚು ಅರಿತಿರುವದಿಲ್ಲವಾದರೂ ಕೊಚ್ಚಿ ರಾಜ್ಯದ ಜನರಿಂದ ಇವರು ಬಹಳವಾಗಿ ಪ್ರೀತಿಸಲ್ಪಡುವವರೂ ಮಾನಿಸಲ್ಪಡುವವರೂ ಆಗಿದ್ದಾರೆ. ಇವರಲ್ಲಿರುವ ದಯಾಭಾವವೂ, ಸದ್ಗುಣಗಳೂ, ಪ್ರಜೆಗಳೊಡನೆ ಕಲೆತು ಅವರಿಗೆ ಸಹಾಯ ಮಾಡಬೇಕೆಂಬ ಇವರ ಮನಸ್ಸೂ ಇವರು ಇಷ್ಟು ಜನಪ್ರಿಯರಾಗಲು ಕಾರಣವಾಗಿರುವದು. ಇವರು ಚೆನ್ನಾಗಿ ಸಂಸ್ಕೃತ ಬಲ್ಲವರಾಗಿರುವರು. ಇಂಗ್ಲಿಷು ಇವರಿಗೆ ಗೊತ್ತದೆ. ಪ್ರತಿ ಒಂದು ಸಂಗತಿಗಳನ್ನು ನೋಡಿ ಅಭ್ಯಾಸಿಸಿಕೊಳ್ಳಬೇಕೆಂಬ ಮನಸ್ಸುಳ್ಳವರಾಗಿರುವದರಿಂದ ರಾಜ್ಯಭಾರದಳಿತೆಯನ್ನು ಮಾಡಲು ಅಸಮರ್ಥರು ಎಂದು ಹೇಳಲು ಕಾರಣವಿರದು. ಹಿರೇ ಅಮ್ಮರಾಣಿಯವರ ಅರಮನೆ ಮತ್ತು ಅವರ ಬಹು ದೊಡ್ಡ ಭೂಮಿಯ ಆಡಳಿತೆಯನ್ನೂ ಇವರೇ ನಡಿಸಿಕೊಂಡು ಬಂದು ಅದನ್ನು ಉಚ್ಛಸ್ಥಾನಕ್ಕೆ ಮುಟ್ಟಿಸಿರುವದರಿಂದ ಇವರ ಸಾಮರ್ಥ್ಯವು ಪ್ರಕಟವಾಗಿರುವದು. ರಾಜ ಕುಟುಂಬದ ಅರಸು ಮಕ್ಕಳ ಮತ್ತು ಹೆಮ್ಮಕ್ಕಳ ವಿಷಯವಾದ ಹೆಚ್ಚಿನ ಹಿತಚಿಂತನೆಯನ್ನು ಇವರೇ ಈ ವರೆಗೆ ಮಾಡಿಕೊಂಡು ಬಂದಿರುವದರಿಂದ ರಾಜ ಕುಟುಂಬದವರೆಲ್ಲರೂ ಇವರು ಹೇಳಿದ ಹಾಗೆ ಇರುವರು. ಇವರ ಸ್ವಂತ ಒಕ್ಕಲುಮಕ್ಕಳನ್ನು ಬಹು ದಯಾಭಾವದಿಂದಲೂ ಪ್ರೀತಿಯಿಂದಲೂ ನಡಿಸಿಕೊಂಡು ಬಂದಿರುವರು. ಇವರು ದೇಶೀಯ ವೈದ್ಯದಲ್ಲಿ ವಿಶೇಷ ಪಾಂಡಿತ್ಯವನ್ನು ಪಡೆದಿರುವರು. ಮುಖ್ಯವಾಗಿ ವಿಷಜಂತುಗಳ ಕಡಿತಕ್ಕೆ ಇವರು ಮಾಡುವ ಉಪಚಾರವು ಬಹು ಪ್ರಖ್ಯಾತಿ ಪಡೆದಿರುವದು. ಕಾನೂನು ಕಾಯಿದೆಗಳನ್ನೂ ಚೆನ್ನಾಗಿ ಬಲ್ಲವರಾಗಿರುವರು. ಇಂಜಿನಿಯರಿಂಗ್, ವನಸ್ಪತಿಶಾಸ್ತ್ರ, ಇತ್ಯಾದಿಗಳನ್ನು ವಿಶೇಷವಾಗಿ ಅಭ್ಯಾಸಿಸಿರುವರು. ಪ್ರತಿ ಒಂದು ಸಂಗತಿಯಲ್ಲಿಯೂ ಹೆಚ್ಚಿನ ಮಾಹಿತಿಯನ್ನು ಪಡೆದವರಾಗಿರುವದರಿಂದ ರಾಜ್ಯಾಡಳಿತೆಗೆ ತಕ್ಕವರೆಂದೇ ಹೇಳಬೇಕಾಗಿದೆ. ಇವರ ಆಡಳಿತೆಯಲ್ಲಿ ಕೊಚ್ಚಿ ರಾಜ್ಯವು ಮತ್ತಷ್ಟು ಅಭಿವೃದ್ಧಿಗೆ ಬರುವದರಲ್ಲಿ ಅನುಮಾನವಿರದು ಎಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~~

ರಣರಂಗಕ್ಕೆ ಹೋಗಿರುವ ಭಾರತೀಯ ಸೇನೆಯ ಸೈನಿಕರ ಹೆಂಡರು ವ ಕುಟುಂಬದವರಿಗೆ ಸಹಾಯವು ಅಗತ್ಯವಿದ್ದರೆ ಇಂಪೀರಿಯಲ್ ಇಂಡಿಯನ್ ರಿಲೀಫ್ ಫಂಡಿನ ಸ್ಥಳಿಕ ಕಮಿಟಿಯವರಿಗೆ ಬರಕೊಳ್ಳಬೇಕಾಗಿ ಪ್ರಕಟವಾಗಿದೆ. ಇಂಥಾ ಕಮಿಟಿಯು ಸ್ಯಾಂಟ್ ತೋಮಾಸ್, ತಿರುಚಿನಾಪಳ್ಳಿ, ಕಣ್ಣಾನ್ನೂರು, ಮತ್ತು ವೆಲಿಂಗ್ಟನಿನಲ್ಲಿ ಇರುವವು. ಯುದ್ಧದಲ್ಲಿ ಮಡಿದ ಸೈನಿಕರಿಂದ ಅನ್ನಾಹಾರಕ್ಕೆ ಕೊರತೆ ಬಿದ್ದ ಕುಟುಂಬದವರಿಗೆ ಪೆಟ್ರಿಯೊಟಿಕ್ ಎಂಡ್ ಇಂಡಿಯನ್ ಹಿರೋಸ್ ಫಂಡು ಎಂಬ ಫಂಡಿನಿಂದ ಸಹಾಯ ಕೊಡೋಣಾಗುವದು. ಈ ಫಂಡು ಮೇಲೆ ಹೇಳಿದ ಕಮಿಟಿಯ ಆಡಳಿತೆಯಲ್ಲಿರುವದು.

~~~~~

ದಕ್ಷಿಣ ಕನ್ನಡ.

~~~~~

ದುರುಸ್ತಿ ಪತ್ರ.

~~~~~

ದಕ್ಷಿಣಕನ್ನಡಾ ಜಿಲ್ಲಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{84}{1914}$.

ಅಣ್ಣಪ್ಪ ಶ್ಯಾನಭಾಗಾ ಕೂಡಾ 5 ಜನರು— [illegible]

ಮತ್ತು

ಶ್ರೀನಿವಾಸ ಶ್ಯಾನಭಾಗಾ ಕೂಡಾ 5 ಜನರು—ಪ್ರತಿವಾದಿಗಳು.

[illegible] ಸಂಬಂಧಪಟ್ಟು 1914ನೇ ಇಸವಿ ದಶಂಬರ 18ನೇ ತಾರೀಕಿನ [illegible] ಪತ್ರಿಕೆಯ [illegible]ದ ನೋಟೀಸಿನಲ್ಲಿ "ಲಕ್ಷ್ಮಿನಾರಾಯಣ ದೇವಸ್ಥಾನ" ಎಂಬದರ ಬದಲಾಗಿ "ಲಕ್ಷ್ಮಿ ವೆಂಕಟ್ರಮಣ" ಎಂತ ಓದಬೇಕು.

ತಾ. 22-12-14. } **B. Krishna Rao,**
Subordinate Judge.

~~~~~

ಉಂಗ್ರಮಂಜೇಶ್ವರ: — ಮೂಡಂಬೈಲು ಗ್ರಾಮದ ಕಾಡೂರು ರಾ। ಸೋಮಂಪ್ ರೈರವರು ಕಳೆದ ತಿಂಗಳ ತಾ೨೦ರಲ್ಲು ಶ್ಯಾಮ ಗಂಟೆ ೬—೩ಂಕ್ಕೆ ಮೈದಾನು ಸ್ಥಳದಲ್ಲಿ ೮ ಅಡಿ ಉದ್ದದ ಒಂದು ಹುಲಿಯನ್ನು ಕೋವಿಯಿಂದ ಕೊಂದಿರುವರು. ಈ ಬಗ್ಗೆ ಕಾಸರಗೋಡು ತಾಲೂಕು ತಹಸೀಲದಾರರವರು ಇದೇ ತಿಂಗಳ ತಾ. ೧೭ರಲ್ಲು ರೂ. ೩೫ ಬಹುಮಾನ ಕೊಡಿಸಿರುವರು.

~~~~~

ಪಂಜೆತ್ತಾಡಿ: — ದಕ್ಷಿಣ ಕನ್ನಡಾ ಜಿಲ್ಲಾ ಗೌಡ ಜಾತಿಯವರ ಆಚಾರ ವಿಚಾರ ಅಧಿಕಾರಸ್ಥರಾಗಿಯೂ ನಮ್ಮ ಸಂಘದ ಅಧ್ಯಕ್ಷರಾಗಿಯೂ ಇರುವ ಮಹಾರಾಜೇಶ್ರಿ ಕೊಜುಗೋಡುಕಟ್ಟೆ ಮನೆ ದೇವಣ್ಣ ಗೌಡರವರ ನೋಟೀಸು ಪ್ರಕಾರ ಕಡಬಕಸಬಾ ಗ್ರಾಮದ ರಾ। ಕೆರೆಮುದೇಲು ವಾರಪ್ಪ ಗೌಡ ಮನೆ ಎದುರಿಗೆ ಈ ಬಗ್ಗೆ ಹಾಕಿಸಿರುವ ಚಪ್ಪರದಲ್ಲಿ ತಾ. ೧೯—೧೨—೧೪ನೇ ಶನಿವಾರ ಮಧ್ಯಾನ್ಹ ೨ ಗಂಟೆ ಸಮಯದಲ್ಲಿ ನಮ್ಮ ಸಂಘದ ಆಡಳಿತೆಯ ಸಭೆಯು ಜರಗಿತು. ಸದರಿ ಸಭೆಗೆ ಬಂಗಾಡಿ, ಬೈಲಂಗಡಿ, ಉಪ್ಪಿನಂಗಡಿ, ನೇರಂಕಿ, ಕಡಬ, ಮರ್ದಾಳ, ಸುಬ್ರಹ್ಮಣ್ಯ, ರೆಕ್ಯ, ಶಿರಾಡಿ, ಪಂಜ, ಬೆಳ್ಳಾರೆ, ಎಡಮಂಗ್ಲ, ಕಾಸ್ಪಾಡಿ, ಸವಣೂರು ಮುಂತಾದ ಮಾಗಣೆ ಮತ್ತು ಗ್ರಾಮಗಳಲ್ಲಿರತಕ್ಕ ಗೌಡ ಜಾತಿಯ ಮುಖ್ಯಸ್ಥರೂ ಮಾನ್ಯರಾದ ಸ್ವಜಾತಿ ಗೃಹಸ್ಥರೂ ಕೂಡಾ ಸುಮಾರು ೧೫೦ ಮಂದಿ ಹಾಜರಿದ್ದರು. ಸಭಿಕರ ಕೋರಿಕೆಯಂತೆ ಇದೇ ಬರುವ ೧೯೧೫ನೇ ಇಸವಿ ಬಾಬ್ತು ಮಹಾ ಸಭೆಯು ತಾ. ೯—೧—೧೫ನೇ ಶನಿವಾರ ದಿನ ಬೆಳಿಗ್ಗೆ ೧೦ ಗಂಟೆ ಸಮಯಕ್ಕೆ ಇದೇ ಚಪ್ಪರದಲ್ಲಿ ಜರಗುವುದಾಗಿ ನಿರ್ಣಯಿಸಿದ್ದಾಯಿತು. ಸದರಿ ಸಭೆಗೆ ಅಮರ ಪಡ್ನೂರು ಗ್ರಾಮದ ಚೊಕ್ಕಾಡಿ ಕರ್ಮಜೆ ನಾಗಣ್ಣ ಗೌಡರನ್ನು ಅಧ್ಯಕ್ಷರಾಗಿ ಚುನಾಯಿಸಿದ ನಂತರ ಶ್ಯಾಮ ಗಂಟೆ ೫ಕ್ಕೆ ಸಭೆಯು ಅಗಲಿತು. ಆದ್ದರಿಂದ ಎಲ್ಲಾ ಮಾಗಣೆ ಮತ್ತು ಗ್ರಾಮಗಳಲ್ಲಿರತಕ್ಕ ಸ್ವಜಾತಿಯ ಮಾನ್ಯ ಗೃಹಸ್ಥರು ಮೇಲೆ ನಮೂದಿಸಿರುವ ದಿವಸ ಜರಗತಕ್ಕ ಮಹಾ ಸಭೆಗೆ ದಯವಿಟ್ಟು ಚಿತ್ತೈಸಿ, ನಮ್ಮ ಸಂಘವು ಮುಂದೆ ಅಭಿವೃದ್ಧಿಗೆ ಬರುವಂತೆ ತಕ್ಕ ಏರ್ಪಾಡುಗಳನ್ನು ಮಾಡಲು ಸಹಾಯವನ್ನೂ ಪ್ರೋತ್ಸಾಹವನ್ನೂ ಮಾಡಬೇಕಾಗಿ ಬೇಡಿಕೊಳ್ಳುತ್ತೇನೆ.

~~~~~

ಉಡುಪಿ: — ವಾಡಿಕೆಯಂತೆ ಉಪಾಧ್ಯಾಯರ ಸಂಘವು ಇದೇ ತಿಂಗಳ ಕಳೆದ ೧೯ನೇ ತಾರೀಕಿನ ಮಧ್ಯಾನ್ಹ ೩ ಘಂಟೆಯ್ಯ ಸಮಯದಲ್ಲಿ ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಕೂಡಿತು. ಈ ಸಭೆಗೆ ಮ। ರಾ। ರಾ। ಶಾಲಾ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರವರೂ, ಸುಪ್ರವೈಜರವರೂ, ವಕೀಲ ಶ್ರೀಯುತ ವಿಠಲಕಾಮತ್ ಬಿ. ಎ. ಬಿ. ಎಲ್. ಇವರೂ, ನ. ಆನಂದರಾಯರೂ, ಕೋಪೊಪರೇಟಿವ್ ಸೊಸೈಟಿಯ ಇನ್ಸ್‌ಪೆಕ್ಟರರಾದ ಮ। ರಾ। ಗಿರಿಯಪ್ಪನವರೂ ಮುಂತಾದ ಮಹನೀಯರು ದಯಮಾಡಿಸಿದ್ದರು. ಪ್ರಥಮತಃ ಸಭಾಧ್ಯಕ್ಷರಾದ ಶಾಲಾ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರವರು ಸಮಕೋಣ, ಸಮಚತುರ್ಭುಜ, ಆಯತ ಇವುಗಳ ಆಧಾರದಿಂದ ಅಂಕಗಣಿತ ಮುಂತಾದ ವಿಷಯಗಳನ್ನು ಬೋಧಿಸುವ ವಿಧಾನವನ್ನು ಮಂದಟ್ಟಾಗುವಂತೆ ಸುರಸವಾಗಿ ವಿವರಿಸಿದರು. ಅನಂತರ ಮ। ರಾ। ಗಿರಿಯಪ್ಪನವರು ಕೋಪೊಪರೇಟಿವ್ ಸೊಸೈಟಿಯ ಉದ್ದೇಶವನ್ನೂ ಪ್ರಯೋಜನಗಳನ್ನೂ ಕುರಿತು ಚಲೋ ರೀತಿಯಲ್ಲಿ ಉಪನ್ಯಾಸವನ್ನು ಮಾಡಿ ಎಲಿಮೆಂಟರಿ ಉಪಾಧ್ಯಾಯರ ಅನುಕೂಲತೆಗಾಗಿ ಅಂಥಾ ಪರಸ್ಪರ ಸಹಾಯಕ ಸಂಘವನ್ನು ಇಲ್ಲಿ ಸ್ಥಾಪಿಸುವದು ಅಗತ್ಯವೆಂತ ಸೂಚಿಸಿದರು. [illegible] ಪುಷ್ಟೀಕರಿಸಿ ಮ। ರಾ। ವಕೀಲ ವಿಠಲಕಾಮತರವರೂ [illegible] ಸುಪ್ರವೈಜರವರೂ ಕೊನೆಯಲ್ಲಿ ಅಧ್ಯಕ್ಷರೂ [illegible] ಮನಸೊಪ್ಪುವಂತೆ ವಿವರಿಸಿದ ಮೇಲೆ ಈ [illegible] ಮತದಿಂದ ಮಂಜೂರಾಗಿ ಆ ಬಗ್ಗೆ [illegible] ತಯಾರಿಸಲ್ಪಟ್ಟು ಆ ಸಂಘಕ್ಕೆ [illegible] ನಂತರ ಸಭೆಯು ಮುಗಿಯಿತು.
~~~~~

ಮಂಗಳೂರು.

ಹಿಂದಿನ ಸಂಚಿಕೆಯಲ್ಲಿ ತಿಳಿಸಿದಂತೆ ಇದೇ ತಾ. ೧೮ನೇ ಶುಕ್ರವಾರ ಡಿಸ್ಟ್ರಿಕ್ಟ್‌ಬೋರ್ಡು ಮೀಟಿಂಗು ಜರಗಿತು ೧೯೧೫-೧೬ನೇ ಇಸ್ವಿಯ ಆದಾಯ ವೆಚ್ಚಗಳ ಪ್ರಸ್ತಾವವೇ ಈ ಮೀಟಿಂಗಿನ ಮುಖ್ಯ ಉದ್ದೇಶವಾಗಿತ್ತು.

ಮುಲ್ಕಿ ಆಸ್ಪತ್ರೆಯ ಬಗ್ಗೆ ಒಂದು ಶಸ್ತ್ರ ಪ್ರಯೋಗದ ಕೋಣೆಯನ್ನು ಕಟ್ಟಿಸುವರೆ ರೂ ೬೭೦ ಅದೇ ಆಸ್ಪತ್ರೆಯ ಬಗ್ಗೆ ಅಂಟು ರೋಗಿಗಳ ಶೆಡ್ಡನ್ನು ಕಟ್ಟಿಸುವರೆ ರೂ ೬೫೦ ಸಂಕ್ಷನ್ ಆಗಿರುವುದು.

ಸ್ವಿಯಾನ್ ಕಟ್ಟೆಯಿಂದ ಗೋಳಿಯಂಗಡಿ ವರೆಗೆ ಒಂದು ಗ್ರಾಮರಸ್ತೆಯನ್ನು ತೆರೆಯುವರೆ ರೂ ೫೦೦೦ ಬ್ರಹ್ಮಾವರದಿಂದ ಜನ್ನಾಡಿ ವರೆಗಿನ ರಸ್ತೆಯನ್ನು ದುರುಸ್ತಿಪಡಿಸುವರೆ ರೂ. ೨೫೦೦ ಮಿಯಾರಿನಿಂದ ಹೊಸಮಾರ್ ವರೆಗಿನ ಗ್ರಾಮ ರಸ್ತೆಯನ್ನು ದುರುಸ್ತಿಪಡಿಸುವರೆ ರೂ ೩೧೦೦ ಸೆಂಕ್ಷನ್ ಆಗಿರುವದು

ಇದೇ ಕಳೆದ ಶನಿವಾರ ದಿನ ಇಲ್ಲಿಯ ಕೊರನೇಶನ್ ಫೂಟ್‌ಬೋಲ್ ಕ್ಲಬ್ಬಿನವರಿಗೂ ಕಣ್ಣಾನ್ನೂರ ಫೂಟ್‌ಬೋಲ್ ಕ್ಲಬ್ಬಿನವರಿಗೂ ಪಂದ್ಯಾಟ ನಡೆದು ಕಣ್ಣಾನ್ನೂರ ಕ್ಲಬ್ಬಿನವರು ಗೆದ್ದರು ಮರುದಿನ ನಡೆದ ಆಟದಲ್ಲಿ ಉಭಯತರೂ ಸರಿ ಸರಿಯಾದರು

ಇದೇ ತಿಂಗಳಾಂತ್ಯದಲ್ಲಿ ಮದ್ರಾಸಿನಲ್ಲಿ ಕೂಡುವ ಏಕೇಶ್ವರ ವಾದಿಗಳ ಸಭೆಗೆ ಇಲ್ಲಿಯ ಬ್ರಹ್ಮಸಮಾಜದ ಪ್ರತಿನಿಧಿಗಳಾಗಿ ಮ ರಾ ಕೆ ರಂಗರಾಯರ, ಮ ರಾ ಜಿ. ಕೃಷ್ಣರಾವ್ ಬಿ ಎ ಎಲ್. ಎಲ್ ಬಿ ಮ ರಾ ಕೂಸಪ್ಪ ಬೋಳಾರ್, ಮ ರಾ ಎಸ್ ಕೆ ವೆಂಕಪ್ಪ, ಮ ರಾ ಎಸ್ ಶ್ರೀನಿವಾಸ, ಮ ರಾ ಎಮ್. ಜನಾರ್ಧನ ಮೊದಲಾದವರು ಹೋಗುವರು.

ಸರ್ಕಲಿನ ಡೆಪ್ಯುಟಿ ಜಿಲ್ಲಾ ಪೋಲಿಸ ಸುಪರಿಂಟೆಂಡೆಂಟರವರು ಸರ್ಕಲಿನಿಂದ ಹಿಂದಿರುಗಿ ಬಂದಿರುವರು

ಬ್ರಹ್ಮಸಮಾಜದ ರೆವರೆಂಡ್ ಹೇಮಚಂದ್ರ ಸರ್ಕಾರ ಎಮ್. ಎ. ರವರು ಕೆಲವು ದಿವಸ ಇಲ್ಲಿದ್ದ ಸಮಾಜದಲ್ಲಿ ಕೆಲವು ಉಪದೇಶಗಳನ್ನು ಮಾಡಿ ಕಳೆದ ಶುಕ್ರವಾರ ಮದ್ರಾಸಿಗೆ ಹೋಗಿರುವರು

ಇದೇ ತಾ ೨೩ರಲ್ಲಿ ಇಲ್ಲಿಗೆ ಬಂದಿದ್ದ ಬಿ ಐ ಕಂಪೆನಿಯ ಒಬ್ಬ ಯುರೋಪಿಯ ಆಫಿಸರರು ಸ್ಟೀಮರಿನಲ್ಲಿ ಏನೋ ಅಪಘಾತ ಸಂಭವಿಸಿ ಮೃತರಾದರು. ಇವರ ಶವಸಂಸ್ಕಾರವು ಅದೇ ದಿನ ಸಾಯಂಕಾಲ ಜರಗಿತ

ಮದ್ರಾಸಿನಲ್ಲಿ ಕೂಡುವ ಏಕೇಶ್ವರ ವಾದಿಗಳ ಸಭೆಯ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿ ಇಲ್ಲಿಯ ಮ ರಾ ಕೆ ರಂಗರಾಯರವರು ಆರಿಸಲ್ಪಟ್ಟಿರುವರೆಂದು ಕೇಳುತ್ತೇವೆ

ಕ್ರಿಸ್ಟ್‌ಮಸ್ ರಜಾ ಕಾಲವನ್ನು ಜಿಲ್ಲಾ ಕಲೆಕ್ಟರ ದೊರೆಗಳವರು ಕುಟುಂಬ ಸಹಿತ ಕದುರೆಮುಖದಲ್ಲಿ ಕಳೆಯುವರು ಜಿಲ್ಲಾ ಜಡ್ಜರವರು ಪುತ್ತೂರ ತಾಲೂಕದೆಡೆಗೂ, ಜಿಲ್ಲಾ ಪೋಲಿಸ್ ಸುಪರಿಂಟೆಂಡೆಂಟರವರು ಕೊಯಮತ್ತೂರ ತಾಲೂಕದೆಡೆಗೂ ಈ ಕ್ರಿಸ್‌ಮಸ್ ರಜೆ ಕಾಲದಲ್ಲಿ ಹೋಗಿರುವರೆಂದು ತಿಳಿಯುತ್ತೇವೆ

ಮುನ್ಸಿಪಾಲ್ ಪೋರ್ಟವಾರ್ಡಿನ ಕೌನ್ಸಿಲರಾಗಿದ್ದ ಮ ರಾ ನೆಲ್ಲಿಕಾಯಿ ವೆಂಕಟ್ರಾಯರ ಅವಧಿಯು ತೀರುವದರಿಂದ ಇದೇ ಬರುವ ಜನವರಿ ತಾ. ೧೮ರಲ್ಲಿ ಈ ವಾರ್ಡಿನ ಚುನಾವಣೆಯು ನಡೆಯುವದು

ತಳಿಪರಂಬಾ ಫಾರ್ಮ ಅಸಿಸ್ಟಾಂಟ ಮೆನೇಜರರಾದ ಮ ರಾ ಕೆ ಟಿ. ಅಳ್ವರು ಸ್ಪೆಶ್ಯಲ್ ಡ್ಯೂಟಿಯ ಮೇಲೆ ಇಲ್ಲಿಗೆ ಬಂದು ಕೊಡಿಯಾಲ್‌ಬೈಲ್ ಮತ್ತು ಮಂಗಳೂರಿಗೆ ಸೇರಿದ ಇತರ ಕೆಲವು ಕಬ್ಬು ಸಾಗುವಳಿಯ ಗ್ರಾಮಗಳಲ್ಲಿ ಮೊರಿಷಿಯಸ್ ಕಬ್ಬು ಮತ್ತು ಬಾರ್‌ಬೆಡೊಸ್ ಕಬ್ಬುಗಳ ಸಾಗುವಳಿಯನ್ನು ನೂತನ ವಿಧವಾಗಿ ರೈತರಿಗೆ ಕಲಿಸಿಕೊಡಲು ಪ್ರಾರಂಭಿಸಿರುವರೆಂಬದಾಗಿ ಕೇಳುತ್ತೇವೆ

ವರ ಮೇಲೆ ಏರ್ಪಡಿಸಿಕೋಣಾದ ಕ್ರಿಮಿನಲ್ ಮೊಕದ್ದಮೆಯು ಅಪೀಲು ಇತ್ತೀಚೆಗೆ ಹೈಕೋರ್ಟಿನಲ್ಲಿ ತನಿಕೆಮಾಡಲ್ಪಟ್ಟು ಅಪಾದಿತರಲ್ಲಿ ಯಾರಾದರೂ ತಪ್ಪಿತಸ್ಥರಲ್ಲ ಎಂತ ತೀರ್ಮಾನಿಸಲ್ಪಟ್ಟಿರುತ್ತದೆ.

ಇಲ್ಲಿಯ ಸಬ್‌ಕೋರ್ಟಿನಲ್ಲಿ ಮೂಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನದ ಆಡಳಿತೆ ಮೊಕ್ತೇಸರರಾದ ರಾ ಗೋಪಾಲ ಕುಡ್ವರು ಮುಲ್ಕಿಯ ರಾ ಬಂಗ್ಲೆ ನಾರಾಯಣ ಕಾಮತರವರ ಮೇಲೆ ದಾಖಲುಮಾಡಿದ ಸುಮಾರು ೧೦,೦೦೦ ರೂಪಾಯಿ ಮೌಲ್ಯದ ಎರಡು ದಾವೆಗಳು ಸಬ್ ಜಡ್ಜರಿಂದ ತಳ್ಳಿ ಹಾಕೋಣಾಗಿವೆ ರಾ ನಾರಾಯಣ ಕಾಮತರವರು ರಾ ಗೋಪಾಲ ಕುಡ್ವರ ಮೇಲೆ ಒಂದೆರಡು ವರ್ಷಗಳ ಹಿಂದೆ ಇಲ್ಲಿಯ ಡಿವಿಜನಲ್ ಮೇಜಿಸ್ಟ್ರೇಟರಲ್ಲಿ ಏರ್ಪಡಿಸಿದ ಕ್ರಿಮಿನಲ್ ಮೊಕದ್ದಮೆಗಳ ಫಲಿತಾಂಶವಾಗಿ ಸಬ್‌ಕೋರ್ಟಿನಲ್ಲಿ ಮೇಲಿನ ಎರಡು ದಾವೆಗಳು ದಾಖಲುಮಾಡೋಣಾಗಿದ್ದವು ಪ್ರತಿವಾದಿಯ ವ್ಯಾಜ್ಯದ ಖರ್ಚನ್ನು ವಾದಿಯು ತೆರಬೇಕೆಂತ ತೀರ್ಮಾನಿಸಲ್ಪಟ್ಟಿರುವದು

ಮ ರಾ ರಾ ಮಾಜಿ ಡಿಸ್ಟ್ರಿಕ್ಟ್ ಜಡ್ಜರಾಗಿದ್ದ ದಿವಾನ್‌ಬಹದ್ದೂರ್ ಅಮ್ಮೆಂಬಳ ವೆಂಕಟ್ರಮಣ ಪೈಗಳವರ ಪತ್ನಿಯರು ನಿನ್ನೆ ಕಾಸರಗೋಡಿನಲ್ಲಿ ಕಾಲವಾದರೆ ಬದನ್ನು ತಿಳಿಸಲು ವಿಷಾದಪಡುತ್ತೇವೆ

ಡಿಸ್ಟ್ರಿಕ್ಟ್ ಕಲೆಕ್ಟರ ಆಫೀಸು ಮಂಗಳೂರು: —

ಮ ರಾ ಟಿ ಬಿ ಶಂಕರನಾರಾಯಣರು ರಜೆಯ ಮೇಲಿರುವದರಿಂದ ಬೆಳ್ತಂಗಡಿ ಡ್ಯುಪಿಟಿ ತಹಸೀಲದಾರರಾದ ಮ ರಾ ಬಿ ಕೃಷ್ಣಾಚಾರಿಯವರು ರೂ ೧೫೦ರ I ಗ್ರೇಡ್ ಡ್ಯುಪಿಟಿ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು.

ಇದೇ ತಾ ೧೬ರಿಂದ ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕ ಮ ರಾ ಜಿ. ಮಾಧವ ಪ್ರಭು ಬಿ ಎ ರವರಿಗೆ ಒಂದು ತಿಂಗಳ ಪ್ರಿವಿಲೇಜ್ ರಜೆಯು ಕೊಡೋಣಾಗಿರುವದರಿಂದ ಕಲೆಕ್ಟರ ಆಫೀಸಿನ ೧ನೇ ಎಕೌಂಟೆಂಟಾಗಿರುವ ಮ ರಾ ಎ. ತಿಮ್ಮಪ್ಪ ಪೂಂಜರವರ ಡಿವಿಜನಲ್ ಆಫೀಸಿನ ಆಕ್ಟಿಂಗ್ ಹೆಡ್ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು

ಮ ರಾ ಕೆ ಪಿ. ಕಿಣಿಯವರು ಬಡ್ತಿ ಹೊಂದಿದರಿಂದ II ಗ್ರೇಡ್ ಲೇಂಡ್ ರಿಕೋರ್ಡ್ಸ್ ಇನ್ಸ್‌ಪೆಕ್ಟರರಾದ ರಾ ಮೂಡ ಕಟ್ಟೆ ಶ್ರೀನಿವಾಸರಾಯರು I ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು ಆದರೆ ಆಕ್ಟಿಂಗ್ I ಗ್ರೇಡ್ ಲೇಂಡ್ ರಿಕೋರ್ಡ್ಸ್ ಇನ್ಸ್‌ಪೆಕ್ಟರ್ ಕೆಲಸದಲ್ಲೇ ಇರಬೇಕಾಗುವದು

ಮ ಆರ್ ಎಲ್ ನಜರೆತರವರು ಟೆಂಪರರಿ ಲೇಂಡ್ ರಿಕೋರ್ಡ್ಸ್ ಇನ್ಸ್‌ಪೆಕ್ಟರ ಕೆಲಸದಲ್ಲೇ ಇರಬೇಕಾಗುವದರಿಂದ II ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರ ಮ ಎಸ್ ಡಿ ಸೋಜರವರು I ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರ

ಮ ಎಸ್. ಡಿ ಸೋಜರವರು ಮುಲ್ಕಿಗೆ ವರ್ಗಾಯಿಸಲ್ಪಟ್ಟಿರುವದರಿಂದ ಕಾಸರಗೋಡ ತಾಲೂಕ ಆಫೀಸಿನ ೨ನೇ ಕ್ಲಾರ್ಕ ಮ ಕೆ ಸ್ಕೊಂದ ಪ್ರಭು II ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು

ಮ ರಾ ಎಮ್ ಶ್ರೀನಿವಾಸರಾಯರ ಬದಲಿಗೆ ಕಾಸರಗೋಡ ಸ್ಟೇಶನರಿ ಸಬ್ ಮೇಜಿಸ್ಟ್ರೇಟ ಆಫೀಸಿನ ಹೆಡ್ ಕ್ಲಾರ್ಕ ರಾ ಬಿ ಕೆ ಕೃಷ್ಣರಾಯರು II ಗ್ರೇಡ್ ಲೇಂಡ್ ರಿಕೋರ್ಡ್ಸ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು

ಮೂಡಬಿದ್ರೆಯ ರೆವಿನ್ಯೂ ಇನ್ಸ್‌ಪೆಕ್ಟರ್ ರಾ ಟಿ. ನರಸಿಂಹರಾಯರು ಇತರ ಡ್ಯೂಟಿಯ ಮೇಲಿರುವದರಿಂದ ಕಾರ್ಕಳ ತಾಲೂಕಿನಲ್ಲಿ ಲೇಂಡ್ ರಿಕೋರ್ಡ್ಸ್ ಇನ್ಸ್‌ಪೆಕ್ಟರ್ ಡ್ಯೂಟಿಯ ಮೇಲಿರುವ ಆಕ್ಟಿಂಗ್ ೨ನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರ ರಾ ಕೆ. ರಾಮನ್ನಾಯಕರು ಮೂಡಬಿದ್ರೆಯ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

ಮೂಡಬಿದ್ರೆಯ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರ ರಾ ಯು. ಮಂಗೇಶರಾಯರು ಕಾರ್ಕಳದ ಲೇಂಡ್ ರಿಕೋರ್ಡ್ಸ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

ಮ ರಾ ರಾ ಕೆ. ರಾಮನ್ ನಾಯರ್‌ರವರು ಹೊಸದುರ್ಗದ ಆಕ್ಟಿಂಗ್ ಡ್ಯುಪಿಟಿತಹಶೀಲ್ದಾರರಾಗಿಯೂ ಸಬ್‌ಮೇಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುವರು.

ಮ ರಾ ರಾ ಎಮ್. ರಾಘವೇಂದ್ರರಾಯರು ಕಾರ್ಕಳದ ಆಕ್ಟಿಂಗ್ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು

ರಾ ಎಮ್. ರಾಮಪ್ಪನವರು ಇತರ ಡ್ಯೂಟಿಯ ಮೇಲಿರುವದರಿಂದ ಕಲೆಕ್ಟರ ಆಫೀಸಿನ ೮ನೇ ಅಕೌಂಟೆಂಟ ರಾ ಎಮ್. ಸುಬ್ರಾಯ ಕಾಮತರು ಸೆಟ್ಲ್ಮೆಂಟ ಸೆಕ್ಷನಿನ ಆಕ್ಟಿಂಗ್ ೯ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವರು.

ಕುಂದಾಪುರ ಡಿವಿಜನ ಕಲೆಕ್ಟರವರ ಸರ್ಕೀಟು:— ತಾ. ೨೨-೧೨-೧೪ ಕುಂದಾಪುರದಿಂದ ಉಡ್ಪಿ; ತಾ. ೨೩ ಉಡ್ಪಿ, ತಾ. ೨೪ ಉಡ್ಪಿಯಿಂದ ಮಂಗಳೂರಿಗೆ; ತಾ. ೨೫ರಿಂದ ೩-೧-೧೫ರ ವರೆಗೆ ಮಂಗಳೂರು, ತಾ. ೪ ಸುರತಕಲ್ಲು; ತಾ. ೫ ಸುರತಕಲ್ಲಿನಿಂದ ಪಡುಬಿದ್ರೆ; ತಾ. ೬ ಪಡುಬಿದ್ರೆಯಿಂದ ಉಡ್ಪಿ, ತಾ ೭ ಉಪ್ಪೂರು, ತಾ. ೮ ಉಡ್ಪಿ; ತಾ. ೯ ಉಡ್ಪಿಯಿಂದ ಬೈಲೂರು ತಾ ೧೦ ಬೈಲೂರಿಂದ ಕಾರ್ಕಳ, ತಾ. ೧೧ ಮಿಯಾರ್, ತಾ ೧೨ ಕಾರ್ಕಳ, ತಾ ೧೩ ಕಾರ್ಕಳದಿಂದ ಮೂಡಬಿದ್ರೆ, ತಾ ೧೪ ಮೂಡಬಿದ್ರೆ, ತಾ. ೧೫ ಮೂಡಬಿದ್ರೆಯಿಂದ ವೇಣೂರು

ಕೀರ್ತಿಶೇಷ ಅಮ್ಮೆಂಬಳ ಸುಬ್ರಾವ್ ಪೈ ಮೆಮೋರಿಯಲ್ ಫಂಡು.

೧೯೧೪ನೇ ಇಸವಿ ಜುಲೈ ತಾ, ೧೭ನೇ ಸ್ವದೇಶಾಭಿಮಾನಿಯಲ್ಲಿ ತೋರುವ ಪ್ರಕಾರ ಒಟ್ಟು ವಸೂಲಿ ರೂಪಾಯಿ ೧೨,೮೫೬ ನಂತರದ ವಸೂಲಿ ವಿವರ.

ಮ ರಾ ರಾ ಕುಂಬಳೆ ನರಸಿಂಹ ಸ್ವಾಕರು ರೂ. ೨೬, ಮ ರಾ ರಾ ಉಳ್ಳಾಲ ಗೋವಿಂದ ಕಿಣಿಯರು ಮತ್ತು ಸಹೋದರರು ರೂ ೫೦, ಮ ರಾ ರಾ ಬಂಟವಾಳ ನಾರಾಯಣ ಪೈಗಳು ರೂ. ೨೫ (ಅಂಶ). ಮ ರಾ ರಾ ಮುಲ್ಕಿ ವೈಕುಂಠ ಶ್ಯಾನಭಾಗರು ರೂ. ೧೫, ಮ ರಾ ರಾ ಮಂಗಳೂರು ಪಾಂಡುರಂಗ ಕಿಣಿಯರು ರೂ ೧೧ (ಘೂತಾ) ಒಟ್ಟು ಜಮ್ಮಾ ರೂ. ೧೨,೯೮೩.

M. Mukunda Rao,
ತಾ *22—12—14* *Secretary*

ಜಿನಸು ಧಾರಣೆ. (ರಖಂ)

ಹೊಸ ಮಸ್ಸೂರಿ ಅಕ್ಕಿ	5— 6—0	5—12—0
ಹೊಸ ಗಾಡಿ ರಾಶಿ ,,		4—12—0
ಹೊಸ ಗುಡ್ಡು ,,		4—14—0
ಅವ್ವಲ್ ಬೆಳ್ತಿಗೆ ,,		5— 8—0
ಗುಡ್ಡು ಬೆಳ್ತಿಗೆ ,,		5— 2—0
ರಂಗೂನು ಬೆಳ್ತಿಗೆ ಗೋಣಿ ೧ರ		9—10—0
ಗೋಧಿ ಗೋಣಿ ೧ರ		14— 0—0
ಹುರುಳಿ ಗೋಣಿ ೧ರ		7— 4—0
ಕಡಲೆ ಗೋಣಿ ೧ರ.		10—12—0
ತೊಗರಿ ಗೋಣಿ ೧ರ		12— 0—0
ತೊಗರಿ ಬೇಳೆ ಗೋಣಿ ೧ರ		14— 0—0
ಉದ್ದು ಗೋಣಿ ೧ರ		10— 8—0
ಊರು ಬೆಲ್ಲ ಖಂಡಿ ೧ರ		50— 0—0
ಉಪ್ಪು ಗೋಣಿ ೧ರ		3— 6—0
ಕೊಬ್ರಿ ಖಂಡಿ ೧ರ	80— 0—0	84—0—0
ಕೊಬ್ರಿ ಹಿಂಡಿ ಖಂಡಿ ೧ರ	21— 0—0	25— 0—0
ಎಳ್ಳಿಂಡಿ ಖಂಡಿ ೧ರ		35— 0—0
ಕೊಬ್ರಿ ಎಣ್ಣೆ ಮಣ ೧ರ		6— 2—0
ಎಳ್ಳೆಣ್ಣೆ ಮಣ ೧ರ		4— 0—0
ಹರಳೆಣ್ಣೆ ಬೆಟ್ಟಿಗೆ ೧ರ		5— 0—0
ಮೋರಿಸ್ ಸಕ್ಕರೆ ಮಣ ೧ರ		4— 1—0
ಕಾಫಿ ಖಂಡಿ ೧ರ.		136— 0—0
ಬೀಳಿಗೋಟು ಖಂಡಿ ೧ರ	110—0—0	111— 0—0
ಹೊಸ [illegible] ಗೋಟು ಖಂಡಿ ೧ರ	70—0—0	78— 0—0
ಗೇರು ಬೀಜ ಮುಡಿ ೧ರ		1— 4—0
[illegible] ಖಂಡಿ ೧ರ.	35—0—0	38— 0—0
[illegible] ಮಣ ೧ರ	16— 8—0	16—10—0
[illegible] ಮಣ ೧ರ		22— 0—0
[illegible] ೧ರ		19— 0—0

ಅಮ್ಮೆಂಬಳ ಸುಬ್ರಾಯ ಪೈಗಳವರ ಮೆಮೋರಿಯಲ್ ಇನಾಮುಗಳು ಈ ವರ್ಷ ಕೆನರಾ ಬಾಲಿಕಾ ಶಾಲೆಯ ಈ ಕೆಳಗಿನ ಬಾಲಿಕೆಯರಿಗೆ ಕೊಡೋಣಾಗುವದು — ಪಿ, ಶಾರದಾಬಾಯಿ, ಎ ಸುಶೀಲಾಬಾಯಿ, ಎಮ್. ಉಮಾಬಾಯಿ, ಪಿ. ಸುಂದರಿಬಾಯಿ, ಎಸ್. ಗಿರ್ಜಾಬಾಯಿ, ಪಿ. ಸುಲೋಚನಬಾಯಿ, ಎಮ್. ನೇತ್ರಾವತಿಬಾಯಿ, ಪಿ. ಚನ್ನಿಬಾಯಿ, ಎ. ಭಾಗಿರಥಿಬಾಯಿ, ಕೆ. ಗಿರ್ಜಾಬಾಯಿ, ಯು. ಸಂಜೀವಿಬಾಯಿ, ಪ್ರಿ. ಉಮಾಬಾಯಿ,

ಉಡ್ಪಿಯಲ್ಲಿ ಈಸ್ಟರ್ನ್ ಡೆವಲಪ್‌ಮೆಂಟ್ ಕಂಪೆನಿಯ ಔಷಧ ಶಾಖಾಸೆಯು ಯುರೋಪಿಯ ನೌಕರರ ಪರವಾಗಿ ಪೋಲಿಸಿನವರಿಂದ ರಾ ಉಡ್ಪಿ ಅಂಕಪ್ಪ ಪಡಿಯಾರ್ ಮೊದಲಾದ

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು. ಕೀಳುತರದ ಎಣ್ಣೆಗಳನ್ನು ಕೊಂಡು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ 1 0 0, ಅ. ವೆ 0 4 0 ಬೇರೆ, 3 ಸೀಸೆಗಳ ಕ್ರಯ ರೂ 2-10-0, ಅ. ವೆ. 0 7-0 ಬೇರೆ

ಸೂಚನೆ — ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಚಳಿಯಿಂದ ತಮಗೆ ಅಕ್ಕಲ್ಲ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭದೊರಕಿಕೊಳ್ಳ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದನ್ನು ಮುಹರುಬಾಸ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ, 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಜೀಕರಣ ಮೌಕ್ತಿಕಗಳು

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ



ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಒರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ, ಕಲಿಯುವದಕ್ಕೆ ಅಥವಾ ಕಾರ್ಯ ಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸಂಸಾರದಲ್ಲಿ ತೋರಿಬರುವ ಕ್ಲಾಮವೂ, ಅಕಾಲಕಾಲದಲ್ಲಿ ನಡೆಸುವ ಗ್ರಾಸಿಯ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಬಲತೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವಿಲಕ್ಷಣವಾದ ಮತ್ತು ಮಿದುಳನ್ನು ಬೆಳೆಯಿಸಿ ವೃದ್ಧಿಗೊಳಿಸುವ ಪದಾರ್ಥಗಳಿರುವದರಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ದಿವಾನಖಾನೆಯವರಿಗೂ, ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಪಾಧ್ಯಾಯರಿಗೂ, ಶಾರೀರಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವವರಿಗೂ ಅವಶ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ಸಮನಾಗಿ ಆವಶ್ಯಕವಾಗಿರುತ್ತವೆ.

ನಾತಶರೀರದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂದೇಹವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗದಿಂದ ನಷ್ಟವಾದ ಸ್ವಾಸ್ಥ್ಯವನ್ನು, ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಪುನಃ ಬೆಳೆಸುತ್ತವೆ. ರೋಗದಿಂದ ಮುರಿದು ಹೋದ ಅಥವಾ ಒಸವಳಿದು ಹಿಂದಿರುಗಲಾರದವುಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೊಳಿಸುತ್ತವೆ. ಈ ಗುಳಿಗೆಗಳ ಆಶ್ಚರ್ಯಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧವಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಲಕ್ಷಣಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಠರ"ದ ಕ್ರಮವನ್ನು ಅನುಸರಿಸುತ್ತದೆ, ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ, ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ, ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ 1-4 0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದಾತರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ."

2 "ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋಂದಿಯಾ—ನಾನು ತಮ್ಮಿಂದ ಪ್ರೊ ಜೇಮ್ಸರ "ವಿಸ್ಮಯ ಶಕ್ತಿವರ್ಧಕ" ಗುಟಿಕೆಗಳ ಮೂರು ಡಬ್ಬಿಗಳನ್ನು ತರಿಸಿಕೊಂಡೆನು. ಅವುಗಳಿಂದ ನಾನು ವಿಶೇಷವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಡಬ್ಬಿಗಳನ್ನು ಕಳುಹಿಸಿಕೊಡಿರಿ"

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೀಲ್, ಪನವೇಲ್—"ತಾವು ಕಳುಹಿಸಿದ ಪ್ರೊ ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರೆಕಿದೆ. ಅವನ್ನು ಇನಾ ಕಳುಹಿಸಿರಿ."

4 ವಿ. ಆರ್. ಭಾಸ್ಕರ, [illegible] ವಕೀಲ, [illegible] —ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನು. — ಅವುಗಳನ್ನು [illegible] ಗಿ ನಾನು ಒಳ್ಳೆ ಲಾಭವನ್ನು ಪಡೆದೆನು, ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 [illegible], ಸಂಸ್ಥಾನ [illegible] — ಪ್ರೊ. ಜೇಮ್ಸರ ಗುಟಿಕೆಗಳಿಂದ [illegible] ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು [illegible]

THE ANGLO INDIAN DRUG & CHEMICAL COMPANY, 18 MARKET BOMBAY 2.

ಪ್ರಧಾನ ಏಜಂಟರು ಡಿ. ಜೂಲಿಯನ್ ವಾಟ್ಫ, ಮಂಗಳೂರು ದ. ಕನ್ನಡಾ

ESTABLISHED JULY 1906.

THE CANARA BANK, LIMITED, MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	217,400—0—0
Paid up Capital	192,400—0—0
Deposits	455,326—7—10
Reserve Fund	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee.

Short-notice Deposits requiring one weeks notice of withdrawal after one month received @ 2½% per annum at the discretion of the managing committee.

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4⅛%.

Loans granted on proper securities and pledges.

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,,	225,000—0—0
ಪ್ರತಿಜ್ಞಾತ ಮೂಲ ಧನವು ,,	217,400—0—0
ಆಗತ ಮೂಲ ಧನವು ,,	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	455,326—7—10
ರಕ್ಷಿತ ಧನವು	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅛ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. December 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದುದಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ಪ್ರಿಯವ್ರತೇಶ್ವರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ, ನಿಮಿರಾಯನ ಶರೀರತ್ಯಾಗ, ಜನಕವಂಶ, ಶಶಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿ, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸಾದವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದ ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕೆ ನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವ [illegible] ಪ್ರತಿಯೊಬ್ಬರಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. [illegible]

[illegible]—0—[illegible] [illegible] 0—4—0.

[illegible]— ಎಂ. [illegible]

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣ ವನಮ್, ವಸ್ಸಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ ಚಿದಂಬರ, ಕೊನ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಪ ವ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತುಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು

ನಮ್ಮ ವಿಳಾಸ — ನರಸಿಂಹ ಲಕ್ಷ್ಮಣಪಾಲ

ರಥಬೀದಿ ಮಂಗಳೂರು ದ ಕ

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್ ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್ ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ್ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ ಕ್ರಯ 0—8—0

ವಿಳಾಸ:—

ಕೆನರಾ ಹೈಸ್ಕೂಲು ಕನ್ನಡ ಪಂಡಿತ

ಎಮ್. ತಿಮ್ಮಪ್ಪಯ್ಯ,

ಮಂಗಳೂರ

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟಾಂಡರ್ಡ ಗಣಿತ	0—3—0
IIIನೇ ,, ,, ...	0—4—0
IVನೇ ,, ,, ...	0—6—0
3ನೇ ಪುಸ್ತಕದ ಶಬ್ದಾರ್ಥ (ಪ್ರಾಣಿಕೋಟಿ, ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಬಾಗ	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ)	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ 1ನೇ ಭಾಗ	0—1—6
,, 2ನೇ ಭಾಗ.	0—1—6

ಒಂದನೆಯ ಪುಸ್ತಕ
ಎರಡನೆಯ ,,
ಮೂರನೆಯ ,,
ನಾಲ್ಕನೆಯ ,,
(ತಯ್ಯಾರಿಯಲ್ಲಿವೆ.)

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ಪಿ. ಲಕ್ಷ್ಮಣರಾವ್,

ಸ್ಕೂಲ್ ಮಾಸ್ತರ್, ಉಡುಪಿ

ಯುನಿವರ್ಸಲ್ ಎಸ್ಯೂರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಸೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಸೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

		ಮೊದಲನೇ ವರ್ಷ.	4ನೇ ವರ್ಷ.
ಹೊಸಕೇಸ್ (ಜೀವ) ..	ರೂ.	13,329—0—0	22,549—0—0
,, (ವಿವಾಹ) ...	,,	25,670—0—0	38,933—0—0
ಜುಮ್ಲಾ ಕೇಸುಗಳು ...	,,	38,999—0—0	61,482—0—0
ವಸೂಲಾದ ಪ್ರೀಮಿಯಮ್ ...	,,	1,36,685—0—0	5,34,683—0—0
ಬಾಧ್ಯತೆ ಪತ್ರಗಳು ..	,,	32,074—0—0	2,49,460—0—0
(ಸ್ಪೆಶಲ್) ರಕ್ಷಿತ ಧನ	,,	10,000—0—0	50,000—0—0
(ಜನರಲ್) ರಕ್ಷಿತ ಧನ	,,	37,220—0—0	23,778—3—2

ಬಂಧವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ. ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಸ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 10,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾಧ್ಯತೆಗಳನ್ನು ಕೊಟ್ಟಿದೆ 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯದಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು — ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ

"ಬಂಗಾಲಿ" — 14ನೇ ಜನವರಿ 1914 — ಕಂಪೆನಿಯ 3ನೇ ವಾರ್ಷಿಕ ವರದಿಯು ನಮ್ಮ ಕಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರಾವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೆಸಸುಗಳನ್ನು ಮಾತ್ರವೇ ಮಾಡಿತ್ತು. ಸಮಾರು 2 ಲಕ್ಷ ಭಾಧ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟುಗಳು ಬೇಕಾಗಿವೆ ಎಲ್ಲಾ ವಿಧದ ಏಜಂನ್ಸಿ ಶರ್ತಗಳಿಗೆ—

ವಿಳಾಸ.— ಲಕ್ಷ್ಮಣ ರಾವ್ ಬ್ರದರ್ಸ್,

ಚೀಫ್ ಏಜಂಟ್ಸ್, ಕೆನರಾ, ಮೈಸೂರು, ಕೊಡಗು ಪ್ರೋಸ್ಸು, ಉಡುಪಿ ಇವರಿಗೆ ಬರೆದುಕೊಳ್ಳಿರಿ.

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ, ಶೀಲ್ಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ವಾತ), ಮೈ ನಡುಕ, ಶೀತ



ವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸಂಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿ ಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹೆರಿಗೆ ಶೂಲೆ, ಮಕ್ಕಳ ಎಳತ್ತು, ಜ್ವರ, ಸನ್ನಿಜ್ವರ, ಕೈಶಕ್ತಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. — 220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಪುಕ್ಕಟೆ, 10ಕ್ಕೆ 12 [illegible] 4 ಆಣೆ.

ವೈಶ್ವಾನರಾಸವ (ಕಾಲರಾ ಔಷಧ)

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ [illegible] ಆಗಿದೆ, ಕೈಬಿಟ್ಟಿತೆಂದು ತೋರಿದಾಗ್ಯೂ ಆಶ್ಚರ್ಯವಾಗುವಂತೆ ರೋಗದ ಮೂಲ [illegible] ತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ [illegible] ಮೊದಲೇ [illegible] ಗುಣ [illegible] ಸಮಯದಲ್ಲಿ [illegible] ಇದು [illegible] ಸಹಾಯವನ್ನು [illegible] ಹಾಕುವ [illegible]

[illegible] 1 [illegible]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ!

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ

NOTICE.

Stany Brothers,

Candle Garden, Mangalore,

ಬಲ್ಮಠ ಕದ್ರಿ ರಸ್ತೆ ಒಳಿ ನಮ್ಮ "ಕೆಂಡಲ್ ಗಾರ್ಡನ್" ಎಂಬ ಸ್ಥಳದಲ್ಲಿ 1908ನೇ ಇಸವಿ ಲಾಗ್ಯಾತಿನಿಂದ ಈ ವರೆಗೆ ನಡೆದು ಬಂದಿರುವ ಯಂತ್ರದಿಂದ ಹುರಿದು ತಯಾರಿಸುವ ನಮ್ಮ ಕಾಫಿ ಪುಡಿ ವ್ಯಾಪಾರವು ನಮ್ಮ ವಾಚಕರಿಗೆ ಗೋಚರವಾಗದ ಕಾರಣ ಈಗ ನಾವು ಪ್ರಕಟಿಸಿರುತ್ತೇವೆ

ನಮ್ಮಲ್ಲಿ ನಾನಾ ಬಗೆಯ ಶಾಲಾ ಹುಡುಗರಿಗೆ ಅವಶ್ಯವುಳ್ಳ ಕೋಪಿ ಬುಕ್ ಇತ್ಯಾದಿ ಶಾಲಾ ಪುಸ್ತಕಗಳೂ, ಸೊಗಸಾದ ಅನೇಕ ವಿಧದ ತಿರುಚಿನಾಪಳ್ಳಿ ಚುರುಟುಗಳೂ, ನೀಲಗಿರಿ ಚಾ, ಇತರ ಸಾಮಾನುಗಳೂ ಕೂಡ ವ್ಯಾಪಾರಸ್ಥರಿಗೆ ಸುಲಭವಾದ ಖರೀದಿಯಲ್ಲಿ ದೊರಿಯುತ್ತದೆ

ಕಾಪಿ ಪುಡಿಯು ರಾತ್ಲ ಒಂದಕ್ಕೆ 0—10—0ಯಿಂದ 0—5—0 ವರೆಗೂ ದೊರಿಯುತ್ತದೆ

ಇತರ ಅನುಭವಗಳಿಗೆ ನಮ್ಮ ಮನೇಜರರ ಮೋಲಿನ ವಿಳಾಸಕ್ಕೆ ಬರೆಯಬಹುದು.

Piedade Pinto.

Manager.

Rs. 5/
5½%. re
Short-
hdrawal
iscretion
urrent
avings
As ar
oans g
ealed E
mara
galor

"ಸಕ್ಕರೆಯ ಸಾರವು."

ಬಹಳ ಅನುಕೂಲವೂ ಉಪಯೋಗಕರವೂ ಆಗಿರುವುದು.

ಸಕ್ಕರೆಯನ್ನು ಉಪಯೋಗಿಸಕೂಡದಂಥಾ ಮೂತ್ರ ರೋಗಿಗಳಿಗೆ ಅತ್ಯವಶ್ಯಕವಾದದ್ದು.

ಮೇಲಣ ರೋಗಬಾಧೆಯು ಇಲ್ಲದವರು ಸಹ ಇದನ್ನು ಉಪಯೋಗಿಸಿಕೊಳ್ಳಬಹುದು ಸಾಧಾರಣ ಎರಡು ಕುಡುತೆ ಕಾಫಿ ವ ಚಾ ಇತ್ಯಾದಿಗಳಿಗೆ ಬಂದು ಕಾಳಿನ ಪ್ರಮಾಣದಲ್ಲಿ ಈ ಸಕ್ಕರೆಯ ಸಾರವನ್ನು ಹಾಕಿದರೆ ಸರಿಯಾಗಿ ಸವಿಯನ್ನುಂಟುಮಾಡುತ್ತದೆ ಸಕ್ಕರೆಯ ಸಾರ ತುಂಬಿಸಿದ ಸುಂದರವಾದ ಗಾಜಿನ ಕರಡಿಗೆ ಒಂದಕ್ಕೆ ಕ್ರಯ 0—6—0

ಲೆಕ್ಟೊಮಿಟರ್ ಎಂಬ ಹಾಲನ್ನು ಪರೀಕ್ಷಿಸುವ ಉಪಕರಣವು

ಪ್ರತ್ಯಕ್ಷದ ಉಪಯೋಗದ ಒಗ್ಗೆ ಶುದ್ಧವಾದ ಹಾಲು ದೊರಕುವದೇ ಕಷ್ಟಸಾಧ್ಯ ಹಾಲಿನಲ್ಲಿ ನೀರು ಕೂಡಿಸಿ ಮಾರುವ ಅಭ್ಯಾಸವು ಬಹಳವಾಗಿ ರೂಢಿಗೆ ಬಂದಿರುವುದು ನೀರಿಗೆ ಬೆರೆಕೊಟ್ಟು ಹಾಲೆಂದು ಕುಡಿಯುವೆವು. ಲೆಕ್ಟೊಮಿಟರ್ ಎಂಬ ಉಪಕರಣದಿಂದ ಹಾಲಿಗೆ ನೀರನ್ನು ಕೂಡಿಸಿರುವುದೋ ಎಂಬದನ್ನು ಹಾಲನ್ನು ತೆಗೆದುಕೊಳ್ಳುವಾಗಲೇ ಸುಲಭದಲ್ಲಿ ಯಾರಿಂದಲೂ ಪರೀಕ್ಷಿಸಲಾಗುತದೆ. ಈ ಉಪಕರಣವನ್ನು ಉಪಯೋಗಿಸುವ ಕ್ರಮವು ಇದರೊಂದಿಗೆ ಸೂಚಿಸೋಣಾಗಿರುತ್ತದೆ.

ಲಕ್ಟೊಮಿಟರ್ ಒಂದಕ್ಕೆ ಕ್ರಯ ರೂ 1—8—0

ಹಲವು ವರುಷಗಳಿಂದ ಬಹಳ ಗುಣಕಾರಿಯೆಂದು ಅನುಭವ ಸಿದ್ಧವಾದ

ಗಜಕರ್ಣದ ಮುಲಾಮು.

ಒಂದೆರಡು ಸಲ ಇದನ್ನು ಹಾಗಿಸುವಷ್ಟರಲ್ಲಿ ಈ ಮುಲಾಮಿನ ಯೋಗ್ಯತೆಯು ವ್ಯಕ್ತವಾಗುವುದು ಈ ಮುಲಾಮನ್ನು ಹಚ್ಚಿ ಅದನ್ನು ತೊಳೆದು ತೆಗಿಯುವಾಗ ತಣ್ಣೀರನ್ನೇ ಉಪಯೋಗಿಸತಕ್ಕದ್ದು ಡಬ್ಬಿಯೊಂದಕ್ಕೆ ಕ್ರಯ ರೂ 0 6-0 ಮಾತ್ರ

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್,

ಔಷಧಿ ವ್ಯಾಪಾರಸ್ಥರು, ರಥಬೀದಿ, ಮಂಗಳೂರು

ಪುಗಸಟ್ಟೆ!   ಪುಗಸಟ್ಟೆ!!

—144 ಪುಟಗಳ ವೈದ್ಯಪುಸ್ತಕವು

ಜೀವಿತಕಾಲದ ವರಿಗೂ ನಮ್ಮ ಶರೀರವನ್ನು ರೋಗಗಳು ಹತ್ತಿರ ಬಾರದೆ ಮಾಡಿಕೊಳ್ಳುವದೇ ನಮ್ಮ ಮೊಟ್ಟಮೊದಲು ಕರ್ತವ್ಯವು ಆರೋಗ್ಯವು ಯಾವ ರೀತಿ ಕೆಡುತ್ತದೆ, ಕೆಟ್ಟುಹೋದ ಆರೋಗ್ಯವನ್ನು ಪುನಃ ಹೇಗೆ ಪಡೆಯುವದು ಎಂಬ ವಿಷಯಗಳಲ್ಲಿ ಸಂಪೂರ್ಣ ಜ್ಞಾನವನ್ನು ಪಡೆಯಬೇಕಾದರೆ ನಮ್ಮ

ವೈದ್ಯವಿದ್ಯ

ಎಂಬ ಗ್ರಂಥವನ್ನು ಓದಿರಿ ಈ ಗ್ರಂಥವನ್ನು ಪ್ರಜೆಗಳ ಕ್ಷೇಮಾರ್ಥವಾಗಿ ಕೊಡಿದವರಿಗೆ ಕ್ರಯವೂ ಅಂಚೆ ಹಾಸಲೂ ಇಲ್ಲದೆ ಉಚಿತವಾಗಿ ಕಳುಹಿಸಲ್ಪಡವದು ಈ ಪುಸ್ತಕವು ಒಂಭತ್ತು ಭಾಷೆಗಳಲ್ಲಿ ಛಾಪಿಸಲ್ಪಟ್ಟು ಇದುವರಿಗೆ ನಾಲ್ಕು ಲಕ್ಷ ಪ್ರತಿಗಳ ಕಳುಹಿಸಲ್ಪಟ್ಟಿರುವದೇ ಇದು ಎಷ್ಟು ಉಪಯೋಗಕರವಾದದ್ದು ಎಂಬವದಕ್ಕೆ ಸಾಕ್ಷಿಯಾಗಿರುತ್ತದೆ.

ಕಲಿಯುಗದ ಕಾಮಧೇನು

ಕೃತಯುಗದಲ್ಲಿ ಕಾಮಧೇನು ಹೇಗೆ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತಿತ್ತೋ ಹಾಗೆಯೇ ನಮ್ಮ

ಮದನಮಂಜರಿ ಮಾತ್ರೆಗಳು

ಕಲಿಯುಗದಲ್ಲಿ ಮನುಷ್ಯರ ಇಷ್ಟಾರ್ಥಗಳನ್ನು ಕೊಡುತ್ತವೆ ಮದನಮಂಜರಿ ಮಾತ್ರೆಗಳು ರಕ್ತವನ್ನೂ ವೀರ್ಯವನ್ನೂ ಶುದ್ಧಿಮಾಡಿ ಹೆಚ್ಚುಮಾಡುತ್ತದೆ. ಜ್ಞಾನತಂತುಗಳನ್ನು ಉಜ್ಜೀವನ ಮಾಡಿ ಮೂತ್ರಸ್ರಾವ, ಸ್ವಪ್ನಸ್ಖಲಿತ ಮುಂತಾದವುಗಳನ್ನು ಪರಿಹರಿಸುತ್ತವೆ ಜೀರ್ಣಶಕ್ತಿಯನ್ನು ವೃದ್ಧಿಮಾಡಿ ಸುಖವಾಗಿ ಮಲವಿಸರ್ಜನೆಯಾಗುವಂತೆ ಮಾಡುವದು. ಅಕಾಲದಲ್ಲಿ ಬರುವ ಮುಪ್ಪನ್ನು ತಡೆದು ನಷ್ಟವಾದ ಜ್ಞಾಪಕಶಕ್ತಿಯನ್ನು ಪುನಃ ಕೊಡುತ್ತದೆ. ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಮಾಡಿದ ದುಶ್ಚೇಷ್ಟೆಗಳಿಂದುಂಟಾದ ನಪುಂಸಕತ್ವವನ್ನು ನಿರ್ಮೂಲಮಾಡಿ ಶಾಶ್ವತವಾದ ಪುರುಷತ್ವವನ್ನು ಕೊಡುತ್ತದೆ.

40 ಮಾತ್ರೆಗಳಿರುವ ಡಬ್ಬಿ 1ರ ಕ್ರಯ ರೂಪಾಯಿ 1—0—0.

ರಾಜವೈದ್ಯ ನಾರಾಯಣಜಿ ಕೇಶವಜಿ
20 ಚೀನಾ ಬಜಾರ್ ರೋಡ್,
ಮದರಾಸು.

ಯುಕಲಿಪ್ಟಸ್ ತೈಲ.

ಅಪ್ಪುಗೆ ಬೆಗುತ್ತ ಮ ರಾ ಸಿಂ ನಪ್ಪ ಹೆಗ್ಗಡೆಯವರು ಈ ರೀತಿ ಬರೆಯುವರು — ತಮ್ಮಲ್ಲಿಯ ಅತ್ಯುತ್ತಮವಾದ 'ಯುಕಲಿಪ್ಟಸ್ ತೈಲ'ವೆಂಬ ಸರ್ವರೋಗನಿವಾರಣಾ ಔಷಧವನ್ನು ತರಿಸಿಕೊಂಡು ಹೆಂಗಸರು ಮಕ್ಕಳಾಗುವ ಕಾಲದಲ್ಲಿ ಆಗುವ ಕಠಿಣ ವಿಧದ ಹೊಟ್ಟೆನೋವಿಗೆ ಉಪಯೋಗಿಸಿದ್ದಲ್ಲಿ ಆದ ಅನೇಕ ಹೆಂಗಸರ ಹೊಟ್ಟೆನೋವನ್ನು ನಿಮಿಷಮಾತ್ರದಲ್ಲಿ ಗುಣಪಡಿಸಿರುತ್ತದೆ. ನನ್ನ ತಂಗಿಗೆ ಕೆಲವು ವರುಷಗಳಿಂದ ಇದ್ದ ಕಿವಿನೋವು ಇದರಿಂದ 7 ದಿವಸಗಳಲ್ಲಿ ಪೂರ್ಣ ಗುಣವಾಗಿರುತ್ತದೆ ತೀರಾ ಬಡವರು ಕೂಡಾ ಕೊಡಕೊಡುವ ಈ ಅಲ್ಪ ಬೆಲೆಯ ತೈಲವು ಸಾವಿರಾರು ರೂಪಾಯಿಯ ಬೆಲೆಬಾಳತಕ್ಕಂಥಾದ್ದಾಗಿದೆ. ಜ್ವರಗಡ್ಡೆ, ಮಲೆಜ್ವರ, ಶೀತ, ವಾತ, ಸಣ್ಣ ಮಕ್ಕಳ ಜ್ವರ, ಕೆಮ್ಮು ದೊಡ್ಡವರ ಬಿಳುಪು, ಮೇಹ ಮೊದಲಾದ ರೋಗಗಳಿಗೆ ಸಂಜೀವಿನಿಯೋಪಾದಿ ಇರುತ್ತದೆ ಇದನ್ನು ಉಪಯೋಗಿಸಿದ ಮಕ್ಕಳಿಗೆ ಬಾಲಾರಿಷ್ಟ ರೋಗವು ನಿಜವಾಗಿ ತೊಲಗಿ ಹೋಗುತ್ತದೆಂಬ ಸಂಗತಿ ನನ್ನ ಅನುಭವ ಸಿದ್ಧವಾಗಿರುತ್ತದೆ ಇತ್ಯಾದಿ, ಸರ್ವ ರೋಗಗಳಿಗೆ ದಿವ್ಯೌಷಧವಾದ ಈ ತೈಲದ ಕ್ರಯ ಔನ್ಸ್ ಸೀಸೆಗೆ 5 ಆಣೆ ವಿ ಪಿ ಬೇರೆ ಡಜನ್ ಸೀಸೆಗೆ ವಿ ಪಿ ಸಹಿತ ರೂ. 3 12ಆಣೆ, ಅನುಪಾನಪತ್ರಿಕೆ ಸೀಸೆಯೊಡನೆ.

ಇಕ್ಲಿಪ್ಸ್ ಬಾಮ್

ವಾತ, ಸಂಧುವಾತ, ಪಕ್ಷವಾತ, ಶಿರೋಭಾರ, ಎದೆನೋವು, ಹಲ್ಲುನೋವು, ಘಾಯ ಕಜ್ಜಿ, ನಾಯಿಕಡಿತ. ತುಳಮೇಯುವದು, ಆನೆಕಾಲು ಮೊದಲಾದ ರೋಗಗಳಿಗೆ ಬಾಹ್ಯಲೇಪವಾಗಿ ಉಪಯೋಗಿಸಬಹುದಾದ ಈ ಬಾಮ್ ಸ್ವಲ್ಪ ಕಾಲದಲ್ಲಿಯೇ ಖ್ಯಾತಿಯನ್ನು ಪಡೆದಿದೆ ಕ್ರಯ ಕರಡಿಗೆ 1ಕ್ಕೆ 8 ಆಣೆ ವಿ. ಪಿ. ಬೇರೆ. ಡಜನ್ ಕರಡಿಗೆಗೆ ರೂ. 4—12—0.

ವಿಳಾಸ; —
ದಿ ಇಕ್ಲಿಪ್ಸ್ ಏಜನ್ಸಿ,
ಕಂಕನಾಡಿ, ದ. ಕ.

ಏಜೆಂಟ್ಲರು: —
ಸುಗಂಧವಿಲಾಸ,
ರಥಬೀದಿ, ಮಂಗಳೂರು

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಚಿಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿಸ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿರುತ್ತೆ. ಬೆಲೆ 1—8—0 ವಿ. ಪಿ. 1—12—0

ಲಾಯರ್ ಯಂ. ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

1 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಚ್ಛಾಗುತ್ತಲಿದೆ! ಪುರಾತನ ಸಂಗ್ರಹ!! ನವೀನ ಗ್ರಂಥ!!!

ಭೂತಾಳಪಾಂಡ್ಯರಾಯನ

ಸಂಪೂರ್ಣ ಕಟ್ಟುಗಳು ಇರುವ

ದಕ್ಷಿಣಕನ್ನಡಜಿಲ್ಲೆಯ ಚರಿತ್ರೆ.

ಈ ಪುಸ್ತಕದಲ್ಲಿ ಪರಶುರಾಮಾವತಾರದ ಕಥೆಯೂ, ಭರತಖಂಡದ ಕ್ಷತ್ರಿಯರಾಜರ ವಂಶಾವಳಿಯೂ ಧರ್ಮರಾಯನ ನಂತರ ಆಳಿದ ಅರಸರ ಹೆಸರುಗಳೂ, ವರ್ಷಗಳೂ, ಪರಶುರಾಮ ಸೃಷ್ಟಿಯ ಭೂಮಿ ವಿವರಗಳೂ ಅದಕ್ಕೆ ಸೇರಿದ ೭೭ ದ್ವೀಪಗಳೂ, ಕನ್ನಡಾ ಜಿಲ್ಲೆಯ ಪೂರ್ವ ರಾಜರ ಸಂತತಿಯೂ, ಆಳಿದ ವರ್ಷಗಳೂ ಕನಕವರ್ಮ ವೀರವರ್ಮ ಚರಿತ್ರೆಯೂ, ವೀರವರ್ಮನು ವಯ್ಯಾರವರ್ಮನಾಗಿ ಬಂಟರ ಯಾ ನಾಡವರ ಮತಸ್ಥಾಪನೆ ಕಥೆಗಳೂ ಜೈನರಿಗೂ ಬ್ರಾಹ್ಮಣರಿಗೂ ದ್ವೇಷವಾದ ಕಾರಣಗಳೂ, ಭೂತಾಳ ಪಾಂಡ್ಯನ ಪೂರ್ವಜರ ಚರಿತ್ರೆಯೂ, ದೇವಪಾಂಡ್ಯನ ಹಡಗಿನ ವಿವರಗಳೂ, ಭೂತಾಳಪಾಂಡ್ಯನ ಕಥೆಯೂ, ಭೂತರಾಜನಾದ ಕುಂಡೋದರನ ಪ್ರತಾಪಗಳೂ ಭೂತಾಳಪಾಂಡ್ಯನ ಪಟ್ಟಾಭಿಷೇಕವೂ, ದೇವಪಾಂಡ್ಯನ ಹಡಗಿನ ವ್ಯಾಪಾರದ ಕಥೆಯೂ, ಅಳಿಯ ಕಟ್ಟು ಆದ ಕಾರಣವೂ, ಅದರ ೧೪ ಕಟ್ಟು ೧೬ ಕಟ್ಟಳೆಗಳ ಪೂರ್ಣಾಭಿಪ್ರಾಯವೂ, ಭೂತಾಳಪಾಂಡ್ಯನ ವಿವಾಹವೂ, ಆತನು ಮಕ್ಕಳಿಗೆ ಅನ್ಯತವಾಗಿ ಕೊಟ್ಟ ಸ್ಥಳಮಾನಗಳೂ, ಅವನ ಅಳಿಯ ವಿದ್ಯಾವನ್ನ ಪಾಂಡ್ಯನ ಆಳಿಕೆಯೂ, ಆತನು ತನ್ನ ಮಕ್ಕಳಿಗೆ ವಿಂಗಡಿಸಿ ಕೊಟ್ಟ ಸ್ಥಳಮಾನಗಳೂ ಬಂಗಾಡಿ ಅರಸರ ಮಾನಮರ್ಯಾದೆಗಳ ವಿಷಯ ಬರಸಿದ ಶಾಸನವೂ, ಅಳಿಯಕಟ್ಟಿಗೆ ಸೇರಿದ ೪೩ ಜಾತಿಗಳೂ, ಮತ್ತು ಅವರ ಗೋತ್ರಗಳು ತೆಗೆದು ಮಾಡಿದ ೬೦, ಬಳಿಗಳೂ, ೩ನೇ ಭೂತಪಾಂಡ್ಯನ ಚರಿತ್ರೆಯೂ, ಚೌಟ ಬಂಗರೇ ಮೊದಲಾದ ಸಂಸ್ಥಾನಾಧಿಪರ ಸೀಮೆ, ಮಾಗಣೆ, ಮಾನ ಮರ್ಯಾದೆಗಳೂ, ಜೈನ, ಬಂಟರ ೬೦ ಜನನ, (ಕೀರ್ತಿನಾಮಗಳೂ) ಕೇರಳದ ೪೩ ಜಾತಿಗಳೂ, ಸ್ಥಳನಾಮಾವಳಿಗಳೂ, ಏಳು ಮಂದಿ ರಾಜಂದ್ರವಗಳ ಚರಿತ್ರೆಯೂ, ಇಕ್ಕೇರಿ, ಆನೆಗುಂದಿ ವಿಜಯನಗರದ ರಾಜರುಗಳ ಚರಿತ್ರೆಯೂ, ಆ ಕಾಲದ ಕಂದಾಯ ಕ್ರಮಗಳೂ, ಶಿಲಾ ಶಾಸನ, ತಾಮ್ರ ಶಾಸನಗಳ ಯಥಾ ನಕಲುಗಳೂ, ಅದರ ಅಭಿಪ್ರಾಯಗಳೂ, ಕನ್ನಡ ಜಿಲ್ಲೆಯ ಕೆಲವು ದೇವಸ್ಥಾನಗಳೂ, ಅವುಗಳ ಉತ್ಪನ್ನವಾದ ವಿವರಗಳೂ, ಮೊಗಲ್ ರಾಜರ ವಂಶಾವಳಿಯೂ, ಭರತಖಂಡಕ್ಕೆ ಅನ್ಯ ರಾಜರ ಪ್ರವೇಶ ಕಾಲಗಳೂ, ಶ್ರೀಮನ್ ೫ನೇ ಜಾರ್ಜಸಾರ್ವಭೌಮರ ಚರಿತ್ರೆಯೂ ವಗೈರೆ ಅನೇಕ ವಿಧವಾದ ಪೂರ್ವ ಪುರಾಣಗಳ ಅನುಭವಗಳಿಂದ ಭರಿತವಾದ ಪುರಾತನ ಸಂಗ್ರಹಗಳು ಇದರಲ್ಲಿ ಅಡಗಿರುತ್ತವೆ. ಅಳಿಯ ಸಂತಾನದವರಿಗೂ, ಶಾಲಾ ಉಪಾಧ್ಯಾಯರುಗಳಿಗೂ, ವಿದ್ಯಾರ್ಥಿಗಳಿಗೂ ಓದು ಬರಹ ಬಲ್ಲ ಸರ್ವರೂ ನೋಡತಕ್ಕ ಪುಸ್ತಕ.

ಅಪೇಕ್ಷಕರು ಆದಷ್ಟು ಬೇಗನೆ ಪತ್ರ ಬರೆದು ಹೆಸರುಗಳನ್ನು ದಾಖಲು ಮಾಡಿಸಿಕೊಳ್ಳಬಹುದು. ಅಂಥವರಿಗೆ ಪುಸ್ತಕ ಒಂದರಲ್ಲಿ ೨ ಆಣೆ ಕಡಿಮೆ ದರದಲ್ಲಿ ಕೊಡಲಾದೀತು. ಪುಸ್ತಕವು ತಯಾರಾಗುತ್ತಾ ಬರುತ್ತದೆ. ಪುಸ್ತಕದ ಬೆಲೆ ಸಿದ್ಧವಾದ ಕೂಡಲೇ ತಿಳಿಸಲಾದೀತು. ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ವಿಳಾಸ:—

"ಕುಶಲಮಂದಿರ"
ಶ್ರೀ ರಾಜರಾಜೇಶ್ವರಿ ದೇವಸ್ಥಾನ,
ಪೋಳಲಿ

ಎಸ್. ಎ. ಶೀನಪ್ಪ ಹೆಗ್ಗಡೆ.
ಅಮುಂಜೆ ಗುತ್ತು,
ಪೋಸ್ಟು, ಗುರುಪುರ, ದ. ಕನ್ನಡ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಅಂಬರ್:—ಈ ಸುಗಂಧ ದ್ರವ್ಯವನ್ನು ಸ್ವಲ್ಪ ತೆಗೆದುಕೊಂಡು ಧೋತ್ರಗಳು ಉಡುಪುಗಳು, ಮೊದಲಾದ ಬಟ್ಟೆಗಳಿಗೆ ಹಾಕಿದರೆ ಸುವಾಸನೆ ಕೊಡುವದಲ್ಲದೆ, ಬಟ್ಟೆಗಳಿಗೆ ಹುಳ ಮುಂತಾದ ಕ್ರಿಮಿಗಳು ಸೇರದೇಯಿರುತ್ತದೆ, ಶರೀರಕ್ಕೂ ಮುಖಕ್ಕೂ ಹಚ್ಚಿಕೊಂಡರೆ ಮುಖದಲ್ಲಿಯೂ ಶರೀರದಲ್ಲಿಯೂ ಉಂಟಾಗುವ ಕಜ್ಜಿ, ತುರಿ, ಪಿತ್ಥ ಸಂಬಂಧವಾದ ಹುಳುಕಡ್ಡಿ ಮೊದಲಾದವು ಹೋಗಲಾಡಿಸಿ ತೇಜಸ್ಸು ಉಂಟು ಮಾಡುತ್ತದೆ. ತಾಂಬೂಲದ ಸಂಗಡ ಉಪಯೋಗಿಸಬಹುದು, ಇದನ್ನೇ ಸ್ವಲ್ಪ ತೆಗೆದು ಸ್ನಾನ ಮಾಡುವ ಬಿಸಿ ನೀರಲ್ಲಿ ಸೇರಿಸಿದರೆ ನೀರೆಲ್ಲಾ (ಪನ್ನೀರು) ಗುಲಾಬಿಯಂತೇ ಪರಿಮಳಿಸಿ, ಮನಸ್ಸಿಗೆ ತೃಪ್ತಿಕರವನ್ನು ಕೊಟ್ಟು ದೇಹಶ್ರಮವನ್ನು ನಿವಾರಣ ಮಾಡುತ್ತದೆ. ಡಬ್ಬಿ ೧-ಕ್ಕೆ ೬ ಆಣೆ, ೧ ಮೊದಲು ೧೨ ಡಬ್ಬಿಗಳು ವರೆಗೆ ವಿ. ಪಿ. ೩ ಆಣೆ ಪ್ರತ್ಯೇಕವು.

ಇಂಡಿಯನ್ ಪೆಟಲ್ ಡಸ್ಟ್:—ಈ ಮನೋಹರವಾದ ಸುಗಂಧ ಒಂದು ಪೊಟ್ಲವು ನೀವು ವಸ್ತ್ರವಿಡುವಲ್ಲಿಯಾಗಲಿ ವಸ್ತ್ರದ ಪೆಟ್ಟಿಗೆಯಲ್ಲಿಯಾಗಲಿ ಇಟ್ಟರೆ ನಿಮ್ಮ ಎಲ್ಲಾ ಉಡಿಗೆ ತೊಡಿಗೆಗಳಿಗೆ ಮಧುರವಾದ ಮತ್ತು ದೀರ್ಘಕಾಲದ ವರೆಗೆ ಉಳಿಯುವ ಸುವಾಸನೆಯನ್ನು ಕೊಡುವದು. ಮತ್ತು ನಿಮ್ಮ ವಸ್ತ್ರವನ್ನು ಕ್ರಿಮಿಗಳ ಅನಾಹುತದಿಂದ ಕಾಪಾಡುವದು. ಶಾಂತವಾದ ಮತ್ತು ಇಂಪಾದ ಪರಿಮಳದಿಂದ ಅಪ್ರಮೇಯವಾಗಿದ್ದು ಅದರ ಮೃದು ಸುಗಂಧಕ್ಕೂ ಸ್ಥಿರವಾದ ಪರಿಮಳಕ್ಕೂ ಅನೇಕರಿಂದ ಹಾರೈಸಲ್ಪಡುವದು, ಈ ಅದ್ವಿತೀಯವಾದ ಸುಗಂಧವು ಪರಿಮಳಾತಿಶಯದಿಂದಲೂ, ಸುಗುಣ ರಮ್ಯತೆಯಿಂದಲೂ ಸ್ಥಿರವಾಗಿ ನಿಂತೀತು, ದೂರವಾಗಿಯೂ ವಿಸ್ತಾರವಾಗಿಯೂ ವ್ಯಾಪಿಸಿಕೊಂಡದೆ ಅದು ವಿಶೇಷವಾದ ಕ್ರಿಮಿನಾಶಕವೂ ಅಪೂರ್ವ ಗುಣಗಳಿಂದ ಕೂಡಿದ ಔಷಧವೆ ಸ್ವಚ್ಛಕಾರಿಯೂ ಆಗಿರುವದು. ಮತ್ತು ಈಗ ಇರುವವುಗಳಲ್ಲಿ ಅತ್ಯಂತ ಒಳ್ಳೇ ಕ್ರಿಮಿನಾಶಕ ಔಷಧವಲ್ಲದೆ ಹಿಂದೂಸ್ಥಾನದ ಅತ್ಯಂತ ಮನೋಹರವಾದ ವಿವಿಧ ಔಷಧಗಳ ಸಾರವು. ಕ್ರಯ ಪೊಟ್ಲ ಒಂದಕ್ಕೆ ಆಣೆಗಳು (೦ ೪ ೦)

ವಸ್ತ್ರಗಳಿಗೆ ವಿಲಾಸಹಾಕುವ ಕೆಡದಂಥಾ ಶಾಯಿ.

ಹರಳೆ ಹುಣ್ಣೆ ರೇಷ್ಮೆ ಮುಂತಾದ ವಸ್ತ್ರಗಳಿಗೆ ಇದರಿಂದ ವಿಲಾಸ ಹಾಕಿದಲ್ಲಿ ಎಷ್ಟಾವರ್ತಿ ತೊಳೆದರೂ ಇಸ್ತ್ರಿ ಮಾಡಿದರೂ ವಿಲಾಸವು ಯಾವಾಗಲೂ ಕೆಡುವದಿಲ್ಲ, ಈ ಶಾಯಿಯಿಂದ ವಿಲಾಸ ಹಾಕಿದಲ್ಲಿ ವಸ್ತ್ರಗಳು ಕಳವು ಹೋಗದೆಯು ಇರುವಂತೆ ಕಾಯುವದು. ಕ್ರಯ ಬುಡ್ಡಿ ೧ಕ್ಕೆ ೮ ಆಣೆ. ೧ರಿಂದ ೬ ಬುಡ್ಡಿಗಳಿಗೆ ವಿ. ಪಿ. ಖರ್ಚು ೫ ಆಣೆಗಳು ಬೀಳುವವು.

ಶಾಕ್ಕರೈನ್—ಅಥವಾ ಪಂಚದಾರ ಬಿಳ್ಳೆಗಳು.

ಇವು ನವೀನವಾಗಿ ಸೀಮೆಯಲ್ಲಿ ಮಾಡಲ್ಪಟ್ಟು ಅಪೂರ್ವವಾಗಿ ೫೦೦-ಮಣುಗುಗಳ ಹೆಚ್ಚಾಗಿ ಪಂಚದಾರ ರುಚಿಯನ್ನು ಕೊಡುವ ಚಿಕ್ಕ ಬಿಳ್ಳೆಗಳ ರೂಪದಲ್ಲಿ ನಾವು ಮಾರುತ್ತಿರುವೆವು. ಒಂದು ಸೇರು ಹಾಲು ಅಥವಾ ಕಾಪಿ ಮತ್ತು ಟೀ ಇವುಗಳ ಉಪಯೋಗದಲ್ಲಿ ಹೇಗೆ ಸಾಧಾರಣವಾದ ಪಂಚದಾರಯನ್ನು ಹಾಕುವಲ್ಲಿ ಎಷ್ಟು ರುಚಿ ಕೊಡುವದೊ ಅದಕ್ಕಿಂತಲೂ ಅಪೂರ್ವವಾದ ಈ ಬಿಳ್ಳೆಗಳಲ್ಲಿ ಎರಡನ್ನು ಹಾಕಿ ಉಪಯೋಗಿಸಿದರೆ ಸಾಕಾಗುವದು. ಇದಲ್ಲದೆ ಸರ್ವ ಸಾಧಾರಣದಲ್ಲಿ ಪಂಚದಾರಿ ಉಪಯೋಗ ದೇಹಕ್ಕೆ ಹಾನಿಕರವಾದ ಬಹುಮೂತ್ರ ಇತ್ಯಾದಿ ಬಾಧ್ಯಗಳ ಅವಲಂಬನೆಯನ್ನು ಈ ಉಪಯೋಗವಾದ ವಸ್ತುವಿಂದ ತೊಲಗಿಸಬಹುದು. ಅಥವಾ ಆ ಬಾಧ್ಯಗಳೆಲ್ಲವು ಸೇರಲು ಸಂಭವವಿಲ್ಲ. ಪಂಚದಾರಕ್ಕಿಂತಲೂ ಇದರ ಬೆಲೆ ಸ್ವಲ್ಪವು. ಈಗ ಬಹಳ ಜನರು ಪಂಚದಾರ ಕಷ್ಟಕರವೆಂದು ಅದನ್ನು ಉಪಯೋಗಿಸದೆ ಕಾಪೀ ಟೀ ಇತ್ಯಾದಿಗಳನ್ನು ಒಪ್ಪದಿಂದ ನಿವಾರಿಸುವದು, ಅಲ್ಲದು ಪಂಚದಾರೆಯನ್ನು ಹಾಕದೆ ಉಪಯೋಗಿಸುವರು. ಇಂಥಾವರು ಮತ್ತು ಸರ್ವ ಜನರು ಅಭ್ಯಂತರ ವಿಮಾತ್ರವಿಲ್ಲದೆ, ಉಪಯುಕ್ತವಾದ್ದ ಈ ಶಾಕ್ಕರೈನ್ ಎಂಬ ಈ ಬಿಳ್ಳೆಗಳನ್ನು ಉಪಯೋಗಿಸಬಹುದು. ಇದರ ಉಪಯೋಗಗಳು ಅಸಾಧ್ಯ. ಸೀಸಾ ೧-ಕ್ಕೆ ೮ ಆಣೆ, ವಿ. ಪಿ. ೧ರಿಂದ ೧೨ ಸೀಸಾಗಳಿಗೆ ಆಣೆ ೫ ಪ್ರತ್ಯೇಕವು.

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBAROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ,
ಆಯುರ್ವೇದ ಔಷಧಶಾಲೆ,
ಶ್ರೀ [illegible] ಪೆರುಮಾಳ್ ದೇವಸ್ಥಾನ
ಸನ್ನದಿ, ತಂಜಾವೂರು.

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು.

ಇದರ ಉಪಯೋಗದಿಂದ —ವಾತ, ಸಂದಿವಾತ, ತಲೆನೋವು, ಶಿರೋಬಾಧೆ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷದವಾಗಿರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತ್ತು ಆಣೆ 8. ಡಜನ್ 1ಕ್ಕೆ ರೂ. 5 0-0 ವಿ. ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಕೆಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಕಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ, ಇದುವರೆಗೆ ಒಂದು ಮಿಳಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್‌ಮಾರ್ಕ್. 0—6—0. 3 ಡಬ್ಬಿಗಳಿಗೆ 0—15—0. ವಿ. ಪಿ. ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮುನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ, ಡಬ್ಬಿ 1ಕ್ಕೆ 0—2—0. ಡಜನ್ 1ಕ್ಕೆ 1—2—0 ವಿ. ಪಿ ಪ್ರತ್ಯೇಕ

ಸುಂದರಿ ಮುಲಾಮು.

ಮುದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು ಡಬ್ಬಿ 1ಕ್ಕೆ ರೂ. 0—8—0.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ಯೊಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳಿಯುವವು.

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ. ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ. 1—0—0

ಕೆ. ನಟರಾಜನ್ ಎಡಿಟ್, ಇಂಡಿಯನ್ ಸೋಷಿಯಲ್ ರಿಫ್ರೋರ್ಮರ್: — ಅಮೃತಾಂಜನ ಎಲ್ಲಾ ಔಷದಗಳಿಗಿಂತಲೂ ಬಹಳ ಉತ್ತಮವಾದ ಔಷಧ

ಡಬ್ಲ್ಯು ಮೆಕ್ಸವೆಲ್, ಮೈಸೂರು: — ಅಮೃತಾಂಜನದಿಂದ ಎಂದಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತವೆ.

ಆರ್. ಆರ್. ಗಂಗೋಲಿ: — ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ದಾಂಡೆಕರ್, ಎಲ್. ಎಮ್. ಎಂಡ್. ಎಸ್: — ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಮಂಗಳೂರಲ್ಲಿ — ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ತಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ವರ್ಣ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಟ್ಟಿಕಾರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೋ

9 ಜಹಂಗೀರ್ ಸ್ಟ್ರೀಟ್, **109 ಫ್ರೇಯರ್ ರೋಡ,**

ಜೋರ್ಜ್ ಟೌನ್, ಮದ್ರಾಸು **ಮುಂಬಯಿ**

ಕನ್ನಡ ಲಿಪಿಯ ಪುಸ್ತಕಗಳು.

ಉಡುಪಿ ಶ್ರೀಕೃಷ್ಣ ಚರಿತ್ರೆ

ದಂಡಾಕಾರ, ಮೂರು ಸಂಧಿಗಳಿಂದ ಕೂಡಿರುವದು. ಪ್ರಥಮ ಸಂಧಿಯಲ್ಲಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠೆಮಾಡಿದ ವಿಷಯವೂ, ಎಂಟು ಜನ ಯತಿಗಳ ವಿಷಯವೂ, ಪ್ರತಿನಿತ್ಯ ನಡಿಯತಕ್ಕ ವಿಧಾನಗಳೂ, ಎರಡನೆಯ ಸಂಧಿಯಲ್ಲಿ ಮಕರಸಂಕ್ರಾಂತಿ ಉತ್ಸವ ವರ್ಣನೆಯೂ, ಮೂರನೇ ಸಂಧಿಯಲ್ಲಿ ವರುಷದ ಇತರ ದಿವಸಗಳಲ್ಲಿ ನಡಿಯತಕ್ಕ ಉತ್ಸವಾದಿಗಳೂ ವರ್ಣಿತವಾಗಿವೆ ಬೆಲೆ 3 ಆಣೆ.

ಷ. ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ. ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಅಶ್ವಲಾಯನ ಸಂಧ್ಯಾವಂದನ (ಮರತ್ರಯದವರಿಗೆ) 3ಆಣೆ, ಯಜುರ್ವೇದ ಸಂಧ್ಯಾವಂದನ (ಮರತ್ರಯದವರಿಗೆ) 2 ಆಣೆ, ಋ. ಬ್ರಹ್ಮಯಜ್ಞ ವೈಶ್ವದೇವ ಔಪಾಸನ 3 ಆಣೆ, ಪ್ರಾತರಾಹ್ನಿಕ ಪದ್ಧತಿ 3 ಆಣೆ, ದೇವಪೂಜಾ ಪದ್ಧತಿ 3 ಆಣೆ, ವಾಯುಸ್ತುತಿ 2 ಆಣೆ, ದ್ವಾದಶಸ್ತೋತ್ರ 2 ಆಣೆ, ವಿಷ್ಣುಸಹಸ್ರನಾಮ, ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ, ವಿ. ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6, ಅಭಿಷೇಕ ಸೂಕ್ತಗಳು 0 2-0; ಶ್ರೀಸೂಕ್ತ ಪುರುಷಸೂಕ್ತ 0-1 0, ಸುಂದರ ಕಾಂಡ ಕಥಾಸಾರಸಂಗ್ರಹ ವಗೈರೆ 0-2-0, ಗಜೇಂದ್ರ ಮೋಕ್ಷ 0 1 6, ಗೋಪಿಕಾಗೀತೆ ವಗೈರೆ 0 1 0, ಪಾಂಡವಗೀತೆ ವಗೈರೆ 0-1-6, ಅಣುಭಾಷ್ಯ ವಗೈರೆ 0 0-9, ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0 2-0, ಪುರಂದರದಾಸರ ಕೀರ್ತನೆಗಳು 0 6-0, ಉದಯರಾಗ 0-4 0; ಹರಿಭಕ್ತಿಸಾರ 0-1-0, ಸ್ವಪ್ನಪದ ಮಧ್ವನಾಮ 0-1 6, ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ.

ಪಾವಂಜೆ ಗುರುರಾವ್,
ಶ್ರೀಪೂರ್ಣಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ, ದ ಕ



ಅತ್ಯುತ್ತಮವಾದ್ದ ಕಸ್ತೂರಿ ತೊಲೆ ಗಕ್ಕೆ ರೂ. 30 ನಂಬ್ರ 2 ತೊಲೆಗಕ್ಕೆ ರೂ. 25. ಸನ್ ಬ್ರೆಂಡ್ ಕೇಸರಿ ತೊಲೆಗಕ್ಕೆ ರೂ 1—6—0 ಕಾಶ್ಮೀರ ಕೇಸರಿ ತೊಲೆಗಕ್ಕೆ ರೂ 1—4—0. ಅತ್ಯುತ್ತಮವಾದ ಸಿಂಗಾಪುರದ ಪಚ್ಚೆ ಕರ್ಪೂರ ತೊಲೆ ಗಕ್ಕೆ ರೂ. 2. ಸಿಂಹದವರ ಸುಗಂಧ ಕಾಯಿಗಳು ಟಿನ್ ಒಂದಕ್ಕೆ ಆಣೆ 8

ಪಿ ಎನ್ ಸಿಂಹಂ ಮತ್ತು ಕಂಪೆನಿ,
ಆದಿಯಪ್ಪನ್ನಾಕ ರಸ್ತೆ,
ಮದರಾಸು.

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! ಸೋವಿಯಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆಜರಿ ಸೀರೆಗಳು ಕಣ, ಪೇಟಾ ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಚಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು

ತಮ್ಮ ವಿಳಾಸ.— ಯಸ್ ಯು. ಯನ್. ಮತ್ತು ಕಂಪೆನಿ, ಕಾಶಿ.

ಉತ್ಕೃಷ್ಟವಾದ ಮೂರು ಔಷಧಗಳು.

ಗ್ರೇಂಟ್ ಮೆಡಿಕಲ್ ಕೊಲೆಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಲಸೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳು.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1.

(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ.)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನ್ನು ಹೋಗಲಾಡಿಸುವುದಕ್ಕೆ ಏಕರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವುವು ಅನೇಕ ಕಾಲದವರೆಗೆ ಪುತ್ರವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು. ಅಂತರೌಷಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು. ಒಂದು ಸೀಸೆಯ ಕ್ರಯ ರೂ. 1. ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2.

(ಬಿಳೀ ಸ್ರಾವದ ಬಗ್ಗೆ.)

ಈ ಬಾಧೆಯಿಂದ ವಿರಹಿತರಾದ ಸ್ತ್ರೀಯರು ಬಹಳ ವಿರಳ. ಈ ಸ್ರಾವದಿಂದ ಹೆಚ್ಚಿನ ನಿರ್ಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು. ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ. ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾಗದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು. ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು.—ಒಂದೇ ಪೊಟ್ಟಣವನ್ನು ಪರೀಕ್ಷೆಗಾಗಿ ತರಿಸಿದರೆ ಕ್ರಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಸೀಸೆಯ ಕ್ರಯ 1 ರೂಪ್ಯಾ. ಅಂಚೆ ಹಾಸಲು 4 ಆಣೆ.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3.

(ಕೆಂಪು ಸ್ರಾವದ ಬಗ್ಗೆ.)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು. ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದುವುಗಳು ಉಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು. ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತವೇ ಸರಿ. ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಆರಂಭ ಮಾಡಿದರೆ, ಈ ಪೀಡೆಯು ಅತಿಶಯನಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. - ಒಂದು ಸೀಸೆಯ ಕ್ರಯ 1 ರೂಪ್ಯಾ. ಅಂಚೆ ಹಾಸಲು 4 ಆಣೆ.

Dr. Nava Ratna & Sons.
253 Kalbadevi Road,
BOMBAY

ಏಜೆಂಟರು:— ಎ ಉಲುನ್ ಮಾರ್ಟ್
ಹಂಪನ್‌ಕಟ್ಟಾ, ಮಂಗಳೂರು.
ದಕ್ಷಿಣ ಕನ್ನಡ.

ಚಿನ್ನ ಮತ್ತು ಬೆಳ್ಳಿಯ ಪದಕಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ ಎಂಡ್ ಸನ್ಸರ

ಬಿಸ್ಕುಟುಗಳನ್ನು

ಒಮ್ಮೆ ತರಿಸಿ ನೋಡಿರಿ!

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕೆ ದೊರೆಯುತ್ತವೆ

ವಿಳಾಸ:— ಸ್ಟೀವನ್ ಎಂಡ್ ಸನ್ಸ್

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಣಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮದ್ರಾಸ್ ಇಂಸ್ಪೆಕ್ಟರ್ ಜನರಲ್ ಬರೆಯುವದು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಆದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಕಡಿಮ್ಮೆ ಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮದ್ರಾಸ್ ಆಸ್ಪತ್ರೆ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd 1888. ಸ್ಥಾಪನೆ 1888.

K. B. RELE & Cos.,—BOMBAY
ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟವಾದಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೩೦ ವರ್ಷಗಳ ಹಳತ, ಮನೆ ಮಾಡಿಕೊಂಡಿದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯುವೇ. ಬೆಲೆ ಬಾಟ್ಲಿ ಗಿಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ದೇಶಿ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಆದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಿಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು, ಕ್ರಯ ಬಾಟ್ಲಿ ಗಿಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ಆ೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು, ಗರ್ಭಕೋಶದ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಕೀಳಿಗೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ ರೂ.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯೂ ವಾಸನೆಯೂ ಇಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸಪ್ತಾಮೃತಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪. ಬ್ರಹ್ಮಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ರಮಾಂದ್ಯ, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳೂ ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಸಚಿತ್ರ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು

B. M Nath & Co, *Ayurvedic Chemists*,

Vepery Post. MADRAS.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚನಾಪಳ್ಳಿಯ ನಾನಾ ನಮೂನೆಯ ಚುರುಟ್ಟುಗಳೂ, ಉತ್ತಮವಾದ ನೀಲಗಿರಿಯ ಚಹಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಳ್ಳಾರಿ ಮಿಶ್ಯನ್ ಚೇಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನೂ ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ಕವಕೆ



ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಪಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಕಂಟನ್‌ಮೆಂಟು. ಬೆಂಗಳೂರು

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.

1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ



ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬಿನ್ಸನ್, ರೋಯಲ್, ಮಿನೋರಾ, ಸ್ವಾರ್ಲ್ಡಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್. ಎ. ಬ್ರೆಂಪ್ಟನ್, ಬ್ರುಕ್ಸ್, ಲೂಕಸ್, ಪೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಖರ್ಚಿನಲ್ಲಿ ಜಾಗ್ರತೆಯಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೆ ... ತನುಗಳಿಗೂ ಕೆಳಗಿನ ವಿಳಾಸ ಬರೆದುಕೊಳ್ಳಿರಿ.

K. K. Shanbhog. *Proprietor*

THE CANARA CYCLE MART.

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರಿ ಮುರಬ್ಬಾ.

ಮುರಬ್ಬಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬುದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಂದಹಾರ್ ದೇಶದ ಜನರಿಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನರಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವ್ವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೋ ಅಥವಾ ಬೇರೆ ತರಹದ್ದೋ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸಬಹುದು ಹಾಗೆ [illegible] ತಯಾರು ಮಾಡಲ್ಪಟ್ಟಿರುವದು.

ಪಂಜಾ ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
ಪಂಜಾ ಸಾಲಾಮಿಸ್ರಿ ಮುರಬ್ಬಾವು ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು
ಪಂಜಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು

ಒಂದು ಡಬ್ಬಿ ಮುರಬ್ಬಾವನ್ನು 15 ದಿವಸಗಳು ಉಪಯೋಗಿಸುವದರಿಂದ ಪೂರ್ಣ ಗುಣಕೊಡುತ್ತೆ, 2—3 ಡಬ್ಬಿಗಳನ್ನು ಉಪಯೋಗಿಸುವದರಿಂದ ಜನ್ಮಾಂತರದ ರೋಗವೂ ಗುಣಕೊಡುತ್ತೆ

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನಷ್ಟವ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಯವರೆಗೆ ಆಣೆ 6

ಏಜಂಟರು— ಡಿ ಸಮ್ಯುವ್ ಉಸ್ಮಾನ್ ಎಂಡ್ ಕೋ
ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ ಮುನ್ನಾಲಾಲ್, ದಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ

ನರೆಕೂದಲಿಟ್ಟುಕೊಂಡು
ಮುದುಕರಾಗಬೇಕೇ?

ದರ್ಬಾರ್ ಕೂದಲು ರಂಗು

ಒಂದು [illegible]

ತಿರಿ ಈ ರಂಗು ಹಚ್ಚಿಕೊಂಡರೆ ಕೂದಲು [illegible] ಕಪ್ಪಾಗಿ [illegible] ಯುತೆ ಈಗ ಮಾರಾಟಕ್ಕೆ ಇರುವ [illegible] ಗಳೂ ರಂಗುಗಳೂ ತುಂಬ ಕೀಳು ಜಾತಿಯವು, ಹಚ್ಚಿದ ಮೇಲೆ ಕೂದಲು ಕೆಂಪು ತಿರುಗಿ ಅಸಹ್ಯವಾಗಿ ಕಾಣುತ್ತದೆ ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ, ಬಹು ಮೇಲಾದದ್ದು ಒಂದಾವರ್ತಿ ತರಿಸಿ ಪರೀಕ್ಷೆಮಾಡಿದರೆ ನೀವೇ ಸಂತೋಷಪಡುವಿರಿ ಕ್ರಯ ಬುರುಸು ಸಮೇತ ಬಾಟ್ಲೆ ಒಂದಕ್ಕೆ ರೂ 1, ಅಂಚೆ ಹಾಸಲು 4 ಆಣೆ

ವಿಳಾಸ:— ವಿ ಎ. ಎಸ್. ಪಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

ಸನ್ 1915 ಇಸವಿಯ

ಪಾಕೆಟ್ ಡೈರಿ

ಶ್ರೀ ಸೀತಾ ರಾಘವ



ಪಾಕೆಟ್ ಡೈರಿಗಳು

ವಿಕರಿಗೆ ಸಿದ್ಧವಾಗಿವೆ

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ದಾದ ಮುದ್ರಣ, ಅನೇಕ ಹೊಸ ಸಂಗತಿಗಳವೆ

ನಂಬ್ರ ೧.	ಸಣ್ಣ ಸೈಜು ಸಾದಾ	0—4—0
,, ೨.	ಪೆನ್ಸಿಲ್ ಮುಚ್ಚಳವುಳ್ಳದ್ದು	0—6—0
,, ೩	ದೊಡ್ಡ ಸೈಜು ಸಾದಾ	0—6—0
,, ೪	ಪೆನ್ಸಿಲ್ ಮುಚ್ಚಳವುಳ್ಳದ್ದು	0—8—0

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ ತರಿಸಿಕೊಂಡರೆ ೧ ಇನಾಂ ಹೆಚ್ಚಾಗಿ ತರಿಸುವವರಿಗೆ ರೂ. ೧ಕ್ಕೆ ೨ ಆಣೆ ಕಮಿಷನ್ ದೊರೆಯುವುದು.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲೆ, ಮೈಸೂರು.

Printed & Published by V. S Kamath at the Mangalore Trading Association's Sharada Press, Mangalore